

ರಾಷ್ಟ್ರೀಯ ವಿಮೋಚನಾ ಹೋರಾಟಗಾರರು

(ರಾಜಕೀಯ ನುಡಿಚಿತ್ರಗಳು)

ಪ್ರಗತಿ ಪ್ರಕಾಶನ

ರಾಷ್ಟ್ರೀಯ ವಿಮೋಚನಾ ಹೋರಾಟಗಾರರು

(ರಾಜಕೀಯ ನುಡಿಚಿತ್ರಗಳು)

ಪ್ರಗತಿ ಪ್ರಕಾಶನ
ಸೋವಿಯತ್ ಒಕ್ಕೂಟ, ಮಾಸ್ಕೋ

ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಬೆಂಗಳೂರು

ಅನುವಾದ: ಕೆ. ಎಲ್. ಗೋಪಾಲಕೃಷ್ಣರಾವ್

ಕರ್ತೃಗಳು: ಆರ್. ಉಲ್ಯನೋವ್‌ಸ್ಕಿ, ವಿ. ವವೀಲೊವ್,
ವೈ. ವಿನಕೂರೊವ್, ಎ. ಯುೂರ್‌ಕೈವ್

ಅಂತರರಾಷ್ಟ್ರೀಯ ಸಂಬಂಧ ಹಾಗೂ ಇತಿಹಾಸ
ಸಂಪಾದನ ವಿಭಾಗ, ಮಾಸ್ಕೋ, ಪ್ರಗತಿ ಪ್ರಕಾಶನ

БОРЦЫ ЗА НАЦИОНАЛЬНУЮ СВОБОДУ
(политические портреты)
на языке каннада

FIGHTERS FOR NATIONAL LIBERATION
(political portraits)
In Kannada

ಸೋವಿಯತ್ ಒಕ್ಕೂಟದಲ್ಲಿ ಮುದ್ರಿತವಾದುದು

Б $\frac{0804000000-288}{014(01)-90}$ 250—90

ISBN 5-01-001899-3

ವಿಷಯಸೂಚಿ

ಓದುಗರಿಗೆ

ಈ ಗ್ರಂಥದಲ್ಲಿ ಏಷ್ಯ ಆಫ್ರಿಕ ಖಂಡಗಳ ರಾಷ್ಟ್ರೀಯ-ವಿಮೋಚನಾ ಚಳವಳಿಯ ಹಲವು ಹೋರಾಟಗಾರರ ರಾಜಕೀಯ ನುಡಿಚಿತ್ರಗಳನ್ನು ನೀಡಲಾಗಿದೆ. ಈ ನುಡಿಚಿತ್ರಗಳು ಸಂಬಂಧಪಟ್ಟ ವ್ಯಕ್ತಿಗಳ ವ್ಯಕ್ತಿತ್ವದ ಸರ್ವತೋಮುಖ ಅಧ್ಯಯನ ನೀಡುತ್ತವೆಂದಾಗಲೀ, ಆ ವ್ಯಕ್ತಿಗಳು ತಮ್ಮ ದೇಶಗಳ ಒಳಗೂ ಅಂತರರಾಷ್ಟ್ರೀಯ ಕ್ಷೇತ್ರದಲ್ಲೂ ನಡೆಸಿದ ಬಹುಮುಖ ಚಟುವಟಿಕೆಗಳ ಪೂರ್ಣ ನೋಟ ನೀಡುತ್ತವೆಂದಾಗಲೀ ನಾನು ಹೇಳ ಹೋಗುವುದಿಲ್ಲ. ಇದು ಆ ಕೆಲವು ನಾಯಕರ ಚಟುವಟಿಕೆಗಳ ಮುಖ್ಯ ಸಾಮಾಜಿಕ ಸಾರವನ್ನು ವಿವರಿಸುತ್ತದೆ, ಅವರ ಕೆಲವು ವೈಯಕ್ತಿಕ ಹಾಗೂ ರಾಜಕೀಯ ಲಕ್ಷಣಗಳನ್ನು ಚಿತ್ರಿಸುತ್ತದೆ ಎಂದಷ್ಟೆ ನಾನು ಹೇಳ ಬಯಸುತ್ತೇನೆ. ತಮ್ಮ ಸಾಮಾಜಿಕ ವಿಚಾರ ಭಾವನೆಗಳಲ್ಲಿ ಏನೆಲ್ಲ ವ್ಯತ್ಯಾಸಗಳನ್ನು ಹೊಂದಿದ್ದರೂ ಈ ಎಲ್ಲ ನಾಯಕರೂ ವಸಾಹತುವಾದವನ್ನು ವಿರೋಧಿಸುವುದರಲ್ಲಿ, ಸಾಮಾಜಿಕ ಪ್ರಗತಿಗಾಗಿ ಶ್ರಮಿಸುವುದರಲ್ಲಿ ಮತ್ತು ತಮ್ಮ ಜನತೆಗಳನ್ನು ವಿಮೋಚನೆಗೊಳಿಸಿ ನೈಜ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಸುಭದ್ರಗೊಳಿಸುವುದರಲ್ಲಿ, ಒಂದಾಗಿದ್ದರು, ಒಮ್ಮತ ಹೊಂದಿದ್ದರು.

ಏಷ್ಯ ಆಫ್ರಿಕಗಳ ರಾಷ್ಟ್ರೀಯ-ವಿಮೋಚನಾ ಚಳವಳಿಯ ಈ ಕೆಲವು ಪ್ರಮುಖ ನಾಯಕರ ನುಡಿಚಿತ್ರಗಳನ್ನು ರಚಿಸುವ ಕಾರ್ಯದಲ್ಲಿ ನಾನು ಆ ದೇಶಗಳ ಹಾಗೂ ಅವುಗಳ ನಾಯಕರ ಚಟುವಟಿಕೆಗಳ ವಿಶೇಷ ಅಧ್ಯಯನದಲ್ಲಿ ನಿರತರಾಗಿರುವ ಅನೇಕ ಯುವ ಸೋವಿಯತ್ ವಿದ್ವಾಂಸರ ನೆರವು ಪಡೆದುಕೊಂಡಿದ್ದೇನೆ.

ಭಾರತದ ವಿಷಯ ಪರಿಶೀಲಿಸುವಾಗ ನಾನು ಮಹಾನ್ ಭಾರತೀಯ ಜನರ ಅತ್ಯಂತ ಖ್ಯಾತ ಹಾಗೂ ಸುಪ್ರಸಿದ್ಧ ಪುತ್ರರಾದ ಮಹಾತ್ಮ ಗಾಂಧೀ ಹಾಗೂ ಜವಾಹರಲಾಲ ನೆಹರೂರವರ ಹೆಸರುಗಳನ್ನು ಉಪೇಕ್ಷಿಸದಾದೆ. ಅವರ ಸಾಮ್ರಾಜ್ಯವಾದ ವಿರೋಧಿ ಚಟುವಟಿಕೆ, ಭಾರತದ ರಾಷ್ಟ್ರೀಯ ವಿಮೋಚನೆಯಲ್ಲಿ ಅವರು ನಿರ್ವಹಿಸಿದ ಅಮೋಘ ಪಾತ್ರ ಇವು ಅವರ ವ್ಯಕ್ತಿತ್ವವನ್ನೂ ಸಾಮಾಜಿಕ ಚಟುವಟಿಕೆಗಳನ್ನೂ ಹೆಚ್ಚು ನಿಕಟವಾಗಿ ಅಭ್ಯಸಿಸುವಂತೆ ನನ್ನನ್ನು ಪ್ರೇರಿಸಿದವು. ಇವರಿಬ್ಬರೂ ತಮ್ಮವೇ ರೀತಿಗಳಲ್ಲಿ ಭಿನ್ನ ಹೋರಾಟಗಾರರಾಗಿ

ಕಂಡುಬಂದರೂ ಇಬ್ಬರೂ ಭಾರತದ ಸ್ವಾತಂತ್ರ್ಯಕ್ಕೆ ಹಾಗೂ ಪುನರ್‌ಜನ್ಮಕ್ಕೆ ಅನನ್ಯವಾದ ಸ್ವೋಪಜ್ಞವಾದ ಕೊಡುಗೆ ಸಲ್ಲಿಸಿದ್ದಾರೆ.

ಇದೇ ರೀತಿ ವಸಾಹತು ಹಾಗೂ ಅಧೀನ ಜನತೆಗಳ ಸ್ವಾತಂತ್ರ್ಯ ಧ್ಯೇಯಕ್ಕಾಗಿ ಅವಿರತ ಹೋರಾಟ ನಡೆಸಿದವರಾಗಿ ಗಮಾಲ್ ಅಬ್ದೆಲ್ ನಾಸೆರ್‌ರವರ ಹೆಸರನ್ನೂ ಮರೆಯಲಾಗದು. ಇವರು ಸೋವಿಯತ್ ಒಕ್ಕೂಟದ ನೈಜ ಮಿತ್ರರಾಗಿದ್ದರು ಮತ್ತು ತಮ್ಮ ಕ್ರಾಂತಿಕಾರಿ ಹಾಗೂ ಸಾಮ್ರಾಜ್ಯವಾದ ವಿರೋಧಿ ಚಟುವಟಿಕೆಯಾದ್ಯಂತ ಕ್ರಮೇಣ ವೈಜ್ಞಾನಿಕ ಸಮಾಜವಾದದ ವಿಚಾರಗಳ ಬಳಿ ಸಾರಿದರು. ಈ ವಿಖ್ಯಾತ ನಾಯಕನ ಅಕಾಲಿಕ ಮರಣ, ನನ್ನ ಅಭಿಪ್ರಾಯದಲ್ಲಿ, ಇಜಿಪ್ಟ್ ಸಮಾಜದ ಬೆಳವಣಿಗೆಯ ಮೇಲೆ ಮೂಲಭೂತ ಪರಿಣಾಮ ಉಂಟುಮಾಡಿತು.

ಅಗೊಸ್ಟಿನೊ ನೆಟೊ ಅಂಗೋಲ ಜನರ ಪ್ರಮುಖ ರಾಜಕೀಯ ನಾಯಕರಾಗಿದ್ದರು. ಇವರು ಪೋರ್ಚುಗೀಸ್ ವಸಾಹತುವಾದದ ವಿರುದ್ಧ ಸುಮಾರು ಎರಡು ದಶಕಗಳ ಕಾಲ ಹೋರಾಟ ನಡೆಸಿದರು. ಸಾಮ್ರಾಜ್ಯವಾದ ವಿರೋಧಿ ಹೋರಾಟದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದುದು, ಪೋರ್ಚುಗೀಸ್ ಕ್ರಾಂತಿಯ ಹೆಚ್ಚು ಪ್ರಗತಿಶೀಲ ಶಕ್ತಿಗಳೊಂದಿಗೆ ನಿಕಟ ಹಾಗೂ ಸಾವಯುವ ಸಂಬಂಧ ಹೊಂದಿದ್ದುದು, ಸಮಾಜವಾದಿ ದೇಶಗಳೊಂದಿಗೆ ತುಂಬ ಸ್ನೇಹಪರ ಸಂಬಂಧಗಳನ್ನು ಬೆಳಸಿಕೊಂಡುದು, ಸ್ವಂತವಾಗಿ ಅಪಾರ ಪ್ರಮಾಣದ ಅಧ್ಯಯನ ನಡೆಸಿದುದು – ಇವೆಲ್ಲ ಇವರನ್ನು ಕ್ರಮೇಣ ಮಾರ್ಕ್ಸ್‌ವಾದಿಯಾಗುವಂತೆ ಮಾಡಿದವು. ಈ ಅರ್ಥದಲ್ಲಿ ಇವರು ವೈಜ್ಞಾನಿಕ ಸಮಾಜವಾದವನ್ನು ಅರ್ಥಮಾಡಿಕೊಳ್ಳುವುದರಲ್ಲೂ ಅದನ್ನು ಪ್ರಾಯೋಗಿಕವಾಗಿ ಅನ್ವಯಿಸುವುದರಲ್ಲೂ ರಾಷ್ಟ್ರೀಯ-ವಿಮೋಚನಾ ಚಳವಳಿಯ ಇತರ ಅನೇಕ ನಾಯಕರಿಗಿಂತ ಹೆಚ್ಚು ಮುಂದಿದ್ದರೆಂದು ಹೇಳಬಹುದು.

ಇಂಡೋನೇಷ್ಯ ಕ್ರಾಂತಿಯ ಖ್ಯಾತ ನಾಯಕ ಸುಕಾರ್ನೋರವರ ದೇಶಪ್ರೇಮಿ ಕಾರ್ಯದ ಮೌಲ್ಯನಿರ್ಣಯ ಮಾಡುವಾಗ, ಅವರು ನಿಜವಾದ ರಾಷ್ಟ್ರೀಯ ಕ್ರಾಂತಿಕಾರಿಯಾಗಿದ್ದರು ಎಂಬುದನ್ನು ಎತ್ತಿ ತೋರಿಸಬೇಕು. ಯುದ್ಧಾನಂತರ ಸುಮಾರು ಇಪ್ಪತ್ತು ವರ್ಷಗಳ ಕಾಲ ಇಂಡೋನೇಷ್ಯನ್ ಜನರ ವೀರೋಚಿತ ಹೋರಾಟದ ಚರಿತ್ರೆಯ ಪುಟಗಳಲ್ಲಿ ಒಬ್ಬ ಶ್ರೇಷ್ಠ ನಾಯಕರಾಗಿ ಇವರ ಹೆಸರು ಸದಾಕಾಲಕ್ಕೂ ಇರಲಿರುವುದು.

ಪ್ಯಾಟ್ರಿಸ್ ಲುಮುಂಬರವರು ಆಫ್ರಿಕದ ಮೊದಲ ಪ್ರಮುಖ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿಗಳಲ್ಲೊಬ್ಬರಾಗಿದ್ದರು. ಕಾಂಗೋ(ಜಾಯಿರ್)ನಲ್ಲಿ ಉಂಟಾದ ಕ್ರಾಂತಿಕಾರಿ ಮುಗ್ಗಟ್ಟಿನ ಸಮಯದಲ್ಲಿ ಇವರು ಒಬ್ಬ ರಾಜಕೀಯ ಮುಖಂಡರಾದರು ಮತ್ತು ಈ ಬಹುಜನಾಂಗೀಯ ಹಾಗೂ ಬಹುಬುಡಕಟ್ಟು ದೇಶದ

ಅತ್ಯಂತ ಪುರೋಗಾಮಿ ನಾಯಕರಾದರು. ರಾಷ್ಟ್ರೀಯ-ವಿಮೋಚನಾ ಹೋರಾಟದ ಮಿಲಿಯಾಂತರ ಜನರಿಗೆ ಇವರು ದೇಶಭಕ್ತಿ, ಧೈರ್ಯ ಹಾಗೂ ಸ್ವಾತಂತ್ರ್ಯ ಪ್ರೇಮಗಳ ಸಂಕೇತವಾಗಿದ್ದರು ಮತ್ತು ಈಗಲೂ ಅಂತಹ ಸಂಕೇತವಾಗಿಯೇ ಉಳಿದಿದ್ದಾರೆ.

ಅರವತ್ತರ ದಶಕದಲ್ಲಿ – ಆಫ್ರಿಕದ ವಿಮೋಚನೆಯ ವರ್ಷಗಳಲ್ಲಿ – ಕ್ವಾಮೆ ಎನ್‌ಕ್ರೂಮರವರ ಹೆಸರು ಮಹದಾಸಕ್ತಿಯದಾಯಿತು. ಆಫ್ರಿಕದ ಸ್ವಾತಂತ್ರ್ಯ ಯೋಧರ ಮಧ್ಯೆ ಕ್ವಾಮೆ ಎನ್‌ಕ್ರೂಮರವರು ರಾಷ್ಟ್ರೀಯ ಸುಧಾರಣಾವಾದಿಯಾಗಿ ಹೆಸರುವಾಸಿಯಾಗಿದ್ದರು. ಇವರ ಈ ಸುಧಾರಣಾವಾದವು ವೈಜ್ಞಾನಿಕ ಸಮಾಜವಾದದ ಕೆಲವು ಮುಖ್ಯ ಸೂತ್ರಗಳನ್ನು ಅರ್ಥಮಾಡಿಕೊಳ್ಳುವತ್ತ ಕ್ರಮೇಣ ವಿಕಾಸಗೊಂಡಿತು.

ನಾನು ಈ ಅನೇಕ ನಾಯಕರನ್ನು ಬಹುಬಾರಿ ಸಂಧಿಸಿ ರಾಷ್ಟ್ರೀಯ-ವಿಮೋಚನಾ ಚಳವಳಿಯ ಅನೇಕ ಜ್ವಲಂತ ಸಮಸ್ಯೆಗಳನ್ನು ಕುರಿತು ಅವರೊಂದಿಗೆ ಚರ್ಚಿಸುವ ಸದವಕಾಶ ಹೊಂದಿದ್ದೆ. ನೆಹರೂರವರನ್ನು 1927ರಷ್ಟು ಹಿಂದೆಯೇ ಮೊದಲ ಬಾರಿಗೆ ಸಂಧಿಸಿದೆ. ಅವರನ್ನು ಮತ್ತೆ 1960-1963ರಲ್ಲಿ ಸಂಧಿಸಿದ್ದೆ.

ರಾಷ್ಟ್ರೀಯ-ವಿಮೋಚನಾ ಚಳವಳಿಯ ನಾಯಕರ ಚಟುವಟಿಕೆಗಳ ಕುರಿತ ಈ ಮಾದರಿಯ ಅಧ್ಯಯನವನ್ನು ಸೋವಿಯತ್ ಅಥವಾ ವಿದೇಶೀ ರಾಜಕೀಯ ಸಾಹಿತ್ಯದಲ್ಲಿ ಇದೇ ಮೊದಲ ಬಾರಿಗೆ ಕೈಕೊಂಡಿರುವುದು ಅನ್ನುವ ಅಂಶವನ್ನು ಮುಕ್ತಾಯದಲ್ಲಿ ನಾನು ತಿಳಿಸ ಬಯಸುತ್ತೇನೆ. ಈ ನಾಯಕರ ಪ್ರಾಯೋಗಿಕ ಚಟುವಟಿಕೆಗಳು, ಅವರ ಸೈದ್ಧಾಂತಿಕ ನಿಲುವುಗಳು ಹಾಗೂ ಪ್ರಕಲ್ಪನೆಗಳು, ಇವುಗಳ ಕುರಿತು ವಾದವಿವಾದಗಳು ಅವರ ದೇಶಗಳಲ್ಲಷ್ಟೇ ಅಲ್ಲ ಹೊರ ದೇಶಗಳಲ್ಲೂ ಇಂದಿಗೂ ಮುಂದುವರಿದಿವೆ. ಅವರು ಬಿಟ್ಟು ಹೋಗಿರುವ ಅನುಭವ ಹಾಗೂ ವಿಚಾರಗಳ ಪರಂಪರೆಯಲ್ಲಿ ಆಸಕ್ತಿ ಇಂದೂ ಹಿಂದೆಂದು ಇದ್ದಷ್ಟೆ ತೀವ್ರವಾಗಿದೆ.

ಈ ಪುಸ್ತಕವು ರಾಷ್ಟ್ರೀಯ-ವಿಮೋಚನಾ ಚಳವಳಿಯ ಈ ಪ್ರಮುಖ ವ್ಯಕ್ತಿಗಳ ಜೀವನ ಹಾಗೂ ಹೋರಾಟಗಳ ಅಧ್ಯಯನಕ್ಕೆ ತನ್ನದೇ ಅಲ್ಪ ಕಾಣಿಕೆ ಸಲ್ಲಿಸುವುದೆಂದು ಈ ಕೃತಿಯ ಕರ್ತೃಗಳು ಭರವಸೆ ಹೊಂದಿದ್ದಾರೆ.

ಆರ್. ಎ. ಉಲ್ಯನೋವ್‌ಸ್ಕಿ

ಮೋಹನ್‌ದಾಸ್ ಕರಮ್‌ಚಂದ್ ಗಾಂಧೀ

ಭಾರತದಲ್ಲಿ ರಾಷ್ಟ್ರೀಯ-ವಿಮೋಚನಾ ಚಳವಳಿಯ ಅಗ್ರಗಣ್ಯ ನಾಯಕ. ಗಾಂಧೀವಾದ ಎಂದು ಖ್ಯಾತವಾದ ಸಿದ್ಧಾಂತದ ಕರ್ತೃ.

ಜನನ 1869ರ ಅಕ್ಟೋಬರ್ 2ರಂದು, ಗುಜರಾತಿನ ಪೋರ್ ಬಂದರ್ ಸಂಸ್ಥಾನದಲ್ಲಿ. ಬನಿಯ ಜಾತಿಗೆ ಸೇರಿದ್ದ ಹಿಂದೂ ಧರ್ಮದ ಆಚಾರವ್ಯವಹಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದ ಕುಟುಂಬದಲ್ಲಿ ಬೆಳೆದು ದೊಡ್ಡವರಾದರು. ಹಿಂದೂ ಧರ್ಮ ಸೂತ್ರಗಳು ಅವರ ಜಾಗತಿಕ ಮನೋಧರ್ಮ ರೂಪಿಸುವುದರಲ್ಲಿ ದೊಡ್ಡ ಪಾತ್ರ ನಿರ್ವಹಿಸಿದವು. ಅವರ ತಂದೆ ಕಾಠಿಯವಾಡ ಪರ್ಯಾಯದ್ವೀಪದ ಅನೇಕ ಸಂಸ್ಥಾನಗಳಲ್ಲಿ ದಿವಾನರಾಗಿದ್ದರು.

ಗಾಂಧೀಯವರು ಇಂಗ್ಲೆಂಡಿನಲ್ಲಿ ನ್ಯಾಯಶಾಸ್ತ್ರದ ಅಧ್ಯಯನ ಮಾಡಿದರು. 1891ರಿಂದ 1893ರವರೆಗೆ ಮುಂಬಯಿಯಲ್ಲಿ ನ್ಯಾಯವಾದಿಯಾಗಿ ಕೆಲಸ ಮಾಡಿದರು.

1893ರಿಂದ 1914ರವರೆಗೆ ದಕ್ಷಿಣ ಆಫ್ರಿಕದಲ್ಲಿ ಗುಜರಾತಿನ ವ್ಯಾಪಾರ ಸಂಸ್ಥೆಯೊಂದರ ಕಾನೂನು ಸಲಹೆಗಾರರಾಗಿ ಕೆಲಸ ಮಾಡಿದರು. ಅಲ್ಲಿ ಅವರು ಕುಲ ಪಕ್ಷಪಾತದ ವಿರುದ್ಧವೂ ಭಾರತೀಯರು ಒಳಗಾಗಿದ್ದ ಮರ್ದನದ ವಿರುದ್ಧವೂ ಹೋರಾಟದ ನಾಯಕರಾದರು. ಅಲ್ಲೇ ಅವರು ತಮ್ಮ ಅಹಿಂಸಾತ್ಮಕ ಪ್ರತಿರೋಧದ – ಸತ್ಯಾಗ್ರಹದ – ತಂತ್ರಗಳನ್ನು ವಿಶದಗೊಳಿಸಿದುದು.

1915ರ ಜನವರಿಯಲ್ಲಿ ಅವರು ಭಾರತಕ್ಕೆ ಹಿಂದಿರುಗಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷಕ್ಕೆ ನಿಕಟವಾದರು. 1919ರಲ್ಲಿ ಆ ಪಕ್ಷ ಸೇರಿಕೊಂಡರು. ತದನಂತರ ಅದರ ಅತ್ಯಂತ ಶ್ರೇಷ್ಠ ನಾಯಕರಲ್ಲೊಬ್ಬರಾದರು.

1919ರಿಂದ 1922ರವರೆಗೆ ಅವರು ಭಾರತದಲ್ಲಿ ರಾಷ್ಟ್ರೀಯ ವಿಮೋಚನೆಯ ಸಾಮೂಹಿಕ ಚಳವಳಿಗೆ ನಾಯಕತ್ವ ನೀಡಿದರು. ಅನೇಕಾನೇಕ ಸಭೆಗಳಲ್ಲಿ ಮಾತನಾಡಿ ಅವರು ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು, ಹೋರಾಟವನ್ನು ಅಹಿಂಸಾತ್ಮಕ ರೂಪಗಳಿಗಷ್ಟೆ ಸೀಮಿತಗೊಳಿಸಿದ್ದರು. ಇಪ್ಪತ್ತರ ದಶಕದಲ್ಲಿ ಅವರು ಕೈರಾಟೆಯಿಂದ ನೂಲುವ ಹಾಗೂ ಕೈಮಗ್ಗದಿಂದ ನೇಯುವ ಕಾರ್ಯವನ್ನು ಪುನಶ್ಚೇತನಗೊಳಿಸಲು ಶ್ರಮಿಸಿದರು. ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿಯೂ ಶ್ರಮಿಸಿದರು.

1919ರಿಂದ 1947ರವರೆಗೆ ಗಾಂಧೀಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸೈದ್ಧಾಂತಿಕ ನಾಯಕರಾಗಿದ್ದರು, ಅದರ ಅತ್ಯಂತ ಪ್ರಭಾವಯುತ ರಾಜಕೀಯ ನಾಯಕರೂ ಆಗಿದ್ದರು. ಅವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ ಒಂದು ಸಾಮೂಹಿಕ ಪಕ್ಷವಾಗಿ ಬೆಳೆಯಿತು, ವಿಶಾಲ ಜನ ಸ್ತರಗಳ ಬೆಂಬಲ ಪಡೆಯಿತು. ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಭಾಗವಹಿಸುವಂತೆ ಭಾರಿ ಜನ ಸಮೂಹಗಳನ್ನು ಸೆಳೆಯಲು ಅವರು ಬಳಸಿದ ವಿಧಾನ ಅವರಿಗೆ ಪ್ರಚಂಡ ಜನಪ್ರಿಯತೆ ಗಳಿಸಿಕೊಟ್ಟಿತು. ಅದೇ ಅವರ ಪ್ರಧಾನ ಶ್ರೇಯಸ್ಸೂ ಆಗಿದ್ದಿತು. ಜನ ಅವರನ್ನು 'ಮಹಾತ್ಮ' ಎಂದು ಕರೆದರು.

ಅವರು ಅನೇಕ ಬಾರಿ (1922-24, 1930-31 ಹಾಗೂ 1942-44) ಬಂಧನಕ್ಕೊಳಗಾಗಿ ಕಾರಾಗೃಹ ವಾಸ ಶಿಕ್ಷೆ ಅನುಭವಿಸಿದರು. ಸೆರೆಮನೆಯಲ್ಲಿದ್ದಾಗಲೂ, ಹೊರಗೂ ಅವರು ಅನೇಕ ಬಾರಿ ಅನ್ನ ಸತ್ಯಾಗ್ರಹಗಳನ್ನು ನಡೆಸಿದರು. ಅವು ಭಾರತದಲ್ಲಿ ಬ್ರಿಟಿಷರ ವಸಾಹತು ದಬ್ಬಾಳಿಕೆಯನ್ನು ವಿರೋಧಿಸುವ ಗುರಿ ಹೊಂದಿದ್ದವು.

1942ರಲ್ಲಿ ಜನರ ಮಧ್ಯೆ ಬ್ರಿಟಿಷ್ ವಸಾಹತುವಾದದ ವಿರುದ್ಧ ಅತೃಪ್ತಿ ಪರಾಕಷ್ಠೆ ಮುಟ್ಟಿತು. ಆಗ ಗಾಂಧೀಯವರು "ಬ್ರಿಟಿಷರೇ, ಭಾರತವನ್ನು ಬಿಟ್ಟು ತೊಲಗಿ!" ಎಂಬ ಘೋಷಣೆಯನ್ನು ಮುಂದಿರಿಸಿದರು.

1947ರ ಆಗಸ್ಟ್‌ನಲ್ಲಿ ದೇಶವು ಭಾರತ ಹಾಗೂ ಪಾಕಿಸ್ತಾನ ಎಂದು ಎರಡು ರಾಜ್ಯಗಳಾಗಿ ವಿಭಜಿತವಾಯಿತು. ಅನಂತರ ಸಾಮ್ರಾಜ್ಯವಾದಿ ಹಾಗೂ ಆಂತರಿಕ ಪ್ರತಿಗಾಮಿ ಶಕ್ತಿಗಳ ಕುತಂತ್ರ ಪ್ರಚೋದನೆಗಳ ಫಲವಾಗಿ ಉಪಖಂಡದಲ್ಲಿ ಭಾರಿ ಪ್ರಮಾಣದಲ್ಲಿ ಹಿಂದೂ-

ಮುಸ್ಲಿಮ್ ಕಗ್ಗೊಲೆಗಳು ನಡೆದವು. ಗಾಂಧೀಯವರು ಹಿಂದೂಗಳ ಹಾಗೂ ಮುಸ್ಲಿಮರ ಏಕತೆಗಾಗಿ ಕರೆ ಕೊಟ್ಟು, ಅದಕ್ಕಾಗಿ ಸತತವಾಗಿ ಶ್ರಮಿಸಿದರು.

1948ರ ಜನವರಿ 30ರಂದು ಭಾರತದ ಹಿಂದೂ ಸ್ವದೇಶ ಮೂಢಾಭಿಮಾನಿ ಸಂಸ್ಥೆ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ ಒಬ್ಬ ಸದಸ್ಯನಾಗಿದ್ದ ನಾಥೂರಾಂ ಗೋಡ್ಸೆ ಮಹಾತ್ಮ ಗಾಂಧೀಯವರನ್ನು ಗುಂಡಿಟ್ಟು ಕೊಂದ.

ಭಾರತ ಒಂದು ಮಹೋನ್ನತವಾದ, ಪುರಾತನ ಸಂಸ್ಕೃತಿಯ ದೇಶ. ಇದನ್ನು ವಸಾಹತು ದಬ್ಬಾಳಿಕೆಯ ನೊಗದಿಂದ ವಿಮೋಚನೆಗೊಳಿಸಲು ನಡೆದ ತೀವ್ರತರವಾದ ಹೋರಾಟದ ವರ್ಷಗಳು ಹೆಚ್ಚು ಹೆಚ್ಚು ಹಿಂದೆ ಸರಿಯುತ್ತಿವೆ. ಈ ಹೋರಾಟದ ಅಗ್ರಮಾನ್ಯ ನಾಯಕರಾಗಿದ್ದ ಮಹಾತ್ಮ ಗಾಂಧೀಯವರ ಜೀವನ-ಕೃತಿಗಳ ಮೌಲ್ಯ ನಿರ್ಣಯಿಸುವಲ್ಲಿ ಒಮ್ಮೆ ಭುಗಿಲೆದ್ದಿದ್ದ ಭಾವೋದ್ರೇಕಗಳು ಈಗ ಸ್ವಲ್ಪಮಟ್ಟಿಗೆ ತಗ್ಗಿವೆ. ಕೆಲವರು ಅವರ ಜೀವನ ವಿಧಾನಗಳಲ್ಲಿ ವೈರುಧ್ಯಗಳನ್ನು ಕಂಡಲ್ಲಿ, ಯೂರೋಪಿಯನ್ನರ ದೃಷ್ಟಿಯಲ್ಲಿ ಗಾಂಧೀಯವರ ಬಾಳು ಅಸಾಮಾನ್ಯವಾದುದಾಗಿದ್ದಿತು. ವಸಾಹತು ಪದ್ಧತಿಯನ್ನು ತೊಡೆದು ಹಾಕುವುದರ ಬದ್ಧ ಶತ್ರುವಾಗಿದ್ದ ವಿನ್‌ಸ್ಟನ್ ಚರ್ಚಿಲ್ ಗಾಂಧೀಯವರನ್ನು 'ಬಂಡಾಯಗಾರ ಫಕೀರ' ಎಂದು ಒಮ್ಮೆ ಕರೆದರು. ಆದರೂ, ಏನೆಲ್ಲ ವೈರುಧ್ಯಗಳಿಂದ ಕೂಡಿದ್ದರೂ ಗಾಂಧೀಯವರ ಅತ್ಯದ್ಭುತ ಸುಸಂಯೋಜಿತ ವ್ಯಕ್ತಿತ್ವವು ಅಪಾರ ಆಸಕ್ತಿಯ ವಿಷಯವಾಗಿ ಇದ್ದುಕೊಂಡೇ ಇದೆ. ಅವರು ಬಿಟ್ಟು ಹೋಗಿರುವ ಸೈದ್ಧಾಂತಿಕ ಹಾಗೂ ರಾಜಕೀಯ ಪರಂಪರೆ, ಭಾರತದ ಇತಿಹಾಸದಲ್ಲಿ ಅವರು ನಿರ್ವಹಿಸಿದ ಪಾತ್ರ, ದೇಶದ ಗತಕಾಲದೊಂದಿಗೂ ಭವಿಷ್ಯತ್ತಿನೊಂದಿಗೂ ಅವರ ಸಂಪರ್ಕಗಳು, ಇವು ಅತ್ಯಾಸಕ್ತಿಯ ವಿಷಯಗಳಾಗಿಯೇ ಇದ್ದುಕೊಂಡಿವೆ. ಅವರ ಜೀವಿತಕಾಲದಲ್ಲೇ ಅವರ ಬಗೆಗೆ ಉಗ್ರ ವಾದವಿವಾದಗಳು ಜರುಗುತ್ತಿದ್ದವು. ಅವು ಈಗ ಅಷ್ಟು ಉಗ್ರವಾಗಿರದಿದ್ದರೂ ಅಂತಹ ಜಿಜ್ಞಾಸೆಗಳು ಬಹಳ ಕಾಲದವರೆಗೆ ನಡೆಯುತ್ತಲೇ ಹೋಗುವುವು, ಏಕೆಂದರೆ ಗಾಂಧೀಯವರು ಭಾರತೀಯ ಇತಿಹಾಸದ ಒಂದು ಇಡೀ ಯುಗದ ಮೂರ್ತರೂಪವಾಗಿದ್ದಾರೆ. ಈ ಕಾಲಘಟ್ಟದಲ್ಲೇ ಭಾರತ ಒಂದು ಆಧುನಿಕ ದೇಶವಾಗಿ ರೂಪುಗೊಂಡುದು. ಇಂದು ದೇಶದ ಭವಿತವ್ಯವನ್ನು ರೂಪಿಸುತ್ತಿರುವ ಹಾಗೂ ನಿರ್ಧರಿಸುತ್ತಿರುವ ನಾಯಕಮಣಿಗಳು ಪ್ರಬುದ್ಧರಾಗಿ ಬೆಳೆದುದೂ ಆ ಕಾಲಘಟ್ಟದಲ್ಲೇ. ಆದ್ದರಿಂದಲೇ ಇಂದು ಭಾರತದಲ್ಲಿನ ಎಲ್ಲ ರಾಜಕೀಯ ಶಕ್ತಿಗಳೂ ಎಲ್ಲ ಸಾಮಾಜಿಕ-ರಾಜಕೀಯ ಪ್ರವೃತ್ತಿಗಳೂ ಒಂದಲ್ಲ ಒಂದು ರೀತಿಯಲ್ಲಿ ಗಾಂಧೀಯವರ ಬಗೆಗೆ ತಮ್ಮ ಮನೋಧರ್ಮಗಳನ್ನು ವ್ಯಕ್ತಪಡಿಸಲೇ ಬೇಕಾಗಿದೆ. ಗಾಂಧೀಯವರು ಬಿಟ್ಟು

ಕೊಟ್ಟು ಹೋಗಿರುವ ಪರಂಪರೆಯ ಸೂಕ್ಷ್ಮ ಅರ್ಥವ್ಯಾಖ್ಯಾನವು ಇಂದಿನ ಯಾವುದೇ ರಾಜಕೀಯ ವೇದಿಕೆಯ ಒಂದು ಅತ್ಯಂತ ಮುಖ್ಯ ಉಲ್ಲೇಖಾರ್ಹ ಅಂಶವಾಗಿಯೇ ಇದ್ದುಕೊಂಡಿದೆ.

ಇತಿಹಾಸವನ್ನು ಜನಸಮೂಹಗಳೇ ಸೃಜಿಸುವುದು ಎಂಬುದು ಸುವಿದಿತ ಸಂಗತಿ. ಆದರೆ ವ್ಯಕ್ತಿಗಳು ಅದಕ್ಕೆ ಸಂಕೇತವಾಗುತ್ತಾರೆ. ಗಾಂಧೀಯವರು ಅಂತಹ ಒಂದು ಸಂಕೇತ. ಅವರನಂತರ ಜವಾಹರಲಾಲ ನೆಹರೂರವರೂ ಒಂದು ಸಂಕೇತ. ಈ ಸಂಕೇತಗಳು ಭಾರತದ ರಾಜಕೀಯ ಜೀವನದ ಹಾಗೂ ರಾಜಕೀಯ ಜಾಗೃತಿಯ ಅವಿಭಾಜ್ಯ ಭಾಗಗಳಾಗಿವೆ. ಅವು ತಮ್ಮ ದೇಶದ ಎಲ್ಲೆಗಳನ್ನು ದಾಟಿಯೂ ಹೋಗಿವೆ. ಏಕೆಂದರೆ ಗಾಂಧೀ ಹಾಗೂ ನೆಹರೂರವರ ಜೀವನ ಚಿಂತನೆಗಳು ವಸಾಹತು ಪರಾಧೀನತೆಯಿಂದಲೂ ದಬ್ಬಾಳಿಕೆಯಿಂದಲೂ ಸ್ವತಂತ್ರಗೊಳಿಸಿಕೊಳ್ಳಲು ಶ್ರಮಿಸುತ್ತಿರುವ ಅನೇಕ ಇತರ ಜನತೆಗಳ ಹೋರಾಟಕ್ಕೆ ವಿಶಿಷ್ಟವಾದ ಲಕ್ಷಣಗಳಲ್ಲೂ ಕಾಣಿಸಿಕೊಂಡಿವೆ.

ಗಾಂಧೀವಾದವು ಭಾರತೀಯ ಜನರ ರಾಷ್ಟ್ರೀಯ-ವಿಮೋಚನಾ ಹೋರಾಟದ ಅವಧಿಯಲ್ಲಿ ಗಾಂಧೀಯವರು ಮುಂದಿರಿಸಿದ ಎಲ್ಲ ರಾಜಕೀಯ ನೈತಿಕ ಹಾಗೂ ದಾರ್ಶನಿಕ ವಿಚಾರಗಳ ಮೊತ್ತವಾಗಿದೆ. ಅದು ಭಾರತೀಯರು ಬ್ರಿಟಿಷ್ ಸಾಮ್ರಾಜ್ಯಶಾಹಿ ಆಳ್ವಿಕೆಯ ವಿರುದ್ಧ ನಡೆಸಿದ ಹೋರಾಟದ ವರ್ಷಗಳಲ್ಲಿ ಅವರ ರಾಷ್ಟ್ರೀಯ ಪ್ರಜ್ಞೆಯೊಂದಿಗೆ ಸಂಬಂಧಿಸಿದೆಯಷ್ಟೇ ಅಲ್ಲ, ಅದು ಇಂದಿನ ರಾಜಕೀಯ ಹಾಗೂ ವರ್ಗ ಹೋರಾಟದ ಒಂದು ಅಂಶವೂ ಆಗಿದೆ. ಬಹು ಮಟ್ಟಿಗಿನ ಎಲ್ಲ ರಾಜಕೀಯ ಪಕ್ಷಗಳೂ ಜನಸಮೂಹಗಳ ಮೇಲೆ ಪ್ರಭಾವ ಬೀರಲು ಒಂದು ಸಾಧನವಾಗಿ ಅದರ ಮೊರೆ ಹೊಗುತ್ತಿವೆ.

ಆದ್ದರಿಂದ ಗಾಂಧೀವಾದವನ್ನು, ಅದರ ನಿಜವಾದ ತಿರುಳು ಹಾಗೂ ಚಾರಿತ್ರಿಕ ಪಾತ್ರಗಳನ್ನು ವಿಶ್ಲೇಷಿಸುವುದು ಮುಖ್ಯವೂ ಆಗಿದೆ, ಪ್ರಕೃತವೂ ಆಗಿದೆ.

* * *

ಗಾಂಧೀಯವರು ಈ ಶತಮಾನದ ತಿರುವಿನಲ್ಲಿ ಒಬ್ಬ ಚಿಂತಕರಾಗಿ ಹಾಗೂ ಸಾರ್ವಜನಿಕ ಗಣ್ಯ ವ್ಯಕ್ತಿಯಾಗಿ ವಿಕಾಸಗೊಳ್ಳತೊಡಗಿದರು. ಆಗ ಅವರು ದಕ್ಷಿಣ ಆಫ್ರಿಕದಲ್ಲಿದ್ದುಕೊಂಡು ಅಲ್ಲಿ ಕುಲ ಪಕ್ಷಪಾತದ ವಿರುದ್ಧ ಭಾರತೀಯರು ಪಟ್ಟುಹಿಡಿದು ನಡೆಸುತ್ತಿದ್ದ ಧೀರ ಹೋರಾಟಕ್ಕೆ ನಾಯಕತ್ವ ನೀಡುತ್ತಿದ್ದರು. ಅದೇ ಹೊತ್ತಿನಲ್ಲಿ ಅವರು ತಮ್ಮ ತಾಯ್ನಾಡಿನೊಂದಿಗೂ ನಿಕಟ ಸಂಪರ್ಕ ಇರಿಸಿಕೊಂಡೇ ಇದ್ದರು.

ಆ ಕಾಲದಲ್ಲೇ ಭಾರತದಲ್ಲೂ ಅವಿನಾಶಿ ಎಂದು ಕಂಡುಬರುತ್ತಿದ್ದ ಬ್ರಿಟಿಷ್

ವಸಾಹತು ಆಡಳಿತದ ವಿರುದ್ಧ ರಾಷ್ಟ್ರೀಯ-ವಿಮೋಚನಾ ಚಳವಳಿಯೂ ಜನ್ಮ ತಾಳಿದ್ದಿತು. ಆ ಕಾಲದಲ್ಲೂ ಈ ಚಳವಳಿಯಲ್ಲಿ ಎರಡು ಪ್ರಧಾನ ಪ್ರವೃತ್ತಿಗಳು ಕಂಡುಬರುತ್ತಿದ್ದವು. ಒಂದು ಉದಾರವಾದಿ ಪ್ರವೃತ್ತಿ. ಇದು ಮುಖ್ಯವಾಗಿ ಆಸ್ತಿವಂತ ವರ್ಗಗಳ ಉನ್ನತ ಸ್ತರಗಳ ಜನರಲ್ಲಿ ಕಂಡುಬರುತ್ತಿದ್ದಿತು. ಈ ಜನರು ಬೂರ್ಷ್ವಾ ಬೆಳವಣಿಗೆಯ ಮಾರ್ಗಕ್ಕೆ ಬೆಂಬಲ ನೀಡುತ್ತಿದ್ದರು. ಇನ್ನೊಂದು ಪ್ರಜಾಸತ್ತಾತ್ಮಕ ತೀವ್ರಗಾಮಿ-ರಾಷ್ಟ್ರೀಯತಾವಾದಿ ಪಂಥ. ಇದು ಸಾಮಾನ್ಯ ಭಾರತೀಯ ಜನರ ಮಧ್ಯೆ ಹೆಚ್ಚು ಹೆಚ್ಚಾಗಿ ಬೆಳೆಯುತ್ತಿದ್ದಿತು ಮತ್ತು ರಾಷ್ಟ್ರೀಯ ಗುಲಾಮಗಿರಿಯ ವಿರುದ್ಧ ಪ್ರತಿಭಟನೆಯನ್ನು ಬಿಂಬಿಸುತ್ತಿದ್ದಿತು. ದೇಶದಲ್ಲಿ ಆಗಷ್ಟೆ ರೂಪುಗೊಳ್ಳುತ್ತಿದ್ದ ರಾಷ್ಟ್ರೀಯ ಬೂರ್ಷ್ವಾಸೀಯ ವಿಶಾಲ ವಿಭಾಗಗಳೂ ಈ ಪ್ರತಿಭಟನೆಯಲ್ಲಿ ಭಾಗವಹಿಸುತ್ತಿದ್ದವು.

ರಾಷ್ಟ್ರೀಯ-ವಿಮೋಚನಾ ಚಳವಳಿಯ ಪ್ರಗತಿಶೀಲ ಮನೋಧರ್ಮದ ನಾಯಕರು ವಸಾಹತು ಅಧಿಕಾರದ ವಿರುದ್ಧ ದೃಢ ಸಂಕಲ್ಪದ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಸಾಮಾನ್ಯ ಜನಸಮೂಹಗಳು ತಮ್ಮನ್ನು ಮಧ್ಯಯುಗದ ಸಾಮಾಜಿಕ ಪೀಡನೆಯಿಂದಲೂ, ಭೂಮಾಲೀಕ-ದುಬಾರಿ ಬಡ್ಡಿ ಸಾಲಗಾರರು ತಮ್ಮ ಮೇಲೆ ಹೊರಿಸಿದ್ದ ದಾಸ್ಯದಿಂದಲೂ, ಆಗಷ್ಟೆ ಉದ್ಭವಿಸುತ್ತಿದ್ದ ಬಂಡವಾಳಶಾಹಿ ಕೈಗಾರಿಕೆ ನಡೆಸುತ್ತಿದ್ದ ನಿಷ್ಕರುಣ ಶೋಷಣೆಯಿಂದಲೂ ಬಿಡುಗಡೆ ಮಾಡಿಕೊಳ್ಳಲು ಶ್ರಮಿಸುತ್ತ, ಪುರೋಗಾಮಿ ನಾಯಕರು ಇದರಲ್ಲಿ ತಮಗೆ ನೆರವಾಗುವರೆಂದು ವಿಶ್ವಾಸವಿರಿಸಿದ್ದವು. ಆದರೆ ಆ ಪುರೋಗಾಮಿ ನಾಯಕರ ಪ್ರಜಾಸತ್ತಾತ್ಮಕ ಭಾವನೆಗಳೂ ಸಾಮಾನ್ಯವಾಗಿ ಮರ್ದಿತ ರಾಷ್ಟ್ರವೊಂದರ ಬೂರ್ಷ್ವಾ ರಾಷ್ಟ್ರೀಯತಾವಾದದ ಚೌಕಟ್ಟಿಗಷ್ಟೆ ಸೀಮಿತವಾಗಿದ್ದವು. ಇದು ಅನಿವಾರ್ಯವಾಗಿಯೇ ವರ್ಗ ವೈರುಧ್ಯಗಳನ್ನು ತಣ್ಣಗಾಗಿಸಿದ್ದಿತು ಮತ್ತು ಹೆಚ್ಚೆಂದರೆ ಜನರಲ್ಲಿ ಸಾಮಾಜಿಕ ರಾಜಿಗಾಗಿ ಪ್ರಯತ್ನಿಸುವ ಮನೋಭಾವ ಬೆಳೆಸಿದ್ದಿತು.

ಈ ಕಾಲಾವಧಿಯಲ್ಲಿ ಭಾರತದಲ್ಲಿ ರಾಷ್ಟ್ರೀಯ ಜಾಗೃತಿ ಮಹತ್ವಪೂರ್ಣವಾಗಿ ಬೆಳೆಯಿತು ಮತ್ತು ಸಾಮಾಜಿಕ ವೈರುಧ್ಯಗಳೂ ತೀವ್ರಗೊಂಡವು. ಬೂರ್ಷ್ವಾ ಸಂಬಂಧಗಳು ಆಗಷ್ಟೆ ಬೆಳೆಯತೊಡಗಿದ್ದವು. ವಿದೇಶೀ ಬಂಡವಾಳದ ಒತ್ತಡ ಹೆಚ್ಚುತ್ತಿದ್ದಿತು. ಸ್ಥಳೀಯ ಬಂಡವಾಳವೂ ಸಾರ್ವತ್ರಿಕವಾಗಿ ಎಲ್ಲ ಕ್ಷೇತ್ರಗಳಿಗೂ ನುಗ್ಗುತ್ತಿದ್ದಿತು. ಇಂತಹ ಪರಿಸ್ಥಿತಿಯಲ್ಲಿ ಭಾರತದಲ್ಲಿ ಬಹಳ ಕಾಲದಿಂದ ಬೇರೂರಿದ್ದ ಕುಲಪತಿ ಆಡಳಿತ ಪದ್ಧತಿಯ ಪರಂಪರೆಗಳು ಮುರಿದು ಬೀಳತೊಡಗಿದವು ಮತ್ತು ರೈತ ಸಮೂಹಗಳು ನಶಿಸತೊಡಗಿದವು. ಜನರ ಮಧ್ಯೆ ರಾಷ್ಟ್ರೀಯ ಹಾಗೂ ಸಾಮಂತಶಾಹಿ ದಬ್ಬಾಳಿಕೆಯ ವಿರುದ್ಧ ತೀವ್ರ ಅಸಮಾಧಾನ ಬೆಳೆಯಿತು. ಭಾರತೀಯ ಬುದ್ಧಿಜೀವಿಗಳಲ್ಲಿ ಒಂದು ಭಾಗವು ಯೂರೋಪಿನ ಜ್ಞಾನೋ

ಧ್ವಿಪನೆಯ ವಿಚಾರಗಳ ಹಾಗೂ ಉದಾರವಾದಿ-ಬೂರ್ಷ್ವಾ ಸಾಮಾಜಿಕ ಚಿಂತನೆಯ ಪರಿಚಯ ಪಡೆದಿದ್ದಿತಷ್ಟೆ ಅಲ್ಲ ಬೂರ್ಷ್ವಾ ಸಮಾಜದ ಕುರಿತು ಮಾಡಲಾಗುತ್ತಿದ್ದ ಟೀಕೆಯ ತಿಳುವಳಿಕೆಯನ್ನೂ ಪಡೆದಿದ್ದಿತು. ಇದು ಪ್ರಜಾಸತ್ತಾತ್ಮಕತೆಗಾಗಿ ಪುರೋಗಾಮಿ ರಾಷ್ಟ್ರೀಯ ವ್ಯಕ್ತಿಗಳು ನಡೆಸುತ್ತಿದ್ದ ಸೈದ್ಧಾಂತಿಕ ಶೋಧನೆಯ ದಿಶೆಯನ್ನು ನಿರ್ಧರಿಸಿತು. ಶೋಷಣೆ ಹಾಗೂ ಮರ್ದನಗಳಿಂದ ಮುಕ್ತವಾದ ಸಮಾಜವೊಂದನ್ನು ಸ್ಥಾಪಿಸುವ ಕನಸಿಗೂ ಅದು ಜನ್ಮ ನೀಡಿತು. ಆದರೆ ಇದಕ್ಕೆ ಸಂಬಂಧಿಸಿ ಅವರ ವಿಚಾರಗಳು ಶುದ್ಧ ಅಸಾಧ್ಯಾದರ್ಶವಾಗಿಯೇ ಉಳಿದಿದ್ದವು.

ಗಾಂಧೀವಾದವು ಭಾರತೀಯ ಸಮಾಜದಲ್ಲಿ ಪ್ರಧಾನವಾಗಿದ್ದ ರೈತ ಪರಂಪರೆಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದಿತು. ಈ ಪರಂಪರೆಗಳಿಂದಲೇ ಗಾಂಧೀವಾದದ ಅತ್ಯಂತ ಮುಖ್ಯ ಲಕ್ಷಣಗಳು ರೂಪುಗೊಂಡಿದ್ದುದು. ಸರ್ವೋದಯ ಅಥವಾ ಸರ್ವರ ಸಂಕ್ಷೇಮವೇ ಗಾಂಧೀವಾದದ ಸಾಮಾಜಿಕ ಆದರ್ಶವಾಗಿದ್ದಿತು. ಈ ಧ್ಯೇಯ ಸಾಧನೆಯ ವಿಧಾನ ಸತ್ಯಾಗ್ರಹ ಅಥವಾ ಅಹಿಂಸಾತ್ಮಕ ಪ್ರತಿರೋಧ ಆಗಿದ್ದಿತು.

ಗಾಂಧೀಯವರ ಸಾಮಾಜಿಕ ಧ್ಯೇಯವು ಒಂದು ಪೆಟಿ ಬೂರ್ಷ್ವಾ, ರೈತ ಅಸಾಧ್ಯಾದರ್ಶವಾದೀ ಧ್ಯೇಯವಾಗಿದ್ದಿತು, ಇಳೆಯ ಮೇಲೆ ದೇವರ ಸಾಮ್ರಾಜ್ಯ ಸ್ಥಾಪಿಸುವ ಧ್ಯೇಯವಾಗಿದ್ದಿತು. ಸ್ವಾವಲಂಬಿ ರೈತ ಸಮುದಾಯಗಳಿರುವ "ಸುವರ್ಣ ಯುಗ"ಕ್ಕೆ ಹಿಂದಿರುಗುವುದನ್ನೇ ಗಾಂಧೀಯವರು ಸಾಮಾಜಿಕ ನ್ಯಾಯ ಸ್ಥಾಪನೆಯನ್ನಾಗಿ ಕಂಡುಕೊಂಡಿದ್ದರು. ಅವರು ಯೂರೋಪಿನ ಯಂತ್ರ ನಾಗರಿಕತೆಯನ್ನು ಅಂಗೀಕರಿಸಿರಲಿಲ್ಲ. ವಾಸ್ತವವಾಗಿ ಅವರು ಅದನ್ನು ದ್ವೇಷಿಸುತ್ತಿದ್ದರು ಮತ್ತು ಅದರೊಟ್ಟಿಗೇ ಬರುತ್ತಿದ್ದ ಮಾರುಕಟ್ಟೆ ಆರ್ಥಿಕತೆಯು ಭಾರತದಲ್ಲಿದ್ದ ಕುಲಪತಿ ಆಡಳಿತ ಪದ್ಧತಿಗೆ ಹಾನಿಕರವಾಗಿದ್ದಿತೆಂದೂ ರೈತ-ಕೈಕಸಬುದಾರ ಸಮುದಾಯವನ್ನು ನಾಶಗೊಳಿಸುತ್ತಿದ್ದಿತೆಂದೂ ಭಾವಿಸಿದ್ದರು.

ಎಲ್ಲಕ್ಕೂ ಮಿಗಿಲಾಗಿ ಗಾಂಧೀಯವರ ಸರ್ವೋದಯ ಸಿದ್ಧಾಂತವು ಹಿಂದೂ ಧರ್ಮದ ಪವಿತ್ರ ಗ್ರಂಥಗಳಲ್ಲಿ ಬಹು ಸುಂದರವಾಗಿಯೂ ಆಕರ್ಷಕವಾಗಿಯೂ ಪ್ರಗಾಢವಾಗಿಯೂ ಹಾಗೂ ವ್ಯಾಪಕವಾಗಿಯೂ ವರ್ಣಿತವಾಗಿದ್ದಂಥ ಸಮಾಜಕ್ಕೆ ಅನುಗುಣವಾಗಿದ್ದಿತು. ವಿದೇಶೀ ಆಡಳಿತಗಾರರ ದಬ್ಬಾಳಿಕೆಯಿಂದಲೂ ತಮ್ಮ ಸ್ವಂತ ಭೂಮಾಲೀಕರ, ವರ್ತಕರ ಹಾಗೂ ದುಬಾರಿ ಬಡ್ಡಿಗಾರರ ಶೋಷಣೆಯಿಂದಲೂ ನಜ್ಜುಗುಜ್ಜಾಗಿದ್ದ ಭಾರತೀಯ ರೈತರೂ ಹಳ್ಳಿ ಕೈಕಸಬುದಾರರೂ ಮತ್ತು ನಗರದ ಬಡ ಜನರೂ ಕೆಳ ದರ್ಜೆಯ ಅಧಿಕಾರಿಗಳೂ ಹಂಬಲಿಸುತ್ತಿದ್ದುದು ಅಂತಹ ಸಮಾಜದ ಸ್ಥಾಪನೆಗಾಗಿಯೇ. ಅಂತಹ ಸಮಾಜದ ವರ್ಣನೆಯನ್ನು ಭಾರತದ ನಾನಾ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಸ್ಮಾರಕಗಳಲ್ಲೂ,

ನಾನಾ ಭಾರತೀಯ ಜನತೆಗಳ ಬುಡಕಟ್ಟು ಹಾಗೂ ಕುಲಪತಿ ಆಡಳಿತ ಪದ್ಧತಿಯ ಪರಂಪರೆಗಳ ಅವಶೇಷಗಳಲ್ಲೂ, ಕಾಣಬಹುದಾಗಿದೆ.

ಸರ್ವೋದಯ ಸಿದ್ಧಾಂತವು ಅದೇ ಹೊತ್ತಿನಲ್ಲಿ ಬಂಡವಾಳವಾದದ ವಿರುದ್ಧ ತೀರ ಸಹಜವಾದ ನ್ಯಾಯಯುತವಾದ ಹಾಗೂ ಪ್ರಾಮಾಣಿಕವಾದ ಪ್ರತಿಭಟನೆಯೂ ಆಗಿದ್ದಿತು. ಅದು ಸಮಾಜವನ್ನು ಪರಿವರ್ತಿಸುವ ನಿಜವಾದ ಹಾಗೂ ವೈಜ್ಞಾನಿಕವಾದ ವಿಧಾನಗಳನ್ನು ಇನ್ನೂ ಅರಿಯದಿದ್ದಂಥ ಸಾಮಾಜಿಕ ಸ್ತರಗಳ – ತಾವು ಬಾಳುತ್ತಿದ್ದ ಅಸಹನೀಯ ಸಾಮಾಜಿಕ ಹಾಗೂ ವಸ್ತು ಪರಿಸ್ಥಿತಿಗಳಿಂದ ಹೊರ ಬರಲು ಮಾರ್ಗಕ್ಕಾಗಿ ಹುಡುಕಾಡುತ್ತಿದ್ದ ಆದರೆ ಅಂತಹ ಮಾರ್ಗವನ್ನು ಇನ್ನೂ ಕಂಡುಕೊಳ್ಳದೆ ಇದ್ದ ಸ್ತರಗಳ – ಜನರ ಪ್ರತಿಭಟನೆಯಾಗಿದ್ದಿತು. ಅದು ಅಮಾನುಷ ಜಾತಿ ಪದ್ಧತಿಯಿಂದಲೂ ಭೂಮಾಲೀಕರ ಹಾಗೂ ದುಬಾರಿ ಬಡ್ಡಿಗಾರರ ಪೀಡನೆಯಿಂದಲೂ ಅಪಾರ ಸಂಕಷ್ಟಕ್ಕೊಳಗಾಗಿದ್ದ ಮಿಲಿಯಾಂತರ ಜನರ ಪ್ರತಿಭಟನೆಯೂ ಆಗಿದ್ದಿತು. ಈ ಜನರು ತಮ್ಮ ಸ್ಥಿತಿಯನ್ನು ಇನ್ನೂ ಪೂರ್ಣವಾಗಿ ಅರ್ಥಮಾಡಿಕೊಂಡಿರಲಿಲ್ಲ, ತಾವು ದ್ವೇಷಿಸುತ್ತಿದ್ದ "ಐರೋಪ್ಯ" ಬಂಡವಾಳಶಾಹಿ ನಾಗರಿಕತೆಯಿಂದ ಹುಟ್ಟಿದ್ದಂಥ ಕ್ರಾಂತಿಕಾರಿ ಕಾರ್ಮಿಕ ವರ್ಗದೊಂದಿಗೆ ದೃಢವಾದ ಒಕ್ಕೂಟ ಸ್ಥಾಪಿಸಿಕೊಂಡರಷ್ಟೆ ತಮ್ಮ ಸಮಸ್ಯೆಗಳಿಗೆ ಪರಿಹಾರ ಸಾಧ್ಯ ಎಂಬುದನ್ನು ಇನ್ನೂ ಮನಗಂಡಿರಲಿಲ್ಲ. ಆದ್ದರಿಂದಲೇ ಗಾಂಧೀವಾದವು ಈ ನವ ನಾಗರಿಕತೆ ಅನಿವಾರ್ಯ ಎಂಬುದನ್ನೂ ಅದುವರೆವಿಗೂ ಇದ್ದ ಎಲ್ಲ ಸಮಾಜಗಳಿಗೂ ಹೋಲಿಸಿದಂತೆ ಇದು ಪುರೋಗಾಮಿಯಾಗಿದ್ದಿತು ಎಂಬುದನ್ನೂ ಅಲ್ಲಗಳೆಯಿತು. ಗಾಂಧೀವಾದವು ಭಾರತೀಯ ರೈತನನ್ನೂ ಕೈಕಸಬುದಾರನನ್ನೂ ಸದಾಕಾಲಕ್ಕೂ ಕಣ್ಮರೆಯಾಗಿದ್ದಂಥ ಪ್ರಾಕೃತಿಕ ಸಾಮಾಜಿಕ ರೂಪಗಳನ್ನು ವಿಷಣ್ಣ ಭಾವದಿಂದ ಸ್ಮರಿಸಿಕೊಳ್ಳುವಂತಷ್ಟೆ ಮಾಡಿತು ಮತ್ತು ಅಂಥ ರೂಪಗಳನ್ನು ಉದ್ದೇಶಪೂರ್ವಕವಾಗಿಯೇ ಆದರ್ಶೀಕರಿಸಿತು.

ಆದರೆ ಹೀಗೆ ಸ್ಪಷ್ಟವಾಗಿಯೇ ಅಸಾಧ್ಯಾದರ್ಶವಾದ ಹಾಗೂ ರೂಢಿಚ್ಯುತವಾದ ಲಕ್ಷಣ ಹೊಂದಿದ್ದರೂ ಗಾಂಧೀಯವರ ಸರ್ವೋದಯ ಧ್ಯೇಯವು ಭಾರತದ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ವಸ್ತುನಿಷ್ಠ ಧನಾತ್ಮಕ ಪಾತ್ರವನ್ನು ನಿರ್ವಹಿಸಿತು. ಬ್ರಿಟಿಷ್ ಆಡಳಿತದಿಂದ ಸ್ವತಂತ್ರಗೊಳ್ಳಲು ನಡೆಸಬೇಕಾಗಿದ್ದ ಹೋರಾಟವು ಅತ್ಯಂತ ಮುಖ್ಯವಾದುದಾಗಿದ್ದಿತು, ಏಕೆಂದರೆ ಅದು ಅದೇ ಹೊತ್ತಿನಲ್ಲಿ ತಾವು ಹಂಬಲಿಸುತ್ತಿದ್ದ ಮತ್ತು ಈಡೇರಿಸಲು ಶ್ರಮಿಸುತ್ತಿದ್ದ ಸೂತ್ರಗಳ ಮೇಲೆ ಆಧರಿಸಿದ್ದ ನವ ಸಮಾಜದ ಹಾಗೂ ಸಾಮಾಜಿಕ ನ್ಯಾಯದ ಹೋರಾಟವೇ ಆಗಿದ್ದಿತು. ಎಂಬ ನಂಬಿಕೆಯನ್ನು ಗಾಂಧೀವಾದವು ನಗರದ ಹಾಗೂ ಗ್ರಾಮಾಂತರದ ವಿಶಾಲ ಜನವಿಭಾಗಗಳ ಮನಸ್ಸಿನಲ್ಲಿ ಮೂಡಿಸಿ ಅವರನ್ನು ಸ್ಫೂರ್ತಿಗೊಳಿಸಿತು. ಗಾಂಧೀಯವರು ಸರ್ವೋದಯದ ಸಾಧನೆಯನ್ನು

ಪ್ರಾಮಾಣಿಕವಾಗಿಯೂ ಸತ್ಯಸಂಧತೆಯಿಂದಲೂ ವಸಾಹತುವಾದಿಗಳ ವಿರುದ್ಧದ
ಹೋರಾಟದೊಂದಿಗೆ ಸಂಬಂಧಿಸಿದ್ದರು.

ಸ್ವಾತಂತ್ರ್ಯವನ್ನು ಗಳಿಸಿಕೊಂಡುದೂ ಸಾಮ್ರಾಜ್ಯಶಾಹಿ ಆಳ್ವಿಕೆಯನ್ನು
ಕೊಡೆದು ಹಾಕಿದುದೂ ಭಾರತೀಯ ಜನರ ಮಹತ್ಸಾಧನೆಯಾಗಿದ್ದಿತು. ಇದು
ಮೂಲತಃ ಗಾಂಧೀಯವರ ಹೆಸರಿನೊಂದಿಗೇ ಸಂಬಂಧಿಸಿದೆ. ಅವರು ನ್ಯಾಯ
ವಾಗಿಯೇ ಭಾರತೀಯ ಜನರ ಅಪಾರ ಗೌರವಕ್ಕೆ ಪಾತ್ರರಾಗಿದ್ದಾರೆ. ಆದರೆ
1947ರಲ್ಲಿ ಗಳಿಸಿದ ಸ್ವಾತಂತ್ರ್ಯವು ದೇಶವನ್ನು ಸರ್ವೋದಯದತ್ತವೇನೂ ಕರೆ
ದೊಯ್ಯಲಿಲ್ಲ.

ವಸಾಹತು ದಬ್ಬಾಳಿಕೆಯನ್ನು ಅಹಿಂಸಾತ್ಮಕವಾಗಿ ವಿರೋಧಿಸುವ ವಿಧಾ
ನವು ಭಾರತದ ಆಧ್ಯಾತ್ಮಿಕ ಪರಂಪರೆಗಳ ಮೇಲೆ, ಭಾರತೀಯ ರೈತ ಮನಸ್ತತ್ವದ
ಮೇಲೆ ಆಧರಿಸಿದ್ದಿತು. ಗಾಂಧೀಯವರ ಸಾಮಾಜಿಕ ಆದರ್ಶದಂತೆಯೇ ಇದೂ
ಅಪಾರ ತಾಳ್ಮೆ ಹಾಗೂ ಪ್ರತಿಭಟನೆಗಳ, ಸಂಪ್ರದಾಯಬದ್ಧತೆ ಹಾಗೂ ಸಹಜ
ಸ್ಫೂರ್ತಿಯ ಕ್ರಾಂತಿಕಾರಿ ಭಾವನೆಗಳ, ಸಂಯೋಜನೆಯಾಗಿದ್ದಿತು. ಇವು ಶತಶತಮಾನ
ಗಳಿಂದ ವಿಧಿಬದ್ಧವಾಗಿ ಧಾರ್ಮಿಕ ಜಾಗತಿಕ ಮನೋಧರ್ಮದ ಮೇಲೆಯೇ
ಬೆಳೆದು ಬಂದಿದ್ದ ಭಾರತೀಯ ರೈತನಿಗೆ ವಿಶಿಷ್ಟವಾದ ಲಕ್ಷಣಗಳೇ ಆಗಿದ್ದವು.

ಗಾಂಧೀವಾದದ ಈ ಲಕ್ಷಣಗಳು ಸ್ವದೇಶೀ ಸಿದ್ಧಾಂತದಲ್ಲಿ ವ್ಯಕ್ತಗೊಂಡವು.
ಸ್ವದೇಶೀ ಸಿದ್ಧಾಂತದ ಧಾರ್ಮಿಕ, ರಾಜಕೀಯ ಹಾಗೂ ಆರ್ಥಿಕ ಈ ಮೂರು
ಲಕ್ಷಣಗಳೂ ಗತಕಾಲದಿಂದ ಪಡೆದುಕೊಂಡಿದ್ದ ಸಂಸ್ಥೆಗಳನ್ನೂ ಆಚಾರವ್ಯವಹಾರ
ಗಳನ್ನೂ ಉಳಿಸಿಕೊಂಡು ಬರುವ, ಹೊಸ ಅರ್ಥ ನೀಡುವ ಮೂಲಕ ಅವು
ಗಳನ್ನು ಕ್ರಮೇಣ ಹಾಗೂ ಅಹಿಂಸಾತ್ಮಕವಾಗಿ ಪರಿವರ್ತಿಸುವ, ವಿಚಾರದಿಂದ
ಪೂರಿತವಾಗಿವೆ. ಪ್ರಸಕ್ತ ಪರಿಸ್ಥಿತಿಯ ಬಗೆಗೆ ಗಾಢವಾದ ಅತೃಪ್ತಿ, ಆದರ್ಶೀ
ಕರಿಸಿದ ಗತಕಾಲದಲ್ಲಿ ಅಗಾಧ ವಿಶ್ವಾಸ, ಆ ಗತಕಾಲಕ್ಕೆ ಹಿಂದಿರುಗುವುದನ್ನು
ಬಿಟ್ಟು ಉಳಿದೆಲ್ಲ ಸಾಧ್ಯತೆಗಳ ನಿರಾಕರಣೆ, ಅದೇ ಹೊತ್ತಿನಲ್ಲಿ ಯಾವುದೇ ಆಮೂ
ಲಾಗ್ರ ಬದಲಾವಣೆಯ ಬಗೆಗೆ ಅಂಜಿಕೆ–ಇವೆಲ್ಲವನ್ನೂ ನಾವು ಈ ಸಿದ್ಧಾಂತ
ದಲ್ಲಿ ಕಾಣುತ್ತೇವೆ. ಇವೆಲ್ಲವೂ ಸಂಪ್ರದಾಯಬದ್ಧ ಸಮಾಜದ ಇನ್ನೂ ಉಳಿದಿ
ರುವ ಪ್ರಬಲ ಅವಶೇಷಗಳ ಪರಿಸ್ಥಿತಿಯಲ್ಲಿ ರೈತ ಮನಸ್ತತ್ವದ ಪ್ರಧಾನ ಲಕ್ಷಣ
ಗಳೇ ಆಗಿವೆ. ನಿಜ, ಇವು ನಿಜವಾದ ಆರ್ಥಿಕ ಜೀವನದಲ್ಲಿ ಅಷ್ಟಾಗಿ ಅಲ್ಲ ಆದರೆ
ಸಾಮಾನ್ಯ ಭಾರತೀಯನ ಪ್ರಜ್ಞೆಯಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆನ್ನಿ.

ಒಂದು ವಿಚಾರಧಾರೆಯಾಗಿ ಹಾಗೂ ಆಚರಣೆಯ ರಾಜನೀತಿಯಾಗಿ ಗಾಂಧೀ
ವಾದವು ರಾಷ್ಟ್ರೀಯ, ಸಾಂಸ್ಕೃತಿಕ, ಚಾರಿತ್ರಿಕ ಹಾಗೂ ಧಾರ್ಮಿಕ ಪರಂಪರೆ
ಗಳಿಗೆ ನಿಷ್ಠೆಯ ಪ್ರಬಲ ಲಕ್ಷಣ ಹೊಂದಿದ್ದಿತು. ಅದು ಈ ಪರಂಪರೆಗಳಲ್ಲಿ ರೈತ
ನಿಗೂ ಕೈಕಸಬುದಾರನಿಗೂ ನಿಕಟವಾದಂಥ ಸಂದೇಶಗಳನ್ನೂ ಸ್ಮರಣೆಗಳನ್ನೂ

ಆಕೃತಿಗಳನ್ನೂ ಕಂಡುಕೊಳ್ಳುವ ಮತ್ತು ಅವರ ಆತ್ಮಿಕ ಬಾಳಿಗೂ ಸ್ವತಂತ್ರ
ರಾಷ್ಟ್ರೀಯ ಬೆಳವಣಿಗೆಯ ಹಾಗೂ ಸಮಾಜ ಪರಿವರ್ತನೆಯ ಅಗತ್ಯತೆಗೂ
ನಡುವೆ ನೇರ ಸಂಪರ್ಕ ಏರ್ಪಡಿಸುವ ಸಾಮರ್ಥ್ಯ ಹೊಂದಿದ್ದಿತು. ಗಾಂಧೀಯವರ
ವಿಚಾರಗಳೂ ಅವರ ವ್ಯಕ್ತಿತ್ವವೂ ಭಾರತೀಯ ಜನರ ಮೇಲೆ ಬೀರಿದ ಭಾರಿ
ಪ್ರಭಾವದ ರಹಸ್ಯವೆಂದರೆ ಅವರ ತತ್ವವು ಜನತಾ ಪರಂಪರೆಗಳಿಗೂ ನ್ಯಾಯ
ಪರತೆಯ ಪ್ರಕಲ್ಪನೆಗಳಿಗೂ ಹೀಗೆ ನಿಷ್ಠೆಯಿಂದಿದ್ದುದೇ ಆಗಿದ್ದಿತು.

ಮೇಲೆ ಸ್ಥೂಲವಾಗಿ ವಿವರಿಸಿರುವ ಕಾರಣಗಳಿಂದಾಗಿಯೇ ಗಾಂಧೀ
ವಾದವು ಗಾಢವಾಗಿ ರಾಷ್ಟ್ರೀಯವಾದ ಹಾಗೂ ಪ್ರಧಾನವಾಗಿ ಪೆಟಿ ಬೂರ್ಷ್ವಾ
ಆದ ಒಂದು ವಿಚಾರಧಾರೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

ಗಾಂಧೀವಾದದ ಈ ತಿಳಿವಳಿಕೆಯು ಬಹುಶಃ ಚರ್ಚಾಸ್ಪದವಿರಬಹುದು.
ಆದರೂ ಅದು ಈ ಸಮಸ್ಯೆಯನ್ನು ಅಭ್ಯಸಿಸುತ್ತಿರುವ ಮಾರ್ಕ್ಸ್‌ವಾದಿ ಸಂಶೋಧ
ಕರ ಸಾಧನೆಗಳನ್ನು ಎಷ್ಟು ಮಾತ್ರವೂ ಕುಗ್ಗಿಸಬಾರದು. ಗಾಂಧೀವಾದವು ಭಾರ
ತೀಯ ರಾಷ್ಟ್ರೀಯ ಬೂರ್ಷ್ವಾಸೀಯ ಹಿತಗಳೊಂದಿಗೆ ನಿಕಟವಾಗಿ ಸಂಬಂಧಿತ
ವಾಗಿದೆ ಮತ್ತು ಈ ಬೂರ್ಷ್ವಾಸೀಯು ಗಾಂಧೀವಾದದ ಸಿದ್ಧಾಂತವನ್ನೂ
ಆಚರಣೆಯನ್ನೂ ತನ್ನ ಸ್ವಂತ ವರ್ಗ ಉದ್ದೇಶಗಳಿಗಾಗಿ ಪರಿಣಾಮಕಾರಿಯಾಗಿ
ಬಳಸಿಕೊಳ್ಳುತ್ತಿದೆ, ಎಂದೇ ಈ ಮಾರ್ಕ್ಸ್‌ವಾದಿ ಸಂಶೋಧಕರು ಎತ್ತಿ ತೋರಿ
ಸುತ್ತಾರೆ. ಅದೇ ಹೊತ್ತಿನಲ್ಲಿ ಮಾರ್ಕ್ಸ್‌ವಾದಿಗಳು ಮೇಲೆ ತಿಳಿಸಿದ ಸಂಬಂಧವು
ಸಾಮಾನ್ಯವಾಗಿ ಹೇಳಲಾಗುವುದಕ್ಕಿಂತ ಹೆಚ್ಚು ಜಟಿಲವಾಗಿದ್ದಿತು ಅಥವಾ ಕೊನೆಯ
ಪಕ್ಷ ಅದು ಅಷ್ಟು ನೇರವಾದುದೂ ಸರಳವಾದುದೂ ಆಗಿರಲಿಲ್ಲ ಎಂದೂ ಒತ್ತಿ
ಹೇಳುತ್ತಾರೆ.

ಕುಲಪತಿ ಆಡಳಿತ ಪದ್ಧತಿ ಸಮಾಜದ ರೈತನ "ಸುವರ್ಣ ಯುಗ"ದ ಕನಸಿ
ನಲ್ಲಿ ತಾವೂ ಪಾಲ್ಗೊಳ್ಳುವಾಗಲೇ ಗಾಂಧೀಯವರು ಅದನ್ನು ವಾಸ್ತವ್ಯಕ್ಕೆ
ತರಲು ಏನನ್ನೂ ಮಾಡಲಿಲ್ಲವಷ್ಟೆ ಅಲ್ಲ, ಭೂಒಡೆತನದ ಪ್ರಶ್ನೆಯನ್ನು
ಸ್ವಾತಂತ್ರ್ಯ ಗಳಿಸಿಕೊಂಡನಂತರದವರೆಗೂ ಮುಂದೆ ಹಾಕಬೇಕೆಂದು ಒತ್ತಾಯ
ಮಾಡಿದರು ಕೂಡ ಮತ್ತು ಇದನ್ನು ಸಾಧಿಸಲೋಸುಗ ಜನಸಮೂಹಗಳ
ಮಧ್ಯೆ ತಾವು ಹೊಂದಿದ್ದ ಅಪಾರ ಪ್ರಭಾವವನ್ನು ಬಳಸಿಕೊಂಡು ರಾಷ್ಟ್ರೀಯ-
ವಿಮೋಚನಾ ಚಳವಳಿಯ ಬೂರ್ಷ್ವಾ ನಾಯಕತ್ವಕ್ಕೆ ಭಾರಿ ಸಹಾಯ
ಮಾಡಿದರು. ಈ ವಾಸ್ತವಾಂಶದಲ್ಲೇ ಗಾಂಧೀವಾದದ ಭಾರಿ ವಿರೋಧಾಭಾಸ
ಎದ್ದುಕಾಣುವುದು. ಆಚರಣೆಯಲ್ಲಿ ಸರ್ವೋದಯದ ಕನಸೂ ಅಹಿಂಸಾ
ಸೂತ್ರಗಳೂ ಇದೇ ಗುರಿಗೆ ಸೇವೆ ಸಲ್ಲಿಸಿದವು.

1918 ಹಾಗೂ 1947ರ ನಡುವಿನ ಕಾಲಾವಧಿಯಲ್ಲಿ ಗಾಂಧೀವಾದವು
ಭಾರತೀಯ ಜನರ ವಿಮೋಚನಾ ಹೋರಾಟದ ಮೇಲೆ ಬಹುಮಟ್ಟಿಗೆ ಅಖಂಡವಾ

ವೇಳೆ ರಾಜಕೀಯ ಹಾಗೂ ಸಂಘಟನಾತ್ಮಕ ಪ್ರಭಾವ ಬೀರಿತು. ಈ ಅವಧಿಯ ರೈತ ಹೋರಾಟದ ಒಂದು ಅತ್ಯಂತ ಮುಖ್ಯ ಹಾಗೂ ವಿಚಿತ್ರ ಲಕ್ಷಣವೆಂದರೆ, ಈ ಮೂವತ್ತು ವರ್ಷಗಳ ಕಾಲಾವಧ್ಯಂತ ಭಾರತೀಯ ಬೂರ್ಷ್ವಾಸೀಯು ರಾಷ್ಟ್ರೀಯ ಸ್ವಾತಂತ್ರ್ಯ ಚಳವಳಿಯನ್ನೂ ಭೂಸುಧಾರಣೆಗಾಗಿ ರೈತರ ಹೋರಾಟವನ್ನೂ ವಿಭಜಿಸಿ ಪ್ರತ್ಯೇಕವಾಗಿ ಇರಿಸುವುದರಲ್ಲಿ ಯಶಸ್ವಿಯಾದುದು. ಇಂತಹ ವಿಭಜನೆಯು ಅಸಾಧ್ಯವೆಂದು, ಅಸಹಜವಾದುದೆಂದೂ ಸಹ ಕಾಣಬಹುದಿದ್ದಿತು, ಏಕೆಂದರೆ ವಸಾಹತು-ಸಾಮಂತಶಾಹಿ ಪದ್ಧತಿಯೂ ಶೋಷಣೆಯೂ ಪ್ರಬಲವಾದ ವಿದೇಶೀ ಆಕ್ರಮಣಕಾರರು ಭಾರಿ ವಿದೇಶೀ ಬಂಡವಾಳಗಾರರು ಭಾರಿ ಭಾರತೀಯ ಸಾಮಂತಶಾಹಿ ಹಾಗೂ ಅರೆಸಾಮಂತಶಾಹಿ ಭೂಮಾಲೀಕರೊಂದಿಗೆ ಏರ್ಪಡಿಸಿಕೊಂಡಿದ್ದ ದೀರ್ಘಕಾಲಿಕ ರಾಜಕೀಯ ಒಕ್ಕೂಟದ ಮೇಲೆ ಅವಲಂಬಿಸಿದ್ದವು. ಆಳುವ ಶಕ್ತಿಗಳ – ವಿದೇಶೀ ಆಡಳಿತಗಾರರ ಹಾಗೂ ಅವರ ಅಂತರಿಕ ಪ್ರತಿಗಾಮಿ ಬೆಂಬಲಿಗರ – ಈ ಅವಿಭಾಜ್ಯ ಒಕ್ಕೂಟವನ್ನೇ ರಾಷ್ಟ್ರೀಯ ವಿಮೋಚನೆಯ, ರೈತ, ಬೂರ್ಷ್ವಾ-ಪ್ರಜಾಸತ್ತಾತ್ಮಕ ಕ್ರಾಂತಿಯು ತೊಡೆದು ಹಾಕಬೇಕಾಗಿದ್ದುದು.

ಆದರೆ ಇದು ಜರುಗಲಿಲ್ಲ. ಭೂ ಸಂಬಂಧಿ ಕ್ರಾಂತಿಯು ಸಾಮ್ರಾಜ್ಯಶಾಹಿ ವಿರೋಧಿ ಕ್ರಾಂತಿಯ ಅಕ್ಷವಾಗಲಿಲ್ಲ. ಎರಡು ಕ್ರಾಂತಿಗಳೂ ಒಟ್ಟಾಗಿ ಒಂದುಗೂಡಲಿಲ್ಲ, ಏಕಗೊಳ್ಳುವ ಹಾಗೂ ಒಂದನ್ನೊಂದು ದೃಢಪಡಿಸಿಕೊಂಡು ಹೋಗುವ ಸ್ಥಿತಿಯನ್ನು ಎಂದೂ ತಲುಪಲೇ ಇಲ್ಲ. ಆ ಸ್ಥಿತಿಯಲ್ಲಷ್ಟೆ ರಾಷ್ಟ್ರೀಯ-ವಿಮೋಚನಾ ಕ್ರಾಂತಿಯು ಅದೇ ಹೊತ್ತಿನಲ್ಲಿ ರೈತ ಕ್ರಾಂತಿಯೂ ಆಗಲು ಅವಶ್ಯವಾದ ಪೂರ್ವಾಧಾರ ಸೃಜಿತವಾಗುತ್ತಿದ್ದುದು.

ಭಾರತೀಯ ಬೂರ್ಷ್ವಾಸೀಯ ಒಂದು ಗಣನೀಯ ಭಾಗವು, ದೊಡ್ಡ ಬೂರ್ಷ್ವಾಸೀಯುಮಷ್ಟೆ ಅಲ್ಲ, ಮಧ್ಯಮ ಹಾಗೂ ನಗರೀಯ ಪೇಟೆ ಬೂರ್ಷ್ವಾಸೀಯ ಒಂದು ಗಣನೀಯ ಭಾಗವೂ, "ಪ್ರಾದೇಶೀಕರಿಸಲ್ಪಟ್ಟಿದ್ದಿತು." ಬ್ರಿಟಿಷ್ ಬಂಡವಾಳವು ಭಾರತದ ಸ್ವತಂತ್ರ ಕೈಗಾರಿಕಾಭಿವೃದ್ಧಿಯನ್ನು ನಿಧಾನಗೊಳಿಸಿದ್ದುದರ ಫಲವಾಗಿ ಆಗಷ್ಟೆ ಉದಯಿಸುತ್ತಿದ್ದ ಭಾರತೀಯ ಬೂರ್ಷ್ವಾಸೀಯು ಹೆಚ್ಚು ಅಥವಾ ಕಮ್ಮಿ ಪ್ರಮಾಣದಲ್ಲಿ ಭೂಮಿಯ ಮೇಲೇ ನೆಲೆ ಊರಿದ್ದಿತು. ಭೂಮಿಯನ್ನೇ ತನ್ನ ಆಸ್ತಿಯನ್ನಾಗಿ ಮಾಡಿಕೊಂಡಿದ್ದಿತು. ಬ್ರಿಟಿಷ್ ಆಡಳಿತದ ಕಾಲಾವಧಿಯಾದ್ಯಂತ, ಆಧುನಿಕ ವಿಸ್ತೃತ ಪ್ರಮಾಣದ ಕೃಷಿಯಲ್ಲಿ ಬಂಡವಾಳ ಹಾಕುವುದಕ್ಕಿಂತ ಆಸ್ತಿಯಾಗಿ ಭೂಮಿಯಲ್ಲಿ ಬಂಡವಾಳ ಹಾಕುವುದು ಬಹುವೇಳೆ ಹೆಚ್ಚು ಲಾಭದಾಯಕವಾಗಿ, ಖಚಿತವಾಗಿಯೂ ಸುಭದ್ರವಾದುದಾಗಿ, ಅದಕ್ಕೆ ಕಂಡುಬಂದಿತ್ತು.

ಆದರೆ ಭಾರತದ ಭಿನ್ನಭಿನ್ನ ಬೂರ್ಷ್ವಾಸೀ ತನ್ನ ಬಂಡವಾಳವನ್ನು

ಈ ರೀತಿ ತೊಡಗಿಸುವುದಕ್ಕಷ್ಟೆ ತನ್ನನ್ನು ಸೀಮಿತಗೊಳಿಸಿಕೊಂಡಿದ್ದಿತೆಂದೇನೂ ಇದರ ಅರ್ಥವಲ್ಲವೆನ್ನಿ. ರಾಷ್ಟ್ರೀಯ ಬಂಡವಾಳದ ಬೆಳವಣಿಗೆಯೊಂದಿಗೆ ಬಂಡವಾಳವನ್ನು ಹೆಚ್ಚುಹೆಚ್ಚಾಗಿ ಕೈಗಾರಿಕೆ, ವ್ಯಾಪಾರ, ಬ್ಯಾಂಕುಗಳು, ಅಧೋರಚನೆಯ ನಾನಾ ವಲಯಗಳು ಮತ್ತು ದೊಡ್ಡ ಪ್ಲಾಂಟೇಷನ್‌ಗಳು ಇವುಗಳಲ್ಲಿ ತೊಡಗಿಸಲು ಪ್ರಾರಂಭಿಸಲಾಯಿತು. ಆದರೆ ಭಾರತದ ರಾಷ್ಟ್ರೀಯ ಬಂಡವಾಳದ ಸಂಪೂರ್ಣವಾಗಿ ಎಲ್ಲ ರೂಪಗಳೂ – ವರ್ತಕನ ಹಾಗೂ ದುಬಾರಿ ಬಡ್ಡಿಗಾರನ ಬಂಡವಾಳ(ಇವು ಅನೇಕ ರೀತಿಗಳಲ್ಲಿ ಮಧ್ಯಯುಗೀನ ಪ್ರಾಥಮಿಕ ಬಂಡವಾಳ ರೂಪಗಳಾಗಿದ್ದವು)ಗಳಿಂದ ಹಿಡಿದು ಕೈಗಾರಿಕಾ, ಬ್ಯಾಂಕಿಂಗ್ ಹಾಗೂ ಏಕಸ್ವಾಮ್ಯ ಬಂಡವಾಳಗಳವರೆಗೆ ಬಂಡವಾಳಗಳ ಎಲ್ಲ ರೂಪಗಳೂ – ಭೂಒಡೆತನದೊಂದಿಗೆ ಮತ್ತು ದಾಸ್ಯಕ್ಕೆ ದೂಡಲ್ಪಟ್ಟಿದ್ದ ರೈತಾಪಿ ಜನರ ಶೋಷಣೆಯೊಂದಿಗೆ ಸಂಬಂಧಿತವಾಗಿದ್ದವು. ಈ ಶೋಷಣೆಗೆ ವಸಾಹತುವಾದಿಗಳ ರಾಜ್ಯಾಧಿಕಾರವು ತನ್ನ ಬಹು ಭಾರಿ ಬಲೋದ್ಬಂಧದ ಸಾಧನದಿಂದಲೂ ದೇಶದ ವಸ್ತುತಃ ಮಿಲಿಟರಿ ಆಕ್ರಮಣದಿಂದಲೂ ಬೆಂಬಲ ನೀಡಿದ್ದಿತು, ಪ್ರಾಚಿತ್ಯ ಒದಗಿಸಿದ್ದಿತು.

ಒಂದು ವರ್ಗವಾಗಿ ಭಾರತೀಯ ರಾಷ್ಟ್ರೀಯ ಬೂರ್ಷ್ವಾಸೀಯ ಈ ವಿಚಿತ್ರ ಲಕ್ಷಣವೇ ಅದು ಹಾಕಿಕೊಂಡ ತಾಂತ್ರಿಕ ನೀತಿಮಾರ್ಗಕ್ಕೆ, ಗ್ರಾಮಾಂತರದಲ್ಲಿ ಸಾಮಂತಶಾಹಿ ಅವಶೇಷಗಳು ಪ್ರಬಲವಾಗಿದ್ದಾಗ ಅದು ಹಾಕಿಕೊಂಡ ತಾಂತ್ರಿಕ ನೀತಿಮಾರ್ಗಕ್ಕೆ, ವಿವರಣೆ ನೀಡುತ್ತದೆ. ಮರ್ದಿತ ರಾಷ್ಟ್ರದ ವಿಶಿಷ್ಟ ರಾಜಕೀಯ ಬೆಳವಣಿಗೆಯು ಮತ್ತು ಎಲ್ಲಕ್ಕೂ ಮಿಗಿಲಾಗಿ ವರ್ಗಗಳ ನಡುವೆಯೂ ಆಸ್ತಿವಂತ ವರ್ಗಗಳ ಒಳಗೇ ಇದ್ದ ವೈರುಧ್ಯಗಳನ್ನು ಮಸುಕಾಗಿಸಿದ್ದಂಥ ಬೂರ್ಷ್ವಾ ರಾಷ್ಟ್ರೀಯತಾವಾದದ ಪಾತ್ರವು, ಸಾಮ್ರಾಜ್ಯವಾದದ ವಿರುದ್ಧ ಹೋರಾಟದಲ್ಲಿ ರಾಜಕೀಯ ಶಕ್ತಿಗಳ ಸಾಲುಗೂಡಿಕೆಯ ಮೇಲೆ ಪ್ರಭಾವ ಬೀರಿದ್ದವು. ಅದು ರೈತಾಪಿ ವರ್ಗಕ್ಕೆ ಸಂಬಂಧಿಸಿ ನಾನಾ ರೀತಿಯ ಚಲನವಲನಗಳನ್ನು ಮಾಡಲು ಬೂರ್ಷ್ವಾಸೀಗೆ ಬೇಕಾದಷ್ಟು ಅವಕಾಶ ಒದಗಿಸಿಕೊಟ್ಟಿದ್ದಿತು. ರಾಷ್ಟ್ರೀಯ ಬೂರ್ಷ್ವಾಸೀಯು ಇದನ್ನು ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಬಳಸಿಕೊಂಡಿತು. ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡುವಾಗಲೇ ಅದು ಸಾಮಂತಶಾಹಿ ವಿರೋಧಿ ರೈತ ಚಳವಳಿಯನ್ನು ವಿಕಾಸಗೊಳಿಸುವ ಆಗತ್ಯದಿಂದ ತನ್ನನ್ನು ಬಂಧಿಸಿಕೊಳ್ಳಲು ಅವಕಾಶ ನೀಡಲಿಲ್ಲ.

ಇವೆಲ್ಲವೂ ರಾಷ್ಟ್ರೀಯ ಬೂರ್ಷ್ವಾಸೀಗೆ ಭಾರತೀಯ ರೈತಾಪಿ ಜನರನ್ನು ಮರ್ದಿಸುತ್ತಿದ್ದ ಸಾಮಂತಶಾಹಿ ಭೂಮಾಲೀಕರ ವಿರುದ್ಧ ಸಕ್ರಿಯ ಹೋರಾಟವನ್ನು ಬಿಟ್ಟುಕೊಡಲು ಅವಕಾಶ ಮಾಡಿಕೊಟ್ಟವು, ಭೂಮಾಲೀಕ ವರ್ಗವೊಂದಿಗೆ ರಾಜಿ ಮಾಡಿಕೊಳ್ಳುವಂತೆ ಮತ್ತು ಸುಧಾರಣಾವಾದಿ ಮಾರ್ಗ ಹಿಡಿಯುವಂತೆ, ಆದರೆ ತಾನು ಅಧಿಕಾರಕ್ಕೆ ಬಂದನಂತರ ಕ್ರಮೇಣ – ರೈತಾಪಿ ಜನರ ದೃಷ್ಟಿ

ಮುಂದೆ ಯೋಜನಾಪೂರ್ವಕವಾಗಿ – ಸಾಮಂತವಾದದ ಅವಶೇಷಗಳನ್ನು ತೊಡೆದು ಹಾಕುವಂಥ ಮಾರ್ಗ ಹಿಡಿಯುವಂತೆ, ಅವನ್ನು ಬಲಾತ್ಕರಿಸಿದವು.

ಇದರ ಮೇಲೆ ರೈತಾಪಿ ಜನರ ನಾಯಕತ್ವ ಕೈಗೊಳ್ಳಲು ಮತ್ತು ಅವರನ್ನು ಸಾಮಂತಶಾಹಿ ವಿರೋಧಿ ಅಲ್ಲ ಆದರೆ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟ ನಡೆಸುವಂತೆ ಪ್ರೇರಿಸಲು ಅವಶ್ಯವಾದ ರಾಜಕೀಯ ಪ್ರಭಾವವನ್ನೂ ಸಾಮೂಹಿಕ ರಾಜಕೀಯ ಸಂಘಟನೆಯನ್ನು ಹೊಂದಿರುವಂಥ ರಾಜಕೀಯ ನಾಯಕ ಯಾರಾಗಿರಬಲ್ಲುದಿತ್ತು?

ಅವರೇ ಗಾಂಧೀಯವರಾಗಿದ್ದರು. ರೈತಾಪಿ ಜನರಿಗೆ ಇವರಿಗಿಂತ ಹೆಚ್ಚು ಸವಿವರವಿದ್ದ, 500,000 ಭಾರತೀಯ ಹಳ್ಳಿಗಳ ಜೀವನವನ್ನು ಇವರಿಗಿಂತ ಹೆಚ್ಚು ಚೆನ್ನಾಗಿ ತಿಳಿದಿದ್ದ ಬೇರಾವ ನಾಯಕನೂ ಇರಲಿಲ್ಲ. ರೈತರು ಅವರನ್ನು ಮಹಾತ್ಮ ಎಂದು ಕರೆದರು. ಆದರೆ ರೈತಾಪಿ ಜನರ ಹೆಚ್ಚು ಪಕ್ವಗೊಳ್ಳುತ್ತಿದ್ದ ಸಾಮಾಜಿಕ ಪ್ರತಿಭಟನೆ ಹಾಗೂ ಸಾಮಾಜಿಕ ಆಸೆ ಆಕಾಂಕ್ಷೆಗಳು ಇವೆರಡನ್ನೂ ಮತ್ತು ಲೆನಿನ್ ಕರೆದಂತೆ ಕುಲಪತಿ ಆಡಳಿತ ಪದ್ಧತಿಯೇ ಪ್ರಧಾನವಾಗಿದ್ದ ಗ್ರಾಮಾಂತರದ ಸತ್ವಹೀನತೆಯನ್ನೂ ತಮ್ಮದೇ ರೀತಿಯಲ್ಲಿ ವ್ಯಕ್ತಪಡಿಸುವಾಗಲೇ ಗಾಂಧೀಯವರು ವರ್ಗ ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಬೂರ್ಜ್ವಾ ಆಗಿದ್ದ ವಿಮೋಚನಾ ಚಳವಳಿಯ ನಾಯಕರಾಗಿಯೇ ಉಳಿದಿದ್ದರು. ಗಾಂಧೀಯವರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೂ ರೈತಾಪಿ ಜನರ ಜಾಗೃತಿಯನ್ನು ಅವರ ಕ್ರಾಂತಿಕಾರಿ ಅಂತಶ್ಶಕ್ತಿಯನ್ನೂ ಯಾವ ರೀತಿಯಲ್ಲಿ ಬಳಸಿಕೊಂಡರೆಂದರೆ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಗಳಿಸಿದನಂತರ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವು ಕೃಷಿಸಂಬಂಧಿ ಸಾಮಾಜಿಕ ಕ್ರಾಂತಿಯಾಗಿ ವಿಕಾಸಗೊಳ್ಳಲು ಅವಕಾಶವಾಗದಂತೆ, ನಿರ್ದೇಶಿಸಲು ಸಮರ್ಥರಾದರು.

ಅದಾಗ್ಯೂ ಈ ದೇಶದ ಜನಸಂಖ್ಯೆಯಲ್ಲಿ ಸುಮಾರು ಶೇ. 80ರಷ್ಟು ಜನರು ಗ್ರಾಮಾಂತರ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು. ಬೂರ್ಜ್ವಾಸೀಯು ತಾನು ಅಧಿಕಾರಕ್ಕೆ ಬಂದಾಗಲಷ್ಟೇ, ತನ್ನದೇ ಆದ ರೀತಿಯಲ್ಲಿ ಮಾರ್ಪಾಟುಗಳನ್ನು ಮಾಡಲು ಸಾಧ್ಯವಾದಾಗಲಷ್ಟೇ, ಭಾರತೀಯ ಸಾಮಾಜಿಕ ಪದ್ಧತಿಯಲ್ಲಿ ಬದಲಾವಣೆಯನ್ನು ಉಂಟುಮಾಡ ಬಯಸಿದ್ದಿತು. ಅದು ರೈತರ ಅಥವಾ ಸಾಮಾನ್ಯ ಜನರ ರೀತಿಯಲ್ಲಿ ಬದಲಾವಣೆಯನ್ನು ಮಾಡ ಬಯಸಿರಲಿಲ್ಲ. ಅದು ಈ ಬದಲಾವಣೆಯನ್ನು ತನ್ನ ಸ್ವಂತ ಹಿತಗಳಿಗೆ ಅನುಗುಣವಾಗಿ ಮಾಡ ಬಯಸಿದ್ದಿತೇ ಹೊರತು ಬಹುಪಾಲು ರೈತರ ಹಿತಗಳಿಗೆ ಅನುಗುಣವಾಗಲ್ಲ. ಆಗಲಷ್ಟೆ ಅದು ಹಳ್ಳಿಯನ್ನು ತನಗೆ ಹೊಂದಿಕೆಯಾಗುವಂತೆ ಕ್ರಮೇಣ ಪುನರ್‌ನಿರ್ಮಿಸಲು ಸಾಧ್ಯವೆಂದು ಮನಗಂಡಿದ್ದಿತು. ಭೂಮಾಲೀಕರನ್ನು ಬೂರ್ಜ್ವಾಗೊಳಿಸುವ ಮೂಲಕ, ದುಡಿಯುವ ಬಹುಪಾಲು ರೈತರ ಪೈಕಿ ಅದರ ಉದ್ಯಮಶೀಲ ಮೇಲುಸ್ತರದವರನ್ನು

ಶೀಘ್ರವಾಗಿ ಅಭಿವೃದ್ಧಿಗೊಳಿಸುವ ಮೂಲಕ ರಾಷ್ಟ್ರೀಯ ಬೂರ್ಜ್ವಾಸೀಯು ಇದನ್ನು ಸಾಧಿಸಲು ಬಯಸಿದ್ದಿತು. ಸ್ವಾತಂತ್ರ್ಯಾನಂತರ ಅದು ಹೇಗೆ ಮತ್ತು ಎಷ್ಟರಮಟ್ಟಿಗೆ ಇದರಲ್ಲಿ ಯಶಸ್ವಿಯಾಯಿತು ಅನ್ನುವುದು ಬೇರೊಂದು ವಿಷಯ. ಅದರ ಬಗೆಗೆ ಆಗಲೇ ಬೇಕಾದಷ್ಟು ಬರೆಯಲಾಗಿದೆ. ಭಾರತೀಯ ಕೃಷಿಯಲ್ಲಿ ಬಂಡವಾಳವಾದವು ಗಣನೀಯವಾಗಿ ವಿಕಾಸಗೊಂಡಿದ್ದರೂ ಬೂರ್ಜ್ವಾ ಸುಧಾರಣೆಯು ಕೃಷಿಸಂಬಂಧಿ ಪ್ರಶ್ನೆಯನ್ನು ಇನ್ನೂ ಸಂಪೂರ್ಣವಾಗಿ ಪರಿಹರಿಸಿಲ್ಲ ಎಂದಷ್ಟೆ ನಾವು ಹೇಳಬಹುದು. ಬಡ ರೈತನು – ಅವನು ತನ್ನ ಆಸ್ತಿಯ ಒಡೆಯನಾಗಿರಲಿ ಅಥವಾ ಗೇಣಿದಾರನಾಗಿರಲಿ, ಅಂತೂ ಈ ಬಡ ರೈತನೇ – ಇನ್ನೂ ಭಾರತೀಯ ಗ್ರಾಮಾಂತರದ ಪ್ರಧಾನ ವ್ಯಕ್ತಿಯಾಗಿದ್ದಾನೆ. ಆದರೆ ಕೃಷಿ ಶ್ರಮಜೀವಿ ವರ್ಗವೂ ಗಣನೀಯವಾಗಿ ಬೆಳೆದಿದೆ ಮತ್ತು ಗ್ರಾಮಜೀವನದ ಲಕ್ಷಣವನ್ನು ಬದಲಿಸಿದೆ.

ಯಾವುದೇ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲೂ ಎರಡು ಪ್ರವೃತ್ತಿಗಳಿರುತ್ತವೆ – ಒಂದು, ಕ್ರಾಂತಿಕಾರಿ-ಪ್ರಜಾಸತ್ತಾತ್ಮಕ ಪ್ರವೃತ್ತಿ, ಇನ್ನೊಂದು ಬೂರ್ಜ್ವಾ-ರಾಷ್ಟ್ರೀಯತಾವಾದಿ ಹಾಗೂ ಸುಧಾರಣಾವಾದಿ ಪ್ರವೃತ್ತಿ; ರಾಷ್ಟ್ರೀಯ ಬೂರ್ಜ್ವಾಸೀಯೇ ಇಬ್ಬಗೆಯ ರಾಜಕೀಯ ಪಾತ್ರ ನಿರ್ವಹಿಸುತ್ತದೆ, ಎಂಬ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪ್ರಮೇಯಕ್ಕೆ ಭಾರತದ ನಿದರ್ಶನ ಒಂದು ಸಮರ್ಥನೆಯಾಗಿದೆ. ಎರಡು ಪ್ರವೃತ್ತಿಗಳೂ ವಿದೇಶೀ ಆಡಳಿತವನ್ನು ತೊಲಗಿಸುವುದನ್ನೇ ತಮ್ಮ ಗುರಿಯನ್ನಾಗಿ ಹೊಂದಿರುತ್ತವೆ. ಈ ಅರ್ಥದಲ್ಲಿ ಅವೆರಡರ ಹಿತಗಳು ಸಾಮಾನ್ಯವಾಗಿರುತ್ತವೆ ಮತ್ತು ಅವೆರಡರ ನಡುವೆಯೂ ಒಂದು ಸಹಜ ಒಕ್ಕೂಟವಿರುತ್ತದೆ. ರಾಷ್ಟ್ರೀಯ-ವಿಮೋಚನಾ ಹೋರಾಟದಲ್ಲಿ ಭಾಗವಹಿಸುತ್ತಿರುವ ಎಲ್ಲ ಶಕ್ತಿಗಳ ಒಂದು ಸಾಮ್ರಾಜ್ಯಶಾಹಿ ವಿರೋಧಿ ಐಕ್ಯರಂಗವು ಯಾವತ್ತೂ ರಾಷ್ಟ್ರೀಯ ಸ್ವಾತಂತ್ರ್ಯದ ಸಾಧನೆಗೆ ಹಾಗೂ ದೃಢೀಕರಣಕ್ಕೆ ಒಂದು ಮುಖ್ಯ ಪೂರ್ವಾಧಾರವಾಗಿದ್ದುಕೊಂಡು ಬಂದಿದೆ. ಆದರೆ ಈ ರಾಷ್ಟ್ರೀಯ-ವಿಮೋಚನಾ ಹೋರಾಟದ ಅವಧಿಯಲ್ಲಿ ಕ್ರಾಂತಿಕಾರಿ-ಪ್ರಜಾಸತ್ತಾತ್ಮಕ ಪ್ರವೃತ್ತಿಯು ಕೃಷಿಸಂಬಂಧಿ ಕ್ರಾಂತಿಯನ್ನು ಸಾಧಿಸುವ ಮತ್ತು ಅನಂತರ ಜನರ ಒಳಿತಿಗಾಗಿ ಇತರ ಸಾಮಾಜಿಕ ಬದಲಾವಣೆಗಳನ್ನು ಉಂಟುಮಾಡುವ ಗುರಿ ಇಟ್ಟುಕೊಂಡಿದ್ದಲ್ಲಿ ಬೂರ್ಜ್ವಾ-ರಾಷ್ಟ್ರೀಯತಾವಾದಿ ಸುಧಾರಣಾವಾದಿ ಪ್ರವೃತ್ತಿಯು ಮೇಲಿನ ಕ್ರಮಗಳನ್ನು ಜಾರಿಗೆ ತರುವುದನ್ನು ಮುಂದೆ ಹಾಕುತ್ತದೆ, ಅಧಿಕಾರದ ಪ್ರಶ್ನೆಯನ್ನು ಕೃಷಿಸಂಬಂಧಿ ಮತ್ತಿತರ ಸಾಮಾಜಿಕ ಸಮಸ್ಯೆಗಳಿಂದ ಪ್ರತ್ಯೇಕಿಸಲು ಯತ್ನಿಸುತ್ತದೆ.

ಬ್ರಿಟಿಷ್ ರಾಷ್ಟ್ರೀಯ ಆಡಳಿತವನ್ನು ತೊಲಗಿಸಿ ತಾನೇ ಶಾಂತಿಯುತ ಸಾಧನಗಳ ಮೂಲಕ ಅಧಿಕಾರಕ್ಕೆ ಬರುವುದು ಭಾರತೀಯ ಬೂರ್ಜ್ವಾಸೀಯು

ಮೇಲಿನ ವರ್ಗ ಹಾಗೂ ರಾಜಕೀಯ ಹಿತಾಸಕ್ತಿಯಾಗಿದ್ದಿತು. ಗಾಂಧೀವಾದವು ಅವರ ಈ ಮೇಲಿನ ಹಿತಾಸಕ್ತಿಗೆ ಅನುಗುಣವಾಗಿರದೆ ಇದ್ದಲ್ಲಿ ಅದು ಗಾಂಧೀವಾದದ ವಿಚಾರಧಾರೆಯನ್ನು ಅಂಗೀಕರಿಸುತ್ತಿರಲಿಲ್ಲ. ಅದು ಗಾಂಧೀಯವರ ನಾಯಕತ್ವದಲ್ಲಿದ್ದ ಸಾಮೂಹಿಕ ಚಳವಳಿಯ ಬೆಂಬಲ ಪಡೆದುಕೊಳ್ಳಲು ಹವಣಿಸಿತು, ಈ ಚಳವಳಿಯನ್ನು ಸಾರ್ವತ್ರಿಕ, ರಾಷ್ಟ್ರೀಯ ಮತ್ತು ಎಲ್ಲಕ್ಕೂ ಮಿಗಿಲಾಗಿ ತನ್ನ ಸ್ವಂತ ವರ್ಗ ಗುರಿಗಳ ಸಾಧನೆಗಾಗಿ ಬಳಸಿಕೊಳ್ಳಲು ಹವಣಿಸಿತು. ಗಾಂಧೀವಾದಕ್ಕೂ ರಾಷ್ಟ್ರೀಯ ಬೂರ್ಷ್ವಾಸೀಗೂ ಮಧ್ಯೆ ತುಂಬ ಸಾಮಾನ್ಯಾಂಶಗಳಿದ್ದವು – ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ವಸಾಹತುಶಾಹಿ ವಿರೋಧಿ ಹೋರಾಟವಷ್ಟೆ ಅಲ್ಲ, ಬೂರ್ಷ್ವಾ ಹಾಗೂ ಪೆಟಿ ಬೂರ್ಷ್ವಾ ವಿಚಾರಧಾರೆಗಳಿಗೆ ಸಹಜವಾದ ವರ್ಗ ಏಕತೆಯೂ ಇದ್ದಿತು. ಇದೇ ಅಂತಿಮ ವಿಶ್ಲೇಷಣೆಯಲ್ಲಿ, ಬಂಡವಾಳವಾದಿ ಮಾರ್ಗದಲ್ಲಿ ವಿಕಾಸಗೊಳ್ಳುತ್ತಿರುವ ದೇಶದಲ್ಲಿನ ಅಸಾಧ್ಯಾದರ್ಶವಾದಿ "ರೈತ ಸಮಾಜವಾದ"ದ ವಸ್ತುನಿಷ್ಠ ಬೂರ್ಷ್ವಾ ಲಕ್ಷಣವನ್ನು ನಿರ್ಧರಿಸುತ್ತದೆ.

ನಿಜ, ರೈತಾಪಿ ಜನರ ಧಾರ್ಮಿಕ ಭಾವನೆಗಳೊಂದಿಗೆ ದೃಢವಾಗಿ ಸಂಬಂಧಿತವಾಗಿದ್ದ ಗಾಂಧೀಯವರ ಅಹಿಂಸಾ ಧ್ಯೇಯವು ಸಾಮೂಹಿಕ ವಿಮೋಚನಾ ಹೋರಾಟ ಬೆಳೆಯುವುದಕ್ಕೆ ಉತ್ತೇಜನ ನೀಡಿತು ಮತ್ತು ರೈತಾಪಿ ಜನರನ್ನೂ ನಗರದ ಪೆಟಿ ಬೂರ್ಷ್ವಾಸೀಯನ್ನೂ ರಾಷ್ಟ್ರೀಯ ಬೂರ್ಷ್ವಾಸೀಯ ಪಕ್ಷಕ್ಕೆ ಸೆಳೆಯಲು ನೆರವಾಯಿತು. ರಾಷ್ಟ್ರೀಯ ಬೂರ್ಷ್ವಾಸೀಯು ಗಾಂಧೀಯವರ ಅಹಿಂಸಾ ಸೂತ್ರದಲ್ಲಿ ವಸಾಹತುವಾದಿಗಳ ವಿರುದ್ಧ ಭಾರಿ ಜನಸಮೂಹಗಳನ್ನು ಬಳಸಲು, ಭಾರತವನ್ನು ಬಿಟ್ಟು ಹೋಗುವಂತೆ ವಸಾಹತುವಾದಿಗಳನ್ನು ಬಲಾತ್ಕರಿಸಲು, ಅದೇ ಹೊತ್ತಿನಲ್ಲಿ ಜನರ ಮೇಲೆ ತನ್ನ ವರ್ಗ ನಿಯಂತ್ರಣವನ್ನು ಇರಿಸಿಕೊಂಡಿರಲು, ಒಂದು ಸಾಧನವನ್ನು ಕಂಡುಕೊಂಡಿತು. ಮಹಾ ಚಿಂತಕರಾಗಿ ಹಾಗೂ ರಾಜಕಾರಣಿಯಾಗಿ ಗಾಂಧೀಯವರ ವಿಚಾರಧಾರೆಯ ಹಾಗೂ ಕಾರ್ಯಚಟುವಟಿಕೆಗಳ ಪೆಟಿ ಬೂರ್ಷ್ವಾ ಲಕ್ಷಣಗಳು, ಅವರು ಬೂರ್ಷ್ವಾ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಂದಿಗೆ ರಾಜಕೀಯವಾಗಿ ಐಕ್ಯಗೊಂಡಿದ್ದುದರಿಂದಾಗಿಯೂ ದೀರ್ಘ ಕಾಲದವರೆಗೆ ಅವರು ಅದರ ಅಂಗೀಕೃತ ನಾಯಕರಾಗಿದ್ದುದರಿಂದಾಗಿಯೂ, ತುಂಬ ಮಟ್ಟಿಗೆ ಅಸ್ಪಷ್ಟವಾಗಿದ್ದವು ಅನ್ನುವುದನ್ನೂ ಮರೆಯಲಾಗದು.

ಭಾರತೀಯ ಗ್ರಾಮದಲ್ಲಿ ಬೇರು ಬಿಟ್ಟ ಅಸಾಧ್ಯಾದರ್ಶವಾದಿ ಚಿಂತನ ಲಕ್ಷಣವು ಸಹಜವಾಗಿಯೇ ರಾಷ್ಟ್ರೀಯ ಆಕಾಂಕ್ಷೆಗಳನ್ನು ಹೊಂದಿದ್ದ ರಾಷ್ಟ್ರೀಯ ಬೂರ್ಷ್ವಾಸೀಯ ಹಿತವೃತ್ತಿಯಿಂದ ವಸ್ತುನಿಷ್ಠವಾಗಿ ವರ್ತಿಸುವ ಸಮಾಧಾನ ಚಿತ್ತದ ಮನೋವೃತ್ತಿಯ ರಾಜಕಾರಣದ ಲಕ್ಷಣದೊಂದಿಗೆ ಜೊತೆಗೂಡಿದ್ದು

ದರ ಫಲವಾಗಿ ಗಾಂಧೀಯವರ ವಿಚಾರಧಾರೆಯ ರೈತ ಸ್ವರೂಪವು ಸಂಪೂರ್ಣವಾಗಿ ತೋರ್ಪಡಿಸಿಕೊಳ್ಳದಾಗಿದ್ದಿತು. ಈ ಎರಡು ಲಕ್ಷಣಗಳ ಜೊತೆಗೂಡಿಕೆಯಿಂದಾಗಿಯೇ ಗಾಂಧೀಯವರು ಬಹುವೇಳೆ ರಾಜಿಗಳನ್ನು ಮಾಡಿಕೊಳ್ಳುತ್ತಿದ್ದುದು. ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ನಾನಾ ವರ್ಗಗಳಿಗೆ ಹಾಗೂ ಸಾಮಾಜಿಕ ಸ್ತರಗಳಿಗೆ ವಿಶಿಷ್ಟವಾಗಿದ್ದ ವೈರುಧ್ಯಗಳನ್ನು ಇಂತಹ ರಾಜಿಗಳ ಹಿಂದೆ ಕಾಣಬಹುದಿದ್ದಿತು. ಈ ಕಾರಣದಿಂದಾಗಿ ಗಾಂಧೀವಾದವನ್ನು ಭಾರತೀಯ ವಿಮೋಚನಾ ಚಳವಳಿಯಲ್ಲಿ ರಾಷ್ಟ್ರೀಯ ಬೂರ್ಷ್ವಾಸೀಯ ಹಿತಗಳ ವಸ್ತುನಿಷ್ಠ ಅಭಿವ್ಯಕ್ತಿಯನ್ನಾಗಷ್ಟೆ ಕಾಣುವುದು ತಪ್ಪಾಗುತ್ತದೆ. ಅದು ಇದಕ್ಕಿಂತಲೂ ಹೆಚ್ಚು ವಿಶಾಲವಾದುದಾಗಿದೆ ಮತ್ತು ಅನೇಕ ಅಂಶಗಳನ್ನು ಒಳಗೊಂಡಿದೆ. ಈ ಅಂಶಗಳು ಅಂತಹ ಅರ್ಥವ್ಯಾಖ್ಯಾನವನ್ನು ಅಲ್ಲಗಳೆಯುತ್ತವೆ. ಗಾಂಧೀವಾದವು ಭಾರತೀಯ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿನ ನಾನಾ ಸಾಮಾಜಿಕ ವಿದ್ಯಮಾನಗಳ ಹಾಗೂ ಶಕ್ತಿಗಳ ಸಂಕೀರ್ಣ ಕ್ರಿಯೆ-ಅಂತರಕ್ರಿಯೆಗಳಲ್ಲಿ ತನ್ನ ಬೇರುಗಳನ್ನು ಹೊಂದಿದೆ. ಅದು ಆ ಶಕ್ತಿಗಳ ಸಾಮಾನ್ಯ ಹಿತಗಳು ಮತ್ತು ಅವುಗಳ ನಡುವಿನ ವ್ಯತ್ಯಾಸಗಳು, ವೈರುಧ್ಯಗಳು ಇವೆರಡನ್ನೂ ಪ್ರತಿಬಿಂಬಿಸುತ್ತದೆ. ಗಾಂಧೀವಾದವು ಕೃಷಿಪ್ರಧಾನವಾದ ದೇಶದಲ್ಲಿ ಅಸ್ತಿತ್ವಕ್ಕೆ ಬಂದಿತು, ಆದ್ದರಿಂದ, ಅದು ಸಾಮಾಜಿಕ ನ್ಯಾಯಕ್ಕಾಗಿ ಭಾರತೀಯ ದುಡಿಯುವ ಜನರು ಹೊಂದಿದ್ದ ಸಹಜ ಆಸೆಆಕಾಂಕ್ಷೆಗಳನ್ನು – ಬೂರ್ಷ್ವಾಸೀಯ ವರ್ಗ ಹಿತಗಳಿಗೂ ಆಚೆ ಹೋಗುತ್ತಿದ್ದಂಥ ಆಸೆಆಕಾಂಕ್ಷೆಗಳನ್ನು – ಸುಸ್ಪಷ್ಟವಾದ ರೀತಿಯಲ್ಲಿ ವ್ಯಕ್ತಪಡಿಸದೆ ಇರದಾಗಿದ್ದಿತು, ಎಂಬ ಅಂಶವನ್ನು ನಾವು ಮತ್ತೊಮ್ಮೆ ಒತ್ತಿ ಹೇಳಬೇಕು.

ಗಾಂಧೀವಾದದ ಈ ಲಕ್ಷಣವನ್ನು ಗಣನೆಗೆ ತಂದುಕೊಂಡರಷ್ಟೆ ಗಾಂಧೀಯವರ ಚಾರಿತ್ರಿಕ ಪಾತ್ರವನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯ. ಅವರು ಭಾರತೀಯ ಜನರೊಂದಿಗೆ ಹೊಂದಿದ್ದ ಗಾಢ ಸಂಬಂಧ ಅವರ ಚಾರಿತ್ರಿಕ ಪಾತ್ರಕ್ಕೆ ಪೂರ್ವವಿಧಿಯಾಗಿದ್ದಿತು. ಅವರು ಜನರೊಂದಿಗೆ ಹೊಂದಿದ್ದ ಈ ಸಂಬಂಧವೇ ಜನರ ಮೇಲೆ ಅವರು ಹೊಂದಿದ್ದ ಪ್ರಭಾವದ ರಹಸ್ಯವಾಗಿದ್ದಿತು. ಸೈದ್ಧಾಂತಿಕವಾಗಿಯೂ ರಾಜಕೀಯವಾಗಿಯೂ ಬೂರ್ಷ್ವಾಸೀಯೊಂದಿಗೆ ನಿಕಟವಾಗಿ ಸಹಕರಿಸುವಾಗಲೇ ಗಾಂಧೀಯವರು ಯಾವತ್ತೂ ಸಾಮಾನ್ಯ ಜನರೊಂದಿಗೆ ಸಂಬಂಧ ಇರಿಸಿಕೊಂಡೇ ಇರಲು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಅಷ್ಟೇ ಅಲ್ಲ, ಈ ಸಂಬಂಧವೇ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಹೊಂದಿದ್ದ ಅಗ್ರಗಾಮಿ ಸ್ಥಾನವನ್ನೂ ವಿಶೇಷ ಪಾತ್ರವನ್ನೂ ನಿರ್ಧರಿಸಿದುದು. ಲೆನಿನ್‌ರ ಈ ಕೆಳಗಿನ ಮಾತುಗಳು ಗಾಂಧೀಯವರ ಪಾತ್ರದ ಬಗೆಗೂ ರಾಷ್ಟ್ರೀಯ ಬೂರ್ಷ್ವಾಸೀಯೊಂದಿಗೂ ರೈತಾಪಿ ಜನರೊಂದಿಗೂ ಹೊಂದಿದ್ದ ಸಂಬಂಧದ ಸ್ವರೂ

ಸೆನ್ ಬಗ್ಗೆ ಮತ್ತು ಹೀಗೆ ಹೇಳುತ್ತಾನೆ: "ಚಾರಿತ್ರಿಕವಾಗಿ ಪ್ರಗತಿಶೀಲವಾದಂಥ ಧ್ಯೇಯಕ್ಕೆ ಬೆಂಬಲ ನೀಡಲು ಇನ್ನೂ ಸಮರ್ಥವಾದಂಥ ಈ ಏಷ್ಯನ್ ಬೂರ್ಜ್ವಾಸಿಯ ಪ್ರಧಾನ ಪ್ರತಿನಿಧಿಯೆಂದರೆ, ಪ್ರಧಾನ ಸಾಮಾಜಿಕ ಬೆಂಬಲ ಪಡೆದ–ರೈತ."* ಗಾಂಧೀಯವರು ರಾಷ್ಟ್ರೀಯ ಬೂರ್ಜ್ವಾಸಿಗೂ ವಿಶಾಲ ರೈತಾಪಿ ಜನಸಮೂಹಗಳಿಗೂ ನಡುವೆ ಪ್ರಬಲ ಕೊಂಡಿಯಾಗಿದ್ದರು. ಅವರ ವಿಚಾರಧಾರೆಯೂ ಅದಕ್ಕೆ ಪೂರಕವಾಗಿದ್ದಿತು.

ದ್ವಿತೀಯ ಜಾಗತಿಕ ಯುದ್ಧಕ್ಕೆ ಮುನ್ನ ಪ್ರಕಟವಾದ ಸಂಶೋಧನ ಕೃತಿಗಳು ಕೆಲವು ವೇಳೆ ಸಾಮೂಹಿಕ ಹೋರಾಟದ ವೈವಿಧ್ಯಪೂರ್ಣ ರಾಷ್ಟ್ರೀಯ ಹಾಗೂ ಚಾರಿತ್ರಿಕ ರೂಪಗಳ ಅಜ್ಞಾನವನ್ನು ಪ್ರದರ್ಶಿಸಿದವು. ಆ ರೂಪಗಳ ನಡುವೆ ಇದ್ದ ಸಂಪರ್ಕಗಳನ್ನೂ ಅವು ತಿಳಿದಿರಲಿಲ್ಲ. ಅನೇಕ ಪ್ರಸಂಗಗಳಲ್ಲಿ ಅವು ಏಕೈಕ ಹೋರಾಟ ವಿಧಾನವನ್ನು ಘೋಷಿಸಿದವು ಮತ್ತು ಅದನ್ನೇ ನಿರಪೇಕ್ಷಗೊಳಿಸಿದವು. ಇದೇ ರೀತಿ ಇಂದು ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಪಂಥೀಯವಾದಿಗಳೂ ಶಾಸ್ತ್ರಾಂಧವಾದಿಗಳೂ ಸಾಮ್ರಾಜ್ಯವಾದ ವಸಾಹತುವಾದ ಹಾಗೂ ಕುಲವಾದಗಳ ವಿರುದ್ಧ ಸಶಸ್ತ್ರ ಹೋರಾಟ ವಿಧಾನವನ್ನು ನಿರಪೇಕ್ಷಗೊಳಿಸುತ್ತಿದ್ದಾರೆ. ಅಹಿಂಸಾತ್ಮಕ ಹೋರಾಟ ವಿಧಾನಗಳನ್ನು ತಿರಸ್ಕರಿಸುತ್ತಿದ್ದಾರೆ. ಜನಸಮೂಹಗಳ ಹೋರಾಟವನ್ನು ಮಾಲ್ಕೀಕರಿಸುವುದರಲ್ಲಿ ಮತ್ತು ತಾಂತ್ರಿಕ ವಿಧಾನಗಳನ್ನು ಬಳಸುವುದರಲ್ಲಿ ಏಕಪಕ್ಷೀಯ ಮನೋಧರ್ಮ ತಳೆಯುವುದು ಈ ಪ್ರಮುಖ ಪ್ರಶ್ನೆಯ ದ್ವಂದ್ವಾತ್ಮಕ ಸ್ವರೂಪವನ್ನು ಮರೆಯುವುದಕ್ಕೆ ದಾರಿ ಮಾಡಿಕೊಡುತ್ತದೆ.

ಗಾಂಧೀಯವರೂ ಸಾಮೂಹಿಕ ಹೋರಾಟದ ರೂಪಗಳಿಗೆ ಸಂಬಂಧಿಸಿ ಏಕಪಕ್ಷೀಯ ಮನೋಭಾವವನ್ನೇ ತಳೆದಿದ್ದರು. ಅವರು ವಸಾಹತುವಾದಿಗಳ ಹಾಗೂ ಕುಲವಾದಿಗಳ ವಿರುದ್ಧ ಅಹಿಂಸಾತ್ಮಕ ಪ್ರತಿರೋಧವನ್ನು ಹೋರಾಟದ ಏಕೈಕ ಹಾಗೂ ಸಾರ್ವತ್ರಿಕ ರೂಪವೆಂದು ಘೋಷಿಸಿದರು. ಭಾರತದ ರಾಷ್ಟ್ರೀಯ ವಿಮೋಚನಾ ಚಳವಳಿಯ ನಾನಾ ಘಟ್ಟಗಳಲ್ಲಿ ಗಾಂಧೀಯವರನ್ನು ವಿರೋಧಿಸಿದವರೂ ಅಷ್ಟೇ ಭಾವಾವೇಶದಿಂದ ಹಾಗೂ ಅಷ್ಟೇ ಏಕಪಕ್ಷೀಯವಾಗಿ ಅಹಿಂಸಾತ್ಮಕ ಹೋರಾಟದ ಧನಾತ್ಮಕ ಲಕ್ಷಣಗಳನ್ನು ನಿರಾಕರಿಸುವ ಮನೋಬಲವನ್ನು ತೋರಿದ್ದರು. ಅವರು ಬಹುವೇಳೆ ಅಹಿಂಸೆಯನ್ನು ನಿಷ್ಕ್ರಿಯೆಯನ್ನಾಗಿ ಪ್ರತಿಗಾಮಿಯೊಂದಿಗೂ ವಸಾಹತುವಾದದೊಂದಿಗೂ ರಾಜಿಗೆ ಸಮೀಪವಿರುವಂತೆ,

*ವಿ. ಐ. ಲೆನಿನ್, 'ಚೀನಾದಲ್ಲಿ ಪ್ರಜಾಪ್ರಭುತ್ವ ಹಾಗೂ ನರೋದಿಸಂ.' ಸಂಕಲಿತ ಕೃತಿಗಳು, ಸಂ. 18, ಪ್ರಗತಿ ಪ್ರಕಾಶನ, ಮಾಸ್ಕೋ, 1973, ಪು. 165 (ರಷ್ಯನ್‌ನಲ್ಲಿ).–ಸಂ.

ಕಂಡುಕೊಂಡರು. ಇಂತಹ ಟೀಕೆಗೆ ಗಾಂಧೀಯವರ ಸಾಮೂಹಿಕ ಅಹಿಂಸಾತ್ಮಕ ಪ್ರತಿರೋಧದ ದಾರ್ಶನಿಕ ನಂಬಿಕೆಯ ಸೂತ್ರತಃ ನಿರಾಕರಣೆ ಅಭಿಪ್ರಾಯವಾಗಿದ್ದಿತು. ಇದು ಅರ್ಥಗ್ರಾಹ್ಯವಾದುದಾಗಿತ್ತು, ಸರಿಯಾದುದಾಗಿತ್ತು. ಆದರೆ ಅವರ ವಿರೋಧಿಗಳು ಈ ಟೀಕೆಯನ್ನು ಯದ್ವಾತದ್ವಾ ಸಾಮ್ರಾಜ್ಯವಾದದ ವಿರುದ್ಧ ರಾಜಕೀಯ ಹೋರಾಟ ವಿಧಾನಕ್ಕೂ ಅನ್ವಯಿಸಿದರು. ಇದು ಸ್ಪಷ್ಟವಾಗಿಯೇ ತಪ್ಪಾಗಿದ್ದಿತು.

ವೈಜ್ಞಾನಿಕ ಸಮಾಜವಾದವು ಯಾವುದೇ ಒಂದು ಹೋರಾಟ ರೂಪವನ್ನು –ಅದು ಶಾಂತಿಯುತವಾಗಿರಲಿ ಇಲ್ಲವೇ ಹಿಂಸಾತ್ಮಕವಾಗಿರಲಿ, ಯಾವುದೇ ಒಂದು ರೂಪವನ್ನು –ನಿರಪೇಕ್ಷಗೊಳಿಸುವುದಿಲ್ಲ. ತದ್ವಿರುದ್ಧವಾಗಿ ಅದು ಹೋರಾಟದ ನಾನಾ ರೂಪಗಳ ಸಮಗ್ರ ಬಳಕೆಯನ್ನು ಅವುಗಳ ಸಂಯೋಜನೆಯನ್ನು, ಅವು ದ್ವಂದ್ವಾತ್ಮಕವಾಗಿ ಒಂದರೊಳಗೊಂದು ಭೇದಿಸಿಕೊಂಡು ಹೋಗುವುದನ್ನು, ಅವಶ್ಯವೆಂದು ಮನ್ನಿಸುತ್ತದೆ; ಕ್ರಾಂತಿಕಾರಿ ವಿಧಾನಗಳ ಆಯುಧಾಗಾರವನ್ನು ಸತತವಾಗಿ ಪುನರ್‌ನವೀಕರಿಸುವುದು ಸಿರಿವಂತಗೊಳಿಸುವುದು, ಹೊಸ ಪರಿಣಾಮಕಾರೀ ಹೋರಾಟ ರೂಪಗಳನ್ನು ಪರೀಕ್ಷೆ ಮಾಡುವುದು, ತನಿಖೆ ಮಾಡುವುದು ಹಾಗೂ ಆಯ್ಕೆ ಮಾಡಿಕೊಳ್ಳುವುದು, ಅಗತ್ಯವೆಂದು ಮನ್ನಿಸುತ್ತದೆ. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಕ್ರಾಂತಿಕಾರಿ ತಂತ್ರಗಳು ಯಾವುದೇ ಒಂದು ಸಾಮೂಹಿಕ ಹೋರಾಟ ರೂಪಕ್ಕೆ, ಅದು ಪರಿಣಾಮಕಾರಿಯಾಗಿದ್ದರೂ ಅದೊಂದಕ್ಕೇ, ಬಂಧಿತವಾಗಿರುವುದಿಲ್ಲ. ಬದಲು ಅವು ಆಯ್ದುಕೊಂಡ ಹೋರಾಟ ರೂಪ ವಿಧಾನಗಳಿಗೂ ಹೋರಾಟದ ಸ್ವರೂಪ ಘಟ್ಟ ಹಾಗೂ ಗುರಿಗಳಿಗೂ ನಡುವೆ ಅನುಗುಣತೆಯನ್ನು ಇರಿಸಿಕೊಂಡು ಬರಲು ಯತ್ನಿಸುತ್ತವೆ. ಕೊನೆಯದಾಗಿ ಪ್ರಗತಿಶೀಲ ರಾಜಕೀಯ ಪಾರ್ಟಿಯು ಸ್ಪಷ್ಟ ಚಾರಿತ್ರಿಕ ಪರಿಸ್ಥಿತಿಗಳಿಗೆ ತಕ್ಕಂತೆ ಬೇಗ ಹಾಗೂ ನಿರ್ಧಾರಕವಾಗಿ ಹೋರಾಟದ ರೂಪ ವಿಧಾನಗಳನ್ನು ಬದಲಿಸಲು ಸಿದ್ಧವಿರಬೇಕೆಂದು, ಅಂತಹ ಸಾಮರ್ಥ್ಯ ಹೊಂದಿರಬೇಕೆಂದು, ಅವು ಆಗ್ರಹಿಸುತ್ತವೆ.

ವೈಜ್ಞಾನಿಕ ಸಮಾಜವಾದದ ಮೇಲೆ ಆಧರಿಸಿಕೊಂಡು ಕಮ್ಯೂನಿಸ್ಟರು ಯಾವತ್ತೂ ಲಭ್ಯವಿರುವ ವಿವಿಧ ಹೋರಾಟ ವಿಧಾನಗಳನ್ನು, ಅಹಿಂಸಾತ್ಮಕ ವಿಧಾನಗಳನ್ನೂ ಒಳಗೊಂಡು ಎಲ್ಲ, ಬಳಸಿಕೊಂಡಿದ್ದಾರೆ. ಆದರೆ ಮಾರ್ಕ್ಸ್‌ವಾದಿಗಳು ಖಂಡಿತವಾಗಿಯೂ ಗಾಂಧೀಯವರ ಅಹಿಂಸಾತ್ಮಕ ಸೂತ್ರದ ಬಗೆಗೆ, ಅದನ್ನು ನಿರಪೇಕ್ಷಗೊಳಿಸುವಲ್ಲಿ, ನಕಾರಾತ್ಮಕ ಮನೋಧರ್ಮ ಹೊಂದಿದ್ದಾರೆ. ವಸಾಹತುವಾದಿಗಳಿಗೂ ಕುಲವಾದಿಗಳಿಗೂ ಸಂಬಂಧಿಸಿ ಗಾಂಧೀಯವರ ಅಹಿಂಸಾತ್ಮಕ ಸೂತ್ರವು ತುಂಬ ವೈರುಧ್ಯದಿಂದ ಕೂಡಿದೆ. ಅದು ಕ್ರಿಯಾತ್ಮಕ ಪ್ರತಿಭಟನೆಯನ್ನೂ ಶತ್ರುವಿನ ಬಗೆಗೆ ಸಹನೆಯನ್ನೂ ಜೊತೆಗೂಡಿಸುತ್ತದೆ. ಇದನ್ನು ಕಾಣದೆ ಹೋಗುವುದು ಸಾಧ್ಯವಿಲ್ಲ. ಹೀಗೆ ಜೊತೆಗೂಡಿಸುವುದರಲ್ಲೇ ಗಾಂಧೀ

ಮಾನವ ಅಹಿಂಸೆಯನ್ನು ವಸಾಹತುವಾದಿ-ಕುಲವಾದಿ ಮರ್ದನದ ವಿರುದ್ಧ ಸಾಧ್ಯವಿರುವ ಏಕೈಕ ಅಂಗೀಕಾರಾರ್ಹ ಪ್ರತಿಭಟನಾ ರೂಪವನ್ನಾಗಿ ಕಂಡುಕೊಂಡರು. ಗಾಂಧೀಯವರ ಅಹಿಂಸಾತ್ಮಕ ಸೂತ್ರದಲ್ಲಿ ಶುದ್ಧ ಅಸಾಧ್ಯಾದರ್ಶದ ಮುಗ್ಧ ಲೋಕವೂ ಇದೆ. ಅದು ಧಾರ್ಮಿಕ ಶಾಸ್ತ್ರಾಂಧತೆಯೊಂದಿಗೆ, ಜೀವನದ ಬಗೆಗೆ ವೈರಾಗ್ಯ ಮನೋಭಾವದೊಂದಿಗೆ, ಸಂಬಂಧಿಸಿದುದಾಗಿದೆ. ಆದರೆ ಸಾಮ್ರಾಜ್ಯಶಾಹಿಗಳ ಹಾಗೂ ಕುಲವಾದಿಗಳ ವಿರುದ್ಧ ಹೋರಾಟದಲ್ಲಿ, ಸೂತ್ರತಃ ಸಾಮಂತಶಾಹಿಗಳ ಹಾಗೂ ಬಂಡವಾಳಗಾರರ ವಿರುದ್ಧ ಹೋರಾಟದಲ್ಲೂ, ಶಾಂತಿಮುಖವಾದ ಸಾಮೂಹಿಕ ಹಾಗೂ ವೈಯಕ್ತಿಕ ಹೋರಾಟ ರೂಪಗಳನ್ನು ತಾಂತ್ರಿಕವಾಗಿ ಬಳಸಿಕೊಳ್ಳುವ ಸಂಪೂರ್ಣವಾಗಿ ವಾಸ್ತವಿಕವಾದ ವಿಚಾರವೂ ಅಡಗಿದೆ ಎಂಬುದರಲ್ಲಿ ಸಂದೇಹವಿಲ್ಲ. ಆದರೂ ಗಾಂಧೀಯವರೇ ಎಂದೂ ಅಂತಹುದಕ್ಕೆ ಕರೆ ನೀಡಿರಲಿಲ್ಲವೆನ್ನಿ.

ಭಾರತದಲ್ಲಿ ಬ್ರಿಟಿಷ್ ವಸಾಹತು ಆಡಳಿತದ ವಿರುದ್ಧ ಹಾಗೂ ದಕ್ಷಿಣ ಆಫ್ರಿಕದಲ್ಲಿ ಕುಲವಾದದ ವಿರುದ್ಧ ಹೋರಾಟದ ವರ್ಷಗಳಲ್ಲಿ ಗಾಂಧೀಯವರು ನೀಡಿದ ವಿಶಿಷ್ಟ ವ್ಯಾಖ್ಯಾನದಂತೆ ಅವರ ಅಹಿಂಸಾತ್ಮಕ ವಿಚಾರವು ಗಣನೀಯ ಪ್ರಮಾಣದ ಕ್ರಾಂತಿಕಾರಿ ಅಂತಃಶಕ್ತಿ ಹೊಂದಿದ್ದಿತೆಂಬುದು ಸುಸ್ಪಷ್ಟ. ಗಾಂಧೀಯವರು ನಿಸ್ಸಂದೇಹವಾಗಿಯೂ ವಸಾಹತುವಾದಿಗಳ ವಿರುದ್ಧ ತಮ್ಮ ವಿಶಿಷ್ಟ ಶಾಂತಿಯುತ ಹೋರಾಟದ ವಿಧಾನ ರೂಪಗಳನ್ನು ನಿರೂಪಿಸಲು ಮತ್ತು ಆಚರಣೆಗೆ ತರಲು ತುಂಬ ಯತ್ನಿಸಿದರು. ಅವರು ಅಹಿಂಸೆಯನ್ನು ಕೇವಲ ವ್ಯಕ್ತಿಗತ ಚರ್ಯೆಗಳ ವಲಯದಿಂದ ಮೇಲೇರಿಸಿ ಅದನ್ನು ಸುದೀರ್ಘವಾದ ಉದ್ದೇಶಪೂರಿತವಾದ ಸಾಮೂಹಿಕ ಹೋರಾಟ ಸಾಧನವನ್ನಾಗಿ ಮಾಡಿದರು. ಅದನ್ನು ಜನರ ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ಸಾಮಾಜಿಕ ಕೇಳಿಕೆಗಳೊಂದಿಗೆ ಸಂಬಂಧಿಸಿದರು. ವಸಾಹತುವಾದಿಗಳು ಬಲವಂತದಿಂದ ಜಾರಿಗೆ ತಂದಿದ್ದ ವ್ಯವಸ್ಥೆಯ ಹಾಗೂ ಶಾಸನಗಳ ವಿರುದ್ಧ, ಅವರು ಮರ್ದಿತ ಜನರ ಮೇಲೆ ಹೇರಿದ್ದ ಸಂವಿಧಾನದ ವಿರುದ್ಧ, ವಿದೇಶೀ ಆಡಳಿತಗಾರರ ನಿರಂಕುಶ ಪ್ರಭುತ್ವ ಹಾಗೂ ದಬ್ಬಾಳಿಕೆಯ ವಿರುದ್ಧ, ಇಡೀ ಜನರ ಸಾಮೂಹಿಕ ಅಹಿಂಸಾತ್ಮಕ ಕ್ರಿಯೆಯ ವಿಧಾನಗಳನ್ನು ಅವರು ವಿಕಸಗೊಳಿಸಿದರು. ಇಪ್ಪತ್ತರ, ಮೂವತ್ತರ ಹಾಗೂ ನಲವತ್ತರ ವರ್ಷಗಳಲ್ಲಿ ಗಾಂಧೀಯವರ ನಾಯಕತ್ವದಲ್ಲಿ ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧ ನಡೆದ ಸಾಮೂಹಿಕ ಅಹಿಂಸಾತ್ಮಕ ಚಳವಳಿಗಳಲ್ಲಿ ಭಾಗವಹಿಸಿದವರು ತೋರಿದ ಭಾರಿ ಧೈರ್ಯವಂತೂ ವಸಾಹತುವಾದಿಗಳನ್ನು ತುಂಬ ಪೇಚಿನಲ್ಲಿ ಸಿಕ್ಕಿ ಬೀಳಿಸಿತು. ಈ ಚಳವಳಿಗಳು ಭಾರತದಲ್ಲಿ ಪರಿಸ್ಥಿತಿಯನ್ನು ಬಹು ಬೇಗನೆಯೇ ಕ್ರಾಂತಿಕಾರಿಗೊಳಿಸಿದವು.

ಗಾಂಧೀಯವರು ಸಾಮೂಹಿಕ ಅಹಿಂಸಾತ್ಮಕ ಚಳವಳಿಯ ಅತ್ಯಂತ ಯಶಸ್ವೀ

ನಾಯಕರಾಗಿದ್ದರೆಂದು ಹೇಳಲೇ ಬೇಕು. ಚಳವಳಿಯನ್ನು ಯಾವಾಗ ಪ್ರಾರಂಭಿಸಬೇಕು, ಯಾವಾಗ ಅದು ದೇಶದಾದ್ಯಂತ ಹತ್ತಾರು ಮಿಲಿಯ ಸಾಮಾನ್ಯ ಜನರ ನಿಜವಾದ ಬೆಂಬಲ ಪಡೆಯುವುದು ಎನ್ನುವುದನ್ನು ಅವರು ಬಹಳ ಚೆನ್ನಾಗಿ ತಿಳಿದಿದ್ದರು. ವಿಮೋಚನಾ ಚಳವಳಿಯ ವಿಶಿಷ್ಟ ಭಾರತೀಯ ರೂಪಗಳನ್ನು ಸಂಘಟಿಸಿದ ಶ್ರೇಷ್ಠ ನಾಯಕರಾಗಿ ಗಾಂಧೀಯವರ ಗುಣಗಳನ್ನು ಗಮನಿಸುವಾಗಲೇ, ಸಾಮೂಹಿಕ ಅಹಿಂಸಾತ್ಮಕ ಚಳವಳಿ ಸಾಮೂಹಿಕ ಕ್ರಾಂತಿಕಾರಿ ಹಿಂಸಾಚರಣೆಯಾಗಿ ಹಾಗೂ ಕೊನೆಗೆ ಆಳುವ ವರ್ಗಗಳ ವಿರುದ್ಧವೂ ವಿದೇಶೀ ಆಕ್ರಮಣಕಾರರ ವಿರುದ್ಧವೂ ಸಾಮಾಜಿಕ ಕ್ರಾಂತಿಯಾಗಿ ಆಗುವುದನ್ನು ತಪ್ಪಿಸಲೋಸುಗ ಅದನ್ನು ಯಾವಾಗ ನಿಲ್ಲಿಸಬೇಕು ಎಂಬುದನ್ನು ಭಾರತದಲ್ಲಿ ಇವರು ಬಿಟ್ಟು ಬೇರಾರೂ ಅಷ್ಟು ಚೆನ್ನಾಗಿ ತಿಳಿದಿರಲಿಲ್ಲ ಎನ್ನುವುದನ್ನೂ ಎತ್ತಿತೋರಿಸಬೇಕು. ಅಂದರೆ ಗಾಂಧೀಯವರು ಸಾಮೂಹಿಕ ಅಹಿಂಸಾತ್ಮಕ ಪ್ರತಿರೋಧದ ಎಲ್ಲ ಕ್ರಾಂತಿಕಾರಿ ಸಾಧ್ಯತೆಗಳನ್ನೂ ಎಂದೂ ಪೂರ್ತಿಯಾಗಿ ಬಳಸಲಿಲ್ಲ ಮತ್ತು ಬಳಸಲು ಬಯಸಲಿಲ್ಲ ಎಂದು ಅರ್ಥವಾಗುತ್ತದೆ. ಸಂಪೂರ್ಣವಾಗಿ ಅರ್ಥಮಾಡಿಕೊಳ್ಳಬಹುದಾದಂಥ ಕಾರಣಗಳಿಗಾಗಿಯೇ ಗಾಂಧೀಯವರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಆಗಿನ ನಾಯಕತ್ವದಲ್ಲಿದ್ದವರೂ ಈ ಸಾಧ್ಯತೆಗಳನ್ನು ಅಡಗಿಸಿದ್ದರು. ಚಳವಳಿ ಹೆಚ್ಚು ಉನ್ನತ ಮಟ್ಟಕ್ಕೆ, ವಸಾಹತುವಾದಿಗಳ ವಿರುದ್ಧ ನಿರ್ಧಾರಕವಾದ, ರಾಜಿಯಾಗದ, ಹಿಡಿತಡೆಗಳಿಲ್ಲದ ಹೋರಾಟಕ್ಕೆ, ವಿದೇಶೀ ಹಾಗೂ ರಾಷ್ಟ್ರೀಯ ಶೋಷಣೆಯ ವಿರುದ್ಧ ಗ್ರಾಮಾಂತರದ ಹಾಗೂ ನಗರೀಯ ದುಡಿಯುವ ಜನರ ಹೋರಾಟಕ್ಕೆ ಸ್ಥಿತ್ಯಂತರವಾಗಿ ಹೋಗುವುದಕ್ಕೆ ಅವರು ನೆಲೆ ಸಿದ್ಧಗೊಳಿಸಬಹುದಿದ್ದಿತು. ಆದರೆ ಗಾಂಧೀಯವರೂ ಕಾಂಗ್ರೆಸ್ ಪಕ್ಷದವರೂ ತಪ್ಪಿಸಲು ಯತ್ನಿಸಿದುದು ಇದನ್ನೇ. ಇದಕ್ಕಾಗಿ ಅವರು ರಾಷ್ಟ್ರೀಯ ಏಕತೆಯ ಆಧಾರದ ಮೇಲೆ "ಶುದ್ಧ" ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನಷ್ಟೆ ನಡೆಸಬೇಕೆಂದು ಪ್ರತಿಪಾದಿಸಿದರು ಮತ್ತು ಬ್ರಿಟನ್ನಿನೊಂದಿಗೆ ಸಂಧಾನಗಳಿಗಾಗಿ ಸದಾ ಬಾಗಿಲು ತೆರೆದಿರಿಸಿದರು.

ಹಾಗಾಗಿ, ಎಡಪಂಥದವರು ಗಾಂಧೀಯವರ ರಾಜಿ ಮಾಡಿಕೊಳ್ಳುವ ಪ್ರಬಲ ಮನೋವೃತ್ತಿಯನ್ನು ಟೀಕಿಸಿದುದು ಸರಿಯಾಗಿದ್ದಿತೆಂದೇ ನಾವು ನಂಬುತ್ತೇವೆ. ಆದರೆ ಈ ಟೀಕೆಯು ಸಾಮ್ರಾಜ್ಯಶಾಹಿಗಳ ವಿರುದ್ಧ ಅಹಿಂಸಾತ್ಮಕ ಪ್ರತಿಭಟನೆಯ ಅವಕಾಶಗಳನ್ನು ನಿರಾಕರಿಸುವುದರ ಮೇಲೆ ಆಧರಿಸದೆ ಇದ್ದಿದ್ದರೆ ಹೆಚ್ಚು ಮನವೊಪ್ಪುವಂತಾಗುತ್ತಿತ್ತು. ಇಪ್ಪತ್ತರ, ಮೂವತ್ತರ ಹಾಗೂ ನಲವತ್ತರ ವರ್ಷಗಳಲ್ಲಿ ಬಹು ವೇಳೆ ಜರುಗಿದುದು ಹೀಗೆಯೇ. ಆದರೆ ಅದು ಅಹಿಂಸಾತ್ಮಕ ಚಳವಳಿಯಲ್ಲಿ ಭಾಗವಹಿಸುತ್ತಿದ್ದ ಶಕ್ತಿಗಳ ಸಾಮಾಜಿಕ ಹಾಗೂ ವರ್ಗ ಸ್ವರೂಪಗಳಿಗೆ ಎಷ್ಟು ಮಾತ್ರವೂ ಸಂಬಂಧವಿರದಂತಹ ಧಾರ್ಮಿಕ ಅಂಧಸೂತ್ರಗಳ

ಹಾಗೂ ಅಮೂರ್ತ ನೈತಿಕ ಉಪದೇಶಗಳ ನೆರವಿನಿಂದ ಅಹಿಂಸಾತ್ಮಕ ಚಳವಳಿಯನ್ನು ವಸಾಹತುವಾದಿಗಳ ಹಾಗೂ ಕುಲವಾದಿಗಳ ವಿರುದ್ಧ ಹೋರಾಟದ ಏಕೈಕ ಮಾರ್ಗವನ್ನಾಗಿ ನಿರಪೇಕ್ಷಗೊಳಿಸುವುದನ್ನು ಒಪ್ಪದಿರುವುದರ ಮೇಲಂತೂ ಆಧರಿಸಿರಬೇಕಿದ್ದಿತು.

ಈಗ ಗಾಂಧೀಯವರ ಅಹಿಂಸಾತ್ಮಕ ಸೂತ್ರವು ಅಂತರರಾಷ್ಟ್ರೀಯ ಜೀವನದಲ್ಲಿ ಹೇಗೆ ಅನ್ವಯವಾಗುತ್ತದೆ ಎನ್ನುವುದನ್ನು ಸ್ಥೂಲವಾಗಿ ವಿಚಾರಿಸೋಣ. ತನ್ನ ವಿಶಿಷ್ಟ ಸ್ವರೂಪದಿಂದಾಗಿ ಈ ಸೂತ್ರವು ವರ್ಗ ಸಂಬಂಧಗಳ ವಲಯದಲ್ಲಿಗಿಂತ ರಾಷ್ಟ್ರಗಳ ನಡುವಿನ ಸಂಬಂಧಗಳಲ್ಲಿ ಹೆಚ್ಚು ವಾಸ್ತವಿಕವಾಗಿ ಸಾಧಿತವಾಗುತ್ತವೆ. ಅಂತರರಾಷ್ಟ್ರೀಯ ವಲಯದಲ್ಲಿ ಅಹಿಂಸೆಯು – ಇದರ ಆಧ್ಯಾತ್ಮಿಕ ಮಗ್ಗುಲನ್ನು ಪಕ್ಕಕ್ಕೆ ಬಿಡೋಣ – ಯುದ್ಧವನ್ನು ನಿಷೇಧಿಸುವ ಹಾಗೂ ಬಲಪ್ರಯೋಗವನ್ನು ನಿರಾಕರಿಸುವ ಅರ್ಥವನ್ನಲ್ಲದೆ ಬೇರಾವ ಅರ್ಥವನ್ನೂ ನೀಡದು. ಅಂದರೆ, ಅದು ಶಾಂತಿಯುತ ಅಂತರರಾಷ್ಟ್ರೀಯ ಸಂಬಂಧಗಳ ಸೂತ್ರವನ್ನು ಸಮರ್ಥಿಸುತ್ತದೆ. ವಿವಿಧ ರಾಷ್ಟ್ರಗಳ ನಡುವೆ ಸ್ನೇಹವನ್ನು ಬಲಪಡಿಸುವುದು, ಪರಸ್ಪರ ಗೌರವ. ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವಿಕೆ, ಎಲ್ಲ ವೈರುಧ್ಯಗಳನ್ನೂ ಸಂಧಾನಗಳ ಮೂಲಕ ಪರಿಹರಿಸುವುದು, ಇವುಗಳ ಆಧಾರದ ಮೇಲೆ ನ್ಯಾಯಯುತವಾದ ಅಂತರರಾಷ್ಟ್ರೀಯ ಸಂಬಂಧಗಳನ್ನು ಸ್ಥಾಪಿಸುವುದು, ಅವಶ್ಯ ಎಂದು ಗಾಂಧೀಯವರು ಫಲಪ್ರದ ತೀರ್ಮಾನಗಳಿಗೆ ಬಂದಿದ್ದರು. ಗಾಂಧೀಯವರ ಈ ವಿಚಾರಗಳು ಜವಾಹರಲಾಲ ನೆಹರೂರವರು ರೂಪಿಸಿದ ಭಾರತ ಗಣತಂತ್ರ ಸರಕಾರದ ವಿದೇಶಾಂಗ ನೀತಿಯ ಮೇಲೆ ಗಣನೀಯ ಪ್ರಭಾವ ಬೀರಿದ್ದವು.

ಅದೇ ಹೊತ್ತಿನಲ್ಲಿ ಅಹಿಂಸೆಯ ಸೂತ್ರವನ್ನು ಅತಿಯಾಗಿ ಅನ್ವಯಿಸುವುದನ್ನು ಭಾರತೀಯರೇ ಸರಿಯಾಗಿ ತಿರಸ್ಕರಿಸಿದ್ದರು. ಇದು ಬಹು ವೇಳೆ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಗಾಂಧೀಯವರು ಪರಾಜಿತ ಮನೋಭಾವವನ್ನು ತಳೆಯುವುದಕ್ಕೆ, ಆತ್ಮತ್ಯಾಗದ ವಿಚಾರಕ್ಕೆ ಬೆಂಬಲ ನೀಡುವುದಕ್ಕೆ, ಶತ್ರುವಿನ ದುರಾಕ್ರಮಣದ ಮುಂದೆಯೂ ಅಹಿಂಸೆಯ ಸೂತ್ರದ ಹೆಸರಿನಲ್ಲಿ ರಾಷ್ಟ್ರದ ಹಿತಗಳನ್ನು ಉಪೇಕ್ಷಿಸುವುದಕ್ಕೆ, ದಾರಿ ಮಾಡಿಕೊಟ್ಟಿದ್ದಿತು. ಶತ್ರುವಿನ ದುರಾಕ್ರಮಣ ಯೋಜನೆ ಅಥವಾ ಚರ್ಯೆಗಳನ್ನು ಗಮನಕ್ಕೆ ತಂದುಕೊಳ್ಳದೆ ಶಾಂತಿಯನ್ನು ಬಿಗಿಗೊಳಿಸುವ ಸಮಸ್ಯೆಯನ್ನು ಅಮೂರ್ತವಾಗಿ, ಅನೈತಿಹಾಸಿಕವಾಗಿ ವ್ಯಾಖ್ಯಾನಿಸುವುದು ಫಲಕಾರಿಯಾಗದು.

ಭಾರತದ ರಾಷ್ಟ್ರೀಯ-ವಿಮೋಚನಾ ಚಳವಳಿಯ ಪ್ರಗತಿಶೀಲಮನಸ್ಕ ನಾಯಕರು ಹೊಂದಿದ್ದ ಸಾಮಾಜಿಕ ವಿಚಾರಗಳು ಸ್ವಲ್ಪಮಟ್ಟಿಗೆ ರಷ್ಯನ್ ನರೋದಿಸಂ*ನೊಂದಿಗೆ ಹಾಗೂ ಲಿಯೊ ತೊಲ್‌ಸ್ತೋಯ್‌ರ ವಿಚಾರಗಳೊಂದಿಗೆ ಸಾಮ್ಯಾಂಶಗಳನ್ನು ಪಡೆದಿದ್ದವು. ತೊಲ್‌ಸ್ತೋಯ್‌ರ ಹಾಗೂ ಗಾಂಧೀಯವರ ನಡುವೆ ಸೈದ್ಧಾಂತಿಕ ಬಾಂಧವ್ಯವಿದ್ದಿತು. ರಷ್ಯನ್ ಮಹಾ ಸಾಹಿತಿಯ ಜೀವನದರ್ಶನದ ಬಗೆಗೆ ಲೆನಿನರು ಮಾಡಿರುವ ವಿಶ್ಲೇಷಣೆಯು ಇತರ ಅನೇಕ ವಿಷಯಗಳ ಮಧ್ಯೆ, ಈ ಅಂಶವನ್ನೂ ಪ್ರತಿಬಿಂಬಿಸಿದೆ. ಅದೇ ಹೊತ್ತಿನಲ್ಲಿ ಗಾಂಧೀಯವರ ಮೂಲತಃ ಬೂರ್ಜ್ವಾ-ರಾಷ್ಟ್ರೀಯತಾವಾದಿ ರಾಜಕೀಯ ವಿಚಾರಗಳಿಗೂ ತೊಲ್‌ಸ್ತೋಯ್‌ರ ಜಾಗತಿಕ ಮನೋಧರ್ಮಕ್ಕೂ ನಡುವೆ ಗಹನವಾದ ವ್ಯತ್ಯಾಸಗಳೂ ಇವೆ.

ರಾಷ್ಟ್ರೀಯ ವಿಮೋಚನೆಗಾಗಿ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಗಾಂಧೀಯವರು ಹೊಂದಿದ್ದ ಆಶೋತ್ತರಗಳು ಒಂದು ಮುಖ್ಯ ವಾಸ್ತವಾಂಶವನ್ನು ಉಪಾಧಿಗೆ ಒಳಪಡಿಸಿದ್ದವು. ಅದೆಂದರೆ, ಭಾರತದ ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಯ ನಾಯಕರಾಗಿ ಅವರ ವಿಕಸನವು ಪ್ರಥಮ ರಷ್ಯನ್ ಕ್ರಾಂತಿಯಿಂದ ಗಣನೀಯವಾಗಿ ಪ್ರಭಾವಿತವಾಗಿದ್ದಿತು, ಎನ್ನುವುದು. ಈ ಕ್ರಾಂತಿಯು ಭಾರತವನ್ನೂ ಒಳಗೊಂಡು ಇಡೀ ವಿಶ್ವವನ್ನು ಜಾಗೃತಗೊಳಿಸಿತು. 1905ರ ಅಕ್ಟೋಬರ್‌ನಲ್ಲಿ ಜರುಗಿದ ಅಖಿಲ ರಷ್ಯ ರಾಜಕೀಯ ಮುಷ್ಕರದಿಂದ ಭಾರತೀಯ ದೇಶಭಕ್ತರು ತುಂಬ ಕಲಿಯುವುದಿದೆ ಎಂದು ಗಾಂಧೀ ಭಾವಿಸಿದ್ದರು ಮತ್ತು ರಷ್ಯನರಷ್ಟೇ ಶಕ್ತಿಯನ್ನು ತಾವೂ ತೋರುವಂತೆ ಅವರು ಭಾರತೀಯರಿಗೆ ಕರೆ ನೀಡಿದರು.

ರಾಷ್ಟ್ರೀಯ ಬೂರ್ಜ್ವಾಸೀಯ ಕುರಿತು ಗಾಂಧೀಯವರ ಮನೋಧರ್ಮಕ್ಕೆ ಸಂಬಂಧಿಸಿ ಹೇಳುವುದಾದರೆ, ಅವರು ನಿಕಟವಾಗಿ ಸಹಕರಿಸಿ ಕೆಲಸ ಮಾಡುತ್ತಿದ್ದ ಆ ಚಾರಿತ್ರಿಕ ಕಾಲಾವಧಿಯ ವಿಶಿಷ್ಟ ಲಕ್ಷಣಗಳನ್ನು ಗಮನದಲ್ಲಿಟ್ಟಿರಬೇಕು. ಆಗ ಗಾಂಧೀಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸೈದ್ಧಾಂತಿಕ ನಾಯಕರಾಗಿದ್ದರು ಮತ್ತು ಕಾಂಗ್ರೆಸ್ಸು ಗಾಂಧೀಯವರ ಯೋಜನೆಗಳನ್ನು, ಅದರಲ್ಲೂ ವಿಶೇಷವಾಗಿ ಅವರ ನಾಯಕತ್ವದ ಕೆಳಗಿನ ಸಾಮೂಹಿಕ ಅಹಿಂಸಾತ್ಮಕ ಚಳವಳಿಗಳನ್ನು, ಕಾರ್ಯಗತಗೊಳಿಸುವ ಸಂಸ್ಥೆಯಾಗಿ, ಸಂಘಟಿಸುವ ಸಂಸ್ಥೆಯಾಗಿ, ಕಾರ್ಯ ಜರುಗಿಸುತ್ತಿದ್ದಿತು. ರಾಷ್ಟ್ರೀಯ ಬೂರ್ಜ್ವಾಸೀಯನ್ನೂ ಒಳಗೊಂಡು ಎಲ್ಲ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳೂ ಕೂಡಿರುವ ಒಕ್ಕೂಟವೊಂದನ್ನು ರಚಿಸಲು ವಸ್ತುನಿಷ್ಠ ಪರಿಸ್ಥಿತಿಗಳು ಲಭ್ಯವಿದ್ದ ಕಾಲವಾಗಿದ್ದಿತು ಅದು. ಆ ಕಾಲದ

---

*ರಷ್ಯನ್ ಕ್ರಾಂತಿಕಾರಿ ಚಳವಳಿಯಲ್ಲಿ 1860-1870ರ ವರ್ಷಗಳಲ್ಲಿ ಕಾಣಿಸಿಕೊಂಡ ಪೆಟಿ ಬೂರ್ಜ್ವಾ ಪ್ರವೃತ್ತಿ. ನಿರಂಕುಶಾಧಿಕಾರವನ್ನು ತೊಡೆದು ಹಾಕಬೇಕು ಮತ್ತು ಭೂಮಾಲೀಕರ ಜಮೀನುಗಳನ್ನು ರೈತರಿಗೆ ಹಂಚಿಕೊಡಬೇಕು ಎಂದು ನರೋದ್ನಿಕರು ಪ್ರತಿಪಾದಿಸಿದರು. ಅವರು ತಮ್ಮನ್ನು ಸಮಾಜವಾದಿಗಳೆಂದು ಪರಿಗಣಿಸಿದ್ದರು. ಆದರೆ ಅವರದು ಅಸಾಧ್ಯಾದರ್ಶ ಸಮಾಜವಾದವಾಗಿದ್ದಿತು.—ಸಂ.

ವಿಶಿಷ್ಟ ಲಕ್ಷಣವೆಂದರೆ ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ರಂಗವೊಂದು ಅಸ್ತಿತ್ವದಲ್ಲಿದ್ದುದು. ಅದು ವಿವಿಧ–ಪರಸ್ಪರ ವಿರುದ್ಧವಾದ–ವರ್ಗಗಳ ನಡುವಿನ ಸಂಘರ್ಷಗಳ ಮೇಲೆ ಪ್ರಭಾವ ಬೀರಿದ್ದಿತು. ಅದು ಅವುಗಳನ್ನೆಲ್ಲ ವಸಾಹತು ಆಡಳಿತದ ವಿರುದ್ಧ ಹೋರಾಟದ ಒಂದೇ ಸಾಮಾನ್ಯ ವೇದಿಕೆಯ ಮೇಲೆ ಒಟ್ಟಾಗಿ ತಂದಿದ್ದಿತಷ್ಟೆ ಅಲ್ಲ, ಈ ವರ್ಗಗಳು ಸಾಕಷ್ಟು ದೀರ್ಘ ಕಾಲಾವಧಿ ಅನುಸರಿಸಿದ ರಾಜಕೀಯ ನೀತಿಮಾರ್ಗವನ್ನೂ ನಿರ್ಧರಿಸಿದ್ದಿತು.

ಗಾಂಧೀಯವರು ರಾಷ್ಟ್ರೀಯ ಬೂರ್ಷ್ವಾಸೀಯೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು. ಈ ರಾಷ್ಟ್ರೀಯ ಬೂರ್ಷ್ವಾಸೀಯೇ ರಾಷ್ಟ್ರೀಯ-ವಿಮೋಚನಾ ಚಳವಳಿಯ ನಾಯಕತ್ವದಲ್ಲಿದ್ದುದು. ಸಂಪೂರ್ಣ ರಾಜಕೀಯ ಸ್ವಾತಂತ್ರ್ಯವನ್ನು ಸಾಧಿಸುವ ರಾಷ್ಟ್ರೀಯ ಕಾಂಗ್ರೆಸ್ಸಿನ ವಿಚಾರವೂ ವಸಾಹತುವಾದಿಗಳ ವಿರುದ್ಧ ಅವಿರತ ಹೋರಾಟ ನಡೆಸಬೇಕೆಂದು ಅದು ನೀಡಿದ ಕರೆಯೂ ಬೂರ್ಷ್ವಾಸೀಯನ್ನು ಇಡೀ ರಾಷ್ಟ್ರಕ್ಕೆ ಹೆಚ್ಚು ಹತ್ತಿರ ತಂದವು. ರಾಜಕೀಯ ಸ್ವಾತಂತ್ರ್ಯಕ್ಕಾಗಿ ನಾನಾ ವರ್ಗಗಳು ಹೊಂದಿದ್ದ ಈ ಸಾಮಾನ್ಯ ಆಶೋತ್ತರವೇ ಸಾರಭೂತವಾಗಿ ಪೆಟಿ ಬೂರ್ಷ್ವಾ ಪ್ರಜಾಪ್ರಭುತ್ವವಾದಿ ಹಾಗೂ ಅಸಾಧ್ಯಾದರ್ಶವಾದಿ ಗಾಂಧೀಯವರಿಗೂ ರಾಷ್ಟ್ರೀಯ ಕಾಂಗ್ರೆಸ್ಸಿನ ಬೂರ್ಷ್ವಾ ನಾಯಕರಿಗೂ ನಡುವೆ ಮೂವತ್ತು ವರ್ಷಗಳ ರಾಜಕೀಯ ಮೈತ್ರೀಕೂಟವನ್ನು ಅಸ್ತಿತ್ವಕ್ಕೆ ತಂದಿದ್ದುದು. ವಿದೇಶೀ ಆಳ್ವಿಕೆಯನ್ನು ಕಿತ್ತೊಗೆದು ರಾಜ್ಯಾಧಿಕಾರವನ್ನು ತಮ್ಮ ಕೈಗಳಲ್ಲೇ ಕೇಂದ್ರೀಕರಿಸಿಕೊಳ್ಳುವುದು ಈ ಬೂರ್ಷ್ವಾ ನಾಯಕರ ಹೆಗ್ಗುರಿಯಾಗಿದ್ದಿತು.

ತಮ್ಮ ಹಿತಗಳು ಒಂದುಗೂಡಿದ್ದುದು ತಾತ್ಕಾಲಿಕವಾಗಿದ್ದಿತು (ಅದು ದೀರ್ಘ ಕಾಲ ಅಸ್ತಿತ್ವದಲ್ಲಿದ್ದರೂ) ಎಂದು ಎರಡು ಪಕ್ಷಗಳೂ–ಗಾಂಧೀಯವರು ಹಾಗೂ ರಾಷ್ಟ್ರೀಯ ಕಾಂಗ್ರೆಸ್–ಮನಗಂಡಿದ್ದವು. ಒಂದೊಂದು ಪಕ್ಷಕ್ಕೂ ಇನ್ನೊಂದರ ಆವಶ್ಯಕತೆ ಇದ್ದಿತು. ಗಾಂಧೀಯವರಲ್ಲಿ ಕಾಂಗ್ರೆಸ್ ಒಬ್ಬ ಜನಪ್ರಿಯ ರಾಷ್ಟ್ರೀಯ ನಾಯಕನನ್ನು, ಒಬ್ಬ ಉಜ್ವಲ ಕಾರ್ಯತಂತ್ರಜ್ಞನನ್ನು, ಕ್ರಿಯಾಶೀಲರಾದ ಕಸುವಿನಿಂದ ಕೂಡಿದ ಯುವ ಪೀಳಿಗೆಯ ಯೋಧರನ್ನು ತನ್ನ ಸುತ್ತ ಅಣಿನೆರೆಯಿಸಿಕೊಳ್ಳುವ ಮತ್ತು ಅವರ ನೆರವಿನಿಂದ ಹತ್ತಾರು ಮಿಲಿಯ ಮರ್ದಿತ ಜನರನ್ನು ಜಾಗೃತಗೊಳಿಸುವ ಮತ್ತು ಅವರ ಬೆಂಬಲ ಗಳಿಸುವ ಸಾಮರ್ಥ್ಯವುಳ್ಳಂಥ ಒಬ್ಬ ಪ್ರಖರ ವಿಚಾರದ ರಾಜಕಾರಣಿಯನ್ನು, ಕಂಡುಕೊಂಡಿತು. ಕಾಂಗ್ರೆಸ್ಸಿನಲ್ಲಿ ಗಾಂಧೀಯವರು ಭಾರತದಲ್ಲೇ ಅಪ್ರತಿಮವಾದಂಥ ಒಂದು ಪ್ರಬಲ ಹಾಗೂ ಅನುಭವೀ ರಾಜಕೀಯ ಸಂಘಟನೆಯನ್ನು ಕಂಡುಕೊಂಡರು. ಗಾಂಧೀಯವರ ಹಾಗೂ ರಾಷ್ಟ್ರೀಯ ಕಾಂಗ್ರೆಸ್ಸಿನ ನಡುವಿನ ಸಂಬಂಧದ ಇತಿಹಾಸವನ್ನು ಸವಿವರವಾಗಿ ವಿವೇಚಿಸ ಹೋಗದೆ, ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧ ಹೋರಾ-

ಟದ ಅಂತಿಮ ಘಟ್ಟದಲ್ಲಿ, ರಾಜಕೀಯ ಸ್ವಾತಂತ್ರ್ಯದ ಗುರಿ ಇನ್ನೇನು ಸಾಧಿತವಾಗಲಿದ್ದಾಗ, ಗಾಂಧೀಯವರಿಗೂ ಕಾಂಗ್ರೆಸ್ಸಿನ ಬೂರ್ಷ್ವಾ ನಾಯಕತ್ವಕ್ಕೂ ನಡುವಿನ ಘರ್ಷಣೆಗಳು (ಇವು ಯಾವತ್ತೂ ಒಳಗೊಳಗೇ ಅಸ್ತಿತ್ವದಲ್ಲಿದ್ದುಕೊಂಡಿದ್ದವು) ನಾಟಕೀಯವಾದ ರೀತಿಯಲ್ಲಿ ತೀವ್ರಗೊಳ್ಳತೊಡಗಿದವು, ಎಂದಷ್ಟೆ ಗಮನಿಸೋಣ.

ಅಧಿಕಾರ ಪಡೆದುಕೊಂಡನಂತರ ಅನೇಕ ಕಾಂಗ್ರೆಸ್ಸಿಗರು ಗಾಂಧೀಯವರ ಪ್ರಜಾಸತ್ತಾತ್ಮಕ ಮಾನವತಾವಾದಿ ಧ್ಯೇಯಗಳನ್ನು ಮರೆತರು. ದೀರ್ಘವಾದ ಸ್ವಾತಂತ್ರ್ಯ ಹೋರಾಟಕ್ಕೆ ನಾಯಕತ್ವ ನೀಡಿ ಅದನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸುವ ಮೂಲಕ ಗಾಂಧೀಯವರು ತಮ್ಮ ಬಾಳಿನ ಉದ್ದಿಷ್ಟ ಕಾರ್ಯವನ್ನು ಮಾಡಿ ಮುಗಿಸಿದ್ದರು, ಎಂದು ಈ ಕಾಂಗ್ರೆಸ್ಸಿಗರು ಕಂಡುಕೊಂಡರು.

ಆದರೂ ಗಾಂಧೀಯವರು ಹೋರಾಟದ ಹೊಸ ಮಜಲನ್ನು ಮನಸ್ಸಿನಲ್ಲಿಟ್ಟಿದ್ದರು. ಹೆಚ್ಚು ವಿಶಾಲವಾದ ಸಾಮಾಜಿಕ ಧ್ಯೇಯಗಳನ್ನು ಸಾಧಿಸುವ ಗುರಿಯೊಂದಿಗೆ ಅಹಿಂಸಾತ್ಮಕ ಚಳವಳಿಯನ್ನು ನಡೆಸುವುದೇ ಅವರ ಮನಸ್ಸಿನಲ್ಲಿದ್ದ ಈ ಹೊಸ ಮಜಲಾಗಿದ್ದಿತು. ಭಾರತವು ವಿಭಜನೆಗೊಂಡು ಹಿಂದು-ಮುಸ್ಲಿಮ್ ಘರ್ಷಣೆ ಭುಗಿಲೆದ್ದುದೂ ಅದರೊಟ್ಟಿಗೇ ನಡೆದ ಭೀಕರ ರಕ್ತಪಾತವೂ ಗಾಂಧೀಯವರಲ್ಲಿ ಭಾರಿ ನಿರಾಶೆ ಉಂಟುಮಾಡಿದವು. ಹೆಚ್ಚು ಹೆಚ್ಚು ಹಣ ಮಾಡುವುದು, ವೃತ್ತಿಯಲ್ಲಿ ಸ್ವಾರ್ಥಸಾಧನಪರತೆ, ಅಹಂಭಾವಿತನ, ಈ ಬೂರ್ಷ್ವಾ ಗುಣಗಳು ಸಾರ್ವತ್ರಿಕವಾಗಿ ಏಳಿಗೆ ಪಡೆಯುತ್ತಿದ್ದುದನ್ನು ಕಂಡು ಅವರು ವ್ಯಗ್ರಗೊಂಡರು. ರಾಜಕೀಯ ಸ್ವಾತಂತ್ರ್ಯ ಗಳಿಸಿಕೊಂಡಾದ ಮೇಲೆ ಆರ್ಥಿಕ, ಸಾಮಾಜಿಕ ಹಾಗೂ ನೈತಿಕ ಸ್ವಾತಂತ್ರ್ಯಕ್ಕಾಗಿ, ಅಂದರೆ ಸಾಮಾಜಿಕ ನ್ಯಾಯದ ಸ್ಥಾಪನೆಗಾಗಿ, ಸರ್ವೋದಯ ವಿಜಯಗೊಳ್ಳುವುದಕ್ಕಾಗಿ, ಹೋರಾಟ ನಡೆಸಬೇಕೆಂದು ಅವರು ನಿರಂತರವಾಗಿ ಪ್ರತಿಪಾದಿಸಿದರು.

ಜಾತಿ ಪದ್ಧತಿಗೆ ಸಂಬಂಧಿಸಿ (ಇದರ ಪ್ರಭಾವ ಇಂದೂ ಭಾರತದಲ್ಲಿ ಇನ್ನೂ ಸಾಕಷ್ಟು ಗಣನೀಯ ಪ್ರಮಾಣದಲ್ಲಿಯೇ ಇದೆ) ಗಾಂಧೀಯವರ ಮನೋಧರ್ಮದ ಕಡೆಗೆ ಇಲ್ಲಿ ಸ್ವಲ್ಪ ಗಮನ ಹರಿಸುವುದು ಉಚಿತ. ಜಾತಿ ಪದ್ಧತಿ ಹಾಗೂ ಅಸ್ಪೃಶ್ಯರ ಸಮಸ್ಯೆಗಳಿಗೆ ಸಂಬಂಧಿಸಿ ಅವರ ಅಭಿಪ್ರಾಯಗಳು ಒಂದು ಕಡೆ ಅವರ ಸಾಹಜಿಕ ರೈತ ಪ್ರಜಾಸತ್ತಾತ್ಮಕತೆಯಿಂದ, ಸಾಮಾನ್ಯ ಜನರ ಬಗೆಗೆ ಅವರ ಅನುತಾಪದಿಂದ, ಸಾಮ್ರಾಜ್ಯಶಾಹಿ ವಿರೋಧಿ ಧ್ಯೇಯಸಾಧನೆಗಾಗಿ ಸಾಧ್ಯವಾದಷ್ಟೂ ಹೆಚ್ಚು ವಿಶಾಲ ಜನಸ್ತರಗಳನ್ನು ಅಣಿನೆರೆಯಿಸುವ ಆವಶ್ಯಕತೆಯಿಂದ (ಈ ಆವಶ್ಯಕತೆಯನ್ನು ಅವರು ಗಾಢವಾಗಿ ಮನಗಂಡಿದ್ದರು) ಪ್ರಭಾವಿತವಾಗಿದ್ದವು. ಮತ್ತೊಂದು ಕಡೆ ಅವರ ಅಭಿಪ್ರಾಯಗಳು ಅವರ ಚಿಂತನೆಯ ಒಂದು ರೀತಿಯ ಸಂಪ್ರದಾಯಶರಣತೆಯಿಂದ, ಧಾರ್ಮಿಕ ಪರಂಪರೆಗೆ ಅವರು

ಹೊಂದಿದ್ದ ವಿಶೇಷ ಒಲವಿನಿಂದ ಹಾಗೂ ಸಾಮಾಜಿಕ ವಿಕಸನದ ಅವರ ಸುಧಾರಣಾವಾದಿ ಸಿದ್ಧಾಂತದಿಂದ, ಪ್ರಭಾವಿತವಾಗಿದ್ದವು.

ಗಾಂಧೀಯವರು ಜಾತಿ ಪದ್ಧತಿಯಲ್ಲಿ ಅಡಕವಾಗಿದ್ದ ಅಸಮಾನತೆಯ ಹಾಗೂ ಉಚ್ಚತೆಯ ಭಾವನೆಗಳನ್ನು ತಿರಸ್ಕರಿಸಿದರು. ಅಷ್ಟೊಂದು ವಿವಿಧ ಜಾತಿಗಳಿದ್ದುದನ್ನು, ಅವು ಒಂದರಿಂದೊಂದು ಗಡುಸಾದ ಪ್ರತ್ಯೇಕತಾ ಕಟ್ಟುಪಾಡುಗಳಿಂದ ಬೇರ್ಪಟ್ಟಿದ್ದುದನ್ನು, ಅಂತರ್ಜಾತೀಯ ಸಂಪರ್ಕಗಳು ನಿಷಿದ್ಧವಾಗಿದ್ದುದನ್ನು ಅವರು ತಿರಸ್ಕರಿಸಿದರು. ಆದರೆ ಜಾತಿ ಪದ್ಧತಿಯ ಈ ಋಣಾತ್ಮಕ ಲಕ್ಷಣಗಳನ್ನು ಅವರು ಈ ಪದ್ಧತಿಯ ಸಾರವೆಂದು ಪರಿಗಣಿಸಲಿಲ್ಲ, ಬದಲು ಅವು ಆ ಪದ್ಧತಿಯ ಅಪಮಾರ್ಗಗಳು ಎಂದಷ್ಟೆ ಭಾವಿಸಿದರು. ಅವರು ಈ ಜಾತಿ ಪದ್ಧತಿಯ ಆಚಾರವ್ಯವಹಾರಗಳನ್ನು ಟೀಕಿಸಿದರು. ನಾಲ್ಕು ವರ್ಣಗಳ – ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರು ಇವರುಗಳ – ಪುರಾತನ ಪದ್ಧತಿಯೇ ಆದರ್ಶಯುತವಾದ ಸಾಮಾಜಿಕ ಸಂಘಟನೆಯ ಪದ್ಧತಿಯೆಂದು ಅವರು ಪರಿಗಣಿಸಿದ್ದರು. ಸಮಾಜದಲ್ಲಿ ವ್ಯಕ್ತಿಯೊಬ್ಬನ ಸ್ಥಾನವು ಬಹುಮಟ್ಟಿಗೆ ಆತನು ಆನುವಂಶಿಕವಾಗಿ ಪಡೆದುಕೊಂಡ ಸಾಮರ್ಥ್ಯಗಳಿಂದ ಪೂರ್ವನಿರ್ಧಾರಿಸಲ್ಪಟ್ಟಿರುತ್ತದೆಂದು ಅವರು ನಂಬಿದ್ದರು. ಅವರ ಮೂಲ ಸಮಾಜಶಾಸ್ತ್ರೀಯ ಅಭಿಪ್ರಾಯಗಳೂ ಈ ಅನೈತಿಹಾಸಿಕವಾದ ಹಾಗೂ ಅವೈಜ್ಞಾನಿಕವಾದ ವಿಚಾರದ ಪ್ರತಿಫಲನವೇ ಆಗಿದ್ದವು. ಈ ವಿಚಾರವು ದತ್ತ ವರ್ಗವಿಭಜಿತ ಸಮಾಜದಲ್ಲಿನ ಸಾಮಾಜಿಕ ಸಂಬಂಧಗಳನ್ನು ವಿಶ್ಲೇಷಿಸುವ ಸ್ಥಳದಲ್ಲಿ ಆನುವಂಶಿಕತೆಯ ಕುರಿತ ಅಮೂರ್ತ ವಾದಗಳನ್ನು ಇರಿಸುತ್ತದೆ. ಇದೇ ಗಾಂಧೀಯವರ ಪಾಲಕತನ ಹಾಗೂ ಪಿತೃಪ್ರಾಯತೆಯ ಸಿದ್ಧಾಂತದ ಮೂಲದಲ್ಲಿರುವುದು. ಈ ಸಿದ್ಧಾಂತದ ಪ್ರಕಾರ ಭೂಮಾಲೀಕರು ಅಸ್ತಿತ್ವದಲ್ಲಿರುವುದು ರೈತರಿಗೆ ಪಿತೃಸಮಾನರಾಗಿ ವರ್ತಿಸಲೆಂದೇ. ಅಂತೆಯೇ ಬಂಡವಾಳಗಾರರು ವ್ಯಾಪಾರ ನಿರ್ವಹಣೆಯ ವಿಶಿಷ್ಟ ವರ ಪಡೆದಂಥವರು. ಆದ್ದರಿಂದ ನೈಸರ್ಗಿಕವಾಗಿ ಶಾರೀರಿಕ ದುಡಿಮೆಗೇ ಮೀಸಲಾದಂಥ ಕಾರ್ಮಿಕರು ತಮಗಾಗಿ ಯಾವುದೇ ವ್ಯಾಪಾರ ನಿರ್ವಹಣೆಯ ಹಕ್ಕು ಸಾಧಿಸಲಾರರು.

ಅಸ್ಪೃಶ್ಯರ ಪ್ರಶ್ನೆಗೆ ಸಂಬಂಧಿಸಿ ಗಾಂಧೀಯವರು ಹೆಚ್ಚು ಸುಸಂಗತರಾಗಿದ್ದರು. ಅಸ್ಪೃಶ್ಯತೆಯ ಪದ್ಧತಿಯು ಭಾರತದ ಸಂಸ್ಕೃತಿಗೆ ಒಂದು ದೊಡ್ಡ ಕಳಂಕವೆಂದು ಅವರು ಸರಿಯಾಗಿಯೇ ಪರಿಗಣಿಸಿದ್ದರು. ದೇಶದ ಜನಸಂಖ್ಯೆಯಲ್ಲಿ ಬಹುಮಟ್ಟಿಗೆ ಮೂರನೇ ಒಂದು ಪಾಲಾಗಿದ್ದ ಈ ಅಸ್ಪೃಶ್ಯ ಜನರಿಗೆ ಕಾನೂನಿನ ಮುಂದೆ ಸಮಾನತೆಯನ್ನು ದೊರಕಿಸಿಕೊಡುವ ಹೋರಾಟಕ್ಕೆ ಅವರು ತಮ್ಮ ಅಪಾರ ಯತ್ನ ವಿನಿಯೋಗಿಸಿದರು. ಈ ಪ್ರಶ್ನೆಗೆ ಸಂಬಂಧಿಸಿ ಗಾಂಧೀಯವರ ಉದಾತ್ತವಾದ ಪ್ರಜಾಸತ್ತಾತ್ಮಕವಾದ ವಿಚಾರಗಳು ಭಾರತದ ಸಾರ್ವಜನಿಕಾಭಿ

ಪ್ರಾಯದ ಮೇಲೆ ಗಣನೀಯ ಪ್ರಭಾವ ಬೀರಿದವು ಮತ್ತು ಅಸ್ಪೃಶ್ಯರಿಗೆ ನಾಗರಿಕ ಹಕ್ಕುಗಳನ್ನು ಖಚಿತಪಡಿಸುವ ಶಾಸನ ಮಾಡುವುದಕ್ಕೂ ಮತ್ತು ಅವರ ದುರ್ಭರ ಬಾಳ ಪರಿಸ್ಥಿತಿಗಳನ್ನು ಸುಧಾರಿಸಲು ಹೆಚ್ಚಿನ ಯತ್ನ ಹಾಕುವುದಕ್ಕೂ ದಾರಿ ಮಾಡಿಕೊಟ್ಟವು.

"ಸಾಮಾಜಿಕ ನ್ಯಾಯ"ದ ಸಮಾಜಕ್ಕೆ ಸಂಬಂಧಿಸಿದ ಅವರ ವಿಚಾರವು ಎಷ್ಟೇ ಪೆಟಿ ಬೂರ್ಷ್ವಾ ಸ್ವರೂಪದ್ದು, ರೈತ ಸ್ವರೂಪದ್ದು, ಅದರಿಂದಾಗಿ ಅಸಂಗತವಾದುದು ಆಗಿದ್ದರೂ, ರಾಜಕೀಯ ಸ್ವಾತಂತ್ರ್ಯ ಪಡೆದುಕೊಂಡನಂತರ ಅಂತಹ ಸಮಾಜ ಸ್ಥಾಪನೆಗಾಗಿ ಬಹಿರಂಗವಾದ ಸರ್ವಶಕ್ತಿಯನ್ನೂ ಉಪಯೋಗಿಸಿದ ಹೋರಾಟವು, ವಿಶಿಷ್ಟವಾಗಿ ಗಾಂಧೀಯವರ ವಿಧಾನಗಳನ್ನೇ ಅನುಸರಿಸಿಕೊಂಡು ನಡೆಸಿದ ಹೋರಾಟವೇ ಆಗಿದ್ದಿದ್ದರೂ, ನಮ್ಮ ಅಭಿಪ್ರಾಯದಲ್ಲಿ, ಒಂದು ಭಾರಿ ಮುಂದಡಿ ಇಟ್ಟಂತಾಗುತ್ತಿತ್ತು. ಆದರೆ ಬೂರ್ಷ್ವಾ-ಬಂಡವಾಳಗಾರ ಗಣ್ಯ ಜನರು ಇದನ್ನು ತಪ್ಪಿಸಿದರು. ಗಾಂಧೀಯವರು ಆ ಜನರ ಅಹಂಭಾವಿತನವನ್ನೇನೋ ಖಂಡಿಸಿದರು, ಆದರೆ ಅವರ ವಿರುದ್ಧ ಸಾಮೂಹಿಕ ಚಳವಳಿಯನ್ನು ಸಂಘಟಿಸಲಿಲ್ಲ, ಅವರು ಅಂತಹ ಸಾಮರ್ಥ್ಯ ಹೊಂದಿರಲಿಲ್ಲ.

* * *

ಭಾರತವು ರಾಜಕೀಯ ಸ್ವಾತಂತ್ರ್ಯ ಗಳಿಸಿಕೊಂಡುದು ದೇಶದಲ್ಲಿನ ವರ್ಗ ಶಕ್ತಿಗಳ ಸಾಲುಗೂಡಿಕೆಯಲ್ಲಿ ಗಣನೀಯ ಬದಲಾವಣೆಗಳನ್ನು ತಂದಿತು, ರಾಷ್ಟ್ರೀಯ ಏಕತೆಯಲ್ಲಿ ಗುಣಾತ್ಮಕ ರೂಪಾಂತರಗಳನ್ನು ತಂದಿತು. ಗಾಂಧೀವಾದವು ವಿವಿಧ ವರ್ಗಗಳನ್ನು ಒಂದುಗೂಡಿಸುವ ಐಕ್ಯಕ ಸೈದ್ಧಾಂತಿಕ ಹಾಗೂ ರಾಜಕೀಯ ಸಾಧನವಾಗಿ ಕಾರ್ಯಾಚರಿಸುತ್ತಿದ್ದುದು ಕ್ರಮೇಣ ನಿಂತಿತು. ಇದು ವಸ್ತುನಿಷ್ಠ ಪರಿಸ್ಥಿತಿಗಳ – ದೇಶವು ಸ್ವತಂತ್ರ ಬೂರ್ಷ್ವಾ ಬೆಳವಣಿಗೆಗೆ ಸ್ಥಿತ್ಯಂತರವಾದ ಪರಿಸ್ಥಿತಿಗಳ – ಪರಿಣಾಮವೂ ಆಗಿದ್ದಿತು. ಭಾರತದ ಈಚಿನ ಇತಿಹಾಸದಲ್ಲಿನ ಈ ಸಂಧಿಕಾಲದಲ್ಲೇ ಗಾಂಧೀಯವರ ಮರಣವೂ ಉಂಟಾದುದರ* ಪರಿಣಾಮವೂ ಆಗಿದ್ದಿತು. ಅವರ ವ್ಯಕ್ತಿಗತ ಗುಣಗಳು ಅವರ ದಾರ್ಶನಿಕ ಹಾಗೂ ರಾಜಕೀಯ ಸಿದ್ಧಾಂತ ಮತ್ತು ಚಟುವಟಿಕೆಗಳಿಗಿಂತ ಕಮ್ಮಿ ಏನೂ ಇಲ್ಲದಂತೆ, ದೇಶದ ರಾಷ್ಟ್ರೀಯ ಶಕ್ತಿಗಳನ್ನು ಒಂದುಗೂಡಿಸಲು ನೆರವಾಗಿದ್ದವು. ಭಾರತದ

* ಭಾರತದ ಸ್ವಾತಂತ್ರ್ಯವನ್ನು 1947ರ ಆಗಸ್ಟ್ 15ರಂದು ಘೋಷಿಸಲಾಯಿತು ಮತ್ತು ಗಾಂಧೀಯವರು 1948ರ ಜನವರಿ 30ರಂದು ಕೊಲೆಗೀಡಾದರು.

5—1576

ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಪರಸ್ಪರ ವಿರೋಧಿ ವರ್ಗ ಶಕ್ತಿಗಳು ರೂಪುಗೊಳ್ಳುವುದರಲ್ಲಿ, ಸೈದ್ಧಾಂತಿಕವಾಗಿ ಪೃಥಗೊಳ್ಳುವುದರಲ್ಲಿ ಮತ್ತು ಸ್ವತಂತ್ರ ರಾಜಕೀಯ ಸಂಘಟನೆ ಏರ್ಪಡಿಸಿಕೊಳ್ಳುವುದರಲ್ಲಿ ತುಂಬ ಪ್ರಗತಿ ಉಂಟಾಗಿದೆ. ಈ ಪ್ರವೃತ್ತಿಗಳು ಇಂದು ಭಾರತದ ಸಾಮಾಜಿಕ ವ್ಯವಹಾರಗಳಲ್ಲಿ ಪ್ರಬಲ ವಾಗಿವೆ. ಇಷ್ಟು ವಿಷಯ ಮುಂದುವರಿದಿದೆಯೆಂದರೆ ಈಗ ಐಕ್ಯ ರಾಷ್ಟ್ರೀಯ ರಂಗಕ್ಕೆ ಹಿಂದಿನ ಅಡಿಪಾಯವೂ ಇಲ್ಲ, ಹಿಂದಿನ ಸ್ಥಿರತೆಯೂ ಇಲ್ಲ. ಆದರೂ ಅದರ ಪ್ರಭಾವದ ಚಾರಿತ್ರಿಕ ಜಡತೆಯು ಆಧುನಿಕ ಭಾರತೀಯ ಸಮಾಜದಲ್ಲಿ ಅನೇಕ ಜನಗಳ ಮೇಲೂ ಸಾಮಾಜಿಕ ಸ್ತರಗಳ ಮೇಲೂ ಇನ್ನೂ ಪ್ರಭಾವ ಬೀರುತ್ತಿದೆ.

ಆದರೆ ಭಾರತವು ಇಂದೂ ಬಹುವೇಳೆ ಸಾಮ್ರಾಜ್ಯಶಾಹಿ ಒತ್ತಡಕ್ಕೆ ಒಳಗಾಗುತ್ತಿರುವುದರಿಂದ ರಾಷ್ಟ್ರೀಯ ಏಕತೆಯು ಈ ಒತ್ತಡವನ್ನು ವಿರೋಧಿಸುವುದರಲ್ಲಿ ಚಾರಿತ್ರಿಕವಾಗಿ ಧನಾತ್ಮಕವಾದ ಪಾತ್ರವನ್ನು ನಿರ್ವಹಿಸುತ್ತಲೇ ಹೋಗುತ್ತಿದೆ ಎಂಬುದನ್ನೂ ಗಮನದಲ್ಲಿಟ್ಟಿರಬೇಕು. ಈ ನಿಟ್ಟಿನಲ್ಲಿ ಎಲ್ಲ ಸಾಮ್ರಾಜ್ಯಶಾಹಿ ವಿರೋಧಿ, ರಾಷ್ಟ್ರೀಯ-ಕ್ರಾಂತಿಕಾರಿ, ರಾಷ್ಟ್ರೀಯ ಸುಧಾರಣಾವಾದಿ ಹಾಗೂ ಶ್ರಮಜೀವಿ ಶಕ್ತಿಗಳ ಹಿತಗಳೂ ತಾಳೆ ಬೀಳುತ್ತಲೇ ಇವೆ. ಇಂದು ಪರಿಸ್ಥಿತಿ ಇರುವಂತೆ, ಸಾಮ್ರಾಜ್ಯಶಾಹಿ ಒತ್ತಡದ ವಿರುದ್ಧ ಅಂತಹ ಪ್ರತಿರೋಧಕ್ಕೆ ಹೆಚ್ಚು ಆಗಾಗ್ಗೆ ಎಡ ಪ್ರಜಾಸತ್ತಾತ್ಮಕ ಹಾಗೂ ಪುರೋಗಾಮಿ ವೃತ್ತಗಳೇ ಕರೆ ನೀಡುತ್ತಿರುವುವು. ಈ ವೃತ್ತಗಳು ಇನ್ನೂ ತಮ್ಮ ತಮ್ಮೊಳಗೇ ಅನ್ಯೋನ್ಯತೆಯನ್ನು ಸಾಧಿಸಿಕೊಂಡಿರದಿದ್ದರೂ ಬಲ ಹೆಚ್ಚಿಸಿಕೊಳ್ಳುತ್ತಿವೆ ಮತ್ತು ಪ್ರಬಲ ಏಕಸ್ವಾಮ್ಯ ಸಂಸ್ಥೆಗಳಿಗೂ ಸಾಮಂತವಾದದ ಹಾಗೂ ಹಿಂದೂ ಧರ್ಮದ ಪ್ರತಿಗಾಮಿ ಶಕ್ತಿಗಳಿಗೂ ಗಹನವಾದ ಪ್ರತಿರೋಧ ನೀಡುತ್ತಿವೆ.

ಭಾರತದಲ್ಲಿ ವರ್ಗ ಶಕ್ತಿಗಳ ನಡುವೆ ಉಂಟಾದ ಮೇಲೆ ತಿಳಿಸಿದ ಸಾರಭೂತ ಪುನರ್‌ಸಾಲುಗೂಡಿಕೆಯ ಫಲವಾಗಿ ಗಾಂಧೀವಾದವು ರಾಜಕೀಯ ಕ್ಷೇತ್ರದಿಂದ ಕಣ್ಮರೆಯೇನೂ ಆಗಲಿಲ್ಲವೆನ್ನಿ. ಗಾಂಧೀಯವರ ಮಹಿಮೆ ಅತ್ಯಪಾರವಾಗಿದ್ದಿತು. ಅವರ ಪ್ರಭಾವ, ಅದರಲ್ಲೂ ವಿಶೇಷವಾಗಿ ರೈತಾಪಿ ಜನರ ಹಾಗೂ ನಗರೀಯ ಪೆಟಿ ಬೂರ್ಜ್ವಾಸಿಯ ಮೇಲೆ, ಅತ್ಯಗಾಧವಾಗಿದ್ದಿತು. ಹಾಗಾಗಿ ರಾಜಕೀಯ ಹೋರಾಟದಲ್ಲಿ, ಇನ್ನೂ ಹೆಚ್ಚಾಗಿ ರಾಜಕೀಯ ಶಬ್ದಭಂಡಾರದಲ್ಲಿ, ಅವರ ವಿಚಾರಗಳ ಬಳಕೆಯು ಏನು ಮಾತ್ರವೂ ನಿಲ್ಲಲಿಲ್ಲ. ಎಲ್ಲ ಛಾಯೆಗಳ ಬೂರ್ಜ್ವಾ ಹಾಗೂ ಪೆಟಿ ಬೂರ್ಜ್ವಾ ರಾಜಕೀಯ ಪಾರ್ಟಿಗಳೂ ತಮ್ಮ ಪ್ರಚಾರ ಕಾರ್ಯದಲ್ಲಿ ಗಾಂಧೀವಾದದ ಪ್ರಕಲ್ಪನೆಗಳನ್ನು ವಿಸ್ತೃತವಾಗಿ ಬಳಸುತ್ತಿವೆ. ಸ್ವಲ್ಪ ಮಟ್ಟಿಗೆ ಗಾಂಧೀವಾದವೂ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ರೂಪುಗೊಂಡ ವಿಶಾಲ ರಾಷ್ಟ್ರೀಯ ಸಾಮ್ರಾಜ್ಯಶಾಹಿ ವಿರೋಧಿ ಮೈತ್ರೀಕೂಟದಂತೆಯೇ ಅದೇ ಗತಿಗೆ ಈಡಾಗಿದೆ. ಆ ಮೈತ್ರೀಕೂಟವು ಒಡೆದು ಹೆಚ್ಚು ಹೆಚ್ಚು ವರ್ಗ

ವೈರುಧ್ಯಗಳನ್ನು ತೋರಿಸಿಕೊಳ್ಳತೊಡಗಿದಂತೆಯೇ ಗಾಂಧೀವಾದವೂ ಸೈದ್ಧಾಂತಿಕವಾಗಿ ದುರ್ಬಲಗೊಳ್ಳತೊಡಗಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಅಲ್ಲದೆ ಅದರ ಎಡಕ್ಕೆ ಹಾಗೂ ಬಲಕ್ಕೆ ಇರುವ ಪಾರ್ಟಿಗಳೆಲ್ಲವೂ ಈ ಪ್ರಕ್ರಿಯೆಗೆ ಕಾರಣವಾಗಿವೆ. ಬೂರ್ಜ್ವಾ ಹಾಗೂ ಪೆಟಿ ಬೂರ್ಜ್ವಾ ಪ್ರವೃತ್ತಿಗಳು ಅನೇಕವು ಪರಸ್ಪರ ಸ್ಪರ್ಧಿಸುತ್ತ ಗಾಂಧೀಯವರ ವಿಚಾರಗಳಲ್ಲಿ ಕೆಲವನ್ನು ತಮ್ಮ ಸ್ವಂತ ಹಿತಗಳಿಗೆ ತಕ್ಕಂತೆ ಬಳಸಿಕೊಳ್ಳುತ್ತಿವೆ, ಅವುಗಳಿಗೆ ತಮ್ಮವೇ ಏಕಪಕ್ಷೀಯ ಶಾಸ್ತ್ರಾರ್ಥ ವ್ಯಾಖ್ಯಾನಗಳನ್ನು ನೀಡುತ್ತಿವೆ. ಹಾಗಾಗಿ ಇಂದು ಗಾಂಧೀಯವರ ನೈತಿಕ, ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸಿದ್ಧಾಂತಗಳನ್ನು ಬಹುವೇಳೆ ಭಿನ್ನ ಭಿನ್ನವಾಗಿ ವ್ಯಾಖ್ಯಾನಿಸಲಾಗುತ್ತಿದೆ.

ಚಿರಂತನ, ಅಮೂರ್ತ, ಅಸಾಧ್ಯಾದರ್ಶ ತತ್ವಗಳಿಂದ ಕೂಡಿದ್ದು ಯಾವುದೇ ದ್ವಂದ್ವಾತ್ಮಕ ತರ್ಕ ಇಲ್ಲದೆಯೇ ಗಾಂಧೀವಾದವು ಧಾರ್ಮಿಕ ಹಾಗೂ ನೈತಿಕ ಆಧಾರ ಪ್ರತಿಜ್ಞೆಗಳನ್ನೇ ರಾಜಕೀಯ ಹೋರಾಟದ ಸಾರ್ವತ್ರಿಕ ಸತ್ಯಗಳನ್ನಾಗಿ ಘೋಷಿಸುವ ಒಲವನ್ನೇ ಯಾವತ್ತೂ ತೋರಿತು. ಈಗಂತೂ ಗಾಂಧೀವಾದವು ಒಂದು ರೀತಿಯ ಶ್ರುತಿವಾಕ್ಯವಾಗಿ ಬಿಟ್ಟಿದೆ, ಎಲ್ಲ ಶ್ರುತಿವಾಕ್ಯಗಳಂತೆಯೇ ಅದೇ ವಿವಾದದ ಗತಿಗೆ ಈಡಾಗಿದೆ. ಹಾಗಾಗಿ ಜನ ಅತ್ಯಂತ ಭಿನ್ನವಿಭಿನ್ನವಾದ ಹಾಗೂ ಪರಸ್ಪರ ಹೊಂದಾಣಿಕೆಯಾಗದ ವಿಚಾರಗಳಿಗೂ ಅದರಲ್ಲಿ ಸಮರ್ಥನೆ ಕಾಣ ಹೊರಟಿದ್ದಾರೆ. ಕೆಲವು ವೇಳೆ ಅವರು ಸಮರ್ಥನೆ ಕಾಣ ಹೊರಟ ವಿಚಾರಗಳು ಮೂಲ ಆಕರದ (ಗಾಂಧೀವಾದದ) ಸದ್ಭಾವದೊಂದಿಗೇ ಅಥವಾ ಅದರ ಸೃಜಕನ (ಗಾಂಧೀಯವರ) ಐತಿಹಾಸಿಕ ಚಟುವಟಿಕೆಗಳೊಂದಿಗೇ ಯಾವ ಸಾಮಾನ್ಯಾಂಶವನ್ನೂ ಹೊಂದಿರುವುದಿಲ್ಲ.

ಭಾರತೀಯ ಸ್ವಾತಂತ್ರ್ಯ ಕಾಲಾವಧಿಯ ಸಾಹಿತ್ಯಿಕ ಆಕರಗಳತ್ತ ನಾವು ಗಮನ ಹರಿಸಿದಲ್ಲಿ, ಭಾರತೀಯ ಪ್ರತಿಗಾಮಿಗಳು ಗಾಂಧೀಯವರ ಮಹಿಮೆಯನ್ನೂ ಜನಪ್ರಿಯತೆಯನ್ನೂ ಪರಮಾವಧಿ ಬಳಸಿಕೊಳ್ಳಲು ಯತ್ನಿಸಿದರೆಂಬುದು ಸ್ಪಷ್ಟವಾಗುತ್ತದೆ. ರಾಷ್ಟ್ರೀಯ ಕಾಂಗ್ರೆಸ್ಸಿನೊಳಗಣ ಬಲಪಂಥದ ಶಕ್ತಿಗಳೂ ಪ್ರತಿಗಾಮಿ ಜನಸಂಘ ಮತ್ತು ಸ್ವತಂತ್ರ ಪಾರ್ಟಿಗಳೂ ಕಾಂಗ್ರೆಸ್ ಜಾರಿಗೆ ತಂದ ಕೆಲವು ವೇಳೆ ಅಸಂಗತವಾದ ಆದರೆ ಚಾರಿತ್ರಿಕವಾಗಿ ಪ್ರಗತಿಶೀಲವಾದ ಸಾಮಾಜಿಕ-ಆರ್ಥಿಕ ಬದಲಾವಣೆಗಳನ್ನು ಟೀಕಿಸಲೂ, ರಾಜ್ಯ ಆಯೋಜನೆಯನ್ನೂ ರಾಜ್ಯ ಆರ್ಥಿಕ ವಿಭಾಗವನ್ನೂ, ಕೈಗಾರಿಕೀಕರಣ ನೀತಿಯನ್ನೂ, ಏಕಸ್ವಾಮ್ಯಗಳ ಮೇಲೆ ವಿಧಿಸಿದ್ದ ಭಾಗಿಕ ನಿರ್ಬಂಧಗಳನ್ನೂ ಮತ್ತು ಸಾರಭೂತವಾಗಿ ಬೂರ್ಜ್ವಾ ಆದ ಸೀಮಿತ ಭೂ ಸುಧಾರಣೆಯನ್ನೂ ಸಹ, ವಿರೋಧಿಸಲೂ, ಗಾಂಧೀಯವರ ಸಾಮಾಜಿಕ-ಆರ್ಥಿಕ ಪ್ರಕಲ್ಪನೆಗಳನ್ನು ಆಧಾರವಾಗಿ ಬಳಸಿಕೊಳ್ಳಲು ಯತ್ನಿಸಿದ ರೀತಿ ಇದನ್ನು ತೋರಿಸಿಕೊಡುತ್ತದೆ.

ಭಾರತದ ವಿವಿಧ ಜನತೆಗಳ ನಡುವೆ ವಿಶ್ವಾಸದ ಯಾವುದೇ ಭಾವನೆಯನ್ನೂ ನಾಶಗೊಳಿಸುವ ಸಲುವಾಗಿ, ಏಕೀಕೃತ ಒಂದು ಜನಾಂಗೀಯ ಭಾರತವನ್ನು ನಿರ್ಮೂಲಗೊಳಿಸುವುದರಲ್ಲಿ ಮತ್ತು ವಿಭಜನೆಗೊಳಿಸುವುದರಲ್ಲಿ ಆಸಕ್ತವಾದ, ಭಾರತದ ಐಕ್ಯತೆ ಮತ್ತು ಅಧಿಕಾರವನ್ನು ದುರ್ಬಲಗೊಳಿಸುವುದರಲ್ಲಿ ಆಸಕ್ತಿ ಇರುವ ಜೀವ ಸಾಮ್ರಾಜ್ಯಶಾಹಿ ಅಂಶಗಳು ಪ್ರತ್ಯೇಕ ಭಾರತೀಯ ಸಂಸ್ಥಾನಗಳಲ್ಲಿ ಬೆಳೆಸಿದ ಸಾಧನವಾಗಿ ಹಾನಿಕರವಾದ ಕೇಂದ್ರಾಪಗಾಮಿ ಶಕ್ತಿಗಳನ್ನು ಸಮರ್ಥಿಸುವ ಸಲುವಾಗಿಯೂ ಸಹ. ಪ್ರತಿಗಾಮಿ ವೃತ್ತಗಳು ಗಾಂಧೀಯವರ ಹೆಸರನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ. ಪ್ರತಿಗಾಮಿ ಶಕ್ತಿಗಳು ಭಾರತ ಗಣತಂತ್ರಕ್ಕೂ ಸಮಾಜವಾದಿ ದೇಶಗಳಿಗೂ ನಡುವೆ ಇರುವ ಸ್ನೇಹಯುತ ಸಂಬಂಧಗಳನ್ನು ನಾಶಗೊಳಿಸಲು. ಭಾರತೀಯ ಪ್ರಜಾಪ್ರಭುತ್ವವಾದಿಗಳ, ಪುರೋಗಾಮಿ ಶಕ್ತಿಗಳ, ಕಾರ್ಮಿಕ ವರ್ಗದ ಹಾಗೂ ಕಮ್ಯೂನಿಸ್ಟ್ ಪಾರ್ಟಿಯ ಬಗೆಗೆ ವೈರೀಯ ಭಾವನೆಯನ್ನು ಪ್ರಚೋದಿಸಲು, ಪ್ರಯತ್ನಿಸುತ್ತಿವೆ.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನೊಳಗಣ ಮಧ್ಯಮಗಾಮಿ ವೃತ್ತಗಳು ಪ್ರಜಾಸತ್ತಾತ್ಮಕ ಸುಧಾರಣೆಗಳನ್ನು ರೂಪಿಸಿ ಕಾರ್ಯಗತಗೊಳಿಸುವಲ್ಲಿ ಕಾಂಗ್ರೆಸ್ಸಿನ ಅಸಂಗತತೆಯನ್ನೂ ಜಡತೆಯನ್ನೂ ಸಮರ್ಥಿಸಲು ಗಾಂಧೀಯವರ ಅಹಿಂಸಾತ್ಮಕ ವಿಚಾರದ ಮೊರೆ ಹೊಕ್ಕವು. ಇದರಿಂದ, ಸಾಮ್ರಾಜ್ಯವಾದದ ವಿರುದ್ಧ ಹೋರಾಟದ ಸಮಯದಲ್ಲಿ ಕಸುವು ಸಾಮೂಹಿಕ ಪ್ರಿಯತೆ ಹಾಗೂ ಚಲನಶೀಲತೆಯ ಗುಣಗಳನ್ನು ಹೊಂದಿದ್ದ ಗಾಂಧೀಯವರ ವಿಚಾರವು ಉಪೇಕ್ಷಿಸಲ್ಪಟ್ಟಿದ್ದ ಹಾಗೂ ಬಹಿರಂಗವಾಗಿಯೇ ಇದ್ದ ಸಾಮಾಜಿಕ ಕೆಡುಕನ್ನು ಅಸಮರ್ಥನೀಯವಾದ ರೀತಿಯಲ್ಲಿ ದೀರ್ಘಕಾಲದವರೆಗೆ ಒಪ್ಪಿಕೊಳ್ಳುತ್ತಿದ್ದ ವಿಚಾರವಾಗಿ ಪರಿವರ್ತಿತವಾಯಿತು.

ಸ್ವಾತಂತ್ರ್ಯನಂತರ ಗಾಂಧೀವಾದವು ಭಾರತೀಯ ರಾಜಕೀಯ ಜೀವನದಲ್ಲಿ ಒಂದು ಸ್ಥಿರವಾದ ಅಂಶವಾಗಿ ಇದ್ದುಕೊಂಡು ಬಂದಿದೆ. ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಚುನಾವಣೆಯಲ್ಲಿ ಸೋತು ಇಂದಿರಾ ಗಾಂಧೀಯವರ ಸರಕಾರ ಪತನಗೊಂಡು ಜನತಾ ಪಾರ್ಟಿಯು ಅಧಿಕಾರಕ್ಕೆ ಬಂದನಂತರ ಗಾಂಧೀವಾದಕ್ಕೆ ಉಜ್ಜೀವ ಪುನರ್ಜನ್ಮವು, ಭಾರತೀಯ ಪತ್ರಿಕೆಗಳು ಗಮನಿಸಿದಂತೆ, ಒಂದು ಫ್ಯಾಷನ್ ಆಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಗಾಂಧೀವಾದದಿಂದ ಅಡ್ಡಸರಿದಿದ್ದರಿಂದಲೂ, ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ಸಂಬಂಧಿಸಿ ಗಾಂಧೀಯವರ ಹಾಗೂ ನೆಹರೂರವರ ಮನೋಧರ್ಮಗಳಲ್ಲಿ ಮೂಲಭೂತ ವ್ಯತ್ಯಾಸಗಳಿದ್ದುದರಿಂದಲೂ ಆಡಳಿತ ಪಾರ್ಟಿಗೆ ನಿಕಟವಾಗಿದ್ದ ವೃತ್ತಗಳು ಮೇಲೆತ್ತಿದವು. “ಮರಳಿ ಗಾಂಧೀವಾದಕ್ಕೆ” ಎಂಬ ಘೋಷಣೆಯನ್ನು ಮೊಳಗಿಸಲಾಯಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅನೇಕ ಪ್ರಗತಿಶೀಲ ಲಕ್ಷಣಗಳೊಂದಿಗೆ ಗಾಂಧೀವಾದವನ್ನು ವೈದೃಶ್ಯಮಾಡಿ ತೋರಿಸಲಾಯಿತು.

ನಾವಿಲ್ಲಿ ಗಾಂಧೀವಾದದ ಬಗೆಗೆ ಒಂದು ವಿಚಿತ್ರವಾದ ಆಯ್ಕೆ ತೆಗೆದ ಮನೋಧರ್ಮದ ಬಗೆಗೆ ಹೇಳುತ್ತಿದ್ದೇವೆ. “ಮರಳಿ ಗಾಂಧೀವಾದಕ್ಕೆ” ಎಂಬ ಘೋಷಣೆಯ ಬೆಂಬಲಿಗರು ದೇಶದೊಳಗೆ ಕೈಕಸುಬುಗಳ ಹಾಗೂ ಕೃಷಿಯ ಉತ್ಕರ್ಷಿತ ಬೆಳವಣಿಗೆಗೆ ಕರೆ ನೀಡುತ್ತಾರೆ. ಈ ಸಲಹೆಗಳು ಸ್ವತಃ ಸರಿಯಾದವುಗಳೇ, ರಾಷ್ಟ್ರೀಯ ಆರ್ಥಿಕತೆಯ ಅಗತ್ಯಗಳಿಗೆ ಸರಿಹೊಂದುವಂಥವುಗಳೇ ಹಾಗೂ ನಿಜಕ್ಕೂ ಗಾಂಧೀಯವರ ಆಯುಧಾಗಾರದಿಂದಲೇ ತೆಗೆದುಕೊಂಡಂಥವು. ಆದರೆ ಕೆಲವು ವೇಳೆ ಇವನ್ನು ಸ್ವಲ್ಪ ಏಕಪಕ್ಷೀಯವಾಗಿಯೇ ವ್ಯಾಖ್ಯಾನಿಸಲಾಗುತ್ತದೆ, ಕೈಗಾರಿಕೀಕರಣದ ನೀತಿಯೊಂದಿಗೆ ವೈದೃಶ್ಯ ಮಾಡಿ ತೋರಿಸಲಾಗುತ್ತದೆ, ಆರ್ಥಿಕತೆಯನ್ನು ವಿಕೇಂದ್ರೀಕರಿಸಬೇಕೆಂಬ ಮತ್ತು ಭಾರಿ ಕೈಗಾರಿಕೆಯಲ್ಲಿನ ಪ್ರಮುಖ ಪ್ರಾಯೋಜನೆಗಳ ಖರ್ಚಿನಲ್ಲಿ ಹಾಗೂ ರಾಜ್ಯ ವಿಭಾಗದ ಖರ್ಚಿನಲ್ಲಿ ಕೃಷಿಗೆ ಆದ್ಯತೆ ನೀಡಬೇಕೆಂಬ ಕರೆಗಳೊಂದಿಗೆ ಸಂಬಂಧಿಸಲಾಗುತ್ತದೆ. ಲಕ್ಷೋಪಲಕ್ಷ ಭಾರತೀಯರಿಗೆ ಉದ್ಯೋಗವನ್ನೂ ಜೀವನಾಧಾರವನ್ನೂ ಒದಗಿಸುವಂಥ ಗೃಹ ಕೈಕಸುಬುಗಳಿಗೂ ಕೃಷಿಗೂ ಗಮನ ನೀಡಬೇಕೆಂಬುದು ಸಂಪೂರ್ಣವಾಗಿ ಸಮರ್ಥನೀಯವಾದುದೇ. ಆದರೆ ಇವನ್ನು ಭಾರಿ ಕೈಗಾರಿಕೆಯ ಬೆಳವಣಿಗೆಗೆ ವಿರುದ್ಧವಾಗಿ ಎತ್ತಿ ಹಿಡಿಯುವುದು ಸರಿಯೇ? ಭಾರಿ ಕೈಗಾರಿಕೆಯ ಬೆಳವಣಿಗೆಯಿಲ್ಲದೆ ದೇಶದ ಆರ್ಥಿಕ ಸ್ವಾತಂತ್ರ್ಯ ಅಸಾಧ್ಯ. ಆಧುನಿಕ ಕೈಗಾರಿಕಾ ಬುನಾದಿಯನ್ನು ನಿರ್ಮಿಸುವುದರಲ್ಲಿ ರಾಜ್ಯ ವಿಭಾಗದ ಅಗ್ರಗಾಮಿ ಪಾತ್ರವನ್ನು ನಿಜಕ್ಕೂ ಶಂಕಿಸುವುದು ಸಾಧ್ಯವೇ? ಪ್ರಬಲವಾದ ರಾಜ್ಯ ವಿಭಾಗವಿಲ್ಲದ ಯಾವ ಅಭಿವೃದ್ಧಿಶೀಲ ದೇಶವನ್ನು ಕಲ್ಪಿಸಿಕೊಳ್ಳುವುದು ಸಾಧ್ಯ?

“ಮರಳಿ ಗಾಂಧೀವಾದಕ್ಕೆ” ಎಂಬ ಕರೆಯನ್ನು ಬಹುವೇಳೆ ಗಾಂಧೀ ಮತ್ತು ನೆಹರೂರವರ ನಿಲುವುಗಳನ್ನು ವೈದೃಶ್ಯ ಮಾಡಿ ತೋರಿಸಲು ಬಳಸಲಾಗುತ್ತೆ. ಭಾರತೀಯ ವಿಮೋಚನಾ ಚಳವಳಿಯ ಈ ಇಬ್ಬರು ಮಹೋನ್ನತ ನಾಯಕರ ಅಭಿಪ್ರಾಯಗಳ ನಡುವೆ ಪ್ರಬಲ ವ್ಯತ್ಯಾಸವಿದ್ದಿತು ಎಂಬುದು ಸ್ವಯಂವೇದ್ಯ. ಇದಕ್ಕೆ ಸಂಬಂಧಿಸಿ ಗಾಂಧೀ ಮತ್ತು ನೆಹರೂರವರೇ ಅನೇಕ ಬಾರಿ ಹೇಳಿದ್ದಾರೆ. ಆದರೂ ಅದರಿಬ್ಬರೂ ಉಭಯ ಸಾಮಾನ್ಯ ಅಭಿಪ್ರಾಯವೊಂದನ್ನೂ ಕಂಡುಕೊಂಡಿದ್ದರು. ಅದು ಅವರಿಗೆ ಸ್ವಾತಂತ್ರ್ಯ ಹೋರಾಟದಲ್ಲಿ ಯೋಧಸಂಗಾತಿಗಳಾಗಲು ನೆರವಾಯಿತು. ಅಷ್ಟೇ ಅಲ್ಲ, ನೆಹರೂರವರ ಸೈದ್ಧಾಂತಿಕ ವಿಕಸನವು ಅವರನ್ನು ಗಾಂಧೀವಾದಕ್ಕೆ ಹೆಚ್ಚು ಹತ್ತಿರ ತಂದಿತು. ಇದನ್ನು ಗಾಂಧೀಯವರೇ 1942ರಲ್ಲಿ ನೆಹರೂರವರನ್ನು ತಮ್ಮ ರಾಜಕೀಯ ವಾರಸುದಾರರನ್ನಾಗಿ ಹೆಸರಿಸಿದಾಗ ಮುಂಗಂಡಿದ್ದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಕಟಣೆಗಳು ಗಾಂಧೀ ಮತ್ತು ನೆಹರೂರವರ ನಡುವಿನ ಬಾಂಧವ್ಯಗಳನ್ನು ಹೆಚ್ಚು ಉತ್ಪ್ರೇಕ್ಷಿಸಿ ತೋರಿಸುವ ಪ್ರವೃತ್ತಿ ಪ್ರದರ್ಶಿಸಿದಲ್ಲಿ ಪ್ರಸಕ್ತ ಭಾರತೀಯ ರಾಷ್ಟ್ರೀಯ

ಕಾಂಗ್ರೆಸ್ಸಿನ ವಿರೋಧಿಗಳು ಅವರ ನಡುವಿನ ವ್ಯತ್ಯಾಸಗಳನ್ನು ನಿರಪೇಕ್ಷಗೊಳಿಸಲು ಬಯಸುತ್ತಾರೆ. ಇವರ ಪ್ರಕಾರ "ಮರಳಿ ಗಾಂಧೀವಾದಕ್ಕೆ" ಅನ್ನುವುದು ನೆಹರೂರವರ ಅಭಿಪ್ರಾಯಗಳನ್ನು ತಿರಸ್ಕರಿಸುವ ಅರ್ಥ ನೀಡುತ್ತದೆ. ಈ ಎರಡು ಅಭಿಪ್ರಾಯಗಳೂ ಏಕಪಕ್ಷೀಯವಾದವು. ಈ ಎರಡೂ ನಾಯಕರ ವಿಚಾರಗಳನ್ನು ತುಲನೆ ಮಾಡಿ ಅಭ್ಯಾಸ ಮಾಡಿದಾಗ ಅವರ ನಡುವೆ ಪರಸ್ಪರ ಪ್ರಭಾವ ಬೀರಿತು ಅನ್ನುವುದು ಕಂಡುಬರುತ್ತದೆ. ನೆಹರೂರವರು ತಮ್ಮ ಜೀವಮಾನ ಪೂರ್ತಿ ಗಾಂಧೀಯವರ ವ್ಯಕ್ತಿತ್ವ ಹಾಗೂ ಸೂತ್ರಗಳ ಪ್ರಭಾವಗಳ ಕೆಳಗಿದ್ದರು. ಗಾಂಧೀಯವರೂ ತಮ್ಮ ಕಿರಿಯ ಮಿತ್ರನ ಕೆಲವು ವಿಚಾರಗಳನ್ನು ಸ್ವೀಕರಿಸಿದ್ದರು, ಅವು ಕಾಂಗ್ರೆಸ್ಸಿನ ಸೈದ್ಧಾಂತಿಕ ಅಡಿಪಾಯವನ್ನು ಸಿರಿವಂತಗೊಳಿಸಿದ್ದವೆಂದು ಒಪ್ಪಿಕೊಂಡಿದ್ದರು. 1931ರಲ್ಲಿ ಕರಾಚಿಯಲ್ಲಿ ನಡೆದ ಕಾಂಗ್ರೆಸ್ಸಿನ ಮಹಾಧಿವೇಶನದಲ್ಲಿ ನೆಹರೂರವರು ಮುಂದಿಟ್ಟ ಆರ್ಥಿಕ ಕಾರ್ಯಕ್ರಮವನ್ನೂ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ ನಿರ್ಣಯವನ್ನೂ ಗಾಂಧೀಯವರು ಒಪ್ಪಿಕೊಂಡುದು ಇದಕ್ಕೆ ಒಂದು ನಿದರ್ಶನ.

ಈ ಇಬ್ಬರ ಹೆಸರುಗಳನ್ನೂ ಒಬ್ಬರ ವಿರುದ್ಧ ಇನ್ನೊಂದನ್ನು ಎತ್ತಿ ಹಿಡಿಯುವುದು ಎಷ್ಟು ಮಾತ್ರವೂ ಸಮರ್ಥನೀಯವಲ್ಲ. ಮುಖ್ಯವಾದ ವಿಷಯ ಬೇರೆಯೇ ಆಗಿದೆ. ಅದೆಂದರೆ, ಗಾಂಧೀಯವರಾಗಲೀ ನೆಹರೂರವರಾಗಲೀ ಸಮಕಾಲೀನ ಭಾರತದ ಅನೇಕ ಸಮಸ್ಯೆಗಳಿಗೆ ಪರಿಹಾರ ಒದಗಿಸದಾಗಿದ್ದರು, ಅನ್ನುವುದಾಗಿದೆ. ಆದಾಗ್ಯೂ ಗಾಂಧೀ ಹಾಗೂ ನೆಹರೂರವರ ಪ್ರಭಾವವನ್ನೂ ಅವರು ಬಿಟ್ಟುಕೊಟ್ಟು ಹೋಗಿರುವ ಜ್ಞಾನಸಂಪತ್ತು ಮತ್ತು ಅನುಭವಗಳನ್ನೂ ಗಣನೆಗೆ ತೆಗೆದುಕೊಳ್ಳದೆ ಈ ಸಮಸ್ಯೆಗಳನ್ನು ಪರಿಹರಿಸುವುದು ಸಾಧ್ಯವಿಲ್ಲ. ಇಬ್ಬರೂ ರಾಷ್ಟ್ರೀಯ ಪ್ರಜ್ಞೆಯ, ಸಂಸ್ಕೃತಿಯ, ಬಾಳಿನ ಅವಿಭಾಜ್ಯ ಭಾಗವಾಗಿದ್ದಾರೆ. ಬಹುಶಃ ಗಾಂಧೀಯವರಲ್ಲಿ ರಾಷ್ಟ್ರೀಯ ಸ್ರೋತಗಳೂ ಪರಂಪರೆಗಳೂ ಮೇಲುಗೈ ಪಡೆದಿರುವುದು ಮತ್ತು ನೆಹರೂರವರಲ್ಲಿ ಭವಿಷ್ಯತ್ತಿನ ಕಡೆಗೆ ದೃಷ್ಟಿ ಹಾಗೂ ಇಡೀ ಮಾನವಕುಲವೇ ಪ್ರಗತಿಯತ್ತ ಸಾಗಿ ಹೋಗುವಲ್ಲಿ ಸಾರಭೂತವಾಗಿ ಐಕ್ಯಗೊಂಡಿದೆ ಎಂಬ ಮನೋನಂಬಿಕೆ ಮೇಲುಗೈ ಪಡೆದಿರಬಹುದು.

ಭಾರತವು ಗಾಂಧೀ ಮತ್ತು ನೆಹರೂರವರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವುದಿಲ್ಲ ಆದರೆ ಅವರನ್ನು ಒಂದುಗೂಡಿಸಿ ಸ್ವೀಕರಿಸುವುದು ಎಂದೇ ಭಾವಿಸುವುದು ಒಳಿತು. ಸಮಸ್ಯೆಯೆಂದರೆ ಈ ಇಬ್ಬರು ನಾಯಕರ ಅಭಿಪ್ರಾಯಗಳ ಸಂಪತ್ತಿನಲ್ಲಿ ಯಾವುದನ್ನು ತೆಗೆದುಕೊಳ್ಳಬೇಕು, ಯಾವುದನ್ನು ಬಿಡಬೇಕು, ಅನ್ನುವುದು. ಇದು ವರ್ಗ ಹಾಗೂ ರಾಜಕೀಯ ಮನೋಧರ್ಮಗಳಿಂದ ನಿರ್ಧಾರಿಸಲ್ಪಡುತ್ತದೆ.

ಈಚೆಗಿನ ದಿನಗಳಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಆರ್ಥಿಕ ನೀತಿಯ

ಅನೇಕ ಸ್ವರೂಪಗಳನ್ನು, ಅದರಲ್ಲೂ ವಿಶೇಷವಾಗಿ ಕೈಗಾರಿಕೆ ಮತ್ತು ಕೃಷಿಗಳ ನಡುವಿನ ಅನ್ಯೋನ್ಯ ಸಂಬಂಧ, ರಾಜ್ಯ ವಿಭಾಗದ ಗೃಹ ಕೈಕಸಬುಗಳ ಮತ್ತು ಕೇಂದ್ರೀಕರಣಗಳ ಪಾತ್ರ, ಇವುಗಳನ್ನು ಟೀಕಿಸಲು ಗಾಂಧೀವಾದವನ್ನು ಬಳಸಿಕೊಳ್ಳಲಾಗುತ್ತಿದೆ. ಗಾಂಧೀಯವರ ಸಾಮಾಜಿಕ ಆದರ್ಶಕ್ಕೆ ಸಂಬಂಧಿಸಿ ಹೇಳುವುದಾದರೆ, ಅವರು ಕೈಗಾರಿಕೆಯಲ್ಲೂ ಕೃಷಿಯಲ್ಲೂ ಬಂಡವಾಳವಾದವನ್ನು ಪ್ರತ್ಯೇಕಿಸಿ ಖಂಡಿಸಿದುದು, ವರ್ಗಗಳೂ ಶೋಷಣೆಯೂ ಇಲ್ಲದಂಥ ಸಮಾಜಕ್ಕಾಗಿ ಅವರ ಹಂಬಲ, ಇವು ಇಂದು "ಮರಳಿ ಗಾಂಧೀವಾದಕ್ಕೆ" ಎಂಬ ಕರೆ ನೀಡುತ್ತಿರುವವರ ಹಿತಗಳಿಗೆ ಸರಿಹೊಂದದವಾಗಿವೆ. ಸಾಮಾಜಿಕ ಪರಿವರ್ತನೆ ಹಾಗೂ ಒತ್ತಡಗಳಿಗೆ ಸಂಬಂಧಿಸಿ – ಸತ್ಯಾಗ್ರಹ ಹಾಗೂ ಪಾಲಕತನ ಸಿದ್ಧಾಂತಕ್ಕೆ ಸಂಬಂಧಿಸಿ – ಗಾಂಧೀಯವರ ವಿಧಾನಗಳ ಬಗೆಗೂ ಇದೇ ಮಾತು ಹೇಳಬಹುದು. ಪಾಲಕತನ ಅನ್ನುವುದು ಗಾಂಧೀಯವರ ದೃಷ್ಟಿಯಲ್ಲಿ ಸತ್‌ಸಂಕಲ್ಪಕ್ಕಿಂತಲೂ ಹೆಚ್ಚಿನ ಅರ್ಥ ಹೊಂದಿದ್ದಿತು. ಶಾಸನಗಳ ಮೂಲಕ ಇತ್ಯರ್ಥ, ಸರಕಾರೀ ಹಸ್ತಕ್ಷೇಪ, ಸತ್ಯಾಗ್ರಹ ಆಯುಧದ ಬಳಕೆ, ಇವಾವುವನ್ನೂ ಅವರು ದೂರಸರಿಸಲಿಲ್ಲ. ಹಾಗಾಗಿ ಇಂದು ಮೊಳಗಿಸುತ್ತಿರುವ "ಮರಳಿ ಗಾಂಧೀವಾದಕ್ಕೆ" ಎಂಬ ಘೋಷಣೆಯು ಸತ್ಯಾಗ್ರಹ ಹಾಗೂ ಪಾಲಕತನದ ಸೂತ್ರಗಳನ್ನು ಈಡೇರಿಸಲು ಅಥವಾ ಗಾಂಧೀಯವರ ಅಸಾಧ್ಯಾದರ್ಶ ಸಮಾಜವಾದವನ್ನು ಪುನರುಜ್ಜೀವನಗೊಳಿಸಲು ನಿಜವಾಗಿ ಯತ್ನ ಮಾಡುವ ಯಾವ ಅರ್ಥವನ್ನೂ ನೀಡುವುದಿಲ್ಲ.

ನಾನಾ ಛಾಯೆಗಳ ಬೂರ್ಷ್ವಾ ರಾಜಕಾರಣಿಗಳು ಸತ್ಯಾಗ್ರಹ ಹಾಗೂ ಪಾಲಕತನಕ್ಕೆ ಸಂಬಂಧಿಸಿದ ಗಾಂಧೀಯವರ ವಿಚಾರಗಳನ್ನು ಇಂದಿನ ಹೊಸ ಚಾರಿತ್ರಿಕ ಪರಿಸ್ಥಿತಿಗಳಲ್ಲಿ – ಕಾರ್ಮಿಕ ವರ್ಗವೂ ರೈತಾಪಿ ಜನರೂ ಭಾರಿ ಏಕಸ್ವಾಮ್ಯ ಬಂಡವಾಳದ, ಚೆನ್ನಾಗಿ ಜೇಬು ತುಂಬಿಕೊಂಡಿರುವ ಹಾಗೂ ರಾಜಕಾರಣದಲ್ಲಿ ಹಿಮ್ಮಡಿ ಹುದುಗಿಸಿ ನಿಂತಿರುವ ರಾಷ್ಟ್ರೀಯ ಬೂರ್ಷ್ವಾಸೀಯ ಹಾಗೂ ಬಂಡವಾಳಶಾಹಿ ಭೂಮಾಲೀಕರ ವಿರೋಧವನ್ನು ಎದುರಿಸುತ್ತಿರುವಂಥ ಇಂದಿನ ಚಾರಿತ್ರಿಕ ಪರಿಸ್ಥಿತಿಗಳಲ್ಲಿ – ದುಡಿಯುವ ಜನರ ವರ್ಗ ಪ್ರಜ್ಞೆಯನ್ನು ಮಂದವಾಗಿಸಲು ಬಳಸುತ್ತಿದ್ದಾರೆ.

ಬೂರ್ಷ್ವಾಸೀಯು ತನ್ನ ಸ್ವಾರ್ಥ ವರ್ಗ ಗುರಿಗಳನ್ನು ಸಾಧಿಸಿಕೊಳ್ಳಲು ಗಾಂಧೀಯವರ ಘನತೆಯನ್ನು ತೆರೆಮರೆಯನ್ನಾಗಿ ಬಳಸಲು ಯತ್ನಿಸುತ್ತಿರುವುದನ್ನು ಸಾಮ್ರಾಜ್ಯವಾದ ವಿರೋಧಿ ವಸಾಹತುವಾದ ವಿರೋಧಿ ಶಕ್ತಿಗಳೂ ಪ್ರಜಾಸತ್ತಾತ್ಮಕ ಶಕ್ತಿಗಳೂ ಉಗ್ರವಾಗಿ ಖಂಡಿಸಿವೆ. ಆದರೆ ಗಾಂಧೀಯವರ ಅತ್ಯಂತ ನಿಷ್ಠಾವಂತ ಶಿಷ್ಯರು ಸಹ, (ಉದಾಹರಣೆಗೆ ವಿನೋಬಾ ಭಾವೆಯವರೂ ಹಾಗೆ ಮಾಡಿದರು) ಗಾಂಧೀಯವರ ವಿಚಾರಗಳನ್ನು ಪುನರ್‌ಪರಿಶೀಲಿಸುತ್ತಿದ್ದಾರೆ. ಒಂದು ಕಡೆ ಅವರು ಗಾಂಧೀವಾದದ ಸಾಮಾಜಿಕ ಸ್ವರೂಪಗಳನ್ನು

ಸಂಘಟಿತಗೊಳಿಸಲು ಯತ್ನಿಸುತ್ತಿದ್ದಾರೆ ಮತ್ತು ಮತ್ತೊಂದು ಕಡೆ, ಇಂದಿನ ಆಕ್ರಮಣ ಶೋಷಕ ವರ್ಗಗಳ ವಿರುದ್ಧ ಅಹಿಂಸಾತ್ಮಕ ಪ್ರತಿರೋಧದ ವಿಧಾನವನ್ನು ಬಳಸಲು ತಾವು ಅಸಮರ್ಥರೆಂಬುದನ್ನು ಕಂಡುಕೊಳ್ಳುತ್ತಿದ್ದಾರೆ. ಹಾಗಾಗಿ ಅವರು ನಿರ್ದಿಷ್ಟ ಸಾಮಾಜಿಕ ಕೆಡುಕಿನ ವಿರುದ್ಧ ಅಹಿಂಸಾತ್ಮಕ ಪ್ರತಿರೋಧ ತೋರುವ ಸೂತ್ರದ ಸ್ಥಾನದಿಂದ ಒಟ್ಟಿನ ಮೇಲೆ ಪ್ರತಿರೋಧವನ್ನೇ ತೋರದಿರುವ ಸೂತ್ರದ ಸ್ಥಾನಕ್ಕೆ ಸತತವಾಗಿ ಸರಿದು ಹೋಗುತ್ತಿದ್ದಾರೆ. ಭಾರತೀಯ ಬೂರ್ಜ್ವಾ ರಾಜಕಾರಣಿಗಳೂ ಸಿದ್ಧಾಂತಕರ್ತೃಗಳೂ ಗಾಂಧೀಯವರ ವಿಚಾರಗಳ ಕ್ರಿಯಾಶೀಲ ಸಾಮಾಜಿಕ ಸ್ವರೂಪವನ್ನು ಸಾಮಾಜಿಕ ಹಾಗೂ ರಾಜಕೀಯ ವ್ಯವಹಾರಗಳಲ್ಲಿ ಗಾಂಧೀಯವರು ಯಾವತ್ತೂ ಜನಸಮೂಹಗಳ ಪಕ್ಷ ವಹಿಸಿ ಕಾರ್ಯ ಜರುಗಿಸುತ್ತಿದ್ದುದನ್ನು, ಅವರು ಬಳಸುತ್ತಿದ್ದ ವಿಶಿಷ್ಟ ವಿಧಾನಗಳಲ್ಲೇ ಅಂತಹ ಕಾರ್ಯ ಜರುಗಿಸುವುದನ್ನು, ಮರೆಯುತ್ತಿದ್ದಾರೆ. ಗಾಂಧೀವಾದದ ಪುನರ್ ಪರಿಶೀಲನಕಾರರು ಅದನ್ನು ಶುದ್ಧ ವೈಯಕ್ತಿಕ ನೈತಿಕ ಪರಿಪೂರ್ಣತೆಗೆ ಮಾರ್ಗ ತೋರಿಸುವುದನ್ನಾಗಿ, ಎಲ್ಲ ವರ್ಗಗಳ ನಡುವೆಯೂ ರಾಜಿ ಮನೋಭಾವವನ್ನು ಬಿಂಬಾವಿಂಬಿತವಾಗಿ ಆಗ್ರಹಿಸುವ ಸೂತ್ರವನ್ನಾಗಿ ಪ್ರತಿಬಿಂಬಿಸುವತ್ತವೇ ಹೆಚ್ಚು ಒಲವು ತೋರುತ್ತಿದ್ದಾರೆ.

ಆದರೆ ಇಂದು ಗಾಂಧೀವಾದದ ಸೋಗು ಹಾಕಿಕೊಂಡು ಮೆರೆಯುತ್ತಿರುವ ವಾದಗಳಲ್ಲಿಷ್ಟು ಗಾಂಧೀವಾದವೇನೂ ಅಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ಇಂದು ಭಾರತದಲ್ಲಿ ಗಾಂಧೀಯವರ ಹೆಸರನ್ನು ಅವರ ಸಿದ್ಧಾಂತದ ಸಾರಕ್ಕೇ ವಿರುದ್ಧ ಹೋಗುವಂಥ ಗುರಿ ಸಾಧನೆಗಾಗಿ ಬಳಸಲು ವಿಸ್ತೃತವಾಗಿ ಯತ್ನ ಮಾಡಲಾಗುತ್ತಿದೆ.

ಗಾಂಧೀವಾದವು ಭಾರತೀಯ ರಾಷ್ಟ್ರೀಯ ಬೂರ್ಜ್ವಾಸೀಯ ವಿಚಾರಧಾರೆ ಎಂಬ ಏಕಪಕ್ಷೀಯ ಅಭಿಪ್ರಾಯವು ಮೇಲಿನ ಪ್ರವೃತ್ತಿಗಳನ್ನು ವಿರೋಧಿಸಲು ವಿಶ್ವಾಸಾರ್ಹ ಆಧಾರವಾಗಲಾರದು. ಏಕೆಂದರೆ ಅಂತಹ ಏಕಪಕ್ಷೀಯ ಅಭಿಪ್ರಾಯವು ಈ ಜನಪ್ರಿಯ ವಿಚಾರಧಾರೆಯನ್ನು ತಮ್ಮ ಕೈಗೆ ತೆಗೆದುಕೊಂಡು ಅವನ್ನು ಬಂಡವಾಳ ಹಾಗೂ ಪ್ರತಿಗಾಮಿತ್ವದ ಸೇವೆಯಲ್ಲಿ ತೊಡಗುವಂತೆ ಮಾಡುವ ಗುರಿಯುಳ್ಳ ಮೇಲಿನ ಪ್ರವೃತ್ತಿಗಳ ನಿಜವಾದ ಅರ್ಥವನ್ನು ವ್ಯಕ್ತಪಡಿಸುವುದಿಲ್ಲ.

ಭಾರತೀಯ ಜನರು ಸ್ವಾತಂತ್ರ್ಯ ಗಳಿಸಿಕೊಂಡಂದಿನಿಂದ ಸಾಕಷ್ಟು ಸಮಯ ಸಂದಿದೆ. ಇದು ಗಾಂಧೀವಾದದ ಬಗೆಗೆ ಹೆಚ್ಚು ವಸ್ತುನಿಷ್ಠ ನೋಟ ಬೀರಲು ನಮಗೆ ಅವಕಾಶ ಉಂಟುಮಾಡಿಕೊಟ್ಟಿದೆ. ಗಾಂಧೀಯವರು ಬ್ರಿಟಿಷ್ ಸರಕಾರದೊಂದಿಗೆ ರಾಜಿ ಮಾಡಿಕೊಳ್ಳುವ ಮನೋಪ್ರವೃತ್ತಿ ತೋರಿದರೂ ಅವರ ಸೈದ್ಧಾಂತಿಕ ಹಾಗೂ ರಾಜಕೀಯ ವಿಚಾರಧಾರೆಯು ವಸಾಹತುವಾದದ ಬದ್ಧ

ಶತ್ರುವಾಗಿಯೇ ಇದ್ದಿತು ಮತ್ತು ಗಾಂಧೀಯವರೇ ಸಂಪೂರ್ಣ ರಾಷ್ಟ್ರೀಯ ಸ್ವಾತಂತ್ರ್ಯ ಗಳಿಸಿಕೊಳ್ಳುವ ಅಂತಿಮ ಗುರಿಯನ್ನು ಸಾಧಿಸಲು ಪಣ ತೊಟ್ಟಿದ್ದರು, ಎಂಬುದು ಈಗ ಸ್ಪಷ್ಟವಾಗಿದೆ. ಅವರು ಮಾಡಿಕೊಂಡ ರಾಜಿಗಳು ಸಾಮೂಹಿಕ ಚಳವಳಿಯಲ್ಲಿ ತಾತ್ಕಾಲಿಕ ಹಿಂಜರಿತಗಳನ್ನೇನೋ ಉಂಟುಮಾಡಿದವು. ಆದರೆ ಪ್ರತಿ ಬಾರಿಯೂ ವಿಮೋಚನಾ ಚಳವಳಿಯು ಅವರ ನಾಯಕತ್ವದಲ್ಲಿ ಉನ್ನತ ಮಟ್ಟದಲ್ಲಿ ಪುನರ್ಜನ್ಮ ತಳೆಯುತ್ತಿದ್ದಿತು, ಹೆಚ್ಚು ನಿಷ್ಪಷ್ಟವಾದ ಕೇಳಿಕೆಗಳನ್ನು ಮುಂದಿಡುತ್ತಿದ್ದಿತು. ಗಾಂಧೀಯವರು ಯಾವತ್ತೂ ವಸಾಹತುವಾದ ವಿರೋಧಿ, ಸಾಮ್ರಾಜ್ಯವಾದ ವಿರೋಧಿ, ಕುಲವಾದ ವಿರೋಧಿ ಹೋರಾಟಕ್ಕೆ ಮತ್ತು ಜನರಿಗೆ, ಅದರಲ್ಲೂ ವಿಶೇಷವಾಗಿ ರೈತರಿಗೆ, ಅತ್ಯಂತ ನಿಕಟವಾಗಿದ್ದಂಥ ಯಾವತ್ತೂ ವಾಸ್ತವಿಕವಾಗಿರದಿದ್ದರೂ ಮಾನವೀಯತಾವಾದಂಥ ಸಾಮಾಜಿಕ ನ್ಯಾಯದ ಧ್ಯೇಯಕ್ಕೆ, ನಿಷ್ಠರಾಗಿಯೇ ಇದ್ದುಕೊಂಡಿದ್ದರು, ಎಂಬುದನ್ನು ಅವರ ಜೀವನ ಹಾಗೂ ಕ್ರಿಯೆಗಳೇ ಸ್ವಲ್ಪವೂ ಸಂದೇಹವಿಲ್ಲದಂತೆ ತೋರಿಸಿಕೊಡುತ್ತವೆ.

ಗಾಂಧೀಯವರ ಸಾಮಾಜಿಕ ಮಹತ್ವವನ್ನು ಕುರಿತು ನೆಹರೂರವರು ಹೇಳಿರುವ ಮಾತುಗಳು ಅನೇಕ ರೀತಿಗಳಲ್ಲಿ ತುಂಬ ನಿಜವಾದವು.

ನೆಹರೂ ಬರೆದರು: "ಭಾರತದಲ್ಲಿನ ರಾಷ್ಟ್ರೀಯತಾವಾದಿ ಚಳವಳಿಯೂ ಉಳಿದೆಲ್ಲ ರಾಷ್ಟ್ರೀಯತಾವಾದಿ ಚಳವಳಿಗಳಂತೆಯೇ ಸಾರಭೂತವಾಗಿ ಒಂದು ಬೂರ್ಜ್ವಾ ಚಳವಳಿಯಾಗಿದ್ದಿತು, ಎನ್ನುವುದನ್ನು ನೆನಪಿಸಿಲ್ಲಿಟ್ಟಿರಬೇಕು. ಅದು ಬೆಳವಣಿಗೆಯ ಸಹಜವಾದ ಚಾರಿತ್ರಿಕ ಘಟ್ಟವನ್ನು ಪ್ರತಿನಿಧಿಸುತ್ತಿದ್ದಿತು. ಅದನ್ನು ಒಂದು ಕಾರ್ಮಿಕ ವರ್ಗದ ಚಳವಳಿ ಎಂದು ಪರಿಗಣಿಸುವುದಾಗಲೀ ಟೀಕಿಸುವುದಾಗಲೀ ಸರಿಯಲ್ಲ. ಗಾಂಧೀಯವರು ಈ ಚಳವಳಿಯನ್ನೂ ಅದಕ್ಕೆ ಸಂಬಂಧಿಸಿದಂತೆ ಭಾರತೀಯ ಜನಸಮೂಹಗಳನ್ನೂ ಬಹು ಭಾರಿ ಪ್ರಮಾಣದಲ್ಲಿ ಪ್ರತಿನಿಧಿಸಿದ್ದರು ಮತ್ತು ಅಷ್ಟರ ಮಟ್ಟಿಗೆ ಅವರು ಭಾರತೀಯ ಜನರ ವಾಣಿಯಾಗಿದ್ದರು. ಅವರು ಅನಿವಾರ್ಯವಾಗಿಯೇ ರಾಷ್ಟ್ರೀಯತಾವಾದಿ ವಿಚಾರಧಾರೆಯ ಪರಿಮಿತಿಯೊಳಗೇ ಕಾರ್ಯ ಜರುಗಿಸಿದರು. ಆದರೆ ಜನಸಮೂಹಗಳನ್ನು ಮೇಲಿನ ಮಟ್ಟಕ್ಕೆ ಜಾಗೃತಗೊಳಿಸಬೇಕು ಎಂಬುದೇ ಅವರ ಉತ್ಕಟೇಚ್ಛೆಯಾಗಿದ್ದಿತು. ಈ ನಿಟ್ಟಿನಲ್ಲಿ ಅವರು ಯಾವತ್ತೂ ರಾಷ್ಟ್ರೀಯತಾವಾದಿ ಚಳವಳಿಗೂ ಮುಂದಿದ್ದರು ಮತ್ತು ಆ ಚಳವಳಿಯನ್ನು ಕ್ರಮೇಣ, ತಮ್ಮ ಸ್ವಂತ ವಿಚಾರಧಾರೆಯ ಮಿತಿಗಳೊಳಗೇ, ಆ ದಿಕ್ಕಿಗೆ ಬದಲುವಂತೆ ಮಾಡಿದರು.

"...ರಾಷ್ಟ್ರೀಯತಾವಾದಿ ಮಟ್ಟದಲ್ಲಿ ಕಾರ್ಯ ಜರುಗಿಸುತ್ತ, ಗಾಂಧೀಯವರು ವರ್ಗ ಸಂಘರ್ಷದ ವಿಷಯ ಚಿಂತಿಸುವುದಿಲ್ಲ ಮತ್ತು ವರ್ಗಗಳ ನಡುವಿನ ವ್ಯತ್ಯಾಸಗಳನ್ನು ಸರಿಹೊಂದಿಸಲು ಯತ್ನಿಸುತ್ತಾರೆ, ಎಂಬುದು ಸರ್ವಥಾ ನಿಜವಾದುದು. ಆದರೆ ಅವರು ನಡೆಸಿದ ಹಾಗೂ ಜನರಿಗೆ ಬೋಧಿಸಿದ ಕ್ರಿಯೆಯು

ಅನಿವಾರ್ಯವಾಗಿಯೇ ಸಾಮೂಹಿಕ ಪ್ರಶ್ನೆಯನ್ನು ಅತ್ಯುನ್ನತ ಮಟ್ಟಕ್ಕೇರಿಸಿದೆ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಬಹುಮುಖ್ಯವನ್ನಾಗಿ ಮಾಡಿದೆ. ಎಲ್ಲ ಅವಸ್ಥೆಗಳ ಅಲ್ಲಿ ಪಟ್ಟಭದ್ರ ಹಿತಗಳ ಮಧ್ಯದಲ್ಲಿ ಜನಸಮೂಹಗಳನ್ನು ಮೇಲಿನ ಮಟ್ಟಕ್ಕೆ ಏರಿಸಬೇಕೆಂದು ಅವರು ಒತ್ತಿ ಹೇಳುತ್ತಿದ್ದುದು ರಾಷ್ಟ್ರೀಯ ಚಳವಳಿಗೆ ಜನಸಮೂಹಗಳ ಪರವಾಗಿ ಒಂದು ಪ್ರಬಲ ತಿರುವು ನೀಡಿತು."*

ಗಾಂಧೀಯವರ ಸಿದ್ಧಾಂತದಲ್ಲಿನ ಪ್ರಜಾಸತ್ತಾತ್ಮಕ ತಿರುಳನ್ನು ನಿರ್ವೀರ್ಯಗೊಳಿಸಲು ಮಾಡುತ್ತಿರುವ ಎಲ್ಲ ಯತ್ನಗಳನ್ನೂ ನಿಷ್ಫಲಗೊಳಿಸುವುದು ಭಾರತದ ಪುರೋಗಾಮಿ ವೃತ್ತಗಳ ಹಿತಗಳಿಗೇ ಒಳಿತಾದುದು. ಭಾರತೀಯ ಬೂರ್ಜ್ವಾ ಹಾಗೂ ಭೂಮಾಲೀಕ ಪ್ರತಿಗಾಮಿಗಳು ಗಾಂಧೀಯವರ ಹೆಸರನ್ನೂ ವಿಚಾರಗಳನ್ನೂ ಸ್ವಾರ್ಥಕ್ಕಾಗಿ ಬಳಸಿಕೊಳ್ಳಲು ಬಿಡಬಾರದು. ಅಂಥ ಜನರು ಜನಸಮೂಹಗಳ ಹಿತಗಳಿಗೆ ಪ್ರತಿಕೂಲವಾಗಿ ಗಾಂಧೀಯವರ ಸಾಮ್ರಾಜ್ಯವಾದ ವಿರೋಧಿ ಭಾವನೆಗಳನ್ನೂ ಪ್ರಜಾಸತ್ತಾತ್ಮಕ ಮಾನವೀಯತೆಯನ್ನೂ ಉಪೇಕ್ಷಿಸುತ್ತಾರೆ.

ಭಾರತದ ಸುಸಂಗತ ಕ್ರಾಂತಿಕಾರಿಗಳೂ ವೈಜ್ಞಾನಿಕ ಸಮಾಜವಾದದ ಬೆಂಬಲಿಗರೂ ಯಾವತ್ತೂ ಗಾಂಧೀವಾದದೊಂದಿಗೆ ಮೂಲಭೂತ ಸೈದ್ಧಾಂತಿಕ ಹಾಗೂ ತಾಂತ್ರಿಕ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದಾರೆ. ಆದರೆ ಅವರು ಗಾಂಧೀಯವರ ಕಾರ್ಯವನ್ನೂ ಅವರ ಉದಾತ್ತ ಗುರಿಗಳನ್ನೂ ಪ್ರಾಮಾಣಿಕ ಗೌರವದಿಂದ ಕಾಣುತ್ತಾರೆ. ಭಾರತೀಯ ಜನರ ಉತ್ತಮ ಭವಿಷ್ಯತ್ತಿಗಾಗಿ ನಡೆಸುತ್ತಿರುವ ಹೋರಾಟದಲ್ಲಿ ಅವರು ಗಾಂಧೀಯವರ ಪ್ರಜಾಸತ್ತಾತ್ಮಕ ಹಾಗೂ ಸಾಮಾಜಿಕ ಧ್ಯೇಯವನ್ನು ಬಳಸಿಕೊಳ್ಳುತ್ತಾರೆ, ಅವನ್ನು ಹೆಚ್ಚು ವಾಸ್ತವಿಕವನ್ನಾಗಿ ವೈಜ್ಞಾನಿಕವನ್ನಾಗಿ ಮಾಡುತ್ತಾರೆ. ಅವರು ಗಾಂಧೀಯವರ ಹೋರಾಟ ವಿಧಾನಗಳನ್ನೂ ಅವರ ಸಾಮೂಹಿಕ ಚಳವಳಿಯ ತಂತ್ರಗಳನ್ನೂ ತಾವೂ ಬಳಸುತ್ತಾರೆ. ಗಾಂಧೀಯವರು ಪರಿಷ್ಕರಿಸಿದ ಚಳವಳಿಯ ಮಾದರಿಯೂ ಜಾಗತಿಕ ಕ್ರಾಂತಿಕಾರಿ ಚಳವಳಿಯು ಪರಿಷ್ಕರಿಸಿದ ಸಾಮೂಹಿಕ ರಾಷ್ಟ್ರೀಯ ವಿಮೋಚನೆಯ ಹಾಗೂ ವರ್ಗ ಹೋರಾಟದ ಸಾರ್ವತ್ರಿಕ ರೂಪಗಳ ಒಂದು ಅಂಗಭಾಗವೆಂದೇ ಅವರು ಪರಿಭಾವಿಸುತ್ತಾರೆ.

---

* Jawaharlal Nehru, *India and the World*, George Allen and Unwin Ltd., London, 1936, pp. 172-173, 174-175. –ಸಂ.

* * *

ಸೋವಿಯತ್ ಸಂಶೋಧನಕಾರರು ಬಹು ವೇಳೆ ಗಾಂಧೀವಾದದ ವಿವೇಚನೆ ನಡೆಸಿದ್ದಾರೆ. ಹಿಂದೆ ಕೆಲವು ವೇಳೆ ಅವರು ತಮ್ಮ ಮನೋಧರ್ಮದಲ್ಲಿ ಒಂದು ರೀತಿಯ ಏಕಪಕ್ಷೀಯತೆಯಿಂದಾಗಿ ತಪ್ಪುಗಳನ್ನು ಮಾಡಿದರು. ಈ ತಪ್ಪುಗಳು ನಾನಾ ಕಾರಣಗಳಿಂದಾಗಿ ಉಂಟಾದವು. ಭಾರತವು ಸೋವಿಯತ್ ಒಕ್ಕೂಟದಿಂದಲೂ ಅಂತರರಾಷ್ಟ್ರೀಯ ಕಾರ್ಮಿಕರ ಚಳವಳಿಯಿಂದಲೂ ದೀರ್ಘ ಕಾಲ ಪ್ರತ್ಯೇಕಗೊಂಡಿದ್ದುದೂ, ಭಾರತದ ಬಗೆಗೆ ಅದರ ವಿಶಿಷ್ಟ ಪರಿಸ್ಥಿತಿಗಳ ಬಗೆಗೆ, ಅದರ ತುಂಬ ಸ್ವೋಪಜ್ಞವಾದ ರಾಷ್ಟ್ರೀಯ ಪರಂಪರೆಗಳ ಬಗೆಗೆ, ಸಾಕಷ್ಟು ತಿಳಿವಳಿಕೆ ಇಲ್ಲದಿದ್ದುದೂ, ಅವಕ್ಕೆ ಮುಖ್ಯ ಕಾರಣಗಳಾಗಿದ್ದವು. ಗಾಂಧೀವಾದದಲ್ಲಿ ಭಾರತದ ರಾಷ್ಟ್ರೀಯ ಪರಂಪರೆಗಳು ತುಂಬ ಶಕ್ತಿವತ್ತಾಗಿ ಪ್ರತಿಬಿಂಬಿತವಾಗಿವೆ.

ಗಾಂಧೀಯವರ ಸೈದ್ಧಾಂತಿಕ ವಿಚಾರಗಳ ಹಾಗೂ ಚಾರಿತ್ರಿಕ ಪಾತ್ರದ ಮೌಲ್ಯ ನಿರ್ಣಯಿಸಲು ಮಾರ್ಕ್ಸ್‌ವಾದಿಗಳು ಮಾಡಿರುವ ಯತ್ನಗಳೆಲ್ಲ ಮೂಲತಃ ರಾಷ್ಟ್ರೀಯ-ವಿಮೋಚನಾ ಚಳವಳಿಯ ಪರಿಸ್ಥಿತಿಗಳಲ್ಲಿ ಹಾಗೂ ಈಚೆಗಷ್ಟೆ ವಸಾಹತು ಅಧೀನತೆಯಿಂದ ಮುಕ್ತಗೊಂಡ ತುಲನಾತ್ಮಕವಾಗಿ ಎಳೆಯದಾದ ರಾಷ್ಟ್ರೀಯ ರಾಜ್ಯವೊಂದರ ಅಸ್ತಿತ್ವದ ಪರಿಸ್ಥಿತಿಗಳಲ್ಲಿ ವೈಜ್ಞಾನಿಕ ಸಮಾಜವಾದದ ಹಾಗೂ ಗಾಂಧೀವಾದದ ಸ್ಥಾನ ಏನು ಎಂಬುದನ್ನು ಗೊತ್ತು ಹಚ್ಚುವ ಯತ್ನಗಳೇ ಆಗಿವೆ. ಇದು ಎರಡೂ ವಿಚಾರಧಾರೆಗಳನ್ನು ತುಲನೆ ಮಾಡಿ ನೋಡುವ ಪ್ರಶ್ನೆಯಲ್ಲ. ಏಕೆಂದರೆ ಅವು ಪರಸ್ಪರ ಅಸಂಗತವಾದವು, ವಿಜ್ಞಾನವು ಅಸಾಧ್ಯಾದರ್ಶವಾದದಿಂದ ಎಷ್ಟು ಭಿನ್ನವೋ ಇವೂ ಅಷ್ಟೇ ಭಿನ್ನಭಿನ್ನವಾದವು. ಇದು ದೇಶವೊಂದರ ವಿಚಾರಧಾರೆಯ ಹಾಗೂ ರಾಜಕಾರಣದ ಬೆಳವಣಿಗೆಯ ಪ್ರವೃತ್ತಿಗಳನ್ನು ಪರಿಶೀಲಿಸುವುದಾಗಿದೆ.

ಭಾರತದಲ್ಲಿ ಗಾಂಧೀವಾದದ ವಿಚಾರಗಳು ಯಾವತ್ತೂ ವೈಜ್ಞಾನಿಕ ಸಮಾಜವಾದದ ವಿಚಾರಗಳಿಗಿಂತ ಹೆಚ್ಚಿನ ಪ್ರಾಬಲ್ಯ ಹೊಂದಿದ್ದರೂ ಜನಸಮೂಹಗಳ ಮೇಲೆ ಪ್ರಭಾವಕ್ಕಾಗಿ ಹೋರಾಟ ಜರುಗುತ್ತಿರುವುದು ಈ ಎರಡು ಸೈದ್ಧಾಂತಿಕ ಪ್ರವೃತ್ತಿಗಳ ನಡುವೆಯೇ. ಭಾರತೀಯ ಬೂರ್ಜ್ವಾಸಿಯು ಇದನ್ನು ಚೆನ್ನಾಗಿ ತಿಳಿದಿದ್ದಿತು. ಆದ್ದರಿಂದಲೇ ಅದು ಸ್ವಾತಂತ್ರ್ಯ ಹೋರಾಟದ ವರ್ಷಗಳಲ್ಲಿ ವೈಜ್ಞಾನಿಕ ಸಮಾಜವಾದದ ವಿರುದ್ಧ ಬಳಸಲು ಸಾಧ್ಯವಿರುವಂಥ ವಿಚಾರಧಾರೆಯನ್ನಾಗಿ ಗಾಂಧೀವಾದಕ್ಕೆ ಅತ್ಯುನ್ನತ ಬೆಲೆ ಕಟ್ಟಿದ್ದಿತು. ಏಕೆಂದರೆ ಆ ವರ್ಷಗಳಲ್ಲಿ ವೈಜ್ಞಾನಿಕ ಸಮಾಜವಾದವು ಭಾರತದಲ್ಲಿ, ಅದರಲ್ಲೂ ವಿಶೇಷವಾಗಿ ವಿದ್ಯಾವಂತ ನಗರೀಯ ಕ್ರಾಂತಿಕಾರಿ ವೃತ್ತಗಳಲ್ಲೂ ಪ್ರಜಾಸತ್ತಾತ್ಮಕ ಯುವ ಜನರ ಸಮು

ವೆಯೂ. ಏನು ವೇಗ ನೆಲೆಯೂರುತ್ತಿದ್ದಿತು. ರಾಷ್ಟ್ರೀಯ ಬೂರ್ಷ್ವಾಸೀಯೂ ಅದರ ಪಾರ್ಟಿಯಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸೂ, ಗಾಂಧೀವಾದದಲ್ಲಿ ಕಾರ್ಮಿಕರ ಮಧ್ಯೆ ವೈಜ್ಞಾನಿಕ ಸಮಾಜವಾದದ ವಿಚಾರಗಳು ಹರಡುವುದರ ವಿರುದ್ಧ ಒಂದು ರೀತಿಯ ಹತ್ಯಾರವನ್ನು ಕಂಡುಕೊಂಡವು; ಅದೇ ಹೊತ್ತಿಗೆ ಗಾಂಧೀವಾದವು ಸಾಮ್ರಾಜ್ಯವಾದ ವಿರೋಧಿ ರಾಷ್ಟ್ರೀಯ ಹಿತಗಳನ್ನೂ ವ್ಯಕ್ತಪಡಿಸುತ್ತಿದ್ದಿತು.

ಇಂದೂ ಭಾರತೀಯ ಸಮಾಜದಲ್ಲಿ ಗಾಂಧೀವಾದವೂ ವೈಜ್ಞಾನಿಕ ಸಮಾಜವಾದವೂ ಎರಡು ಪ್ರಧಾನ ಸೈದ್ಧಾಂತಿಕ ಪ್ರವೃತ್ತಿಗಳನ್ನು ಪ್ರತಿನಿಧಿಸುತ್ತವೆ.

ಆದರೀಗ ಆಧುನಿಕ ಭಾರತದಲ್ಲಿ ಗಾಂಧೀವಾದಕ್ಕೂ ವೈಜ್ಞಾನಿಕ ಸಮಾಜವಾದಕ್ಕೂ ಸಂಬಂಧಿಸಿ ಮನೋಭಾವಗಳು ಎಂತಹುವಾಗಿವೆ? ಎರಡು ಮುಖ್ಯ ಮನೋಭಾವಗಳಿವೆ. ಒಂದು ಕಡೆ ಗಾಂಧೀವಾದವನ್ನು ಸಾಮ್ರಾಜ್ಯವಾದ ವಿರೋಧವ ಕುರಿತು ಮತ್ತು ರೈತ ಸಮಾಜವಾದದ ಕುರಿತು ಗಾಂಧೀಯವರ ಅಭಿಪ್ರಾಯಗಳನ್ನು ಒಳಗೊಂಡ ಪದ್ಧತಿಯನ್ನಾಗಿ ಅರ್ಥಮಾಡಿಕೊಳ್ಳಲಾಗಿದೆ. ಮತ್ತೊಂದು ಕಡೆ ಅನೇಕಾನೇಕ ಬೂರ್ಷ್ವಾ ಚಿಂತನೆಯ ಪಂಥಗಳು ಗಾಂಧೀವಾದಕ್ಕೆ ನೀಡಿರುವ ನಾನಾ ಅರ್ಥವ್ಯಾಖ್ಯಾನಗಳಿವೆ. ಇವು ಬಹುವೇಳೆ ಪರಸ್ಪರ ಮತ್ತು ಗಾಂಧೀವಾದದ ಮೂಲ ಪ್ರಕಲ್ಪನೆಗಳಿಗೇ ವಿರುದ್ಧವಾಗಿವೆ. ಅವು ಗಾಂಧೀಯವರ ಕೆಲವು ವಿಚಾರಗಳನ್ನಷ್ಟೆ ಎತ್ತಿಕೊಂಡು ಅವುಗಳನ್ನು ತಮ್ಮ ವಿಶಿಷ್ಟ ವರ್ಗ ಹಿತಗಳಿಗೆ ತಕ್ಕಂತೆ ಸರಿಹೊಂದಿಸಿಕೊಳ್ಳುತ್ತಿವೆ. ರಾಷ್ಟ್ರೀಯ ವಿಮೋಚನೆಗಾಗಿ ಭಾರತೀಯ ಜನರ ಹೋರಾಟದ ಒಂದು ನಿಷ್ಪನ್ನ ಎಂಬಂತಹ ಮೊದಲನೆಯ ವ್ಯಾಖ್ಯಾನದಲ್ಲಿ ಗಾಂಧೀವಾದವು ಸಾಮಾನ್ಯ ಪ್ರಜಾಸತ್ತಾತ್ಮಕ ಸ್ವರೂಪದ ಸಾಕಷ್ಟು ಗಮನೀಯ ಅಂಶಗಳನ್ನು ಒಳಗೊಂಡಿದೆ. ಈ ಕಾರಣದಿಂದಾಗಿ ಅದು ಯಾವುದೇ ನಿಜಕ್ಕೂ ಪ್ರಜಾಸತ್ತಾತ್ಮಕವಾದ ಪುರೋಗಾಮಿಯಾದ ಚಳವಳಿಯೊಂದಿಗೆ ಸಾಮರಸ್ಯ ಹೊಂದಿದೆ ಎಂದು ಹೇಳಬಹುದಾಗಿದೆ. ಭವಿಷ್ಯತ್ತಿನಲ್ಲಿ ಒಂದು ಸಂಯುಕ್ತ ಸಾಮ್ರಾಜ್ಯವಾದ ವಿರೋಧಿ ವಸಾಹತುವಾದ ವಿರೋಧಿ, ಕೋಮುವಾದ ವಿರೋಧಿ, ಯುದ್ಧ ವಿರೋಧಿ, ಸಾಮಂತಶಾಹಿ ವಿರೋಧಿ ಹಾಗೂ ಏಕಸ್ವಾಮ್ಯ ವಿರೋಧಿ ಹೋರಾಟವನ್ನು ಭಾರತದಲ್ಲಿ ಎಲ್ಲ ಪ್ರಜಾಸತ್ತಾತ್ಮಕ ಹಾಗೂ ಪುರೋಗಾಮಿ ಶಕ್ತಿಗಳೂ ಹೂಡಲಿರುವುದು ಮತ್ತು ವಿಶಾಲ ಜನಸಮೂಹಗಳ ಹಿತಗಳನ್ನು ರಕ್ಷಿಸಲಿರುವುದು. ಇದರ ಸಾಧ್ಯತೆಯನ್ನು ಇಲ್ಲಿ ಆಲೋಚಿಸುವುದು ಕಷ್ಟವೇನಲ್ಲ. ವೈಜ್ಞಾನಿಕ ಸಮಾಜವಾದದ ಬೆಂಬಲಿಗರೂ ಗಾಂಧೀವಾದದ ಬೆಂಬಲಿಗರೂ ಒಟ್ಟಾಗಿ ಶಾಂತಿ, ರಾಷ್ಟ್ರೀಯ ಸ್ವಾತಂತ್ರ್ಯ ದೃಢೀಕರಣ, ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ಪ್ರಗತಿಗಳಿಗಾಗಿ ಹೋರಾಟದಲ್ಲಿ ಒಂದು ಪ್ರಬಲ ಏಕೀಕೃತ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗವನ್ನು ರೂಪಿಸಬಹುದು.

ಪ್ರಸ್ತುತದಲ್ಲಿ ಎಲ್ಲ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಶೀಲ ಸಾಮಾಜಿಕ ಚಳವಳಿಗಳೂ, ಭಾರತದಲ್ಲಿನ ಚಳವಳಿಗಳೂ ಸಹ, ಕೆಲವು ಸಾಮಾನ್ಯ ಗುರಿಗಳಿಂದ ಐಕ್ಯಗೊಂಡಿವೆ. ಭಾರತೀಯ ಮಾರ್ಕ್ಸ್‌ವಾದಿಗಳು ಸಲಹೆ ಮಾಡಿರುವ ಈ ಗುರಿಗಳಲ್ಲಿ ಒಂದೆಂದರೆ – ವಿದೇಶೀ ಹಾಗೂ ರಾಷ್ಟ್ರೀಯ ಏಕಸ್ವಾಮ್ಯ ಬಂಡವಾಳವಾದದ ಪ್ರಭಾವವನ್ನು ಮೊದಲು ಸೀಮಿತಗೊಳಿಸಿ ಅನಂತರ ತೊಡೆದು ಹಾಕುವುದು ಮತ್ತು ದೇಶವನ್ನು ಬಂಡವಾಳವಾದೀ ಬೆಳವಣಿಗೆಯ ಮಾರ್ಗದಿಂದ ಕ್ರಮೇಣ ದಿಕ್ಚ್ಯುತಿಗೊಳಿಸಲು ಹಾದಿಯನ್ನು ಸಿದ್ಧಗೊಳಿಸುವುದು. ಈ ಭಾರಿ ಪ್ರತೀಕ್ಷೆಯನ್ನು ಈಡೇರಿಸಲು ಸಂಯುಕ್ತ ಯತ್ನಗಳು ಅವಶ್ಯ. ಅದು ಗಾಂಧೀವಾದಿಗಳ ಮಧ್ಯೆ ಮತ್ತಷ್ಟು ಭಿನ್ನತೆ ಉಂಟುಮಾಡಿ ಸಾಮಾಜಿಕ ಪ್ರಗತಿಗೆ ಬೆಂಬಲಿಸುವವರೆಲ್ಲರ ದೃಢೀಕರಣಕ್ಕೆ ಉತ್ತೇಜನ ನೀಡುವುದು.

ಗಾಂಧೀವಾದದ ಎರಡನೆಯ ಅರ್ಥವ್ಯಾಖ್ಯಾನಕ್ಕೆ ಸಂಬಂಧಿಸಿ ಹೇಳುವುದಾದರೆ, ಇಲ್ಲಿ ವೈಜ್ಞಾನಿಕ ಸಮಾಜವಾದದೊಂದಿಗೆ ಸಾಮಾನ್ಯ ನೆಲೆ ಕಂಡುಕೊಳ್ಳುವ ಯಾವುದೇ ಯತ್ನವೂ ಕೇವಲ ನಿರರ್ಥಕ. ಈ ಪ್ರಸಂಗದಲ್ಲಿ ಗಾಂಧೀವಾದವನ್ನು ಭಾರತೀಯ ಭಾರಿ ಬೂರ್ಷ್ವಾಸೀಯು ಹಾಗೂ ಪ್ರತಿಗಾಮಿ ಶಕ್ತಿಗಳ ಸಂಕುಚಿತ ವರ್ಗ ಹಿತಗಳಿಗಾಗಿ ಬಳಸಿಕೊಳ್ಳಲಾಗುತ್ತದೆ. ಈ ಪ್ರತಿಗಾಮಿ ಶಕ್ತಿಗಳು ಗಾಂಧೀಯವರ ಸಾಮಾಜಿಕ ಧ್ಯೇಯಗಳನ್ನು ಪ್ರಜಾಸತ್ತಾತ್ಮಕ ಚಳವಳಿಯ ವಿರುದ್ಧ ಬಳಸಲು ಯತ್ನಿಸುತ್ತಿವೆ. ಗಾಂಧೀಯವರ ಸಾಮಾಜಿಕ ಧ್ಯೇಯಗಳಲ್ಲಿರುವ ಬಂಡವಾಳವಾದ ವಿರೋಧಿ ಸಾರವನ್ನು ನಿಸ್ಸತ್ವಗೊಳಿಸುವುದು ಅವುಗಳ ಉದ್ದೇಶ.

ಗಾಂಧೀವಾದವನ್ನು ವೈಜ್ಞಾನಿಕ ಸಮಾಜವಾದದ ದೃಷ್ಟಿಕೋನದಿಂದ ವಿಶ್ಲೇಷಿಸಿದಲ್ಲಿ ಅದು ಗಾಂಧೀವಾದಕ್ಕೂ ಬೂರ್ಷ್ವಾ ಹಿತಗಳಿಗೂ ವಿಚಾರಗಳಿಗೂ ನಡುವೆ ಒಂದು ರೀತಿಯ ಬಾಂಧವ್ಯ ಇರುವುದನ್ನು ತೋರಿಸಿಕೊಡುತ್ತದಷ್ಟೆ ಅಲ್ಲ (ಇದು ಯಾವುದೇ ರಾಷ್ಟ್ರೀಯ ಸುಧಾರಣಾವಾದದಲ್ಲಿ ಹಾಗೂ ಅಸಾಮ್ಯ ವರ್ಗ ಸಮಾಜವಾದದಲ್ಲಿ ತೀರ ಸಹಜವಾದುದೇ, ಅನಿವಾರ್ಯವಾದುದೇ) ಬೂರ್ಷ್ವಾಸೀಯ ವರ್ಗ ಹಿತಗಳ ದೃಷ್ಟಿಕೋನದಿಂದ ಗಾಂಧೀವಾದದ ಒಂದು ರೀತಿಯ ಅಂಗೀಕಾರಾರ್ಹತೆಯನ್ನೂ ತೋರಿಸಿಕೊಡುತ್ತದೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ – ಗಾಂಧೀವಾದವು ಬಂಡವಾಳಶಾಹಿ ಸಮಾಜವನ್ನು ನೈತಿಕ ಹಾಗೂ ಧಾರ್ಮಿಕ ನೆಲೆಗಳಿಂದ ನಿರ್ದಾಕ್ಷಿಣ್ಯವಾಗಿ ಬಯಲುಮಾಡುತ್ತದೆ. ನಿಜ. ಆದರೆ ಇದರ ಜೊತೆಗೆ ಅದು ಈ ಸಮಾಜವನ್ನು ಬದಲಿಸಲು ಎಂತಹ ವಿಧಾನಗಳನ್ನು ಮುಂದಿಡುತ್ತದೆಂದರೆ ಅವು ಕ್ರಾಂತಿಕಾರಿ ಆಂದೋಳನಗಳನ್ನು ತಪ್ಪಿಸಲಷ್ಟೆ ನೆರವಾಗುತ್ತವೆ. ಈ ಲಕ್ಷಣವು ಭಾರತೀಯ ಬೂರ್ಷ್ವಾಸೀಯ ಸಹಾನುಭೂತಿಗೆ ಪಾತ್ರವಾಯಿತು. ಗಾಂಧೀಯವರು ಬೂರ್ಷ್ವಾ ನೈತಿಕತೆಯ ಬಗೆಗೂ

ಬೂರ್ಷ್ವಾ ಜೀವನ ವಿಧಾನದ ಬಗೆಗೂ ಟೀಕಾತ್ಮಕ ಮನೋಧರ್ಮ ತಳೆದರೂ ಮೇಲಿನ ಅಂಶದಿಂದಾಗಿ ಬೂರ್ಷ್ವಾಸೀಯು ಗಾಂಧೀವಾದದ ಬಗೆಗೆ ಸಹಾನುಭೂತಿ ತೋರುವಂತಾಯಿತು.

ಆದರೆ ಗಾಂಧೀವಾದವು ವೈಜ್ಞಾನಿಕ ಸಮಾಜವಾದದೊಂದಿಗೆ ಸರಿಹೊಂದುವಂಥ ಅಂಶಗಳನ್ನೂ ಒಳಗೊಂಡಿದೆ. ಇದು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಷ್ಟೆ ಅಲ್ಲ ಕಾಣುವುದು. ಅಸಾಧ್ಯಾದರ್ಶವಾದಿಯಾದ ಹಾಗೂ ರೂಢಿಚ್ಯುತವಾದ ಸರ್ವೋದಯ ಧ್ಯೇಯವು ಜನಸಮೂಹಗಳ ಸಂಕ್ಷೇಮದ ಬಗೆಗೆ ಪ್ರಾಮಾಣಿಕ ಕಾಳಜಿಯನ್ನೇನೋ, ದುಡಿಯುವ ಜನರ ಸ್ಥಿತಿಯನ್ನು ಸುಧಾರಿಸಿ ಸಾಮಾಜಿಕ ನ್ಯಾಯದ ಸಮಾಜವನ್ನು ಉಂಟುಮಾಡುವ ಬಯಕೆಯನ್ನೇನೋ ವ್ಯಕ್ತಪಡಿಸುತ್ತದೆ. ಅಸಾಧ್ಯಾದರ್ಶವಾದೀ ಅಥವಾ ರಾಷ್ಟ್ರೀಯತಾ ಸಮಾಜವಾದದ ಎಲ್ಲ ರೂಪಾಂತರಗಳಂತೆಯೇ ಇದೂ ಒಂದು ಶತಮಾನಕ್ಕೂ ಹೆಚ್ಚಿನ ಕಾಲದ ಹಿಂದೆ ವೈಜ್ಞಾನಿಕ ಸಮಾಜವಾದವು ಮುಂದಿಟ್ಟ ಅನೇಕ ಸೂತ್ರಗಳನ್ನು ವ್ಯಕ್ತಪಡಿಸುತ್ತದೆ. ಎಲ್ಲರೂ ಕಡ್ಡಾಯವಾಗಿ ದುಡಿಯಬೇಕು, ಮಾನವನಿಂದ ಮಾನವನ ಶೋಷಣೆ ಕೊನೆಗಾಣಬೇಕು, ಸಮಾಜವು ವರ್ಗಗಳಾಗಿ ವಿಭಜಿತವಾಗಿರುವುದು ಹೋಗಬೇಕು, ಮೂಲ ಉತ್ಪಾದನಾ ಸಾಧನಗಳು ಸಾರ್ವಜನಿಕ ಒಡೆತನದಲ್ಲಿರಬೇಕು, ಭೌತಿಕ ಸಂಪತ್ತನ್ನು ಕೆಲಸಕ್ಕನುಗುಣವಾಗಿ ಹಂಚಬೇಕು – ಇವೇ ಆ ಕೆಲವು ಸೂತ್ರಗಳಾಗಿವೆ. ಭಾರತೀಯ ಜನರ ಮುಂದಿರುವ ಅತ್ಯಂತ ಮುಖ್ಯ ಸಮಸ್ಯೆಗಳಿಗೆ ಸಂಬಂಧಿಸಿ ಗಾಂಧೀವಾದದ ಹಾಗೂ ವೈಜ್ಞಾನಿಕ ಸಮಾಜವಾದದ ಮನೋಧರ್ಮಗಳಲ್ಲಿ ಹೆಚ್ಚಿನ ಸಾಮ್ಯತೆಗಳು ಅಡಗಿರುವುದು ಇಲ್ಲೇ. ಇತರೆಲ್ಲ ವಿಷಯಗಳಿಗೆ ಸಂಬಂಧಿಸಿ ಇವೆರಡೂ ಹೆಚ್ಚಾಗಿ ಭಿನ್ನವಾಗಿಯೇ ಇವೆ. ಈ ಭಿನ್ನಾಂಶಗಳನ್ನು ಎಲ್ಲೆಲ್ಲೂ ಕಾಣಬಹುದು. ಅವು ಬಂಡವಾಳವಾದವನ್ನು ಟೀಕಿಸುವ ರೀತಿಯಲ್ಲಿ, ಸಮಾಜವಾದದ ಧ್ಯೇಯವನ್ನು ವಿವರಿಸುವ ರೀತಿಯಲ್ಲಿ, ಅದನ್ನು ಸಾಧಿಸಲು ಸಲಹೆ ಮಾಡಿರುವ ವಿಧಾನಗಳಲ್ಲಿ, ವರ್ಗಗಳಿಗೆ ಸಂಬಂಧಿಸಿ ಹಾಗೂ ವರ್ಗ ಹೋರಾಟಕ್ಕೆ ಸಂಬಂಧಿಸಿ, ಭವಿಷ್ಯತ್ತಿನ ರಾಜ್ಯಕ್ಕೆ ಸಂಬಂಧಿಸಿ, ಅವು ಹೊಂದಿರುವ ಪ್ರಕಲ್ಪನೆಗಳಲ್ಲಿ, ಇಳೆಯ ಮೇಲೆ ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವಂಥ ಚಾರಿತ್ರಿಕ ಭವಿತವ್ಯವನ್ನು ಹೊಂದಿರುವಂಥ ಹಾಗೂ ಅದನ್ನು ಸ್ಥಾಪಿಸಲು ನಿಜಕ್ಕೂ ಸಾಮರ್ಥ್ಯ ಹೊಂದಿರುವಂಥ ಸಾಮಾಜಿಕ ಹಾಗೂ ಪಾರ್ಟಿ ರಾಜಕೀಯ ಶಕ್ತಿಗಳಾವುವು ಎನ್ನುವುದನ್ನು ಗೊತ್ತುಪಡಿಸುವುದರಲ್ಲಿ, ಅವುಗಳ ನಡುವಿನ ಈ ಭಿನ್ನತೆಗಳನ್ನು ಕಾಣಬಹುದು. ಆಧುನಿಕ ಸಮಾಜವನ್ನು ಬದಲಿಸುವ ಸಿದ್ಧಾಂತ ಹಾಗೂ ಕಾರ್ಯಾಚರಣೆಯ ಈ ಎಲ್ಲ ಮೂಲ ಪ್ರಶ್ನೆಗಳಿಗೆ ಸಂಬಂಧಿಸಿಯೂ ವೈಜ್ಞಾನಿಕ ಸಮಾಜವಾದ ಹಾಗೂ ಗಾಂಧೀವಾದಗಳು, ವಿಜ್ಞಾನ ಮತ್ತು ಅಸಾಧ್ಯಾದರ್ಶಗಳಂತೆ ಅಥವಾ ಭೌತಿಕವಾದ ಹಾಗೂ ಭಾವನಾವಾದ

ಗಳಂತೆ, ಅಥವಾ ದ್ವಂದ್ವಾತ್ಮಕತೆ ಹಾಗೂ ಅಧ್ಯಾತ್ಮಕತೆಗಳಂತೆ, ಪರಸ್ಪರ ವಿರುದ್ಧವಾಗಿವೆ.

ಗಾಂಧೀಯವರು ಕೆಲವು ವೇಳೆ ಬಂಡವಾಳಶಾಹಿ ಹಾಗೂ ಸಾಮಂತಶಾಹಿ ದಬ್ಬಾಳಿಕೆಯನ್ನು ಸುಸ್ಪಷ್ಟವಾಗಿ ಬಯಲು ಮಾಡಿದರು. ಇಲ್ಲೊಂದು ನಿದರ್ಶನವಿದೆ.

ಭಾರತೀಯ ರಾಜ ಮಹಾರಾಜರೂ, ಭೂಮಾಲೀಕರೂ, ಲಕ್ಷಾಧೀಶರೂ, ಲೇವಾದೇವಿಗಾರರೂ ಇತರ ಲಾಭಕೋರರೂ ಸಂಪತ್ತನ್ನು ಹೇಗೆ ಗಳಿಸಿಕೊಂಡರು ಎಂಬ ಬಗೆಗೆ ಅವರ ಅಭಿಪ್ರಾಯ ಏನು ಎಂದು ಕೇಳಿದಾಗ ಅವರು ಉತ್ತರಿಸಿದರು: "ಪ್ರಸ್ತುತದಲ್ಲಿ, ಜನಸಮೂಹಗಳನ್ನು ಶೋಷಿಸುವ ಮೂಲಕ." ಈ ವರ್ಗಗಳು ಯಾರ ಶ್ರಮವು ಸಂಪತ್ತನ್ನು ಸೃಜಿಸುತ್ತದೋ ಆ ಸಾಮಾನ್ಯ ಕಾರ್ಮಿಕರಿಗಿಂತಲೂ ರೈತರಿಗಿಂತಲೂ ಹೆಚ್ಚು ಸುಖಸೌಲಭ್ಯಗಳೊಂದಿಗೆ ಜೀವಿಸಲು ಯಾವ ಸಾಮಾಜಿಕ ಸಮರ್ಥನೆಯನ್ನೂ ಹೊಂದಿಲ್ಲ, ಎಂದವರು ಒತ್ತಿ ಹೇಳಿದರು.* ಆದರೆ ಅವರು ಶೋಷಕ ಸಮಾಜವನ್ನು ಟೀಕಿಸುವಲ್ಲಿ ಈ ಅಂತರ್ಭಾವಗಳು ನಿರ್ಧಾರಕವಾದವುಗಳಾಗಿರಲಿಲ್ಲ. "ಐರೋಪ್ಯ" ನಾಗರಿಕತೆಯನ್ನು ಅವರು ಖಂಡಿಸಿದಾಗಲೂ ಅವರಲ್ಲಿ ಸಾಮಾಜಿಕ ನೆಲೆನಿರ್ದೇಶನದ ಅಭಾವವೂ, ತಾವೇ ಸರಿಯಾಗಿಯೇ ಗಮನಿಸಿದಂಥ ಸಮಾಜದಲ್ಲಿನ ದುರ್ಗುಣಗಳನ್ನು ನಿವಾರಿಸಲು ಬಳಸಬೇಕಾಗಿದ್ದ ಮಾರ್ಗೋಪಾಯಗಳ ಬಗೆಗಿನ ಅಜ್ಞಾನವೂ ಸ್ಪಷ್ಟವಾಗಿದ್ದವು. ತಮ್ಮ ಟೀಕೆಯ ಗುರಿವಸ್ತು ಬೂರ್ಷ್ವಾ ನಾಗರಿಕತೆಯಲ್ಲ ಆದರೆ "ಐರೋಪ್ಯ" ಯಂತ್ರ ನಾಗರಿಕತೆ ಎಂದವರು ನಿರ್ಧರಿಸಿದ್ದುದರಲ್ಲಿ ಈ ಲಕ್ಷಣಗಳು ಸ್ಪಷ್ಟವಾಗಿದ್ದವು. ಅವರು ಬರೆದರು: "ಯಂತ್ರಗಳನ್ನು ಹೇಗೆ ಆವಿಷ್ಕರಿಸುವುದು ಎಂಬುದನ್ನು ನಾವು ತಿಳಿದಿರಲಿಲ್ಲ ಎಂದೇನೂ ಅಲ್ಲ. ಆದರೆ ನಾವು ಅಂಥ ವಿಷಯಗಳಲ್ಲಿ ಅತ್ಯಾಸಕ್ತಿ ತಳೆದಲ್ಲಿ ನಾವು ಅವುಗಳಿಗೆ ಗುಲಾಮರಾಗುತ್ತೇವೆ ಮತ್ತು ನಮ್ಮ ನೈತಿಕ ಸತ್ವವನ್ನು ಕಳೆದುಕೊಳ್ಳುತ್ತೇವೆ ಎಂದು ನಮ್ಮ ಪೂರ್ವೀಕರು ತಿಳಿದಿದ್ದರು. ಆದ್ದರಿಂದಲೇ ಅವರು ಸೂಕ್ಷ್ಮವಾಗಿ ಪರ್ಯಾಲೋಚನೆ ಮಾಡಿದನಂತರ, ನಾವು ನಮ್ಮ ಕೈಕಾಲುಗಳಿಂದ ಏನನ್ನು ಮಾಡಬಲ್ಲೆವೋ ಅದನ್ನಷ್ಟೆ ಮಾಡಬೇಕು ಎಂಬ ತೀರ್ಮಾನಕ್ಕೆ ಬಂದರು."** ಆದ್ದರಿಂದ ಗಾಂಧೀಯವರು ಟೀಕಿಸುವುದು ಬಂಡವಾಳ

---

* M. K. Gandi, *Towards Non-Violent Socialism*, Navajivan Publishing House, Ahmedabad, 1957, p. 161. – ಸಂ.

** *The Collected Works of Mahatma Gandhi*, Vol. X, The Publications Division, Ministry of Information and Broadcasting, Government of India, Delhi, 1963, p. 37. – ಸಂ.

ಶಾಹಿ ಉತ್ಪಾದನಾ ವಿಧಾನವನ್ನಲ್ಲ ಆದರೆ ಒಟ್ಟಿನಲ್ಲಿ ಯಂತ್ರೋತ್ಪಾದನೆಯನ್ನೇ ಮತ್ತು ಯಂತ್ರಗಳನ್ನೇ ಇಂದಿನ ಭಾರತೀಯರ ಪೂರ್ವಿಕರು ನಿಷೇಧಿಸಿದ್ದರು, ಎಂದು ಕಂಡುಬರುತ್ತದೆ. ಗಾಂಧೀಯವರು ಯಂತ್ರಗಳಲ್ಲಿ ಸಾಮಾಜಿಕ ಕೇಡುಗಳ–ನಿರುದ್ಯೋಗ, ಶೋಷಣೆ, ಕೆಲವೇ ಜನರ ಕೈಗಳಲ್ಲಿ ಸಂಪತ್ತಿನ ಹಾಗೂ ಅಧಿಕಾರದ ಕೇಂದ್ರೀಕರಣ, ಇತ್ಯಾದಿ ಕೇಡುಗಳ–ಆಕರವನ್ನು ಕಂಡರು. ವಿಸ್ತೃತ ಪ್ರಮಾಣದ ಕೈಗಾರಿಕಾ ಬೆಳವಣಿಗೆಯ ಈ ಎಲ್ಲ ಫಲಿತಾಂಶಗಳೂ ಕ್ಷಣಿಕವಾದವು ಮತ್ತು ವರ್ಗ-ನಿರ್ಧಾರಿತವಾದವು, ಎಂದವರು ಹೇಳುವುದಿಲ್ಲ. ಅವರು ಶೋಷಕ ವರ್ಗಗಳನ್ನಲ್ಲ ಶತ್ರುವನ್ನಾಗಿ ಕಾಣುವುದು, ಆದರೆ ಯಂತ್ರವನ್ನು.

ಯಂತ್ರೋತ್ಪಾದನೆಯ ಪ್ರಕ್ರಿಯೆಯಲ್ಲಿ ವರ್ಗಗಳ ನಡುವಿನ ಸಂಬಂಧಗಳ ಬಗೆಗೆ ಹೇಳುವುದಾದರೆ, ಗಾಂಧೀಯವರು ಅವುಗಳನ್ನು ಶೋಷಕ ಸಮಾಜದ ಮಾತ್ರ ಹೀನಂಥ ದುರ್ಗುಣಗಳು ಕಾಣಿಸಿಕೊಳ್ಳುವುದಕ್ಕೆ ವಸ್ತುನಿಷ್ಠ ಆಧಾರವನ್ನಾಗಿ ಕಾಣಲಿಲ್ಲ. ವರ್ಗ ವೈರುಧ್ಯಗಳು ಇದ್ದುದನ್ನು ಅವರು ಮನಗಂಡಿದ್ದರು, ಆದರೆ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯ ನೀಡಲಿಲ್ಲ. ಸಾರತಃ ಆರೋಗ್ಯವಂತವಾದ ಮಾನವ ಸಂಬಂಧಗಳ ಮೇಲೆ ನಿರ್ಮಿತವಾದ ಅಧಿರಚನೆಯನ್ನಾಗಿ ಅವನ್ನು ಕಂಡರು. "ವರ್ಗ ಸಮರವು ಭಾರತದ ಸಾರಭೂತ ಸ್ವಭಾವಕ್ಕೆ ಪರಕೀಯವಾದುದು"* ಎಂದವರು ಹೇಳಿದರು. ದುರಾಸೆ, ಅಹಂಕಾರ, ನೈತಿಕ ಅವನತಿ ಹಾಗೂ ಬುದ್ಧಿಭ್ರಮಣೆ ಇವುಗಳ ಫಲವಾಗಿ ವೈರುಧ್ಯಗಳು ಹುಟ್ಟಿಕೊಳ್ಳುತ್ತವೆ ಮತ್ತು ತೀವ್ರಗೊಳ್ಳುತ್ತವೆ, ಜಮೀನ್ದಾರರ ಹಾಗೂ ರೈತರ ನಡುವಿನ ಸಂಬಂಧಗಳು, ಬಂಡವಾಳಗಾರರ ಮತ್ತು ಕಾರ್ಮಿಕರ ನಡುವಿನ ಸಂಬಂಧಗಳು, ಶಾಂತಿಯುತ ಸಹಕಾರದ ಸಂಬಂಧಗಳಾಗಿರಬೇಕು, ಎಂದವರು ಭಾವಿಸಿದ್ದರು. ಅವರು ಸಾಮಾಜಿಕ ಬೆಳವಣಿಗೆಯ ವರ್ಗ ಹಾಗೂ ಆರ್ಥಿಕ ನಿಯಮಗಳನ್ನು ಉಪೇಕ್ಷಿಸಿದರು. ಸಾಮಾಜಿಕ ಬೆಳವಣಿಗೆಯ ಕುರಿತ ಅವರ ತಿಳಿವಳಿಕೆಯು ಭಾವನಾವಾದಿಯಾಗಿದ್ದಿತು. ಅದು ಚಾರಿತ್ರಿಕ ಪ್ರಕ್ರಿಯೆಯನ್ನು ನಿಯಂತ್ರಿಸುವಂಥ ಸಾಮಾಜಿಕ ಹಾಗೂ ಆರ್ಥಿಕ ನಿಯಮಗಳನ್ನು ತಿಳಿಯದಿದ್ದುದರ ಮೇಲೆ ಆಧರಿಸಿದ್ದಿತು. ಆದ್ದರಿಂದ ಅತ್ಯುತ್ತಮವಾದಂಥ ಹಾಗೂ ಅತ್ಯಂತ ನ್ಯಾಯಯುತವಾದಂಥ ಸಾಮಾಜಿಕ ಪರಿವರ್ತನೆಗಳ ಕುರಿತ ಅವರ ವಿಚಾರಗಳು ವ್ಯಕ್ತಿನಿಷ್ಠತೆಯ ಸ್ವಪ್ರೇರಣೆಯ ಲಕ್ಷಣ ಪಡೆದಿದ್ದವು. ಗಾಂಧೀಯವರ ಪ್ರಕಾರ, ಜನರು ತಮ್ಮ ಮನಸ್ಸುಗಳನ್ನು ಉನ್ನತ ನೈತಿಕತೆಯಿಂದ ಪೂರಿತವನ್ನಾಗಿ ಮಾಡಿಕೊಳ್ಳಬೇಕು,

* M. K. Gandhi, *Sarvodaya (The Welfare of All)*, Navajivan Publishing House, Ahmedabad, 1954, p. 89. –ಸಂ.

ಆಗ ಕಾಲ ಸಂದಂತೆ ಸಾಮಾಜಿಕ ನ್ಯಾಯ ಅನಿವಾರ್ಯವಾಗಿಯೇ ಅಸ್ತಿತ್ವಕ್ಕೆ ಬರುತ್ತದೆ. ವರ್ಗ ಶಾಂತಿ ಹಾಗೂ ಆಸ್ತಿವಂತ ವರ್ಗಗಳು ಆಸ್ತಿರಹಿತ ವರ್ಗಗಳ ಬಗೆಗೆ ಪಿತೃಪ್ರಾಯತೆಯ ಭಾವನೆಗಳಿಗೆ ಅನುಗುಣವಾಗಿ ನಡೆದುಕೊಳ್ಳುವುದು, ಇವು ಗಾಂಧೀವಾದದ ಅವಿಭಾಜ್ಯ ಭಾಗಗಳಾಗಿದ್ದವು. ವರ್ಗ ಸಮರ ಪ್ರಾರಂಭವಾದದ್ದೇ ಆದಲ್ಲಿ ಅದಕ್ಕೆ ಕಾರಣ ಬಂಡವಾಳಗಾರರೂ ಭೂಮಾಲೀಕರೂ ತಮ್ಮ ಜವಾಬ್ದಾರಿಕೆಯ ಭಾವನೆಯನ್ನು ಕಳೆದುಕೊಂಡುದು, ತಾವು "ಕುಟುಂಬ"ದ ತಂದೆಯಂತೆ ವರ್ತಿಸಬೇಕಾಗಿದ್ದುದನ್ನು, ಅದರ ಭಾಗವಾಗಿರಬೇಕಾಗಿದ್ದುದನ್ನು, ಮರೆತುದು. ಗಾಂಧೀಯವರು ಬರೆದರು: "ಪಶ್ಚಿಮ ದೇಶಗಳಲ್ಲಿ ಬಂಡವಾಳಗಾರರ ಮತ್ತು ಕಾರ್ಮಿಕರ ನಡುವೆ ಶಾಶ್ವತ ಘರ್ಷಣೆ ನಡೆಯುತ್ತಿದೆ. ಪ್ರತಿಯೊಂದು ಪಕ್ಷವೂ ಇನ್ನೊಂದನ್ನು ತನ್ನ ಸಹಜ ಶತ್ರುವನ್ನಾಗಿ ಪರಿಗಣಿಸುತ್ತಿದೆ. ಈ ಭಾವನೆ ಭಾರತವನ್ನೂ ಪ್ರವೇಶಿಸಿದಂತಿದೆ. ಇದು ಶಾಶ್ವತವಾಗಿ ಇರುವುದಾದಲ್ಲಿ ನಮ್ಮ ಉದ್ಯೋಗಶೀಲತೆ ಹಾಗೂ ನಮ್ಮ ಶಾಂತಿ ಕೊನೆಗಂಡಂತೆಯೇ. ಉಭಯ ಪಕ್ಷಗಳೂ ತಾವು ಪರಸ್ಪರಾವಲಂಬಿಗಳು ಎನ್ನುವುದನ್ನು ಅರಿತುಕೊಂಡಲ್ಲಿ ಮನಸ್ತಾಪಕ್ಕೆ ಕಾರಣವೇ ಇರುವುದಿಲ್ಲ."*

ಜನರ ಸಾಮಾಜಿಕ ಹಾಗೂ ವ್ಯಕ್ತಿಗತ ಜೀವನದ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಗಳೂ, ಭೌತಿಕ ಹಾಗೂ ಸಾಂಸ್ಕೃತಿಕ ಉಪಯೋಗೀ ಸರಕುಗಳ ಬೂರ್ಷ್ವಾ ಇಲ್ಲವೇ ಸಾಮಂತಶಾಹಿ ಉತ್ಪಾದನಾ ವಿಧಾನವೂ ಉನ್ನತ ನೈತಿಕ ಸೂತ್ರಗಳ ಸಾರ್ವತ್ರಿಕ ಸ್ಥಾಪನೆಗೆ ದುಸ್ತರವಾದ ಅಡಚಣೆಗಳಾಗಿದ್ದವೆಂಬ ವಾಸ್ತವಾಂಶವನ್ನು ಗಾಂಧೀಯವರು ಗಣನೆಗೆ ತಂದುಕೊಳ್ಳಲಿಲ್ಲ. ಜಗತ್ತನ್ನು ಅಹಿಂಸಾತ್ಮಕವಾಗಿ ಪರಿವರ್ತಿಸಬೇಕೆಂಬ ಗಾಂಧೀಯವರ ತತ್ವವು, ಶೋಷಿತರ ವಿರುದ್ಧ ಹಿಂಸಾಚಾರ ಬಳಸದಂತೆ, ತಾವು ಶೋಷಿಸುತ್ತಿರುವ ಜನರ ಬಗೆಗೆ ಕರುಣೆಯಿಂದ ಇರುವಂತೆ ಶೋಷಕರಿಗೆ ಮಾಡಿಕೊಂಡ, ಹಳೆಯ ಶ್ರದ್ಧಾವಂತವಾದ ಹಾಗೂ ಪ್ರಾಮಾಣಿಕವಾದ (ಆದರೆ, ಅನೇಕ ಶತಮಾನಗಳ ಅನುಭವ, ವಿಶಿಷ್ಟವಾಗಿ ಭಾರತೀಯ ಇತಿಹಾಸದಲ್ಲೇ ಕಂಡುಬಂದ ಅನುಭವ, ತೋರಿಸಿಕೊಟ್ಟಿರುವಂತೆ, ನಿಷ್ಫಲವಾದ) ಕರೆಯಾಗಿದ್ದಿತು.

ಅಹಿಂಸೆಯನ್ನು ಗಾಂಧೀಯವರು ನಿರಪೇಕ್ಷಗೊಳಿಸಿದ ರೀತಿಯನ್ನು ಟೀಕಿಸುತ್ತ ನೆಹರೂರವರು ತಮ್ಮ 'ಆತ್ಮಕಥೆ'ಯಲ್ಲಿ ಬರೆದರು: "ಇತಿಹಾಸ ತೋರಿಸಿಕೊಡುವ ಯಾವುದಾದರೂ ಒಂದು ಅಂಶ ಇದ್ದರೆ ಅದು ಇದು: ಆರ್ಥಿಕ ಹಿತಗಳೇ ಸ್ತೋಮಗಳ ಹಾಗೂ ವರ್ಗಗಳ ರಾಜಕೀಯ ಅಭಿಪ್ರಾಯಗಳನ್ನು ರೂಪಿ

* M. K. Gandhi, *Towards Non-Violent Socialism*, p. 42. –ಸಂ.

ಜೀವನವನ್ನು....ಅದು (ಆಧುನಿಕತೆ) ನಮ್ಮನ್ನು ಸಾಕಷ್ಟು ದೂರ ಕೊಂಡೊಯ್ದು ಬಿಟ್ಟಿದೆ ಎಂದೇನೋ ನಾನು ಭಾವಿಸುತ್ತೇನೆ. ಆದರೆ ಅದು ನಮ್ಮನ್ನು ನಮ್ಮ ಅಂತಿಮ ಗುರಿ ಮುಟ್ಟಿಸಲಿಲ್ಲವೇ ಎಂಬ ಬಗೆಗೆ ನನಗೆ ಸಂಶಯವಿದೆ.... ಸಮಾಜದ ವರ್ಧಿಸುವ ವ್ಯಕ್ತಿ ಘರ್ಷಣೆಗಳನ್ನು, ರಾಷ್ಟ್ರೀಯ ಹಾಗೂ ವರ್ಗ ಘರ್ಷಣೆಗಳನ್ನು, ಬಲಪ್ರಯೋಗದಿಂದಲ್ಲದೆ ಬೇರೆ ಯಾವ ರೀತಿಯಲ್ಲೂ ಎಂದೂ ಪರಿಹರಿಸುವುದು ಸಾಧ್ಯವಿಲ್ಲ."*

"ಯುರೋಪ್ಯ" ನಾಗರಿಕತೆಯ ಬಗೆಗೆ ಗಾಂಧೀಯವರ ಟೀಕೆಯನ್ನೂ, 'ಕಮ್ಯೂನಿಸ್ಟ್ ಪಾರ್ಟಿಯ ಪ್ರಣಾಳಿಕೆ'ಯೂ ಮಾರ್ಕ್ಸ್‌ರವರ 'ಬಂಡವಾಳ' ಕೃತಿಯೂ ಕಾಣಿಸಿಕೊಂಡ ಬಹುಮಟ್ಟಿಗೆ ಒಂದು ಶತಮಾನದನಂತರ ಗಾಂಧೀಯವರು ವಿಕಾಸಗೊಳಿಸಿದ ಪ್ರಕಲ್ಪನೆಗಳನ್ನೂ ನಾವು ಸ್ಥೂಲವಾಗಿ ವಿವರಿಸಿದ್ದೇವೆ. ಜಗತ್ತಿನಲ್ಲಿ ಪ್ರಪ್ರಥಮ ಸಮಾಜವಾದಿ ದೇಶ ಉದಯಿಸಿದನಂತರ, ಗಾಂಧೀಯವರು ದ್ವೇಷಿಸಿದಂಥ "ಯಂತ್ರ ನಾಗರಿಕತೆಯು," ಅಂದರೆ ಬಂಡವಾಳವಾದವು, ಕ್ರಾಂತಿಗಳಿಂದ ಉಚ್ಚಾಟಿಸಲ್ಪಡುತ್ತಿದ್ದಂಥ ಯುಗದಲ್ಲಿ, ಗಾಂಧೀಯವರು ಪ್ರತಿಪಾದಿಸಿದಂಥ ಸಿದ್ಧಾಂತಗಳು ಅಸಾಧ್ಯಾದರ್ಶಗಳಾಗಿ ಕಂಡುಬಂದವು ಮತ್ತು ಬಂಡವಾಳವಾದದ ಬಗೆಗೆ ಗಾಂಧೀಯವರು ಮಾಡಿದ ಟೀಕೆಗಳು ಮಾರ್ಕ್ಸ್‌ವಾದ-ಲೆನಿನ್‌ವಾದದ ವೈಜ್ಞಾನಿಕ ಸಿದ್ಧಾಂತಗಳ ಹಿನ್ನೆಲೆಯಲ್ಲಿ, ಕೇವಲ ನಿಸ್ಸಹಾಯಕವಾಗಿದ್ದವು.

ಮಾರ್ಕ್ಸ್‌ರವರೂ "ಯುರೋಪ್ಯ" ನಾಗರಿಕತೆಯ ದೋಷ ದುರ್ಗುಣಗಳನ್ನು ಹಾಸ್ಯೋದ್ರಿಕ್ತತೆಯೊಂದಿಗೆ ಹಾಗೂ ಪ್ರಗಾಢವಾಗಿ ಬಯಲು ಮಾಡಿದರು. ಆದರೆ ಅವರು ಅದನ್ನು "ಯುರೋಪ್ಯ" ನಾಗರಿಕತೆ ಎಂದಲ್ಲ ಆದರೆ ಬಂಡವಾಳವಾದಿ ನಾಗರಿಕತೆ ಎಂದು ಕರೆದರು. ಯಂತ್ರೋತ್ಪಾದನೆ ಜಾರಿಗೆ ಬಂದುದರ ಕಾರಣದಿಂದಾಗಿ ದುಡಿಯುವ ಜನರ ಪಾಲಿಗೆ ಒದಗಿದ ಭಾರಿ ಗಂಡಾಂತರವನ್ನು ವೈಜ್ಞಾನಿಕವಾಗಿ ಅಲ್ಲಗಳೆಯಲಾಗದಂತಹ ರೀತಿಯಲ್ಲಿ ಮಾರ್ಕ್ಸ್‌ರವರು ತೋರಿಸಿಕೊಟ್ಟರು. ಆದರೆ ಅವರು ಕಂಡುಕೊಂಡಂತೆ ತಪ್ಪು ಇದ್ದುದು ಯಂತ್ರಗಳಲ್ಲಲ್ಲ ಆದರೆ ಕೈಗಾರಿಕೀಕರಣದ ಬಂಡವಾಳವಾದಿ ವಿಧಾನಗಳಲ್ಲಿ. ಈ ವಿಧಾನಗಳನ್ನು ತೆರೆದು ತೋರಿಸುತ್ತ ಅವರು ಬಂಡವಾಳವಾದವು ವಸಾಹತುಗಳನ್ನು ಸೇರ್ಪಡೆ ಮಾಡಿಕೊಳ್ಳುವುದು, ಬ್ರಿಟಿಷರು ಭಾರತವನ್ನು ಅಧೀನಪಡಿಸಿಕೊಂಡುದೂ ಸಹ, ಹೇಗೆ ಐತಿಹಾಸಿಕವಾಗಿ ಅನಿವಾರ್ಯವಾದುದು ಎಂಬುದನ್ನೂ ವಿವರಿಸಿದರು. ಈ ವಸಾಹತುಗಳಲ್ಲಿ ಈ "ಯುರೋಪ್ಯ ನಾಗರಿಕತೆಯ ಸಂವಾಹಕರು" ನಡೆಸುತ್ತಿದ್ದ ಎಲ್ಲ ಭೀಕರ ಕೃತ್ಯಗಳನ್ನೂ ವರ್ಣಿಸಿದರು. ಮಾರ್ಕ್ಸ್‌ರವರು ಬೂರ್ಷ್ವಾ ನಾಗರಿ-

* Jawaharlal Nehru, *An Autobiography*, Allied Publishers Private, Ltd., Bombay, 1962, pp. 544, 551. –ಸಂ.

ಕತೆಯ ಮತ್ತು ಯಂತ್ರಸಾಧನಗಳ ಬಳಕೆಯ ವರ್ಗ ಸ್ವರೂಪವನ್ನು ಹೊರಗೆಡಹಿದರು.

ಮಾರ್ಕ್ಸ್‌ರವರು ಬಂಡವಾಳವಾದಿ ಸಮಾಜವನ್ನು ವೈಜ್ಞಾನಿಕ ರೀತಿಯಲ್ಲಿ ಟೀಕೆಗೆ ಗುರಿಪಡಿಸಿದರು. ಇದೇ ಅವರನ್ನು ಸಮಾಜವಾದದ ಬಗೆಗೆ – ಬಂಡವಾಳವಾದಿ ಪದ್ಧತಿಯಲ್ಲಿನ ಎಲ್ಲ ವೈರುಧ್ಯಗಳನ್ನೂ ಪರಿಹರಿಸಬಲ್ಲಂಥ ಸಮಾಜವಾಗಿ ಸಮಾಜವಾದದ ಬಗೆಗೆ – ಸಾಧಾರಯುತವಾದ ಹಾಗೂ ಮನವೊಪ್ಪುವಂಥ ನಿರೂಪಣೆಯನ್ನು ನೀಡುವತ್ತ ಕರೆದೊಯ್ದುದು. ಆದರೂ ಈ ಸಮಾಜವಾದಿ ಸಮಾಜವೂ ಬಂಡವಾಳವಾದದ ಭೌತಿಕ ಆಧಾರದ ಮೇಲೆಯೇ ಹುಟ್ಟಿಕೊಳ್ಳುತ್ತದೆ. ಬಂಡವಾಳವಾದದ ಎಲ್ಲ ಅಮೂಲ್ಯ ಯಂತ್ರತಾಂತ್ರಿಕ ಪ್ರಗತಿಯನ್ನೂ, ಅದರಲ್ಲೂ ವಿಶೇಷವಾಗಿ ಅದರ ಭಾರಿ ಕೈಗಾರಿಕೆ ಹಾಗೂ ಯಂತ್ರೋತ್ಪಾದನೆಯನ್ನು, ಬಳಸಿಕೊಳ್ಳುತ್ತದೆ. ಬೂರ್ಷ್ವಾ ನಾಗರಿಕತೆಗೆ ಸಂಬಂಧಿಸಿ ಮಾರ್ಕ್ಸ್‌ರವರ ಈ ಮನೋಭಾವಕ್ಕೆ ವಿರುದ್ಧವಾಗಿ ಗಾಂಧೀಯವರ ಭಾವಪೂರಿತ ಕಲ್ಪನಾಶೀಲ ಮನೋಧರ್ಮವು ಸಹಜವಾಗಿಯೇ ಅವರನ್ನು ಸಮಾಜವಾದದ ಬಗೆಗೆ ಭ್ರಾಂತ್ಯಾತ್ಮಕವಾದ ಅಸಾಧ್ಯಾದರ್ಶವಾದ ಪ್ರಕಲ್ಪನೆಗಳತ್ತ ಕರೆದೊಯ್ದಿತು.

ಗಾಂಧೀಯವರು ಮೊದಮೊದಲ ಅಸಾಧ್ಯಾದರ್ಶವಾದಿಗಳ ಪರಂಪರೆಯನ್ನೇ ಮುಂದುವರಿಸಿದರು. "ಸುವರ್ಣ ಯುಗ"ಕ್ಕೆ, ಭಾರತೀಯ ರೈತ ಸಮುದಾಯ ಪದ್ಧತಿಗೆ, ಹಿಂದಿರುಗುವುದರಲ್ಲಿ ಅವರು ತಮ್ಮ ನ್ಯಾಯಪರತೆಯ ಅಮೂರ್ತ ಧ್ಯೇಯಗಳು ಜಯ ಗಳಿಸುವುದನ್ನು ಕಂಡುಕೊಂಡರು. ಆದರೆ ಆ ರೈತ ಸಮುದಾಯ ಪದ್ಧತಿಯು ಎಂದೂ ತನ್ನ ಸದಸ್ಯರಿಗೆ ನಿರಂಕುಶ ಪ್ರಭುಗಳ, ವಿಜೇತರ ಇಲ್ಲವೇ ಕುಲಾಧೀಶರುಗಳ ದಬ್ಬಾಳಿಕೆಯಿಂದ ರಕ್ಷಣೆ ಒದಗಿಸಲಿಲ್ಲ. ಜಾತಿ ಪದ್ಧತಿಯ ಕ್ರೂರ ನಿಯಮಗಳ ಮೇಲೆ ಯಾವತ್ತೂ ಆಧರಿಸಿಕೊಂಡಿದ್ದಂಥ, ಅನೇಕ ಶತಮಾನಗಳ ಕಾಲ ದೇಶವನ್ನೂ ಅದರ ಜನರನ್ನೂ ಹೊರ ಜಗತ್ತಿನಿಂದ ಪ್ರತ್ಯೇಕವಾಗಿರಿಸಿದ್ದಂಥ ಆ ರೈತ ಸಮುದಾಯವನ್ನು ಆ ನಿರಂಕುಶ ಪ್ರಭುಗಳು ಸಾಮಂತಶಾಹಿ ವ್ಯವಸ್ಥೆಗೆ ಪರಿವರ್ತಿಸುತ್ತಿದ್ದರಷ್ಟೆ. ಭ್ರಾಂತ್ಯಾತ್ಮಕ ಮೋಹಕತೆಯ ರೈತ ಸಮುದಾಯವು ಎಷ್ಟೋ ಕಾಲದ ಹಿಂದೆಯೇ, ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದಿತು. ಅದು ಮೊದಲು ಸರಕು ಆರ್ಥಿಕತೆಯ ಪ್ರಭಾವಕ್ಕೆ ಸಿಕ್ಕಿ, ಅನಂತರ ಬ್ರಿಟಿಷ್ ವಸಾಹತುವಾದಿಗಳ ನಾಯಕತ್ವದಲ್ಲಿ ಬಂಡವಾಳವಾದದ ಕೆಳಗೆ, ಮತ್ತೆ ಈಗ ರಾಷ್ಟ್ರೀಯ ಬೂರ್ಷ್ವಾಸಿಯ, ಬಂಡವಾಳವಾದಿ ಭೂಮಾಲೀಕರ ಹಾಗೂ ಬೆಳೆಯುತ್ತಿದ್ದ ಶ್ರೀಮಂತ ರೈತ ವರ್ಗದ ಕೆಳಗೆ, ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದಿತು.

ಗಾಂಧೀಯವರು ಇತಿಹಾಸದ ಮುನ್ನಡೆಯ ಬಗೆಗೆ, ಮಾನವಕುಲವು ಹಿಂದಿರುಗಲಾಗದಂತೆ ಕೆಳ ಮಟ್ಟದಿಂದ ಮೇಲಿನ ಹೆಚ್ಚು ಉನ್ನತ ಮಟ್ಟಕ್ಕೆ ವಿಕಸನಗೊಳ್ಳು-

ತ್ವರಿತ ಹೋಗುವುದರ ಬಗೆಗೆ ಹೊಂದಿದ್ದ ಅಸ್ಪಷ್ಟ ಕಲ್ಪನೆಯನ್ನೇ. ಸರ್ವೋದಯ ದಂಥ ಹಳೆ ಕಾಲದ ಚಿತ್ರವನ್ನು ಭವಿಷ್ಯತ್ತಿಗೆ ಆದರ್ಶಯುತವಾದುದನ್ನಾಗಿ ತೋರಿಸಲು ಅವಕಾಶ ಮಾಡಿಕೊಟ್ಟದ್ದಿತು. ಗಾಂಧೀಯವರಿಗೆ ಪ್ರಗತಿಯೂ ಆಧುನಿಕ ಯಂತ್ರ ನಾಗರಿಕತೆಯೂ ಸಾಮಾಜಿಕ ಕೇಡುಗಳಾಗಿದ್ದುದರಿಂದ ಮತ್ತು ಜನರಿಗೆ ನೈತಿಕ ಸಂದೇಶಗಳನ್ನಷ್ಟೆ ಕೊಡುತ್ತಿದ್ದುದರಿಂದ, ಸಂಕಲ್ಪ ಬಲದಿಂದ ಹಳೆಯ ಕುಲಪತಿ ಆಡಳಿತ ಪದ್ಧತಿಯ ನೈತಿಕ ಸರಳತೆಗೆ ಹಿಂದಿರುಗುವುದು ಬಿಟ್ಟು ಬೇರಾವ ಮಾರ್ಗವೂ ಅವರಿಗೆ ಕಾಣಬರಲಿಲ್ಲ. ಗಾಂಧೀಯವರು ಭವಿಷ್ಯತ್ತನ್ನಲ್ಲ ಹಿಂದಿನ ಗತಕಾಲವನ್ನು ತಮ್ಮ ಮುಂದೆ ಇರಿಸಿಕೊಂಡಿದ್ದರು. ಅವರು ಹೊಸ ಸಮಾಜದ ಆಧಾರವನ್ನು ಬಂಡವಾಳವು ತನಗೇ ಇಷ್ಟವಿಲ್ಲದಿದ್ದರೂ ಸೃಷ್ಟಿಸುತ್ತಿರುವಂಥ ಸಾಮಾಜಿಕ ಪ್ರಗತಿಯ ವರ್ಧಮಾನ ಶಕ್ತಿಗಳಲ್ಲಿ ಕಾಣಲಿಲ್ಲ ಆದರೆ ಐತಿಹಾಸಿಕವಾಗಿ ನಶಿಸಿದ್ದ ಸಾಮಾಜಿಕ ಜೀವನದ ಹಾಗೂ ಉತ್ಪಾದನಾ ರೂಪಗಳ ಅವಶೇಷಗಳಲ್ಲಿ ಕಾಣಲು ಯತ್ನಿಸಿದರು.

ಅಸಾಧ್ಯವಾದುದನ್ನು ಸಾಧ್ಯವಾಗಿಸಿದರೂ, ಸರ್ವೋದಯ ಮಾದರಿ ಸಮಾಜವನ್ನು ಕೃತಕವಾಗಿ ನಿರ್ಮಿಸುವುದು ಫಲಗೂಡಿದರೂ, ಆಗ ಈ ಸಮಾಜದ ಅತ್ಯಂತ ಹಿಂದುಳಿದ ಯಂತ್ರತಾಂತ್ರಿಕತೆಯು ಆರ್ಥಿಕ, ಸಾಂಸ್ಕೃತಿಕ ಹಾಗೂ ನೈತಿಕ ಪ್ರಗತಿಗೆ ಅಡ್ಡಿ ಉಂಟುಮಾಡುತ್ತದೆ ಮತ್ತು ಸಾರ್ವತ್ರಿಕ ಸಮೃದ್ಧತೆ ಹಾಗೂ ಸಾಂಸ್ಕೃತಿಕ ಬೆಳವಣಿಗೆಯ ಘೋಷಣೆಗಳನ್ನು ನಿಜವಾಗಿಯೂ ಅರ್ಥರಹಿತವನ್ನಾಗಿ ಮಾಡುತ್ತದೆ. ಕೃತಕವಾಗಿ ಪುನರ್‌ನಿರ್ಮಿಸಿದ ಹಾಗೂ ಪ್ರತ್ಯೇಕಗೊಂಡ ಈ ಸಮಾಜ ಕೋಶದಲ್ಲೂ ಸಾಮಾಜಿಕ ಬೆಳವಣಿಗೆಯ ಕಠೋರ ಆಂತರಿಕ ನಿಯಮಗಳಿಂದಾಗಿ ಅವನತಿಯ ಹಾಗೂ ಶೈಥಿಲ್ಯದ ಅಂಶಗಳು ಪುನರುಜ್ಜೀವನಗೊಳ್ಳುತ್ತವೆ. ಇವು ದೀರ್ಘ ಚಾರಿತ್ರಿಕ ಪರಿವರ್ತನೆಯ ಅವಧಿ ಮುಕ್ತಿ ಆಗಲೇ ಒಮ್ಮೆ ಭಾರತೀಯ ಜನಸಮುದಾಯವು ರೂಢಿಚ್ಯುತವಾದ ಸಮಾಜ ಪದ್ಧತಿಯಾಗಿ ಅವನತಿಗೊಳ್ಳುವುದಕ್ಕೆ ದಾರಿ ಮಾಡಿಕೊಟ್ಟಿದ್ದವು.

ಗಾಂಧೀವಾದವನ್ನು ವೈಜ್ಞಾನಿಕ ಸಮಾಜವಾದದ ದೃಷ್ಟಿಕೋನದಿಂದ ವಿಶ್ಲೇಷಿಸುವಾಗ ಸಾಮಾನ್ಯವಾಗಿ ಸಾಮಾಜಿಕ ಪರಿವರ್ತನೆಯ ವಿಧಾನ ಹಾಗೂ ಮಾರ್ಗೋಪಾಯಗಳ ಸಮಸ್ಯೆಯ ಕಡೆಗೆ ವಿಶಿಷ್ಟ ಗಮನವನ್ನು ಸರಿಯಾಗಿಯೇ ನೀಡಲಾಗುತ್ತದೆ. ಗಾಂಧೀವಾದವು ಕೆಡುಕಿಗೆ ಪ್ರತಿರೋಧ ತೋರದಿರುವುದನ್ನೇ, ಅಂದರೆ ಅಹಿಂಸೆಯನ್ನೇ, ತನ್ನ ಲಾಂಛನವನ್ನಾಗಿ ಮಾಡಿಕೊಂಡಿತು. ಗಾಂಧೀಯವರೇ ಈ ವಿಧಾನವನ್ನು ಪತ್ತೆ ಹಚ್ಚಿದರು ಮತ್ತು ಆಚರಣೆಗೆ ತಂದುದು ಎಂದು ಅವರಿಗೆ ಕೀರ್ತಿ ಸಲ್ಲಿಸಲಾಗುತ್ತೆ. ಗಾಂಧೀವಾದಕ್ಕೆ ವಿರುದ್ಧವಾಗಿ ಮಾರ್ಕ್ಸ್‌ವಾದವು ಅಹಿಂಸೆಯ ಸೂತ್ರವನ್ನು ದೃಢವಾಗಿ ತಿರಸ್ಕರಿಸುತ್ತದೆ, ಅದು ರಕ್ತಯುತ ಸಶಸ್ತ್ರ ಹೋರಾಟದ ಸಶಸ್ತ್ರ ಹಿಂಸಾತ್ಮಕ ಚಳವಳಿಯ ಪರ್ಯಾಯ ಪದ, ಎಂದು

ಮಾರ್ಕ್ಸ್‌ವಾದದ ಕೆಲವು ಟೀಕೆಗಾರರು (ಗಾಂಧೀಯವರ ಅನುಯಾಯಿಗಳಲ್ಲಿ ಕೆಲವರೂ ಸಹ) ಚಿತ್ರಿಸುತ್ತಾರೆ. ಆದರೆ ಮಾರ್ಕ್ಸ್‌ವಾದದ ಬಗೆಗೆ ಇವರ ತಿಳಿವಳಿಕೆ ಅಪ್ರಧಾನವಾದ, ಬಹುವೇಳೆ ವಿಕೃತೀಕರಿಸಿದ, ಆಕರಗಳಿಂದ ಬಂದುದು. ಹಿಂಸೆ ಹಾಗೂ ಅಹಿಂಸೆಗಳ ಕುರಿತು ಗಾಂಧೀವಾದಕ್ಕೂ ವೈಜ್ಞಾನಿಕ ಸಮಾಜವಾದಕ್ಕೂ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಹೀಗೆ ವ್ಯಾಖ್ಯಾನಿಸುವುದು ವೈಜ್ಞಾನಿಕ ಸಮಾಜವಾದದ ವಿರೋಧಿಗಳಿಗೆ ತುಂಬ ಸರಿಹೊಂದುತ್ತದೆನ್ನಿ. ಆದರೆ ಈ ವ್ಯಾಖ್ಯಾನವು ವಾಸ್ತವಿಕತೆಯೊಂದಿಗೆ ಅಥವಾ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನೆಗಾಗಿ ಹೋರಾಟದ ಮಾರ್ಗೋಪಾಯಗಳ ಕುರಿತ ವೈಜ್ಞಾನಿಕ ಸಮಾಜವಾದದ ನಿಜವಾದ ಮನೋಧರ್ಮದೊಂದಿಗೆ, ಯಾವ ಸಾಮಾನ್ಯಾಂಶವನ್ನೂ ಹೊಂದಿಲ್ಲ.

ವೈಜ್ಞಾನಿಕ ಸಮಾಜವಾದದ ಬೆಂಬಲಿಗರು – ನಿಜವಾದ ಕ್ರಾಂತಿಕಾರಿಗಳು, ಶಾಸ್ತ್ರಾಂಧರಲ್ಲ ಅಥವಾ ದುಸ್ಸಾಹಸಿಗಳಲ್ಲ – ಯಾವುದೇ ಪರಿಸ್ಥಿತಿಗಳಲ್ಲೂ ಸಶಸ್ತ್ರ ಹಿಂಸಾತ್ಮಕ ಹೋರಾಟದ ಪರವಾಗಿಯೇ ಇರುತ್ತಾರೆ ಎಂದು ಇಂದು ಯಾರನ್ನೇ ಆಗಲಿ ಒಪ್ಪುವಂತೆ ಮಾಡುವುದು ಕಷ್ಟ. ಅಂಥ ಅಭಿಪ್ರಾಯಗಳು ಚಾರಿತ್ರಿಕ ವಾಸ್ತವಾಂಶಗಳಿಗೆ, ಮಾರ್ಕ್ಸ್‌ವಾದದ ಸಿದ್ಧಾಂತ ಹಾಗೂ ಕ್ರಾಂತಿಕಾರಿ ಆಚರಣೆಗೆ, ಸಂಪೂರ್ಣವಾಗಿ ವಿರುದ್ಧ ಹೋಗುತ್ತವೆ. ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳು ರಾಷ್ಟ್ರೀಯ-ವಿಮೋಚನಾ ಚಳವಳಿಯನ್ನೂ ಸಾಮಾಜಿಕ ಕ್ರಾಂತಿಯನ್ನೂ ಶಾಂತಿಯುತವಾಗಿ ವಿಕಾಸಗೊಳಿಸುವ ಅತ್ಯಲ್ಪ ಸಾಧ್ಯತೆಯನ್ನೂ ಬಳಸಿಕೊಳ್ಳಲು ಯಾವತ್ತೂ ಸಿದ್ಧರಾಗಿದ್ದಾರೆ. ಕಾರ್ಮಿಕರ ಹಾಗೂ ಎಲ್ಲ ದುಡಿಯುವ ಜನರ ನೈಜ ಹಿತಗಳ ದೃಷ್ಟಿಯಿಂದ ಸಶಸ್ತ್ರ ಹೋರಾಟಕ್ಕಿಂತ ಶಾಂತಿಯುತ ವಿಧಾನಗಳೇ ಹೆಚ್ಚು ಇಷ್ಟಪಡಲು ಯೋಗ್ಯವಾದವುಗಳೆಂದು ಅವರು ಯಾವತ್ತೂ ಪರಿಗಣಿಸಿದ್ದಾರೆ. ಗಾಂಧೀಯವರ ಅಹಿಂಸಾತ್ಮಕ ವಿಧಾನಗಳೇ, ಅವುಗಳ ಆಧ್ಯಾತ್ಮಿಕ ಹಾಗೂ ಧಾರ್ಮಿಕ ಆಧಾರವನ್ನು ಉಪೇಕ್ಷಿಸಿದಲ್ಲಿ, ಆಚರಣೆಯಲ್ಲಿ ಶಾಂತಿಯುತ ನಿಶ್ಶಸ್ತ್ರ ಹೋರಾಟ ವಿಧಾನಗಳಲ್ಲದೆ ಬೇರೇನೂ ಅಲ್ಲ. ಗಾಂಧೀಯವರು ಅದನ್ನು ಆವಿಷ್ಕರಿಸಲಿಲ್ಲ. ಆದರೆ ಆ ವಿಧಾನಗಳನ್ನು ಬ್ರಿಟಿಷ್ ವಸಾಹತುಗಾರರ ಹಾಗೂ ದಕ್ಷಿಣ ಆಫ್ರಿಕದ ಕುಲವಾದಿಗಳ ವಿರುದ್ಧ ಅನ್ವಯಿಸುವುದರಲ್ಲಿ, ಅವಕ್ಕೆ ನಿಜವಾದ ಸಾಮೂಹಿಕ ಲಕ್ಷಣ ನೀಡಿ ಹಾಗೆ ಅವನ್ನು ಹೆಚ್ಚು ಪರಿಣಾಮಕಾರಿಯನ್ನಾಗಿ ಮಾಡುವುದರಲ್ಲಿ, ಅದ್ಭುತ ಯಶಸ್ಸು ಸಾಧಿಸಿದರು ಎಂಬುದು ನಿಜ. ಗಾಂಧೀಯವರಿಗೂ ತುಂಬ ಮುನ್ನವೇ ಸತ್ಯಾಗ್ರಹದ ಶಸ್ತ್ರಾಗಾರದಲ್ಲಿನ ಎಲ್ಲ ಅಥವಾ ಬಹುಮಟ್ಟಿಗೆ ಎಲ್ಲ ಸಾಧನಗಳನ್ನೂ – ಉಪವಾಸ ಮುಷ್ಕರಗಳು. ಪ್ರದರ್ಶನಗಳು. ಸ್ಥಳೀಯ ಹಾಗೂ ಸಾರ್ವತ್ರಿಕ ಮುಷ್ಕರಗಳು, ಕರ ನಿರಾಕರಣೆ. ವಸಾಹತು ಹಾಗೂ ಕುಲವಾದಿ ಶಕ್ತಿಗಳಿಗೆ ಬಹಿಷ್ಕಾರ, ಇತ್ಯಾದಿ ಸಾಧನಗಳನ್ನು – ಅಂತರ

ರಾಷ್ಟ್ರೀಯ ಕಾರ್ಮಿಕರ ಹಾಗೂ ರಾಷ್ಟ್ರೀಯ ವಿಮೋಚನೆಯ ಚಳವಳಿಗಳು ವ್ಯಾಪಕವಾಗಿ ಬಳಸಿದ್ದವು. ಹದಿನೇಳನೆಯ ಶತಮಾನದಿಂದ ಹಿಡಿದು ಹತ್ತೊಂಬತ್ತನೆಯ ಶತಮಾನದವರೆಗೂ ಪಶ್ಚಿಮ ಯೂರೋಪು, ರಷ್ಯ, ಲ್ಯಾಟಿನ್ ಅಮೆರಿಕ ಮತ್ತು ವಿಶ್ವದ ಅನೇಕ ದೇಶಗಳಲ್ಲಿ ಜರುಗಿದ ರೈತ ಚಳವಳಿಗಳೂ, 18ನೆಯ ಶತಮಾನದಿಂದ ಜರುಗಿದ ಕಾರ್ಮಿಕ ಚಳವಳಿಗಳೂ ಈ ಸಾಮೂಹಿಕ ಹೋರಾಟ ರೂಪ ಹಾಗೂ ವಿಧಾನಗಳನ್ನು ಚೆನ್ನಾಗಿ ತಿಳಿದಿದ್ದವು. ಗಾಂಧೀಯವರು ಸಾಧಿಸಿದ ಹೊಸತೆಂದರೆ ಈ ವಿಧಾನಗಳನ್ನು ಕಂಡುಹಿಡಿದು ಬಳಸಿದುದಲ್ಲ, ಆದರೆ ಎಲ್ಲಕ್ಕೂ ಮಿಗಿಲಾಗಿ ಅವನ್ನು ಬ್ರಿಟಿಷ್ ವಸಾಹತುವಾದಿಗಳ ವಿರುದ್ಧ ವಿಸ್ತೃತವಾಗಿ ಅನ್ವಯಿಸಿದುದು ಮತ್ತು ಅವನ್ನು ಧಾರ್ಮಿಕ ಪರಂಪರೆಗಳು ಪವಿತ್ರಗೊಳಿಸಿದಂಥ ನೈತಿಕ ವಿಧಾನಗಳನ್ನಾಗಿ ಎತ್ತಿಹಿಡಿದುದು.

ಭಾರತದಲ್ಲಿ ರಾಷ್ಟ್ರೀಯ-ವಿಮೋಚನಾ ಹೋರಾಟದ ಇತಿಹಾಸವು ಭಾರಿ ವಸಾಹತುವಾದ ವಿರೋಧಿ ಪ್ರದರ್ಶನಗಳನ್ನು, ಕಾರ್ಮಿಕರ ಸಾರ್ವತ್ರಿಕ ಮುಷ್ಕರಗಳನ್ನು, ಸಾಮೂಹಿಕ ರೈತ ಚಳವಳಿಗಳನ್ನು ಮತ್ತು ವ್ಯಾಪಕ ವಿದ್ಯಾರ್ಥಿ ಹಾಗೂ ಯುವಜನ ಚಳವಳಿಗಳನ್ನು ಕಂಡಿದೆ. ಅದು ಭಾರತೀಯ ನೌಕಾ ದಳದ ನಾವಿಕರ, ಆಂಗ್ಲೋ-ಇಂಡಿಯನ್ ಸೈನ್ಯದ ಯೋಧರ, ಕಾರ್ಮಿಕರ ಹಾಗೂ ರೈತರ ಸಶಸ್ತ್ರ ಬಂಡಾಯಗಳನ್ನು ಕಂಡಿದೆ. ಚಳವಳಿಯು ಅನೇಕ ಕೆಚ್ಚೆದೆಯ ಪ್ರದರ್ಶನ ಹಾಗೂ ಆತ್ಮ ಬಲಿದಾನದ ನಿದರ್ಶನಗಳನ್ನು ಬಲ್ಲುದು. ವಿಶಿಷ್ಟವಾಗಿ ಶ್ರಮಜೀವಿಗಳ ಕ್ರಾಂತಿಕಾರಿ ಹೋರಾಟ ವಿಧಾನಗಳು ಚಳವಳಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದವು. ಕೆಲವು ವೇಳೆ ಚಳವಳಿಯ ಮೇಲೆ ನಿರ್ಧಾರಕ ಪ್ರಭಾವ ಬೀರಿದವು. ಆದರೆ ಸಾಮೂಹಿಕ ಚಳವಳಿಯ ಮುಖ್ಯಾಧಾರ ಗಾಂಧೀಯವರನ್ನು ಅನುಸರಿಸಿದಂಥ ರೈತಾಪಿ ಜನರು ಹಾಗೂ ನಗರೀಯ ಪೆಟಿ ಬೂರ್ಷ್ವಾ ಜನರಾಗಿದ್ದರೆನ್ನಿ.

ವರ್ಗ ವಿಭಜಿತ ಸಮಾಜದಲ್ಲಿ ಅಥವಾ ಮರ್ದಿತ ದೇಶದಲ್ಲಿ ಎಲ್ಲ ರಾಷ್ಟ್ರೀಯ ಹಾಗೂ ಸಾಮಾಜಿಕ ವೈರುಧ್ಯಗಳನ್ನೂ ಅತ್ಯಂತ ವೇದನಾರಹಿತ ವಿಧಾನಗಳಲ್ಲಿ ಪರಿಹರಿಸಬಲ್ಲಂಥ ಏಕೈಕ ಹಾಗೂ ಸಾರ್ವತ್ರಿಕ ಹೋರಾಟ ವಿಧಾನವೆಂದರೆ ಅಹಿಂಸಾತ್ಮಕ ವಿಧಾನ ಎಂದು ಗಾಂಧೀವಾದ ಘೋಷಿಸಿತು. ಆದರೆ ಇದು ನಿಜವಲ್ಲವೆಂದು ಜೀವನವೇ ತೋರಿಸಿಕೊಟ್ಟಿದೆ. ವೈಜ್ಞಾನಿಕ ಸಮಾಜವಾದವಾದರೋ ಜೀವನದೊಂದಿಗೆ ಸಂಪೂರ್ಣವಾಗಿ ಸರಿ ಹೊಂದಿಕೊಂಡು, ಮಾನವಕುಲದ ಯುಗಯುಗಾಂತರಗಳ ಅನುಭವವನ್ನು, ಎಲ್ಲಕ್ಕೂ ಮಿಗಿಲಾಗಿ ಎಲ್ಲ ದೇಶಗಳಲ್ಲಿನ ಕಾರ್ಮಿಕ ವರ್ಗದ ಹಾಗೂ ರೈತಾಪಿ ಜನರ ಹೋರಾಟದ ಅನುಭವವನ್ನು ತನ್ನದನ್ನಾಗಿ ಮಾಡಿಕೊಂಡು, ಹೋರಾಟದ ಯಾವುದೇ ಒಂದು ವಿಧಾನವನ್ನು ನಿರಪೇಕ್ಷಗೊಳಿಸಲು ಅಥವಾ ಅಂಧಾನುಕರಣೆಯ ಸೂತ್ರವನ್ನಾಗಿ ಮಾಡಲು ಮತ್ತು ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು, ಚಾರಿತ್ರಿಕ ಹಾಗೂ ರಾಷ್ಟ್ರೀಯ

ಸ್ಥಿತಿಗತಿಗಳನ್ನೂ ಗಣನೆಗೆ ತಂದುಕೊಳ್ಳದೆಯೇ ಅವನ್ನು ಜನರ ಮೇಲೆ ಅವಿಚಾರಕವಾಗಿ ಹೊರಿಸಲು ಯತ್ನಿಸುವುದಿಲ್ಲ.

ವಿದೇಶೀ ವಸಾಹತುಗಾರರ ಅಥವಾ ಸ್ಥಳೀಯ ಬೂರ್ಷ್ವಾಗಳ ಹಾಗೂ ಭೂಮಾಲೀಕರ ಉಗ್ರ ಪ್ರತಿರೋಧದ ಕಾರಣದಿಂದಾಗಿ ಶಾಂತಿಯುತ ವಿಧಾನಗಳು ಪರಿಣಾಮಕಾರಿಯಲ್ಲದವಾಗಿ ಸಾಧಿತವಾದಾಗ, ಶೋಷಕರು ಜನರ ವಿರುದ್ಧ ಸಶಸ್ತ್ರ ಹೋರಾಟ ಹೂಡಿದಾಗ, ಮಾರ್ಕ್ಸ್‌ವಾದಿಗಳು – ವಾಸ್ತವಿಕ ಪರಿಸ್ಥಿತಿಯ ಕಾರಣದಿಂದಾಗಿ – ವರ್ಗ ಹೋರಾಟದ ಅತ್ಯುನ್ನತ ರೂಪವಾದ ಸಶಸ್ತ್ರ ಬಂಡಾಯ ಹಾಗೂ ಅಂತರ್ಯುದ್ಧವನ್ನೂ ಒಳಗೊಂಡು ಹೆಚ್ಚು ನಿರ್ಧಾರಕ ಹೋರಾಟ ವಿಧಾನಗಳಿಗೆ ಸಂಕ್ರಮಿಸಬೇಕೆಂದು ಸಲಹೆ ಮಾಡುತ್ತಾರೆ. ವಸಾಹತುವಾದಿಗಳ ಹಿಂಸಾಚಾರದ ಕಾರಣದಿಂದಾಗಿ ಅಹಿಂಸಾತ್ಮಕ ವಿಧಾನಗಳ ಮೂಲಕ ತಮ್ಮ ಕೇಳಿಕೆಗಳನ್ನೂ ಧ್ಯೇಯಗಳನ್ನೂ ಈಡೇರಿಸಿಕೊಳ್ಳುವುದು ಅಸಾಧ್ಯವೆಂದು ಒಪ್ಪಿಕೊಳ್ಳುವ ಬಲವಂತಕ್ಕೊಳಗಾದಾಗ ಗಾಂಧೀವಾದಿಗಳು, ಜಯ ದೊರಕಿಸಿಕೊಳ್ಳಲು ಜನರು ನೈತಿಕವಾಗಿ ಇನ್ನೂ ಸಿದ್ಧರಾಗಿಲ್ಲ, ಏಕೆಂದರೆ ಅವರು (ಜನರು) ಅಹಿಂಸಾತ್ಮಕ ಚಳವಳಿಯ ಧಾರ್ಮಿಕ ಹಾಗೂ ನೈತಿಕ ಸೂತ್ರಗಳನ್ನು ಪಾಲಿಸಿಲ್ಲ, ಎಂದು ಒತ್ತಿ ಹೇಳುತ್ತಾರೆ. ಚಳವಳಿಯ ಅಂತಿಮ ಗುರಿಗಳನ್ನು ಮರೆಯಬೇಕೆಂದು ಅವರು ಜನಸಮೂಹಗಳಿಗೆ ಕರೆ ನೀಡುತ್ತಾರೆ, ತಮ್ಮ ಹೋರಾಟ ಗುರಿಗಳು ಕಾರ್ಯಸಾಧುವಲ್ಲವೆಂದು ಸಮಾಧಾನ ಪಟ್ಟುಕೊಂಡು ಇರುವಂತೆ, ತಾವು ತಮ್ಮ ನೈತಿಕ ಹಾಗೂ ಧಾರ್ಮಿಕ ಕರ್ತವ್ಯವನ್ನು ಮಾಡಿದ್ದಾಗಿದೆ ಎಂದು ತೃಪ್ತಿ ಪಟ್ಟುಕೊಂಡು ಇರುವಂತೆ, ಜನರನ್ನು ಒತ್ತಾಯಿಸುತ್ತಾರೆ. ಇಲ್ಲಿಯೇ ಸಾಮೂಹಿಕ ಹೋರಾಟ ವಿಧಾನಗಳಿಗೆ ಸಂಬಂಧಿಸಿ ಗಾಂಧೀವಾದಕ್ಕೂ ವೈಜ್ಞಾನಿಕ ಸಮಾಜವಾದಕ್ಕೂ ನಡುವೆ ನಿಜವಾದ ವ್ಯತ್ಯಾಸ ಇರುವುದು.

ಈ ಪ್ರಶ್ನೆಗೆ ಸಂಬಂಧಿಸಿ ನೆಹರೂರವರ ಮನೋಧರ್ಮ ಸ್ವಾರಸ್ಯಕರವಾಗಿದ್ದಿತು. ಗಾಂಧೀಯವರ ಬಗೆಗೆ ಅತ್ಯಂತ ಹೆಚ್ಚಿನ ಗೌರವ ತೋರುತ್ತಲೇ ಅವರು ಘೋಷಿಸಿದರು: "ನಮಗೆ ಮತ್ತು ಒಟ್ಟಿನ ಮೇಲೆ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಅಹಿಂಸಾತ್ಮಕ ವಿಧಾನವು ಒಂದು ಧರ್ಮವಾಗಿ ಅಥವಾ ಎದುರು ಹೇಳಲಾಗದಂಥ ನಂಬಿಕೆಯಾಗಿ ಇಲ್ಲವೇ ಅಂಧಸೂತ್ರವಾಗಿ ಇರಲಿಲ್ಲ, ಇರಲು ಸಾಧ್ಯವೂ ಇರಲಿಲ್ಲ. ಅದು ಒಂದಿಷ್ಟು ಫಲಿತಾಂಶಗಳ ಭರವಸೆ ನೀಡುವ ಒಂದು ನೀತಿಯಷ್ಟೆ ಒಂದು ವಿಧಾನವಷ್ಟೆ ಆಗಿರಲು ಸಾಧ್ಯವಿದ್ದಿತು. ಆ ಫಲಿತಾಂಶಗಳಿಂದಷ್ಟೆ ಅದನ್ನು ಕೊನೆಯಲ್ಲಿ ತೀರ್ಮಾನಿಸಬೇಕಿದ್ದಿತು. ವ್ಯಕ್ತಿಗಳು ಅದನ್ನು ಒಂದು ಧರ್ಮವನ್ನಾಗಿ ಅಥವಾ ನಿರ್ವಿವಾದದ ನಂಬಿಕೆಯನ್ನಾಗಿ ಮಾಡಬಹುದು. ಆದರೆ ಯಾವುದೇ ರಾಜಕೀಯ ಸಂಘಟನೆ, ಎಲ್ಲಿಯವರೆಗೆ ಅದು

ರಾಜಕೀಯವಾಗಿರುತ್ತದೋ ಅಲ್ಲಿಯವರೆಗೆ, ಹಾಗೆ ಮಾಡಲಾಗದು."*

ಇದು ಸಾಕಷ್ಟು ಪೂರ್ಣವಾದ ಹಾಗೂ ಸ್ಪಷ್ಟವಾದ ವಿವರಣೆಯಾಗಿದೆ. ಇಲ್ಲಿ ಸಾಮೂಹಿಕ ಹೋರಾಟದ ವಿಧಾನಗಳನ್ನು ಸರ್ವಕಾಲಕ್ಕೂ ಒಂದೇ ಎಂದು ನೀಡಲಾಗಿಲ್ಲ. ಈ ವಿಧಾನಗಳು ರಾಜಕೀಯ ಪರಿಸ್ಥಿತಿಯ ಮೇಲೆ, ಹೋರಾಟದ ಗುರಿ ಹಾಗೂ ಫಲಿತಾಂಶಗಳ ಮೇಲೆ, ಮತ್ತು ನಾವು ಇನ್ನೂ ಒಂದು ಅಂಶವನ್ನು ಸೇರಿಸುತ್ತೇವೆ, ಶತ್ರುವಿನ ವರ್ತನೆಯ ಮೇಲೆ ಅವಲಂಬಿಸಿರುತ್ತವೆ. ಶತ್ರುವು ಶಾಂತಿಯುತವಾಗಿ ಶರಣಾಗದಿದ್ದಲ್ಲಿ, ಶರಣಾಗುವಂತೆ ಬಲಾತ್ಕರಿಸಬೇಕು. ಅವಶ್ಯ ಬಿದ್ದಾಗ ಮಾನವೀಯತೆಯ ಹೆಸರಿನಲ್ಲಿ ಶಸ್ತ್ರಾಸ್ತ್ರಗಳನ್ನೂ ಬಳಸಬೇಕು.

ಪ್ರಜಾಪ್ರಭುತ್ವ ಹಾಗೂ ಪ್ರಗತಿಯ ಶಕ್ತಿಗಳಿಗೆ ರಾಜಕೀಯ ಸಂಘಟನೆ ಅಪಾರ ಪ್ರಾಮುಖ್ಯತೆಯದು. ಆದ್ದರಿಂದ ಪ್ರಗತಿಶೀಲ ರಾಜಕೀಯ ಪಾರ್ಟಿಯ ಹಾಗೂ ಸಮಾಜವಾದಿ ರಾಜ್ಯದ ಪ್ರಶ್ನೆಯು ಮತ್ತು ಅವುಗಳೊಂದಿಗೆ ರಾಷ್ಟ್ರೀಯ ವಿಮೋಚನೆಗಾಗಿ ಹಾಗೂ ಸಾಮಾಜಿಕ ನ್ಯಾಯಕ್ಕಾಗಿ ಹೋರಾಡುವವರ ಸಂಬಂಧದ ಪ್ರಶ್ನೆಯು ಪ್ರಮುಖವಾದುದು. ಈ ಪ್ರಶ್ನೆಯ ಪರಿಹಾರದ ವಿಷಯದಲ್ಲಿ ದುಡಿಯುವ ಜನರಿಗೆ ಗಾಂಧೀವಾದವು ಸಮರ್ಥ ಮಾರ್ಗದರ್ಶಿಯಾಗಿ ನೆರವಾಗಲಾರದು. ಗಾಂಧೀಯವರು ಬೂರ್ಷ್ವಾ ರಾಜ್ಯವನ್ನೂ, ಬೂರ್ಷ್ವಾ ಪ್ರಜಾಪ್ರಭುತ್ವವನ್ನೂ, ವಿಶಿಷ್ಟವಾಗಿ ವಸಾಹತು ಹಾಗೂ ಕುಲವಾದಿ ರಾಜ್ಯವನ್ನೂ ಬಹು ವೇಳೆ ತುಂಬ ಸರಿಯಾಗಿಯೇ ಟೀಕಿಸಿದರೂ.

ವೈಜ್ಞಾನಿಕ ಸಮಾಜವಾದವು ಸಮಾಜವಾದಿ ರಾಜ್ಯವನ್ನು ಸಮಾಜದ ಪುನರ್‌ಸಂಘಟನೆ ಮಾಡಬಲ್ಲಂಥ ಮುಖ್ಯ ಆಯುಧವನ್ನಾಗಿ ಕಂಡುಕೊಳ್ಳುತ್ತದೆ. ಅದು ಸಮಾಜವಾದಿ ಪಾರ್ಟಿಯಲ್ಲಿ, ಕ್ರಾಂತಿಕಾರಿ ಬದಲಾವಣೆಗಳಿಗೆ ಸಿದ್ಧತೆ ನಡೆಸಬಲ್ಲಂಥ ಹಾಗೂ ಅವುಗಳನ್ನು ಜಾರಿಗೆ ತರಬಲ್ಲಂಥ ಒಂದೇ ಮನೋಧರ್ಮದ ಜನರ ಸಾಧ್ಯವಿರುವ ಐಕ್ಯ ರಾಜಕೀಯ ಸಂಘಟನೆಯನ್ನು ಕಾಣುತ್ತದೆ. ವೈಜ್ಞಾನಿಕ ಸಮಾಜವಾದವು ದುಡಿಯುವ ಜನರ ಮುಂದೆ ತೊಡಕಾದ ಕಾರ್ಯಭಾರವನ್ನು ಇರಿಸುತ್ತದೆ: ತಮ್ಮನ್ನು ರಾಜಕೀಯವಾಗಿ ಸಂಘಟಿಸಿಕೊಳ್ಳುವುದು, ಸಮಾಜವಾದಿ ಪಾರ್ಟಿಯ ಮೇಲೆ ಆಧರಿಸಿಕೊಂಡಿರುವುದು, ಆ ಪಾರ್ಟಿಯ ಮಾರ್ಗದರ್ಶನದಲ್ಲಿ ಹಾಗೂ ತಮ್ಮ ಸ್ವಂತ ಹಿತಗಳಿಗಾಗಿ ರಾಜ್ಯಾಧಿಕಾರದ ಪ್ರಶ್ನೆಯನ್ನು – ಎಲ್ಲ ಕ್ರಾಂತಿಗಳಲ್ಲೂ ಪ್ರಧಾನವಾದಂಥ ಈ ಪ್ರಶ್ನೆಯನ್ನು – ಪರಿಹರಿಸುವುದು ಮತ್ತು ತಮ್ಮ ಜಾಣ ಮೇಲೂ ದುಡಿಯುವ ಹಾಗೂ ಶೋಷಿತ ಜನರಿಗೆ ಪ್ರಯೋಜನವಾಗುವಂತೆ ಸಮಾಜವನ್ನು ಪರಿವರ್ತಿಸುವುದರ ಮೇಲೂ

---

* Jawaharlal Nehru, *Mahatma Gandhi*, Asia Publishing House, Bombay, Calcutta, 1966, pp. 49-50. – ಸಂ.

ಪ್ರಭಾವ ಬೀರುವಂಥ ಈ ಪ್ರಬಲ ಯಂತ್ರಸಾಧನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುವುದು.

ಗಾಂಧೀವಾದವು ರಾಜ್ಯವನ್ನು ಸಂಪೂರ್ಣವಾದಂಥ ಒಂದು ಕೇಡುಕನ್ನಾಗಿ ಪರಿಗಣಿಸುವಂಥ ಅರಾಜಕತಾವಾದಿ ಪ್ರಕಲ್ಪನೆಯನ್ನು ತನ್ನ ಆರಂಭ ಬಿಂದುವನ್ನಾಗಿ ಇರಿಸಿಕೊಳ್ಳುತ್ತದೆ. ಸ್ವತಂತ್ರವಾದ ರಾಷ್ಟ್ರೀಯವಾದ ರಾಜ್ಯವನ್ನು ಪ್ರಗತಿಯ ಹಿತಗಳಿಗಾಗಿ ಬಳಸಲು ಸಾಧ್ಯ ಮತ್ತು ಬಳಸಬೇಕು ಎಂಬ ಅಂಶವನ್ನು ಒಪ್ಪಿಕೊಳ್ಳುವ ಬಲವಂತಕ್ಕೊಳಗಾದಾಗಲೂ ಗಾಂಧೀಯವರು ಅಧಿಕಾರದೊಂದಿಗೆ ಯಾವ ಸಂಬಂಧವನ್ನೂ ಹೊಂದಿರದಂಥ ನಿಲುವನ್ನೇ ತಳೆದಿದ್ದರು, ಏಕೆಂದರೆ, ಅವರ ಅಭಿಪ್ರಾಯದಲ್ಲಿ ಯಾವುದೇ ರೀತಿಯ ಅಧಿಕಾರವೂ ಭ್ರಷ್ಟತೆಗೆ ದಾರಿ ಮಾಡಿಕೊಡುತ್ತದೆ. ಕಾರ್ಮಿಕರು ತಮ್ಮ ಸ್ವಂತ ರಾಜಕೀಯ ಪಾರ್ಟಿಗಳನ್ನು ಹೊಂದಿರುವಂತೆ ಗಾಂಧೀವಾದ ಸಲಹೆ ಮಾಡದು. ಆದರೆ ಅವರು ತಳ ರೂಪದ ಸಂಘಟನೆಗಳನ್ನು ಹೊಂದಿರುವುದಕ್ಕೆ ಅದರ ಅಭ್ಯಂತರವಿಲ್ಲ. ಹೀಗೆ ಗಾಂಧೀವಾದವು ರಾಜಕೀಯ ಕ್ಷೇತ್ರವನ್ನು ವಿದ್ಯಾವಂತ ವರ್ಗದ ಪ್ರತಿನಿಧಿಗಳ, ಬೂರ್ಷ್ವಾ ಬುದ್ಧಿಜೀವಿಗಳ ಹಾಗೂ ಸ್ವತಃ ಬೂರ್ಷ್ವಾಸೀಯ, ವಶಕ್ಕೆ ಬಿಟ್ಟುಕೊಡುತ್ತದೆ. ಇದು ಕಾರ್ಮಿಕ ಜನರನ್ನು ವರ್ಗ ಶತ್ರುವಿನ ಮುಂದೆ – ರಾಜ್ಯಾಧಿಕಾರವನ್ನೂ ಪಾರ್ಟಿ ಸಂಘಟನೆಯನ್ನೂ ಸಂಪೂರ್ಣವಾಗಿ ತನ್ನ ವಶದಲ್ಲೇ ಹೊಂದಿರುವಂಥ ಶತ್ರುವಿನ ಮುಂದೆ – ರಕ್ಷಣೆರಹಿತರನ್ನಾಗಿ ಮಾಡುವತ್ತ ಕರೆದೊಯ್ಯುತ್ತದೆ.

ಗಾಂಧೀಯವರು ಎಸಗಿದ ಮಹತ್ ಸೇವೆಯೆಂದರೆ ಜನಸಮೂಹಗಳನ್ನು ಸಾಮಾಜಿಕ ಚಳವಳಿಯೊಳಕ್ಕೆ ಸೆಳೆಯಬೇಕೆಂದು ಯಾವಾಗಲೂ ಕರೆ ನೀಡಿದುದು. ಗಾಂಧೀಯವರ ಹೆಸರು, ಅವರ ಸಾಮ್ರಾಜ್ಯಶಾಹಿ ವಿರೋಧಿ ರಾಜನೀತಿ ಹಾಗೂ ತಂತ್ರಗಳು, ಅವರು ಜನರನ್ನುದ್ದೇಶಿಸಿ ಮಾಡಿದ ದಿಟ್ಟತನದ ಮನವಿ – ಇವು ಭಾರತೀಯ ವಿಮೋಚನಾ ಚಳವಳಿಯ ಮೂಲದಲ್ಲಿದ್ದವೆಂದು ಅತಿಶಯೋಕ್ತಿ ಇಲ್ಲದೆ ಹೇಳಬಹುದಾಗಿದೆ. ಇವೇ ಈ ಚಳವಳಿ ವಸಾಹತುವಾದಿಗಳ ಬಗೆಗೆ ಬೂರ್ಷ್ವಾ ನಿಷ್ಠೆಯ, ಬ್ರಿಟಿಷ್ ಅಧಿಕಾರಿಗಳ ಬಗೆಗೆ ಗೌರವದ ಮನೋಭಾವ ಹೊಂದಿರುವ, ಸ್ಥಿತಿಯಿಂದ (ಗಾಂಧೀಯವರಿಗೆ ಮುನ್ನ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಲಕ್ಷಣ ಇದುವೇ ಆಗಿದ್ದಿತು), ರಾಷ್ಟ್ರೀಯ-ತೀವ್ರವಾದಿಗಳ ಪೆಟಿ ಬೂರ್ಷ್ವಾ ಭಯೋತ್ಪಾದಕತೆಯ ಸ್ಥಿತಿಯಿಂದ, ಸ್ವಾತಂತ್ರ್ಯಕ್ಕಾಗಿ ಹೋರಾಡುವ ನಿಜಕ್ಕೂ ಸಾಮೂಹಿಕವಾದ ಜನತಾ ಚಳವಳಿಯ ಸ್ಥಿತಿಗೆ ಸಂಕ್ರಮಿಸುವುದಕ್ಕೆ ನೆರವಾದುದು. ಆದರೆ ಜನಸಮೂಹಗಳ ಪಾತ್ರವನ್ನು ಗಾಂಧೀವಾದವೂ ವೈಜ್ಞಾನಿಕ ಸಮಾಜವಾದವೂ ಬೇರೆಬೇರೆಯಾಗಿ ಅರ್ಥಮಾಡಿಕೊಳ್ಳುತ್ತವೆ. ವೈಜ್ಞಾನಿಕ ಸಮಾಜವಾದದ ಅನುಯಾಯಿಗಳು ದುಡಿಯುವ ವರ್ಗಗಳ ಕ್ರಾಂತಿಕಾರಿ ಅಂತಶ್ಶಕ್ತಿಯನ್ನು ಜಾಗ್ರತಗೊಳಿಸಿ, ವಿಕಾಸಗೊಳಿಸಿ ಪೂರ್ಣವಾಗಿ ಬಳಸುವ

ಗುರಿ ಹೊಂದಿರುತ್ತಾರೆ. ಜನಸಮೂಹಗಳ ಉಪಕ್ರಮದ ಕಿಡಿ ಕೆದರಿಸಿ ಅವುಗಳ ಕ್ರಾಂತಿಕಾರಿ ಚಿತ್ತವು ಹೋರಾಟದ ವಿವಿಧ ಹಾಗೂ ಉದ್ದೇಶಪೂರಿತ ರೂಪಗಳಲ್ಲಿ ಹೊರಹೊಮ್ಮುವುದಕ್ಕೆ ಅವಕಾಶ ಮಾಡಿಕೊಡುವ ಗುರಿಯನ್ನು ಅವರು ಹೊಂದಿರುತ್ತಾರೆ. ಅವರು ಜನಸಮೂಹಗಳಲ್ಲಿ, ಅವುಗಳ ಕ್ರಾಂತಿಕಾರಿ ಸೃಜನಾತ್ಮಕತೆಯಲ್ಲಿ, ಹಳೆಯ ಸಮಾಜವನ್ನು ನಾಶಗೊಳಿಸುವುದಷ್ಟೆ ಅಲ್ಲ, ಪ್ರಗತಿಗೆ ತಡೆಯಾದಂಥ ಆ ಸಮಾಜದ ಅವಶೇಷಗಳನ್ನು ನಾಶಗೊಳಿಸುವುದಷ್ಟೆ ಅಲ್ಲ ಅದರ ಬದಲು ಹೊಸ ಹೆಚ್ಚು ಉತ್ತಮವಾದ, ಶೋಷಕ ವರ್ಗಗಳಿಲ್ಲದ ಸಮಾಜವನ್ನು ನಿರ್ಮಿಸಲೂ ಬಲ್ಲಂಥ ಅವುಗಳ ಸಾಮರ್ಥ್ಯದಲ್ಲಿ, ವಿಶ್ವಾಸವಿರಿಸಿರುತ್ತಾರೆ. ಇದಕ್ಕೆ ವಿರುದ್ಧವಾಗಿ ಗಾಂಧೀವಾದಿಗಳು ಯಾವತ್ತೂ ಜನಸಮೂಹಗಳನ್ನು ಅಹಿಂಸೆಯ ಮಿತಿಗಳೊಳಗೇ ಹಿಡಿದಿರಿಸಿರುತ್ತಾರೆ. ಅವರಿಗೆ ಜನಸಮೂಹಗಳು ನಾಯಕತ್ವದ ಇಚ್ಛಾ ಶಕ್ತಿಯನ್ನು ಈಡೇರಿಸುವವರಾಗಷ್ಟೆ ಬೇಕು. ಮತ್ತೆ ಅವರ ಪ್ರಕಾರ ಜನಸಮೂಹಗಳು ಶಾಂತಿಯುತ ಪ್ರತಿರೋಧದ ಕಟ್ಟುನಿಟ್ಟಾಗಿ ನಿರೂಪಿಸಿದ ಮಿತಿಗಳೊಳಗೇ ಕಾರ್ಯ ಜರುಗಿಸಬೇಕು. ಗಾಂಧೀವಾದವು ವಿಮೋಚನಾ ಚಳವಳಿಯಲ್ಲಿ ಜನಸಮೂಹಗಳ ಸ್ವತಂತ್ರ ಕ್ರಾಂತಿಕಾರಿ ಸೃಜನಾತ್ಮಕತೆಯ ಬಗೆಗೆ ಗಾಢ ಅವಿಶ್ವಾಸದ ಒಂದು ಅಂಶವನ್ನು ಯಾವತ್ತೂ ಒಳಗೊಂಡಿದ್ದಿತು. ಆದ್ದರಿಂದಲೇ ಜನಸಮೂಹಗಳ ಬಗೆಗೆ ಗಾಂಧೀವಾದದ ಮನೋಭಾವವು ಪಿತೃಪಾಲಕತನದ ಸೂತ್ರದಿಂದ ನಿರೂಪಿತವಾಗಿದ್ದಿತು ಅನ್ನುವುದನ್ನು ಅರ್ಥಮಾಡಿಕೊಳ್ಳಬಹುದಾಗಿದೆ.

ಗಾಂಧೀಯವರು ಬೇರೆ ಯಾರೂ ಮಾಡಲಾಗದಿದ್ದಂಥ ರೀತಿಯಲ್ಲಿ ಭಾರತೀಯ ಜನರನ್ನು ವಸಾಹತುವಾದಿಗಳ ವಿರುದ್ಧ ಎತ್ತಿಕಟ್ಟಿ ನಿಲ್ಲಿಸಬಲ್ಲರಿದ್ದರು. ಅದೇ ಹೊತ್ತಿನಲ್ಲಿ ಅವರು ಬೇರೆ ಯಾರೂ ಮಾಡಲಾಗದಿದ್ದಂಥ ರೀತಿಯಲ್ಲಿ ಜನಸಮೂಹಗಳನ್ನು ಬಹಿರಂಗ ಕ್ರಾಂತಿ ಜರುಗಿಸದಂತೆ ತಡೆ ಹಿಡಿಯಬಲ್ಲರಿದ್ದರು. ಹಾಗೆ ಅವರು ವಸಾಹತು ಆಡಳಿತಗಾರರೊಂದಿಗೆ ಮಾತುಕತೆ ನಡೆಸುವ ಸಾಧ್ಯತೆಯನ್ನು ತಮಗೆ ಖಚಿತಪಡಿಸಿಕೊಳ್ಳುತ್ತಿದ್ದರು. ಗಾಂಧೀಯವರ ಈ ಕಾರ್ಯತಂತ್ರಗಳು ಅವರನ್ನು ಬೂರ್ಜ್ವಾಸೀಯ ಮಾರ್ಗದರ್ಶನದಲ್ಲಿದ್ದ ವಿಮೋಚನಾ ಚಳವಳಿಯ ಅತ್ಯಂತ ಅಗ್ರಮಾನ್ಯ ನಾಯಕರನ್ನಾಗಿ ಮಾಡಿದ್ದವು ಎಂಬುದು ಸ್ವಯಂವ್ಯಕ್ತ.

ಇದು ಕಾರ್ಮಿಕ ವರ್ಗದ ಬಗೆಗೆ ಎರಡು ಮನೋಧರ್ಮಗಳ ಆರಂಭಿಕ ಬಿಂದುವೂ ಹೌದು. ಮಾರ್ಕ್ಸ್‌ವಾದ-ಲೆನಿನ್‌ವಾದದ ದೃಷ್ಟಿಯಲ್ಲಿ ಕಾರ್ಮಿಕ ವರ್ಗವು ಅತ್ಯಂತ ಮುಂದುವರಿದ ವರ್ಗ. ಐತಿಹಾಸಿಕ ಬೆಳವಣಿಗೆಯ ಅವಧಿಯಲ್ಲಿ, ಸಾಮಾಜಿಕ ನ್ಯಾಯದ ಸಮಾಜ ಸ್ಥಾಪನೆಗಾಗಿ ಹೋರಾಟದಲ್ಲಿ, ಮಾರ್ಗದರ್ಶಕ ಪಾತ್ರ ನಿರ್ವಹಿಸುವ ಯೋಗ ಹೊಂದಿರುವಂಥ ವರ್ಗ ಅದು. ಆದರೆ

ಗಾಂಧೀಯವರ ದೃಷ್ಟಿಯಲ್ಲಿ ಕಾರ್ಮಿಕ ವರ್ಗವು ಯೂರೋಪಿಯನ್ ನಾಗರಿಕತೆಯ ಒಂದು "ಶನಿಸಂತಾನ." ಅವರ ಪ್ರಕಾರ ಈ ವರ್ಗ ಇನ್ನೂ ರಾಜಕೀಯ ಜೀವನಕ್ಕೆ ಯೋಗ್ಯವಾದುದಾಗಿರಲಿಲ್ಲ, ಅದು ರಾಜಕೀಯ ಜೀವನದಲ್ಲಿ ತನ್ನ ಸ್ಥಾನವನ್ನು ಅಥವಾ ರಾಷ್ಟ್ರದ ಅಗತ್ಯಗಳನ್ನು ಇನ್ನೂ ಕಂಡುಕೊಂಡಿರಲಿಲ್ಲ. ವೈಜ್ಞಾನಿಕ ಸಮಾಜವಾದವು ಎಲ್ಲಕ್ಕೂ ಮಿಗಿಲಾಗಿ ಕೈಗಾರಿಕಾ ಶ್ರಮಜೀವಿ ವರ್ಗದ ಮೇಲೆ ವಿಶ್ವಾಸ ಇರಿಸುತ್ತದೆ. ಗಾಂಧೀವಾದವಾದರೋ ಶ್ರಮಜೀವಿ ವರ್ಗವನ್ನು ಅಹಿಂಸೆಯ ಸೂತ್ರಗಳ ನಿಗೂಢ ವಿರೋಧಿಯನ್ನಾಗಿ ಕಂಡುಕೊಳ್ಳುತ್ತದೆ, ಆ ವರ್ಗದ ರಾಜಕೀಯ ಚಟುವಟಿಕೆಗಳ ಬಗೆಗೆ ಅಂಜಿಕೆ ಹೊಂದಿರುತ್ತದೆ, ಕಾರ್ಮಿಕ ವರ್ಗದ ಹೋರಾಟಗಳನ್ನು ಭೌತಿಕ ಜೀವನ ಮಟ್ಟದಲ್ಲಿ ಸ್ವಲ್ಪ ಸುಧಾರಣೆ ಉಂಟು ಮಾಡಬಹುದಾದಂಥ ಶುದ್ಧ ಆರ್ಥಿಕ ಕೇಳಿಕೆಗಳಿಗೆ ಸೀಮಿತಗೊಳಿಸಿ ಇರಿಸಲು ಯತ್ನಿಸುತ್ತದೆ. ಗಾಂಧೀಯವರು ಹೇಳಿದರು: "ಅಂಥ ಮುಷ್ಕರಗಳು ರಾಜಕೀಯ ಗುರಿಗಳನ್ನು ಸಾಧಿಸಿಕೊಳ್ಳಲು ನೆರವಾಗಬಲ್ಲುವು ಅನ್ನುವುದನ್ನೇನೂ ನಾನು ನಿರಾಕರಿಸುವುದಿಲ್ಲ. ಆದರೆ ಅವು ಅಹಿಂಸಾತ್ಮಕ ಅಸಹಕಾರ ಚಳವಳಿಯ ಯೋಜನೆಯೊಳಗೆ ಬರಲಾರವು. ಶ್ರಮಜೀವಿಗಳು ದೇಶದ ರಾಜಕೀಯ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಸರ್ವರ ಒಳಿತಿಗಾಗಿ ಶ್ರಮಿಸಲು ಸಿದ್ಧರಾಗುವವರೆಗೂ ಅವರನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದು ಅತ್ಯಂತ ಅಪಾಯಕರವೆಂಬುದನ್ನು ಕಂಡುಕೊಳ್ಳಲು ಬುದ್ಧಿಶಕ್ತಿಯ ವಿಶೇಷ ಯತ್ನವೇನೂ ಬೇಕಾಗುವುದಿಲ್ಲ. ಅಂತಹ ಸಾಮರ್ಥ್ಯವನ್ನು ಅವರು ಇದ್ದಕ್ಕಿದ್ದಂತೆ ಪಡೆದುಕೊಳ್ಳುವರೆಂದು ನಿರೀಕ್ಷಿಸುವುದು ಸಲ್ಲ. ಇದಕ್ಕೂ ಮೊದಲು ಅವರು ತಮ್ಮ ಸ್ವಂತ ಜೀವನ ಪರಿಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳಬೇಕು, ತಮ್ಮ ದೇಹ ಹಾಗೂ ಆತ್ಮಗಳನ್ನು ಸಭ್ಯವಾದ ರೀತಿಯಲ್ಲಿ ಒಟ್ಟಾಗಿ ಇರಿಸಿಕೊಳ್ಳಲು ಸಾಧ್ಯವಾಗುವಂತೆ ಆಗಬೇಕು. ಆದ್ದರಿಂದ ಶ್ರಮಜೀವಿಗಳು ನೀಡಬಹುದಾದಂಥ ಅತ್ಯಂತ ಹೆಚ್ಚಿನ ರಾಜಕೀಯ ಕಾಣಿಕೆಯೆಂದರೆ ತಮ್ಮ ಸ್ವಂತ ಬಾಳ ಪರಿಸ್ಥಿತಿಗಳನ್ನೇ ಸುಧಾರಿಸಿಕೊಳ್ಳುವುದು."* ಇದೇ ಶ್ರಮಜೀವಿ ವರ್ಗದ ಮುಂದುವರಿದ ರಾಜಕೀಯ ಪಾರ್ಟಿಯನ್ನು ರಚಿಸುವ ವಿಷಯಕ್ಕೆ ಸಂಬಂಧಿಸಿ ಗಾಂಧೀಯವರು ಹೊಂದಿದ್ದ ಋಣಾತ್ಮಕ ಮನೋಧರ್ಮದ ಮೂಲವಾಗಿದೆ.

ಮೇಲೆ ತಿಳಿಸಿದಂಥ ವೈಜ್ಞಾನಿಕ ಸಮಾಜವಾದದ ಹಾಗೂ ಗಾಂಧೀವಾದದ ಮೂಲ ಲಕ್ಷಣಗಳು ಭಾರತದಲ್ಲಿ ಆಳುವ ವರ್ಗಗಳು ಅವುಗಳ ಬಗೆಗೆ ತಳೆದಿರುವ ಮನೋಧರ್ಮಗಳನ್ನು ನಿರ್ಧರಿಸುತ್ತವೆ.

---

* Mahatma Gandhi, *Young India, 1917-1922*, Madras, 1922, pp. 737-739. – ಸಂ.

ಆಳುವ ವರ್ಗಗಳು ವೈಜ್ಞಾನಿಕ ಸಮಾಜವಾದದ ಬಗೆಗೆ ಬದ್ಧ ವೈರದ ಮನೋಧರ್ಮ ಹೊಂದಿವೆ. ಅವು ಯಾವತ್ತೂ ವೈಜ್ಞಾನಿಕ ಸಮಾಜವಾದವನ್ನು ಬಂಡವಾಳವಾದದ ಅಧಿಪತ್ಯಕ್ಕೆ ಒಬ್ಬ ಶತ್ರುವನ್ನಾಗಿ ಕಂಡುಕೊಂಡಿವೆ. ಈ ಆಳುವ ವರ್ಗಗಳ ಸಿದ್ಧಾಂತಕಾರರು ಯಾವತ್ತೂ ಗಾಂಧೀವಾದದೊಂದಿಗೆ ಮುಚ್ಚುಮರೆ ಇಲ್ಲದ ಸಹಾನುಭೂತಿ ತೋರಿದ್ದಾರೆ. ಅನೇಕ ಭಾರತೀಯ ಬೂರ್ಜ್ವಾ ಸಿದ್ಧಾಂತಕಾರರು ಗಾಂಧೀವಾದವನ್ನು ಭಾರತದ ರಾಷ್ಟ್ರೀಯ ಜಾಗತಿಕ ಮನೋಧರ್ಮವನ್ನಾಗಿ ಸಾಧಿಸತೋರಲು ಯತ್ನಿಸಿದ್ದಾರೆ – ಗಾಂಧೀಯವರೂ ಅವರ ನಿಷ್ಠಾವಂತ ಅನುಯಾಯಿಗಳೂ ಬಂಡವಾಳವಾದದ ಬಗೆಗೆ ಪ್ರಾಮಾಣಿಕವಾಗಿ ವ್ಯಕ್ತಿನಿಷ್ಠ ವಿರೋಧ ವ್ಯಕ್ತಪಡಿಸಿದ್ದರೂ. ಇದು ಯಾಕೆ ಹೀಗೆ? ಸತ್ಯ ಸಂಗತಿ ಎಂದರೆ, ಗಾಂಧೀವಾದವು ಎಷ್ಟೇ ಬಂಡವಾಳವಾದ ವಿರೋಧಿ ಭಾವನೆಗಳನ್ನು ವ್ಯಕ್ತಪಡಿಸಿದ್ದರೂ ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆಗೆ ಅದು ಎಷ್ಟು ಮಾತ್ರವೂ ವಿರೋಧಿಯಲ್ಲವೆಂದಾಗಿ ತೋರಿಸಿಕೊಂಡಿದೆ. ಮೇಲೆ ಚರ್ಚಿಸಿದ ಅದರ ಮೂಲ ಲಕ್ಷಣಗಳೇ ಇದಕ್ಕೆ ಕಾರಣ. ಅದು ಸಮಕಾಲೀನ ಭಾರತದಲ್ಲಿ ಬೂರ್ಜ್ವಾ ವ್ಯವಸ್ಥೆಯ ಒಂದು ಅಂಗಭಾಗವೇನೋ ಎನ್ನುವಂತಾಗಿದೆ. ಭಾರತವು ಆರ್ಥಿಕತೆಯ ಅನೇಕ ವಲಯಗಳಲ್ಲಿ ಏಕಸ್ವಾಮ್ಯ ಬಂಡವಾಳವಾದದ ಹಂತ ತಲುಪಿದೆ. ಬೂರ್ಜ್ವಾ ಸಿದ್ಧಾಂತಕಾರರು ಗಾಂಧೀವಾದವನ್ನು ಒಂದು ಹೊಸ ಕ್ಷೇತ್ರದಲ್ಲಿ ಅನ್ವಯಿಸಲು ಯತ್ನಿಸುತ್ತಿದ್ದಾರೆ. ಶೋಷಿತ ವರ್ಗಗಳು ಪ್ರಸಕ್ತ ಸಾಮಾಜಿಕ ವ್ಯವಸ್ಥೆಯನ್ನು ಭಂಗಗೊಳಿಸದಂತೆ ಆ ವ್ಯವಸ್ಥೆಯ ರಕ್ಷಣೆಯಲ್ಲಿ ಆಳುವ ವರ್ಗಗಳು ಗಾಂಧೀವಾದವನ್ನು ಬಳಸಿಕೊಳ್ಳುತ್ತಿವೆ.

ಗಾಂಧೀಯವರ ಅಹಿಂಸಾತ್ಮಕ ವಿಧಾನಗಳು ವಸಾಹತುವಾದಿಗಳ ವಿರುದ್ಧ ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ಸಾಕಷ್ಟು ಪರಿಣಾಮಕಾರಿಯಾಗಿಯೇ ಇದ್ದವು- ಗಾಂಧೀಯವರ ವಿರೋಧವಿದ್ದಾಗ್ಯೂ ಜನಸಮೂಹಗಳು ಕೆಲವು ವೇಳೆ ಗಾಂಧೀಯವರ ವಿಧಾನಗಳ ಜೊತೆಗೆ ತೀವ್ರತರವಾದ ಉಗ್ರ ಹೋರಾಟ ವಿಧಾನಗಳನ್ನು ಜೋಡಿಸಿಕೊಂಡು ಸ್ವತಂತ್ರ ಭಾರತೀಯ ರಾಜ್ಯವನ್ನು ಯಶಸ್ವಿಯಾಗಿ ನಿರ್ಮಿಸಿದವು. ಆದರೆ ಆನಂತರ ಗಾಂಧೀಯವರ ಸಿದ್ಧಾಂತವು ಕೋಟ್ಯಂತರ ದುಡಿಯುವ ಜನರ ಸ್ಥಿತಿಗತಿಗಳಲ್ಲಿ ಯಾವುದೇ ಗಹನವಾದ ಬದಲಾವಣೆ ಉಂಟುಮಾಡಲು ತಾನು ಅಸಮರ್ಥವೆಂದು ತೋರಿಸಿಕೊಂಡಿರುವುದು ವಿಷಾದಕರ.

ಆಧುನಿಕ ಭಾರತೀಯ ಸಮಾಜದಲ್ಲಿ ಆಳುವ ವರ್ಗಗಳು ಕಾರ್ಮಿಕರ ಚಳವಳಿಯನ್ನು ವಿಭಜಿಸುವ ಮತ್ತು ಎಡಪಂಥದ ಶಕ್ತಿಗಳ ಹಾಗೂ ವೈಜ್ಞಾನಿಕ ಸಮಾಜವಾದದ ಪ್ರಭಾವವನ್ನು ದುರ್ಬಲಗೊಳಿಸುವ ಕಾರ್ಯಭಾರವನ್ನು ತಮ್ಮ ಮುಂದೆ ಇರಿಸಿಕೊಂಡಿವೆ. ಇದು ವಿಭಿನ್ನ ವಿಧಾನಗಳನ್ನು – ರಾಜಕೀಯ ವಂಚಿಕೆ

ಗಳಿಂದ ಹಿಡಿದು ಕ್ರೂರ ದಬ್ಬಾಳಿಕೆಯವರೆಗೆ. ಗಾಂಧೀವಾದದ ಅಸಾಧ್ಯವಾದರ್ಶ ವಿಚಾರಗಳ, "ಭಾರತೀಯ ಸಮಾಜವಾದ"ದ ಪ್ರಚಾರದಿಂದ ಹಿಡಿದು ಶಿವಸೇನೆಯಂಥ (ದುಡಿಯುವ ಜನರನ್ನು ಭಯಭೀತಿಗೊಳಿಸಲೆಂದು ಮುಂಬಯಿಯ ಏಕಸ್ವಾಮ್ಯವಾದಿಗಳು ಸೃಜಿಸಿದ ಒಂದು ಫ್ಯಾಸಿಸ್ಟ್ ಸಂಘಟನೆ) ಸಂಘಟನೆಗಳ ಭಯೋತ್ಪಾದಕ ಚಟುವಟಿಕೆಗಳವರೆಗೆ ವಿಭಿನ್ನ ವಿಧಾನಗಳನ್ನು – ಸುಸಮನ್ವಯವಾಗಿ ಸಂಯೋಜಿಸಿಕೊಂಡು ವರ್ಗ ಹೋರಾಟವನ್ನು ನಡೆಸುವುದಕ್ಕೆ ಅವುಗಳಿಗೆ ದಾರಿ ಮಾಡಿಕೊಟ್ಟಿದೆ. ಹಾಗಾಗಿ ಇಂದು ಎಡಪಂಥದವರು ದುಡಿಯುವ ಜನರ ಸಾಮಾಜಿಕ-ಆರ್ಥಿಕ ಹಾಗೂ ಸಾಮಾಜಿಕ-ರಾಜಕೀಯ ಕೋರಿಕೆಗಳಿಗೆ ಬೆಂಬಲವಾಗಿ ನಡೆಸುತ್ತಿರುವ ಸಾಮೂಹಿಕ ಸತ್ಯಾಗ್ರಹ ಚಳವಳಿಗಳಲ್ಲಿ ಗಾಂಧೀವಾದದ ವಿಧಾನಗಳನ್ನು ಬಳಸಿದಾಗಲಷ್ಟೆ ಅವು ನಿಜವಾಗಿ ದುಡಿಯುವ ಜನರ ಹಿತಗಳ ಪರವಾಗಿ ಹಾಗೂ ಬೂರ್ಜ್ವಾಸಿಯ ಹಿತಗಳಿಗೆ ವಿರುದ್ಧವಾಗಿ ಬಳಸಿದ ಅರ್ಥ ಹೊಂದುತ್ತವೆ.

ಆಧುನಿಕ ಗಾಂಧೀವಾದವು ಕೆಲವು ಸಾಮಾನ್ಯ ಪ್ರಜಾಸತ್ತಾತ್ಮಕ ಲಕ್ಷಣಗಳನ್ನು ಇನ್ನೂ ಉಳಿಸಿಕೊಂಡಿದೆ. ಈ ಲಕ್ಷಣಗಳು ತಮ್ಮ ಪ್ರಾಮುಖ್ಯವನ್ನು ಕಳೆದುಕೊಂಡಿಲ್ಲ. ಭಾರತದಲ್ಲಿಂದು ಅಮೆರಿಕದ ಬಂಡವಾಳವೂ ಅದರ ವಿಚಾರಧಾರೆಯೂ ಹೆಚ್ಚು ಹೆಚ್ಚು ಪ್ರಭಾವ ಬೀರತೊಡಗಿವೆ. ಭಾರತೀಯ ಏಕಸ್ವಾಮ್ಯಗಳೂ ಬಲಗೊಳ್ಳುತ್ತಿವೆ. ಈ ಪರಿಸ್ಥಿತಿಯಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಏಕಸ್ವಾಮ್ಯ ವಿರೋಧಿ ಚಳವಳಿ ತೀವ್ರಗೊಳ್ಳುತ್ತಿದೆ. ಈಗ ಎಲ್ಲ ಪ್ರಜಾಸತ್ತಾತ್ಮಕ ಪುರೋಗಾಮಿ ಶಕ್ತಿಗಳ ನಡುವೆ ವ್ಯಾಪಕ ಸಹಕಾರ ಇನ್ನೂ ಸಾಧ್ಯವಿದೆ. ಆದರೆ ದುರದೃಷ್ಟವಶಾತ್ ಗಾಂಧೀಯವರ ಮರಣಾನಂತರ ಅವರ ವಾದದ ಬೆಳವಣಿಗೆಯು ಅವರ ಸಿದ್ಧಾಂತದ ಧನಾತ್ಮಕ ಲಕ್ಷಣಗಳನ್ನು ದೃಢಗೊಳಿಸುವ ಹಾಗೂ ವಿಕಾಸಗೊಳಿಸುವ ಮಾರ್ಗದಲ್ಲಿ ಮುಖ್ಯವಾಗಿ ಮುಂದುವರಿಯುತ್ತಿಲ್ಲ.

ದ್ವಿತೀಯ ಜಾಗತಿಕ ಯುದ್ಧದನಂತರ, ಅದರಲ್ಲೂ ಕಳೆದ ಕೆಲವು ವರ್ಷಗಳಲ್ಲಿ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಅನೇಕ ಮಾರ್ಕ್ಸ್‌ವಾದಿ ಅಲ್ಲದ ಸೈದ್ಧಾಂತಿಕ ಪ್ರವೃತ್ತಿಗಳು ವೈಜ್ಞಾನಿಕ ಸಮಾಜವಾದಕ್ಕೆ ಹೆಚ್ಚು ಹತ್ತಿರ ಬಂದಿವೆ (ಉದಾಹರಣೆಗೆ, ರಾಷ್ಟ್ರೀಯ ಪ್ರಜಾಪ್ರಭುತ್ವ). ಗಾಂಧೀವಾದ ಮಾತ್ರ ಈ ರೀತಿಯಲ್ಲಿ ಬೆಳೆದಿಲ್ಲ. ಗಾಂಧೀವಾದದ ಪ್ರಜಾಸತ್ತಾತ್ಮಕ ಸಾರವನ್ನು ಒತ್ತಿ ಹೇಳುವಾಗಲೇ, ಅದರ ಅನುಯಾಯಿಗಳಲ್ಲಿ ಬಹು ಮಂದಿ ಅನುಸರಿಸುತ್ತಿರುವ ನೀತಿಯನ್ನು ನೋಡಿದಾಗ, ಈ ಸಿದ್ಧಾಂತವು ವಿವಾದಕರವೆನ್ನುವಂತೆ ವೈಜ್ಞಾನಿಕ ಸಮಾಜವಾದದಿಂದ ದೂರ ಸರಿಯುವ ಪ್ರವೃತ್ತಿಯನ್ನೇ ಪ್ರದರ್ಶಿಸುತ್ತಿದೆ ಎನ್ನುವುದನ್ನೂ ಮನಸ್ಸಿನಲ್ಲಿಟ್ಟಿರಬೇಕು.

* * *

ಗಾಂಧೀವಾದವನ್ನು ಒಪ್ಪಬಹುದು ಇಲ್ಲವೇ ಒಪ್ಪದಿರಬಹುದು, ಆದರೆ ಅದರ ಸಾರವನ್ನು ತಿಳಿಯುವುದು, ಅಭ್ಯಸಿಸುವುದು ಮತ್ತು ಭಾರತೀಯ ಇತಿಹಾಸದಲ್ಲಿ ಒಂದು ಮುಖ್ಯ ಹಾಗೂ ವಸ್ತುನಿಷ್ಠ ವಿದ್ಯಮಾನವಾಗಿ ಅದನ್ನು ಗೌರವಿಸುವುದು ಅತ್ಯಗತ್ಯ.

ಅಭಿಪ್ರಾಯ ವ್ಯತ್ಯಾಸವಿದ್ದ ಮಾತ್ರಕ್ಕೆ ಗೌರವಿಸಬಾರದೆಂದೇನೂ ಇಲ್ಲ. ಗಾಂಧೀಯವರೇ ಇದಕ್ಕೆ ಉಜ್ವಲ ನಿದರ್ಶನವಾಗಿದ್ದರು. ಅವರು ರಷ್ಯದಲ್ಲಿ ಜರುಗಿದ ಅಕ್ಟೋಬರ್ ಸಮಾಜವಾದಿ ಮಹಾ ಕ್ರಾಂತಿಯ ಎಲ್ಲ ಧ್ಯೇಯಗಳನ್ನೂ ಒಪ್ಪದವರಾಗಿದ್ದರು. ವರ್ಗ ಹೋರಾಟಕ್ಕೂ ನಿರೀಶ್ವರವಾದಕ್ಕೂ ಬೆಂಬಲ ನೀಡಿದುದಕ್ಕಾಗಿ ಕಮ್ಯೂನಿಸ್ಟರನ್ನು ನಿಂದಿಸಿದರು, ಆದರೆ ಬೋಲ್ಷೆವಿಕರ ಅಂತಿಮ ಗುರಿಗಳ ಧನ್ಯತೆಯನ್ನೂ ನ್ಯಾಯಪರತೆಯನ್ನೂ, ಕ್ರಾಂತಿಯ ನಾಯಕರಾದ ಲೆನಿನರ ಮಹೋನ್ನತಿಯನ್ನೂ, ಒಪ್ಪಿಕೊಂಡರು.

ಗಾಂಧೀಯವರು ಭಾರತೀಯ ಜನರ ಮಧ್ಯೆ ಇಂದೂ ಭಾರಿ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಕಾರಣಕ್ಕಾಗಿಯೇ ಗಾಂಧೀವಾದವನ್ನು, ಅದರೆಲ್ಲ ವಿವಾದಾತ್ಮಕ ಮಗ್ಗುಲುಗಳನ್ನೂ ಸವಿವರವಾಗಿ ಅಭ್ಯಸಿಸಬೇಕು. ಅದನ್ನು ಟೀಕಿಸುವಾಗ ಧನಾತ್ಮಕವಾದ ವೈಜ್ಞಾನಿಕ ಮನೋಧರ್ಮ ತೋರಬೇಕು. ಇಂದಿನ ಭಾರತದ ಅತ್ಯಂತ ಜಟಿಲ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಸಮಸ್ಯೆಗಳ ಬಗೆಗೂ ಇಂತಹುದೇ ಮನೋಧರ್ಮ ತೋರಬೇಕು.

* * *

ಮಹಾತ್ಮ ಗಾಂಧೀಯವರು ವಸಾಹತುವಾದದ ವಿರುದ್ಧ ಸಾಮ್ರಾಜ್ಯವಾದ ವಿರೋಧಿ ಹೋರಾಟಕ್ಕೆ, ತಮ್ಮ ದೇಶವನ್ನು ವಿದೇಶೀ ಆಡಳಿತದಿಂದ ಮುಕ್ತಗೊಳಿಸುವ ಧ್ಯೇಯಕ್ಕೆ, ಭಾರಿ ಕಾಣಿಕೆ ಸಲ್ಲಿಸಿದುದಕ್ಕಾಗಿ ಸೋವಿಯತ್ ಜನ ಅವರನ್ನು ಗೌರವಿಸುತ್ತಾರೆ. ಗಾಂಧೀಯವರು ಯಾವತ್ತೂ ಭಾರತೀಯ ಜನರ ಮಧ್ಯೆಯೇ ಇದ್ದರು, ಅವರ ಬಾಳಿನ ಸುಖದುಃಖಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎನ್ನುವುದನ್ನು ಸೋವಿಯತ್ ಜನ ಚೆನ್ನಾಗಿ ಬಲ್ಲರು. ಗಾಂಧೀಯವರು ಯಾವತ್ತೂ ಬ್ರಿಟಿಷ್ ಶಾಸಕರ ವಿರುದ್ಧ ಭಾರತೀಯ ಜನರ ಕಷ್ಟಕರ ಹೋರಾಟದಲ್ಲಿ, ಆ ಜನರ ನಿಸ್ವಾರ್ಥತೆ ಹಾಗೂ ಧೈರ್ಯದಲ್ಲಿ ಸ್ಫೂರ್ತಿ ಕಂಡುಕೊಂಡರು ಮತ್ತು ಆ ಜನರ ದೌರ್ಭಾಗ್ಯಗಳನ್ನು ಹಗುರಗೊಳಿಸಲು, ಅನಾಹುತಗಳನ್ನು ತಪ್ಪಿಸಲು ಮತ್ತು ಹೊಸ ಮತ್ತು ಉತ್ತಮ ಸಮಾಜಕ್ಕಾಗಿ ಶೋಧೆಯಲ್ಲಿ ಅವರಿಗೆ ಉತ್ತೇಜನ ನೀಡಲು ಪ್ರಾಮಾಣಿಕವಾಗಿ ಶುದ್ಧಾಂತಃಕರಣದಿಂದ ಶ್ರಮಿಸಿದರು.

ಬ್ರಿಟಿಷ್ ಸಾಮ್ರಾಜ್ಯವಾದದ ವಿರುದ್ಧ ಅನೇಕ ದಶಕಗಳ ನಿರಂತರ ಹೋರಾಟವು ಭಾರತೀಯ ಜನರ ವಿಜಯದಲ್ಲಿ ಕೊನೆಗಂಡಿತು. ಅವರು ಯಾವತ್ತೂ ಮಹಾತ್ಮ ಗಾಂಧೀಯವರನ್ನು ಅತ್ಯಂತ ಗೌರವದಿಂದ ಸ್ಮರಿಸುತ್ತಾರೆ. ಜನಸಮೂಹಗಳ ಕ್ರಾಂತಿಕಾರಿ ಹಾಗೂ ಸೃಜನಾತ್ಮಕ ಯತ್ನಗಳಲ್ಲಿ ಯಾವತ್ತೂ ಗಾಢ ಸಹಾನುಭೂತಿ ಹೊಂದಿರುವ ಸೋವಿಯತ್ ಜನರು ಭಾರತೀಯ ಜನರ ಈ ಭಾವನೆಗಳಲ್ಲಿ ಪ್ರಾಮಾಣಿಕವಾಗಿ ಪಾಲ್ಗೊಳ್ಳುತ್ತಾರೆ.

ಜವಾಹರಲಾಲ ನೆಹರೂ

ಭಾರತದ ಪ್ರಮುಖ ರಾಜಕೀಯ ಹಾಗೂ ರಾಜ್ಯ ಕಾರ್ಯಕರ್ತ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಾರ್ಟಿಯ ನಾಯಕ.

ಜನನ 1889ರ ನವಂಬರ್ 14ರಂದು, ಅಲಹಾಬಾದ್‌ನಲ್ಲಿ ಕಾಶ್ಮೀರಿ ಬ್ರಾಹ್ಮಣ ಕುಟುಂಬವೊಂದರಲ್ಲಿ. ತಂದೆ ವಕೀಲರಾಗಿದ್ದರು, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸುಧಾರಣಾವಾದಿ ಪಕ್ಷದಲ್ಲಿ ಒಬ್ಬ ಪ್ರಮುಖ ನಾಯಕರಾಗಿದ್ದರು.

ವಿದ್ಯಾಭ್ಯಾಸ 1905ರಿಂದ 1912ರವರೆಗೆ ಇಂಗ್ಲೆಂಡಿನಲ್ಲಿ ಮೊದಲು ಹ್ಯಾರೋದಲ್ಲಿ ಮೇಲುವರ್ಗದ ಇಂಗ್ಲಿಷ್ ಶಾಲೆಯಲ್ಲಿ, ಅನಂತರ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ. ವೃತ್ತಿಯಲ್ಲಿ ವಕೀಲರು.

1912ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪಾರ್ಟಿ ಸೇರಿಕೊಂಡರು. 1916ರಿಂದ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಕ್ರಿಯಾಶೀಲವಾಗಿ ಕಾರ್ಯ ಜರುಗಿಸಿದರು. ಮಹಾತ್ಮ ಗಾಂಧೀಯವರು ರಾಷ್ಟ್ರೀಯ ಕಾಂಗ್ರೆಸ್ಸಿನ ನಾಯಕತ್ವ ವಹಿಸಿಕೊಂಡಾಗ (1919) ಜವಾಹರಲಾಲ ನೆಹರೂ ಅವರ ಬೆಂಬಲಿಗರಾದರು, ನಿಕಟ ಸಹವರ್ತಿಯಾದರು. 1921ರಲ್ಲಿ ಮೊದಲು ವಸಾಹತುವಾದ ವಿರೋಧಿ ಆಂದೋಳನ ನಡೆಸಿದುದಕ್ಕಾಗಿ ದಸ್ತಗಿರಿಯಾದರು. ಒಟ್ಟು ಹತ್ತು ವರ್ಷ ಸೆರೆಮನೆಯಲ್ಲಿ ಕಳೆದರು. ಅನೇಕ ಬಾರಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಾರ್ಟಿಯ ಅಧ್ಯಕ್ಷರಾಗಿ ಚುನಾಯಿತರಾದರು (1929-1930, 1936-1937, 1946, 1951-1954). 1946ರಲ್ಲಿ ಭಾರತದ ತಾತ್ಕಾಲಿಕ ಸರಕಾರದಲ್ಲಿ ಉಪ ಪ್ರಧಾನಮಂತ್ರಿ (ವೈಸ್‌ರಾಯ್ ಪ್ರಧಾನಮಂತ್ರಿ)ಯಾಗಿದ್ದರು).

1947ರ ಆಗಸ್ಟ್‌ನಲ್ಲಿ ಸ್ವತಂತ್ರ ಭಾರತ ರಚನೆಯಾದಂದಿನಿಂದ ತಮ್ಮ ಸಾವಿನವರೆಗೂ ನೆಹರೂ ಭಾರತದ ಪ್ರಧಾನ ಮಂತ್ರಿ ಹಾಗೂ ವಿದೇಶಾಂಗ ವ್ಯವಹಾರಗಳ ಮಂತ್ರಿಯಾಗಿದ್ದರು. ಭಾರತದ ಭವಿತವ್ಯ ವಿದ್ದುದು ಸಮಾಜವಾದದಲ್ಲೇ ಎಂದವರು ಕಂಡುಕೊಂಡಿದ್ದರು. ಆದರೆ ಗಾಂಧೀಯವರಂತೆ ಇವರೂ ಸಮಾಜವಾದದ ಮಾರ್ಗವು ಸಾಮಾಜಿಕ ರಾಜಿಗಳ ಮೂಲಕ ಸಾಗಿ ಹೋಗುತ್ತದೆಂದು ಭಾವಿಸಿದ್ದರು.

ನೆಹರೂರವರ ನಾಯಕತ್ವದಲ್ಲಿ ಭಾರತ ಸರಕಾರವು ವಸಾಹತು ಕಾಲಾವಧಿಯನಂತರ ದೇಶದಲ್ಲಿ ಉಳಿದುಕೊಂಡಿದ್ದ ಆರ್ಥಿಕ ಹಿಂದುಳಿದಿರುವಿಕೆಯನ್ನು ತೊಡೆದು ಹಾಕಲು ಅನೇಕ ಪ್ರಮುಖ ಕ್ರಮಗಳನ್ನು ಕೈಗೊಂಡಿತು. ರಾಷ್ಟ್ರೀಯ ಆಯೋಜನಾ ಸಮಿತಿಯ ಅಧ್ಯಕ್ಷರಾಗಿ ನೆಹರೂರವರು ಭಾರತದ ಬೆಳವಣಿಗೆಯ ಮೊದಲ ಮೂರು ಪಂಚವಾರ್ಷಿಕ ಯೋಜನೆಗಳನ್ನು ರಚಿಸಿ, ಕಾರ್ಯಗತಗೊಳಿಸುವುದರಲ್ಲಿ ನೇರವಾಗಿ ಭಾಗ ವಹಿಸಿದರು.

ವಿದೇಶಾಂಗ ನೀತಿ ಕ್ಷೇತ್ರದಲ್ಲಿ ನೆಹರೂ ಯಾವುದೇ ಬಣದೊಂದಿಗೆ ಸೇರದಿರುವ ಅಲಿಪ್ತ ನೀತಿಮಾರ್ಗವನ್ನೂ ವಿಭಿನ್ನ ಸಾಮಾಜಿಕ ವ್ಯವಸ್ಥೆಗಳುಳ್ಳ ರಾಜ್ಯಗಳ ಶಾಂತಿಯುತ ಸಹಅಸ್ತಿತ್ವದ ನೀತಿಯನ್ನೂ ಅನುಸರಿಸಿದರು, ವಿವಿಧ ರಾಜ್ಯಗಳ ನಡುವಿನ ಸಂಬಂಧಗಳಲ್ಲಿ ಶಾಂತಿಯುತ ಸಹಅಸ್ತಿತ್ವದ ಐದು ಸೂತ್ರಗಳನ್ನು – ಪಂಚಶೀಲ ಸೂತ್ರಗಳನ್ನು – ವಿಶದಗೊಳಿಸುವುದರಲ್ಲಿ ಭಾಗವಹಿಸಿದರು. ಇವರು ಏಷ್ಯನ್ ಹಾಗೂ ಆಫ್ರಿಕನ್ ದೇಶಗಳ ಬಾಂಡುಂಗ್ ಸಮ್ಮೇಳನ(1955)ದ ಉಪಕ್ರಮಕಾರರಲ್ಲಿ ಹಾಗೂ ಸಹಭಾಗಿಗಳಲ್ಲಿ ಒಬ್ಬರು.

ಭಾರತ-ಸೋವಿಯತ್ ಸಂಬಂಧಗಳು ಸರ್ವತೋಮುಖವಾಗಿ ವಿಕಾಸಗೊಳ್ಳುವುದು ಅಗತ್ಯವೆಂದು ಅವರು ಭಾವಿಸಿದ್ದರು ಮತ್ತು ದ್ವಿತೀಯ ಜಾಗತಿಕ ಯುದ್ಧದ ಸಮಯದಲ್ಲಿ ಸೋವಿಯತ್ ಒಕ್ಕೂಟಕ್ಕೆ ಕ್ರಿಯಾಶೀಲ ಬೆಂಬಲ ನೀಡಿದರು. ಸೋವಿಯತ್ ಒಕ್ಕೂಟಕ್ಕೆ ಹಲವಾರು ಬಾರಿ ಭೇಟಿಕೊಟ್ಟಿದ್ದರು (1927, 1955 ಹಾಗೂ 1961).

1955ರಲ್ಲಿ ಭಾರತದ ಅತ್ಯುನ್ನತ "ಭಾರತ ರತ್ನ" ಪ್ರಶಸ್ತಿ ಪಡೆದರು. ವಿಶ್ವ ಶಾಂತಿ ಪರಿಷತ್ತಿನ ಫ್ರೆಡರಿಕ್ ಜೋಲಿಯೋ-ಕ್ಯೂರಿ ಚಿನ್ನದ ಶಾಂತಿ ಪದಕವನ್ನು (1970ರ ಅಕ್ಟೋಬರ್‌ನಲ್ಲಿ) ಇವರಿಗೆ ಮರಣಾನಂತರ ನೀಡಲಾಯಿತು.

ದೆಹಲಿಯಲ್ಲಿ 1964ರ ಮೇ 27ರಂದು 74ರ ವಯಸ್ಸಿನಲ್ಲಿ ಕಾಲಾಧೀನರಾದರು.

ಒಬ್ಬ ವಿಖ್ಯಾತ ರಾಜಕೀಯ ಕಾರ್ಯಕರ್ತರಾಗಿ, ರಾಷ್ಟ್ರೀಯ-ವಿಮೋಚನಾ ಚಳವಳಿಯ ಮಹೋನ್ನತ ನಾಯಕರಲ್ಲೊಬ್ಬರಾಗಿ, ಶಾಂತಿ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ಪ್ರಗತಿಗಳಿಗೆ ಹೋರಾಡುವವರಾಗಿ, ಸಾಮಾಜಿಕ ಅನ್ಯಾಯ ಹಾಗೂ ರಾಷ್ಟ್ರೀಯ ಮರ್ದನಗಳ ಬದ್ಧ ಶತ್ರುವಾಗಿ ಮತ್ತು ಸೋವಿಯತ್ ಒಕ್ಕೂಟದ ಮಿತ್ರನಾಗಿ, ನೆಹರೂರವರ ಹೆಸರು ಇತಿಹಾಸದಲ್ಲಿ ಶಾಶ್ವತವಾಗಿ ದಾಖಲಾಗಿದೆ.

ಅವರು ನಿಧನರಾಗಿ ಈಗ ಸಾಕಷ್ಟು ಕಾಲ ಸಂದಿದೆ. ಅವರ ಬಹುಮುಖ ಚಟುವಟಿಕೆಯ ಮಹತ್ವ ಹಾಗೂ ಪರಿಣಾಮಗಳನ್ನು ವಸ್ತುನಿಷ್ಠವಾಗಿ ಮೌಲ್ಯ ನಿರ್ಣಯಿಸಲೂ ಅವರ ಬಾಳಿನ ಘಟನಾವಳಿಗಳನ್ನು ಹೆಚ್ಚು ಸ್ಪಷ್ಟವಾಗಿ ಕಾಣಲೂ ಈಗ ಸಾಧ್ಯತೆ ಉಂಟಾಗಿದೆ. ಕಳೆದ ಕೆಲವು ವರ್ಷಗಳಲ್ಲಿ ಅನೇಕ ಪ್ರಚಂಡ ಚಾರಿತ್ರಿಕ ಪ್ರಾಮುಖ್ಯದ ಘಟನೆಗಳು ಜರುಗಿವೆ. ಅವು ಅನೇಕ ಜನರ ಹೆಸರುಗಳನ್ನು – ರಾಜಕೀಯ ಕ್ಷೇತ್ರ ಬಿಟ್ಟನಂತರ ಬಹುಬೇಗ ಪ್ರಾಮುಖ್ಯ ಕಳೆದುಕೊಂಡಂಥ ಅನೇಕ ಪ್ರಮುಖ ರಾಜ್ಯ ಹಾಗೂ ಪಾರ್ಟಿ ಕಾರ್ಯಕರ್ತರ ಹೆಸರುಗಳನ್ನು ಸಹ – ಇತಿಹಾಸದ ಪುಟಗಳಿಂದ ಅಳಿಸಿ ಹಾಕಿ ಬಿಟ್ಟಿವೆ. ಆದರೆ ನೆಹರೂರವರ ವಿಷಯದಲ್ಲಿ ಇದು ಹೀಗೆ ಸಂಭವಿಸಿಲ್ಲ. ಭಾರತದ ಸುವಿಖ್ಯಾತ ನಾಯಕರಾಗಿ, ರಾಷ್ಟ್ರೀಯ-ವಿಮೋಚನಾ ಚಳವಳಿಯ ಹಾಗೂ ಸಾಮಾಜಿಕ ಪ್ರಗತಿಯ ವಿಚಾರಗಳ ಶ್ರೇಷ್ಠ ವಕ್ತಾರರಲ್ಲಿ ಒಬ್ಬರಾಗಿ ಇವರ ಹೆಸರು ಅಚ್ಚಳಿಯದೆ ಉಳಿದಿದೆ.

ನೆಹರೂರವರ ಬಗೆಗೆ ಮತ್ತು ಅವರ ಪ್ರಮುಖ ಚಾರಿತ್ರಿಕ ಪಾತ್ರದ ಬಗೆಗೆ ನೀಡಲಾಗುತ್ತಿರುವ ಸ್ವಲ್ಪವೂ ಕುಗ್ಗದ ಗಮನಕ್ಕೆ ಮುಖ್ಯ ಕಾರಣವೆಂದರೆ ಇಂದಿಗೂ ಮಾನವಕುಲಕ್ಕೆ ಸಂಬಂಧಿಸಿರುವಂಥ ಅನೇಕ ಸಮಸ್ಯೆಗಳನ್ನು ಅವರು ಒಬ್ಬ ಚಿಂತಕರಾಗಿ ತಮ್ಮ ವಿವೇಚನೆಗೆ ತುದುಕೊಂಡುದುದಾಗಿದೆ. ನೆಹರೂರವರ ವ್ಯಕ್ತಿತ್ವದ ಸಮ್ಮೋಹಕ ಶಕ್ತಿಯೂ ತುಂಬ ಮಟ್ಟಿಗೆ ಈ ಆಸಕ್ತಿಗೆ ಕಾರಣವಾಗಿದೆ. ಅವರನ್ನು ಸಂಧಿಸುವ ಸೌಭಾಗ್ಯ ಹೊಂದಿದವರಷ್ಟೆ ಅಲ್ಲ, ಅವರ ವ್ಯಕ್ತಿಚಿತ್ರವನ್ನು ಸೆರೆಹಿಡಿದಿರುವಂಥ ಅವರು ಬಿಟ್ಟುಕೊಟ್ಟು ಹೋಗಿರುವ ಸಾಹಿತ್ಯಿಕ ಸಂಪತ್ತಿನ, ಅನೇಕಾನೇಕ ಸ್ಮಾರಕ ಗ್ರಂಥಗಳ ಹಾಗೂ ಪಾಂಡಿತ್ಯಪೂರ್ಣ ಪ್ರಕಟಣೆಗಳ ಪರಿಚಯ ಪಡೆದಿರುವವರೂ, ಅವರ ವ್ಯಕ್ತಿತ್ವದ ಈ ಸಮ್ಮೋಹಕ ಶಕ್ತಿಯ ಪ್ರಭಾವಕ್ಕೊಳಗಾಗಿದ್ದಾರೆ.

ಪ್ರಧಾನ ಚಾರಿತ್ರಿಕ ಘಟನೆಗಳನ್ನು ಬಿಡಿ ವ್ಯಕ್ತಿಗಳ ಚಟುವಟಿಕೆಗಳ ಮೂಲಕ ವಿವರಿಸುವುದು ತಪ್ಪೇ ಸರಿ. ಆದರೂ ಇತಿಹಾಸದಲ್ಲಿನ ಹೆಗ್ಗುರುತುಗಳು ನಮ್ಮ ಮನಸ್ಸು ಹಾಗೂ ಸ್ಮೃತಿಗಳಲ್ಲಿ ನಿರ್ದಿಷ್ಟ ವ್ಯಕ್ತಿಗಳ ಹೆಸರುಗಳೊಂದಿಗೆ ದೃಢವಾಗಿ ಸಂಬಂಧಿತವಾಗಿರುತ್ತವೆ. ಈ ಹೆಸರುಗಳು ಆ ಘಟನೆಗಳ ಸಂಕೇತಗಳೋ ಎನ್ನುವಂತೆ ಆಗಿರುತ್ತವೆ. ಉದಾಹರಣೆಗೆ, ಭಾರತದ ಸುದೀರ್ಘ ಸ್ವಾತಂತ್ರ್ಯ ಹೋರಾಟ. ಇದು ಅನೇಕ ಸುಪ್ರಸಿದ್ಧ ಹಾಗೂ ಧೈರ್ಯಶಾಲಿ ವೀರರುಗಳಿಗೆ ಜನ್ಮ ನೀಡಿತು, ವಿವಿಧ ಮನೋವೃತ್ತಿಗಳ ಉಜ್ವಲ ರಾಜಕಾರಣಿಗಳನ್ನು ಮುಂದೆ ತಂದಿತು. ಆದರೂ ಅದು ಎಲ್ಲಕ್ಕೂ ಮಿಗಿಲಾಗಿ ಮೋಹನದಾಸ ಕರಮ್‌ಚಂದ್ ಗಾಂಧೀಯವರ ಹೆಸರಿನೊಂದಿಗೆ ಸಂಬಂಧಿತವಾಗಿದೆ. ಅಂತೆಯೇ ಸ್ವತಂತ್ರ ಭಾರತ ಸ್ಥಾಪನೆಯ ಘಟನೆಯು ಜವಾಹರಲಾಲ ನೆಹರೂರವರ ಹೆಸರಿನೊಂದಿಗೆ ಸಂಬಂಧಿತವಾಗಿದೆ. ಬೇರೆ ಯಾರಿಗಿಂತ ಹೆಚ್ಚಾಗಿ ನೆಹರೂರವರೇ ದೇಶದ ರಾಜಕೀಯ ಪದ್ಧತಿಯನ್ನೂ ಅದರ ರಾಜಕೀಯ ಮಾರ್ಗವನ್ನೂ ಸೃಜಿಸಿದಂಥವರು. ದೇಶದ ಈ ಪ್ರಥಮ ಪ್ರಧಾನಮಂತ್ರಿಗಳ ಘನತೆಯನ್ನು ಊನಗೊಳಿಸುವ ಮೂಲಕ ರಾಜಕೀಯ ಲಾಭ ಪಡೆದುಕೊಳ್ಳಲು ಕೆಲವು ಭಾರತೀಯ ರಾಜಕಾರಣಿಗಳು ಮಾಡಿದ ಯಾವುವೇ ಯತ್ನಗಳೂ ಇದನ್ನು ಬದಲಾಯಿಸದೆ ಹೋಗಿವೆ.

ಇವರ ಹೆಸರು ಅನೇಕ ದಶಕಗಳವರೆಗೆ ವಸಾಹತುಶಾಹಿ ದಾಸ್ಯದಿಂದ ಭಾರತದ ವಿಮೋಚನೆಯ ಹೋರಾಟದೊಂದಿಗೆ, ವಿಶ್ವದಲ್ಲಿ ಒಂದು ಮಹೋನ್ನತ ಸಾರ್ವಭೌಮ ರಾಜ್ಯವಾಗಿ ಭಾರತದ ಪುನರ್‌ಜನ್ಮ ಹಾಗೂ ಬೆಳವಣಿಗೆಯೊಂದಿಗೆ, ಅವಿಭಾಜ್ಯವಾಗಿ ಸಂಬಂಧಿತವಾಗಿದ್ದಿತು. 1947ರ ಆಗಸ್ಟ್ 15ರಂದು ದೆಹಲಿಯಲ್ಲಿ ಚಾರಿತ್ರಿಕ ಕೆಂಪು ಕೋಟೆಯ ಮೇಲೆ ಸ್ವತಂತ್ರ ಭಾರತದ ರಾಷ್ಟ್ರೀಯ ತ್ರಿವರ್ಣ ಧ್ವಜವನ್ನು ಆರೋಹಣ ಮಾಡಿದ ಘಳಿಗೆಯಿಂದ ಹಿಡಿದು ನೆಹರೂರವರು ಸುಮಾರು 17 ವರ್ಷಗಳ ಕಾಲ ಸ್ವತಂತ್ರ ಭಾರತದ ನಾಯಕರಾಗಿದ್ದುಕೊಂಡು ಆ ದೇಶಕ್ಕೆ ಪುನರ್‌ಜನ್ಮ ತಾಳಲೂ ವಸಾಹತುವಾದವನ್ನೂ ಸಾಮಂತವಾದದ ಅವಶೇಷಗಳನ್ನೂ ಯುಗಯುಗಾಂತರಗಳ ಹಿಂದುಳಿದಿರುವಿಕೆಯನ್ನೂ ತೊಡೆದು ಹಾಕಲೂ ನೆರವು ನೀಡಿದರು.

ನೆಹರೂರವರ ಮಾರ್ಗದರ್ಶನದಲ್ಲೇ ಭಾರತವನ್ನು ಜನಾಂಗೀಯ, ಕುಲ ಹಾಗೂ ಭಾಷಾ ಪ್ರಭೇದಗಳಿಗನುಗುಣವಾಗಿ ನಾನಾ ಸಂಸ್ಥಾನಗಳನ್ನಾಗಿ ಪುನಸ್ಸಂಘಟಿಸಲಾಯಿತು. ಹೀಗೆ ಬ್ರಿಟಿಷರ "ವಿಭಜಿಸಿ ಆಳುವ" ನೀತಿಯ ಮೇಲೆ ಆಧರಿಸಿದ್ದ ಆಡಳಿತ ಪದ್ಧತಿಗೆ ಕೊನೆ ಹಾಕಲಾಯಿತು, ದೇಶವು ಸಾಮಂತಶಾಹಿ ಸಂಸ್ಥಾನಗಳಾಗಿ ವಿಭಜಿತವಾಗಿದ್ದುದನ್ನು ತೊಡೆದು ಹಾಕಲಾಯಿತು. ಆರಂಭಿಕ ಕೃಷಿ

ಕೃಷಿ ಸುಧಾರಣೆಗಳನ್ನು ತಂದು ಭಾರಿ ಭೂಮಾಲೀಕರ ಶಕ್ತಿಯನ್ನು ಕುಂದಿಸಲಾಯಿತು. ನೆಹರೂರವರು ದೇಶದ ಆರ್ಥಿಕತೆಯನ್ನು ಯೋಜನಾಬದ್ಧವಾಗಿ ಪುನರ್‌ನಿರ್ಮಿಸುವ ಕಾರ್ಯಕ್ಕೆ ಮಾರ್ಗದರ್ಶನ ನೀಡಿದರು, ಕೈಗಾರಿಕೀಕರಣದ ನೀತಿಯನ್ನು ಪ್ರಾರಂಭಿಸಿದರು. ಇದು ದೇಶದ ಆರ್ಥಿಕ ಸ್ವಾತಂತ್ರ್ಯಕ್ಕೆ ನಿರ್ಧಾರಕವಾದುದಾಗಿತ್ತು. ನೆಹರೂರವರ ಉಪಕ್ರಮದ ಫಲವಾಗಿಯೇ ದೇಶದ ಆರ್ಥಿಕತೆಯಲ್ಲಿ ಒಂದು ಪ್ರಬಲವಾದ ರಾಜ್ಯ ವಿಭಾಗ ಸ್ಥಾಪಿತವಾಯಿತು ಮತ್ತು ಅದನ್ನು ದೃಢಗೊಳಿಸಲಾಯಿತು.

ನೆಹರೂರವರು ನಿಷ್ಠಳ ಪ್ರಜಾಪ್ರಭುತ್ವವಾದಿಯಾಗಿದ್ದರು. ಅವರು ಜನರ ಸಮಾನತೆಗಾಗಿ ಹೋರಾಡಿದರು, ಜಾತಿ ಪದ್ಧತಿಯ ವಿರುದ್ಧ, ಧಾರ್ಮಿಕ-ಕುಲ ಪ್ರತಿಗಾಮಿ ಶಕ್ತಿಗಳ ವಿರುದ್ಧ ಸೆಣಸಿದರು, ಪ್ರಜಾಪ್ರಭುತ್ವ ಹಾಗೂ ಕೇಂದ್ರೀಯತಾವಾದ ಸೂತ್ರಗಳ ಸಂಯೋಜನೆಯ ಮೇಲೆ ಆಧರಿಸಿ ಭಾರತದಲ್ಲಿ ಶಾಶ್ವತ ರಾಷ್ಟ್ರೀಯ ಏಕತೆಯ ಸ್ಥಾಪನೆಗೆ ಬೆಂಬಲ ನೀಡಿದರು.

ಆದರೆ ನೆಹರೂರವರು ಭಾರತಕ್ಕಷ್ಟೆ ಸೇರಿದವರಲ್ಲ. ಅವರು ಇಡೀ ಮಾನವ ಕುಲಕ್ಕೆ ಸೇರಿದವರು. ತಮ್ಮ ನೀತಿಗಳಲ್ಲಿ ಅವರು ಕೆಲವು ಆಫ್ರೋ-ಏಷ್ಯನ್ ರಾಜ್ಯಗಳಿಗೆ ವಿಶಿಷ್ಟವಾದ ಪ್ರವೃತ್ತಿಗಳನ್ನು ಒಡಮೂಡಿಸಿದರಷ್ಟೆ ಅಲ್ಲ ಆ ರಾಜ್ಯಗಳು ತಮ್ಮ ಗೃಹ ಹಾಗೂ ವಿದೇಶಾಂಗ ನೀತಿಗಳನ್ನು ರೂಪಿಸಿಕೊಳ್ಳುವುದರ ಮೇಲೆ ಪ್ರಭಾವವನ್ನೂ ಬೀರಿದರು.

ನೆಹರೂರವರು ಆಧುನಿಕ ಅಂತರರಾಷ್ಟ್ರೀಯ ಸಂಬಂಧಗಳನ್ನು ಉಪಕ್ರಮಿಸಿದವರಲ್ಲಿ ಒಬ್ಬರು. ಹೊಸದಾಗಿ ಸ್ವತಂತ್ರಗೊಂಡ ದೇಶಗಳು ಹೆಚ್ಚು ಉನ್ನತ ಪಾತ್ರ ನಿರ್ವಹಿಸುವುದು ಈ ಸಂಬಂಧಗಳ ವಿಶಿಷ್ಟ ಲಕ್ಷಣ. ಅಲ್ಲದೆ ನೆಹರೂರವರೇ ಇತರ ಕೆಲವರ ಜೊತೆಗೆ, ಅಲಿಪ್ತ ಹಾಗೂ ಸೌಮನಸ್ಯ ನೀತಿಯ ಮೂಲದಲ್ಲಿದ್ದರು. ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ವಿರುದ್ಧ ಹೋರಾಡುತ್ತಿರುವ ಜನತೆಗಳ ಆಶೋತ್ತರಗಳನ್ನು ಧ್ವನಿಸುವಾಗಲೀ ನೆಹರೂರವರು ಯಾವ ರೀತಿಯಲ್ಲೂ ಈ ಜನತೆಗಳನ್ನು ಯೂರೋಪು ಅಥವಾ ಅಮೆರಿಕದ ಜನತೆಗಳಿಗೆ ಎದುರಾಗಿ ಎತ್ತಿ ಕಟ್ಟಲಿಲ್ಲ. ಅವರು ರಾಷ್ಟ್ರೀಯ ಪ್ರತ್ಯೇಕತೆಯನ್ನಾಗಲೀ ಜನಾಂಗೀಯ ವಿಭಜನೆಯನ್ನಾಗಲೀ ಗತಕಾಲದ ಅಪರಾಧಗಳಿಗಾಗಿ ಸೇಡು ತೀರಿಸಿಕೊಳ್ಳುವ ನೀತಿಯನ್ನಾಗಲೀ ಪ್ರತಿಪಾದಿಸಲಿಲ್ಲ. ಅವರು ಮಾನವಕುಲವೆಲ್ಲ ಒಂದೇ ಭವಿಷ್ಯ ಹೊಂದಿದ್ದಿತೆಂದು ನಂಬಿದ್ದರು. ಪೂರ್ವ ಮತ್ತು ಪಶ್ಚಿಮ ದೇಶಗಳ ನಡುವೆ ಸೌಹಾರ್ದ ಸಂಬಂಧಗಳು ಪುನರ್‌ಸ್ಥಾಪಿತವಾಗಬೇಕೆಂದೂ ಅವರು ನಂಬಿದ್ದರು. ಕೊನೆಯಲ್ಲಿ ಎಡಪಂಥದ ರಾಷ್ಟ್ರೀಯ ಸುಧಾರಣೆಯ ನಿಲುವುಗಳನ್ನು ತಳೆದು ನೆಹರೂರವರು ರಾಷ್ಟ್ರೀಯತಾವಾದಿ ಸಂಕುಚಿತಮನಸ್ಕತೆ, ಅಹಂಕಾರ ಹಾಗೂ ಪ್ರಾಂತೀಯತಾವಾದಿ ಭಾವನೆಗಳನ್ನು ಸಂಪೂರ್ಣವಾಗಿ ತೊರೆದರು.

ಅವರು ವ್ಯವಸ್ಥಾಪೂರ್ವಕವಾಗಿ ಸಮಾನ ಅಂತರರಾಷ್ಟ್ರೀಯ ಸಹಕಾರಕ್ಕಾಗಿ ಶ್ರಮಿಸಿದರು. ಅವರು ಬೃಹತ್‌ರಾಷ್ಟ್ರ ಮೂಢಾಭಿಮಾನವನ್ನು – ಅದು ಯಾವ ಕಡೆಯಿಂದಲೇ ಬರಲಿ ಮತ್ತು ಅದನ್ನು ಮರೆಮಾಚಲು ಯಾವ ಘೋಷಣೆಗಳನ್ನೇ ಬಳಸಿಕೊಂಡಿರಲಿ, ಎಲ್ಲ ಬೃಹತ್‌ರಾಷ್ಟ್ರ ಮೂಢಾಭಿಮಾನವನ್ನೂ – ಸ್ವಲ್ಪವೂ ರಾಜಿ ಮಾಡಿಕೊಳ್ಳದ ಮನೋಭಾವದೊಂದಿಗೆ ವಿರೋಧಿಸಿದರು.

* * *

ನೆಹರೂರವರ ರಾಜಕೀಯ ಅಭಿಪ್ರಾಯಗಳ ಬೆಳವಣಿಗೆಯಲ್ಲಿ ಜಟಿಲತೆ ಹಾಗೂ ವೈರುಧ್ಯಗಳೆರಡನ್ನೂ ಕಾಣಬಹುದು. ಅವರು ಈ ಶತಮಾನದ ದ್ವಿತೀಯ ದಶಕದಲ್ಲಿ ಕ್ರಿಯಾಶೀಲ ಸಾಮಾಜಿಕ ಹಾಗೂ ರಾಜಕೀಯ ಕಾರ್ಯ ಪ್ರಾರಂಭಿಸಿದರು. ಶ್ರೀಮಂತ ವರ್ಗದವರ ಇಂಗ್ಲಿಷ್ ಕಾಲೇಜಿನಲ್ಲಿ ಅಭ್ಯಾಸ ಮಾಡುತ್ತ ಅವರು ಬೂರ್ಷ್ವಾ ಉದಾರವಾದದ ವಿಚಾರಗಳನ್ನು ಸ್ವೀಕರಿಸಿದರು. ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಒಬ್ಬ ಪ್ರಮುಖ ವ್ಯಕ್ತಿಯಾಗಿದ್ದ ಅವರ ತಂದೆ ಮೋತಿಲಾಲ ನೆಹರೂರವರೂ ಅಂಥವೇ ವಿಚಾರಗಳನ್ನು ಹೊಂದಿದ್ದರು. ಅದೇ ಹೊತ್ತಿನಲ್ಲಿ ನೆಹರೂರವರು ಸಮಾಜವಾದಿ ಚಳವಳಿಯಲ್ಲೂ ಆಸಕ್ತಿ ತಳೆದರು. ಅವರಿಗೆ ಆಗ ಫೇಬಿಯನ್* ಮಾದರಿಯ ಸಮಾಜವಾದವಷ್ಟೆ ಪರಿಚಿತವಾಗಿದ್ದಿತು. ಪ್ರಥಮ ಜಾಗತಿಕ ಯುದ್ಧದ ಕೊನೆಯ ಭಾಗದಲ್ಲಿ ಭಾರತದಲ್ಲಿ ವಿಮೋಚನಾ ಚಳವಳಿಯು ಚುರುಕುಗೊಂಡಿದ್ದಿತು. ನೆಹರೂರವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಭಾಗವಹಿಸತೊಡಗಿದರು ಮತ್ತು ರಾಷ್ಟ್ರೀಯ-ವಿಮೋಚನಾ ಚಳವಳಿಯ ಹೊಸ ರೂಪವಿಧಾನಗಳಿಗಾಗಿ ಶೋಧ ನಡೆಸಿದರು. ಅವರು ಆಗಷ್ಟೆ ರಾಜಕಾರಣದಲ್ಲಿ ತಮ್ಮ ಮೊದಲ ಹೆಜ್ಜೆಗಳನ್ನಿಡುತ್ತಿದ್ದ ಗಾಂಧೀಯವರಿಂದ ತುಂಬ ಆಕರ್ಷಿತರಾಗಿದ್ದರು. ಅವರು ಗಾಂಧೀಯವರ ಧೈರ್ಯ ಕ್ರಿಯಾಶೀಲತೆಗಳನ್ನು, ಜನಸಮೂಹಗಳಿಗೆ ತಮ್ಮ ವಿಚಾರಗಳನ್ನು ಸುಲಭವಾಗಿ ತಿಳಿಸಿಕೊಡುವ ಅವರ ಪ್ರತಿಭೆಯನ್ನು, ಅವರು ಕಂಡುಹಿಡಿದಿದ್ದ ಹೊಸ ಪ್ರತಿರೋಧ ವಿಧಾನಗಳನ್ನು ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಂಸ್ಥೆಯನ್ನು ಒಂದು ರಾಜಕೀಯ ಕ್ಲಬ್ ಆಗಿದ್ದ ಸ್ಥಿತಿಯಿಂದ ಸಮರ್ಥ ಸಾಮೂಹಿಕ ಸಂಘಟನೆಯ ಸ್ಥಿತಿಗೆ ಪರಿವರ್ತಿಸಲು ಅವರು ಹೊಂದಿದ್ದ ಬಯಕೆಯನ್ನು, ಬಹಳವಾಗಿ ಮೆಚ್ಚಿಕೊಂಡಿದ್ದರು. ಹಾಗಾಗಿ ಅವರು ಗಾಂಧೀಯವರ ಅಹಿಂಸಾತ್ಮಕವಾದ ಆದರೆ ಅದೇ ಹೊತ್ತಿನಲ್ಲಿ ನಿಸ್ಸಂದೇಹವಾಗಿ ಸಾಮ್ರಾಜ್ಯ

---

* ಕ್ರಾಂತಿಕಾರಿ ಚಳವಳಿಯಲ್ಲಿ ಮಂದಗತಿಯನ್ನು ಅನುಸರಿಸುತ್ತಿದ್ದ ಸಮಾಜವಾದಿಗಳ ಒಂದು ಪಂಥ. – ಸಂ.

ಶಾಹಿ ವಿರೋಧಿ ಹಾಗೂ ವಸಾಹತುಶಾಹಿ ವಿರೋಧಿಯೂ ಆಗಿದ್ದ ಪ್ರತಿರೋಧದ ವಿಧಾನಗಳನ್ನು ಭಾವೋದ್ರಿಕ್ತತೆಯಿಂದ ಬೆಂಬಲಿಸತೊಡಗಿದರು. ಪ್ರಥಮ ರಾಷ್ಟ್ರವ್ಯಾಪೀ ಸತ್ಯಾಗ್ರಹ ಚಳವಳಿಯ ವರ್ಷಗಳಲ್ಲಿ ಅವರು ಕಸುವಿನಿಂದ ಚಟುವಟಿಕೆಗಳನ್ನು ನಡೆಸಿದರು. ಚಳವಳಿ ಶೀಘ್ರವಾಗಿ ಯಶಸ್ಸು ಪಡೆಯುವುದೆಂದು ಅದರಲ್ಲಿ ಭಾಗವಹಿಸಿದ್ದವರನೇಕರಂತೆ ಇವರೂ ನಂಬಿದ್ದರು. ಆದರೆ ಯಶಸ್ಸು ಅಷ್ಟು ಬೇಗ ಲಭಿಸಲಿಲ್ಲ. ಜೊತೆಗೆ ಗಾಂಧೀಯವರೂ ಪ್ರತಿರೋಧ ಚಳವಳಿಯನ್ನು ನಿಲ್ಲಿಸಿದರು. ರಾಷ್ಟ್ರೀಯ ಚಳವಳಿ ಸ್ಥಗಿತಗೊಂಡಿತು. ರಾಷ್ಟ್ರೀಯ-ವಿಮೋಚನಾ ಹೋರಾಟಕ್ಕಾಗಿ ಗಾಂಧೀಯವರು ರೂಪಿಸಿಕೊಟ್ಟಿದ್ದ ಸೂತ್ರಗಳಲ್ಲಿ ನೆಹರೂರವರ ನಂಬಿಕೆ ಸಡಿಲಗೊಂಡಿತು. ಇಪ್ಪತ್ತರ ದಶಕದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿನ ಛಿದ್ರವಾಗಿದ್ದ ಶಕ್ತಿಗಳನ್ನು ಪುನಃ ಒಂದುಗೂಡಿಸಲು ಯತ್ನಿಸುತ್ತ ನೆಹರೂರವರು ಆ ಕಾಲದಲ್ಲಿದ್ದ ಚಳವಳಿಯ ಸ್ಥಿತಿಯಿಂದ ತುಂಬ ಅತೃಪ್ತಿಗೊಂಡರು ಮತ್ತು ಆ ಬಿಕ್ಕಟ್ಟಿನಿಂದ ಹೊರಬರಲು ಮಾರ್ಗಕ್ಕಾಗಿ ಶೋಧ ನಡೆಸಿದರು.

1927ರಲ್ಲಿ ಬ್ರುಸ್ಸೆಲ್ಸ್‌ನಲ್ಲಿ ಜರುಗಿದ ಜಗತ್ತಿನ ಮರ್ದಿತ ರಾಷ್ಟ್ರಗಳ ಮಹಾಧಿವೇಶನಕ್ಕೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಬರುವಂತೆ ನೆಹರೂ ಆಹ್ವಾನಿತರಾದರು. ಅವರು ಈ ಮಹಾಧಿವೇಶನದ ಕಾರ್ಯಕಲಾಪಗಳಲ್ಲೂ, ಅದರಲ್ಲಿ ಸ್ಥಾಪಿತವಾದ "ಸಾಮ್ರಾಜ್ಯವಾದ ವಿರೋಧಿ ಲೀಗ್"ನ ಚಟುವಟಿಕೆಗಳಲ್ಲೂ ಭಾಗವಹಿಸಿದುದೂ, 1927ರ ನವೆಂಬರ್‌ನಲ್ಲಿ ಸೋವಿಯತ್ ಒಕ್ಕೂಟಕ್ಕೆ ಭೇಟಿ ನೀಡಿದುದೂ ಅವರ ರಾಜಕೀಯ ಮನೋಧರ್ಮದ ವಿಕಾಸದ ಮೇಲೆ ಗಮನಾರ್ಹ ಪ್ರಭಾವ ಬೀರಿದವು. ಸೋವಿಯತ್ ಒಕ್ಕೂಟದಲ್ಲಿ ಅವರು ಯೂರೋಪ್, ಏಷ್ಯ ಹಾಗೂ ಆಫ್ರಿಕಗಳ ಕ್ರಾಂತಿಕಾರೀ ಹಾಗೂ ರಾಷ್ಟ್ರೀಯ-ವಿಮೋಚನಾ ಚಳವಳಿಗಳ ಪ್ರತಿನಿಧಿಗಳನ್ನು ಸಂಧಿಸಿದರು. ತಾವೆಲ್ಲ ಒಂದುಗೂಡುವುದು ಹಾಗೂ ಸಹಕರಿಸುವುದು ಅವಶ್ಯವೆಂದು ಅವರು ಕಂಡುಕೊಂಡರು. ಇಲ್ಲೇ ಅವರು ಫೇಬಿಯನ್ ಅಲ್ಲ ಆದರೆ ಕ್ರಾಂತಿಕಾರಿ ವೈಜ್ಞಾನಿಕ ಸಮಾಜವಾದದ ಪರಿಚಯ ಪಡೆದುಕೊಂಡುದು. ವೈಜ್ಞಾನಿಕ ಸಮಾಜವಾದವು ಕೇವಲ ಸಿದ್ಧಾಂತವಾಗಿದ್ದುದು ನಿಂತು ಇಲ್ಲಿ ಆಚರಣೆಯಲ್ಲಿ ತರಲಾಗುತ್ತಿದ್ದಿತು.

ಹಿಂದಿನ ಉದಾರವಾದಿ ಸಾಮಾಜಿಕ-ಸುಧಾರಣಾವಾದಿ ಹಾಗೂ ಗಾಂಧೀವಾದಿ ಪರಿಕಲ್ಪನೆಗಳ ಜೊತೆಗೆ ಈಗ ನೆಹರೂರವರ ಮನಸ್ಸಿನಲ್ಲಿ ಮಾರ್ಕ್ಸ್ ಹಾಗೂ ಲೆನಿನರ ವಿಚಾರಗಳು ಮನೆ ಮಾಡಿಕೊಂಡವು. ಆದರೆ ಅವರ ಮೇಲೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಭಾವ ಎಂದೂ ಪೂರ್ಣವಾಗಿರಲಿಲ್ಲ. ಅವರು ಭೌತಿಕವಾದಿಯಾಗಲಿಲ್ಲ. ಅಸ್ತಿತ್ವ ಹಾಗೂ ಪ್ರಜ್ಞೆಗಳಂಥ ಭಾರಿ ತತ್ವಜ್ಞಾನ ಸಮಸ್ಯೆಗಳ ಚಿಂತನೆಯಲ್ಲಿ, ಜ್ಞಾನಕ್ಕೆ ಸಂಬಂಧಿಸಿದ ಸಿದ್ಧಾಂತದಲ್ಲಿ, ವ್ಯಕ್ತಿಯ ಆತ್ಮಿಕ

ಹಾಗೂ ನೈತಿಕ ಬೆಳವಣಿಗೆಗೆ ಸಂಬಂಧಿಸಿದ ವಿಚಾರಗಳಲ್ಲಿ ನೆಹರೂ ಹೆಚ್ಚಾಗಿ ಆದರ್ಶವಾದಿಯ ಹಾಗೂ ಅಜ್ಞೇಯತಾವಾದಿಯ ಮಿಶ್ರಣವಾಗಿದ್ದರು. ಇದು ಹಿಂದೂ ಧರ್ಮದ ನೈತಿಕ ಪರಂಪರೆಗಳ ಮತ್ತು ಯೂರೋಪಿನ ವಿಚಾರವಾದೀ ಸಂದೇಹವಾದದ ಪ್ರಭಾವಗಳ ಪರಿಣಾಮವಾಗಿದ್ದಿತು. ಆದರೆ ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳಿಗೆ ಸಂಬಂಧಿಸಿ ನೆಹರೂರವರ ಮೇಲೆ ವೈಜ್ಞಾನಿಕ ಸಮಾಜವಾದದ ಪ್ರಭಾವವು ಪ್ರಬಲವಾಗಿದ್ದಿತು ಮತ್ತು ಫಲಪ್ರದವಾಗಿದ್ದಿತು. ಇತಿಹಾಸಕ್ಕೆ ಮಾರ್ಕ್ಸ್‌ವಾದಿಗಳು ನೀಡುತ್ತಿದ್ದ ವ್ಯಾಖ್ಯಾನ, ಮಾರ್ಕ್ಸ್‌ವಾದವು ಉತ್ಪಾದನಾ ವಿಧಾನಗಳನ್ನು ವಿವೇಚಿಸುತ್ತಿದ್ದ ರೀತಿ, ಜನಸಮೂಹಗಳ ಪಾತ್ರ, ಸಾಮಾಜಿಕ ಸಂರಚನೆ, ವರ್ಗ ವೈರುಧ್ಯಗಳು ಹಾಗೂ ವರ್ಗ ಹೋರಾಟ ಇವುಗಳ ಬಗೆಗೆ ಮಾರ್ಕ್ಸ್‌ವಾದದ ಚಿಂತನೆ, ಇವನ್ನೆಲ್ಲ ನೆಹರೂರವರು ಮೂಲತಃ ಮನ್ನಿಸಿದ್ದರು. ಇತಿಹಾಸವು ಸಾಮಾಜಿಕ-ಆರ್ಥಿಕ ಬೆಳವಣಿಗೆಯ ತಳ ಮಟ್ಟಗಳಿಂದ ಮೇಲ್ಮಟ್ಟಗಳಿಗೆ ಸಾಗಿ ಹೋಗುವ ತರ್ಕಬದ್ಧ ಚಲನೆ ಎಂದವರು ಕಂಡುಕೊಂಡಿದ್ದರು. ಬಂಡವಾಳವಾದವು ಪತನಗೊಳ್ಳುವುದು ಖಂಡಿತವೆಂದು ಅವರು ತಿಳಿದಿದ್ದರು. ಬಂಡವಾಳವಾದದ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪದ್ಧತಿಯ ಮರ್ದನದ ಸ್ವರೂಪವನ್ನು ಕಂಡುಕೊಂಡಿದ್ದರು. ಜಗತ್ತಿನಾದ್ಯಂತ ಕ್ರಾಂತಿಕಾರಿ ಶಕ್ತಿಗಳ ಬಗೆಗೆ, ನಿರ್ದಿಷ್ಟವಾಗಿ ಪ್ರಪ್ರಥಮ ಸಮಾಜವಾದಿ ರಾಜ್ಯದ ಬಗೆಗೆ ಅವರು ಭಾರಿ ಸಹಾನುಭೂತಿ ಹೊಂದಿದ್ದರು.

ಭಾರತದ ರಾಷ್ಟ್ರೀಯತಾವಾದಿ ಚಳವಳಿ ಸಂಕುಚಿತವಾಗಿದ್ದಿತೆಂದು ಕಂಡುಕೊಂಡು ಅವರು, ಅದು ದುಡಿಯುವ ಜನರ ಹಿತಗಳನ್ನು ಸಂರಕ್ಷಿಸುವತ್ತಲೂ ಮೂಲಭೂತ ಸಾಮಾಜಿಕ ಸುಧಾರಣೆಗಳಿಗಾಗಿ ಭೂಮಿಕೆ ಸಿದ್ಧಗೊಳಿಸುವತ್ತಲೂ ತನ್ನ ಗಮನ ಹರಿಸಬೇಕೆಂದು ಮನವಿ ಮಾಡಿಕೊಂಡರು. ಈ ವಾಸ್ತವಾಂಶದಲ್ಲೇ ನೆಹರೂರವರ ರಾಜಕೀಯ ಚಟುವಟಿಕೆಯ ಮೇಲೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಭಾವ ಕಂಡುಬರುವುದು. ತಾವು ವೈಜ್ಞಾನಿಕ ಸಮಾಜವಾದದ ಬೆಂಬಲಿಗರೆಂದು ನೆಹರೂ ಸ್ವಲ್ಪವೂ ಅನುಮಾನಿಸದೆ ಘೋಷಿಸಿದರು. ಸಮಾಜವಾದದ ನಿರ್ಮಾಣವು ಭಾರತದ ವಿಮೋಚನಾ ಚಳವಳಿಯ ಅಂತಿಮ ಗುರಿಯಾಗಬೇಕೆಂದು ಅವರು ಭಾವಿಸಿದ್ದರು. ರೈತ ಕಾರ್ಮಿಕರು ರಾಷ್ಟ್ರೀಯ ಕಾಂಗ್ರೆಸ್ಸಿನ ಚಟುವಟಿಕೆಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸುವಂತೆ ಮಾಡಲು ಮತ್ತು ಅವರೇ ಕಾಂಗ್ರೆಸ್ಸಿನ ಪ್ರಧಾನ ಬೆಂಬಲವಾಗುವಂತೆ ಮಾಡಲು ಅವರು ಶ್ರಮಿಸಿದರು. ರೈತ ಕಾರ್ಮಿಕರ ಸಾಮಾಜಿಕ-ಆರ್ಥಿಕ ಬೇಡಿಕೆಗಳನ್ನು ತೃಪ್ತಿಗೊಳಿಸಲೂ ಅವರು ಶ್ರಮಿಸಿದರು.

ನೆಹರೂರವರು ಅಂತರರಾಷ್ಟ್ರೀಯ ಸಮೈಕ್ಯತೆಯ ವಿಚಾರಗಳಿಗೆ, ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಶ್ರಮಿಸುತ್ತಿರುವ ಜನತೆಗಳೊಂದಿಗೂ, ಬಂಡವಾಳಶಾಹಿ ದೇಶ

ಗಳಲ್ಲಿನ ಕಾರ್ಮಿಕ ಹಾಗೂ ಪ್ರಜಾಸತ್ತಾತ್ಮಕ ಚಳವಳಿಗಳೊಂದಿಗೂ, ಸಾಮ್ರಾಜ್ಯವಾದದ ಬದ್ಧ ವಿರೋಧಿಯಾದ ಹಾಗೂ ಮರ್ದಿತ ಜನತೆಗಳ ಪ್ರಾಮಾಣಿಕ ಮಿತ್ರನಾದ ಸೋವಿಯಟ್ ಒಕ್ಕೂಟದೊಂದಿಗೂ ಸಹಕಾರದ ವಿಚಾರಗಳಿಗೆ ಬೆಂಬಲ ನೀಡಿದರು.

ಇಪ್ಪತ್ತರ ದಶಕದ ಕೊನೆಯ ಭಾಗದಲ್ಲಿ ನೆಹರೂರವರ ರಾಜಕೀಯ ಅಭಿಪ್ರಾಯಗಳು ರಾಷ್ಟ್ರೀಯ ಕಾಂಗ್ರೆಸ್ಸಿನ ಎಡಪಂಥದ ವಿಚಾರಗಳನ್ನು ಸಂಪೂರ್ಣವಾಗಿ ಹಾಗೂ ಯಥಾವತ್ತಾಗಿ ವ್ಯಕ್ತಪಡಿಸುತ್ತಿದ್ದವು. ಈ ವಿಚಾರಗಳನ್ನು ಮುಂದಿಟ್ಟ ಅವರು ಈ ಪಂಥದ ನಾಯಕರಾದರು. ನೆಹರೂರವರ ಮನೋಧರ್ಮದಲ್ಲಿ ಕ್ರಾಂತಿಕಾರಿ ಹಾಗೂ ಸಮಾಜವಾದಿ ಪ್ರವೃತ್ತಿಗಳು ಮೂವತ್ತರ ದಶಕದ ಮಧ್ಯಭಾಗದವರೆಗೂ ದೃಢಗೊಳ್ಳುತ್ತಲೇ ಹೋದವು. ಆ ಕಾಲದಲ್ಲಿ ಅವರು ಒಂದು ವಿಶಿಷ್ಟ ಕಾರ್ಯಕ್ರಮವನ್ನು ರಚಿಸಿ ಪ್ರಚಾರ ಮಾಡಿದರು. ಅದು ಅನೇಕ ರೀತಿಗಳಲ್ಲಿ ಅರವತ್ತರ ದಶಕದ ರಾಷ್ಟ್ರೀಯ ಪ್ರಜಾಪ್ರಭುತ್ವ ಕಾರ್ಯಕ್ರಮದ ಮುನ್ಸೂಚನೆಯಾಗಿದ್ದಿತು.

ಆದರೆ ನೆಹರೂರವರು ತುಂಬ ಕಷ್ಟಕರವಾದ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಿದ್ದಿತು. ಅವರ ಬಳಿ ನಿಕಟ ಬೆಂಬಲಿಗರ ಒಂದು ರಾಜಕೀಯ ಸಂಘಟನೆ ಇರಲಿಲ್ಲ. ಮೂಲಭೂತವಾಗಿ ಬೂರ್ಷ್ವಾ ಸಂಘಟನೆಯಾಗಿದ್ದ ರಾಷ್ಟ್ರೀಯ ಕಾಂಗ್ರೆಸ್ಸಿನ ಮೇರೆಗಳೊಳಗೇ ಕೆಲಸ ಮಾಡಬೇಕಿದ್ದಿತು. ಕಾಂಗ್ರೆಸ್ಸಿನಲ್ಲಿ ಗಾಂಧೀಯವರ ರಾಜಕೀಯ ಹಾಗೂ ನೈತಿಕ ಪ್ರಭಾವ ಅಖಂಡವಾಗಿದ್ದಿತು. ಗಾಂಧೀಯವರು ನೆಹರೂರವರ ತೀವ್ರ ಸುಧಾರಣೆಯ ವಿಚಾರಗಳನ್ನು ಒಪ್ಪಿಕೊಂಡಿರಲಿಲ್ಲ. ಅನೇಕ ವೇಳೆ ಅವರು ಕಾಂಗ್ರೆಸ್ಸಿನೊಳಗಿನ ಬಲಪಂಥದ ಸಂಪ್ರದಾಯಶರಣ ಶಕ್ತಿಗಳಿಗೇ, ತಮ್ಮ ನೆಲೆಗಳನ್ನು ಉಳಿಸಿಕೊಂಡು ಕ್ರಾಂತಿಕಾರಿ ಯುವಜನರ ಪ್ರತಿಸ್ಪರ್ಧೆಗೆ ಕೊನೆಹಾಕುವ ಬಯಕೆಯಿಂದ ಅವು ಕೈಗೊಳ್ಳುತ್ತಿದ್ದ ಕ್ರಮಗಳಿಗೇ, ಬೆಂಬಲ ನೀಡಿದರು. ನೆಹರೂರವರ ಪಾತ್ರ ಸ್ವಲ್ಪಮಟ್ಟಿಗೆ ಇಬ್ಬಂದಿಯದಾಗಿದ್ದಿತು. ಒಂದು ಕಡೆ ಅವರು ಎಡಪಂಥದ ನಾಯಕರಾಗಿದ್ದರು. ಇನ್ನೊಂದು ಕಡೆ ಗಾಂಧೀಯವರ ವಿಶ್ವಾಸ ಪ್ರೀತಿಗಳಿಗೆ ಪಾತ್ರರಾಗಿದ್ದರು, ಯಾವುದೇ ರಾಜಕೀಯ ಭಿನ್ನಾಭಿಪ್ರಾಯವೂ ಭಂಗಗೊಳಿಸದಂಥ ವಿಶೇಷ ರೀತಿಯ ವ್ಯಕ್ತಿಗತ ಬಾಂಧವ್ಯದಿಂದ ಅವರೊಡನೆ ಬಂಧಿತರಾಗಿದ್ದರು, ಕಾಂಗ್ರೆಸ್ಸಿನಲ್ಲಿ ಬಲಪಂಥದ ನಾಯಕರೊಂದಿಗೆ ಸಂಪರ್ಕ ಉಳಿಸಿಕೊಂಡೇ ಇದ್ದ ವ್ಯಕ್ತಿಯಾಗಿದ್ದರು. ಆದರೆ ಗಾಂಧೀಯವರು ಕಂಡುಕೊಂಡಂತೆ ನೆಹರೂರವರು ಎಡಪಂಥದ ವಕ್ತಾರರಷ್ಟೆ ಆಗಿರಲಿಲ್ಲ, ಕಾಂಗ್ರೆಸ್ಸಿನ ಐಕ್ಯತೆಯನ್ನು ಖಚಿತಪಡಿಸಬಲ್ಲಂಥ ಹಾಗೂ ಕಾಂಗ್ರೆಸ್ಸಿನಲ್ಲಿ ಪ್ರಭಾವ ಹಾಗೂ ಚಟುವಟಿಕೆಗಳನ್ನು ಹೆಚ್ಚಿಸಿಕೊಂಡು ಕೆಲವು ವೇಳೆ ಅವನ್ನು ಸ್ವಾಧೀನಪಡಿಸಿಕೊಳ್ಳಲೂ ಹವಣಿಸುತ್ತಿದ್ದ ತೀವ್ರ ಸುಧಾರಣಾವಾದಿಗಳನ್ನು ಅಂಕೆಯಲ್ಲಿ

ಇರಿಸಬಲ್ಲಂಥ, ಸಂಸ್ಥೆಯ ಸರ್ವ ಮಾನ್ಯ ರಾಜಕೀಯ ನಾಯಕರೂ ಆಗಿದ್ದರು. ಅಂತೆಯೇ ನೆಹರೂರವರೂ ರಾಷ್ಟ್ರೀಯ ಕಾಂಗ್ರೆಸ್ಸಿನ ಏಕತೆಯನ್ನು ಖಚಿತಗೊಳಿಸಲು ಶ್ರಮಿಸಿದರು. ಭಾರತದಲ್ಲಿ ಗಾಂಧೀಯವರಿಲ್ಲದ ಹಾಗೂ ಗಾಂಧೀಯವರ ಸಂಕಲ್ಪಕ್ಕೆ ವಿರೋಧವಾಗಿ ಕೆಲಸ ಮಾಡುವ ರಾಜಕೀಯ ಚಳವಳಿಯೊಂದನ್ನು ಅವರು ಕಲ್ಪಿಸಿಕೊಳ್ಳಲೂ ಸಾಧ್ಯವಿರಲಿಲ್ಲ. ಏಕತೆಯ ಬಗೆಗೆ ಒತ್ತಿ ಹೇಳುತ್ತ ನೆಹರೂರವರು ಅದೇ ಹೊತ್ತಿನಲ್ಲಿ ಗಾಂಧೀಯವರೂ ಕಾಂಗ್ರೆಸ್ಸಿನ ಸಂಪ್ರದಾಯಶರಣ ಬಹುಮತೀಯರೂ ಕ್ರಾಂತಿಕಾರಿ ಹಾಗೂ ಸಮಾಜವಾದಿ ಮಾರ್ಗಗಳಲ್ಲಿ ಹೋಗುವಂತೆ ಅವರ ಮೇಲೆ ಪ್ರಭಾವ ಬೀರುವ ಆಶಯವನ್ನೂ ಹೊಂದಿದ್ದರು. ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಐಕ್ಯತೆ ಅಗತ್ಯ ಎಂಬುದನ್ನು ಗಾಂಧೀಯವರೂ ನೆಹರೂರವರೂ ಸರಿಯಾಗಿಯೇ ಮನ್ನಿಸಿದ್ದರು, ಏಕೆಂದರೆ ಸಂಸ್ಥೆ ಒಡೆಯುವುದು ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳಿಗೆ ಮಾರಕವಾಗುವುದಿದ್ದಿತು. ಆದರೆ ನೆಹರೂರವರು ತಮ್ಮ ವಿಚಾರಗಳನ್ನು ಕಾಂಗ್ರೆಸ್ ಒಪ್ಪಿಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾಗಲಿಲ್ಲ. ಗಾಂಧೀಯವರ ಒತ್ತಡಕ್ಕೆ ಮಣಿದು, ಗಾಂಧೀಯವರ ನಿರ್ದೋಷಯುತ ಅಂತರ್‌ದೃಷ್ಟಿಯಲ್ಲಿ ಅಪಾರ ವಿಶ್ವಾಸವಿರಿಸಿ, ನೆಹರೂರವರು ತಮ್ಮ ಕ್ರಾಂತಿಕಾರಿ ಘೋಷಣೆಗಳ ಪರಿಣಾಮವನ್ನು ತಟಸ್ಥಗೊಳಿಸಲು ಬಲಪಂಥದ ಶಕ್ತಿಗಳಿಗೆ ಅವಕಾಶ ಬಿಟ್ಟುಕೊಟ್ಟರು. ಬಲಪಂಥದವರು ಎಡಪಂಥದ ದಾಳಿಗೆ ಪ್ರತಿದಾಳಿ ಸಂಘಟಿಸಿದರು ಮತ್ತು ಕಾಂಗ್ರೆಸ್ಸಿನ ತ್ರಿಪುರಾ ಮಹಾಧಿವೇಶನದಲ್ಲಿ ಎಡಪಂಥದ ವಿರುದ್ಧ ದೊಡ್ಡ ಗಲಾಟೆಯನ್ನೇ ಎಬ್ಬಿಸಿದರು. ಇದು ಕಾಂಗ್ರೆಸ್ಸಿನಲ್ಲಿ ಒಡಕು ಉಂಟುಮಾಡುವ ಭೀತಿ ಹಾಕಿತು. ತಾವು ತಮ್ಮ ರಾಜಕೀಯ ಅಭಿಪ್ರಾಯಗಳನ್ನೇ ಸಮರ್ಥಿಸುತ್ತ ಹೋದಲ್ಲಿ ಅದು ಸಂಸ್ಥೆಯ ಹಾಗೂ ಚಳವಳಿಯ ಐಕ್ಯತೆಗೆ ಧಕ್ಕೆ ಉಂಟುಮಾಡಬಹುದೆಂದು ಗ್ರಹಿಸಿ ನೆಹರೂ ಬಲಪಂಥದವರೊಂದಿಗೆ ರಾಜಿ ಮಾಡಿಕೊಂಡರು. ಮೂವತ್ತರ ದಶಕದ ದ್ವಿತೀಯಾರ್ಧದಿಂದ ಅವರ ಚಟುವಟಿಕೆಗಳಲ್ಲಿ ಸಮಾಜವಾದಿ ಹಾಗೂ ಕ್ರಾಂತಿಕಾರಿ ಪ್ರವೃತ್ತಿಗಳು ದುರ್ಬಲಗೊಂಡವು.

ಭಾರತವು ಸ್ವಾತಂತ್ರ್ಯ ಗಳಿಸಿಕೊಂಡು ನೆಹರೂರವರು ಅದರ ಸರಕಾರದ ಅಧಿಪತಿಯಾದ ಮೇಲೆ ಇದು ವಿಶೇಷವಾಗಿ ಗಮನಾರ್ಹವಾಯಿತು. ಅವರ ಸಾಮಾಜಿಕ ಹಾಗೂ ರಾಜಕೀಯ ಅಭಿಪ್ರಾಯಗಳಲ್ಲಿ ಪ್ರಧಾನ ಬದಲಾವಣೆ ಉಂಟಾಯಿತು. ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿಚಾರಗಳು ಒಮ್ಮೆಲೆಗೆ ಸರಿದವು ಮತ್ತು ಪ್ರಾಯೋಗಿಕ ಕಾರ್ಯಗಳಲ್ಲಿ ಬಹುಮಟ್ಟಿಗೆ ಸಂಪೂರ್ಣವಾಗಿ ಕಣ್ಮರೆಯಾದವು. ಸಾಮಾಜಿಕ ಹಾಗೂ ಚಾರಿತ್ರಿಕ ಪ್ರಕ್ರಿಯೆಯ ಮೌಲ್ಯನಿರ್ಣಯದಲ್ಲಿ ಆ ವಿಚಾರಗಳನ್ನು ತುಂಬ ಸಾರ್ವತ್ರಿಕವಾದ ಹಾಗೂ ಅಮೂರ್ತವಾದ ರೀತಿಗಳಲ್ಲಷ್ಟೆ ವ್ಯಕ್ತಪಡಿಸಲಾಯಿತು. ಗಾಂಧಿವಾದದೊಂದಿಗೆ ಸಂಯೋಜನೆ

ಗೊಂಡ ಉದಾರವಾದದ ಹಾಗೂ ಸಾಮಾಜಿಕ-ಸುಧಾರಣಾವಾದದ ವಿಚಾರಗಳು ಪ್ರಾಬಲ್ಯ ಪಡೆಯತೊಡಗಿದವು. ತಾವು ಇಲ್ಲವಾದ ಮೇಲೆ ನೆಹರೂ ತಮ್ಮ ಧ್ವನಿಯಲ್ಲೇ ಮಾತನಾಡಲಿರುವರು ಎಂಬ ಗಾಂಧೀಯವರ ಭವಿಷ್ಯವಾಣಿ ನಿಜವಾಯಿತು.

ನೆಹರೂರವರು ಪ್ರಧಾನಮಂತ್ರಿಯಾದಾಗ ಮೊದಮೊದಲು ಸಮಾಜವಾದ ಎಂಬ ಮಾತು ಅವರ ಶಬ್ದಭಂಡಾರದಿಂದ ಸಂಪೂರ್ಣವಾಗಿ ಕಣ್ಮರೆಯಾಯಿತು. ನಿಮ, ಐವತ್ತರ ದಶಕದ ಮಧ್ಯಭಾಗದಲ್ಲಿ ಅದು ಮತ್ತೆ ಅವರ ಭಾಷಣಗಳಲ್ಲಿ ಕಾಣಿಸಿಕೊಂಡಿತು, ಆದರೆ ತೀರ ಭಿನ್ನವಾದ ವ್ಯಾಖ್ಯಾನದೊಂದಿಗೆ, ಕ್ರಾಂತಿಕಾರಿ ಅಥವಾ ರಾಷ್ಟ್ರೀಯ-ಪ್ರಜಾಸತ್ತಾತ್ಮಕ ಅರ್ಥದಲ್ಲಲ್ಲ, ಆದರೆ ಸುಧಾರಣಾವಾದಿ ಅರ್ಥದಲ್ಲಿ. ನೆಹರೂರವರು ಒಂದು ಗೃಹ ನೀತಿ ಕಾರ್ಯಕ್ರಮವನ್ನು ರಚಿಸಿದ್ದರು. ಅದು ಸಂಪೂರ್ಣವಾಗಿ ರಾಷ್ಟ್ರೀಯ-ಸುಧಾರಣಾವಾದದ ಮಿತಿಗಳೊಳಗೇ ಇದ್ದಿತು ಮತ್ತು ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಪ್ರಬಲ ಸ್ಥಾನಗಳನ್ನು ಗಳಿಸಿಕೊಂಡಿದ್ದ ರಾಷ್ಟ್ರೀಯ ಬೂರ್ಜ್ವಾಸೀಗೆ ಯಾವುದೇ ರೀತಿಯ ಭೀತಿಯನ್ನೂ ಒಡ್ಡುವಂತಿರಲಿಲ್ಲ.

ಹೀಗೆ ಅಸಂಗತಿಯಿಂದ ವರ್ತಿಸಿದುದಕ್ಕಾಗಿ ಹಾಗೂ ಹಿಂದಕ್ಕೆ ಹೆಜ್ಜೆ ಇಟ್ಟುದಕ್ಕಾಗಿ ನೆಹರೂರವರನ್ನು ನಿಂದಿಸುವುದು ಸುಲಭ. ಸೈದ್ಧಾಂತಿಕವಾಗಿ ಅವರು ಬಹುಶಃ ಇಂತಹ ಟೀಕೆಗೆ ಅರ್ಹರೇನೋ. ಆದರೆ ಭಾರತದ ಈಚೆಗಿನ ಇತಿಹಾಸದಲ್ಲಿನ ವಸ್ತುನಿಷ್ಠ ಅಂಶಗಳ ಶಕ್ತಿಯನ್ನು ಗಣನೆಗೆ ತಂದುಕೊಂಡಾಗ ಇಂತಹ ಟೀಕೆ ಒಪ್ಪುವಂಥದೂ ಆಗುವುದಿಲ್ಲ, ಸಮರ್ಥನೀಯವೂ ಆಗುವುದಿಲ್ಲ. ಈ ವಸ್ತುನಿಷ್ಠ ಅಂಶಗಳ ಶಕ್ತಿಯೇ ನೆಹರೂರವರ ಚಟುವಟಿಕೆಯಲ್ಲಿನ ಕ್ರಾಂತಿಕಾರಿ ಹಾಗೂ ಸಮಾಜವಾದಿ ಪ್ರವೃತ್ತಿಗಳನ್ನು ಮಿತಿಗೊಳಿಸಿದುದು, ಉಪಾಧಿಗೊಳಪಡಿಸಿದುದು.

ಮೂವತ್ತರ ದಶಕದಿಂದ ಅವರ ಜೀವನದ ಕೊನೆಯ ದಿನಗಳವರೆಗೂ ನೆಹರೂರವರ ಮನೋಧರ್ಮದಲ್ಲಿ ಒಂದು ತುಂಬ ಪ್ರಗಾಢವಾದ ವಸ್ತುನಿಷ್ಠ ವೈರುಧ್ಯ ಕಾಣಬರುತ್ತಿತ್ತು. ಅವರೇ ಹೇಳಿದಂತೆ, ಅವರ ಅಭಿಪ್ರಾಯಗಳು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ರಾಜಕೀಯ ಪ್ರಜ್ಞೆಗೆ ಪರವಾಗಿದ್ದವು. ವ್ಯಕ್ತಿನಿಷ್ಠ ಸಮಾಜವಾದಿಯಾಗಿ ಅವರು ಬೂರ್ಜ್ವಾ ರಾಜಕೀಯ ಸಂಘಟನೆಯ ಅಧಿಪತಿಯ ಸ್ಥಾನದಲ್ಲಿ ನಿಂತಿದ್ದರು. ಆದರೆ ಕ್ರಾಂತಿಕಾರಿಯೊಬ್ಬರಿಗೆ ಸಿದ್ಧಾಂತ ಹಾಗೂ ಆಚರಣೆಗಳ ಏಕತೆ ಅತ್ಯಂತ ಮುಖ್ಯವಾದುದು. ನೆಹರೂರವರು ಇದಕ್ಕಾಗಿ, ವಿಶೇಷವಾಗಿ ಇಪ್ಪತ್ತರ ದಶಕದ ಕೊನೆಯಲ್ಲೂ ಮೂವತ್ತರ ದಶಕದ ಆರಂಭದಲ್ಲೂ, ಪ್ರಯತ್ನಪಟ್ಟರು. ಆದರೆ ಅವರು ಈ ಏಕತೆಯನ್ನು ಸಾಧಿಸುವ ಯೋಗ ಹೊಂದಿರಲಿಲ್ಲ. ಅವರು ಯಾವ ಸಂಸ್ಥೆಯೊಳಗೆ ಕೆಲಸ ಮಾಡುತ್ತಿದ್ದರೋ ಆ ಸಂಸ್ಥೆಯ – ರಾಷ್ಟ್ರೀಯ ಕಾಂಗ್ರೆಸ್ಸಿನ – ಕಾರ್ಯಕಾರೀ ಸಾಧನವು

ಬಲಪಂಥದ ನಾಯಕರ ಕೈಗಳಲ್ಲಿದ್ದಿತು. ಅವರು ಯಾವ ಸರಕಾರದ ಅಧಿಪತಿಯಾಗಿದ್ದರೋ ಆ ಸರಕಾರೀ ಸಾಧನ ವಸಾಹತು ಆಳ್ವಿಕೆಯಿಂದ ಪಡೆದುಕೊಂಡಿದ್ದಂಥ ದೋಷಗಳನ್ನು ಇನ್ನೂ ನಿವಾರಿಸಿಕೊಂಡಿರಲಿಲ್ಲ. ಈ ವಸ್ತುನಿಷ್ಠ ಅಂಶಗಳ ಕಾರಣದಿಂದಾಗಿ ನೆಹರೂರವರು ತಮ್ಮ ವಿಚಾರಗಳನ್ನೂ ಅಭಿಪ್ರಾಯಗಳನ್ನೂ ಕಾರ್ಯಗತಗೊಳಿಸಲು ಅಸಮರ್ಥರಾಗಿದ್ದರು.

ಸಿದ್ಧಾಂತಗಳಲ್ಲೂ ಪ್ರಕಲ್ಪನೆಗಳಲ್ಲೂ ಯಾರೇ ಆಗಲಿ ಸಂಪೂರ್ಣವಾಗಿ ರಾಜಿಯಾಗದವರಂತೆ, ಕ್ರಾಂತಿಕಾರಿಯಂತೆ ಇರಬಹುದು. ಆದರೆ ಕಾರ್ಯಕಾರಿ ರಾಜಕಾರಣದಲ್ಲಿ ಅಂತಹ ನಿಲುವು ಮಾರಕ ಪರಿಣಾಮಗಳನ್ನು ಉಂಟುಮಾಡಬಹುದು. ಉದಾಹರಣೆಗೆ, ಮೂವತ್ತರ ದಶಕದಿಂದ ನೆಹರೂರವರು ತಮ್ಮ ಅಭಿಪ್ರಾಯಗಳನ್ನೇ ಹೆಚ್ಚು ಪಟ್ಟು ಹಿಡಿದು ಮುಂದಿಡುತ್ತ ಹೋಗಿ ಗಾಂಧೀಯವರೊಂದಿಗೂ ರಾಷ್ಟ್ರೀಯ ಕಾಂಗ್ರೆಸ್ಸಿನ ಬಲಪಂಥದ ವೃತ್ತಗಳೊಂದಿಗೂ ರಾಜಿ ಮಾಡಿಕೊಳ್ಳದೆ ಹೋಗಿದ್ದಿದ್ದರೆ ಏನಾಗುತ್ತಿದ್ದಿತು? ಅವರೇನೂ ಗಾಂಧೀಯವರ ಸಂಕಲ್ಪವನ್ನಾಗಲೀ ಕಾಂಗ್ರೆಸ್ಸಿನ ಸಂಪ್ರದಾಯಶರಣ ಪಂಥದ ಪ್ರಭಾವವನ್ನಾಗಲೀ ಮುರಿಯಲು ಆಗುತ್ತಿರಲಿಲ್ಲ, ಅಥವಾ ಅವರೆಲ್ಲ ತಮ್ಮ ಮಾರ್ಗವನ್ನು ಅನುಸರಿಸುವಂತೆ ಮಾಡಲೂ ಆಗುತ್ತಿರಲಿಲ್ಲ. ಅವರೂ ಸುಭಾಷ ಚಂದ್ರ ಬೋಸರಂತೆ ಒಬ್ಬ ರಾಜಕೀಯ ತತ್ವಭ್ರಷ್ಟರಷ್ಟೆ ಆಗುತ್ತಿದ್ದರು, ದಿವಾಳಿ ಏಳುತ್ತಿದ್ದರು, ಇಲ್ಲವೇ ಮನವೇಂದ್ರನಾಥ ರಾಯ್‌ರ ಜೊತೆಗೂಡುತ್ತಿದ್ದರು, ಅಥವಾ ಇತರ ಎಡಪಂಥದ ದುಸ್ಸಾಹಸಿಗರ ಜೊತೆಗೂಡುತ್ತಿದ್ದರು. ಆದರೆ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಾಗಿ ಒಂದು ರಾಜಕೀಯ ಸಂಘಟನೆಯನ್ನು ಸೃಜಿಸಿದ್ದಲ್ಲಿ ಅದು ಸಾಮ್ರಾಜ್ಯಶಾಹಿ-ವಿರೋಧಿ ರಂಗವನ್ನು ದುರ್ಬಲಗೊಳಿಸುವುದಕ್ಕೆ ದಾರಿ ಮಾಡಿಕೊಡುತ್ತಿತ್ತು. ಅಂತಹ ಪರಿಸ್ಥಿತಿಯನ್ನು ಬ್ರಿಟಿಷ್ ವಸಾಹತುವಾದಿಗಳು ತಕ್ಷಣವೇ ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳುತ್ತಿದ್ದರು.

ತಾವೇ ಸಮಾಜವಾದದ ನಿಷ್ಠಾವಂತ ಅನುಯಾಯಿಗಳಾದರೂ ನೆಹರೂರವರು ರಾಷ್ಟ್ರದ ಮುಂದೆ ಈ ಗುರಿಯನ್ನು ಇರಿಸಲಿಲ್ಲ. ಏಕೆಂದರೆ ರಾಷ್ಟ್ರೀಯ ಕಾಂಗ್ರೆಸ್ಸಿನಲ್ಲಿ ಬಹುಮತೀಯರು ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಈ ಮಾತನ್ನು ನೆಹರೂರವರೇ ನಲವತ್ತರ ದಶಕದ ಕೊನೆಯಲ್ಲಿ ಹೇಳಿದರು. 1936ರಲ್ಲಿ ಲಖ್ನೋದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ನೆಹರೂರವರು ತಾವು ವೈಜ್ಞಾನಿಕ ಸಮಾಜವಾದದ ಪರವೆಂದು ಮಾಡಿದಂಥ ಭಾಷಣವನ್ನೇ ನಲವತ್ತರ ದಶಕದಲ್ಲೂ ಪುನಃ ಮಾಡಿದ್ದಿದ್ದರೆ ಅವರು ಭಾರತದ ಪ್ರಧಾನಮಂತ್ರಿಯಾಗಲೀ ಕಾಂಗ್ರೆಸ್ ಸರಕಾರದ ಅಧಿಪತಿಯಾಗಲೀ ಆಗುತ್ತಿರಲಿಲ್ಲ. ಬಂಡವಾಳವಾದದ ಪಿಡುಗಿಗೆ ಪರಿಹಾರವಾಗಿ ಅವರು ಸಲಹೆ ಮಾಡಿದ "ಸಮಾಜವಾದಿ ಮಾದರಿಯ

"ಸಮಾಜ" ಎಂಬ ಸಾಮಾನ್ಯ ಸುಧಾರಣಾವಾದಿ ವಿಚಾರವನ್ನು ಒಪ್ಪಿಕೊಳ್ಳುವಂತೆ ಭಾರತದ ಸಾರ್ವಜನಿಕಾಭಿಪ್ರಾಯವನ್ನು ಸಿದ್ಧಗೊಳಿಸಲು ನೆಹರೂರವರಿಗೆ ಸುಮಾರು ಹತ್ತು ವರ್ಷಗಳೇ ಬೇಕಾದವು.

ನೆಹರೂರವರು ಹೇಳುವುದು ಸರಿಯಾಗಿದ್ದಿತು. ಭಾರತವು ಆಗ ಸಮಾಜವಾದಕ್ಕೆ ಸಿದ್ಧವಾಗಿರಲಿಲ್ಲ. ಆದ್ದರಿಂದ ಆಗ ಕೈಗೊಳ್ಳಬಹುದಾಗಿದ್ದ ತರ್ಕಬದ್ಧ ಕ್ರಮವೆಂದರೆ ಭಾವಿ ಸಮಾಜವಾದಿ ಸುಧಾರಣೆಗಳಿಗಾಗಿ ಪರಿಸ್ಥಿತಿಗಳನ್ನು ಸಿದ್ಧಗೊಳಿಸುವ ಸಂಕ್ರಮಣದ ಘಟ್ಟದ ಮೂಲಕ ಸಾಗಿ ಹೋಗುವುದು. ಈ ಕಾಲಘಟ್ಟದಲ್ಲಿ ವರ್ಗ ಶಕ್ತಿಗಳ ಸಾಲುಗೂಡಿಕೆ ಏನಿರಬೇಕು, ಈ ಕಾಲಘಟ್ಟ ಎಷ್ಟು ದೀರ್ಘ ಹಾಗೂ ಅದರ ಗುರಿಗಳು ಏನಿರುವುವು ಎಂಬುದನ್ನೇನೂ ಅವರು ನಿರೂಪಿಸಲಿಲ್ಲ. ಅಲ್ಲದೆ ಸಮಾಜವಾದಿ ಸುಧಾರಣೆಗಳಿಗಾಗಿ ಸಂಘಟನಾತ್ಮಕ, ರಾಜಕೀಯ ಹಾಗೂ ವಿಚಾರಧಾರಾತ್ಮಕ ಪೂರ್ವಾವಶ್ಯಕತೆಗಳನ್ನು ಅವರು ಸೃಜಿಸಲಿಲ್ಲ. ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಚಾರ ಕಾರ್ಯದಲ್ಲಿ ಬಳಸುತ್ತಿದ್ದ ಸಮಾಜವಾದದ ಪ್ರಕಲ್ಪನೆಯೇ ತುಂಬ ಅಸ್ಪಷ್ಟವಾಗಿದ್ದಿತು. ವರ್ಗಸಾರರಹಿತವಾಗಿದ್ದಿತು. ವಾಸ್ತವವಾಗಿ ಸಮಾಜವಾದ ಎಂದರೆ ಆರ್ಥಿಕ ಪ್ರಗತಿ, ದುಡಿಯುವ ಜನರ ಸ್ಥಿತಿಯಲ್ಲಿ ಸುಧಾರಣೆ, ದೇಶದ ಎಲ್ಲ ಪ್ರಜೆಗಳಿಗೂ ಸಮಾನ ಅವಕಾಶಗಳ ಸೂತ್ರದ ಘೋಷಣೆ. ಎಂದು ವರ್ಣಿಸಲಾಯಿತು. ನೆಹರೂರವರು ಅನುಸರಿಸಿದ ನೀತಿಯು ಭಾರತದಲ್ಲಿ ಬಂಡವಾಳವಾದದ ಅಡಿಪಾಯಗಳನ್ನು ನಾಶಗೊಳಿಸಲಿಲ್ಲ. ಅದು ಭಾರತೀಯ ಏಕಸ್ವಾಮ್ಯಗಳನ್ನು ಆರ್ಥಿಕತೆಯ ಪ್ರಾಬಲ್ಯ ಸ್ಥಾನಗಳಿಂದ ದೂರಮಾಡಲೂ ಇಲ್ಲ, ತೀವ್ರತರವಾದ ಸಾಮಾಜಿಕ ವೈರುಧ್ಯಗಳನ್ನು ಪರಿಹರಿಸಲೂ ಇಲ್ಲ. ತದ್ವಿರುದ್ಧವಾಗಿ, ನೆಹರೂರವರೇ ಒಪ್ಪಿಕೊಂಡಂತೆ, ಬಡವರಿಗೂ ಶ್ರೀಮಂತರಿಗೂ ನಡುವಿನ ಅಂತರ ಹೆಚ್ಚಿತು, ಏಕಸ್ವಾಮ್ಯ ಬಂಡವಾಳ ತನ್ನ ಹಿಡಿತವನ್ನು ಮತ್ತು ಬಿಗಿಗೊಳಿಸಿಕೊಂಡಿತು.

ಆದರೂ ಭಾರತ ಸರಕಾರದ ಅಧಿಪತಿಯಾಗಿ ನೆಹರೂರವರ ಚಟುವಟಿಕೆಗಳನ್ನು ಬೆಲೆಗಟ್ಟುವಾಗ, ಅವರು ರಾಷ್ಟ್ರೀಯ ಆರ್ಥಿಕತೆಯನ್ನು ಅಭಿವೃದ್ಧಿಗೊಳಿಸುವುದರಲ್ಲಿ, ದೇಶದ ಕೈಗಾರಿಕೀಕರಣ ಕಾರ್ಯವನ್ನು ಈಡೇರಿಸುವುದರಲ್ಲಿ ಮತ್ತು ರಾಜ್ಯ ವಿಭಾಗವನ್ನು ಸೃಜಿಸುವುದರಲ್ಲಿ, ತುಂಬ ಯಶಸ್ಸು ಸಾಧಿಸಿದರೆಂದೇ ಹೇಳಬೇಕು. ಶಿಕ್ಷಣ ಹಾಗೂ ಸಾರ್ವಜನಿಕ ಆರೋಗ್ಯ ಸೇವಾ ಕ್ಷೇತ್ರಗಳಲ್ಲೂ ಅವರು ತುಂಬ ಸಾಧಿಸಿದರು. ಅವರು ಭಾರಿ ಹಾಗೂ ಮಧ್ಯಮ ಪ್ರಮಾಣದ ಸಾಮಂತಶಾಹಿ ಭೂಒಡೆತನವನ್ನೂ ತೊಡೆದು ಹಾಕಿದರು. ಆದರೆ ಇದನ್ನು ಅವರು ಬೂರ್ಜ್ವಾ ಆಧಾರದ ಮೇಲಷ್ಟೆ ಮಾಡಿದರು. ಬಡ ರೈತರಿಗೆ ಭೂಮಿ ಸಿಗಲೇ ಇಲ್ಲ. ಭಾರತದ ಬೇಸಾಯ ಮಾಡುವವನು ಉತ್ತಮ ಬಾಳಿಗಾಗಿ ಯುಗಾಂತರಗಳಿಂದ ಕಾಣುತ್ತಿದ್ದ ಕನಸು ನನಸಾಗಲೇ ಇಲ್ಲ. ನೆಹರೂರವರು

ಬೂರ್ಜ್ವಾ ಪ್ರಜಾಸತ್ತಾತ್ಮಕ ಹಾಗೂ ಜಾತ್ಯತೀತ ರಾಜ್ಯ ದೃಢಗೊಳ್ಳುವುದಕ್ಕೆ ಕ್ರಿಯಾಶೀಲವಾಗಿ ಹಾಗೂ ಯಶಸ್ವಿಯಾಗಿ ಉತ್ತೇಜನ ನೀಡಿದರು. ಅವರು ರೂಪಿಸಿದ ವಿದೇಶಾಂಗ ನೀತಿಯು ಭಾರತಕ್ಕೆ ಶಾಂತಿಪ್ರಿಯ ರಾಷ್ಟ್ರವಾಗಿ ಮನ್ನಣೆ ದೊರಕಿಸಿಕೊಟ್ಟಿತು. ಸಂತುಲನ ಮಾಡಿ ನೋಡಿದಲ್ಲಿ, ನೆಹರೂರವರ ಚಟುವಟಿಕೆ ನಿಸ್ಸಂದೇಹವಾಗಿಯೂ ಧನಾತ್ಮಕವಾಗಿದ್ದಿತು. ಆದರೆ ಅವರು ಅಷ್ಟು ಆಸ್ಥೆಯೊಂದಿಗೆ ಹೇಳುತ್ತಿದ್ದಂಥ ಸಮಾಜವಾದ ಮಾತ್ರ ಒಂದು ಸದುದ್ದೇಶವಾಗಿಯೇ ಉಳಿದಿದ್ದಿತು.

ನೆಹರೂರವರು ಭಾರತದಲ್ಲಿ ತಕ್ಷಣವೇ ಸಮಾಜವಾದಿ ಸುಧಾರಣೆಗಳನ್ನು ಜಾರಿಗೆ ತರಲು ಉದ್ಯುಕ್ತರಾಗಲು ಅಸಮರ್ಥರಾಗಿದ್ದರು – ಅದಕ್ಕೆ ಅವಶ್ಯವಾದ ರಾಜಕೀಯ ಪೂರ್ವಾವಶ್ಯಕತೆಗಳು ಇನ್ನೂ ಇರಲಿಲ್ಲ. ಆದರೆ ನಮ್ಮ ಅಭಿಪ್ರಾಯದಲ್ಲಿ ಅವರು ಸಮಾಜವಾದಿ ವಿಚಾರಗಳಿಗೆ ಪ್ರೋತ್ಸಾಹ ನೀಡಲು, ಸಮಾಜವಾದಕ್ಕೆ ನಿಷ್ಠೆಯಿಂದ ಕೂಡಿದ ವರ್ಗ ಹಾಗೂ ರಾಜಕೀಯ ಶಕ್ತಿಗಳನ್ನು ರೂಪಿಸಿ ಒಂದುಗೂಡಿಸಲು, ದೇಶದ ರಾಜಕೀಯ ಜೀವನದ ಮೇಲೂ ರಾಜ್ಯದ ಚಟುವಟಿಕೆಯ ಮೇಲೂ ಶೋಷಕ ವರ್ಗಗಳ ಪ್ರಭಾವವನ್ನು ಕುಗ್ಗಿಸಲು, ಇನ್ನೂ ಹೆಚ್ಚು ಮಾಡಬಹುದಿದ್ದಿತು, ಜೀವನವು ಬೂರ್ಜ್ವಾ ಹಾಗೂ ಸಂಪ್ರದಾಯಶರಣ ವೃತ್ತಗಳೊಂದಿಗೆ ಕಷ್ಟಕರವಾದ ರಾಜಿಗಳನ್ನು ಮಾಡಿಕೊಳ್ಳುವಂತೆ ಒತ್ತಾಯಿಸದೆ ಇದ್ದಿದ್ದರೆ. ಈ ರಾಜಿಗಳು ನೆಹರೂರವರನ್ನು ತಮ್ಮ ಕ್ರಾಂತಿಕಾರಿ ಹಾಗೂ ಪ್ರಜಾಸತ್ತಾತ್ಮಕ ಧ್ಯೇಯಗಳನ್ನು ವಿಮರ್ಶಿಸುವಂತೆ ಬಲಾತ್ಕರಿಸಿದವು.

ಆದರೆ ಮುಖ್ಯ ಅಂಶ, ನೆಹರೂರವರ ಜೀವಿತ ಕಾಲದಲ್ಲೇ ಆಗಲಿ, ಅನಂತರವೇ ಆಗಲಿ, ನೆಹರೂರವರ ಮಾರ್ಗಕ್ಕೆ ಇದ್ದ ನಿಜವಾದ ಬದಲಿಯೆಂದರೆ ಕ್ರಾಂತಿಕಾರಿ ಎಡಪಂಥವಲ್ಲ ಆದರೆ ಬಲಪಂಥದ ಸರಕಾರ. ನೆಹರೂರವರು ಈ ಬಲಪಂಥಕ್ಕೆ ಬದಲುವುದನ್ನು ನಿವಾರಿಸಿದರು ಮತ್ತು ಸಂಪ್ರದಾಯಶರಣರ ಹಾಗೂ ಪ್ರತಿಗಾಮಿ ಸಾಮಾಜಿಕ ಶಕ್ತಿಗಳ ನೆಲೆಗಳನ್ನು ಶಿಥಿಲಗೊಳಿಸಿದರು. ಇದೇ ಅವರು ನಿರ್ವಹಿಸಿದ ಉದಾತ್ತ ಪಾತ್ರವಾಗಿದ್ದಿತು, ಅವರು ಸಲ್ಲಿಸಿದ ಮಹೋನ್ನತ ಚಾರಿತ್ರಿಕ ಸೇವೆಯಾಗಿದ್ದಿತು.

ನೆಹರೂರವರ ನಿಲುವುಗಳಲ್ಲಿ ಏನೆಲ್ಲ ವೈರುಧ್ಯಗಳಿದ್ದರೂ ಅವರ ಹೆಸರು ನಮ್ಮ ಮನಸ್ಸುಗಳಲ್ಲಿ ಭಾರತದ ಪ್ರಗತಿಶೀಲ ಬೆಳವಣಿಗೆಯೊಂದಿಗೆ ದೃಢವಾಗಿ ಸಂಬಂಧಿತವಾಗಿದೆ.

* * *

ನೆಹರೂರವರ ಚಟುವಟಿಕೆಗಳು ರಾಜಕಾರಣಕ್ಕಷ್ಟೆ ಸೀಮಿತವಾಗಿರಲಿಲ್ಲ. ಅವರು ಭಾರಿ ಆತ್ಮಿಕ ಸಂಸ್ಕೃತಿಯ, ವಿಶ್ವಕೋಶ ಸದೃಶ ವಿದ್ವತ್ತಿನ ಹಾಗೂ

ಉದಾರವಾದ ದಾರ್ಶನಿಕ ಮನೋವೃತ್ತಿಯ ವ್ಯಕ್ತಿಯಾಗಿದ್ದರು. ಶಿಕ್ಷಣದ ಸಾರ್ವತ್ರಿಕತೆ, ಓದಿನ ವೈವಿಧ್ಯ, ಸ್ವೋಪಜ್ಞತೆ, ಚುರುಕು ಬುದ್ಧಿ, ಆತ್ಮೀಯಭಾವ, ಲಲಿತ ನಾಟಕೀಯ ಹಾಗೂ ಆಸಕ್ತಿಕರ ರೀತಿಯಲ್ಲಿ ವಿಷಯಗಳ ಪರಿಶೀಲನೆ, ಇವೆಲ್ಲವುಗಳ ಸಂಯೋಜನೆಯನ್ನು ಅವರ ಅಸಂಖ್ಯಾತ ಬರಹಗಳಲ್ಲಿ ನಾವು ಕಾಣಬಹುದು. ಅವರು ಮಾನವನ ಪ್ರಗತಿಗಾಗಿ ಅನ್ವೇಷಣೆ ನಡೆಸಿದ, ಹೋರಾಟ ನಡೆಸಿದ, ಕೆಲವು ವೇಳೆ ಸಂದೇಹಿಸಿದ ಹಾಗೂ ಹಿಂಜರಿದ, ಆದರೆ ಯಾವತ್ತೂ ಅವರಲ್ಲಿ ನಂಬಿಕೆ ಇರಿಸಿದ್ದ ವ್ಯಕ್ತಿಯಾಗಿದ್ದರು. ಅವರೊಬ್ಬ ಶ್ರೇಷ್ಠ ಚಿಂತಕರಾಗಿದ್ದರು, ಕವಿಯಾಗಿದ್ದರು. ಅವರ ಸುವಿಖ್ಯಾತ ರಾಜಕೀಯ ಕಾರ್ಯವಿರದೆ ಹೋಗಿದ್ದರೂ, ಅವರ ಬರಹಗಳ ಮೇಲಷ್ಟೆ ಆಧರಿಸಿಯೇ ಅವರು ಭವಿಷ್ಯತ್ತಿನ ಪೀಳಿಗೆಗಳ ಗಮನ ಮತ್ತು ಆಸಕ್ತಿಗಳಿಗೆ ಪಾತ್ರರಾಗುತ್ತಿದ್ದರೆಂದು ಹೇಳಬಹುದಾಗಿದೆ. ಆದರೆ ನೆಹರೂರವರ ಸಾಹಿತ್ಯಿಕ ಕಾರ್ಯವನ್ನು ಅವರ ರಾಜಕೀಯ ಜೀವನದಿಂದ ಪ್ರತ್ಯೇಕಿಸುವುದು ಸಾಧ್ಯವಿಲ್ಲ. "ಕ್ರಿಯೆ ಮತ್ತು ಚಿಂತನೆಗಳು ಎಷ್ಟು ಹೆಚ್ಚು ಜೊತೆಗೂಡಿದ್ದರೆ ಹಾಗೂ ಸಂಕಲಿಸಿದ್ದರೆ ಅವು ಅಷ್ಟೂ ಹೆಚ್ಚು ಪರಿಣಾಮಕಾರಿಯಾಗುತ್ತವೆ" ಎಂದವರು ಬರೆದರು. "ಯಾರ ಚಿಂತನೆ ಹಾಗೂ ಕ್ರಿಯೆಗಳು ಸುಸಂಬದ್ಧಿತವಾಗಿರುತ್ತವೋ ಅವನೇ ಅತ್ಯಂತ ಸುಖಸಂತೋಷಗಳ ವ್ಯಕ್ತಿ."* ಚಾರಿತ್ರಿಕ ಹಾಗೂ ದಾರ್ಶನಿಕ ಚಿಂತನೆಗಳು ಅವರಿಗೆ ಅಂತಿಮ ಗುರಿಗಳಾಗಿರಲಿಲ್ಲ, ಆದರೆ ತಮ್ಮ ದೇಶವನ್ನೂ ಜಗತ್ತನ್ನೂ ಬಾಧಿಸುತ್ತಿದ್ದ ಬಹುಮುಖ್ಯ ಸಮಸ್ಯೆಗಳಿಗೆ ಉತ್ತರಗಳಿಗಾಗಿ ನಡೆಸಿದ ಶೋಧನೆಗಳಾಗಿದ್ದವು. ಅವರು ವರ್ತಮಾನವನ್ನು ಅರ್ಥಮಾಡಿಕೊಳ್ಳಲೂ ಭವಿಷ್ಯತ್ತನ್ನು ಮುಂಗಾಣಲೂ ಗತಕಾಲದ ಕಡೆಗೆ ತಿರುಗುತ್ತಿದ್ದರು.

ಜೈಲಿನ ನೆಲೆಗಳಿಂದಲೇ ಅವರ 'ಭಾರತದರ್ಶನ' ಹಾಗೂ 'ಆತ್ಮಕಥೆ' ಗ್ರಂಥಗಳು ರಚಿಸಲ್ಪಟ್ಟಿರುವುದು. ಕಾಲು ಶತಮಾನಕ್ಕೂ ಹಿಂದೆ ಮೊದಲ ಬಾರಿಗೆ ಸೋವಿಯತ್ ಒಕ್ಕೂಟದಲ್ಲಿ ರಷ್ಯನ್‌ನಲ್ಲಿ ಪ್ರಕಟವಾದ ಈ ಎರಡು ಗ್ರಂಥಗಳು ಸೋವಿಯತ್ ಓದುಗರಲ್ಲಿ ಮಹದಾಸಕ್ತಿ ಕೆರಳಿಸಿದವು, ಅವರಿಗೆ ಸ್ವತಂತ್ರ ಭಾರತದ ಇತಿಹಾಸ ಹಾಗೂ ಸಮಸ್ಯೆಗಳನ್ನು ಪರಿಚಯಿಸಿಕೊಡುವುದರಲ್ಲಿ ಮುಖ್ಯ ಪಾತ್ರ ನಿರ್ವಹಿಸಿದವು.

ಅವರ 'ಜಾಗತಿಕ ಇತಿಹಾಸದ ನಸುನೋಟಗಳು' ಕೃತಿಯ ಬಗೆಗೂ ಇದೇ ಮಾತು ಹೇಳಬಹುದು. ಆದರೆ ಇಲ್ಲಿ ಗ್ರಂಥಕರ್ತೃ ಪರಿಶೀಲಿಸಿರುವ ವಿಷಯಗಳ

* *Jawaharlal Nehru's Speeches*, Vol. 3, The Publications Division, Ministry of Information and Broadcasting, Calcutta, 1958, p. 472. –ಸಂ.

ವ್ಯಾಪ್ತಿ ಹೆಚ್ಚು ವಿಶಾಲ. ಜಾಗತಿಕ ಇತಿಹಾಸದ ಪ್ರಮುಖ ಘಟನೆಗಳ ಮೇಲೆ ಆಧರಿಸಿಕೊಂಡು, ಚಾರಿತ್ರಿಕ ಪ್ರಕ್ರಿಯೆಯ ಮುಖ್ಯ ಸ್ವರೂಪಗಳನ್ನು ಆಯ್ದು ಅವುಗಳನ್ನು ಸಾಮಾನ್ಯೀಕರಿಸುವ ಮೂಲಕ ನೆಹರೂರವರು ಜಾಗತಿಕ ಪ್ರಮಾಣದಲ್ಲಿ ಮಾನವ ಸಮಾಜದ ಬೆಳವಣಿಗೆಯ ಚಿತ್ರಣ ನೀಡುತ್ತಾರೆ. ಭಾರತದ ಇತಿಹಾಸವನ್ನು ಜಗತ್ತಿನ ಇತರ ದೇಶಗಳ ಹಾಗೂ ಭಾಗಗಳ ಘಟನೆಗಳಿಗೆ ಸಮಾಂತರವಾಗಿ, ಅವುಗಳೊಂದಿಗೆ ತುಲನೆ ಮಾಡಿ, ಪರಿಶೀಲಿಸಲಾಗಿದೆ. ಇದು ಇತಿಹಾಸಕಾರನೊಬ್ಬನ ಪ್ರಗಾಢವಾದ ಹಾಗೂ ಸ್ವೋಪಜ್ಞವಾದ ಕೃತಿಯಾಗಿದೆ. ಆದರೆ ಇದು ಕೇವಲ ಶಾಸ್ತ್ರೀಯ ಅಧ್ಯಯನ ಕೃತಿಯೇನಲ್ಲ. 'ಭಾರತದರ್ಶನ' ಕೃತಿಯಲ್ಲಿ ನಂತೆ ಈ ಕೃತಿಯಲ್ಲೂ ನೆಹರೂ ತಮ್ಮ ದೇಶದ ಗತಕಾಲದ ಬಗೆಗೆ ವ್ಯಾಖ್ಯಾನ ನೀಡಲು ಯತ್ನಿಸುತ್ತಾರೆ. ಆದರೆ ಈ ಪ್ರಸಂಗದಲ್ಲಿ ಅವರು ಗತಕಾಲವನ್ನು ವಿಶ್ವ ಇತಿಹಾಸದ ತ್ರಿಪಟ್ಟಿಕೆಯ ಮೂಲಕ ಕಾಣುತ್ತಾರೆ. ಭಾರತದ ವರ್ತಮಾನವನ್ನು ಹೆಚ್ಚು ಸ್ಪಷ್ಟವಾಗಿ ಕಾಣಲೂ ಅದರ ಪ್ರಗತಿಯ ಪಥವನ್ನು ಗುರುತಿಸಲೂ ಅವರು ಈ ಮೂಲಕ ಯತ್ನಿಸುತ್ತಾರೆ. ಅವರು ಗತಕಾಲವನ್ನು ಪ್ರಧಾನವಾಗಿ ಭವಿಷ್ಯತ್ತಿನ ಸೂಚಕವನ್ನಾಗಷ್ಟೆ ಕಾಣುತ್ತಾರೆ. ಇತಿಹಾಸವು ಅವರಿಗೆ, ಬಾಳಿನ, ಅನುಭವದ, ಹೋರಾಟದ ಶಾಲೆಯಾಗಿದಿತು, ಜಾಗತಿಕ ಮನೋಧರ್ಮವನ್ನು ವಿಕಾಸಗೊಳಿಸಿಕೊಳ್ಳಲು ಒಂದು ಆಕರವಾಗಿದ್ದಿತು. ನೆಹರೂರವರು ಇತಿಹಾಸವನ್ನು ಪ್ರಾಯೋಗಿಕ ಆವಶ್ಯಕತೆಗಳಿಂದ ಅಭ್ಯಸಿಸಲು ಒತ್ತಾಯಿಸಲ್ಪಟ್ಟ ಒಬ್ಬ ಕ್ರಿಯಾಶೀಲ ರಾಜಕಾರಣಿಯ ದೃಷ್ಟಿಯಿಂದ ನೋಡಿದರು. "ಇತಿಹಾಸದತ್ತ ನಾನು ಆಕರ್ಷಿತನಾದುದು ಗತಕಾಲದಲ್ಲಿ ಜರುಗಿದ ವಿವಿಧ ಘಟನೆಗಳನ್ನು ಕೇವಲ ಓದಿ ತಿಳಿಯಲೆಂದಲ್ಲ, ಆದರೆ ಇಂದಿನ ಪರಿಸ್ಥಿತಿಗೆ ದಾರಿ ಮಾಡಿಕೊಟ್ಟಿರುವಂತೆ ಅವುಗಳನ್ನು ತಿಳಿಯುವ ಉದ್ದೇಶದಿಂದ. ಆಗಷ್ಟೆ ನನಗೆ ಇತಿಹಾಸ ಜೀವಂತವಾಯಿತು. ಇಲ್ಲದಿದ್ದರೆ ಅದು ನನ್ನ ಜೀವನದೊಂದಿಗಾಗಲೀ ಈ ಪ್ರಪಂಚದೊಂದಿಗಾಗಲೀ ಯಾವ ಸಂಬಂಧವನ್ನೂ ಹೊಂದಿರದ ಅಪ್ರಾಸಂಗಿಕ ವಸ್ತುವಾಗಿಯೇ ಉಳಿದಿರುತ್ತಿತ್ತು."* ಎಂದವರು ಬರೆದರು. ಇದು ರಾಷ್ಟ್ರೀಯ-ವಿಮೋಚನಾ ಚಳವಳಿಯ ಅಗ್ರಮಾನ್ಯ ನಾಯಕರಲ್ಲೊಬ್ಬರೂ, ಸ್ವತಂತ್ರ ಭಾರತೀಯ ರಾಜ್ಯದ ಅಧಿಪತಿಯೂ, ಭಾರತದ ವರ್ತಮಾನ ಹಾಗೂ ಭವಿಷ್ಯತ್ ಕಾಲಗಳೆರಡರ ಮೇಲೆಯೂ ಪ್ರಚಂಡ ಪ್ರಭಾವ ಬೀರಿದವರೂ ಆದ ವ್ಯಕ್ತಿಯೊಬ್ಬರು ರಚಿಸಿದ, ಇತಿಹಾಸದ ಆಕರ್ಷಕ ನಸುನೋಟಗಳನ್ನು ನೀಡುವ ಗ್ರಂಥವಾಗಿದೆ.

* *Jawaharlal Nehru's Speeches*, Vol. 2, Calcutta, 1954, p. 378. –ಸಂ.

ನೆಹರೂರವರು ಇತಿಹಾಸವನ್ನು ಸ್ವತಃ ಯಾವ ದೃಷ್ಟಿಯಿಂದ ನೋಡಿದರೋ ಅದೇ ದೃಷ್ಟಿಯಿಂದ ಇತಿಹಾಸದ ಕುರಿತು ಅವರ ಅಭಿಪ್ರಾಯಗಳನ್ನೂ ನಾವು ನೋಡಬೇಕಾದುದು. ಅವರ ಇಂದಿಗೆ ಯಾವುದು ವಿಶೇಷವಾಗಿ ಪ್ರಸ್ತುತವೋ ಅದನ್ನು, ಭವಿಷ್ಯತ್ತಿಗಾಗಿ ಅವರು ಯಾವುದನ್ನು ಪೂರ್ವನಿರ್ಣಯ ಮಾಡಿದರೋ ಅದನ್ನು, ಕಾಣಬಹುದು.

ಅವರು ತಮ್ಮ ದೇಶದ ಹಾಗೂ ಜಗತ್ತಿನ ಇತಿಹಾಸವನ್ನು ಒಬ್ಬ ವಿಚಾರವಾದಿಯ ದೃಷ್ಟಿಯಿಂದ ನೋಡಿದರು. ಅದರ ಒಳ ಅರ್ಥ ಹಾಗೂ ತರ್ಕಕ್ಕಾಗಿ ಶೋಧ ನಡೆಸಿದರು. ಅವರು ತಮ್ಮ ದೇಶದ ಗತಕಾಲವನ್ನೂ ಇದೇ ರೀತಿಯಲ್ಲಿ ನೋಡಿದರು. ಗತಕಾಲವನ್ನು ಅವಿಮರ್ಶಾತ್ಮಕವಾಗಿ ಮೆಚ್ಚುವಂಥ ಯಾವುದೇ ಭಾವನೆಯೂ, ಭಾರತದ ಇತಿಹಾಸವು ಅದ್ವಿತೀಯವಾದುದು ಪ್ರತ್ಯೇಕವಾದುದು ಎಂಬಂಥ ಯಾವುದೇ ವಿಚಾರವೂ, ಭಾರತವು ಆ ದೇಶದಲ್ಲಿಷ್ಟೇ ಅಂತರ್ಗತವಾದಂಥ ಯಾವುದೋ ಆತ್ಮಿಕ ನಿಯಮಕ್ಕೆ ಒಳಗಾದಂಥ ಒಂದು ವಿಶಿಷ್ಟ ದೇಶ ಎಂಬ ಯಾವುದೇ ವಿಚಾರವೂ, ಅವರ ಮನೋಧರ್ಮದಲ್ಲಿ ಕಂಡುಬರುವುದಿಲ್ಲ. ಅವರ ಅಭಿಪ್ರಾಯಗಳು ಭಾರತದಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುವಂಥ ಧಾರ್ಮಿಕ ಅಥವಾ ನೈತಿಕ ನಿಗೂಢತೆಗಳಿಂದ ಮುಕ್ತವಾಗಿದ್ದವು. ಯುರೋಪಿನಲ್ಲಿ ಶಿಕ್ಷಣ ಪಡೆದ ನೆಹರೂರವರು ಅಲ್ಲಿನ ವಿಚಾರವಾದ ಹಾಗೂ ಸಂಸ್ಕೃತಿಗಳ ಪರಂಪರೆಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿ ಸ್ವೀಕರಿಸಿದ್ದರು. ಇದು ಇತಿಹಾಸದ ಕುರಿತು, ಅದರಲ್ಲೂ ವಿಶೇಷವಾಗಿ ಭಾರತಕ್ಕೆ ಸಂಬಂಧಿಸಿದಂತೆ, ಅವರ ಪ್ರಕಲ್ಪನೆಗಳ ಮೇಲೆ ಪ್ರಭಾವ ಬೀರಿತು ಮತ್ತು ತಮ್ಮ ದೇಶವನ್ನು ಪೂರ್ವಾಗ್ರಹಗಳೊಂದಿಗೆ ವೈಭವೀಕರಿಸಿ ನೋಡದೆ ಅದನ್ನು ಇತರ ದೇಶಗಳೊಂದಿಗೆ ಸಂಬಂಧಿಸಿದಂತೆ ಕಾಣಲು ಅವರಿಗೆ ಸಹಾಯ ಮಾಡಿತು. "ಭಾರತವು ನನ್ನ ರಕ್ತದಲ್ಲಿ ಬೆರೆತಿದ್ದಿತು. ಅದರ ಅನೇಕ ಲಕ್ಷಣಗಳು ನನ್ನನ್ನು ಸಹಜಪ್ರವೃತ್ತಿಯೊಂದಿಗೆ ಬೆರಗುಗೊಳ್ಳುವಂತೆ ಮಾಡಿದ್ದವು. ಆದರೂ ನಾನು ಅದನ್ನು, ಬಹುಮಟ್ಟಿಗೆ ಒಬ್ಬ ಪರಕೀಯ ವಿಮರ್ಶಕನಂತೆ, ಅದರ ಗತಕಾಲದ ಅವಶೇಷಗಳ ಬಗೆಗೂ ಅದರ ವರ್ತಮಾನ ಕಾಲದ ಅನೇಕ ಸಂಗತಿಗಳ ಬಗೆಗೂ ಒಂದು ರೀತಿಯ ಅಸಮ್ಮತಿಯ ಭಾವನೆಯೊಂದಿಗೆ ಕಂಡೆ. ನಾನು ಸ್ವಲ್ಪಮಟ್ಟಿಗೆ ಭಾರತವನ್ನು ಪಶ್ಚಿಮದ ಮಾರ್ಗವಾಗಿ ತಲುಪಿದೆ. ಸ್ನೇಹಪರ ಪಾಶ್ಚಿಮಾತ್ಯ ವ್ಯಕ್ತಿಯೊಬ್ಬನು ಕಾಣಬಹುದಾದಂತೆ ಅದನ್ನು ಕಂಡೆ."*

ಇತಿಹಾಸದ ಅರ್ಥವನ್ನು ಅದರಿಂದಲೇ ಹೊರಗೆ ಹುಡುಕ ಹೋಗಲು ನಿರಾಕರಿಸಿ, ನೆಹರೂರವರು ಐತಿಹಾಸಿಕ ಬೆಳವಣಿಗೆಯ ಅಂತರ್ಗತ ನಿಯಮಗಳನ್ನು ಅರ್ಥಮಾಡಿಕೊಳ್ಳುವಂತಾದರು. ಹೀಗೆ ಅವರು ಐತಿಹಾಸಿಕ ಪ್ರಕ್ರಿಯೆಯನ್ನು ವಾಸ್ತವಿಕವಾಗಿ, ಭೌತಿಕವಾದಿ ಎಂದೇ ಹೇಳಬಹುದಾದಂಥ ರೀತಿಯಲ್ಲಿ ಅರ್ಥಮಾಡಿಕೊಳ್ಳುವತ್ತ ಒಂದು ಮುಖ್ಯ ಹೆಜ್ಜೆ ಇರಿಸಿದ್ದರು. "ವಿಶ್ವದಲ್ಲಿ ಅನೇಕ ಐತಿಹಾಸಿಕ ಶಕ್ತಿಗಳು ಅನೇಕ ವರ್ಷಗಳಿಂದ ಕಾರ್ಯ ಜರುಗಿಸುತ್ತಿವೆ" ಎಂದವರು ಬರೆದರು. "ಅನೇಕ ಘಟನೆಗಳು ಜರುಗಿವೆ. ಕೆಲವು ಒಳ್ಳೆಯವು. ಮತ್ತೆ ಕೆಲವು ಅಷ್ಟು ಒಳ್ಳೆಯವಲ್ಲದವು – ನಿಷ್ಪಕ್ಷಪಾತದ ಐತಿಹಾಸಿಕ ಶಕ್ತಿಗಳು ಕಾರ್ಯ ಜರುಗಿದಾಗ ಯಾವತ್ತೂ ಆಗುವಂತೆ. ಈ ಶಕ್ತಿಗಳು ಇನ್ನೂ ಕ್ರಿಯೆ ಜರುಗಿಸುತ್ತಿವೆ. ನಾವು ಅವುಗಳನ್ನು ಒಂದು ಸ್ವಲ್ಪ ಹೀಗೆ ಹಾಗೆ ರೂಪಿಸಲು, ಅವುಗಳ ದಿಕ್ಕನ್ನು ಇಲ್ಲಿ ಅಲ್ಲಿ ಸ್ವಲ್ಪ ಬದಲಿಸಲು, ಯತ್ನಿಸುತ್ತೇವೆ. ಆದರೆ ಅವು ಸಾರಭೂತವಾಗಿ ತಮ್ಮ ಉದ್ದೇಶವನ್ನು ತಮ್ಮ ಐತಿಹಾಸಿಕ ನಿಯತಿಯನ್ನು ಪೂರ್ಣಗೊಳಿಸುವವರೆಗೂ ಕಾರ್ಯ ಜರುಗಿಸುತ್ತಲೇ ಹೋಗುತ್ತಿರುತ್ತವೆ."* ನೆಹರೂರವರು ಹೀಗೆ ವಸ್ತುನಿಷ್ಠ ನಿಯಮಗಳನ್ನು ಮನ್ನಿಸಿದ್ದರು. ಅದು ಅವರಿಗೆ ಐತಿಹಾಸಿಕ ಪ್ರಕ್ರಿಯೆಯು ತಂತಿಯ ಸುರುಳಿಯಂತೆ ಮೇಲೆ ಮೇಲೇರಿ ಹೋಗುತ್ತಿರುತ್ತದೆ ಎಂಬುದನ್ನು ಮನಗಾಣಲು ನೆರವಾಯಿತು, ಐತಿಹಾಸಿಕ ಪ್ರಕ್ರಿಯೆಯು ತಳಮಟ್ಟದಿಂದ ಮೇಲಿನ ಮಟ್ಟಕ್ಕೆ ಏರಿಹೋಗುವ ಘಟನೆಗಳ ಒಂದು ವಸ್ತುನಿಷ್ಠ ಹಾಗೂ ಪ್ರಗತಿಶೀಲ ಗತಿ ಎಂಬುದನ್ನು ಅರ್ಥಮಾಡಿಕೊಳ್ಳಲು ನೆರವಾಯಿತು. ನೆಹರೂರವರ ಜಾಗತಿಕ ಮನೋಧರ್ಮದ ಈ ಅಂಶಗಳು ಅವರ ರಾಜಕೀಯ ಕಾರ್ಯದ ಮೇಲೆ ಧನಾತ್ಮಕ ಪರಿಣಾಮ ಉಂಟುಮಾಡಿದವು. ತಮ್ಮ ರಾಜಕೀಯ ಕಾರ್ಯವನ್ನು ಅವರು ಸ್ವಪ್ರೇರಣಾವಾದಿಯ ಅಥವಾ ನೈತಿಕವಾದಿಯ ದೃಷ್ಟಿಕೋನದಿಂದ, ಇಲ್ಲವೇ ಧಾರ್ಮಿಕ ದೃಷ್ಟಿಕೋನದಿಂದ, ನೋಡಲಿಲ್ಲ, ಆದರೆ ಸಾಮಾನ್ಯವಾಗಿ ವೈಜ್ಞಾನಿಕ ದೃಷ್ಟಿಕೋನದಿಂದ ನೋಡಿದರು. ಅದನ್ನು ಇತಿಹಾಸದ ವಸ್ತುನಿಷ್ಠ ಸಾಮಾನ್ಯ ಗತಿಯೊಂದಿಗೆ ಜೊತೆಗೂಡಿಸಿ ನೋಡಲು, ಅದನ್ನು ಪುರೋಗಾಮಿ ಪ್ರವೃತ್ತಿಗಳಿಗೆ ಅಧೀನಪಡಿಸಿ ನೋಡಲು, ಯತ್ನಿಸಿದರು. ತಾವು ಕೈಕೊಂಡ ರಾಜಕೀಯ ಮಾರ್ಗವು, ನಡೆಸಿದ ರಾಜಕೀಯ ಹೋರಾಟವು ಎಷ್ಟರ ಮಟ್ಟಿಗೆ ವಾಸ್ತವಿಕವಾಗಿದ್ದಿತು ಹಾಗೂ ಸಮರ್ಥನೀಯವಾಗಿದ್ದಿತು ಎಂಬುದನ್ನು ನೆಹರೂರವರು ಮಾನವಕುಲದ ಆ ಮುನ್ನಿನ ಇಡೀ ಬೆಳವಣಿಗೆಯಿಂದ ಪೂರ್ವನಿರ್ಧರಿತವಾದ ಕಾಲದ ಕರೆಗೆ ಒಗ್ಗೊಡುವುದರಲ್ಲಷ್ಟೆ ಕಂಡು

---

* Jawaharlal Nehru, *The Discovery of India*, Asia Publishing House, Bombay, 1964, p. 51. – ಸಂ.

* Jawaharlal Nehru, *India's Foreign Policy. Selected Speeches, September 1946-April 1961*, The Publications Division, Ministry of Information and Broadcasting, Delhi, 1961, p. 256. – ಸಂ.

ಕೊಂಡವರು. ಧ್ಯೇಯಗಳೂ ಗುರಿಗಳೂ ಐತಿಹಾಸಿಕ ಒಲವುಗಳಿಗೆ ವಿರುದ್ಧವಾಗಿ ಹೋಗಬಾರದು ಎಂದವರು ಹೇಳಿದರು. ಜನರೇ ಇತಿಹಾಸದ ನಿಜವಾದ ನಿರ್ಮಾಪಕರು, ರಾಜಕೀಯ ನಾಯಕರ ಚಟುವಟಿಕೆಗಳು ಜನಸಮೂಹಗಳ ಆಸೆ ಆಕಾಂಕ್ಷೆಗಳನ್ನು ತೃಪ್ತಿಗೊಳಿಸುವ ಹೋರಾಟಕ್ಕೆ ಅಧೀನವಾಗಿರಬೇಕು, ಎಂಬ ಪ್ರಗತಿಶೀಲ ವೈಜ್ಞಾನಿಕ ಪ್ರಕಲ್ಪನೆಗೆ ಅವರು ನಿರಂತರವಾಗಿ ನಿಷ್ಠರಾಗಿದ್ದರು. ಅವರು ಒತ್ತಿ ಹೇಳಿದರು: "ಜನರೇ ಪ್ರಧಾನ ಪಾತ್ರಧಾರಿಗಳು. ಅವರ ಹಿಂದೆ, ಅವರನ್ನು ಮುಂದಕ್ಕೆ ತಳ್ಳುತ್ತ, ಇರುತ್ತವೆ ಮಹೋನ್ನತ ಚಾರಿತ್ರಿಕ ಶಕ್ತಿಗಳು.... ಈ ಐತಿಹಾಸಿಕ ಹಿನ್ನೆಲೆ ಹಾಗೂ ರಾಜಕೀಯ ಮತ್ತು ಸಾಮಾಜಿಕ ಶಕ್ತಿಗಳು ಇಲ್ಲದಿದ್ದರೆ ಯಾವ ನಾಯಕರೇ ಆಗಲೀ ಪ್ರಕ್ಷೋಭನಕಾರರೇ ಆಗಲೀ ಜನಸಮೂಹಗಳನ್ನು ಕ್ರಿಯೆಯಲ್ಲಿ ತೊಡಗುವಂತೆ ಸ್ಫೂರ್ತಿಗೊಳಿಸುವುದು ಸಾಧ್ಯವಿಲ್ಲ."*

ನೆಹರೂರವರ ಜಾಗತಿಕ ಮನೋಧರ್ಮವು ಅನೇಕ ಪಂಥಗಳ ಪ್ರಭಾವಕ್ಕೊಳಗಾಗಿ ರೂಪುಗೊಂಡಿತು. ಐತಿಹಾಸಿಕ ಪ್ರಕ್ರಿಯೆಯನ್ನು ನಿಯಂತ್ರಿಸುವ ನಿಯಮಗಳ ಕುರಿತು ಮತ್ತು ಜನಸಮೂಹಗಳ ಪಾತ್ರದ ಕುರಿತು ಅವರ ಅಭಿಪ್ರಾಯಗಳು, ವೈಜ್ಞಾನಿಕ ಸಮಾಜವಾದದ ವಿಚಾರಗಳು ಅವರ ಮೇಲೆ ಅತ್ಯಂತ ಹೆಚ್ಚಿನ ಪ್ರಭಾವ ಹೊಂದಿದ್ದವು ಅನ್ನುವುದನ್ನು ತೋರಿಸಿಕೊಡುತ್ತವೆ.

ಕೆಲವರು ಯೋಚಿಸಬಹುದು: ನೆಹರೂರವರು ಸ್ವೋಪಜ್ಞತೆ ಇಲ್ಲದವರು. ಅವರೊಬ್ಬ ಸಾರಸಂಗ್ರಹವಾದಿ. ಅಷ್ಟೇ, ಅಲ್ಲಿಗೆ ಪೂರ್ಣ ವಿರಾಮ. ಆದರೆ ಅದು ಹಾಗಲ್ಲವೇ ಅಲ್ಲ. ನೆಹರೂರವರು ಇನ್ನೂ ಹೆಚ್ಚು ತೊಡಕಾದ ವ್ಯಕ್ತಿತ್ವವುಳ್ಳವರು. ಅವರ ಅಭಿಪ್ರಾಯಗಳನ್ನು ಅತಿಸರಳಗೊಳಿಸಿ ಅಭ್ಯಸಿಸುವುದು ಸಲ್ಲ. ಅವರು ಮಾನವಕುಲ ಸಂಗ್ರಹಿಸಿಕೊಂಡ ಅನುಭವಗಳನ್ನು ಸಾಧ್ಯವಾದಷ್ಟೂ ಹೆಚ್ಚು ತಿಳಿಯಲು ಮತ್ತು ಅವುಗಳಲ್ಲಿ ಅತ್ಯುತ್ತಮವಾದವುಗಳನ್ನು ಆಯ್ದು ಆತ್ಮಗತವಾಗಿಸಿಕೊಳ್ಳಲು ಯತ್ನಿಸಿದರು. ಕೆಲವು ವೇಳೆ ರಾಜಕೀಯ ಹೋರಾಟದ ಮಧ್ಯದಲ್ಲಿ ನಾನಾ ದಾರ್ಶನಿಕ ಪದ್ಧತಿಗಳಿಂದ ಆಯ್ದ ಕೆಲವು ಪ್ರತ್ಯೇಕ ಆಧಾರವಾಕ್ಯಗಳನ್ನು ಬಳಸಿಕೊಂಡರು. ಇದು ಅವರಿಗೆ ಆ ಪದ್ಧತಿಗಳಲ್ಲಿನ ಅಸಂಗತಿಗಳನ್ನು ಅವುಗಳ ಪರಸ್ಪರ ವೈಷಮ್ಯಗಳನ್ನು ಕಾಣಲು ಅಡ್ಡಿಯಾಯಿತು. ಹಾಗಾಗಿ ಅವರು ಯಾವುದನ್ನು ತಪ್ಪಿಸಬಯಸಿದ್ದರೋ ಆ ಸಾರಸಂಗ್ರಹವಾದದತ್ತವೇ ಅನಿವಾರ್ಯವಾಗಿ ಹೋಗುವ ಪ್ರವೃತ್ತಿ ತೋರಿದರು. "ವಿವಿಧ ಅಭಿಪ್ರಾಯಗಳನ್ನೂ ವೈರುಧ್ಯಗಳನ್ನೂ ಸಂಯೋಜಿಸುವ, ವಿವಿಧ ಧರ್ಮಗಳನ್ನೂ ವಿಚಾರಧಾರೆಗಳನ್ನೂ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಪದ್ಧತಿಗಳನ್ನೂ

* Jawaharlal Nehru, *An Autobiography*, Allied Publishers Private, Ltd., Bombay, 1962, p. 282. – ಸಂ.

ಅರ್ಥಮಾಡಿಕೊಂಡು ಸರಿಹೊಂದಿಸಿ ಸ್ವೀಕರಿಸುವ, ಮಾನಸಿಕ ಅಥವಾ ಆತ್ಮಿಕ ಮನೋಧರ್ಮವನ್ನೇ"* ಅವರು ಹೆಚ್ಚು ಇಷ್ಟಪಡುತ್ತಿದ್ದರು.

ಆದರೆ ನಾನಾ ಪರಸ್ಪರ ವಿರುದ್ಧ ವಿಚಾರಧಾರೆಗಳನ್ನು "ಸಂಯೋಜಿಸುವುದರಲ್ಲಿ" ಇದುವರೆವಿಗೂ ಯಾರೂ ಯಶಸ್ವಿಯಾಗಿಲ್ಲ. ಇದನ್ನು ನೆಹರೂರವರೂ ತಿಳಿದಿದ್ದರು. ಅವರ ಜಾಗತಿಕ ಮನೋಧರ್ಮದಲ್ಲಿನ ಪರಸ್ಪರ ವಿರುದ್ಧದ ಅಂಶಗಳು ಐಕ್ಯಗೊಂಡಿರಲಿಲ್ಲ ಅಥವಾ ಸರಿಹೊಂದಿಸಲ್ಪಟ್ಟಿರಲಿಲ್ಲ. ಸರಿಹೊಂದಿಸಲಾಗದುದನ್ನು, ಪರಸ್ಪರ ವೈಷಮ್ಯಪೂರಿತವಾದವನ್ನು, ವರ್ಗ ವಿರೋಧಿಗಳಾದವನ್ನು ಒಂದುಗೂಡಿಸುವುದು ಅಸಾಧ್ಯ. ನೆಹರೂರವರು ಬಹು ವೇಳೆ ತಮ್ಮ ಮೂಲ ವಿಚಾರಗಳನ್ನು ಆತ್ಮವಿಮರ್ಶೆಯೊಂದಿಗೆ ಪುನರ್‌ಪರಿಶೀಲಿಸುತ್ತಿದ್ದರು, ಮುಂದೆ ಹೋಗಲು ಹಾಗೂ ಅವುಗಳನ್ನು ಸುಧಾರಿಸಲು ಯತ್ನಿಸುತ್ತಿದ್ದರು. ಅವರ ರಾಜಕೀಯ ಹಾಗೂ ಸಾಮಾಜಿಕ ಬೋಧೆಗಳ ದಿಶೆಯೂ ಅವುಗಳ ಬೆಳವಣಿಗೆಯ ಪ್ರವೃತ್ತಿಗಳೂ ಫಲಪ್ರದವಾಗಿದ್ದವು ಮತ್ತು ಇಂದಿಗೂ ಮುಖ್ಯವಾಗಿವೆ. ನೆಹರೂರವರು ತಮ್ಮ ಸೈದ್ಧಾಂತಿಕ ಶೋಧಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಮತ್ತು ಮಾಜಿ ವಸಾಹತುಗಳ ಭವಿತವ್ಯದ ಪ್ರಧಾನ ಸಮಸ್ಯೆಗಳಿಗೆ ಉತ್ತರಗಳನ್ನು ಹುಡುಕಲು ಯತ್ನಿಸಿದರು.

ನೆಹರೂರವರು ಪುರಾತನ ಭಾರತೀಯ ಸಂಸ್ಕೃತಿಯ ಪರಂಪರೆಗಳನ್ನೂ ರಾಷ್ಟ್ರೀಯ-ವಿಮೋಚನಾ ಚಳವಳಿಯ ಶ್ರೀಮಂತ ಅನುಭವವನ್ನೂ ಅದರಲ್ಲೂ ವಿಶೇಷವಾಗಿ ಗಾಂಧೀವಾದದ ಸಿದ್ಧಾಂತ ಹಾಗೂ ಆಚರಣೆಗಳನ್ನು ತಮ್ಮಲ್ಲಿ ಅಂತರ್ಗತ ಮಾಡಿಕೊಂಡಿದ್ದರು. ಅವರು ಪಶ್ಚಿಮ ಯೂರೋಪಿನ ಬೂರ್ಷ್ವಾ ಉದಾರವಾದ ನೀಡಬಹುದಾಗಿದ್ದುದೆಲ್ಲವನ್ನೂ ಗ್ರಹಿಸಿ ಅನಂತರ ಸಮಾಜವಾದಿ ವಿಚಾರಗಳ ಕಡೆಗೆ, ಮೊದಲು ಅವುಗಳ ಫೇಬಿಯನ್ ರೂಪಾಂತರದ ಕಡೆಗೆ, ತಿರುಗಿದರು. ಆದರೆ ಒಮ್ಮೆ ಸಮಾನತೆ ಹಾಗೂ ಸಾಮಾಜಿಕ ನ್ಯಾಯದ ಧ್ಯೇಯಗಳ ಕಡೆಗೆ ತಿರುಗಿದನಂತರ ನೆಹರೂ ತಮ್ಮ ವಿಮರ್ಶಾತ್ಮಕ ಹಾಗೂ ಶೋಧಕ ಮನಸ್ಸಿನ ಪ್ರಭಾವದಿಂದಾಗಿ ವೈಜ್ಞಾನಿಕ ಸಮಾಜವಾದದ ಅನೇಕ ಪೂರ್ವಾಧಾರಗಳ ಬಳಿ ಅನಿವಾರ್ಯವಾಗಿ ತಲುಪಿದರು. ಅವರು ವೈಜ್ಞಾನಿಕ ಸಮಾಜವಾದದ ಸಿದ್ಧಾಂತ ಹಾಗೂ ಆಚರಣೆಗಳನ್ನು ಉತ್ಸುಕತೆಯಿಂದ ಅಭ್ಯಸಿಸಿ ಭಾರತದಲ್ಲಿ ಅನ್ವಯಿಸಬಹುದಾದಂಥ ಅನೇಕ ಅಂಶಗಳನ್ನು ಅದರಲ್ಲಿ ಕಂಡುಕೊಂಡರು. ನೆಹರೂರವರು ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಾಮುಖ್ಯದ ಬಗೆಗೆ

* *The Mind of Mr. Nehru. An Interview by R. K. Karanjia*, George Allen and Unwin, Ltd., London, 1961, p. 89. – ಸಂ.

ಮಾತನಾಡಲು ಅರಿಯದೆ ಇದ್ದ, ಅವರಲ್ಲಿ ಚಾರಿತ್ರಿಕ ಬೆಳವಣಿಗೆಯ ತರ್ಕವನ್ನು – ಇಂದಿನ ಕಾಲದ ಕರೆಯನ್ನು – ಕಂಡುಕೊಂಡ, ರಾಷ್ಟ್ರೀಯ-ವಿಮೋಚನಾ ಚಳವಳಿಯ ಮೊದಲ ನಾಯಕರಲ್ಲೊಬ್ಬರಾಗಿದ್ದರು.

ವೈಜ್ಞಾನಿಕ ಸಮಾಜವಾದದ ವಿಚಾರಗಳು ತಮ್ಮ ಜಾಗತಿಕ ಮನೋಧರ್ಮದ ಮೇಲೆ ಮಾಡಿದ್ದ ಧನಾತ್ಮಕ ಪ್ರಭಾವವನ್ನು ನೆಹರೂ ಪದೇಪದೇ ಒತ್ತಿ ಹೇಳುತ್ತಿದ್ದರು. ಅವರು ಬರೆದರು: "ಮಾರ್ಕ್ಸ್‌ವಾದದ ಸಿದ್ಧಾಂತ ಹಾಗೂ ತತ್ವಜ್ಞಾನವು ನನ್ನ ಮನಸ್ಸಿನಲ್ಲಿನ ಅನೇಕ ಕತ್ತಲ ಮೂಲೆಗಳ ಮೇಲೆ ಬೆಳಕು ಚೆಲ್ಲಿದವು. ಇತಿಹಾಸವು ನನಗೆ ಹೊಸ ಅರ್ಥ ನೀಡುವಂತಹುದಾಯಿತು. ಮಾರ್ಕ್ಸ್‌ವಾದಿ ವ್ಯಾಖ್ಯಾನವು ಅದರ ಮೇಲೆ ಬೆಳಕಿನ ಹೊನಲನ್ನು ಹರಿಸಿತು. ಇತಿಹಾಸವು ನನ್ನ ಕಣ್ಣಿನ ಮುಂದೆ ಹಂತಹಂತವಾಗಿ ಬಿಚ್ಚಿ ಕಾಣಿಸಿಕೊಳ್ಳುವ ನಾಟಕವಾಯಿತು. ಅದರ ಹಿಂದೆ ಎಷ್ಟೇ ಅಜ್ಞಾತವಾಗಿದ್ದರೂ, ಒಂದು ರೀತಿಯ ವ್ಯವಸ್ಥೆ ಹಾಗೂ ಉದ್ದೇಶ ಕಂಡುಬಂದವು. ಗತಕಾಲದಲ್ಲೂ ವರ್ತಮಾನದಲ್ಲೂ ಎಷ್ಟೇ ಭೀತಿಗೊಳಿಸುವಂಥ ವ್ಯರ್ಥ ಸಂಕಷ್ಟಗಳಿದ್ದರೂ ಭವಿಷ್ಯತ್ತು, ಮಧ್ಯೆಮಧ್ಯೆ ಅನೇಕ ಅಪಾಯಗಳು ಸುಳಿದರೂ, ಭರವಸೆಯೊಂದಿಗೆ ಉಜ್ವಲವಾಗಿ ಕಂಡುಬಂದಿತು. ಅಂಧಸೂತ್ರಗಳಿಂದ ಸಾರಭೂತವಾಗಿ ಮುಕ್ತವಾಗಿದ್ದುದು ಮತ್ತು ವೈಜ್ಞಾನಿಕ ಮನೋಧರ್ಮ – ಮಾರ್ಕ್ಸ್‌ವಾದದ ಈ ಲಕ್ಷಣಗಳೇ ನನಗೆ ಹೆಚ್ಚು ಮೆಚ್ಚಿಕೆಯಾದವು."* ಇನ್ನೊಂದೆಡೆಯಲ್ಲಿ ಅವರು ಬರೆದರು: "ಮಾರ್ಕ್ಸ್ ಮತ್ತು ಲೆನಿನರ ಬೋಧೆಗಳ ಅಧ್ಯಯನವು ನನ್ನ ಮನಸ್ಸಿನ ಮೇಲೆ ಪ್ರಬಲ ಪರಿಣಾಮ ಉಂಟುಮಾಡಿತು ಮತ್ತು ಇತಿಹಾಸವನ್ನೂ ಪ್ರಸಕ್ತ ವ್ಯವಹಾರಗಳನ್ನೂ ಹೊಸ ಬೆಳಕಿನಲ್ಲಿ ಕಾಣಲು ನೆರವಾಯಿತು. ಇತಿಹಾಸದ ಹಾಗೂ ಸಾಮಾಜಿಕ ಬೆಳವಣಿಗೆಯ ದೀರ್ಘ ಸರಣಿಯು ನಿರ್ದಿಷ್ಟ ಅರ್ಥವುಳ್ಳದ್ದಾಗಿ, ನಿರ್ದಿಷ್ಟ ಪರಿಣಾಮವುಳ್ಳದ್ದಾಗಿ ಕಂಡುಬಂದಿತು ಮತ್ತು ಭವಿಷ್ಯತ್ತು ತನ್ನ ಸ್ವಲ್ಪ ಅಸ್ಪಷ್ಟತೆಯನ್ನು ಕಳೆದುಕೊಂಡಿತು."**

ವೈಜ್ಞಾನಿಕ ಸಮಾಜವಾದವು ಸಿದ್ಧಾಂತವಾಗಷ್ಟೆ ನೆಹರೂರವರನ್ನು ಆಕರ್ಷಿಸಲಿಲ್ಲ. ಅವರಿಗೆ ಮೆಚ್ಚುಗೆಯಾದುದಕ್ಕೆ ಕಾರಣ ಅವರು ಸೋವಿಯತ್ ರಷ್ಯದಲ್ಲಿ ತಮ್ಮ ಕಣ್ಮುಂದೆಯೇ ಜರುಗುತ್ತಿದ್ದ ಕ್ರಾಂತಿಕಾರಿ ಬದಲಾವಣೆಯಲ್ಲಿನ ಬಹು ಭಾರಿ ಹಾಗೂ ಅಭೂತಪೂರ್ವ ಪ್ರಯೋಗಗಳನ್ನು ಕಂಡು ಹರ್ಷಿತರಾದುದು, ಅವುಗಳಿಂದ ಆಕರ್ಷಿತರಾದುದು. "ಜಗತ್ತಿನ ಉಳಿದ ಭಾಗವು ಮುಗ್ಗಟ್ಟಿನ ಹಿಡಿತಕ್ಕೆ ಸಿಕ್ಕಿ ಸ್ವಲ್ಪ ರೀತಿಯಲ್ಲಿ ಹಿಂಜರಿಯುತ್ತಿದ್ದಾಗ, ಸೋವಿಯತ್

* Jawaharlal Nehru, *An Autobiography*, pp. 362-363. – ಸಂ.

** Jawaharlal Nehru, *The Discovery of India*, p. 29.–ಸಂ.

ಒಕ್ಕೂಟದಲ್ಲಿ ಒಂದು ಭಾರಿ ನವ ಜಗತ್ತು ನಮ್ಮ ಕಣ್ಮುಂದೆಯೇ ನಿರ್ಮಾಣವಾಗುತ್ತಿದ್ದಿತು. ಮಹಾ ಪುರುಷ ಲೆನಿನರ ಮಾರ್ಗದರ್ಶನದಲ್ಲಿ ರಷ್ಯ ಭವಿಷ್ಯತ್ತಿನಲ್ಲಿ ದೃಷ್ಟಿ ಇರಿಸಿದ್ದಿತು. ಏನನ್ನು ಮಾಡಬೇಕು ಎಂಬ ಬಗೆಗಷ್ಟೆ ಯೋಚಿಸುತ್ತಿದ್ದಿತು. ಅದೇ ಹೊತ್ತಿನಲ್ಲಿ ಇತರ ದೇಶಗಳು ಗತಕಾಲದ ಮೃತಹಸ್ತದ ಕೆಳಗೆ ನಿಶ್ಚೇಷ್ಟಿತವಾಗಿ ಮಲಗಿ ಎಂದೋ ನಶಿಸಿಹೋದ ಯುಗದ ನಿಷ್ಪ್ರಯೋಜಕ ಅವಶೇಷಗಳನ್ನು ಉಳಿಸಿಕೊಳ್ಳುವುದರಲ್ಲೇ ತಮ್ಮ ಶಕ್ತಿಯನ್ನೆಲ್ಲ ವ್ಯಯ ಮಾಡುತ್ತಿದ್ದವು. ಸೋವಿಯತ್ ಆಡಳಿತದ ಕೆಳಗೆ ಮಧ್ಯ ಏಷ್ಯದ ಹಿಂದುಳಿದ ಪ್ರದೇಶಗಳು ಸಾಧಿಸಿದ್ದ ಮಹಾ ಪ್ರಗತಿಯ ವರದಿಗಳಿಂದ ನಾನು ವಿಶೇಷವಾಗಿ ಪ್ರಭಾವಿತನಾದೆ. ಆದ್ದರಿಂದ ಅಂತಿಮ ಎಣಿಕೆಯಲ್ಲಿ ನಾನು ಸಂಪೂರ್ಣವಾಗಿ ರಷ್ಯದ ಪರವಾಗಿದ್ದೆ. ಸೋವಿಯತ್‌ಗಳ ಅಸ್ತಿತ್ವದಲ್ಲಿರುವುದೂ ಅವುಗಳ ನಿದರ್ಶನವೂ ಈ ಕರಾಳ ವಿಷಣ್ಣ ಜಗತ್ತಿನಲ್ಲಿ ಉಜ್ವಲ ಹಾಗೂ ಉತ್ತೇಜಕ ಘಟನೆಗಳಾಗಿದ್ದವು."*

ನೆಹರೂರವರು ಸೋವಿಯತ್ ರಷ್ಯದಲ್ಲಾಗುತ್ತಿದ್ದ ಸಾಮಾಜಿಕ ಪರಿವರ್ತನೆಗಳನ್ನು ಮಹದಾಸಕ್ತಿಯಿಂದ ವೀಕ್ಷಿಸುತ್ತಿದ್ದರು. ಅವರು ಮೊದಲ ಬಾರಿಗೆ ಆ ದೇಶಕ್ಕೆ 1927ರಲ್ಲಿ ಸೋವಿಯತ್ ಅಧಿಕಾರದ ದಶವಾರ್ಷಿಕೋತ್ಸವದ ಸಂದರ್ಭದಲ್ಲಿ ತಮ್ಮ ತಂದೆ ಮೋತಿಲಾಲ ನೆಹರೂರವರೊಂದಿಗೆ ಭೇಟಿ ನೀಡಿದರು. ಅವರು ಅಲ್ಲಿ ಏನು ಕಂಡರೋ ಅದು ಅವರಿಗೆ ಈ ತೀರ್ಮಾನಕ್ಕೆ ಬರುವಂತೆ ಮಾಡಿತು: "ಸೋವಿಯತ್ ಕ್ರಾಂತಿಯು ಮಾನವ ಸಮಾಜವನ್ನು ಭಾರಿ ನೆಗೆತದೊಂದಿಗೆ ಮುಂದಕ್ಕೆ ಕರೆದೊಯ್ದಿದೆ. ಅದು ಉಜ್ವಲವಾದ ಜ್ಯೋತಿಯೊಂದನ್ನು ಬೆಳಗಿದೆ. ಈ ಜ್ಯೋತಿಯನ್ನು ಎಂದಿಗೂ ನಂದಿಸಲು ಸಾಧ್ಯವಿಲ್ಲ. ಸೋವಿಯತ್ ಕ್ರಾಂತಿಯು ಒಂದು ಹೊಸ ನಾಗರಿಕತೆಗೆ ಅಡಿಪಾಯ ಹಾಕಿಕೊಟ್ಟಿದೆ. ಜಗತ್ತು ಈ ನಾಗರಿಕತೆಯತ್ತ ಸಾಗಿಹೋಗಬಹುದಾಗಿದೆ."**

ನೆಹರೂರವರು ಲೆನಿನರಲ್ಲಿ, ಅವರ ವ್ಯಕ್ತಿತ್ವ, ಸಿದ್ಧಾಂತ ಹಾಗೂ ರಾಜಕೀಯ ಕಾರ್ಯಗಳಲ್ಲಿ ತುಂಬ ಆಸಕ್ತಿ ತೋರಿದರು. ಇತಿಹಾಸದಲ್ಲಿ ಲೆನಿನರ ಪಾತ್ರವನ್ನು ಮೌಲ್ಯನಿರ್ಣಯಿಸುತ್ತ ಅವರು ಬರೆದರು: "ಮಿಲಿಯಾಂತರ ಜನರು ಅವರನ್ನು ಜಗದ್ರಕ್ಷಕನೆಂದು, ಯುಗಪುರುಷನೆಂದು ಪರಿಗಣಿಸಿದ್ದಾರೆ."*** ನೆಹರೂರವರು ಲೆನಿನರನ್ನು "ಒಬ್ಬ ಪರಿಣತ ಮತಿ, ಕ್ರಾಂತಿಯ ಒಬ್ಬ ಪ್ರತಿಭಾವಂತ"**** ಎಂದು ಕರೆದರು.

* Jawaharlal Nehru, *An Autobiography*, pp 361-362. – ಸಂ.

** Jawaharlal Nehru, *The Discovery of India*, p. 29.– ಸಂ.

*** *Ibid.*, p. 307. – ಸಂ.

**** Jawaharlal Nehru, *Glimpses of World History*, Asia Publishing House, Bombay, 1964, p. 638. – ಸಂ.

ಚಿಂತನೆ ಹಾಗೂ ಕ್ರಿಯೆಯ ಏಕತೆ, ಸಿದ್ಧಾಂತ ಹಾಗೂ ಆಚರಣೆಯ ಏಕತೆ – ಇದು ನೆಹರೂರವರ ಆದರ್ಶವಾಗಿದ್ದಿತು. ವೈಜ್ಞಾನಿಕ ಸಮಾಜವಾದದ ಪ್ರಭಾವವೂ ಸೋವಿಯತ್ ಒಕ್ಕೂಟದ ಚರಿತ್ರಾರ್ಹ ಸಾಧನೆಗಳ ಉನ್ನತ ಮೌಲ್ಯಾಂಕನವೂ, ಭಾರತದಲ್ಲೂ ಆಮೂಲಾಗ್ರ ಸಾಮಾಜಿಕ-ಆರ್ಥಿಕ ಪರಿವರ್ತನೆಗಳನ್ನು ಉಂಟುಮಾಡುವ ಆವಶ್ಯಕತೆಯನ್ನು ಅವರು ಮನಗಾಣುವಂತೆ ಮಾಡಿದವು. ಅವರು ಸಮಾಜವಾದವನ್ನು ಮೊದಲು ಒಂದು ಆದರ್ಶಯುತ ಸಾಮಾಜಿಕ ಪದ್ಧತಿಯೆಂದೂ ಅನಂತರ ರಾಜಕೀಯ ಚಟುವಟಿಕೆಯ ಅಂತಿಮ ಗುರಿಯೆಂದೂ ಘೋಷಿಸಿದರು.

1936ರಲ್ಲಿ ಲಕ್ನೋದಲ್ಲಿ ಜರುಗಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಮಹಾಧಿವೇಶನದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತ ಅವರು ಹೇಳಿದರು: "ಜಗತ್ತಿನ ಸಮಸ್ಯೆಗಳಿಗೂ ಭಾರತದ ಸಮಸ್ಯೆಗಳಿಗೂ ಏಕೈಕ ಪರಿಹಾರ ಮಾರ್ಗವೆಂದರೆ ಸಮಾಜವಾದ ಎಂದು ನಾನು ದೃಢವಾಗಿ ನಂಬಿದ್ದೇನೆ. ನಾನು ಸಮಾಜವಾದ ಎಂಬ ಪದವನ್ನು ಬಳಸುವಾಗ ಯಾವುದೋ ಅಸ್ಪಷ್ಟ ಮಾನವ ಹಿತಸಾಧನೆಯ ರೀತಿಯಲ್ಲಲ್ಲ ಆದರೆ ವೈಜ್ಞಾನಿಕ-ಆರ್ಥಿಕ ಅರ್ಥದಲ್ಲಿ ಬಳಸುತ್ತಿದ್ದೇನೆ.... ಭಾರತೀಯ ಜನರ ಬಡತನ, ಭಾರಿ ನಿರುದ್ಯೋಗ, ಹೀನ ಸ್ಥಿತಿ ಹಾಗೂ ಪರಾಧೀನತೆಗಳನ್ನು ಕೊನೆಗಾಣಿಸಲು ಸಮಾಜವಾದದ ಮಾರ್ಗವಲ್ಲದೆ ಬೇರಾವ ಮಾರ್ಗವೂ ನನಗೆ ಕಂಡುಬರದು. ಇದಕ್ಕೆ ನಾವು ನಮ್ಮ ರಾಜಕೀಯ ಹಾಗೂ ಸಾಮಾಜಿಕ ಸಂರಚನೆಯಲ್ಲಿ ಭಾರಿ ಹಾಗೂ ಕ್ರಾಂತಿಕಾರಿ ಬದಲಾವಣೆಗಳನ್ನು ಮಾಡಬೇಕಾಗುತ್ತದೆ, ಕೃಷಿಯಲ್ಲೂ ಕೈಗಾರಿಕೆಯಲ್ಲೂ ಇರುವ ಪಟ್ಟಭದ್ರ ಹಿತಗಳನ್ನು ಕೊನೆಗಾಣಿಸಬೇಕಾಗುತ್ತದೆ.... ಅಂದರೆ, ಪರಿಮಿತ ಅರ್ಥದಲ್ಲಿ ಬಿಟ್ಟು, ಖಾಸಗಿ ಆಸ್ತಿಒಡೆತನವನ್ನು ಕೊನೆಗಾಣಿಸಬೇಕಾಗುತ್ತದೆ, ಪ್ರಸ್ತುತದಲ್ಲಿರುವ ಲಾಭ ಪದ್ಧತಿಯ ಸ್ಥಳದಲ್ಲಿ ಸಹಕಾರಿ ಸೇವಾ ವ್ಯವಸ್ಥೆಯ ಹೆಚ್ಚು ಉನ್ನತ ಆದರ್ಶವನ್ನು ಸ್ಥಾಪಿಸಬೇಕಾಗುತ್ತದೆ.... ಸ್ವಲ್ಪದರಲ್ಲಿ, ಪ್ರಸಕ್ತ ಬಂಡವಾಳಶಾಹಿ ವ್ಯವಸ್ಥೆಯಿಂದ ಆಮೂಲಾಗ್ರವಾಗಿ ಭಿನ್ನವಾದಂಥ ಒಂದು ಹೊಸ ನಾಗರಿಕತೆಯನ್ನು ಸ್ಥಾಪಿಸಬೇಕಾಗುತ್ತದೆ."*

ನೆಹರೂರವರು ಸಮಾಜವನ್ನು ಸಮಾಜವಾದಿ ರೀತಿಯಲ್ಲಿ ಪರಿವರ್ತಿಸುವುದನ್ನು ಜಗತ್ತಿನ ಚಾರಿತ್ರಿಕ ಬೆಳವಣಿಗೆಯ ಒಂದು ಸಹಜ ನಿಯಮವನ್ನಾಗಿ ಕಂಡುಕೊಂಡರು. ಬಂಡವಾಳವಾದವು "ನಮ್ಮ ಯುಗದ ಕರೆಗೆ ಓಗೊಡದಾಗಿದೆ."**

* Jawaharlal Nehru, *India's Freedom*, Unwin Books, London, 1962, p. 35. – ಸಂ.

** See Jawaharlal Nehru, *India Today and Tomorrow*, Indian Council for Cultural Relations, New Delhi, 1959, p. 20. – ಸಂ.

ಜಗತ್ತು ಬಂಡವಾಳವಾದಕ್ಕೂ ಮೀರಿ ಬೆಳೆದಿದೆ ಎಂದವರು ಒತ್ತಿ ಹೇಳಿದರು. ವೈಜ್ಞಾನಿಕ ಹಾಗೂ ತಾಂತ್ರಿಕ ಕ್ರಾಂತಿಯು ಸಮಾಜವಾದದ ಅಗತ್ಯವನ್ನು ವಿಶೇಷವಾಗಿ ಸ್ಪಷ್ಟವಾದುದನ್ನಾಗಿ ಮಾಡಿದೆ, ಆಧುನಿಕ ವೈಜ್ಞಾನಿಕ ಮನೋಧರ್ಮವು ಸಮಾಜವಾದಿ ಮನೋಧರ್ಮವೇ ಆಗಿದೆ, ಎಂದವರು ಗಮನಿಸಿದರು.

ಸಮಾಜವಾದದತ್ತ ಮುನ್ನಡೆಯುವುದು ಎಲ್ಲ ಅಭಿವೃದ್ಧಿಶೀಲ ದೇಶಗಳಿಗೂ ಒಂದು ವಿಶಿಷ್ಟ ಆವಶ್ಯಕತೆ, ಅದು ಭಾರತವನ್ನೂ ಒಳಗೊಂಡು ಸಾಮ್ರಾಜ್ಯಶಾಹಿ ಆಳ್ವಿಕೆಯಿಂದ ವಿಮೋಚನೆಗೊಂಡ ಎಲ್ಲ ರಾಜ್ಯಗಳಿಗೂ ವಸ್ತುನಿಷ್ಠವಾಗಿ ಪೂರ್ವನಿರ್ಧಾರಿತವಾದ ಪ್ರಗತಿಯ ಮಾರ್ಗ, ಎಂದು ಸ್ಪಷ್ಟವಾಗಿ ಹೇಳಿದ ವಸಾಹತುವಾದ ವಿರೋಧಿ ಚಳವಳಿಯ ಮೊದಲ ನಾಯಕರಲ್ಲಿ ನೆಹರೂರವರೂ ಒಬ್ಬರಾಗಿದ್ದರು. ಈ ಸಿದ್ಧಾಂತದಲ್ಲೂ ಮತ್ತು ತಮ್ಮ ವಾದಗಳಲ್ಲೂ ನೆಹರೂ ಏಷ್ಯ ಹಾಗೂ ಆಫ್ರಿಕಗಳ ಇತರ ರಾಜಕಾರಣಿಗಳು ಅನಂತರ ವ್ಯಕ್ತಪಡಿಸಿದಂಥ ಅನೇಕ ಸೂತ್ರಗಳನ್ನು ಮುನ್ನವೇ ವ್ಯಕ್ತಪಡಿಸಿದ್ದರು. ಅಭಿವೃದ್ಧಿಶೀಲ ದೇಶಗಳಿಗೆ ಬಂಡವಾಳವಾದವು ಅಂಗೀಕಾರಾರ್ಹವಲ್ಲ, ಏಕೆಂದರೆ ಈ ವಿಧಾನಗಳಲ್ಲಿ ಪಾಶ್ಚಿಮಾತ್ಯ ಜಗತ್ತು ಸಾಧಿಸಿದಂಥ ಪ್ರಗತಿಯನ್ನು, ಅಥವಾ ಅದೇ ಗತಿಯಲ್ಲಿ ಪ್ರಗತಿಯನ್ನು, ಸಾಧಿಸಲು ಅವುಗಳಿಗೆ ಸಮಯವಿಲ್ಲ, ಎಂದವರು ಸ್ಪಷ್ಟವಾಗಿ ಹೇಳಿದರು. "ನಾವು ಇಂಗ್ಲೀಷ್, ಫ್ರೆಂಚ್ ಹಾಗೂ ಅಮೆರಿಕನ್ ಮಾರ್ಗವನ್ನು ಅನುಸರಿಸಿ ಹೋಗಬೇಕೆ?" ಎಂದವರು ಕೇಳಿದರು. "ನಮ್ಮ ಗುರಿ ತಲುಪಲು ನಮ್ಮ ಬಳಿ 100-150 ವರ್ಷಗಳ ಸಮಯವಿದೆಯೆ? ಇದು ಅಸಾಧ್ಯ. ನಾವು ಈ ಮಾರ್ಗ ಹಿಡಿದು ಹೊರಟರೆ ಮಧ್ಯದಲ್ಲೇ ನಾಶವಾಗುತ್ತೇವೆ."*

ಸಮಾಜವಾದವಷ್ಟೆ ಹಿಂದಿನ ವಸಾಹತು ಜನತೆಗಳಿಗೆ ಹಿಂದುಳಿದಿರುವಿಕೆಯಿಂದ ಮುಕ್ತರಾಗಲು ಅವಕಾಶ ಮಾಡಿಕೊಡಬಲ್ಲುದು ಎಂಬ ವಿಚಾರವನ್ನು ಅವರು 'ಮೂಲ ಮನೋಧರ್ಮ' ಎಂಬ ತಮ್ಮ ಸುಪ್ರಸಿದ್ಧ ಲೇಖನದಲ್ಲೂ ಮುಂದಿರಿಸಿದರು: "ಸಮಾಜವಾದವನ್ನಾಗಲೀ ಬಂಡವಾಳವಾದವನ್ನಾಗಲೀ ಒಪ್ಪಿಕೊಳ್ಳುವುದರಿಂದ ಬಡತನ ಇದ್ದಕ್ಕಿದ್ದಂತೆ ಯಾವುದೋ ಮಾಂತ್ರಿಕ ರೀತಿಯಲ್ಲಿ ಸಿರಿತನಕ್ಕೆ ದಾರಿ ಬಿಟ್ಟುಕೊಡುತ್ತದೆ ಎಂದೇನೂ ಅಲ್ಲ ಎಂಬುದನ್ನು ನೆನಪಿನಲ್ಲಿಟ್ಟಿರಬೇಕು. ಅದಕ್ಕಿರುವ ಒಂದೇ ಮಾರ್ಗವೆಂದರೆ, ಕಷ್ಟಪಟ್ಟು ಕೆಲಸ ಮಾಡುವುದು, ಶ್ರಮ ಉತ್ಪಾದಕತೆಯನ್ನು ಹೆಚ್ಚಿಸುವುದು, ಉತ್ಪನ್ನಗಳ ಸಮಾನ ವಿತರಣೆಯನ್ನು ಸಂಘಟಿಸುವುದು. ಇದೊಂದು ಸುದೀರ್ಘವಾದ ಕಷ್ಟಕರವಾದ ಪ್ರಕ್ರಿಯೆ. ಅಲ್ಪಾಭಿವೃದ್ಧಿಗೊಂಡ ದೇಶದಲ್ಲಿ ಬಂಡವಾಳವಾದಿ ವಿಧಾನ ಯಾವ

* Jawaharlal Nehru, *Towards a Socialistic Order*, All-India Congress Committee, New Delhi, 1956, p. 61. – ಸಂ.

ಅವಕಾಶವನ್ನೂ ಒದಗಿಸುವುದಿಲ್ಲ. ಸಮಾಜವಾದಿ ರೀತಿಗಳಲ್ಲಿ ಯೋಜನಾಬದ್ಧವಾಗಿ ಕಾರ್ಯ ನೆರವೇರಿಸಿದರಷ್ಟೆ ಸತತವಾದ ಪ್ರಗತಿ ಸಾಧಿಸುವುದು ಸಾಧ್ಯ, ಅದಕ್ಕೂ ಸಾಕಷ್ಟು ಕಾಲ ಹಿಡಿಯುವುದಾದರೂ."*

ನೆಹರೂರವರು ಸಮಾಜವಾದದ ಬಗೆಗೆ ಹೊಂದಿದ್ದ ಸಹಾನುಭೂತಿಯ ಮನೋಧರ್ಮವು ಭಾರತೀಯ ಪ್ರಜಾಸತ್ತಾತ್ಮಕ ಸಾಮಾಜಿಕ ಚಿಂತನೆಯಲ್ಲಿ ಉಂಟಾಗಿದ್ದ ಪ್ರಮುಖ ಬದಲಾವಣೆಯನ್ನು ಪ್ರತಿಬಿಂಬಿಸುತ್ತಿದ್ದಿತು. ಈ ಬದಲಾವಣೆ ಮೊದಲು ರಷ್ಯದಲ್ಲಿನ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಹಾಗೂ ಸೋವಿಯತ್ ಒಕ್ಕೂಟದಲ್ಲಿನ ಸಮಾಜವಾದದ ಸಾಧನೆಗಳ ಪ್ರಭಾವದಿಂದಾಗಿ, ಅನಂತರ ದ್ವಿತೀಯ ಜಾಗತಿಕ ಯುದ್ಧದಲ್ಲಿ ಜರ್ಮನ್ ಫ್ಯಾಸಿಸಂನ ಹಾಗೂ ಜಪಾನೀ ಮಿಲಿಟರಿಸಂನ ಪರಾಭವದ ಪ್ರಭಾವದಿಂದಾಗಿ ಉಂಟಾಗಿದ್ದಿತು. ಜರ್ಮನ್ ಫ್ಯಾಸಿಸಂ ಹಾಗೂ ಜಪಾನೀ ಮಿಲಿಟರಿಸಂನ ಈ ಪರಾಭವವೇ ರಾಷ್ಟ್ರೀಯ ವಿಮೋಚನಾ ಚಳವಳಿಯಲ್ಲಿ ಭಾರತದ ಯಶಸ್ಸಿಗೆ ದಾರಿ ತೆರೆದುದು.

ಸ್ವಾತಂತ್ರ್ಯಾನಂತರ ಆಳುವ ಪಾರ್ಟಿಯಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಸಾಮಾಜಿಕ ಹಾಗೂ ಆರ್ಥಿಕ ನೀತಿಗಳಿಗೆ ಸಂಬಂಧಿಸಿದ ಭಾಷಣಗಳಲ್ಲಿ ನೆಹರೂ ಆರ್ಥಿಕತೆಯಲ್ಲೂ ಜನರ ಸಂಕ್ಷೇಮದಲ್ಲೂ ಸುಧಾರಣೆಯಾಗಲು, ಸ್ವತಂತ್ರ ರಾಷ್ಟ್ರೀಯ ಬೆಳವಣಿಗೆಯನ್ನು ಖಚಿತಪಡಿಸಲು ದೇಶದ ಕೈಗಾರಿಕೀಕರಣ ಹಾಗೂ ಆಯೋಜನೆಗಳು ಎಷ್ಟು ಆಗತ್ಯ ಅನ್ನುವುದನ್ನು ಮುಖ್ಯವಾಗಿ ಒತ್ತಿ ತಿಳಿಸಿದರು. "ಸ್ಥೂಲವಾಗಿ ಹೇಳುವುದಾದರೆ, ನಮ್ಮ ಗುರಿ, ಆದಾಯಗಳಲ್ಲಿ ಹೆಚ್ಚಿನ ವ್ಯತ್ಯಾಸಗಳಿಲ್ಲದ, ಸರ್ವರಿಗೂ ಸಮಾನ ಅವಕಾಶಗಳನ್ನು ಒದಗಿಸುವ ಸಮಾಜವಾದಿ ನಮೂನೆಯ ಸಮಾಜವುಳ್ಳ ಕಲ್ಯಾಣ ರಾಜ್ಯವೊಂದನ್ನು ಸ್ಥಾಪಿಸುವುದಾಗಿದೆ"** ಎಂದವರು ಹೇಳಿದರು.

ಭಾರತೀಯ ಸಮಾಜವನ್ನು ಸಮಾಜವಾದಿ ರೀತಿಯಲ್ಲಿ ಪುನರ್‌ಸಂಘಟಿಸುವ ವಸ್ತುನಿಷ್ಠ ಅವಶ್ಯಕತೆಯನ್ನು ನೆಹರೂ ಮನ್ನಿಸಿದ್ದರು. ಆದರೆ ಅದನ್ನು ಆಗು ಮಾಡುವ ನಿಜವಾದ ಪ್ರಕ್ರಿಯೆಯ ಬಗೆಗೆ, ಪುನರ್‌ಸಂಘಟನೆಯ ರೂಪವಿಧಾನಗಳ ಬಗೆಗೆ ಅವರ ತಿಳಿವಳಿಕೆಯು ಅವರ ಸ್ವಂತ ವಿಶಿಷ್ಟ, ಪ್ರಧಾನವಾಗಿ ವ್ಯಕ್ತಿನಿಷ್ಠವಾದ ಭಾವನಾವಾದಿ ಭಾವನೆಗಳನ್ನು ತೋರಿಸಿಕೊಟ್ಟಿತು. ಅವರಲ್ಲಿ ಈ ಭಾವನೆಗಳು ಆಧುನಿಕ ಭಾರತದಲ್ಲಿನ ವರ್ಗ ವೈರುಧ್ಯಗಳ ಜಟಿಲವಾದ ಕ್ರಿಯೆ-

* Jawaharlal Nehru, *Congressmen's Primer for Socialism*, A Socialist Congressman Publication, New Delhi, 1963, p. 197. –ಸಂ.

** *Jawaharlal Nehru's Speeches*, Vol. 4, p. 151. –ಸಂ.

ಪ್ರತಿಕ್ರಿಯೆಗಳ ಫಲವಾಗಿ, ಸಾಮಾಜಿಕ ಸಂರಚನೆಗಳ ಬಾಹುಳ್ಯದ ಫಲವಾಗಿ, ಇವೆಲ್ಲವುಗಳಿಗಿಂತ ಹೆಚ್ಚು ಮುಖ್ಯವಾಗಿ ನೆಹರೂರವರೇ ವೈಜ್ಞಾನಿಕ ಸಮಾಜವಾದದ ವಿಚಾರಧಾರೆಯ ಧ್ವಜಧಾರಿಯಾಗಿ ಕಾರ್ಮಿಕ ವರ್ಗದ ವಿಶೇಷ ಚಾರಿತ್ರಿಕ ಪಾತ್ರವನ್ನು ಅಲ್ಪಅಂದಾಜು ಮಾಡಿದ್ದುದರ ಫಲವಾಗಿ, ಉಂಟಾಗಿದ್ದವು. ಬ್ರಿಟಿಷ್ ಆಡಳಿತದ ವಿರುದ್ಧ ರಾಷ್ಟ್ರೀಯ ವಿಮೋಚನಾ ಚಳವಳಿಯಲ್ಲಿಯೂ ಅನಂತರ ಸ್ವತಂತ್ರ ಭಾರತದಲ್ಲೂ ವರ್ಗಶಕ್ತಿಗಳ ಸಾಲುಗೂಡಿಕೆಯು ನೆಹರೂರವರು ತಮ್ಮ ವ್ಯಕ್ತಿನಿಷ್ಠ ಧ್ಯೇಯಗಳನ್ನು ಆಚರಣೆಯಲ್ಲಿ ಈಡೇರಿಸುವ ಅವಕಾಶಗಳನ್ನು ಕುಗ್ಗಿಸಿದ್ದಿತು.

ಅವರ ವಿಚಾರಗಳು, ಅದರಲ್ಲೂ ವಿಶೇಷವಾಗಿ ಅವರ ಪ್ರಾಯೋಗಿಕ ರಾಜಕಾರಣವು ಭಾರತ ಎದುರಿಸುತ್ತಿದ್ದ ಅನೇಕಾನೇಕ ಅಪರಿಹಾರ್ಯ ಸಾರ್ವತ್ರಿಕ ಪ್ರಜಾಸತ್ತಾತ್ಮಕ ಕಾರ್ಯಭಾರಗಳಿಂದ ಪ್ರಭಾವಿತವಾಗಿದ್ದವು ಮತ್ತು ರಾಷ್ಟ್ರೀಯ ಶಕ್ತಿಗಳನ್ನು ವಿಶಾಲ ವೇದಿಕೆಯ ಮೇಲೆ ಒಂದುಗೂಡಿಸುವುದನ್ನು ಅತ್ಯಗತ್ಯವನ್ನಾಗಿ ಮಾಡಿದ್ದವು. ನೆಹರೂರವರು ವರ್ಗಗಳ ತಾತ್ಕಾಲಿಕ ಸಾಲುಗೂಡಿಕೆಯನ್ನು ನಿರಪೇಕ್ಷಗೊಳಿಸುವ ಮನೋಒಲವು ತೋರಿದರು. ಪ್ರಜಾಸತ್ತಾತ್ಮಕ ಚಳವಳಿಯ ನಿರ್ದಿಷ್ಟ ಮಟ್ಟವಷ್ಟೆ ಅಂತಹ ಸಾಲುಗೂಡಿಕೆಯನ್ನು ನಿರ್ಧರಿಸಿದ್ದಿತು ಮತ್ತು ಅದು ಒಂದು ನಿರ್ದಿಷ್ಟ ಘಟ್ಟದ ಗುರಿಗಳಿಗಷ್ಟೆ ಅನುಗುಣವಾಗಿದ್ದಿತು. ಆದರೆ ಸಮಾಜವಾದಿ ಪರಿವರ್ತನೆ ಆಗಬೇಕಿದ್ದಲ್ಲಿ ಈ ಸಾಲುಗೂಡಿಕೆಯನ್ನು ಉಳಿಸಿಕೊಂಡಿರಲು ಸಾಧ್ಯವಿರಲಿಲ್ಲ. ತಾವು ನಡೆಸಿದ ಭಾರತೀಯ ಸಮಾಜದ ವಿಶ್ಲೇಷಣೆಯಲ್ಲಿ ನೆಹರೂರವರು ಕ್ರಾಂತಿಯು ಸಾರ್ವತ್ರಿಕ ಪ್ರಜಾಸತ್ತಾತ್ಮಕ ಘಟ್ಟಕ್ಕೂ ಆಚೆ ಹೋಗಲು ಇಷ್ಟಪಡದಿದ್ದಂತೆ, ಸಮಾಜವಾದಿ ಹೋರಾಟ ನಡೆಸಲು ಆಮೂಲಾಗ್ರವಾಗಿ ಭಿನ್ನವಾದ ವರ್ಗ ದಿಕ್‌ನೆಲೆ ಅವಶ್ಯವಾಗಿದ್ದಿತು ಎಂಬುದನ್ನು ಒಪ್ಪಿಕೊಳ್ಳಲು ಇಷ್ಟಪಡದಿದ್ದಂತೆ ಕಾಣಿಸಿಕೊಂಡರು. ಸಾರ್ವತ್ರಿಕ ಪ್ರಜಾಸತ್ತಾತ್ಮಕ ಗುರಿಗಳಿಂದ ಸಮಾಜವಾದಿ ಗುರಿಗಳಿಗೆ ಸಾಗಿ ಹೋಗುವಾಗ ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಯ ಕಾಲಾವಧಿಯಲ್ಲಿದ್ದ ಐಕ್ಯ ರಾಷ್ಟ್ರೀಯ ರಂಗದ ಒಳಸಾರ, ಸಂರಚನೆ ಹಾಗೂ ವಿವಿಧ ಅಂಗಭಾಗಗಳ ನಡುವಣ ಅನ್ಯೋನ್ಯ ಸಂಬಂಧಗಳು ಆಮೂಲಾಗ್ರವಾಗಿ ಬದಲಬೇಕು ಅನ್ನುವುದನ್ನೂ ಅವರು ಒಪ್ಪಿಕೊಳ್ಳಲು ಇಷ್ಟವಿಲ್ಲದವರಂತೆ ಕಾಣಿಸಿಕೊಂಡರು.

ನೆಹರೂರವರು ವರ್ಗಗಳ ಅಸ್ತಿತ್ವವನ್ನೂ ವರ್ಗ ಹೋರಾಟವನ್ನೂ ಮನ್ನಿಸಿದ್ದರು. ಆದರೆ ತಮ್ಮ ಜೀವನದ ಕೊನೆಯ ಕಾಲಾವಧಿಯಲ್ಲಿ ಅವರು ವರ್ಗ ವೈರುಧ್ಯಗಳನ್ನು ವರ್ಗ ಸಹಕಾರದ ಮೇಲೆ ಆಧರಿಸಿದ ರಾಜಿಗಳ ಹಾಗೂ ಸುಧಾರಣೆಗಳ ಮೂಲಕ ಪರಿಹರಿಸಲು ಸಾಧ್ಯ ಎಂಬ ಸಿದ್ಧಾಂತಕ್ಕೆ ಹೆಚ್ಚು ಒತ್ತು ಕೊಟ್ಟಿದ್ದರು. ದೇಶದ ಆರ್ಥಿಕ ಹಾಗೂ ರಾಜಕೀಯ ಜೀವನದಲ್ಲಿ ಆಸ್ತಿವಂತ ಹಾಗೂ

ಶೋಷಕ ವರ್ಗಗಳ ಪ್ರಭಾವ ಬೆಳೆಯುತ್ತಿದ್ದುದನ್ನು ತಪ್ಪಿಸಲು ಮನವೊಲಿಸುವಿಕೆಯ ವಿಧಾನವಷ್ಟೆ ಸಾಕು ಎಂದವರು ಭಾವಿಸಿದ್ದರು.

ಉದಾರವಾದಿ ಬೂರ್ಶ್ವಾ ವಿಚಾರಗಳ ನಿರ್ದಿಷ್ಟ ಪ್ರಭಾವವನ್ನೂ ಜೊತೆಗೆ ಗಾಂಧೀಯವರ ಅಸಾಧ್ಯಾದರ್ಶ ನೀತಿಬೋಧಕ ಪ್ರಕಲ್ಪನೆಗಳ ಛಾಯೆಗಳನ್ನೂ ಇದರಲ್ಲಿ ಯಾರೇ ಆಗಲಿ ಗಮನಿಸುವುದು ಖಂಡಿತ.

ನೆಹರೂರವರು ಸೋವಿಯತ್ ಇತಿಹಾಸದ ಕೆಲವು ಘಟನೆಗಳನ್ನೂ ವೈಜ್ಞಾನಿಕ ಸಮಾಜವಾದದ ಕೆಲವು ಪ್ರತಿಪಾದನೆಗಳನ್ನೂ, ಭಾರತದಲ್ಲಿನ ಕಮ್ಯೂನಿಸ್ಟ್ ಚಳವಳಿಯನ್ನೂ ನಿರಾಧಾರವಾಗಿ ವ್ಯಕ್ತಿನಿಷ್ಠವಾಗಿ ಟೀಕೆ ಮಾಡಿದುದಕ್ಕೆ ಈ ವಿಚಾರಗಳೂ ಪ್ರಕಲ್ಪನೆಗಳೂ ಮೂಲ ಕಾರಣವಾಗಿದ್ದವು. ಇಲ್ಲಿ ನಾವು ನೆಹರೂರವರ ಜಾಗತಿಕ ಮನೋಧರ್ಮದಲ್ಲಿದ್ದ ಪ್ರಗಾಢ ವೈರುಧ್ಯವನ್ನು ಕಾಣುತ್ತೇವೆ. ಎಷ್ಟೇ ಪ್ರಯತ್ನಪಟ್ಟರೂ ಅವರು ತಮ್ಮ ಈ ವೈರುಧ್ಯವನ್ನು ಎಂದೂ ನಿವಾರಿಸಿಕೊಳ್ಳದಾದರು. ಭಾರತವೂ ಅದರ ಸಾಮಾಜಿಕ ಚಿಂತನೆಯೂ ಮತ್ತು ಸ್ವತಃ ನೆಹರೂರವರೇ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತದ ಸಾಧನೆಗಳಿಂದಲೂ, ಸೋವಿಯತ್ ಒಕ್ಕೂಟ ಮತ್ತಿತರ ದೇಶಗಳಲ್ಲಿನ ಸಮಾಜವಾದಿ ನಿರ್ಮಾಣದ ಸಿದ್ಧಾಂತ ಹಾಗೂ ಆಚರಣೆಗಳಿಂದಲೂ, ಬಹಳ ಕಾಲದವರೆಗೆ ಪ್ರತ್ಯೇಕವಾಗಿದ್ದುಕೊಂಡಿದ್ದುದೂ ಹೊಸ ಸಮಾಜವಾದಿ ಜಗತ್ತಿನ ಬೆಳವಣಿಗೆಯನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವ ಅವಕಾಶಗಳನ್ನು ಮಿತಿಗೊಳಿಸಿದ್ದವು. ನೆಹರೂರವರು ನವ ಸಮಾಜವಾದಿ ಜಗತ್ತನ್ನು ಕ್ರಮೇಣವಾಗಷ್ಟೆ ಒಪ್ಪಿಕೊಳ್ಳುವಂತಾದರು. ಅದೂ ಅನೇಕ ಪರಿಮಿತಿಗಳೊಂದಿಗೆ, ವಿಶೇಷವಾಗಿ ವರ್ಗ ಹೋರಾಟದ ಪ್ರಕಲ್ಪನೆ ಹಾಗೂ ಕಾರ್ಮಿಕವರ್ಗದ ಪಾತ್ರಗಳಿಗೆ ಸಂಬಂಧಿಸಿ ಅನೇಕ ಪರಿಮಿತಿಗಳೊಂದಿಗೆ.

ಒಂದು ಕಡೆ ನೆಹರೂರವರು ವರ್ಗ ವೈಷಮ್ಯ ವಿಚಾರದ ಮೇಲೆ ಆಧರಿಸಿ ಮಾರ್ಕ್ಸ್‌ರವರು ಇತಿಹಾಸವನ್ನು ವ್ಯಾಖ್ಯಾನಿಸಿದ ವೈಜ್ಞಾನಿಕ ನಿಖರತೆಯನ್ನು ಒಪ್ಪಿಕೊಂಡಿದ್ದರು. "ಮಾರ್ಕ್ಸ್‌ರವರು ಸತತವಾಗಿ ಶೋಷಣೆ ಹಾಗೂ ವರ್ಗ ಹೋರಾಟಗಳ ಬಗೆಗೆ ಮಾತನಾಡುತ್ತಾರೆ" ಎಂದವರು ಬರೆದರು. ಆದರೆ "ಮಾರ್ಕ್ಸ್‌ರವರ ಪ್ರಕಾರ, ಅದು ಕೋಪಗೊಳ್ಳುವುದಕ್ಕೆ ಇಲ್ಲವೇ ನೈತಿಕ ಖಂಡನೆಗೆ ಗುರಿಯಾಗಬಹುದಾದಂಥ ವಸ್ತುವಲ್ಲ. ಶೋಷಣೆಯು ಶೋಷಕ ವ್ಯಕ್ತಿಯ ತಪ್ಪಲ್ಲ. ಒಂದು ವರ್ಗವು ಮತ್ತೊಂದರ ಮೇಲೆ ಪ್ರಾಬಲ್ಯ ಹೊಂದಿರುವುದು ಚಾರಿತ್ರಿಕ ಪ್ರಗತಿಯ ಸಹಜ ಪರಿಣಾಮ.... ಮಾರ್ಕ್ಸ್‌ರವರು ವರ್ಗ ಘರ್ಷಣೆಯನ್ನು ಬೋಧಿಸಲಿಲ್ಲ. ಅದು ವಾಸ್ತವವಾಗಿ ಅಸ್ತಿತ್ವದಲ್ಲಿದ್ದಿತು, ಯಾವತ್ತೂ ಒಂದಲ್ಲ ಒಂದು ರೂಪದಲ್ಲಿ ಅಸ್ತಿತ್ವದಲ್ಲಿದ್ದಿತು, ಎಂಬುದನ್ನು ಅವರು ತೋರಿಸಿಕೊಟ್ಟರು."* "ವ್ಯಕ್ತಿ

* Jawaharlal Nehru, *Glimpses of World History*, p. 565. –ಸಂ.

ಗಳನ್ನು ಬದಲಿಸುವುದು ಸಾಧ್ಯ. ಅವರು ತಮ್ಮ ವಿಶೇಷಾಧಿಕಾರಗಳನ್ನು ಬಿಟ್ಟುಕೊಡಬಹುದು. ಆದರೂ ಇದು ಜರುಗುವುದೂ ಅಪರೂಪವೆನ್ನಿ. ಆದರೆ ವರ್ಗಗಳೂ ವೃಂದಗಳೂ ತಮ್ಮ ವಿಶೇಷಾಧಿಕಾರಗಳನ್ನು ಎಂದೂ ಬಿಟ್ಟುಕೊಡುವುದಿಲ್ಲ. ಆದ್ದರಿಂದ ಅಧಿಕಾರವನ್ನು ಬಿಟ್ಟುಕೊಡುವಂತೆ, ಅನ್ಯಾಯದ ವಿಶೇಷಾಧಿಕಾರಗಳನ್ನು ಬಿಟ್ಟುಕೊಡುವಂತೆ, ಆಡಳಿತ ನಡೆಸುತ್ತಿರುವ ವಿಶೇಷಾಧಿಕಾರದ ವರ್ಗವನ್ನು ಪರಿವರ್ತಿಸಲು ಯತ್ನಿಸುವುದು ಇದುವರೆವಿಗೂ ಯಾವತ್ತೂ ಫಲಕಾರಿಯಾಗಿಲ್ಲ. ಭವಿಷ್ಯತ್ತಿನಲ್ಲಿ ಅಂಥ ಯತ್ನ ಯಶಸ್ವಿಯಾಗುವುದು ಎಂದು ಭಾವಿಸಲೂ ಯಾವ ಕಾರಣವೂ ಇದ್ದಂತೆ ಕಾಣುತ್ತಿಲ್ಲ."*

ಆದರೆ ಮತ್ತೊಂದು ಕಡೆ, ಐವತ್ತರ ಹಾಗೂ ಅರವತ್ತರ ದಶಕಗಳಲ್ಲಿ, ಅವರು ವರ್ಗ ಹೋರಾಟವನ್ನು ತಾವು ಮನ್ನಿಸಿದ್ದುದನ್ನು ಗಾಂಧೀಯವರ ವರ್ಗ ಸಾಮರಸ್ಯದ ಪ್ರಕಲ್ಪನೆಯೊಂದಿಗೆ ರಾಜಿಯಾಗಿಸಲು ವಿಫಲವಾಗಿ ಯತ್ನಿಸಿದರು, ಹಾಗೆ ಹಿಂದಿನ ವರ್ಷಗಳಲ್ಲಿ ತಾವು ಮಾಡಿದ್ದ ವಾಸ್ತವಿಕ ಮೌಲ್ಯನಿರ್ಣಯಗಳನ್ನೇ ಅಲ್ಲಗಳೆದರು. "ಆದ್ದರಿಂದ ವರ್ಗ ವೈರುಧ್ಯಗಳನ್ನು ನಿರಾಕರಿಸ ಹೋಗದೆ ಅಥವಾ ಹಳಿಯ ಹೋಗದೆ ನಾವು ಈ ಸಮಸ್ಯೆಯನ್ನು ಶಾಂತಿಯುತವಾಗಿ ಸಹಕಾರದ ರೀತಿಯಲ್ಲಿ, ಈ ಘರ್ಷಣೆಗಳನ್ನು ಹೆಚ್ಚಿಸುವ ಮೂಲಕವಲ್ಲ ಆದರೆ ತಗ್ಗಿಸುವ ಮೂಲಕ, ಜನರ ವಿರುದ್ಧ ಹೋರಾಡುವ ಅಥವಾ ಅವರನ್ನು ನಾಶಗೊಳಿಸುವ ಭೀತಿಹಾಕುವ ಬದಲು ಅವರನ್ನು ನಮ್ಮ ಕಡೆಗೆ ಗೆದ್ದುಕೊಳ್ಳಲು ಯತ್ನಿಸುವ ಮೂಲಕ, ಪರಿಹರಿಸಲು ಬಯಸುತ್ತೇವೆ.... ವರ್ಗ ಹೋರಾಟ ಅಥವಾ ವರ್ಗ ಯುದ್ಧಗಳ ಪ್ರಕಲ್ಪನೆಯು ಅತ್ಯಪಾಯಕಾರಿಯಾಗಿದೆ. ಅದು ಹಳತಾಗಿ ಹೋಗಿದೆ...."**

ವರ್ಗ ಹೋರಾಟಗಳೂ ಯುದ್ಧಗಳೂ ಒಂದೇ ಎಂದು ಗೊಂದಲಗೊಳಿಸುವುದು; ಅಹಿಂಸೆ ಹಾಗೂ ಹಿಂಸೆಗಳನ್ನೂ ವರ್ಗ ವೈರುಧ್ಯಗಳ ಶಾಂತಿಯುತ ಪರಿಹಾರ ಹಾಗೂ ಶಾಂತಿಯುತವಲ್ಲದ ಪರಿಹಾರಗಳನ್ನೂ ನಿರಪೇಕ್ಷವಾಗಿ ಪರಸ್ಪರ ವಿರುದ್ಧ ಎತ್ತಿ ಹಿಡಿಯುವುದು; –ಇವುಗಳನ್ನು ಮೇಲಿನ ಮಾತುಗಳು ತೋರಿಸಿಕೊಡುತ್ತವೆ. ಅವನ್ನು ಪಕ್ಕಕ್ಕೆ ಬಿಡೋಣ. ಆದರೆ ಮೇಲಿನ ಮಾತುಗಳು ನೆಹರೂರವರ ಬಾಳಿನ ಕೊನೆಯಲ್ಲಿ ಅವರ ಮನೋನಂಬಿಕೆಗಳ ವಿಕಾಸವನ್ನೇನೂ ಅಷ್ಟಾಗಿ ಪ್ರತಿಬಿಂಬಿಸುವುದಿಲ್ಲ ಎಂದೇ ಹೇಳಬೇಕು. ಅವು ಹೆಚ್ಚಾಗಿ

* Jawaharlal Nehru, *An Autobiography*, p. 544. –ಸಂ.

** *The Mind of Mr. Nehru. An Interview by R. K. Karanjia*, pp. 76-77. –ಸಂ.

ಆ ಕಾಲದ ನಾನಾ ವರ್ಗಗಳೂ ಭಿನ್ನವಿಭಿನ್ನ ಸ್ವರೂಪದ ಅಂಶಗಳೂ ಕೂಡಿದ್ದ ಜನಪರ ಪಾರ್ಟಿಯಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸಿನ ನಾಯಕತ್ವದಲ್ಲಿದ್ದ ಸಂಪ್ರದಾಯಶರಣ ಶಕ್ತಿಗಳೇ ಹೆಚ್ಚಾಗಿ ನಿರ್ಧರಿಸಿದ ರಾಜಕೀಯ ಮಾರ್ಗ ಉಂಟುಮಾಡಿದ್ದ ವ್ಯಾವಹಾರಿಕ ಆವಶ್ಯಕತೆಯನ್ನು ಪ್ರತಿಬಿಂಬಿಸುತ್ತವೆಂದೇ ಕಂಡುಬರುತ್ತದೆ. ಕಾಂಗ್ರೆಸ್ಸಿನ ನಾಯಕತ್ವದಲ್ಲಿದ್ದ ಸಂಪ್ರದಾಯಶರಣ ಶಕ್ತಿಗಳು ಆ ಕಾಲದಲ್ಲಿ ತಮ್ಮ ಪ್ರಭಾವವನ್ನು ದೃಢಪಡಿಸಿಕೊಳ್ಳುತ್ತಿದ್ದವು. ಅದರ ಫಲವಾಗಿಯೇ ತದನಂತರ ಕಾಂಗ್ರೆಸ್ಸಿನಲ್ಲಿ ವಿಭಜನೆ ಉಂಟಾಯಿತು.

ದೇಶದಲ್ಲಿ ಜರುಗುತ್ತಿದ್ದ ರಾಜಕೀಯ ಹೋರಾಟದ ಹಾಗೂ ದೇಶದ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ವಾಸ್ತವಾಂಶಗಳು ನೆಹರೂರವರ ವಿಚಾರಗಳ ಮೇಲೆ ಸತತವಾಗಿ ಪ್ರಭಾವ ಬೀರುತ್ತಿದ್ದವು. ವರ್ಗ ಸಹಕಾರ ಸಾಧ್ಯ, ಭಾರತೀಯ ಭೂಮಾಲೀಕರನ್ನೂ ಬಂಡವಾಳಗಾರರನ್ನೂ "ಪುನರ್‌ಶಿಕ್ಷಣಗೊಳಿಸುವುದು" ಸಾಧ್ಯ ಎಂಬ ಭಾವನೆ ಸರಿಯಲ್ಲವೆಂದು ಈ ವಾಸ್ತವಾಂಶಗಳು ತೋರಿಸಿಕೊಡುತ್ತಿದ್ದವು. ವಾಸ್ತವವಾಗಿ ಅವು ಸಾಮಾಜಿಕ ಘರ್ಷಣೆಗಳಿಂದ ತುಂಬಿದ್ದವು. ಈ ಘರ್ಷಣೆಗಳಲ್ಲಿ ವಿಶೇಷಾಧಿಕಾರ ಹೊಂದಿದ್ದ ವರ್ಗಗಳು ದುಡಿಯುವ ಜನರ ಪ್ರತಿಭಟನೆಗಳನ್ನು ಅಡಗಿಸಲು ಮತ್ತು ತಮ್ಮ ಸ್ವಂತ ಹಿತಗಳನ್ನು ಕಾಪಾಡಿಕೊಳ್ಳಲು ಬಹಿರಂಗ ಹಿಂಸಾಚರಣೆಯನ್ನೂ ಒಳಗೊಂಡು ಪ್ರತಿಯೊಂದು ದಮನ ಕ್ರಮವನ್ನೂ ಕೈಗೊಳ್ಳುತ್ತಿದ್ದವು.

ವರ್ಗ ಹೋರಾಟದ ಪ್ರಖರತೆ, ಮರ್ದಿತ ವರ್ಗಗಳ ಬಗೆಗೆ ನೆಹರೂರವರು ಹೊಂದಿದ್ದ ಪ್ರಾಮಾಣಿಕ ಸಹಾನುಭೂತಿ, ಅವುಗಳ ಪರಿಸ್ಥಿತಿಗಳನ್ನು ಸುಧಾರಿಸಲು ಅವರ ಬಯಕೆ, ಸಮಾಜವಾದಿ ಧ್ಯೇಯಗಳ ಬಗೆಗೆ ಅವರ ದೃಢ ವ್ಯಕ್ತಿನಿಷ್ಠ ಸಮರ್ಪಣ ಭಾವ – ಇವು ಅವರನ್ನು ಮತ್ತೊಮ್ಮೆ ಭಾರತೀಯ ಸಮಾಜದಲ್ಲಿದ್ದ ವರ್ಗ ವೈರುಧ್ಯಗಳ ಗಹನತೆ ಹಾಗೂ ವಸ್ತುನಿಷ್ಠ ಲಕ್ಷಣವತ್ತ ಅನುದ್ವಿಗ್ನ ನೋಟ ಹರಿಸುವಂತೆ ಬಲಾತ್ಕರಿಸಿದವು.

ಕೊನೆಯದಾಗಿ, ಭಾರತದಲ್ಲಿ ಪ್ರಗತಿಶೀಲ ಮಾರ್ಪಾಡುಗಳನ್ನು ವಿರೋಧಿಸುತ್ತಿದ್ದಂಥ ವಿಶೇಷಾಧಿಕಾರದ ವರ್ಗಗಳೂ ವೃಂದಗಳೂ ಇದ್ದುದನ್ನು ನೆಹರೂರವರು ಕಂಡುಕೊಂಡಿದ್ದರು. ಈ ಸಾಮಾಜಿಕ ಸ್ತರಗಳು (ನೆಹರೂರವರು ಅರೆಸಾಮಂತಶಾಹಿ ಭೂಮಾಲೀಕರನ್ನಷ್ಟೆ ಅಲ್ಲ ಎಲ್ಲಕ್ಕೂ ಮಿಗಿಲಾಗಿ ಏಕಸ್ವಾಮ್ಯಧನಾಧಿಪತಿಗಳನ್ನು ಮನಸ್ಸಿನಲ್ಲಿಟ್ಟಿದ್ದರು) ತಮ್ಮ ಸ್ವಾರ್ಥ ಹಿತಗಳನ್ನು ರಕ್ಷಿಸಿಕೊಳ್ಳಲೋಸುಗ ದೇಶದ ಸಾಮಾಜಿಕ ಪ್ರಗತಿಗೇ ವಿರೋಧವಾಗಿ ಹೋಗಬಹುದೆಂದು ನೆಹರೂ ಸೂಚಿಸಿದರು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಾಜವಾದಿ ಘೋಷಣೆಗಳನ್ನು ಮೊಳಗಿಸುವುದೇನೂ ನೆಹರೂರವರನ್ನು ಭಾರತೀಯ ಸಮಾಜವನ್ನು ಆದರ್ಶೀಕರಿಸುವಂತೆ ಮಾಡಲಿಲ್ಲ. ಯಾವತ್ತೂ ವಾಸ್ತವವಾದಿಯಾ

ಗಿದ್ದ ಅವರು ಭಾರತೀಯ ಆರ್ಥಿಕ ವ್ಯವಸ್ಥೆಯನ್ನು, ಗಣನೀಯವಾದ ರಾಜ್ಯ ನಿಯಂತ್ರಣವುಳ್ಳ ಬಂಡವಾಳವಾದಿ ಆರ್ಥಿಕತೆ ಎಂದು, ಇಲ್ಲವೇ ಬಂಡವಾಳವಾದಿ ಆರ್ಥಿಕತೆ ರಾಜ್ಯವೇ ನೇರವಾಗಿ ನಡೆಸುವ ಸಾರ್ವಜನಿಕ ವಿಭಾಗ ಎಂದು, ನಿರೂಪಿಸಬಹುದೆಂದು ಹೇಳುತ್ತಿದ್ದರು. ಅವರ ಸಾರತಃ ಅದು ಬಂಡವಾಳವಾದಿ ಆರ್ಥಿಕತೆಯೇ ಆಗಿದ್ದಿತು.

ದೇಶದ ಸಮಾಜವಾದಿ ಮಾರ್ಗಕ್ಕೆ, ಪ್ರಗತಿ ಹಾಗೂ ಪ್ರಜಾಪ್ರಭುತ್ವಗಳಿಗೆ ಸಾಮಂತಶಾಹಿ ಭೂಮಾಲೀಕರ ಪಾರಂಪರಿಕ ಶಕ್ತಿಗಳು ಮತ್ತು ಧಾರ್ಮಿಕ ಮತೀಯ ವೈಷಮ್ಯಗಳು ಅಷ್ಟೇ ಅಲ್ಲ, ಬಲ ವರ್ಧಿಸಿಕೊಳ್ಳುತ್ತಿದ್ದ ಏಕಸ್ವಾಮ್ಯಗಳೂ ಭೀತಿ ಒಡ್ಡಿದ್ದವೆಂದು ನೆಹರೂ ಕಂಡುಕೊಂಡಿದ್ದರು. ಸಾವಿಗೆ ಸ್ವಲ್ಪ ಮುನ್ನ, 1963ರ ಶರತ್ಕಾಲದಲ್ಲಿ, ನೆಹರೂ ಬರೆದರು: "ಏಕಸ್ವಾಮ್ಯವು ಸಮಾಜವಾದದ ಶತ್ರು. ಅದು ಕಳೆದ ಕೆಲವು ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಬೆಳೆದಿದೆಯೋ ಅಷ್ಟರ ಮಟ್ಟಿಗೆ ನಾವು ಸಮಾಜವಾದದ ಗುರಿಯಿಂದ ದೂರ ಸರಿದಿದ್ದೇವೆ."*

* * *

ವಿದೇಶಾಂಗ ನೀತಿ ಕ್ಷೇತ್ರದಲ್ಲಿ ನೆಹರೂರವರ ಅಭಿಪ್ರಾಯಗಳು ಸತತವಾಗಿ ಪ್ರಗತಿಶೀಲವಾಗಿದ್ದವು. ಸಮಾಜವಾದ ಮತ್ತು ಆಂತರಿಕ ನೀತಿಗಳಿಗೆ ಸಂಬಂಧಿಸಿದ ಅವರ ವಿಚಾರಗಳಲ್ಲಿ ಅಂತರ್ಗತವಾಗಿದ್ದ ಘರ್ಷಣೆಗಳು ವಿದೇಶಾಂಗ ನೀತಿ ಕ್ಷೇತ್ರದಲ್ಲಿನ ಅವರ ವಿಚಾರಗಳಲ್ಲಿ ಕಂಡುಬರಲಿಲ್ಲ. ಶ್ರೇಷ್ಠ ಚಿಂತಕರಾಗಿ ಹಾಗೂ ರಾಜನೀತಿಜ್ಞರಾಗಿ ಅವರು ಸಾಮ್ರಾಜ್ಯವಾದದ ವಿರುದ್ಧ ಹೋರಾಟದ ಧ್ಯೇಯಕ್ಕೆ, ವಿಶ್ವಶಾಂತಿಯನ್ನು ಖಚಿತಗೊಳಿಸುವ ಧ್ಯೇಯಕ್ಕೆ ಮತ್ತು ಜಾಗತಿಕ ಯುದ್ಧಾನಂತರ ವಿಶ್ವರಂಗದಲ್ಲಿ ಶಕ್ತಿ ಸಂತುಲನವು ರಾಷ್ಟ್ರೀಯ ವಿಮೋಚನೆ ಪ್ರಗತಿ ಹಾಗೂ ಸಮಾಜವಾದಗಳ ಪರವಾಗಿ ಬದಲುವಂತೆ ಮಾಡುವುದಕ್ಕೆ, ಮಹೋನ್ನತ ಕಾಣಿಕೆ ಸಲ್ಲಿಸಿದರು.

ಜವಾಹರಲಾಲ ನೆಹರೂರವರು ಶಾಂತಿ ಹಾಗೂ ಅಂತರರಾಷ್ಟ್ರೀಯ ಸುಭದ್ರತೆಗಳಿಗಾಗಿ ತಮ್ಮೆಲ್ಲ ಶಕ್ತಿಯನ್ನೂ ಮುಡುಪಿಟ್ಟ ಯೋಧರಾಗಿದ್ದರು. ಶಾಂತಿಯುತ ಸಹಅಸ್ತಿತ್ವದ ಬೆಂಬಲಿಗರಾದ ಅವರು ಯಾವತ್ತೂ ಸೌಮನಸ್ಯದ, ಶಸ್ತ್ರ ಪೈಪೋಟಿಯನ್ನು ಕಮ್ಮಿ ಮಾಡುವ ಹಾಗೂ ಸಾರ್ವತ್ರಿಕ ನಿಶ್ಶಸ್ತ್ರೀಕರಣದ ಪರವಾಗಿ ಮಾತನಾಡುತ್ತಿದ್ದರು. ಅವರು ಅಲಿಪ್ತ ನೀತಿ ಚಳವಳಿಯ ಸಂಸ್ಥಾಪಕರಲ್ಲೊಬ್ಬರಾಗಿದ್ದರು. ಅವರು ಪ್ರತಿಪಾದಿಸಿದ ಅಲಿಪ್ತ ನೀತಿಯು ಎಷ್ಟು ಮಾತ್ರವೂ ನಿಷ್ಕ್ರಿಯ ತಾಟಸ್ಥ್ಯದ ಅರ್ಥ ನೀಡುತ್ತಿರಲಿಲ್ಲ. ಸ್ವಾತಂತ್ರ್ಯ ಹಾಗೂ

* *Congress Bulletin*, No. 9-10, 1963, p. 55.–ಸಂ.

ನ್ಯಾಯಗಳು ಭೀತಿಗೊಳಗಾದಾಗ, ದುರಾಕ್ರಮಣ ನಡೆದಾಗ ಭಾರತವು ತಟಸ್ಥವಾಗಿರುವುದು ಸಾಧ್ಯವಿಲ್ಲ, ತಟಸ್ಥವಾಗಿರುವುದಿಲ್ಲ, ಎಂದವರು ಹೇಳಿದರು.

ನೆಹರೂರವರು ಧನಾತ್ಮಕ ತಟಸ್ಥವಾದವನ್ನು ವಸಾಹತುವಾದದ ವಿರುದ್ಧ ನಿರಂತರ ಹೋರಾಟ ನಡೆಸುವುದರೊಂದಿಗೆ ಜೊತೆಗೂಡಿಸಿದರು. ವಸಾಹತುವಾದದ ವಿರುದ್ಧ ಹೋರಾಡುವುದು ತುರ್ತಿನ ಕಾರ್ಯವೆಂದು ಅವರು ಸದಾ ಒತ್ತಿ ಹೇಳುತ್ತಿದ್ದರು. "ಸಾಮ್ರಾಜ್ಯವಾದ ಅಥವಾ ವಸಾಹತುವಾದವು ಪ್ರಗತಿಶೀಲ ವರ್ಗ ವೃಂದಗಳನ್ನು ದಮನ ಮಾಡಿತು, ದಮನ ಮಾಡುತ್ತಿದೆ, ಅನಿವಾರ್ಯವಾಗಿಯೇ ವಿಶೇಷಾಧಿಕಾರವುಳ್ಳ ವರ್ಗ ವೃಂದಗಳೊಂದಿಗೆ ಕೂಟ ಏರ್ಪಡಿಸಿಕೊಳ್ಳುತ್ತಿದೆ. ಏಕೆಂದರೆ, ಅದು ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಈಗಿರುವಂತೆಯೇ ಉಳಿಸಿಕೊಂಡು ಹೋಗುವುದರಲ್ಲಿ ಆಸಕ್ತವಾಗಿದೆ" ಎಂದವರು ಬರೆದರು. "ದೇಶವೊಂದು ರಾಜಕೀಯವಾಗಿ ಸ್ವತಂತ್ರವಾದನಂತರವೂ ಅದು ಆರ್ಥಿಕವಾಗಿ ಇತರ ದೇಶಗಳಿಗೆ ಅಧೀನವಾಗಿಯೇ ಇದ್ದುಕೊಂಡಿರುವಂತೆ ಆಗಬಹುದು."* ದೇಶವು ಸಾಮ್ರಾಜ್ಯವಾದಕ್ಕೆ ಆರ್ಥಿಕವಾಗಿ ಅಧೀನವಾಗುವುದರ ವಿರುದ್ಧ ನೆಹರೂರವರು ನೀಡಿದ ಎಚ್ಚರಿಕೆಯು ಭಾರತಕ್ಕೂ ಇತರ ಅಭಿವೃದ್ಧಿಶೀಲ ದೇಶಗಳಿಗೂ ಇಂದೂ ಸಂಪೂರ್ಣವಾಗಿ ಪ್ರಸ್ತುತವಾಗಿದೆ.

ಏಷ್ಯನ್ ದೇಶಗಳ ನಡುವೆ ಶಾಂತಿಯುತ ಸಹಅಸ್ತಿತ್ವದ 'ಪಂಚಶೀಲ' ಸೂತ್ರಗಳನ್ನು ಸಲಹೆ ಮಾಡಿದವರಲ್ಲಿ ನೆಹರೂರವರೂ ಒಬ್ಬರಾಗಿದ್ದರು. 1955ರಲ್ಲಿ ಚರಿತ್ರಾರ್ಹ ಬಾಂಡುಂಗ್ ಸಮ್ಮೇಳನ ಜರುಗುವಂತೆ ಮಾಡಿದವರಲ್ಲಿ ಅವರೂ ಒಬ್ಬ ಪ್ರಮುಖರಾಗಿದ್ದರು. ಈ ಸಮ್ಮೇಳನವು ಸಾಮ್ರಾಜ್ಯವಾದ, ನವ ವಸಾಹತುವಾದ ಹಾಗೂ ಕುಲವಾದಗಳ ವಿರುದ್ಧ ಶಾಂತಿ ಸ್ವಾತಂತ್ರ್ಯ ಹಾಗೂ ಸಾಮಾಜಿಕ-ಆರ್ಥಿಕ ಪ್ರಗತಿಗಾಗಿ ಹೋರಾಟದಲ್ಲಿ ಏಷ್ಯ ಆಫ್ರಿಕಗಳ ವಿಮೋಚಿತ ರಾಜ್ಯಗಳನ್ನು ಒಂದುಗೂಡಿಸುವ ಪ್ರಕ್ರಿಯೆಯಲ್ಲಿ ಒಂದು ಹೆಗ್ಗುರುತಾಗಿದ್ದಿತು.

ವಿಶ್ವ ರಂಗದಲ್ಲಿ ಎಲ್ಲ ಪ್ರಗತಿಶೀಲ ಶಕ್ತಿಗಳನ್ನೂ ಒಂದುಗೂಡಿಸುವ ಸತತವಾದ ಬಯಕೆಯು ನೆಹರೂರವರ ಶ್ರೇಷ್ಠ ಗುಣಗಳಲ್ಲೊಂದಾಗಿದ್ದಿತು. 1927ರಲ್ಲಿ ಅವರು ಬ್ರಸ್ಸೆಲ್ಸ್‌ನಲ್ಲಿ ಜರುಗಿದ 'ಮರ್ದಿತ ಜನಾಂಗಗಳ ಸಾಮ್ರಾಜ್ಯವಾದ ವಿರೋಧಿ ಮಹಾಧಿವೇಶನ'ದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದ್ದರು. ಅವರು ಬರೆದರು: "ಮರ್ದಿತ ರಾಷ್ಟ್ರಗಳ ನಡುವೆ ಹಾಗೂ ಅವಕ್ಕೂ ಶ್ರಮಜೀವಿ ಚಳವಳಿಯ ಎಡಪಂಥಕ್ಕೂ ನಡುವೆ ಯಾವುದಾದರೂ ರೀತಿಯ ಸಾಮಾನ್ಯ ಕ್ರಿಯೆ ಸಂಘಟಿಸುವ ವಿಚಾರಗಳು ತುಂಬ ಪ್ರಚಲಿತದಲ್ಲಿದ್ದವು. ಒಂದೊಂದೂ ದೇಶವು

---

* Jawaharlal Nehru, *Congressmen's Primer for Socialism*, p. 196. – ಸಂ.

ನಡೆಸುತ್ತಿದ್ದ ಸ್ವಾತಂತ್ರ್ಯ ಹೋರಾಟವು ಸಾಮ್ರಾಜ್ಯವಾದದ ವಿರುದ್ಧ ಎಲ್ಲ ದೇಶಗಳ ಸಾಮಾನ್ಯ ಹೋರಾಟವಾಗಿದ್ದಿತು, ಸಂಯುಕ್ತ ಸಮಾಲೋಚನೆ ಮತ್ತು ಸಾಧ್ಯವಾದೆಡೆಗಳಲ್ಲೆಲ್ಲ ಸಂಯುಕ್ತ ಕ್ರಿಯೆ ಅಪೇಕ್ಷಣೀಯವಾಗಿದ್ದಿತು, ಎಂಬ ಭಾವನೆ ಹೆಚ್ಚು ಹೆಚ್ಚಾಗಿ ಬೇರೂರುತ್ತಿದ್ದಿತು."* ಇದು ರಾಷ್ಟ್ರೀಯ ವಿಮೋಚನಾ ಹೋರಾಟಕ್ಕೂ ಕಾರ್ಮಿಕರ ಚಳವಳಿಯನ್ನೂ ಒಳಗೊಂಡ ಕ್ರಾಂತಿಕಾರಿ ಚಳವಳಿಗೂ ನಡುವೆ ಏಕತೆಯನ್ನು ಮನ್ನಿಸುವತ್ತ ಇಟ್ಟ ಒಂದು ಮುಖ್ಯ ಹೆಜ್ಜೆಯಾಗಿದ್ದಿತು. ನೆಹರೂರವರ ಈ ಕ್ರಾಂತಿಕಾರಿ ರಾಷ್ಟ್ರೀಯವಾದವು ಸಾಮ್ರಾಜ್ಯವಾದದ ವಿರುದ್ಧ ಹೋರಾಟದಲ್ಲಿ ಸಹಕಾರ ಹಾಗೂ ಸಂಯುಕ್ತ ಯತ್ನಗಳಿಗಾಗಿ ಶ್ರಮಜೀವಿ ವರ್ಗ ಕ್ರಾಂತಿಯ ನಾಯಕ ಲೆನಿನ್ ಮಾಡಿಕೊಂಡ ಮನವಿಯೊಂದಿಗೆ ಸಂಗತವಾಗಿದ್ದಿತು. ನೆಹರೂ ಬರೆದರು: "ಪಶ್ಚಿಮದಲ್ಲಿನ ಸಮಾಜವಾದವೂ ಪೂರ್ವ ಮತ್ತಿತರ ಪರಾಧೀನ ದೇಶಗಳಲ್ಲಿನ ಉದಯೋನ್ಮುಖ ಜನಾಂಗವಾದವೂ ಫ್ಯಾಸಿಸಂ ಮತ್ತು ಸಾಮ್ರಾಜ್ಯವಾದಗಳ ಈ ಜೋಡಣೆಯನ್ನು ವಿರೋಧಿಸುತ್ತಿವೆ.... ನಾವು ಅನಿವಾರ್ಯವಾಗಿಯೇ ಫ್ಯಾಸಿಸಂ ಮತ್ತು ಸಾಮ್ರಾಜ್ಯವಾದಗಳ ವಿರುದ್ಧ ನಿಂತಿರುವ ಜಗತ್ತಿನ ಪ್ರಗತಿಶೀಲ ಶಕ್ತಿಗಳ ಪರವಾದ ನಿಲುವು ತಳೆಯುತ್ತೇವೆ."**

ಸೋವಿಯತ್ ಒಕ್ಕೂಟದೊಂದಿಗೆ ಪರಸ್ಪರ ತಿಳಿವಳಿಕೆಗಾಗಿ ನೆಹರೂರವರು ನಿರಂತರವಾಗಿ ಅಪೇಕ್ಷಿಸುತ್ತಿದ್ದುದು ಅವರ ಈ ನೀತಿಮಾರ್ಗದ ಒಂದು ಅತ್ಯಂತ ಸ್ಪಷ್ಟ ಹಾಗೂ ಫಲಪ್ರದ ಲಕ್ಷಣವಾಗಿದ್ದಿತು. ಭಾರತ-ಸೋವಿಯತ್ ಸಹಕಾರದ ಸ್ಥಾಪನೆ ಹಾಗೂ ಅದರ ಯಶಸ್ವೀ ಬೆಳವಣಿಗೆಗಳು ನೆಹರೂರವರು ಅನುಸರಿಸಿದ ನೀತಿಯೊಂದಿಗೆ ಅವಿಭಾಜ್ಯವಾಗಿ ಸಂಬಂಧಿಸಿವೆ. ಅವರ ನೀತಿಗಳ ಮೇಲೆ ಆಧರಿಸಿದ ಎರಡೂ ದೇಶಗಳ ನಡುವಿನ ಸ್ನೇಹ ಸಂಬಂಧಗಳು ಬಹಳ ಕಾಲದಿಂದ ಆಗಲೇ ಸಮಾಜವಾದೀ ಜಗತ್ತು ಹಾಗೂ ರಾಷ್ಟ್ರೀಯ ವಿಮೋಚನಾ ಚಳವಳಿಯಿಂದ ಹುಟ್ಟಿದ ಜಗತ್ತುಗಳ ನಡುವಿನ ಮಹಾ ಮೈತ್ರಿಯ ಅತ್ಯಂತ ಮನವೊಪ್ಪುವಂಥ ಅಭಿವ್ಯಕ್ತಿಗಳಾಗಿ ಇದ್ದುಕೊಂಡಿವೆ. ಈ ಸಂಬಂಧಗಳು ವಿಭಿನ್ನ ಸಾಮಾಜಿಕ-ಆರ್ಥಿಕ ಪದ್ಧತಿಗಳುಳ್ಳ, ಶಾಂತಿ ಅಂತರರಾಷ್ಟ್ರೀಯ ಸುಭದ್ರತೆಗಾಗಿ ಹೋರಾಟದಲ್ಲಿ ಸಾಮಾನ್ಯ ಹಿತಾಸಕ್ತಿಗಳಿಂದ ಸಂಬಂಧಿತವಾದ ರಾಜ್ಯಗಳ ಶಾಂತಿಯುತ ಸಹಅಸ್ತಿತ್ವಕ್ಕೆ ಹಾಗೂ ಫಲಪ್ರದ ಸಹಕಾರಕ್ಕೆ ಮಾದರಿಯಾಗಿ ಇದ್ದುಕೊಂಡಿವೆ.

ಭಾರತವು ಸ್ವಾತಂತ್ರ್ಯ ಗಳಿಸಿಕೊಂಡನಂತರ ಭಾರತ-ಸೋವಿಯತ್ ಸಂಬಂಧಗಳು ತುಂಬ ಅನುಕೂಲಕರವಾಗಿ ಬೆಳೆಯುತ್ತಿರುವುದು 1971ರ ಆಗಸ್ಟ್‌ನಲ್ಲಿ

---

* Jawaharlal Nehru, *An Autobiography*, p. 161. – ಸಂ.

** Jawaharlal Nehru, *The First Sixty Years*, Vol. I, The Bodley Head, London, 1965, p. 427. – ಸಂ.

ಸಹಿ ಹಾಕಲಾದ 'ಶಾಂತಿ, ಸ್ನೇಹ, ಸಹಕಾರಗಳ ಒಡಂಬಡಿಕೆ'ಯಲ್ಲಿ ಪ್ರತಿಬಿಂಬಿತವಾಗಿದೆ. ಈ ಒಡಂಬಡಿಕೆಯಾದನಂತರದ ವರ್ಷಗಳಲ್ಲಿ ಮೇಲ್ಮಟ್ಟದ ಸೋವಿಯತ್ ಹಾಗೂ ಭಾರತೀಯ ನಿಯೋಗಗಳು ಪರಸ್ಪರರಲ್ಲಿಗೆ ನೀಡುತ್ತಿರುವ ಭೇಟಿಗಳು ದ್ವಿಪಕ್ಷೀಯ ಸ್ನೇಹಯುತ ಸಂಬಂಧಗಳ ಬೆಳವಣಿಗೆಗೂ ಏಷ್ಯದಲ್ಲೂ ಜಗತ್ತಿನಲ್ಲೂ ಅಂತರರಾಷ್ಟ್ರೀಯ ಸೌಮನಸ್ಯ ಶಾಂತಿ ಹಾಗೂ ಸುಭದ್ರತೆಗಳು ದೃಢಗೊಳ್ಳುವುದಕ್ಕೂ ಭಾರಿ ಕಾಣಿಕೆ ನೀಡಿವೆ. ಈ ಭೇಟಿಗಳ ಸಮಯದಲ್ಲಿ ಸಹಿ ಹಾಕಲಾದ ದಸ್ತೈವಜುಗಳು ಸೋವಿಯತ್ ಒಕ್ಕೂಟ ಮತ್ತು ಭಾರತಗಳ ನಡುವೆ ಸಂಬಂಧಗಳ ಮೂಲಸೂತ್ರಗಳನ್ನು ವಿಕಾಸಗೊಳಿಸಿವವು ಮತ್ತು ಅವುಗಳ ಸಹಕಾರದ ಸಾಮಾನ್ಯ ದಿಶೆಯನ್ನು ನಿರ್ಧರಿಸಿದವು. ಈ ದಸ್ತೈವಜುಗಳನ್ನು ಸೋವಿಯತ್ ಒಕ್ಕೂಟ ಮತ್ತು ಭಾರತಗಳಲ್ಲಷ್ಟೆ ಅಲ್ಲ ಜಗತ್ತಿನಾದ್ಯಂತ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಅನುಮೋದಿಸಿ ಸ್ವಾಗತಿಸಿದ್ದಾರೆ ಮತ್ತು ಉನ್ನತ ಮೌಲ್ಯದವೆಂದು ಶ್ಲಾಘಿಸಿದ್ದಾರೆ.

* * *

ಜವಾಹರಲಾಲ ನೆಹರೂರವರ ವಿಚಾರಗಳೂ ಅವರು ಹಾಕಿಕೊಟ್ಟ ನೀತಿ ಮಾರ್ಗವೂ ಇನ್ನೂ ಜೀವಂತವಾಗಿವೆ. ಆದರೆ ಯಾವುದೇ ರಾಜಕೀಯ ವಿಚಾರವೂ ಕಾಲದ ಕರೆಗೆ ಒಗ್ಗೊಡದಿದ್ದಲ್ಲಿ ತನ್ನ ಮಹತ್ವ ಕಳೆದುಕೊಳ್ಳುತ್ತದೆ.

ಸಮಯ ಪ್ರಜ್ಞೆ ನೆಹರೂರವರಲ್ಲಿ ಉನ್ನತ ಮಟ್ಟದಲ್ಲಿದ್ದಿತು. ಸತತ ಬೆಳವಣಿಗೆ ಹಾಗೂ ಬದಲಾವಣೆಗಳು ಅವರ ಚಟುವಟಿಕೆಯ ಹಾಗೂ ಮನೋಧರ್ಮದ ವಿಶಿಷ್ಟ ಲಕ್ಷಣಗಳಾಗಿದ್ದವು. ನೆಹರೂವರರ ನಿಧನದನಂತರದ ವರ್ಷಗಳಲ್ಲಿ ಭಾರತದ ಜೀವನದಲ್ಲಿ ತುಂಬ ಬದಲಾವಣೆಗಳಾಗಿವೆ. ದುಡಿಯುವ ಜನರು ಸಾಮಾಜಿಕವಾಗಿ ಹೆಚ್ಚು ಕ್ರಿಯಾಶೀಲರಾಗುತ್ತಿದ್ದಾರೆ, ರಾಜಕೀಯವಾಗಿ ಹೆಚ್ಚು ಜಾಗೃತಿಗೊಂಡಿದ್ದಾರೆ, ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಪರಿಪಕ್ವತೆಯ ಮಟ್ಟ ಹೆಚ್ಚುತ್ತಿದೆ. ಈ ಪರಿಸ್ಥಿತಿಗಳಲ್ಲಿ ನೆಹರೂರವರು ಬಿಟ್ಟುಕೊಟ್ಟು ಹೋಗಿರುವ ವೈಚಾರಿಕ ಸಂಪತ್ತು ಪ್ರಗತಿಯ ಒಂದು ಅಂಶವಾಗಬೇಕಾದಲ್ಲಿ ಅದು ವಿಕಾಸಗೊಳ್ಳಬೇಕು, ಗಾಢಗೊಳ್ಳಬೇಕು.

ಭಾರತೀಯ ಸಮಾಜವು ಯಾವ ದಿಶೆಯಲ್ಲಿ ವಿಕಾಸಗೊಳ್ಳುತ್ತಿದೆ ಅನ್ನುವುದನ್ನು ನೆಹರೂ ಮನಗಂಡಿದ್ದರು. ಅನೇಕ ವರ್ಷಗಳ ಸುಧಾರಣಾವಾದಿ ಆಚರಣೆಯು ಅವರ ಮನೋಧರ್ಮದ ಮೇಲೆ ಪ್ರಬಲ ಪ್ರಭಾವ ಬೀರಿದ್ದರೂ ಅವರು ತಮ್ಮ ಕ್ರಾಂತಿಕಾರಿ ವಿಚಾರಗಳನ್ನು ಕಳೆದುಕೊಳ್ಳಲಿಲ್ಲ, ತಮ್ಮ ನೀತಿಗಳನ್ನು ವಸ್ತುನಿಷ್ಠವಾಗಿ ನೋಡುವ ಮತ್ತು ಅವುಗಳನ್ನು ಅನುದ್ವಿಗ್ನತೆಯಿಂದ ಮೌಲ್ಯನಿರ್ಣಯಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳಲಿಲ್ಲ. ನೈಜ ಸಮಾಜವಾದ ಎಂದರೆ ಏನು

ಎಂಬುದನ್ನು ಅವರು ಚೆನ್ನಾಗಿ ತಿಳಿದಿದ್ದರು. ಆದ್ದರಿಂದ ಅವರು 'ಸಮಾಜವಾದಿ ಮಾದರಿಯ ಸಮಾಜ' ಎಂಬ ಪ್ರಕಲ್ಪನೆಯ ಸೋಪಾಧಿಕ ಹಾಗೂ ಸಾಪೇಕ್ಷಿಕ ಸ್ವರೂಪವನ್ನು ಮನಗಂಡಿದ್ದರು. ಆದ್ದರಿಂದ ಅವರು ಈ ಪ್ರಕಲ್ಪನೆಯನ್ನು ಭುವನೇಶ್ವರದಲ್ಲಿ ಜರುಗಿದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನವೊಂದರಲ್ಲಿ ಹೆಚ್ಚು ಸ್ಪಷ್ಟವಾಗಿ ನಿರೂಪಿಸಲು ಮತ್ತು ಮತ್ತಷ್ಟು ವಿಶದಗೊಳಿಸಲು ಆಸಕ್ತಿ ತೋರಿದುದು ಸಹಜವೇ ಆಗಿದ್ದಿತು. ತಮ್ಮ ಸಾಮಾಜಿಕ ನೀತಿಯ ಫಲಿತಾಂಶಗಳಿಂದ ಸಾರ್ವಜನಿಕರು ನಿರಾಶೆಗೊಂಡಿದ್ದುದನ್ನು ಅವರು ಕಂಡುಕೊಂಡಿದ್ದರು. ತಾವೇ ಅವುಗಳಿಂದ ಅಷ್ಟಾಗಿ ತೃಪ್ತಿಗೊಂಡಿರಲಿಲ್ಲ.

ನೆಹರೂರವರು ಇಪ್ಪತ್ತರ ಹಾಗೂ ಮೂವತ್ತರ ದಶಕಗಳಲ್ಲಿ ಪ್ರತಿಪಾದಿಸಿ ಸಮರ್ಥಿಸಿದ ಕ್ರಾಂತಿಕಾರಿ ವಿಚಾರಗಳನ್ನು ಗಣನೆಗೆ ತಂದುಕೊಳ್ಳುವುದು ಅಗತ್ಯವೆಂದು ಕಾಲವೇ ಒತ್ತಾಯಿಸಿದೆ. ಅವರೂ ತಮ್ಮ ಈ ವಿಚಾರಗಳ ತಥ್ಯತೆಯನ್ನು ಎಂದೂ ಅಲ್ಲಗಳೆಯಲಿಲ್ಲ. ಅವರ ವ್ಯಕ್ತಿನಿಷ್ಠ ಸಮಾಜವಾದಕ್ಕೆ ನಿಜವಾದ ಒಳತಿರುಳು ಒದಗಿಸಲು ಮತ್ತು ಅದನ್ನು ಪ್ರಚಾರಾತ್ಮಕ ಘೋಷಣೆಯ ಸ್ಥಿತಿಯಿಂದ ಜನತಾ ಕ್ರಿಯೆಯ ಸ್ಥಿತಿಗೆ ಪರಿವರ್ತಿಸಲು, ಇದೊಂದೇ ಮಾರ್ಗವಾಗಿದೆ ಎಂಬುದು ನಮ್ಮ ಅಭಿಪ್ರಾಯ.

ನೆಹರೂರವರ ಮರಣದನಂತರ ಆಳುವ ಪಾರ್ಟಿಯ ಬೂರ್ಷ್ವಾ ಶಕ್ತಿಗಳು ನೆಹರೂರವರ ನೀತಿಮಾರ್ಗವನ್ನು ಹೆಸರಿಗೆ ಮಾತ್ರ ಅನುಸರಿಸುತ್ತ ಅವರು ಸೂಚಿಸಿದ್ದ ಸಾರ್ವತ್ರಿಕ ಪ್ರಜಾಸತ್ತಾತ್ಮಕ ಸುಧಾರಣೆಗಳ ಕಾರ್ಯವ್ಯಾಪ್ತಿಯನ್ನೂ ಅವುಗಳಲ್ಲಿ ಜನರ ಭಾಗವಹಿಸುವಿಕೆಯನ್ನೂ ಸೀಮಿತಗೊಳಿಸಿದವು ಮತ್ತು ಅವರ ಸುಧಾರಣೆಗಳೊಳಕ್ಕೆ ಅಸಂಗತತೆಯ, ವರ್ಗ ಸ್ವಾರ್ಥ ಹಿತಗಳ ಹಾಗೂ ಗಣ್ಯವರ್ಗ ಸಂಕುಚಿತತೆಯ ಅಂಶಗಳನ್ನು ಸೇರಿಸಿದವು. ದುಡಿಯುವ ಜನರ ವರ್ಗ ಪ್ರತಿಭಟನಾ ಕ್ರಿಯೆಯು ತೀವ್ರಗೊಂಡಿತು. ಬಲಪಂಥದ ರಾಷ್ಟ್ರೀಯ ಬಂಡವಾಳವಾದಿ ವೃಂದಗಳು ನಗರಗಳಲ್ಲಿ ಭಾರಿ ಬಂಡವಾಳದ ಪರವಾಗಿ ಮತ್ತು ಗ್ರಾಮಾಂತರದಲ್ಲಿ ಭಾರಿ ಬಂಡವಾಳಶಾಹಿ ಭೂಮಾಲೀಕರ ಹಾಗೂ ಶ್ರೀಮಂತ ರೈತರ ಪರವಾಗಿ ಸತತವಾಗಿ ಬೂರ್ಷ್ವಾ ನೀತಿಯೊಂದನ್ನು ಬಹಿರಂಗವಾಗಿಯೇ ಕಾರ್ಯಗತಗೊಳಿಸುವ ತಮ್ಮ ಬಯಕೆಯನ್ನು ಹೆಚ್ಚು ಹೆಚ್ಚಾಗಿ ತೋರಿಸಿಕೊಳ್ಳತೊಡಗಿದವು. ಕೇಂದ್ರೀಕೃತ ಆಯೋಜನೆ ಹಾಗೂ ಪ್ರಬಲ ರಾಜ್ಯವಿಭಾಗ ಸೂತ್ರಗಳನ್ನೂ ಸಮಾಜವಾದಿ ಧ್ಯೇಯಗಳನ್ನೂ ಒಳಗೊಂಡಿದ್ದ ನೆಹರೂರವರ ನೀತಿಮಾರ್ಗವನ್ನು ಬಿಟ್ಟುಕೊಡಬೇಕೆಂದು ಆಗ್ರಹಿಸತೊಡಗಿದವು. ರಾಜ್ಯ ವಿಭಾಗವು ಬೆಳೆಯುವುದು ತನ್ನ ಸ್ವಾತಂತ್ರ್ಯಕ್ಕೂ ತನ್ನ ಅನಿರ್ಬಂಧಿತ ಬೆಳವಣಿಗೆಗೂ ಗಂಡಾಂತರಕಾರಿಯಾಗಿದ್ದಿತೆಂದು ಭಾರತೀಯ ಏಕಸ್ವಾಮ್ಯವು ಹೆಚ್ಚು ಹೆಚ್ಚು ಭೀತಿಗೊಳ್ಳತೊಡಗಿದ್ದಿತು. ಅದೇ ರೀತಿ ಪ್ರಜಾಸತ್ತಾತ್ಮಕ ಶಕ್ತಿಗಳು ಭಾರತೀಯ

ರಾಷ್ಟ್ರೀಯ ಕಾಂಗ್ರೆಸ್ಸನ್ನು ನೆಹರೂರವರ ಕಾರ್ಯಕ್ರಮದ ಸಮಾಜವಾದಿ ಅಂಶಗಳನ್ನು ಮರೆಯುತ್ತಿದ್ದುದಕ್ಕಾಗಿ ಹೆಚ್ಚು ಹೆಚ್ಚು ಸುಸಂಗತವಾಗಿ ಹಾಗೂ ತೀವ್ರವಾಗಿ ಟೀಕಿಸತೊಡಗಿದವು. ಜನಸಮೂಹಗಳು ಈ ಟೀಕೆಯನ್ನು ಆಚರಣೆಗೆ ತರಲಾಗುತ್ತಿಲ್ಲವೆಂಬುದನ್ನೂ, ಬಡವರು ಹೆಚ್ಚು ಬಡವರಾಗುತ್ತಿದ್ದರು, ಶ್ರೀಮಂತರು ಹೆಚ್ಚು ಶ್ರೀಮಂತರಾಗುತ್ತಿದ್ದರು, ಎಂಬುದನ್ನೂ ಜನಸಮೂಹಗಳು ಮನಗಾಣತೊಡಗಿದ್ದವು.

1967ರಲ್ಲಿ ಜರುಗಿದ ನಾಲ್ಕನೆಯ ಸಾರ್ವತ್ರಿಕ ಚುನಾವಣೆಗಳು ಭಾರತದ ರಾಜಕೀಯ ಬೆಳವಣಿಗೆಯಲ್ಲಿ ಒಂದು ಆಳವಾದ ವಿಭಜನಾ ರೇಖೆಯನ್ನು ಗುರುತಿಸಿದವು. ಕೇಂದ್ರದಲ್ಲಿ ಕಾಂಗ್ರೆಸ್ಸಿನ ನೆಲೆಗಳು ಗಹನವಾಗಿ ದುರ್ಬಲಗೊಂಡವು. ಏಳು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರಕಾರಗಳು ರಚಿತವಾದವು. ಇದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಾಬಲ್ಯಕ್ಕೆ ನೀಡಿದ ಗಹನವಾದ ಪ್ರಹಾರವಾಗಿದ್ದಿತು. ದೇಶದಲ್ಲಿ ಪಾರ್ಟಿ ಹಾಗೂ ರಾಜಕೀಯ ಪದ್ಧತಿಯ ಬದಲಾವಣೆಯತ್ತ ಇಟ್ಟ ಒಂದು ಗಮನಾರ್ಹ ಹೆಜ್ಜೆಯಾಗಿದ್ದಿತು.

ಈ ಚುನಾವಣೆಗಳಲ್ಲಿ ಕಾಂಗ್ರೆಸ್ ಪಾರ್ಟಿಯು ಕಳಪೆ ಫಲಿತಾಂಶಗಳನ್ನು ಪಡೆದುದೂ, ಈ ವೈಫಲ್ಯಗಳಿಗೆ ಕಾರಣಗಳಿಗಾಗಿಯೂ ಅವುಗಳನ್ನು ಹೋಗಲಾಡಿಸಲು ಅವಶ್ಯ ಕ್ರಮಗಳಿಗಾಗಿಯೂ ಶೋಧ ನಡೆಸುತ್ತ ಪಾರ್ಟಿ ನಾಯಕತ್ವದಲ್ಲಿ ಕಚ್ಚಾಟಗಳು ನಡೆದುದೂ, ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಿಭಜನೆಗೊಳ್ಳುತ್ತಿದ್ದಿತು ಎಂಬುದರ ಸ್ಪಷ್ಟ ಸೂಚನೆಗಳಾಗಿದ್ದವು.

1971-1972ರ ಸಾರ್ವತ್ರಿಕ ಚುನಾವಣೆಗಳಲ್ಲಿ ಬಲಪಂಥದ ವಿರೋಧ ಪಕ್ಷಗಳು ರಚಿಸಿದ್ದ "ಮಹಾ ಮೈತ್ರೀಕೂಟ"ದ ಮೇಲೆ ಕಾಂಗ್ರೆಸ್ ಜಯ ಗಳಿಸಿದುದು ಹೊರ ನೋಟಕ್ಕೆ ಆ ಪಾರ್ಟಿಯನ್ನು ಐವತ್ತರ ಹಾಗೂ ಆರಂಭಿಕ ಅರವತ್ತರ ದಶಕಗಳಲ್ಲಿನ ಅದರ ಹಿಂದಿನ ರಾಜಕೀಯ ಪ್ರಾಬಲ್ಯಕ್ಕೆ ಹಿಂದಿರುಗಿಸಿದ್ದಿತು. ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಪ್ರಾಬಲ್ಯದ ಸ್ಥಿತಿಯನ್ನು ಶಿಥಿಲಗೊಳಿಸುತ್ತಿದ್ದ ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ಅಂಶಗಳು ತೀವ್ರವಾಗಿ ಸಂಚಯವಾಗುತ್ತಲೇ ಹೋದವು.

ಆದರೂ 1975-1977ರಲ್ಲಿ ಇಂದಿರಾ ಗಾಂಧೀಯವರ ಸರಕಾರವು ಘೋಷಿಸಿದ ತುರ್ತು ಪರಿಸ್ಥಿತಿಯೂ ಅನಂತರ ಕೈಕೊಂಡ ಸುಪ್ರಸಿದ್ಧ ಕ್ರಮಗಳೂ, ಪ್ರಗತಿಶೀಲ 20-ಅಂಶಗಳ ಕಾರ್ಯಕ್ರಮಕ್ಕೆ ಸಂಬಂಧಿಸಿದ ಕ್ರಮಗಳೂ ಸಹ, ಆಗಲೇ ತುಂಬ ತಡವಾಗಿ ಕೈಗೊಂಡ ಕ್ರಮಗಳೇ ಆಗಿದ್ದವು. ಕೆಳ ವರ್ಗಗಳು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನಿಂದ ದೂರ ಸರಿದವು. ತುರ್ತು ಪರಿಸ್ಥಿತಿಯ ಕಾಲದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಕೈಕೊಂಡ ಕ್ರಮಗಳು ಪರಿಣಾಮಕಾರಿಯಾಗಿರಲಿಲ್ಲ. ಆಳುವ ಪಾರ್ಟಿಯು ತನ್ನ ಅಧಿಕಾರದ ಮುಗ್ಗಟ್ಟು ಉಂಟುಮಾಡಿದ್ದ

ವಸ್ತುನಿಷ್ಠ ಹಾಗೂ ವ್ಯಕ್ತಿನಿಷ್ಠ ಅಂಶಗಳನ್ನು ನಿವಾರಿಸಿಕೊಳ್ಳಲು ಯಶಸ್ವಿಯಾಗಿರಲಿಲ್ಲ ಎಂದೇ ಆ ಕ್ರಮಗಳು ತೋರಿಸಿಕೊಟ್ಟವು. 1977ರಲ್ಲಿ ಪಾರ್ಟಿಯು ಭಾರಿ ಪರಾಭವಕ್ಕೆ ಈಡಾಯಿತು.

ಕಾಂಗ್ರೆಸ್ ವಿಭಜನೆಗೊಳ್ಳುವುದಕ್ಕೂ ಅದರ ಘನತೆ ಕುಗ್ಗಿ 1977ರ ಚುನಾವಣೆಗಳಲ್ಲಿ ಅದು ಭಾರಿ ಪರಾಭವ ಪಡೆದುದಕ್ಕೂ ಕಾರಣಗಳು ಏನಾಗಿದ್ದವು? ಇದಕ್ಕೆ ಕಾರಣಗಳನ್ನು ಎಪ್ಪತ್ತರ ದಶಕದ ದ್ವಿತೀಯಾರ್ಧದಲ್ಲಿ ಭಾರತದಲ್ಲಿದ್ದ ವಿಶಿಷ್ಟ ರಾಜಕೀಯ ಪರಿಸ್ಥಿತಿಯಲ್ಲಿ ಹುಡುಕಲು ಹೋಗದೆ ಅದಕ್ಕೂ ಹೆಚ್ಚು ಪ್ರಗಾಢವಾದ ಸಾಮಾಜಿಕ ಪ್ರಕ್ರಿಯೆಗಳಲ್ಲಿ ಹುಡುಕಿದಲ್ಲಿ, ಉತ್ತರ, ನಮ್ಮ ಅಭಿಪ್ರಾಯದಲ್ಲಿ, ಸ್ವಯಂಸ್ಪಷ್ಟವಾಗುತ್ತದೆ. ಭಾರತದ ಬಂಡವಾಳಶಾಹಿ ಬೆಳವಣಿಗೆಯ ವೈರುಧ್ಯಗಳೂ ತೊಂದರೆಗಳೂ ಸಂಚಯವಾಗಿದ್ದುದೇ ಆ ಕಾರಣವಾಗಿದ್ದಿತು. ಅದು ಜನಸಮೂಹಗಳ ಮೇಲೆ ಗುರುತರವಾದ ಪ್ರಭಾವ ಬೀರಿದ್ದಿತು. ಈ ತೊಂದರೆಗಳನ್ನು ನಿವಾರಿಸಲು, ರಾಷ್ಟ್ರವ್ಯಾಪೀ ಹಿತಗಳ ಚೌಕಟ್ಟಿನೊಳಗೇ ರಾಷ್ಟ್ರೀಯ ಬಂಡವಾಳವಾದದ ಬೆಳವಣಿಗೆಗೆ ಪ್ರೋತ್ಸಾಹ ನೀಡಲು, ವರ್ಗ ಘರ್ಷಣೆಗಳನ್ನು ನಿವಾರಿಸಲೋಸುಗ ಏಕಸ್ವಾಮ್ಯಗಳ ಶೀಘ್ರ ಬೆಳವಣಿಗೆಗೆ ಕಡಿವಾಣ ಹಾಕಲು ರಾಷ್ಟ್ರೀಯ ಕಾಂಗ್ರೆಸ್ ಕೈಗೊಂಡ ಕ್ರಮಗಳೆಲ್ಲ ಭ್ರಾಂತ್ಯಾತ್ಮಕವೆಂದು ಸಾಬೀತಾದವು. ಆಳುವ ವರ್ಗದೊಳಗೇ ಬಲಪಂಥದ, ಕೇಂದ್ರೀಯ ಹಾಗೂ ಎಡಪಂಥದ ವೃಂದಗಳ ನಡುವಿನ ವೈರುಧ್ಯಗಳೂ ರಾಷ್ಟ್ರೀಯ ಬೂರ್ಜ್ವಾಸೀ ಹಾಗೂ ಜನಸಮೂಹಗಳ ನಡುವಿನ ವೈರುಧ್ಯಗಳೂ ಬೆಳೆಯುತ್ತಲೇ ಹೋದವು. ಕಾರ್ಮಿಕರ ಪ್ರತಿಭಟನಾ ಕ್ರಿಯೆಗಳು ಅಭೂತಪೂರ್ವ ಪ್ರಮಾಣ ತಲುಪಿದವು. ಭಾರತೀಯ ಜನರ ಮಧ್ಯೆ ಅಸಹನೆ ಹೆಚ್ಚುತ್ತಿದ್ದುದನ್ನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ತಿಳಿದಿದ್ದಿತೆಂದೂ ದೇಶದಲ್ಲಿ ಅಸ್ತಿತ್ವದಲ್ಲಿರುವ ಪದ್ಧತಿಯು ಜನರ ನ್ಯಾಯಯುತ ಆಶೋತ್ತರಗಳನ್ನು ತೃಪ್ತಿಗೊಳಿಸಲು ಅಸಮರ್ಥವಾದಲ್ಲಿ ಜನ ಇತರ ವಿಧಾನಗಳ ಮೊರೆ ಹೋಗುವುದನ್ನು ಹೆಚ್ಚು ಇಷ್ಟಪಡಬಹುದೆಂದೂ 1973ರಲ್ಲಿ ಇಂದಿರಾ ಗಾಂಧೀಯವರು ಎಚ್ಚರಿಕೆಯ ಮಾತನ್ನಾಡಿದರು. ವಾಸ್ತವವಾಗಿ ಆದದ್ದು ಹಾಗೆಯೇ.

ಆದರೆ ಕಾಂಗ್ರೆಸ್ಸಿನ ಸ್ಥಳದಲ್ಲಿ ಅಧಿಕಾರಕ್ಕೆ ಬಂದ ಜನತಾ ಸಮ್ಮಿಶ್ರ ಸರಕಾರವು ಭಾರತೀಯ ಜನರಿಗೆ ತೃಪ್ತಿಕರ ಬದಲಿ ಒದಗಿಸದಾಯಿತು. ಜನತಾ ಸರಕಾರವು ತನ್ನೆಲ್ಲ ಗಮನವನ್ನೂ ಕಾಂಗ್ರೆಸ್ ನೀತಿಯನ್ನು ಟೀಕಿಸುವುದರ ಮೇಲೆಯೇ ಕೇಂದ್ರೀಕರಿಸಿತು, ಜನರ ಮಧ್ಯೆ ಇದ್ದ ಅತೃಪ್ತಿಯ ಪರಮಾವಧಿ ಪ್ರಯೋಜನ ಪಡೆದುಕೊಳ್ಳಲು ಯತ್ನಿಸಿತು. ಆದರೆ ಅದು ಪರಿಣಾಮಕಾರಿಯಾದ ಹಾಗೂ ಚಲನಶೀಲವಾದ ಕಾರ್ಯಕ್ರಮವನ್ನು ರೂಪಿಸಲು ಅಸಮರ್ಥವಾಗಿದ್ದಿತು. ಕಾಂಗ್ರೆಸ್ ಪಾರ್ಟಿಯು ಮೂವತ್ತು ವರ್ಷಗಳ ಕಾಲ ಜನರ ವಿಶ್ವಾಸಕ್ಕೆ ಪಾತ್ರ

ವಾಗಿದ್ದರೆ ಜನತಾ ಪಾರ್ಟಿಯು ಈ ವಿಶ್ವಾಸವನ್ನು ಕಳೆದುಕೊಳ್ಳಲು ಮೂವತ್ತು ತಿಂಗಳುಗಳಷ್ಟೆ ಸಾಕಾದವು. 1980ರಲ್ಲಿ ಜರುಗಿದ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ಕಾಂಗ್ರೆಸ್ ಪಾರ್ಟಿ ಭಾರಿ ಜಯಗಳಿಸಿತು.

ಭಾರತದ ರಾಜಕೀಯ ಬೆಳವಣಿಗೆಯ ಪ್ರತೀಕ್ಷೆಗಳು ಹೇಗಿವೆ ಎಂಬ ಬಗೆಗೆ ನಾನಾ ಅಭಿಪ್ರಾಯಗಳಿವೆ. ಅಧಿಕಾರವು ಒಂದೇ ವ್ಯಕ್ತಿಯ ಕೈಗಳಲ್ಲಿ ಕೇಂದ್ರೀಕೃತವಾಗುವ ಪ್ರವೃತ್ತಿಗಳು ಬಲಗೊಳ್ಳುವುದನ್ನು ಅನೇಕ ರಾಜಕೀಯ ವೀಕ್ಷಕರು ಲಕ್ಷ್ಯ ಮಾಡುವುದಿಲ್ಲ. ರಾಷ್ಟ್ರೀಯ ಬಂಡವಾಳವಾದದ ಪ್ರಭಾವಶಾಲಿ ವೃಂದಗಳು ಬಯಸುತ್ತಿರುವುದು ನಿರ್ದಿಷ್ಟವಾಗಿ ಇದನ್ನೇ. ಈ ಗುರಿಯನ್ನೇ ಮನಸ್ಸಿನಲ್ಲಿಟ್ಟುಕೊಂಡು ಆಗಲೇ ಸಂವಿಧಾನದಲ್ಲಿ ಬದಲಾವಣೆಗಳನ್ನು ಮಾಡುವ ಅನೇಕ ಸಲಹೆಗಳನ್ನು ಮುಂದಿಡಲಾಗುತ್ತಿವೆ. ಇಂಥ ವಿಚಾರಗಳಿಗೆ ಬೆಂಬಲ ನೀಡುವಂತೆ ಸಾಮಾಜಿಕ ಚಳವಳಿಯೊಂದನ್ನು ಹುಟ್ಟಿಸಲೂ ಕೆಲವು ಯತ್ನಗಳನ್ನು ಮಾಡಲಾಗಿದೆ. ಕಾಂಗ್ರೆಸ್ಸು ಅಧಿಕಾರವನ್ನು ಉಳಿಸಿಕೊಂಡಿರಲು ಈ ವಿಧಾನದ ಮೊರೆ ಹೊಗುವುದೇ ಇಲ್ಲವೇ ನೆಹರೂರವರು ಸಂಸ್ಥಾಪಿಸಿದಂಥ ಪ್ರಜಾಸತ್ತಾತ್ಮಕ ಧ್ಯೇಯಗಳಿಗೆ ನಿಷ್ಠೆಯಿಂದಿರುವುದೇ? ಅದು ಈ ಎರಡನೆಯ ಮಾರ್ಗ ಹಿಡಿಯಬೇಕಾದಲ್ಲಿ ತನ್ನ ಅಧಿಕಾರವನ್ನು ದೃಢಗೊಳಿಸಿಕೊಳ್ಳಲು ಅದರ ಬಳಿ ಯಾವುದೇ ನಿಜವಾದ ವಿನಾಸಲು ಶಕ್ತಿ ಇಲ್ಲವೆಂದೇ ಕಂಡುಬರುತ್ತದೆ. ಅದು ನೆಹರೂರವರ ಪ್ರಗತಿಶೀಲ ಧ್ಯೇಯಗಳ ಕಡೆಗಷ್ಟೆ ತಿರುಗಬೇಕು, ಭಾರತೀಯ ದುಡಿಯುವ ಜನರ – ದೇಶದ ಬಹುಸಂಖ್ಯಾತರ – ಹಿತದೃಷ್ಟಿಯಿಂದ ಸಾಮಾಜಿಕ ಪ್ರಗತಿಯ ನೀತಿಯನ್ನು ಅನುಸರಿಸುವ ಮೂಲಕ ಆ ಧ್ಯೇಯಗಳಿಗೆ ನಿಜವಾದ ತಿರುಳನ್ನು ಒದಗಿಸಬೇಕು.

ನೆಹರೂರವರು ಬಿಟ್ಟುಕೊಟ್ಟು ಹೋಗಿರುವ ವೈಚಾರಿಕ ಸಂಪತ್ತನ್ನು ವಿಮರ್ಶಾತ್ಮಕವಾಗಿ ವ್ಯಾಖ್ಯಾನಿಸಿ ಬೆಳಸದೆಯೇ ಪ್ರಗತಿಶೀಲ ನೀತಿಯೊಂದನ್ನು ರೂಪಿಸಲು ಅದನ್ನು ಬಳಸುವುದು ಅಸಾಧ್ಯವೆಂದು ನಾವು ಮುಕ್ತಾಯದಲ್ಲಿ ತಿಳಿಸಬಯಸುತ್ತೇವೆ. ಈ ಟೀಕೆಯು ಎಷ್ಟು ಮಾತ್ರವೂ ನೆಹರೂರವರ ಸ್ಮರಣೆಯ ವಿರುದ್ಧ ಇಲ್ಲವೇ ಅವರು ಬಿಟ್ಟುಕೊಟ್ಟು ಹೋಗಿರುವ ವೈಚಾರಿಕ ಸಂಪತ್ತಿನ ವಿರುದ್ಧ ನಿರ್ದೇಶಿತವಾದುದಲ್ಲ. ತದ್ವಿರುದ್ಧವಾಗಿ ಅದು ಅವರ ಬಗೆಗೆ ಇರುವ ಗೌರವದ ಮೇಲೆ, ಅವರ ಸೈದ್ಧಾಂತಿಕ ಹಾಗೂ ರಾಜಕೀಯ ವಿಚಾರಗಳ ಮೌಲ್ಯದಲ್ಲಿ ನಂಬಿಕೆಯ ಮೇಲೆ ಮತ್ತು ಅವರ ವಿಚಾರಗಳ ಧನಾತ್ಮಕ ಲಕ್ಷಣಗಳು ಎಷ್ಟು ಮಾತ್ರವೂ ಬರಿದಾಗಿಲ್ಲ ಎಂಬ ಮನೋನಂಬಿಕೆಯ ಮೇಲೆ, ಆಧರಿಸಿದೆ.

• • •

ರಾಜಕೀಯ ಹಾಗೂ ಸಾರ್ವಜನಿಕ ವ್ಯಕ್ತಿಯಾಗಿ, ತತ್ವಜ್ಞಾನಿಯಾಗಿ ಹಾಗೂ ಚರಿತ್ರಕಾರರಾಗಿ ನೆಹರೂರವರ ಕಾರ್ಯದ ಎಲ್ಲ ಮುಖಗಳತ್ತವೂ ದೃಷ್ಟಿ ಹರಿಸಿದಾಗ, ಅವರು ಬಿಟ್ಟುಕೊಟ್ಟು ಹೋಗಿರುವ ವೈಚಾರಿಕ ಸಂಪತ್ತಿನಲ್ಲಿನ ಅತ್ಯುತ್ತಮ ಅಂಶಗಳಿಗೆಲ್ಲ – ಇದರ ಬಗೆಗೆ ನಮಗೆ ಗಾಢ ಮನವರಿಕೆ ಇದೆ – ಅವರು ಸಮಾಜವಾದ ಹಾಗೂ ಪ್ರಗತಿಗಳತ್ತ ಆಕರ್ಷಿತರಾಗಿದ್ದುದೇ ಕಾರಣ, ಅವರು ವೈಜ್ಞಾನಿಕ ಸಮಾಜವಾದಿ ಸಿದ್ಧಾಂತದಲ್ಲಿ ಆಸಕ್ತಿ ಹೊಂದಿದ್ದುದೇ ಕಾರಣ, ಎಂಬುದನ್ನು ಒತ್ತಿ ಹೇಳಬೇಕು. ವೈಜ್ಞಾನಿಕ ಸಮಾಜವಾದಿ ಸಿದ್ಧಾಂತದಲ್ಲಿನ ಆಸಕ್ತಿ ಅವರ ಜಾಗತಿಕ ಮನೋಧರ್ಮ ಹಾಗೂ ರಾಜಕಾರಣಗಳ ಮೇಲೆ ಗಣನೀಯ ಪ್ರಭಾವ ಬೀರಿದ್ದಿತು.

ಅವರು ಸಮಾಜವಾದದಲ್ಲಿ ಆಕರ್ಷಿತರಾಗಿದ್ದುದು ಅವರಲ್ಲಿ ಅಂತರರಾಷ್ಟ್ರೀಯ ಕಾರ್ಮಿಕ ಚಳವಳಿಯೊಂದಿಗೆ ಜೊತೆಗೂಡಿ ಶ್ರಮಿಸುವ ಹಾಗೂ ಸೋವಿಯತ್ ಒಕ್ಕೂಟದೊಂದಿಗೆ ಸಹಕರಿಸುವ ವಿಚಾರವನ್ನು ಮೂಡಿಸಿದ್ದಿತು.

ಅವರು ಸಮಾಜವಾದದಲ್ಲಿ ಆಕರ್ಷಿತರಾಗಿದ್ದುದೇ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಮಾಜವಾದಿ ಮಾದರಿಯ ಸಮಾಜ ನಿರ್ಮಿಸುವುದು ತನ್ನ ಗುರಿ ಎಂದು ಘೋಷಿಸುವಂತೆ ಮಾಡಿದುದು.

ನೆಹರೂರವರ ಸಮಾಜವಾದಿ ಧ್ಯೇಯವು ಅಸ್ಪಷ್ಟವಾಗಿದ್ದರೂ, ಸಾಮ್ರಾಜ್ಯವಾದ ವಿರೋಧಿ ರಾಷ್ಟ್ರೀಯತಾವಾದದ ಸಂಕುಚಿತತೆಯನ್ನು ಅರ್ಥ ಮಾಡಿಕೊಂಡಿದ್ದ, ಸಾಮ್ರಾಜ್ಯವಾದ ವಿರೋಧಿ ಚಳವಳಿಗೆ ಸಮಾಜವಾದಿ ಲಕ್ಷಣವನ್ನು ಒದಗಿಸುವುದು ಅವಶ್ಯ ಎಂಬುದನ್ನು ಕಂಡುಕೊಂಡಿದ್ದ ರಾಷ್ಟ್ರೀಯ ವಿಮೋಚನಾ ಚಳವಳಿಯ ಮೊದಲ ನಾಯಕರಲ್ಲಿ ಅವರೂ ಒಬ್ಬರಾಗಿದ್ದರು ಎಂಬುದನ್ನು ನಿರಾಕರಿಸಲಾಗದು. ಈ ಕಾರಣಕ್ಕಾಗಿಯೇ ಅವರು ಯಾವತ್ತೂ ನೆನಪಿನಲ್ಲಿರುತ್ತಾರೆ. ಸೋವಿಯತ್ ಜನರು ಭಾರತದ ಮಹಾ ಪುರುಷ ಜವಾಹರಲಾಲ ನೆಹರೂರವರ ಬಗೆಗೆ ಹೊಂದಿರುವ ಭಾರಿ ಗೌರವ ಹಾಗೂ ಸಹಾನುಭೂತಿಗಳಿಗೂ ಇದೇ ಕಾರಣ.

ಸುಕಾರ್ನೋ

ಇಂಡೋನೇಷ್ಯದ ರಾಷ್ಟ್ರೀಯ-ವಿಮೋಚನಾ ಚಳವಳಿಯ ಒಬ್ಬ ಪ್ರಮುಖ ವ್ಯಕ್ತಿ. ಜನನ 1901ರ ಜೂನ್ 6ರಂದು, ಜಾವಾದ ಸುರಬಯ ಪಟ್ಟಣದಲ್ಲಿ, ಶಾಲಾಧ್ಯಾಪಕರ ಕುಟುಂಬವೊಂದರಲ್ಲಿ. ಯೌವನದ ದಿನಗಳಲ್ಲೇ ನೆದರ್‌ಲ್ಯಾಂಡ್ಸ್ ಈಸ್ಟ್ ಇಂಡೀಸ್‌ನ – ಡಚ್ ವಸಾಹತುವಾದಿಗಳು ಆ ದೇಶಕ್ಕೆ ನೀಡಿದ್ದ ಹೆಸರು ಇದೇ ಆಗಿದ್ದಿತು – ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಧ್ಯೇಯದಿಂದ ಸ್ಫೂರ್ತಿಗೊಂಡಿದ್ದರು.

1926ರಲ್ಲಿ ಬಾಂಡುಂಗ್ ಟೆಕ್ನಲಾಜಿಕಲ್ ಇನ್‌ಸ್ಟಿಟ್ಯೂಟ್‌ನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವೀಧರರಾದರು. ಅದೇ ಆ ವಸಾಹತಿನಲ್ಲಿ ಸ್ಥಾಪಿತವಾಗಿದ್ದ ಮೊದಲ ಉನ್ನತ ವಿದ್ಯಾಸಂಸ್ಥೆಯಾಗಿದ್ದಿತು. ಇಲ್ಲಿ ಅಧ್ಯಯನ ಮಾಡುತ್ತಿದ್ದ ಕಾಲದಲ್ಲಿ ಅವರು ನಾನಾ ದೇಶಗಳ ಹಾಗೂ ಜನತೆಗಳ ಮಹೋನ್ನತ ಚಿಂತಕರ ಕೃತಿಗಳ ಪರಿಚಯ ಪಡೆದುಕೊಂಡರು ಮತ್ತು ಇತಿಹಾಸ ಮತ್ತು ಸಮಾಜಶಾಸ್ತ್ರಗಳಲ್ಲಿ ವ್ಯಾಪಕ ಜ್ಞಾನವನ್ನೂ ಗಳಿಸಿಕೊಂಡರು.

ಅದೇ ವರ್ಷ ಅವರು 'ಬಾಂಡುಂಗ್ ವ್ಯಾಸಂಗ ಗೋಷ್ಠಿ' ಎಂಬ ಸಂಘಟನೆಯನ್ನು ಸ್ಥಾಪಿಸುವುದರಲ್ಲೂ ಪಾಲ್ಗೊಂಡರು. ಡಚ್ ವಸಾಹತು ಅಧಿಕಾರಿಗಳೊಂದಿಗೆ ಯಾವುದೇ ರೀತಿಯಲ್ಲೂ ಸಹಕರಿಸಬಾರದೆಂಬುದು ಈ ಸಂಘಟನೆಯ ಸದಸ್ಯರ ಗುರಿಯಾಗಿದ್ದಿತು. 1927ರ ಜುಲೈ 4ರಂದು ಈ ಗೋಷ್ಠಿಯ ಆಧಾರದ ಮೇಲೆಯೇ ಇಂಡೋನೇಷ್ಯದ ರಾಷ್ಟ್ರೀಯ ಪಾರ್ಟಿ ಸಂಸ್ಥಾಪಿತವಾಯಿತು. ಸುಕಾರ್ನೋ ಅದರ ಪ್ರಥಮ ಅಧ್ಯಕ್ಷರಾದರು. ಈ ಕಾಲದಲ್ಲೇ ಸುಕಾರ್ನೋರವರ ವಿಚಾರಗಳ ಮುಖ್ಯ ಲಕ್ಷಣಗಳು ರೂಪಿತವಾದುವು. ತಮ್ಮ ವಿಚಾರಗಳ ಪದ್ಧತಿಯನ್ನು ಅವರು 'ಮರ್ಹಾಏನಿಸಂ' ಎಂದು ಕರೆದರು. ಇದು ಒಂದು ರೀತಿಯ ಪೆಟಿ ಬೂರ್ಷ್ವಾ ಸಮಾಜವಾದವಾಗಿದ್ದಿತು.

ಸುಕಾರ್ನೋರವರು 1929ರ ಡಿಸೆಂಬರ್‌ನಲ್ಲಿ ವಸಾಹತುವಾದಿ

ವಿರೋಧಿ ಚಟುವಟಿಕೆಗಳಿಗಾಗಿ ದಸ್ತಗಿರಿ ಮಾಡಲ್ಪಟ್ಟರು. ನ್ಯಾಯವಿಚಾರಣೆ ನಡೆದಾಗ ಅವರು ವಸಾಹತು ಅಧಿಕಾರಿಗಳ ಪಾತಕಗಳನ್ನು ಬಯಲು ಮಾಡಿದರು ಮತ್ತು ಇಂಡೋನೇಷ್ಯನರ ಸ್ವಾತಂತ್ರ್ಯದ ಹಕ್ಕನ್ನು ಸಮರ್ಥಿಸಿದರು. ಅವರ ಈ ಅಮೋಘ ಭಾಷಣವು ಅವರ ಜನಪ್ರಿಯತೆಯನ್ನು ತೀವ್ರವಾಗಿ ಹೆಚ್ಚಿಸಿತು. ಅವರು ಇಂಡೋನೇಷ್ಯದ ರಾಷ್ಟ್ರೀಯ-ವಿಮೋಚನಾ ಚಳವಳಿಯ ಪ್ರಮುಖ ನಾಯಕರಾದರು. 1932ರಲ್ಲಿ ಬಂಧನದಿಂದ ಬಿಡುಗಡೆಯಾದ ಮೇಲೂ ಅವರು ರಾಜಕೀಯ ಚಟುವಟಿಕೆಯನ್ನು ಮುಂದುವರಿಸಿದರು. ಆದರೆ ಒಂದು ವರ್ಷದ ನಂತರ ಮತ್ತೆ ಬಂಧಿತರಾದರು. 1942ರಲ್ಲಿ ಜಪಾನೀಯರು ಇಂಡೋನೇಷ್ಯದ ಮೇಲೆ ದಾಳಿ ಮಾಡುವವರೆಗೂ ಒಂಬತ್ತು ವರ್ಷಗಳ ಕಾಲ ಅವರು ಇಲ್ಲವೇ ಸೆರೆಮನೆಯಲ್ಲಿದ್ದರು ಇಲ್ಲವೇ ಗಡೀಪಾರು ಮಾಡಲ್ಪಟ್ಟಿದ್ದರು.

ಜಪಾನೀಯರು ಇಂಡೋನೇಷ್ಯವನ್ನು ಆಕ್ರಮಿಸಿಕೊಂಡಿದ್ದ ಆರಂಭಕಾಲದಲ್ಲಿ ಸುಕಾರ್ನೋ ಜಪಾನೀ ಮಿಲಿಟರಿ ಅಧಿಕಾರಿಗಳೊಂದಿಗೆ ಹೊರನೋಟಕ್ಕೆ ನಿಷ್ಠೆಯ ಸಂಬಂಧಗಳನ್ನು ಇರಿಸಿಕೊಂಡಿದ್ದರು. ಡಚ್ಚರು ಪುನಃ ಆಡಳಿತಕ್ಕೆ ಬರುವುದನ್ನು ತಪ್ಪಿಸಲು ಅವರು ಈ ಸಂಪರ್ಕಗಳನ್ನು ಬಳಸಲು ಇಚ್ಛಿಸಿದ್ದರು. ಅದೇ ಹೊತ್ತಿನಲ್ಲಿ ಅವರು ಭೂಗತ ರಾಷ್ಟ್ರೀಯ-ದೇಶಪ್ರೇಮಿ ಸಂಘಟನೆಗಳೊಂದಿಗೂ ಸಂಪರ್ಕ ಇರಿಸಿಕೊಂಡಿದ್ದರು, ಅವುಗಳಿಗೆ ನೆರವು ನೀಡುತ್ತಿದ್ದರು.

1945ರ ಮಾರ್ಚ್‌ನಲ್ಲಿ ಸುಕಾರ್ನೋ 'ಇಂಡೋನೇಷ್ಯದ ಸ್ವಾತಂತ್ರ್ಯ ಸಿದ್ಧತಾ ಆಯೋಗ'ದ ಅಧಿಪತಿಯಾದರು. ಯುದ್ಧದಲ್ಲಿ ಜಪಾನಿನ ಪರಾಭವ ಸಮೀಪಿಸುತ್ತಿದೆ ಅನ್ನುವುದನ್ನು ಕಂಡುಕೊಂಡಾಗ ಮತ್ತು ಇಂಡೋನೇಷ್ಯನ್ ದ್ವೀಪಗಳಲ್ಲಿ ರಾಷ್ಟ್ರೀಯ-ವಿಮೋಚನಾ ಚಳವಳಿಯ ಉರುಬಿನ ಒತ್ತಡಕ್ಕೆ ಸಿಕ್ಕಿಕೊಂಡಾಗ ಜಪಾನೀ ಅಧಿಕಾರಿಗಳು ಈ ಆಯೋಗವನ್ನು ಸ್ಥಾಪಿಸಿದ್ದರು.

ಸೋವಿಯತ್ ಒಕ್ಕೂಟವೂ ಫ್ಯಾಸಿಸ್ಟ್ ವಿರೋಧಿ ಮೈತ್ರೀಕೂಟದ ಇತರ ಸಹಭಾಗಿಗಳೂ ಜರ್ಮನ್ ಫ್ಯಾಸಿಸಂಅನ್ನೂ ಜಪಾನೀ ಮಿಲಿಟರೀವಾದವನ್ನೂ ಪರಾಭವಗೊಳಿಸಿದುದರ ಫಲವಾಗಿ ರೂಪಿತವಾದ ಪರಿಸ್ಥಿತಿಗಳಲ್ಲಿ, ಸುಕಾರ್ನೋ 1945ರ ಆಗಸ್ಟ್ 17ರಂದು ಇಂಡೋನೇಷ್ಯನ್ ಜನರ ಪರವಾಗಿ ದೇಶದ ಸ್ವಾತಂತ್ರ್ಯವನ್ನು ಘೋಷಿಸಿದರು ಮತ್ತು ಹೊಸ ಇಂಡೋನೇಷ್ಯ ಗಣತಂತ್ರದ ಪ್ರಥಮ ಅಧ್ಯಕ್ಷರಾದರು.

1945-1949ರಲ್ಲಿ ಇಂಡೋನೇಷ್ಯದ ಜನರು ದೇಶದ ಮೇಲೆ

ಅಧೀನತವನ್ನು ಪುನರ್‌ಸ್ಥಾಪಿಸಿಕೊಳ್ಳಲು ಯತ್ನಿಸುತ್ತಿದ್ದ ಡಚ್ ವಸಾಹತುವಾದಿಗಳ ವಿರುದ್ಧ ಪಟ್ಟುಹಿಡಿದ ಹೋರಾಟ ನಡೆಸಿದರು. 1948ರ ಡಿಸೆಂಬರ್‌ನಲ್ಲಿ ಸುಕಾರ್ನೋರವರನ್ನು ಬಂಧಿಸಲಾಯಿತು ಮತ್ತು 1949ರ ಜುಲೈನಲ್ಲಷ್ಟೆ ಬಿಡುಗಡೆ ಮಾಡಲಾಯಿತು. ಇಂಡೋನೇಷ್ಯದ ಸ್ವಾತಂತ್ರ್ಯ ಯೋಧರು ತೋರಿದ ಸಾಹಸದ ಫಲವಾಗಿಯೂ ಜಾಗತಿಕ ಸಾರ್ವಜನಿಕಾಭಿಪ್ರಾಯದ ಬೆಂಬಲದ ಫಲವಾಗಿಯೂ ಇಂಡೋನೇಷ್ಯ ಗಣತಂತ್ರ ಸರಕಾರವು ಡಚ್ ವಸಾಹತುವಾದಿಗಳನ್ನು ಸಂಧಾನಕ್ಕೆ ಬರುವಂತೆ ಬಲಾತ್ಕರಿಸುವುದರಲ್ಲಿ ಯಶಸ್ವಿಯಾಯಿತು. ಈ ಸಂಧಾನ 1949ರ ಡಿಸೆಂಬರ್‌ನಲ್ಲಿ ಕೊನೆಗೊಂಡು ಇಂಡೋನೇಷ್ಯ ಒಂದು ಸಾರ್ವಭೌಮ ರಾಷ್ಟ್ರವಾಗಿ ಮನ್ನಿತವಾಯಿತು.

ಇಂಡೋನೇಷ್ಯ ಗಣತಂತ್ರದ ಅಧಿಪತಿಯಾಗಿ ಸುಕಾರ್ನೋರವರು ದೇಶದ ಸಕ್ರಿಯ ಸ್ವತಂತ್ರ ವಿದೇಶಾಂಗ ನೀತಿಯನ್ನು ರಚಿಸುವುದಕ್ಕೆ ತುಂಬ ಕಾಣಿಕೆ ಸಲ್ಲಿಸಿದರು. ಅವರು 1955ರಲ್ಲಿ ಜರುಗಿದ ಏಷ್ಯನ್ ಹಾಗೂ ಆಫ್ರಿಕನ್ ದೇಶಗಳ ಬಾಂಡುಂಗ್ ಸಮ್ಮೇಳನದ ಉಪಕ್ರಮಕಾರರಲ್ಲಿ ಒಬ್ಬರಾಗಿದ್ದರು ಮತ್ತು ಅಲಿಪ್ತ ಚಳವಳಿಯ ಸಂಸ್ಥಾಪಕರಲ್ಲೊಬ್ಬರೂ ಆಗಿದ್ದರು.

ದೇಶದ ಆಂತರಿಕ ರಾಜಕೀಯ ಪರಿಸ್ಥಿತಿ ಹದಗೆಡುತ್ತಿದ್ದುದರ ಫಲಿತಾಂಶವಾಗಿ ರಾಜ್ಯದ ಅಧಿಪತಿಯೂ ಇಂಡೋನೇಷ್ಯನ್ ಸಶಸ್ತ್ರ ದಳಗಳ ಸರ್ವೋಚ್ಚ ದಂಡನಾಯಕರೂ ಆಗಿದ್ದ ಸುಕಾರ್ನೋ 1957ರ ಮಾರ್ಚ್ 14ರಂದು ಗಣತಂತ್ರದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ ಪೂರ್ಣ ಅಧಿಕಾರವನ್ನು ತಮ್ಮ ಕೈಗಳಲ್ಲೇ ಕೇಂದ್ರೀಕರಿಸಿಕೊಂಡರು.

1957-1959ರಲ್ಲಿ ದೇಶದಲ್ಲಿನ ಪ್ರಧಾನ ರಾಜಕೀಯ ವೃಂದಗಳ ಸಹಮತದೊಂದಿಗೆ ಸುಕಾರ್ನೋರವರು ರಾಜ್ಯ ಸಂರಚನೆಯಲ್ಲಿ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು, ಕಾರ್ಯಾಂಗದ ಹಾಗೂ ಅದರ ಅಧಿಪತಿಯಾದ ರಾಷ್ಟ್ರಾಧ್ಯಕ್ಷರ ಪಾತ್ರವನ್ನೂ ವಿಶೇಷ ಹಕ್ಕುಗಳನ್ನೂ ಬಲಪಡಿಸಿದರು. ಸುಧಾರಣೆಗಳ ಫಲಿತಾಂಶಗಳಲ್ಲಿ ಒಂದೆಂದರೆ, ದೇಶದಲ್ಲಿ ರಾಜಕೀಯ ಚಟುವಟಿಕೆ ರಾಜ್ಯ ನೀತಿಯ ಹಾಗೂ ವಿಚಾರಧಾರೆಯ ಚೌಕಟ್ಟಿನೊಳಗೇ ನಿರ್ಬಂಧಕ್ಕೊಳಗಾದುದು.

ಐವತ್ತರ ದಶಕದ ದ್ವಿತೀಯಾರ್ಧದಲ್ಲಿ ಇಂಡೋನೇಷ್ಯನ್ ಸರಕಾರವು ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳೊಂದಿಗೆ ಸಂಬಂಧಗಳನ್ನು ವಿಕಾಸಗೊಳಿಸಿಕೊಳ್ಳಲು ಕ್ರಮಗಳನ್ನು ಕೈಗೊಂಡಿತು. ಸುಕಾರ್ನೋರವರು ಸೋವಿಯತ್ ಒಕ್ಕೂಟಕ್ಕೆ ಅನೇಕ ಬಾರಿ, 1956, 1959, 1961 ಹಾಗೂ 1964ರಲ್ಲಿ ಭೇಟಿ ನೀಡಿದರು. 1962ರಲ್ಲಿ ಸೋವಿಯತ್ ಒಕ್ಕೂಟದ ಬೆಂಬಲದೊಂದಿಗೆ ಇಂಡೋನೇಷ್ಯನ್ ಜನರು ಯುಗಯುಗಾಂತರಗಳಿಂದ ಇಂಡೋನೇಷ್ಯನ್ ಭೂಪ್ರದೇಶವಾಗಿದ್ದ ಹಾಗೂ ಶಾಸನಬಾಹಿರವಾಗಿ ಡಚ್ಚರು ತಮ್ಮ ವಶದಲ್ಲೇ ಉಳಿಸಿಕೊಂಡಿದ್ದ ವೆಸ್ಟ್ ಇರಿಯನ್‌ನ ವಿಮೋಚನೆಯನ್ನು ಸಾಧಿಸಿಕೊಂಡರು.

1963ರಲ್ಲಿ ರಾಜ್ಯಾಧಿಕಾರದ ಸರ್ವೋಚ್ಚ ಅಂಗವಾದ 'ತಾತ್ಕಾಲಿಕ ಜನತಾ ಸಮಾಲೋಚನ ಕಾಂಗ್ರೆಸ್' ಸುಕಾರ್ನೋರವರಿಗೆ "ಇಂಡೋನೇಷ್ಯನ್ ಕ್ರಾಂತಿಯ ಮಹಾ ನಾಯಕ" ಎಂಬ ಬಿರುದು ನೀಡಿ ಅವರನ್ನು ಆಜೀವ ರಾಷ್ಟ್ರಾಧ್ಯಕ್ಷರನ್ನಾಗಿ ಘೋಷಿಸಿತು.

ದೇಶದಲ್ಲಿ ಸಾಮಾಜಿಕ-ರಾಜಕೀಯ ವೈರುಧ್ಯಗಳು ಹೆಚ್ಚುತ್ತಿದ್ದುದೂ ಆರ್ಥಿಕ ತೊಂದರೆಗಳು ಉಲ್ಬಣಗೊಳ್ಳುತ್ತಿದ್ದುದೂ 1965ರ ಅಕ್ಟೋಬರ್‌ನಿಂದ ಆರಂಭಿಸಿ ಇಂಡೋನೇಷ್ಯದಲ್ಲಿ ರಾಜ್ಯಾಧಿಕಾರದಲ್ಲಿ ಗಹನವಾದ ಮುಗ್ಗಟ್ಟಿಗೆ ದಾರಿ ಮಾಡಿಕೊಟ್ಟವು. ಪ್ರಭಾವಶಾಲಿ ಮಿಲಿಟರಿ ವೃತ್ತಗಳು ಸುಕಾರ್ನೋರವರಿಗೆ ವಿರೋಧ ಹೂಡಿದವು. 1966ರ ಮಾರ್ಚ್ 11ರಂದು ರಾಷ್ಟ್ರಾಧ್ಯಕ್ಷರು ಕಾರ್ಯಾಂಗದ ಎಲ್ಲ ಅಧಿಕಾರವನ್ನೂ ಭೂಸೇನೆಯ ದಂಡನಾಯಕ ಜನರಲ್ ಸುಹಾರ್ತೋರವರಿಗೆ ಒಪ್ಪಿಸಿಬಿಡುವ ಒತ್ತಾಯಕ್ಕೆ ಒಳಗಾದರು. 1966ರ ಜುಲೈ 5ರಂದು ಕಾಂಗ್ರೆಸ್ ಸುಕಾರ್ನೋರವರನ್ನು ಆಜೀವ ರಾಷ್ಟ್ರಾಧ್ಯಕ್ಷರನ್ನಾಗಿ ನೇಮಿಸಿದ್ದ ನಿರ್ಧಾರವನ್ನು ಹಿಂತೆಗೆದುಕೊಂಡಿತು ಮತ್ತು 1967ರ ಮಾರ್ಚ್ 12ರಂದು ಕೊನೆಯದಾಗಿ ರಾಷ್ಟ್ರಾಧ್ಯಕ್ಷರಾಗಿ ಸುಕಾರ್ನೋರವರ ಎಲ್ಲ ಅಧಿಕಾರಗಳನ್ನೂ ಎಲ್ಲ ಬಿರುದುಗಳನ್ನೂ ರದ್ದುಪಡಿಸಿತು.

ಸುಕಾರ್ನೋರವರು 1970ರ ಜೂನ್ 21ರಂದು ಜಕಾರ್ತಾದಲ್ಲಿ ಮಿಲಿಟರಿ ಆಸ್ಪತ್ರೆಯೊಂದರಲ್ಲಿ ತೀರಿಕೊಂಡರು. ಮಾರನೆಯ ದಿನ ಅವರನ್ನು ಬ್ಲಿತಾರ್‌ನಲ್ಲಿ ಪೂರ್ಣ ರಾಜ್ಯ ಗೌರವಗಳೊಂದಿಗೆ ಸಮಾಧಿ ಮಾಡಲಾಯಿತು. ಒಂಬತ್ತು ವರ್ಷಗಳ ನಂತರ ಜೂನ್ 21ರಂದು ರಾಷ್ಟ್ರಾಧ್ಯಕ್ಷರ ಶಾಸನಕ್ಕನುಗುಣವಾಗಿ ನಿರ್ಮಿತವಾದ ಸುಕಾರ್ನೋ ಸಮಾಧಿ ಸ್ಮಾರಕವನ್ನು ಬ್ಲಿತಾರ್‌ನಲ್ಲಿ ಅಧಿಕೃತವಾಗಿ ಅನಾವರಣ ಮಾಡಲಾಯಿತು.

"ನಾವು ಮತ್ತೊಮ್ಮೆ ಅವರ ಕುರಿತು ಮಾತನಾಡುತ್ತಿದ್ದೇವೆ" – ಇದು ಜಕಾರ್ತಾ ವಾರಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲೊಂದರ ಶೀರ್ಷಿಕೆಯಾಗಿದ್ದಿತು. ಅದು ಇಂಡೋನೇಷ್ಯ ಗಣತಂತ್ರದ ಪ್ರಥಮ ರಾಷ್ಟ್ರಾಧ್ಯಕ್ಷರ ವ್ಯಕ್ತಿತ್ವ ಹಾಗೂ ರಾಜಕೀಯ ಚಟುವಟಿಕೆಗಳಿಗೆ ಮೀಸಲಾದ ಲೇಖನವಾಗಿದ್ದಿತು. ಈಚೆಗಿನ ವರ್ಷಗಳಲ್ಲಿ ಇಂಡೋನೇಷ್ಯನ್ ಸಮಾಜದ ಅತ್ಯಂತ ವಿಶಾಲ ವಿಭಾಗಗಳಲ್ಲಿ ಗತಿಸಿದ ನಾಯಕನ ವ್ಯಕ್ತಿತ್ವದಲ್ಲಿ ಇಷ್ಟೊಂದು ಪ್ರಗಾಢ ಆಸಕ್ತಿ ಉಂಟಾಗಿರುವುದು ಮೊದಲ ನೋಟಕ್ಕೆ ವಿಚಿತ್ರವೆಂದು ಕಾಣಬಹುದು. 1965ರ ದುರಂತ ಘಟನೆಗಳ ನಂತರ, ತದನಂತರದ ರಾಜ್ಯಾಧಿಪತಿಗಳ ಪತನಕ್ಕೆ ದಾರಿ ಮಾಡಿಕೊಟ್ಟಂಥ ತೀವ್ರ ರಾಜಕೀಯ ಮುಗ್ಗಟ್ಟಿನ ನಂತರ, ಸುಕಾರ್ನೋರವರ ವಿರೋಧಿಗಳು ಅವರ ರಾಜಕೀಯ ನೀತಿಮಾರ್ಗವನ್ನು ಅಪಖ್ಯಾತಿಗೀಡು ಮಾಡಲು ನಡೆಸಿದ ದೀರ್ಘ ಯತ್ನಗಳನಂತರ ಮತ್ತು ಅವರ ವಿಚಾರಗಳ ಪ್ರಚಾರವನ್ನು ನೇರವಾಗಿ ನಿಷೇಧಿಸಿದನಂತರವೂ, ಕೇವಲ ಹತ್ತು ವರ್ಷಗಳ ಒಳಗೇ ಅವರ ವಿಚಾರಗಳು ಕೇವಲ ಜೀವಂತ ಆಸಕ್ತಿಯ ವಿಷಯವಷ್ಟೆ ಅಲ್ಲ ಅವರ ವಿಚಾರಧಾರಾತ್ಮಕ ಹಾಗೂ ರಾಜಕೀಯ ಪರಂಪರೆಯ ಬಗೆಗೆ ತೀವ್ರ ಚರ್ಚೆಯ ವಿಷಯವೂ ಆಗುವುದು ಎನ್ನುವುದನ್ನು ಊಹಿಸುವುದೂ ಕಷ್ಟವೇ ಸರಿ. ಈ ವಿಶೇಷ ಘಟನೆಗೆ ವಿವರಣೆ ನೀಡಲು ಸ್ಪಷ್ಟವಾಗಿಯೇ ಮೂರು ಪ್ರಶ್ನೆಗಳಿಗೆ ಉತ್ತರ ನೀಡಬೇಕು. ಮೊದಲನೆಯದು: ಸುಕಾರ್ನೋರವರ ಅಭಿಪ್ರಾಯಗಳ ಸಾರ ಏನಾಗಿದ್ದಿತು? ಎರಡನೆಯದು: ಆಧುನಿಕ ಇಂಡೋನೇಷ್ಯದ ಆರ್ಥಿಕ ಸಾಮಾಜಿಕ ಹಾಗೂ ರಾಜಕೀಯ ಬೆಳವಣಿಗೆಯಲ್ಲಿ ಯಾವ ವಿಶೇಷ ಘಟನೆಗಳೂ ಪ್ರಕ್ರಿಯೆಗಳೂ ಜನರನ್ನು ಏನೂ ಈಡೇರಿಸಲ್ಪಡದಿದ್ದಂಥ ಪ್ರಕಲ್ಪನೆಗಳ ಕಡೆಗೆ ತಿರುಗುವಂತೆ ಒತ್ತಾಯಿಸಿರುವುವು? ಇತಿಹಾಸದಲ್ಲಿ ತೀವ್ರ ತಿರುವುಗಳು ಉಂಟಾದಾಗಲೂ ಮತ್ತು ಅತ್ಯಂತ ತೊಡಕಿನ ರಾಜಕೀಯ ಸಮಯಗಳೂ ರಾಜಿಗಳೂ ಸಂಭವಿಸಿದಾಗಲೂ ಸುಕಾರ್ನೋರವರು ಆದ್ಯಂತವೂ ತಮ್ಮ ಇಡೀ ಬಾಳನ್ನು ಮೀಸಲಿರಿಸಿದ್ದಂಥ ವಿಚಾರಗಳಿಗೆ ನಿಷ್ಠರಾಗಿದ್ದುಕೊಂಡಿದ್ದರೂ, ಅವರು ಅವುಗಳನ್ನು ಆಚರಣೆಯಲ್ಲಿ ತರಲು ಏಕೆ ಅಸಮರ್ಥರಾದರು?

ಸುಕಾರ್ನೋರವರು ಏಷ್ಯ ಹಾಗೂ ಆಫ್ರಿಕಗಳ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ, ಅದರ ಯುದ್ಧಾನಂತರ ಬೆಳವಣಿಗೆಯ ಮೊದಲ ಘಟ್ಟದಲ್ಲಿ, ಅತ್ಯಂತ ಸಂಕೀರ್ಣ ಸ್ವರೂಪದಲ್ಲಿ ಹಾಗೂ ಜ್ವಲಂತವಾಗಿ ಕಾಣಿಸಿಕೊಂಡ ವ್ಯಕ್ತಿಗಳಲ್ಲೊಬ್ಬರಾಗಿದ್ದರು. ಲೆನಿನರು ತೊಲ್‌ಸ್ತೋಯ್‌ರ ಮನೋಧರ್ಮದ ವೈರುಧ್ಯಪೂರ್ಣ ಸಾರವನ್ನು ವಿಶ್ಲೇಷಿಸುತ್ತ ಬರೆದರು: "ತೊಲ್‌ಸ್ತೋಯ್‌ರ ಅಭಿಪ್ರಾಯಗಳಲ್ಲಿನ ವೈರುಧ್ಯಗಳು ಅವರ ವ್ಯಕ್ತಿಗತ ಅಭಿಪ್ರಾಯಗಳಲ್ಲಷ್ಟೆ ಅಂತರ್ಗತವಾದ ವೈರುಧ್ಯಗಳಾಗಿರಲಿಲ್ಲ, ಆದರೆ ಸುಧಾರಣಾ ನಂತರ ಯುಗದ ಆದರೆ ಕ್ರಾಂತಿಕಾರಿಪೂರ್ವ ಯುಗದ ರಷ್ಯನ್ ಸಮಾಜದ ನಾನಾ ವರ್ಗಗಳ ಹಾಗೂ ನಾನಾ ವಿಭಾಗಗಳ ಮನೋಧರ್ಮವನ್ನು ನಿರ್ಧರಿಸುತ್ತಿದ್ದಂಥ ಅತ್ಯಂತ ಜಟಿಲವಾದ, ವೈರುಧ್ಯಪೂರ್ಣ ಪರಿಸ್ಥಿತಿಗಳ, ಸಾಮಾಜಿಕ ಪ್ರಭಾವಗಳ ಹಾಗೂ ಚಾರಿತ್ರಿಕ ಪರಂಪರೆಗಳ ಪ್ರತಿಫಲನಗಳಾಗಿದ್ದವು".* ಸುಕಾರ್ನೋರವರ ಮನೋಧರ್ಮದ ವಿಷಯದಲ್ಲೂ ಇದೇ ವಿಶ್ಲೇಷಣ ವಿಧಾನ ಅಷ್ಟೇ ಅನ್ವಯಾರ್ಹ.

ಇಂಡೋನೇಷ್ಯದಲ್ಲಿ ವಸಾಹತು ಕಾಲಾವಧಿಯಲ್ಲಿ ರಾಷ್ಟ್ರೀಯ ಖಾಸಗಿ ಉದ್ಯಮಗಳ ರಚನೆ ಹಾಗೂ ಬೆಳವಣಿಗೆಗಳಿಗೆ ಪರಿಸ್ಥಿತಿಗಳು, ಇತರ ವಸಾಹತುಗಳಿಗೆ ಹೋಲಿಸಿದಂತೆಯೂ, ವಿಶೇಷವಾಗಿ ಪ್ರತಿಕೂಲವಾಗಿದ್ದವು. ಡಚ್ ಸಾಮ್ರಾಜ್ಯಶಾಹಿಗಳು ಬಳಸಿದ ವಿಶೇಷವಾಗಿ ಶೋಷಣಾತ್ಮಕವಾದ ಮರ್ದನ ವಿಧಾನಗಳೇ ಇದಕ್ಕೆ ಕಾರಣ. ಇದರ ಪರಿಣಾಮವೆಂದರೆ ರಾಷ್ಟ್ರೀಯ ಬೂರ್ಷ್ವಾಸಿಯು ಅತ್ಯಂತ ದುರ್ಬಲವಾಗಿದ್ದಿತಷ್ಟೆ ಅಲ್ಲ (ಈ ದೌರ್ಬಲ್ಯವನ್ನು ಇಂದಿಗೂ ಹೋಗಲಾಡಿಸಿಕೊಳ್ಳಲಾಗಿಲ್ಲ), ಇಂಡೋನೇಷ್ಯನ್ ಸಮಾಜದ ವರ್ಗ ವಿಭಜನೆಯೇ ತುಲನಾತ್ಮಕವಾಗಿ ದುರ್ಬಲವಾಗಿದ್ದಿತು, ಆ ಸಮಾಜದ ಬಿಡಿ ಸ್ತರಗಳ ಒಳಗಡೆಯೂ ವಿವಿಧ ಸ್ತರಗಳ ನಡುವೆಯೂ ಸಂಬಂಧಗಳು ಗಡುಸಾದ ಕುಲಪತಿ ಆಡಳಿತ ಪದ್ಧತಿಯದಾಗಿದ್ದವು. 1920ರ ದಶಕದ ಕೊನೆ ಹಾಗೂ 1930ರ ದಶಕದ ಆದಿಯಲ್ಲಿ ಡಚ್ ವಿರೋಧಿ ರಾಷ್ಟ್ರೀಯ ವಿಮೋಚನಾ ಚಳವಳಿಯು ಪ್ರಖರವಾಗಿದ್ದಿತು, ರಾಷ್ಟ್ರೀಯ ಸ್ವಾತಂತ್ರ್ಯದ ಧ್ಯೇಯಗಳು ಎಲ್ಲ ವರ್ಗಗಳನ್ನೂ ಸಾಮಾಜಿಕ ವೃಂದಗಳನ್ನೂ ಒಂದುಗೂಡಿಸಿದ್ದವು ಮತ್ತು ಎಲ್ಲ ರಾಜಕೀಯ ಚಟುವಟಿಕೆಯ ಪ್ರಧಾನೋದ್ದೇಶವಾಗಿದ್ದವು.

ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಅವಧಿಯಲ್ಲಿ ಹೊಸದಾಗಿ ಸ್ವತಂತ್ರಗೊಂಡ ದೇಶಗಳಲ್ಲಿ ರಾಜಕೀಯ ನಾಯಕರ ಒಂದು ಪೀಳಿಗೆಯೇ ಹುಟ್ಟಿ ಬೆಳೆಯಿತು. ಸುಕಾರ್ನೋ ಆ ಪೀಳಿಗೆಗೆ ಸೇರಿದ್ದರು. ರಾಷ್ಟ್ರೀಯ ವಿಮೋಚನೆಯ

*V.I. Lenin, *Collected Works*, Vol. 16, Progress Publishers, Moscow. 1974, p. 325.–ಸಂ.

[illegible] ಅವರೆಲ್ಲ ರಾಜಕಾರಣದ ಹಾಗೂ ಸಾರ್ವಜನಿಕ ವ್ಯವಹಾರಗಳ ಮೂಲೋದ್ದೇಶವಾಗಿತ್ತು. ಅವರು ಇತರೆಲ್ಲ ವಿಚಾರಧಾರೆಗಳನ್ನೂ ರಾಷ್ಟ್ರೀಯವಾದದ ತ್ರಿಪಟ್ಟಕದ ಮೂಲಕ ನೋಡಿದರು. ಈ ರಾಷ್ಟ್ರೀಯವಾದದಿಂದಲೇ ಅವರೆಲ್ಲ ಇತರ ಸಾಮಾಜಿಕ ಪ್ರಕಲ್ಪನೆಗಳೂ ಹುಟ್ಟಿಕೊಂಡವು. ಅವರ ಮತ್ತೂ ಹೆಚ್ಚಿನ ಸೈದ್ಧಾಂತಿಕ ವಿಕಸನವು ದೇಶದ ರಾಷ್ಟ್ರೀಯ-ವಿಮೋಚನಾ ಚಳವಳಿಯ ಬೆಳವಣಿಗೆಯ ಮೇಲೆ ಅವಲಂಬಿಸಿದ್ದಿತಷ್ಟೆ ಅಲ್ಲ, ಪ್ರತಿಯೊಂದು ಘಟ್ಟದಲ್ಲೂ ಸಮಾಜದ ಸ್ಥಿತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ, ಅದರ ಬೆಳವಣಿಗೆಯ ಸತತವಾಗಿ ಬದಲುತ್ತಿದ್ದ ಕೋರಿಕೆಗಳನ್ನು ಗ್ರಹಿಸುವ, ಜನರ ಕಾಲ್ಪನಿಕ ಹಿತಗಳನ್ನಲ್ಲ ನೈಜ ಹಿತಗಳನ್ನು ಕಂಡುಕೊಳ್ಳುವ, ಅವರ ವ್ಯಕ್ತಿನಿಷ್ಠ ಸಾಮರ್ಥ್ಯದ ಮೇಲೆಯೂ ಅವಲಂಬಿಸಿದ್ದಿತು.

ಸುಕಾರ್ನೋರವರ ಸಾಮಾಜಿಕ ಅಭಿಪ್ರಾಯಗಳು ವಸಾಹತುವಾದ ವಿರೋಧಿ ಭಾವನೆಗಳನ್ನಷ್ಟೆ ಅಲ್ಲ, ಬಂಡವಾಳವಾದ ವಿರೋಧಿ ಭಾವನೆಗಳನ್ನೂ ಪ್ರತಿಬಿಂಬಿಸುತ್ತಿದ್ದವು. ಅವು ಪ್ರಧಾನವಾಗಿ ಡಚ್ ವಸಾಹತುವಾದಿಗಳ ವಿರುದ್ಧ ನಿರ್ದೇಶಿತವಾಗಿದ್ದವು. ಆಗಿದ್ದ ಅಮಾನುಷ ಸಾಮಾಜಿಕ ಸಂಬಂಧಗಳಿಗೆ ಡಚ್ ವಸಾಹತುವಾದಿಗಳೇ ಮುಖ್ಯವಾಗಿ ಜವಾಬ್ದಾರರಾಗಿದ್ದರೆಂದು ಕಂಡುಕೊಳ್ಳಲಾಗಿತ್ತು. "ಗೋಟಾಂಗ್-ರೋಯಾಂಗ್" ಸೂತ್ರದ ಮೇಲೆ–ಸಹಕಾರ ಹಾಗೂ ಪರಸ್ಪರ ನೆರವಿನ ಸೂತ್ರದ ಮೇಲೆ–ಆಧರಿಸಿದ್ದ ಇಂಡೋನೇಷ್ಯದ ಗ್ರಾಮೀಣ ಸಮುದಾಯವು ಸುಕಾರ್ನೋರವರಿಗೆ ಸಾಮಾಜಿಕ ಸಂಘಟನೆಯ ಆದರ್ಶರೂಪವಾಯಿತು. "ಇಂಡೋನೇಷ್ಯನ್ ಸಮಾಜವು" ಇಂಡೋನೇಷ್ಯದ್ದೇ ಆದ ಸಮಾಜವಾದದ ಪ್ರಕಲ್ಪನೆಯ ಮೇಲೆ ಆಧರಿಸಿ ಬೆಳೆಯಬೇಕೆಂದು ಅವರು ಪ್ರತಿಪಾದಿಸಿದರು. ಈ ಸಮಾಜವಾದದ ಮಾದರಿಯನ್ನು ಅವರು ಜಾವಾದ ಒಬ್ಬ ಸರಳ ರೈತ ಮರ್ಹಏನ್‌ನ ಹೆಸರಿನಲ್ಲಿ "ಮರ್ಹಏನಿಸಂ" ಎಂದು ಕರೆದರು. ಅಂತಹ ಒಬ್ಬ ರೈತ ವ್ಯಕ್ತಿಯನ್ನು ಸಂಧಿಸಿದುದೇ ಈ ದಿಕ್ಕಿನಲ್ಲಿ ಅವರ ಸೈದ್ಧಾಂತಿಕ ಶೋಧಗಳಿಗೆ ಸ್ಫೂರ್ತಿ ನೀಡಿದ್ದಿತು. ಇಪ್ಪತ್ತರ ದಶಕದಲ್ಲಿ ಸುಕಾರ್ನೋ ತಮ್ಮ ಈ ಪ್ರಕಲ್ಪನೆಯನ್ನು ಈ ಕೆಳಗಿನಂತೆ ನಿರೂಪಿಸಿದರು: "ಮರ್ಹಏನ್ ಎಂಬುವನು ಸೀಮಿತ ಉತ್ಪಾದನಾ ಸಾಧನಗಳನ್ನು ಹೊಂದಿದ ಒಬ್ಬ ವ್ಯಕ್ತಿ. ಸಣ್ಣ ಆಸ್ತಿ, ಅಪರಿಷ್ಕೃತ ಯಂತ್ರ ಮುಟ್ಟುಗಳು ಇವುಗಳನ್ನು ಹೊಂದಿದ ಒಬ್ಬ ಸಣ್ಣ ವ್ಯಕ್ತಿ. ಇವನ ಬಳಿ ಇವನಿಗೆ ಎಷ್ಟು ಬೇಕೋ ಅಷ್ಟು ಆಸ್ತಿ ಇದೆ. ನಮ್ಮ ದೇಶ ಹೀಗೆ ತಮ್ಮ ಹೊಟ್ಟೆಹೊರೆಯ ಕೊಳ್ಳಲಷ್ಟೆ ಶ್ರಮಿಸುತ್ತಿರುವ ಮಿಲಿಯಾಂತರ ಬಡ ಜನರಿಂದ ತುಂಬಿದೆ. ಇವರು ತಮಗಾಗಿಯಷ್ಟೆ ಹೊರತು ಬೇರೆ ಯಾರಿಗಾಗಿಯೂ ಕೆಲಸ ಮಾಡುವುದಿಲ್ಲ. ಇವರ ಮಧ್ಯೆ ಮಾನವ-ಮಾನವ ಶೋಷಣೆ ಇಲ್ಲ. ಈ ಮರ್ಹಏನಿಸಮ್ಮೇ ಆಚರಣೆಯಲ್ಲಿ ಇಂಡೋನೇಷ್ಯದ ಸಮಾಜವಾದ.... ಇದು ನಾವು ನಮ್ಮದೇ

ಇಂಡೋನೇಷ್ಯನ್ ಸ್ವಯಂಅಸ್ತಿತ್ವಕ್ಕೆ ಒಂದಿರುಗುವ ವಿಚಾರಕ್ಕೆ ಮೂರ್ತರೂಪ ಕೊಡುತ್ತದೆ."*

ಇದೊಂದು ಅತ್ಯಂತ ಮಹತ್ವದ ಅಂಶ: ಮಾನವನಿಂದ ಮಾನವನ ಶೋಷಣೆಯನ್ನು ತೊಡೆದು ಹಾಕುವುದು ರಾಷ್ಟ್ರೀಯ ಸ್ವಯಂಅಸ್ತಿತ್ವಕ್ಕೆ ಒಂದಿರುಗಿದಂತೆ. ಸುಕಾರ್ನೋರವರ ಪ್ರಕಾರ ವರ್ಗ ಮರ್ದನವು ಇಂಡೋನೇಷ್ಯನ್ ಸಮಾಜದ ಬೆಳವಣಿಗೆಯ ಉತ್ಪನ್ನವೇ ಅಲ್ಲ, ಅದರೆ ಹೊರಗಿನಿಂದ ತಂದು ಬಿತ್ತಿದ ಬೀಜ. ಆದ್ದರಿಂದ ರಾಷ್ಟ್ರದ ಹಳೆಯ ಮೂಲ ಪರಂಪರೆಗಳ ತಿಳಿವಳಿಕೆಯನ್ನು ಜನರಲ್ಲಿ ಜಾಗೃತಗೊಳಿಸಿದರೆ ಸಾಕು ಎಲ್ಲ ಸಾಮಾಜಿಕ ಸಮಸ್ಯೆಗಳೂ ಪರಿಹಾರವಾಗುತ್ತವೆ.

ಆದರೆ ಸುಕಾರ್ನೋರವರ ವಿಚಾರಗಳು 1917ರಲ್ಲಿ ರಷ್ಯದಲ್ಲಿ ವಿಜಯಗೊಂಡ ಅಕ್ಟೋಬರ್ ಸಮಾಜವಾದಿ ಮಹಾ ಕ್ರಾಂತಿಯೊಂದಿಗೆ ಪ್ರಾರಂಭವಾದ ಹೊಸ ಯುಗದ ವಿಚಾರಗಳಿಂದ ಪ್ರಭಾವಿತವಾಗದೆ ಇರಲು ಸಾಧ್ಯವಿರಲಿಲ್ಲ. ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಚಾರಗಳ ಪ್ರಭಾವ ಜಗತ್ತಿನಾದ್ಯಂತ ಹೆಚ್ಚುತ್ತಿದ್ದಾಗ ಇಂಡೋನೇಷ್ಯ ಪ್ರತ್ಯೇಕವಾಗಿರಲು ಸಾಧ್ಯವಿರಲಿಲ್ಲ. ಸುಕಾರ್ನೋರವರ ಬಂಡವಾಳವಾದ ವಿರೋಧಿ ಹಾಗೂ ಸಮಾನತಾ ಮನೋಧರ್ಮದಲ್ಲಿ, ಇತರ ರಾಷ್ಟ್ರೀಯ-ವಿಮೋಚನಾ ಹೋರಾಟದ ಅವರ ಬಹುಮತೀಯ ಸಹೋದ್ಯೋಗಿಗಳಲ್ಲಿ ಕಂಡುಬರದಂಥ ಹೆಚ್ಚಿನ ರ್‍ಯಾಡಿಕಲಿಸಂ (ತೀವ್ರಗಾಮಿತ್ವ) ಕಂಡುಬರುತ್ತದೆ. ಹಾಗೆ ಅದು ಇತರರ ಮನೋಧರ್ಮಗಳಿಂದ ಪ್ರತ್ಯೇಕವಾದಂಥ ಮನೋಧರ್ಮವಾಗಿದೆ. ಉದಾಹರಣೆಗೆ, 1933ರಲ್ಲಿ ಅವರು ಇಂಡೋನೇಷ್ಯನ್ ಸಮಾಜದಲ್ಲಿ ಬಂಡವಾಳ ಸಂಚಯಕ್ಕಾಗಿ ಯಾವುದೇ ಉದ್ರಿಕ್ತ ಬಯಕೆ ತೋರುವುದಕ್ಕೂ ತಾವು ವಿರೋಧಿಗಳು** ಎಂದು ಬರೆದರು. ಇಂಡೋನೇಷ್ಯದ ಚರಿತ್ರೆಯ ರಥವು "ಇಂಡೋನೇಷ್ಯನ್ ಬಂಡವಾಳವಾದದ ಜಗತ್ತಿಗೆ, ಇಂಡೋನೇಷ್ಯದ ಬೂರ್ಜ್ವಾಸೀಕರಣದ ಜಗತ್ತಿಗೆ ಕರೆದೊಯ್ಯುವಂಥ"*** ಮಾರ್ಗ ಹಿಡಿದಲ್ಲಿ ಅದು ಇಂಡೋನೇಷ್ಯನ್ ಜನರ ಘೋರ ತಪ್ಪಾಗುತ್ತದೆ, ಎಂದು ಎಚ್ಚರಿಕೆ ನೀಡಿದರು. ಸುಕಾರ್ನೋರವರ ಭಾಷಣಗಳಲ್ಲೂ ಲೇಖನಗಳಲ್ಲೂ ಮಾರ್ಕ್ಸ್ ಎಂಗೆಲ್ಸ್ ಹಾಗೂ ಲೆನಿನರ ಕೃತಿಗಳಿಂದ ಅನೇಕಾನೇಕ ಉದ್ಧರಣೆಗಳಿವೆ, ಸೋವಿಯತ್ ಒಕ್ಕೂಟದ ಬೆಳವಣಿಗೆಯ ಅನುಭವಕ್ಕೆ ಅನೇಕ ಉಲ್ಲೇಖ

---

* Bung Karno, *Penjambung Lidah Rakjat Indonesia*, Djakarta, 1966, pp 84-85.–ಸಂ.

** Sukarno, *Indonesia Accuses*, Foreign Literature Publishing House, Moscow, 1956, p. 24 (in Russian).–ಸಂ.

*** Ibid, p. 239.–ಸಂ.

ಗಳಿವೆ. ಸುಕಾರ್ನೋರವರು ಇಂಡೋನೇಷ್ಯನ್ ಶ್ರಮಜೀವಿ ವರ್ಗದ ಹಾಗೂ ಅದರ ಮುಂಚೂಣಿಯಾದ ಕಮ್ಯೂನಿಸ್ಟ್ ಪಾರ್ಟಿಯ ರಾಜಕೀಯ ಪಾತ್ರ ವಹಿಸುತ್ತಿದ್ದುದನ್ನು ಉಪೇಕ್ಷಿಸದಾಗಿದ್ದರು. 1920ರಲ್ಲಿ ಸ್ಥಾಪಿತವಾದ ಇಂಡೋನೇಷ್ಯನ್ ಕಮ್ಯೂನಿಸ್ಟ್ ಪಾರ್ಟಿಯು ಆ ದಶಕದ ಮಧ್ಯಭಾಗದ ಹೊತ್ತಿಗೆ ದೇಶದ ವಿಮೋಚನಾ ಚಳವಳಿಯಲ್ಲಿ ಒಂದು ಅಗ್ರಗಾಮಿ ಶಕ್ತಿಯಾಗಿ ಬೆಳೆದಿದ್ದಿತು, ವಸಾಹತುವಾದಿಗಳ ವಿರುದ್ಧ ರಾಷ್ಟ್ರವ್ಯಾಪಿ ಬಂಡಾಯದ ನಾಯಕನಾಗಿದ್ದಿತು. ಆಗಷ್ಟೆ ತಾವು ಇಂಡೋನೇಷ್ಯನ್ ಜನರ ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿದ್ದ ಮೂರು ಪ್ರಧಾನ ಸೈದ್ಧಾಂತಿಕ ಹಾಗೂ ರಾಜಕೀಯ ಪ್ರವೃತ್ತಿಗಳೂ, ಅಂದರೆ ರಾಷ್ಟ್ರೀಯವಾದಿ ಪ್ರವೃತ್ತಿ, ಧಾರ್ಮಿಕ ಪ್ರವೃತ್ತಿ (ಪ್ರಧಾನವಾಗಿ ಮುಸ್ಲಿಮ್) ಮತ್ತು ಕಮ್ಯೂನಿಸ್ಟ್ ಪ್ರವೃತ್ತಿ. ಈ ಮೂರು ಮುಖ್ಯ ಪ್ರವೃತ್ತಿಗಳೂ ಒಂದುಗೂಡುವುದು ಅತ್ಯವಶ್ಯವೆಂದು ಕಂಡುಕೊಂಡರೆಂದು ಸುಕಾರ್ನೋ ಬರೆದಿದ್ದಾರೆ. ಇದು ತದನಂತರ 'NASAKOM' (ನಸಕೋಮ್) ಪ್ರಕಲ್ಪನೆ ರೂಪುಗೊಳ್ಳುವುದಕ್ಕೆ ಕಾರಣವಾಯಿತು. ಇದು ಇಂಡೋನೇಷ್ಯನ್ ಭಾಷೆಯ 'nasionalis,' 'agama' (ಧರ್ಮ) ಹಾಗೂ 'komunis' ಎಂಬ ಪದಗಳ ಮೊದಲ ಅಕ್ಷರಗಳಿಂದ ರಚಿತವಾಗಿದೆ. ರಾಷ್ಟ್ರೀಯವಾದವು ಮೊದಲ ಸ್ಥಾನ ಪಡೆದುದರಲ್ಲಿ ಆಶ್ಚರ್ಯವಿಲ್ಲವೆನ್ನಿ. ಇಂಡೋನೇಷ್ಯದ ಜನಸಂಖ್ಯೆಯಲ್ಲಿ ಶೇ. 90ರಷ್ಟು ಜನರು ಇಸ್ಲಾಮ್ ಧರ್ಮಾವಲಂಬಿಗಳಾಗಿದ್ದರೂ, ಅದು ರಾಷ್ಟ್ರೀಯ ಪ್ರವೃತ್ತಿಗಳಲ್ಲೊಂದಷ್ಟೆ ಎಂದು ಸೂಚಿಸಿರುವುದರಲ್ಲೂ ಆಶ್ಚರ್ಯವಿಲ್ಲ. ವಾಸ್ತವಾಂಶವೆಂದರೆ, ಸುಕಾರ್ನೋರವರೂ ಅವರ ಅನುಯಾಯಿಗಳೂ ಪ್ರಧಾನವಾಗಿ ಮುಸ್ಲಿಮರೇ ಆಗಿದ್ದರೂ ಅವರು ಎಂದೂ ಇಂಡೋನೇಷ್ಯದಲ್ಲಿ ದೇವಪ್ರಭುತ್ವವಾದಿ ಇಸ್ಲಾಮ್ ರಾಜ್ಯ ಸ್ಥಾಪಿತವಾಗುವುದನ್ನು ಬಯಸಲಿಲ್ಲ. ಸ್ವಾತಂತ್ರ್ಯಕ್ಕೆ ಮುನ್ನವೂ ಅನಂತರವೂ ಈ ನಿಟ್ಟಿನಲ್ಲಿ ಇತರರು ಮಾಡಿದ ಯಾವುದೇ ಯತ್ನವನ್ನೂ ಅವರು ವಿರೋಧಿಸಿದರು. ಆದರೆ ಸುಕಾರ್ನೋರವರನ್ನು ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಅನೇಕ ವ್ಯಕ್ತಿಗಳಿಗೂ ಮೇಲೆ ಇರಿಸಿದಂಥ ಮುಖ್ಯ ವಿಷಯವೆಂದರೆ, ಕಾರ್ಮಿಕರ ಚಳವಳಿಯ ಸಾಮರ್ಥ್ಯವನ್ನು, ಅದು ತನ್ನದೇ ವಿಚಾರಧಾರೆಯನ್ನೂ ರಾಜಕೀಯ ಪಾರ್ಟಿಯನ್ನೂ ಹೊಂದಿರುವ ಅದರ ಚಾರಿತ್ರಿಕ ಧ್ಯೇಯವನ್ನು, ಅವರು ಮನ್ನಿಸಿದ್ದುದು. ಇಡೀ ರಾಷ್ಟ್ರಕ್ಕೆ ಸಂಬಂಧಿಸಿದಂತೆ ಶ್ರಮಜೀವಿ ವರ್ಗದ ಧ್ಯೇಯಕಾರ್ಯವನ್ನು ಸುಕಾರ್ನೋರವರು ಪೂರ್ಣವಾಗಿ ಅರಿತಿದ್ದುದರ ಸಂಕೇತವೇನೂ ಇದಿನ್ನೂ ಆಗಿರಲಿಲ್ಲ. ಆದರೆ ಇಲ್ಲೇ ಸುಕಾರ್ನೋರವರು ಅವರ ಇತರ ಸಾರ್ವತ್ರಿಕ ರಾಷ್ಟ್ರೀಯ-ಪಾಪ್ಯುಲಿಸ್ಟ್ (national-populist) ವಿಚಾರಗಳ ಪದ್ಧತಿಗೆ ಹೋಲಿಸಿದಂತೆ ಒಂದು ಹೆಜ್ಜೆ ಮುಂದಿಟ್ಟಿದ್ದರು ಎಂಬುದರಲ್ಲಿ ಸಂದೇಹವಿಲ್ಲ. ನಾವು ಇಲ್ಲಿ ಈ ಪದವನ್ನು ಉಪಯೋಗಿ-

ಸಿರುವುದು ಸಮರ್ಥನೀಯವೆಂದು ಪರಿಗಣಿಸುತ್ತೇವೆ (ಸುಕಾರ್ನೋರವರೇ ಮರ್ಹಏನಿಸಂಅನ್ನು ಇಂಡೋನೇಷ್ಯ ನೆಲಕ್ಕೆ ಅನ್ವಯಿಸಿದ ಮಾರ್ಕ್ಸ್‌ವಾದವನ್ನಾಗಿ ಭಾವಿಸಿದ್ದರೂ), ಏಕೆಂದರೆ, ಲೆನಿನರು ಎತ್ತಿ ತೋರಿಸಿದಂತೆ ಪಾಪ್ಯುಲಿಸಂನ (ರಷ್ಯದಲ್ಲಿ ನರೋದಿಸಂ ಎಂಬ ಹೆಸರಿನ) ಎಲ್ಲ ಮುಖ್ಯ ಲಕ್ಷಣಗಳೂ ಸುಕಾರ್ನೋರವರ ಸಿದ್ಧಾಂತದ ವಿಶಿಷ್ಟ ಲಕ್ಷಣಗಳೂ ಆಗಿದ್ದವು (ಸಹಜವಾಗಿಯೇ 19ನೆಯ ಶತಮಾನದ ರಷ್ಯ ಹಾಗೂ 20ನೆಯ ಶತಮಾನದ ಮೊದಲರ್ಧದ ಇಂಡೋನೇಷ್ಯಗಳ ನಡುವಿನ ಪರಿಸ್ಥಿತಿಗಳಲ್ಲಿ ವ್ಯತ್ಯಾಸವಿದ್ದುದರಿಂದಾಗಿ ಅವಶ್ಯ ಮಾರ್ಪಾಟುಗಳೊಂದಿಗೆ ಈ ಹೋಲಿಕೆಯನ್ನು ಪರಿಗಣಿಸಬೇಕೆನ್ನಿ). "ನರೋದಿಸಂ ನಮ್ಮ ಅರ್ಥದಲ್ಲಿ ಈ ಕೆಳಗಿನ ಮೂರು ಮುಖ್ಯ ಲಕ್ಷಣಗಳನ್ನು ಹೊಂದಿರುತ್ತದೆ: (1) ರಷ್ಯದಲ್ಲಿ ಬಂಡವಾಳವಾದವು ಅವನತಿಯನ್ನು, ತಿರೋಗಮನವನ್ನು, ಪ್ರತಿನಿಧಿಸುತ್ತಿದ್ದಿತು ಎಂಬ ನಂಬಿಕೆ. ಆದ್ದರಿಂದಲೇ ಯುಗಾಂತರಗಳ ಹಳತಿನ ಅಡಿಪಾಯಗಳನ್ನು ಬಂಡವಾಳವಾದವು ಒಡೆಯುವುದನ್ನು 'ನಿಧಾನಿಸುವ,' 'ನಿಲ್ಲಿಸುವ,' 'ತಡೆ ಹಿಡಿಯುವ' ಒತ್ತಾಸೆ ಹಾಗೂ ಬಯಕೆ ಮತ್ತು ಅಂಥವೇ ಪ್ರತಿಗಾಮಿ ಕೂಗುಗಳು. (2) ಒಟ್ಟಿನಲ್ಲಿ ರಷ್ಯನ್ ಆರ್ಥಿಕ ಪದ್ಧತಿಯು, ನಿರ್ದಿಷ್ಟವಾಗಿ ಗ್ರಾಮಸಮುದಾಯ, ಆರ್ಟೆಲ್, ಇತ್ಯಾದಿಗಳನ್ನು ಒಳಗೊಂಡಿದ್ದ ರೈತಾಪಿ ಆರ್ಥಿಕ ಪದ್ಧತಿಯು, ತನ್ನದೇ ವಿಶಿಷ್ಟ ಲಕ್ಷಣಗಳನ್ನು ಹೊಂದಿದ್ದಿತು, ಎಂಬ ನಂಬಿಕೆ. ರಷ್ಯನ್ ಆರ್ಥಿಕ ಸಂಬಂಧಗಳಿಗೆ ವಿಭಿನ್ನ ಸಾಮಾಜಿಕ ವರ್ಗಗಳಿಗೆ ಹಾಗೂ ಅವುಗಳ ಘರ್ಷಣೆಗಳಿಗೆ ಸಂಬಂಧಿಸಿ ಆಧುನಿಕ ವಿಜ್ಞಾನವು ನಿರೂಪಿಸಿದಂಥ ಪ್ರಕಲ್ಪನೆಗಳನ್ನು ಅನ್ವಯಿಸುವುದು ಅವಶ್ಯವಿಲ್ಲ. ಗ್ರಾಮಸಮುದಾಯದ ರೈತಾಪಿ ವರ್ಗವನ್ನು ಬಂಡವಾಳವಾದಕ್ಕಿಂತ ಹೆಚ್ಚು ಉನ್ನತವಾದುದನ್ನಾಗಿ ಉತ್ತಮವಾದುದನ್ನಾಗಿ ಭಾವಿಸಲಾಗುತ್ತದೆ. 'ಅಡಿಪಾಯಗಳನ್ನು' ಆದರ್ಶೀಕರಿಸುವ ಮನೋವೃತ್ತಿಯನ್ನು ಪ್ರದರ್ಶಿಸಲಾಗುತ್ತದೆ. ಪ್ರತಿಯೊಂದು ಸರಕು ಹಾಗೂ ಬಂಡವಾಳವಾದಿ ಅರ್ಥಿಕತೆಯ ವಿಶಿಷ್ಟ ಲಕ್ಷಣವಾದ ವೈರುಧ್ಯಗಳು ರೈತಾಪಿ ಜನರ ಮಧ್ಯೆಯೂ ಇರುವುದನ್ನು ಅಲ್ಲಗಳೆಯಲಾಗುತ್ತದೆ ಇಲ್ಲವೇ ತೇಲಿಸಿಬಿಡಲಾಗುತ್ತದೆ; ಈ ವೈರುಧ್ಯಗಳಿಗೂ ಬಂಡವಾಳಶಾಹಿ ಕೈಗಾರಿಕೆ ಹಾಗೂ ಬಂಡವಾಳಶಾಹಿ ಕೃಷಿಯಲ್ಲಿನ ಅವುಗಳ ಹೆಚ್ಚು ವಿಕಸಿತ ರೂಪಗಳಿಗೂ ನಡುವೆ ಸಂಬಂಧವಿರುವುದನ್ನು ಅಲ್ಲಗಳೆಯಲಾಗುತ್ತದೆ. (3) ಒಂದು ಕಡೆ ದೇಶದ 'ಬುದ್ಧಿಜೀವಿಗಳು,' ಶಾಸನಾಂಗ ಹಾಗೂ ರಾಜಕೀಯ ಸಂಸ್ಥೆಗಳು ಇವುಗಳಿಗೂ ಇನ್ನೊಂದು ಕಡೆ ನಿರ್ದಿಷ್ಟ ಸಾಮಾಜಿಕ ವರ್ಗಗಳ ವಸ್ತುಹಿತಗಳಿಗೂ ನಡುವೆ ಇರುವ ಸಂಬಂಧವನ್ನು ಉಪೇಕ್ಷಿಸುವುದು."* ಒಟ್ಟಿನಲ್ಲಿ ಪಾಪ್ಯುಲಿಸಂ, ಲೆನಿನರು ರಷ್ಯನ್ ನರೋದ್ನಿಕ್

* V.I. Lenin, *Collected Works*, Vol. 2, Progress Publishers, Moscow, 1977, pp. 513-14.–ಸಂ.

ಬಿಗೆ ಸುಬುಧಿ ಗಮನಿಸುವುತೆ.* ರಾಷ್ಟ್ರೀಯವಾದದ ಕೆಲವು ಲಕ್ಷಣಗಳಿಗೆ ತುಂಬ ಸಮೀಪ ಬರುತ್ತವೆ. ಸುಕಾರ್ನೋರವರ ವಿಷಯದಲ್ಲಿ ಇದು ಇನ್ನೂ ಹೆಚ್ಚು ಲಾಕ್ಷಣಿಕವಾಗಿದ್ದಿತು. ಅವರ ರಾಷ್ಟ್ರೀಯವಾದವು ಸಾಮ್ರಾಜ್ಯಶಾಹಿ ವಿರೋಧಿ ನೆಲದ ಮೇಲೆ ಬೆಳೆದಿದ್ದಿತು. ಅನೇಕ ಶತಮಾನಗಳ ವಸಾಹತುಶಾಹಿ ಮರ್ದನ, ಅವನತಿ ಹಾಗೂ ಬಡತನಗಳಿಂದ ಜರ್ಝರಿತವಾಗಿದ್ದ ದೇಶದಲ್ಲಿ ಬೆಳೆದಿದ್ದಿತು. ಅದು ಸುಸ್ಪಷ್ಟವಾದ ಹಾಗೂ ಸಮರಶೀಲವಾದ ವಸಾಹತು ವಿರೋಧಿ ಒಲವನ್ನು ಹೊಂದಿದ್ದಿತು. ಇದರಲ್ಲೇ ಅಗಾಧ ಪ್ರಗತಿಶೀಲ ಅಂತಃಶಕ್ತಿಯ ಆಕರಗಳಲ್ಲೊಂದು ಇದ್ದುದು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಮತ್ತು ಸಾಮ್ರಾಜ್ಯಶಾಹಿ ದುರಾಕ್ರಮಣವನ್ನು ಎದುರಿಸುವ ಸಮಯದಲ್ಲಿ ಸುಕಾರ್ನೋರವರ ಚಟುವಟಿಕೆ ಈ ಅಂತಃಶಕ್ತಿಯನ್ನು ಹೊಂದಿದ್ದಿತು. ರಷ್ಯನ್ ನರೋದ್ನಿಕ್‌ರಂತಲ್ಲದೆ ಇವರು ಈ ಅರ್ಥದಲ್ಲಿ ಇಂಡೋನೇಷ್ಯದಲ್ಲಿ ಮೊದಲಿಗರೇನೂ ಆಗಿರಲಿಲ್ಲ. ಇವರಿಗೂ ಮುನ್ನ, ಶತಮಾನದ ಆರಂಭದಲ್ಲಿ, ಮುಸ್ಲಿಮ್ ರಾಷ್ಟ್ರೀಯ ಚಳವಳಿಯೂ 1920ರ ದಶಕದಲ್ಲಿ ಇಂಡೋನೇಷ್ಯದ ಕಮ್ಯೂನಿಸ್ಟ್ ಪಾರ್ಟಿಯೂ ಇಂತಹ ವಿಚಾರ ಮಾಡಿದ್ದವು. ನಿಜ, ಒಂದೊಂದೂ ತನ್ನದೇ ನೆಲೆಗಳಿಂದ ಮಾಡಿದ್ದವು. ಆದರೆ ಡಚ್ಚರು 1925-1926ರಲ್ಲಿ ವಸಾಹತು ವಿರೋಧಿ ಬಂಡಾಯವನ್ನು ಹತ್ತಿಕ್ಕಿದನಂತರ ಕಮ್ಯೂನಿಸ್ಟರು 1945ರ ಕ್ರಾಂತಿಯವರೆಗೂ ಭೂಗತರಾಗಿಯೇ ಇದ್ದರು. ಅವರು ನೇರವಾಗಿ ಜನರೊಂದಿಗೆ ಸಂಪರ್ಕ ಬೆಳೆಸುವ ಅವಕಾಶ ಕಮ್ಮಿ ಇದ್ದಿತು. ಸುಕಾರ್ನೋರವರಿಗೆ ಇವನ್ನು ಮಾಡಲು ವಸಾಹತು ಅಧಿಕಾರಿಗಳ ಕಿರುಕುಳವಿದ್ದರೂ ಹೆಚ್ಚಿನ ಅವಕಾಶವಿದ್ದಿತು. ತತ್ಫಲವಾಗಿ ತುಂಬ ಕಾಲದವರೆಗೆ ಬಂಡವಾಳವಾದದ ಬಗೆಗೆ ಟೀಕೆ (ಅದೊಂದು ವಿದೇಶದಿಂದ ಬಂದ ವಿದ್ಯಮಾನ ಎಂದೇ ಹೆಚ್ಚಾಗಿ ಟೀಕೆ ಮಾಡಿದರೂ) ಸುಕಾರ್ನೋ ಮತ್ತವರ ಬೆಂಬಲಿಗರಿಂದಷ್ಟೆ ಬಂದಿತು. ಇದೂ ರಾಷ್ಟ್ರೀಯ ನಾಯಕರ ವಿಚಾರಗಳನ್ನು ಹೆಚ್ಚು ಆಕರ್ಷಿತವನ್ನಾಗಿ ಮಾಡಿದ್ದಿತು. ಕೊನೆಯದಾಗಿ, ಮೂರನೆಯ, ಅದರೂ ಕಮ್ಮಿಯೇನೂ ಪ್ರಾಮುಖ್ಯವಲ್ಲದ, ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯ ಏಕತೆಯ ವಿಚಾರವು ಸುಕಾರ್ನೋರವರ ಭಾಷಣಗಳಲ್ಲೆಲ್ಲ ಅವಶ್ಯ ಎಳೆಯಂತೆ ಹಾದುಹೋಗಿದ್ದಿತು. ಅದು 1945ರ ರಾಷ್ಟ್ರೀಯ ಕ್ರಾಂತಿಯವರೆಗಷ್ಟೆ ಅಲ್ಲ ವಸಾಹತುವಾದಿಗಳನ್ನು ದೇಶದಿಂದ ಹೊರಹಾಕಿದನಂತರವೂ ಅನೇಕ ವರ್ಷಗಳ ಕಾಲ ತನ್ನ ತಥ್ಯತೆಯನ್ನು ಉಳಿಸಿಕೊಂಡಿದ್ದಿತು. ದೇಶವು ವಿಮೋಚನೆಗೊಳ್ಳುವ ಹೊತ್ತಿನಲ್ಲಿದ್ದಾಗ ಸುಕಾರ್ನೋ ಈ ಚಳವಳಿಗೆ ದೇಶದ ಎಲ್ಲ ಶಕ್ತಿಗಳನ್ನೂ ಒಂದುಗೂಡಿಸಿ ವಸಾಹತು ಆಳ್ವಿಕೆಯನ್ನು ಉರುಳಿಸಿ ಸ್ವಾತಂತ್ರ್ಯ ಸಾಧಿಸಿಕೊಳ್ಳಲು ಸಮರ್ಥ

* ಅದೇ ಗ್ರಂಥ, ಪು. 512.–ಸಂ.

ವಾದಂಥ ಒಂದು ವೇದಿಕೆಯನ್ನು ನಿರ್ಮಿಸಿಕೊಟ್ಟ ರಾಷ್ಟ್ರೀಯ-ವಿಮೋಚನಾ ಚಳವಳಿಯ ಏಕೈಕ ವ್ಯಕ್ತಿಯಾಗಿದ್ದರು. ಪಂಚಶೀಲ ಸೂತ್ರಗಳನ್ನು ನಿರ್ಮಿಸುವುದರಲ್ಲೂ ಅವರು ಪ್ರಮುಖ ಪಾತ್ರ ನಿರ್ವಹಿಸಿದರು. ಪಂಚಶೀಲ ಸೂತ್ರಗಳು ಇಂಡೋನೇಷ್ಯನ್ ರಾಜ್ಯದ ಅಧಿಕೃತ ಸೈದ್ಧಾಂತಿಕ ಅಭಿಪ್ರಾಯಗಳಾದವು. 1945ರ ಜೂನ್ 1ರಂದು ಇಂಡೋನೇಷ್ಯದ ಸ್ವಾತಂತ್ರ್ಯ ಸಿದ್ಧತಾ ಆಯೋಗದ ಮುಂದೆ ಮಾತನಾಡುತ್ತ ಸುಕಾರ್ನೋರವರು, ಈ ಸೂತ್ರಗಳು ಇಂಡೋನೇಷ್ಯನ್ ರಾಷ್ಟ್ರೀಯವಾದ, ಅಂತರರಾಷ್ಟ್ರೀಯವಾದ ಅಥವಾ ಮಾನವತಾವಾದ, ಚರ್ಚೆ ಅಥವಾ ಪ್ರಜಾಪ್ರಭುತ್ವ, ಸಾಮಾಜಿಕ ಏಳಿಗೆ, ದೇವರಲ್ಲಿ ಸಹನೀಯ ಸಾಂಸ್ಕೃತಿಕ ನಂಬಿಕೆ, ಇವುಗಳಾಗಿರಬೇಕೆಂದು ಹೇಳಿದರು.* ಪಂಚಶೀಲವೂ ಈ ಸೂತ್ರಗಳ ಮೇಲೆ ಆಧರಿಸಿ 1945ರ ಆಗಸ್ಟ್‌ನಲ್ಲಿ ಜಾರಿಗೆ ತಂದ ಸಂವಿಧಾನವೂ, ಸ್ಥೂಲ ಮಾತುಗಳಲ್ಲಷ್ಟೆ ನಿರೂಪಿಸಲ್ಪಟ್ಟಿದ್ದವು. ಅವುಗಳನ್ನು ಪ್ರಾಯೋಗಿಕವಾಗಿ ಜಾರಿಗೆ ತರುವುದೂ, ಅವಕ್ಕೆ ನಿಜವಾದ ತಿರುಳು ತುಂಬುವುದೂ, ಸ್ವತಂತ್ರ ಇಂಡೋನೇಷ್ಯ ಆಯ್ದುಕೊಂಡ ನಿಜವಾದ ಮಾರ್ಗದ ಮೇಲೆ ಮತ್ತು ಈ ಮಾರ್ಗದ ಸಾಮಾಜಿಕ-ರಾಜಕೀಯ ದಿಕ್ಸೂಚಿಯನ್ನು ಯಾವ ವರ್ಗಶಕ್ತಿಗಳು ನಿರ್ಧರಿಸುತ್ತಿದ್ದವು ಎನ್ನುವುದರ ಮೇಲೆ ಸಂಪೂರ್ಣವಾಗಿ ಅವಲಂಬಿಸಿದ್ದವು.

1945ರ ಸಂವಿಧಾನವು – ಇದು ಇಂದೂ ಜಾರಿಯಲ್ಲಿದೆ – ಕಾರ್ಯಾಂಗದ ಅಧಿಕಾರಿಗಳಿಗೆ ವ್ಯಾಪಕ ಅಧಿಕಾರಗಳನ್ನು ನೀಡಿತು. ಅವರ ಮೇಲೆ ಶಾಸಕಾಂಗದ ನಿಯಂತ್ರಣ ಸಾಪೇಕ್ಷವಾಗಿದ್ದಿತು. ರಾಷ್ಟ್ರಾಧ್ಯಕ್ಷರು ಪ್ರಧಾನಿಯೂ ಆಗಿದ್ದರು, ಸಶಸ್ತ್ರ ದಳಗಳ ಸರ್ವೋಚ್ಚ ದಂಡನಾಯಕರೂ ಆಗಿದ್ದರು. ಶಾಸನ ಮಾಡುವಲ್ಲೂ ಅನುದಿನ ದೇಶವನ್ನು ನಡೆಸುವುದರಲ್ಲೂ ಇವರು ವ್ಯಾಪಕ ವಿಶೇಷ ಹಕ್ಕುಗಳನ್ನು ಹೊಂದಿದ್ದರು. ಸ್ವತಂತ್ರ ಇಂಡೋನೇಷ್ಯ ಗಣತಂತ್ರದ ಪ್ರಥಮ ರಾಷ್ಟ್ರಾಧ್ಯಕ್ಷರನ್ನು ಆಯ್ಕೆ ಮಾಡುವಲ್ಲಿ ಹೆಚ್ಚಿಗೆ ಚರ್ಚೆಯ ಅವಶ್ಯಕತೆಯೇನೂ ಇರಲಿಲ್ಲ. ಸುಕಾರ್ನೋ ಒಬ್ಬರಷ್ಟೆ ಈ ಪದವಿಗೆ ಹಕ್ಕುದಾರರಾಗಿದ್ದರು. ಅವರು ಇಪ್ಪತ್ತಕ್ಕೂ ಹೆಚ್ಚು ವರ್ಷಗಳ ಸ್ವಾತಂತ್ರ್ಯ ಹೋರಾಟದ ಅನುಭವ ಪಡೆದಿದ್ದರು. ಅವರ ವಿಚಾರಗಳನ್ನು ರಾಷ್ಟ್ರೀಯ ಆಂದೋಳನದಲ್ಲಿ ಭಾಗವಹಿಸಿದ ವಿಶಾಲ ವ್ಯಾಪ್ತಿಯ ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳು ಒಪ್ಪಿಕೊಂಡಿದ್ದವು.**

* See Soekarno, *The Birth of Pantjasila*, Issued by the Ministry of Information, Republic of Indonesia, Djakarta, 1958, p. 28.–ಸಂ.

** ಸುಕಾರ್ನೋರವರು ಅಧಿಕಾರದಲ್ಲಿದ್ದ ಕಾಲಾವಧಿಯಾದ್ಯಂತ ಅವರ ವಿಚಾರಗಳ ಹಾಗೂ ನೀತಿಗಳ ಹಂತಹಂತದ ಪರಿಶೀಲನೆ ಮಾಡುವುದು ಈ ಲೇಖನದ ಗುರಿಯಲ್ಲ.

ಒಮ್ಮೆ ರಾಷ್ಟ್ರಾಧಿಪತಿಗಳಾದ ಮೇಲೆ ಸುಕಾರ್ನೋರವರು ತಾವು ಬಾಳಿನುದ್ದಕ್ಕೂ ರೂಪಿಸಿಕೊಂಡು ಬೋಧಿಸಿಕೊಂಡು ಬಂದಿದ್ದ ಸಾಮಾಜಿಕ ಸಾಮರಸ್ಯ ಹಾಗೂ ವರ್ಗ ಸಹಕಾರದ ಧ್ಯೇಯಗಳನ್ನು ಶ್ರದ್ಧೆಯಿಂದ ಕಾರ್ಯಗತಗೊಳಿಸಲು ತೊಡಗಬಹುದಿದ್ದಿತು. ರಾಜಕೀಯ ನಾಯಕರಾಗಿ ತಾವು ಗಳಿಸಿಕೊಂಡಿದ್ದ ಪ್ರಭಾವದ ಮೇಲೆ ಅವರು ಅವಲಂಬಿಸಿರಬಹುದಿದ್ದಿತು. 1945-1948ರಲ್ಲಿ ವಸಾಹತು ಮರಾಕ್ರಮಣವನ್ನು ಹಿಮ್ಮೆಟ್ಟಿಸಿದನಂತರವಂತೂ ಅವರ ಪ್ರಭಾವ ಇನ್ನೂ ಹೆಚ್ಚು ಬೆಳೆದಿದ್ದಿತು. ಜಾಗತಿಕ ಕ್ಷೇತ್ರದಲ್ಲಿ ಇಂಡೋನೇಷ್ಯ ತಳೆದ ಸಾಮ್ರಾಜ್ಯವಾದ ವಿರೋಧಿ ನಿಲುವು, ಅದರಲ್ಲೂ ವಿಶೇಷವಾಗಿ 1955ರಲ್ಲಿ ಏಷ್ಯ ಮತ್ತು ಆಫ್ರಿಕ ದೇಶಗಳ ಬಾಂಡುಂಗ್ ಸಮ್ಮೇಳನದನಂತರ, ದೇಶಕ್ಕೂ ಅದರ ನಾಯಕನಿಗೂ ವ್ಯಾಪಕ ಅಂತರರಾಷ್ಟ್ರೀಯ ಮನ್ನಣೆ ದೊರಕಿಸಿ ಕೊಟ್ಟಿದ್ದಿತು. ಸುಕಾರ್ನೋರವರು ಈ ವೇದಿಕೆಯ ಮುಖ್ಯ ಸಂಘಟಕರೊಬ್ಬರಾಗಿದ್ದರಷ್ಟೆ, ಅಲ್ಲ ಆ ಚಾರಿತ್ರಾರ್ಹ ಸಮ್ಮೇಳನದ ಸೈದ್ಧಾಂತಿಕ ಸ್ಫೂರ್ತಿದಾಯಕರೂ ಆಗಿದ್ದರು. ಈ ಸಮ್ಮೇಳನವು ರಾಜ್ಯಗಳ ನಡುವೆ ಶಾಂತಿಯುತ ಸಹಅಸ್ತಿತ್ವ ಹಾಗೂ ಸಹಕಾರದ ಹತ್ತು ಸೂತ್ರಗಳನ್ನು ಅಂಗೀಕರಿಸಿತು. ಈ ಸೂತ್ರಗಳು ಇಂದೂ ಸಂಗತವಾಗಿವೆ.

ಗೃಹ ನೀತಿ ಕ್ಷೇತ್ರದಲ್ಲೇ ಸುಕಾರ್ನೋರವರು ಮುಖ್ಯ ತೊಂದರೆಗಳನ್ನು ಎದುರಿಸಬೇಕಾಗಿದ್ದುದು. ಐವತ್ತರ ದಶಕದ ಮಧ್ಯಭಾಗದಲ್ಲಿ ಇಂಡೋನೇಷ್ಯದಲ್ಲಿ ಪರಿಸ್ಥಿತಿ ತುಂಬ ತೊಡಕಾಯಿತು. ವಿವಿಧ ಪಾರ್ಟಿಗಳ ನಡುವೆ ತಿಕ್ಕಾಟ ಹೆಚ್ಚಿತು, ದ್ವೀಪಗಳಲ್ಲಿ ಪ್ರತಿಗಾಮಿ ಪ್ರತ್ಯೇಕತಾ ಬಂಡಾಯಗಳು ಜರುಗತೊಡಗಿದವು. ಮೂಲತಃ ಈ ತೊಂದರೆಗಳು ಭವಿಷ್ಯತ್ತಿನಲ್ಲಿ ಇಂಡೋನೇಷ್ಯನ್ ಸಮಾಜ ಹೇಗೆ ವಿಕಾಸಗೊಳ್ಳಬೇಕು ಎಂಬ ಬಗೆಗಿದ್ದ ಭಿನ್ನಾಭಿಪ್ರಾಯಗಳಿಂದ ಉಂಟಾಗಿದ್ದವು. ಈ ಹಿನ್ನೆಲೆಯಲ್ಲಿ 1955ರಲ್ಲಿ ಜರುಗಿದ ಪಾರ್ಲಿಮೆಂಟರಿ ಚುನಾವಣೆಗಳನ್ನೂ 1957-1958ರಲ್ಲಿ ಜರುಗಿದ ಸ್ಥಳೀಯ ಚುನಾವಣೆಗಳನ್ನೂ ಪರಿಶೀಲಿಸಬೇಕು. ಇವು ಸಾರ್ವಜನಿಕಾಭಿಪ್ರಾಯ ಸಾಮಾನ್ಯ ಎಡಪಂಥದತ್ತ ವಾಲಿದ್ದುದನ್ನು ಪ್ರತಿಬಿಂಬಿಸಿದವು. ಇಂಡೋನೇಷ್ಯದ ಕಮ್ಯೂನಿಸ್ಟ್ ಪಾರ್ಟಿಯೂ ಇತರ ಪಾರ್ಟಿಗಳೂ ವೃಂದಗಳೂ ಸಾಮ್ರಾಜ್ಯವಾದ ವಿರೋಧಿ ಹಾಗೂ ಪ್ರಜಾಪ್ರಭುತ್ವ ಮತ್ತು ಆಮೂಲಾಗ್ರ ಸಾಮಾಜಿಕ ಬದಲಾವಣೆಗಳ ಪರ ಮಾತನಾಡುತ್ತ ಜನಪ್ರಿಯತೆ ಹೆಚ್ಚಿಸಿಕೊಂಡಿದ್ದವು.

ಗಣತಂತ್ರದ ಭವಿಷ್ಯತ್ತಿನ ಪ್ರಶ್ನೆ ನಿರ್ಧರಿತವಾಗುತ್ತಿದ್ದಿತೆಂಬ ವಾಸ್ತವಾಂಶವನ್ನು ಸುಕಾರ್ನೋ ಉಪೇಕ್ಷಿಸವಾಗಿದ್ದರು. ಇಂಡೋನೇಷ್ಯದ ರಾಷ್ಟ್ರಾಧಿಪತಿಯಾಗಿ ದೇಶ ಯಾವ ಮಾರ್ಗ ಆಯ್ದುಕೊಳ್ಳಬೇಕು ಎಂಬ ಪ್ರಶ್ನೆಯೂ ಅವರ ಮುಂದಿದ್ದಿತು. ಅವರು ಪ್ರತ್ಯೇಕತಾವಾದಿಗಳನ್ನು ನಿಸ್ಸಂದಿಗ್ಧವಾಗಿ ಖಂಡಿಸಿದರು ಮತ್ತು ಅವರ ಕಾರ್ಯಾಚರಣೆಗಳನ್ನು ಬಲಪ್ರಯೋಗದಿಂದ ಹತ್ತಿಕ್ಕಿದರು (ನಿಜ, ಈ

ಸಂದರ್ಭಗಳಲ್ಲಿ ರಕ್ತಪಾತ ಕನಿಷ್ಠ ಪ್ರಮಾಣದ್ದಾಗಿದ್ದಿತು). ಆದರೆ ಸುಕಾರ್ನೋರವರು ಬಿಕ್ಕಟ್ಟಿನ ನಿಜವಾದ ಆಕರವನ್ನು ಕಾಣಲು ವಿಫಲರಾದರು. ಆ ಎಲ್ಲ ತೊಂದರೆಗಳಿಗೂ ಪಾರ್ಲಿಮೆಂಟರಿ ಪದ್ಧತಿಯೇ ಕಾರಣವಾಗಿದ್ದಿತೆಂದು ಘೋಷಿಸಿದರು. ದೇಶದಲ್ಲಿ ಪಾರ್ಲಿಮೆಂಟರಿ ಪದ್ಧತಿಯು 1950ರಲ್ಲಿ ಜಾರಿಗೆ ಬಂದ ಗಣತಂತ್ರದ ತಾತ್ಕಾಲಿಕ ಸಂವಿಧಾನಕ್ಕನುಗುಣವಾಗಿ ಕಾರ್ಯ ಜರುಗಿಸುತ್ತಿದ್ದಿತು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವವೂ ಅದರಲ್ಲಿನ ರಾಜಕೀಯ ಶಕ್ತಿಗಳ ಸೆಣಸಾಟವೂ ಹೊರಗಿನಿಂದ ಎರವಲು ತಂದ ವ್ಯವಸ್ಥೆಗಳಾಗಿದ್ದವು ಮತ್ತು ಅವು ಇಂಡೋನೇಷ್ಯದ ಸಮಾಜಕ್ಕೂ ಜನರ ರಾಷ್ಟ್ರೀಯ ಪರಂಪರೆಗಳಿಗೂ ಅನುಗುಣವಾಗಿರಲಿಲ್ಲ, ಎಂಬುದು ಸುಕಾರ್ನೋರವರ ಅಭಿಪ್ರಾಯವಾಗಿದ್ದಿತು. ಬಲಪಂಥದಿಂದ ಭೀತಿಯು ಇನ್ನೂ ಪ್ರಬಲವಾಗಿ ಇದ್ದಾಗ ಪ್ರಗತಿಶೀಲ ಶಕ್ತಿಗಳು ರಾಷ್ಟ್ರಾಧ್ಯಕ್ಷರ ಕ್ರಮಗಳು ಪ್ರಧಾನವಾಗಿ ಹಾಗೂ ಪ್ರತ್ಯೇಕವಾಗಿ ಬಲಪಂಥದ ವೃಂದಗಳ ವಿರುದ್ಧ ನಿರ್ದೇಶಿತವಾಗಿದ್ದವೆಂದು ಕಂಡುಕೊಂಡವು. ಆದ್ದರಿಂದ ಅವು ಕೆಲವು ಇತಿಮಿತಿಗಳೊಂದಿಗಾದರೂ ಸರಿಯೆ, ರಾಷ್ಟ್ರಾಧ್ಯಕ್ಷರು 1957-1959ರಲ್ಲಿ ರಾಜಕೀಯ ಪದ್ಧತಿಯಲ್ಲಿ ಜಾರಿಗೆ ತಂದ ಅನೇಕ ಸುಧಾರಣೆಗಳಿಗೆ ಬೆಂಬಲ ನೀಡಿದವು. ರಾಷ್ಟ್ರಾಧ್ಯಕ್ಷರು 1945ರ ಸಂವಿಧಾನವನ್ನು ಪುನರುಜ್ಜೀವನಗೊಳಿಸಿದರು, ಸರಕಾರವು ಪಾರ್ಲಿಮೆಂಟಿಗೆ ಜವಾಬ್ದಾರವಾಗಿರುವುದನ್ನು ರದ್ದುಗೊಳಿಸಿದರು ಮತ್ತು ಕೊನೆಯಲ್ಲಿ ಸಂಪೂರ್ಣ ಅಧಿಕಾರವನ್ನು ತಮ್ಮ ಕೈಗಳಲ್ಲೇ ಕೇಂದ್ರೀಕರಿಸಿಕೊಂಡರು. ಈ ಕಾಲದಲ್ಲೇ ಸುಕಾರ್ನೋ ತಮ್ಮ ಅಧಿಕಾರದ ತುತ್ತತುದಿ ಮುಟ್ಟಿದ್ದುದು. ಅವರು ಜನರ ಹಿತದೃಷ್ಟಿಯಿಂದ ಮರ್ಹಾಏನಿಸಂಅನ್ನು ಸಾರ್ವತ್ರಿಕ ಭ್ರಾತೃತ್ವ ಹಾಗೂ ಸಹಕಾರದ ತಮ್ಮ ಪ್ರಕಲ್ಪನೆಗಳನ್ನು ಆಚರಣೆಗೆ ತರಬಹುದಿದ್ದಿತು. ದೇಶದ ಮುಂದಿದ್ದ ಸಮಸ್ಯೆಗಳನ್ನು ಪರಿಹರಿಸಲು ತಮ್ಮದೇ ಪ್ರಾಯೋಗಿಕ ವಿಧಾನಗಳನ್ನು ಜಾರಿಗೆ ತರಬಹುದಿದ್ದಿತು. ಇಂಡೋನೇಷ್ಯನ್ ಸಮಾಜದ ಬೆಳವಣಿಗೆಗೆ ತಮ್ಮವೇ ಕಾರ್ಯವ್ಯೂಹಗಳನ್ನು ರಚಿಸಬಹುದಿದ್ದಿತು. ಈ ಕಾರ್ಯದಲ್ಲಿ ಅವರನ್ನು ನಿಲ್ಲಿಸುವುದು ಯಾವ ಶಕ್ತಿಗೂ ಸಾಧ್ಯವಿರಲಿಲ್ಲ ಎಂದೇ ಕಂಡುಬಂದಿತು.

ಆದರೆ ಸುಕಾರ್ನೋರವರ ಜೀವನ ಹಾಗೂ ರಾಜಕಾರಣವನ್ನು ಸಿಂಹಾವಲೋಕನ ಮಾಡಿ ನೋಡಿದಾಗ, ಐವತ್ತರ ದಶಕದ ಕೊನೆಯಲ್ಲೇ ಅವರ ರಾಷ್ಟ್ರೀಯ-ಪಾಪ್ಯುಲಿಸ್ಟ್ ಅಭಿಪ್ರಾಯಗಳು ಹಿಂದೆಂದಿಗಿಂತ ಹೆಚ್ಚು ತೀವ್ರ ಪರೀಕ್ಷೆಗೆ ಒಳಗಾದುದು ಮತ್ತು ಆ ಕಾಲದಲ್ಲೇ ಅವರ ಪ್ರಕಲ್ಪನೆಗಳಲ್ಲಿದ್ದ ದೌರ್ಬಲ್ಯಗಳು ಹೊರಗೆ ಕಾಣಿಸಿಕೊಂಡುದು ಎಂದು ಹೇಳಬಹುದಾಗಿದೆ. ಸುಕಾರ್ನೋರವರೇ ತಮ್ಮ ಜೀವನದ ಕೊನೆಯ ದಿನಗಳವರೆಗೂ ತಮ್ಮ ವಿಚಾರಗಳಿಗೆ ನಿಷ್ಠೆಯಿಂದಲೇ ಇದ್ದರು, ಅವುಗಳ ಜೀವಶಕ್ತಿಯ ಬಗೆಗೆ ಎಂದೂ ಸಂಶಯದ ಒಂದು ಮಾತನ್ನೂ ಹೇಳಲಿಲ್ಲ. ಅವುಗಳಿಗೆ ಯಾವುದೇ ಮಾರ್ಪಾಟುಗಳನ್ನೂ ಸೂಚಿ

ಮಾಡಲಿಲ್ಲ. ಆದರೆ ಈ ರಾಷ್ಟ್ರಾಧ್ಯಕ್ಷರ ಹಾಗೂ ರಾಷ್ಟ್ರೀಯ-ಪಾಪ್ಯುಲಿಸ್ಟ್ ವಿಚಾರ ಪ್ರತಿಪಾದಕರ ವ್ಯಕ್ತಿನಿಷ್ಠ ದೃಷ್ಟಿಯು ಅನಿವಾರ್ಯವಾಗಿಯೇ ಅವರ ಹಾಗೂ ಅವರ ಸರಕಾರದ ರಾಜನೀತಿಯಲ್ಲಿ ಪ್ರಗಾಢ ವೈರುಧ್ಯಗಳಿಗೆ ಜನ್ಮ ನೀಡಿದ್ದಿತು.

ಈ ವೈರುಧ್ಯಗಳು ಪ್ರಧಾನವಾಗಿ ದೇಶದ ಆರ್ಥಿಕ ಬೆಳವಣಿಗೆಯ ಸಮಸ್ಯೆಗಳ ಜೊತೆಗೆ ಅವರ ಮನೋಧರ್ಮದಲ್ಲಿ ವ್ಯಕ್ತವಾದವು. ಸುಕಾರ್ನೋರವರು ಆರ್ಥಿಕ ಕ್ಷೇತ್ರದಲ್ಲಿ ಅಸಮರ್ಥರಾಗಿದ್ದರು, ಅವರು ಆರ್ಥಿಕ ಚಟುವಟಿಕೆಯ ಸಮಸ್ಯೆಗಳನ್ನು ಉಪೇಕ್ಷಿಸಿದರು ಎಂದು ಮಾಜಿ ರಾಷ್ಟ್ರಾಧ್ಯಕ್ಷರ ವಿರೋಧಿಗಳು ಹಾಗೂ ಟೀಕೆಗಾರರು ಸತತವಾಗಿ ಹೇಳುತ್ತಿರುತ್ತಾರೆ. ಸುಕಾರ್ನೋರವರೇ ಈ ವಿಷಯಕ್ಕೆ ಸಂಬಂಧಿಸಿ ವಿಶಿಷ್ಟ ಕ್ರಾಂತಿಕಾರಿ ಭಾವುಕ ಮನೋವೃತ್ತಿಯ ಒಲವನ್ನೇ ಹೆಚ್ಚಾಗಿ ಪ್ರದರ್ಶಿಸಿದರು.

"ಹಣಕಾಸಿನಂಥ ಲೌಕಿಕ ನಿರರ್ಥಕ ವಿಷಯಗಳ ಕಡೆಗೆ ನಾನು ಹೆಚ್ಚಿನ ಗಮನ ನೀಡುತ್ತಿದ್ದಿಲ್ಲ. ರಾಷ್ಟ್ರೀಯವಾದದ ಹಚ್ಚ ಹೊಸ ವಾಯುವನ್ನು ಎಂದೂ ಸೇವಿಸದೆ ಇರುವಂಥ ಜನರಷ್ಟೆ ಅಂಥ ಅತಿಸಾಮಾನ್ಯ ವಿಷಯಗಳಲ್ಲಿ ಹೂತುಕೊಳ್ಳಬಲ್ಲರು" ಎಂದವರು ತಮ್ಮ ಆತ್ಮಕಥೆಯಲ್ಲಿ ಆತ್ಮಪ್ರಶಂಸೆಯೊಂದಿಗೆ ಹೇಳಿಕೊಳ್ಳುತ್ತಾರೆ. "ನಿಜ ಹೇಳುವುದಾದರೆ, ನಾನು ಅರ್ಥಶಾಸ್ತ್ರಜ್ಞನಲ್ಲ. ನಾನು ಅರ್ಥಶಾಸ್ತ್ರದ ತಾಂತ್ರಿಕ ವಿವರಗಳನ್ನು ಚೆನ್ನಾಗಿ ಬಲ್ಲ ತಜ್ಞನೇನೂ ಅಲ್ಲ.... ಆರ್ಥಿಕ ವಿಷಯಗಳಿಗೆ ಸಂಬಂಧಿಸಿ ನನ್ನ ವಿಚಾರಗಳು ತುಂಬ ಸರಳವಾದವು. ಅವನ್ನು ಕ್ರೋಡೀಕರಿಸಿ ಹೀಗೆ ಹೇಳಬಹುದು: ಮರಳುಗಾಡೊಂದರ ಜನರು ತಮ್ಮ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಲ್ಲರಾದರೆ ನಾವೂ ಏಕೆ ಹಾಗೆ ಮಾಡಲು ಸಾಧ್ಯವಿಲ್ಲ?"** ಎಂದವರು 1963ರ ಆಗಸ್ಟ್ 17ರಂದು, ದೇಶವು ಆಗಲೇ ಉಗ್ರ ಆರ್ಥಿಕ ಹಾಗೂ ಸಾಮಾಜಿಕ ಬಿಕ್ಕಟ್ಟಿನಲ್ಲಿ ಸಿಕ್ಕಿಬಿದ್ದಿದ್ದಾಗ, ಘೋಷಿಸಿದರು. ಅವರು ಇಂಥ ಮಾತುಗಳನ್ನು ಅನೇಕ ಬಾರಿ ಹೇಳಿದುದನ್ನು ಉದ್ಧರಿಸಬಹುದು. ತಾವು "ಸಣ್ಣಪುಟ್ಟ" ಲೌಕಿಕ ವಿಷಯಗಳಲ್ಲಿ ತಲೆ ಕೆಡಿಸಿಕೊಳ್ಳದಂಥ ಆತ್ಮೋದ್ಧಾರಕ ಎಂದು ಸುಕಾರ್ನೋ ಸೋಗು ಹಾಕುವುದನ್ನು ಇಷ್ಟಪಡುತ್ತಿದ್ದರು ಎಂದು ಹೇಳಿಯಷ್ಟೆ ಇದಕ್ಕೆ ವಿವರಣೆ ನೀಡಹೋಗುವುದು ಅತಿಸರಳ

*Bung Karno, *Penjambung Lidah Rakjat Indonesia*, p 161.–ಸಂ.

**Genti Suara, *Revolusi Indonesia*, Djakarta, 1963, p. 30. –ಸಂ.

ವಾಗುತ್ತದೆ. ಆರ್ಥಿಕ ಸಮಸ್ಯೆಗಳನ್ನು ಎದುರಿಸಲು ಸುಕಾರ್ನೋರವರು ಇಷ್ಟಪಡದಿದ್ದುದರ ಮೂಲಗಳು ಇನ್ನೂ ಆಳಕ್ಕೆ ಹೋಗುತ್ತವೆ.

ಶೋಷಕ ಸಮಾಜವೊಂದರಲ್ಲಿ ಯಾವುದೇ ಆರ್ಥಿಕ ಬೆಳವಣಿಗೆಯೂ ಅನಿವಾರ್ಯವಾಗಿಯೇ ಹೊಸ ವೈರುಧ್ಯಗಳನ್ನು ಉಂಟುಮಾಡುತ್ತದೆ, ಸಮಾಜದಲ್ಲಿ ಸಾಮರಸ್ಯ ಇದೆ ಎಂಬ ಭ್ರಮೆಯನ್ನು ನಾಶಗೊಳಿಸುತ್ತದೆ, ವರ್ಗ ವೈಷಮ್ಯಗಳನ್ನು ಹೊರಗೆಡಹುತ್ತದೆ ಮತ್ತು ಕೊನೆಯಲ್ಲಿ ವರ್ಗ ಶಕ್ತಿಗಳ ಧ್ರುವೀಕರಣಕ್ಕೂ ಅವುಗಳ ನಡುವಿನ ಹೋರಾಟ ತೀವ್ರಗೊಳ್ಳುವುದಕ್ಕೂ ದಾರಿ ಮಾಡಿಕೊಡುತ್ತದೆ. ಈ ಪ್ರತೀಕ್ಷೆಯನ್ನು ಎದುರಿಸಬೇಕಾಗಿ ಬಂದಾಗ ಪೆಟಿ ಬೂರ್ಷ್ವಾನಲ್ಲಿ ಸ್ವಯಂಸ್ಫೂರ್ತಿಯ ಅಂಜಿಕೆ ಉಂಟಾಗುತ್ತದೆ. ಸ್ಪಷ್ಟವಾದ ವರ್ಗ ನಿಲುವನ್ನು ಆಯ್ದುಕೊಳ್ಳುವುದು ಅವಶ್ಯವಾದಾಗ ಕೆಲವು ಪರಿಸ್ಥಿತಿಗಳಲ್ಲಿ ಅವನು ಹಳೆಯ ಸಾಮಾಜಿಕ ಪ್ರಕ್ರಿಯೆಗಳನ್ನೇ ಉಳಿಸಿಕೊಂಡು ಹೋಗಲು, ಅವುಗಳ ಬೆಳವಣಿಗೆಯನ್ನು ತಡೆಹಿಡಿಯಲು ಯತ್ನಿಸುವ ಬಲವಂತಕ್ಕೊಳಗಾಗುತ್ತಾನೆ. ಆದರೆ ಹಳೆಯ ಪ್ರಕ್ರಿಯೆಗಳನ್ನು ಉಳಿಸಿಕೊಂಡು ಹೋಗುವುದೂ ಸಾಧ್ಯವಿಲ್ಲ. ಹಾಗಾಗಿ ಅಂಥ ಯತ್ನಗಳು ತಿರೋಗಮನಕ್ಕೆ, ಸಮಾಜದ ಬೆಳವಣಿಗೆಯ ವಿರೂಪನೆಗೆ ದಾರಿ ಮಾಡಿಕೊಡುತ್ತವೆ, ಈ ಬೆಳವಣಿಗೆಗೆ ವಿಷಮ ಹಾಗೂ ಯಾತನೆಯ ರೂಪಗಳನ್ನು ನೀಡುತ್ತವೆ. ಇಂಡೋನೇಷ್ಯದಲ್ಲಿ ಇದು ಬಂಡವಾಳವಾದಿ ಅಂಶಗಳು ಅತ್ಯಂತ ಪರೋಪಜೀವಿ ರೂಪಗಳಲ್ಲಿ ರಾಷ್ಟ್ರ ವಿರೋಧಿ ರೂಪಗಳಲ್ಲಿ ಬೆಳೆಯುವುದಕ್ಕೆ ದಾರಿ ಮಾಡಿಕೊಟ್ಟಿತು. ಅಧಿಕಾರಶಾಹಿ ಬೂರ್ಷ್ವಾಸೀಯ ಒಂದು ಸ್ತರ ಬೆಳೆಯಿತು. ಸುಕಾರ್ನೋರವರ ನಾಯಕತ್ವದಲ್ಲಿ ವಸಾಹತುವಾದ ವಿರೋಧಿ ಹೋರಾಟದ ಸಮಯದಲ್ಲಿ ಬ್ರಿಟಿಷ್, ಡಚ್ ಮತ್ತಿತರ ವಿದೇಶೀ ಒಡೆಯರುಗಳಿಂದ ಕಿತ್ತುಕೊಳ್ಳಲಾಗಿದ್ದ ಉದ್ಯಮಗಳಿಂದಲೂ ಪ್ಲಾಂಟೇಷನ್‌ಗಳಿಂದಲೂ ರಚಿಸಲಾಗಿದ್ದ ರಾಜ್ಯ ವಿಭಾಗವನ್ನು ಕೊಳ್ಳೆಹೊಡೆಯುವ ಮೂಲಕ ಅದು ಪ್ರಧಾನವಾಗಿ ಬಂಡವಾಳದ ಪ್ರಾಥಮಿಕ ಸಂಚಯದಲ್ಲಿ ತೊಡಗಿದ್ದಿತು. ಸಾಮ್ರಾಜ್ಯವಾದ ವಿರೋಧಿ ಏಕತೆಯ ನೆಪದಲ್ಲಿ ಮುಷ್ಕರಗಳನ್ನು ನಿಷೇಧಿಸಲಾಗಿದ್ದುದು ಜನವಿರೋಧಿ ಬೂರ್ಷ್ವಾ ಸಂಚುಕೂಟದ ವಿರುದ್ಧ ಕಾರ್ಮಿಕರನ್ನು ರಕ್ಷಣಾರಹಿತರನ್ನಾಗಿ ಮಾಡಿದ್ದಿತು. ಈ ಸಂಚುಕೂಟವು ಅನಿರ್ಬಂಧಿತವಾಗಿ ದೇಶದ ರಾಜಕೀಯ ಹಾಗೂ ಆರ್ಥಿಕ ಸಾಧನದ ಮೇಲೆ ತನ್ನ ಕೈ ಚಾಚುತ್ತಿದ್ದಿತು. ವಿಶಾಲ ವ್ಯಾಪ್ತಿಯ ಹಾಗೂ ತೀವ್ರತರವಾದ ಸಾಮ್ರಾಜ್ಯಶಾಹಿ ವಿರೋಧಿ ಚಳವಳಿಗಳ ಹಿನ್ನೆಲೆಯಲ್ಲೇ ಇಂಡೋನೇಷ್ಯನ್ ಆರ್ಥಿಕತೆಯಲ್ಲಿ ಸ್ಥಗಿತತೆಯೂ ಮುಗ್ಗಟ್ಟೂ ಉಲ್ಬಣಗೊಳ್ಳುತ್ತಿದ್ದುದು ದೇಶವನ್ನು ಸಾಮ್ರಾಜ್ಯವಾದದ ಮೇಲೆಯೇ ಹೆಚ್ಚು ಅವಲಂಬಿಸಿರುವಂತೆ ಮಾಡಿತು ಮತ್ತು ದೇಶದ ರಾಜಕೀಯ ಅಂತಃಶಕ್ತಿಯನ್ನು ವಸ್ತುನಿಷ್ಠವಾಗಿ ಶಿಥಿಲಗೊಳಿಸಿತು. ವಿದೇಶೀ ಆಸ್ತಿಗಳ ರಾಷ್ಟ್ರೀ

ಕರಣ ಕಾರ್ಯಕ್ರಮವನ್ನು ಸರಿಯಾಗಿ ವ್ಯವಹರಿಸದೆ ಹೋದುದು ದೇಶದಲ್ಲಿ ಉತ್ಪಾದನೆ ಕಮ್ಮಿಯಾಗುವುದಕ್ಕೆ ದಾರಿ ಮಾಡಿಕೊಟ್ಟಿದ್ದಿತು ಎಂದು ಸುಕಾರ್ನೋರವರು ತಮ್ಮ ಅಧಿಕಾರದ ಕೊನೆಯ ಭಾಗದಲ್ಲಿ ಒಪ್ಪಿಕೊಂಡರು.*

ಇಂಡೋನೇಷ್ಯನ್ ಸಮಾಜದಲ್ಲಿ ವೈಷಮ್ಯಯುತ ವೈರುಧ್ಯಗಳು ಇರುವುದು ಸಾಧ್ಯವಿಲ್ಲ ಎಂಬ ಮನೋನಂಬಿಕೆಗೆ ನಿಷ್ಠರಾಗಿಯೇ ಇದ್ದುಕೊಂಡು ಸುಕಾರ್ನೋ ಎಲ್ಲ ಸಮಸ್ಯೆಗಳನ್ನೂ ಪರಿಹರಿಸುವ ವಿಧಾನವಾಗಿ ಅಧಿರಚನೆಯ ವಲಯದಲ್ಲಿ ರಾಜಿಗಳನ್ನು ಮಾಡಿಕೊಳ್ಳುವುದನ್ನಷ್ಟೆ ಮುಖ್ಯವಾಗಿ ಆಯ್ದುಕೊಂಡರು. ಹೀಗೆ ಅವರು ಆರ್ಥಿಕ ಬುನಾದಿಯ ಬೆಳವಣಿಗೆಯ ಪ್ರಕ್ರಿಯೆಯನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳದೆ, ಅಷ್ಟೇ ಅಲ್ಲ ವಾಸ್ತವವಾಗಿ ಸಾರ್ವಜನಿಕರ ಗಮನವನ್ನು ತುಂಬ ಆಗಾಗ್ಗೆ ಅದರಿಂದ ದೂರ ಸೆಳೆಯುವ ಮೂಲಕ, ಆ ಬುನಾದಿ ಅನಿಯಂತ್ರಿತವಾಗಿ ಬೆಳೆಯುವುದಕ್ಕೆ ಆಸ್ಪದ ಮಾಡಿಕೊಟ್ಟರು. ಕೃಷಿ ಪದಾರ್ಥಗಳ ತೀವ್ರತರವಾದ ಅಭಾವ, ಜಾವಾದ ಮಿತಿಮೀರಿದ ಜನಸಂಖ್ಯೆ, ರೈತರನ್ನು ಭೂಮಿಗಳಿಂದ ವಿಸ್ತೃತ ಪ್ರಮಾಣದಲ್ಲಿ ಹೊರಹಾಕಲಾಗುತ್ತಿದ್ದುದು, ನಿರುದ್ಯೋಗದ ಹೆಚ್ಚಳ, ಆಹಾರ ಪದಾರ್ಥಗಳ ಕೊರತೆ, ಇವೆಲ್ಲವುಗಳ ಫಲವಾಗಿ ಸುಕಾರ್ನೋರವರ ಸರಕಾರ ಭೂಒಡೆತನಕ್ಕೆ ಸಂಬಂಧಿಸಿ ಹಾಗೂ ಗೇಣಿ ಮಿತಿಗಳಿಗೆ ಸಂಬಂಧಿಸಿ ವಿಶೇಷ ಶಾಸನ ರಚಿಸುವ ಒತ್ತಾಯಕ್ಕೊಳಗಾಯಿತು. ಈ ಶಾಸನ ತೀರ ಸಾಮಾನ್ಯ ಸ್ವರೂಪದ್ದಾಗಿದ್ದಿತು. ಉದಾಹರಣೆಗೆ ಸುಗ್ಗಿಯನ್ನು ಗೇಣಿದಾರನಿಗೂ ಭೂಮಾಲೀಕನಿಗೂ ನಡುವೆ 1 : 1 ಪ್ರಮಾಣದಲ್ಲಿ ಹಂಚಬೇಕೆಂದು ಅದು ನಿಗದಿ ಮಾಡಿದ್ದಿತು. ಈ ಶಾಸನವನ್ನು ಪ್ರಜಾಸತ್ತಾತ್ಮಕವಾಗಿ ಹಾಗೂ ಸುಸಂಗತವಾಗಿ ನೆರವೇರಿಸಿದ್ದಲ್ಲಿ ಅದು ಹೆಚ್ಚೆಂದರೆ ಹಳ್ಳಿಗಾಡಿನಲ್ಲಿ ಭೂಮಾಲೀಕರ ಹಾಗೂ ಶ್ರೀಮಂತ ರೈತರ ಸ್ವಚ್ಛಂದ ವರ್ತನೆಯನ್ನು ಸ್ವಲ್ಪಮಟ್ಟಿಗೆ ಮಿತಿಗೊಳಿಸಬಲ್ಲುದಿದ್ದಿತಷ್ಟೆ ಮತ್ತು ರೈತರನ್ನು ಕೃಷಿ ವಲಯದಲ್ಲಿ ಸಾಮಂತವಾದದ ಅವಶೇಷಗಳಿಂದ ಮುಕ್ತಗೊಳಿಸುತ್ತಿದ್ದಿತು. ಆದರೆ ಈ ಸುಧಾರಣೆಗಳನ್ನು ಜಾರಿಗೆ ತರುವ ಮೊದಲ ಯತ್ನಗಳೂ ಹಳ್ಳಿಗಾಡಿನಲ್ಲಿ ಎಂತಹ ಉಗ್ರ ವೈರುಧ್ಯ ವೈಷಮ್ಯ ಹಾಗೂ ಸಾಮಾಜಿಕ ಶತ್ರುತ್ವವನ್ನು ತೋರಿಸಿಕೊಟ್ಟವೆಂದರೆ, ಗ್ರಾಮಾಂತರದಲ್ಲಿ ರಾಜಕೀಯ ಹಾಗೂ ವರ್ಗ ಪ್ರತ್ಯೇಕೀಕರಣಕ್ಕೆ ಎಂತಹ ತೀವ್ರ ಮುನ್ನೂಕು ನೀಡಿದವೆಂದರೆ, ಈ ಕಾರ್ಯವನ್ನು ಮುಂದುವರಿಸಿದ್ದಲ್ಲಿ ದೇಶದ ವರ್ಗ ಶಕ್ತಿಗಳ ನೇರ ಮುಖಾಮುಖಿಗೆ ದಾರಿ ಮಾಡಿಕೊಡುತ್ತಿದ್ದಿತು. ಇದನ್ನರಿತ ಸುಕಾರ್ನೋ ಹಿಂಜರಿದರು, ತಮ್ಮ ಪ್ರಭಾವವನ್ನು ಬಳಸಿಕೊಂಡು ಎಡಪಂಥದ ಶಕ್ತಿಗಳೂ ಹಾಗೆಯೇ ಮಾಡುವಂತೆ ಒತ್ತಾಯಿ

*Bung Karno, *Penjambung Lidah Rakjat Indonesia*, p. 416.—ಸಂ.

ಸಿದರು. ಹೀಗೆ ಮತ್ತೊಮ್ಮೆ ಕೃಷಿ ಸಂಬಂಧಿ ಸಮಸ್ಯೆಯನ್ನು ತಾತ್ಕಾಲಿಕವಾಗಿ ಪಕ್ಕಕ್ಕೆ ಸರಿಸಲಾಯಿತು. ಅದು ಯಾವ ಮರ್ಹಾಎನ್ "ಇಂಡೋನೇಷ್ಯನ್ ಸಮಾಜವಾದಿ ಸಮಾಜ"ದ ಬೆನ್ನೆಲುಬಾಗಬೇಕೆಂದು ಸುಕಾರ್ನೋ ಬಯಸಿದ್ದರೋ ಆ ಮರ್ಹಾಎನ್‌ನ ಮೂಲ ಹಾಗೂ ಪ್ರಮುಖ ಹಿತಗಳಿಗೇ ಪ್ರತಿಕೂಲವಾಗಿ ಪರಿಣಮಿಸಿತು.

ತಮ್ಮ ಆಡಳಿತದ ರಾಜಕೀಯ ಸಂರಚನೆಯನ್ನು ನಿರ್ಮಿಸುವಾಗಲೂ ಅವರು ಇದೇ ರೀತಿಯ ಅಸಂಗತತೆಯನ್ನು ತೋರಿದರು. ತಮ್ಮ ಆಡಳಿತದ ಕೊನೆಯ ಅವಧಿಯಲ್ಲಿ ಅವರು ತಮ್ಮ ಮೇಲೆ ಮಾಡಲಾಗಿದ್ದ ಸರ್ವಾಧಿಕಾರದ ಆಪಾದನೆಯನ್ನು ತೀರ ಸಮರ್ಥನೀಯವಾಗಿಯೇ ತಿರಸ್ಕರಿಸುತ್ತ ಕಟು ಭಾವನೆಯೊಂದಿಗೆ ಹೇಳಿದರು: "ಪ್ರತಿಯೊಬ್ಬ ಸರ್ವಾಧಿಕಾರಿಯ ಹಿಂದೆಯೂ ಒಂದು ಪಾರ್ಟಿ ನಿಂತಿರುತ್ತದೆ. ಅದು ಯಾವತ್ತೂ ಅಧಿಕಾರವನ್ನು ವಹಿಸಿಕೊಳ್ಳಲು ಸಿದ್ಧವಿರುತ್ತದೆ. ನನ್ನ ಪ್ರಸಂಗದಲ್ಲಿ ಇದು ಹೀಗಿಲ್ಲವೇ ಇಲ್ಲ. ನನಗೆ ಬೆಂಬಲ ನೀಡಲು ನನ್ನ ಬಳಿ ಯಾವ ಸಂಘಟನೆಯೂ ಇಲ್ಲ."* ಮತ್ತೆ ಇದೇ ವ್ಯಕ್ತಿಯೇ 1933ರಲ್ಲಿ 'ಸ್ವತಂತ್ರ ಇಂಡೋನೇಷ್ಯಕ್ಕಾಗಿ' ಎಂಬ ಕೃತಿಯಲ್ಲಿ ಮಾರ್ಕ್ಸ್‌ರವರಿಂದ ಉದ್ಧರಣೆಗಳನ್ನು ನೀಡುತ್ತ, ಇಂಡೋನೇಷ್ಯದಲ್ಲಿ ಜನಸಮೂಹಗಳಿಗೆ ನಾಯಕತ್ವ ನೀಡಲು ಸಮರ್ಥವಾದಂಥ, ಕಟ್ಟುನಿಟ್ಟಾದ ಶಿಸ್ತು, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಏಕತೆಗಳನ್ನು ಹೊಂದಿರುವಂಥ ಕ್ರಾಂತಿಕಾರಿ ಮುಂಚೂಣಿ ಪಾರ್ಟಿಯೊಂದು ಆವಶ್ಯಕ ಎಂಬ ವಿಚಾರವನ್ನು ಸವಿವರವಾಗಿ ವಿಶದಗೊಳಿಸಿದ್ದರು.** ಇಡೀ ರಾಷ್ಟ್ರದ ಪರವಾಗಿ ಅಧ್ಯಕ್ಷರಾಗಲು ಯತ್ನಿಸುತ್ತ ಸುಕಾರ್ನೋರವರು 1945ರ ಕ್ರಾಂತಿಯನಂತರ ತಮ್ಮ ಹೆಸರನ್ನು ಅಸ್ತಿತ್ವದಲ್ಲಿದ್ದ ಯಾವುದೇ ಪಾರ್ಟಿಗಳೊಂದಿಗೂ ಜೋಡಿಸಲು ಇಷ್ಟಪಡಲಿಲ್ಲ. ಅನಂತರ ಆದರ್ಶಯುತವಾದ ಸರಕಾರೀ ರೂಪದ ಬಗೆಗೆ ತಮ್ಮ ವಿಚಾರವನ್ನು ಹೀಗೆ ಸ್ಪಷ್ಟಪಡಿಸಿದರು: "ನಮ್ಮ ಮಟ್ಟಿಗೆ, ಒಂದು ರಾಜ್ಯದ ಅಧಿಪತಿ ಒಂದು ಕುಟುಂಬದ ಅಧಿಪತಿಗಿಂತ ಭಿನ್ನವಲ್ಲ. ಮುಸ್ಲಿಮ್ ಸಂಪ್ರದಾಯದ ಪ್ರಕಾರ ತಂದೆಯೇ ಕುಟುಂಬಕ್ಕಾಗಿ ಎಲ್ಲ ನಿರ್ಧಾರಗಳನ್ನೂ ಕೈಗೊಳ್ಳುತ್ತಾನೆ, ಹಳ್ಳಿಯ ಹಿರಿಯನು ಹಳ್ಳಿಯ ಆಡಳಿತದ ಇಡೀ ಹೊರೆಯನ್ನು ತನ್ನ ಮೇಲೆಯೇ ಹೊತ್ತಿರುತ್ತಾನೆ. ಈ ಸಂಪ್ರದಾಯ ಇಂಡೋನೇಷ್ಯದಲ್ಲಿ ಅನೇಕ ಶತಮಾನಗಳಿಂದ ಇದ್ದುಕೊಂಡು ಬಂದಿದೆ."*** ಇಲ್ಲಿ ಮತ್ತೆ

*ಅದೇ ಗ್ರಂಥ, ಪು. 416.—ಸಂ.

**Sukarno, *Indonesia Accuses*, pp. 203-206 and pp. 227-229.—ಸಂ.

***Bung Karno, *op. cit.*, p. 393.

ಫ್ಯಾಸಿಸಂನ ಒಂದು ವಿಶಿಷ್ಟ ಲಕ್ಷಣ ಕಾಣಿಸಿಕೊಳ್ಳುತ್ತದೆ: ಸಾಮಾಜಿಕ-ಆರ್ಥಿಕ ಹಿಂದುಳಿದಿರುವಿಕೆ ಹಾಗೂ ಸಮಾಜದ ಅಲ್ಪಾಭಿವೃದ್ಧಿಯಿಂದ ಹುಟ್ಟಿದಂಥ ವಿದ್ಯಮಾನವನ್ನು ಆದರ್ಶೀಕರಿಸಿ, "ವಿದೇಶೀ" ಪ್ರಗತಿಗೆ ವಿರುದ್ಧವಾದಂತೆ ಇದೇ ಚಾರಿತ್ರಿಕವಾದುದು ಮತ್ತು ಸದಾಕಾಲಕ್ಕೂ ಅನ್ವಯವಾಗುವಂತಹುದು ಎಂದು ತೋರಿಸಲಾಗುತ್ತದೆ. ಮರ್ದಿತ ರಾಷ್ಟ್ರವೊಂದರ ರಾಷ್ಟ್ರೀಯವಾದವು ಪ್ರಕಟಗೊಳ್ಳುತ್ತಿರುವ ಒಂದು ರೀತಿ ಇದು ಎಂದು ಇದನ್ನು ಅರ್ಥಮಾಡಿಕೊಳ್ಳಬಹುದು. ಯಂತ್ರತಾಂತ್ರಿಕ, ಆರ್ಥಿಕ ಹಾಗೂ ಸಾಮಾಜಿಕ ಪ್ರಗತಿಯು ಇಂಡೋನೇಷ್ಯಕ್ಕೆ ಅನೇಕ ಶತಮಾನಗಳ ಕಾಲ ವಸಾಹತು ಪ್ರಭುದೇಶದಿಂದಲೇ ಮರ್ದಕರ ಮೂಲಕ ಬಂದಿದ್ದಿತು, ಅದೂ ತುಂಬ ವಿಕೃತೀಕರಿಸಿದ ರೂಪದಲ್ಲಿ. ಆದ್ದರಿಂದ ಅದನ್ನು ಬಹುವೇಳೆ ಸಹಜಪ್ರವೃತ್ತಿಯಿಂದ ತಮ್ಮ ದೇಶದ ಜಾಯಮಾನಕ್ಕೆ ವೈರೀಯವಾದುದೆಂದೇ ಕಾಣಲಾಗುತ್ತಿತ್ತು. ಈ ಮನೋಧರ್ಮವನ್ನು ಅರ್ಥಮಾಡಿಕೊಳ್ಳಬಹುದು ಆದರೆ ಸಮರ್ಥಿಸಲಾಗದು.

ಐವತ್ತರ ದಶಕದ ಕೊನೆಯಲ್ಲಿ ಇಂಡೋನೇಷ್ಯದಲ್ಲಿ ಸ್ಥಾಪಿತವಾದ ಸುಕಾರ್ನೋರವರ ವ್ಯಕ್ತಿಗತ ಅಧಿಕಾರದ ಆಡಳಿತವು ಸಾರತಃ ಬೊನಾಪಾರ್ಟ್ ಮಾದರಿಯದೇ ಆಗಿದ್ದಿತು. ಬೊನಾಪಾರ್ಟ್‌ವಾದವನ್ನು ವಿವರಿಸುತ್ತ ಲೆನಿನ್ ಬರೆದರು: "... ಇದಕ್ಕೆ ಬೆಂಬಲವಾಗಿರುವುದು ನಿರ್ದಿಷ್ಟ ವರ್ಗಗಳಲ್ಲ, ಅಥವಾ ಆ ವರ್ಗಗಳಷ್ಟೆ ಅಲ್ಲ, ಅವೇ ಪ್ರಧಾನವಾಗಿ ಅಲ್ಲ, ಆದರೆ ಆಯ್ದು ತೆಗೆದ ಕೆಲವು ಶಕ್ತಿಗಳು, ಹೆಚ್ಚಾಗಿ ಜನರ ನಾನಾ ಸ್ತರಗಳಿಂದ ಆಯ್ದಂಥವು." ಮುಂದುವರಿಯುತ್ತ ಲೆನಿನರು ಹೇಳುತ್ತಾರೆ: ವರ್ಗ ಹೋರಾಟದ ದೃಷ್ಟಿಕೋನದಿಂದ ಈ ವಿದ್ಯಮಾನದ ಸಂಭವನೀಯತೆಗೆ "ವೈರೀಯ ಅಥವಾ ಪ್ರತಿದ್ವಂದ್ವಿ ವರ್ಗಗಳ ಶಕ್ತಿಗಳ ನಡುವಿನ ಸಂತುಲನವೇ ಕಾರಣ." ಈ ತಾತ್ಕಾಲಿಕ ಸಂತುಲನವು ಭಾರಿ ಭೂಮಾಲೀಕರೊಂದಿಗೆ ಕೂಡಿಕೊಂಡು ಒಂದು ಬಣವಾಗಿ ವರ್ತಿಸುತ್ತಿದ್ದ ಅಧಿಕಾರಶಾಹಿ ಬೂರ್ಶ್ವಾಸೀಯ ಪರವಾಗಿ ಬದಲಿದುದರಿಂದ ಮತ್ತು ತದನಂತರ ಶೋಷಕ ಗಣ್ಯಜನರಿಗೂ ಶೋಷಿತ ದುಡಿಯುವ ಜನರಿಗೂ ನಡುವಿನ ವೈರುಧ್ಯಗಳು ತೀವ್ರಗೊಂಡುದರಿಂದ, ಸುಕಾರ್ನೋರವರ ಆಡಳಿತದ (ಅವರು ಇದನ್ನು "ನಿಯಂತ್ರಿತ ಪ್ರಜಾಪ್ರಭುತ್ವ" ಎಂದು ಕರೆದಿದ್ದರು) ಸಾಮಾಜಿಕ ಅಡಿಪಾಯವು ಹೆಚ್ಚು ಅಸ್ಥಿರವಾಗತೊಡಗಿತು.

ಇಂಡೋನೇಷ್ಯದ ರಾಜಕಾರಣದಲ್ಲಿ ಎರಡು ಪರಸ್ಪರ ವಿರುದ್ಧ ಶಿಬಿರಗಳು ಹೆಚ್ಚು ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿದವು. ಒಂದು, ದೇಶದ ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ಪ್ರಗತಿಶೀಲ ಶಕ್ತಿಗಳ ಶಿಬಿರ. ಇಂಡೋನೇಷ್ಯದ ಕಮ್ಯೂನಿಸ್ಟ್ ಪಾರ್ಟಿಯು ಈ ಶಿಬಿರದಲ್ಲಿ ತುಂಬ ಕ್ರಿಯಾಶೀಲವಾದ ಹಾಗೂ ಸುಸಂಗತ ಶಕ್ತಿಯಾಗಿದ್ದಿತು. ಎರಡನೆಯದು, ಬಲಪಂಥದ ಶಕ್ತಿಗಳ ಶಿಬಿರ. ಸಶಸ್ತ್ರ

ದಳಗಳ ಕಮ್ಯೂನಿಸ್ಟ್ ವಿರೋಧಿ ಪಕ್ಷವು ಈ ಶಿಬಿರದ ರಾಜಕೀಯ ಮುಂಚೂಣಿಯಾಗಿದ್ದಿತು. ಈ ಬಣವು ಇಡೀ ಸೈನ್ಯವನ್ನೇ ತನ್ನ ನಿಗೂಢ ಧಕ್ಕೆ ದಳವನ್ನಾಗಿ ಮಾಡಿಕೊಂಡಿದ್ದಿತು.

ರಾಷ್ಟ್ರಾಧ್ಯಕ್ಷರ ವಿಚಾರ ಅಭಿಪ್ರಾಯಗಳಿಂದ ಪ್ರಭಾವಿತವಾಗಿಯಲ್ಲ ಬಲಪಂಥದ ವೃಂದಗಳು ಅವರಿಗೆ ಬೆಂಬಲ ನೀಡುತ್ತಿದ್ದುದು. ಅವರು ಅಧಿಕಾರದಲ್ಲಿರುವುದು ರಾಷ್ಟ್ರೀಯ ಏಕತೆಯ ಭ್ರಾಂತಿಯನ್ನು ಇನ್ನೂ ಸ್ವಲ್ಪ ಹೆಚ್ಚು ಕಾಲ ಉಳಿಸಿಕೊಂಡಿದ್ದು ಈ ಅವಧಿಯನ್ನು ಅನಿವಾರ್ಯ ನಿರ್ಧಾರಕ ಕದನಕ್ಕಾಗಿ ಶಕ್ತಿ ವರ್ಧಿಸಿಕೊಳ್ಳಲು ಬಳಸಿಕೊಳ್ಳಬೇಕೆಂಬ ಆಶಯದಿಂದಷ್ಟೆ ಅವು ಅಧ್ಯಕ್ಷರಿಗೆ ಬೆಂಬಲ ನೀಡುತ್ತಿದ್ದವು. ಸುಕಾರ್ನೋರವರೇ ಇದನ್ನು ಮನಗಾಣತೊಡಗಿದ್ದರು. 1963ರಲ್ಲಿ ತಮಗೆ ಆಜೀವ ರಾಷ್ಟ್ರಾಧ್ಯಕ್ಷ ಪದವಿ ನೀಡಿದಾಗ ಅವರ ಹಿಂದಿದ್ದ ಉದ್ದೇಶಗಳನ್ನು ಕುರಿತು ಅವರು ಅನಂತರ ಹೀಗೆ ಬರೆದರು: "ನನ್ನ ಸಲಹೆಗಾರರ ಅಭಿಪ್ರಾಯದಂತೆ, ಬಲಪಂಥದ ತೀವ್ರವಾದಿಗಳು ಅಧಿಕಾರವನ್ನು ವಶಪಡಿಸಿಕೊಳ್ಳುವುದಿಲ್ಲವೆಂದು ಕಮ್ಯೂನಿಸ್ಟರಿಗೆ ಮನವರಿಕೆ ಮಾಡಿಕೊಡಲು, ಎಡಪಂಥದ ತೀವ್ರವಾದಿ ಶಕ್ತಿಗಳು ಅಧಿಕಾರಕ್ಕೆ ಬರುವುದಿಲ್ಲವೆಂದು ಮುಸ್ಲಿಮರಿಗೆ ಮನವರಿಕೆ ಮಾಡಿಕೊಡಲು, ಸೈನ್ಯವು ರಾಜ್ಯದ ಅಧಿಕಾರ ಸೂತ್ರಗಳನ್ನು ವಶಪಡಿಸಿಕೊಳ್ಳುವುದಿಲ್ಲವೆಂದು ಖಚಿತ ಮಾಡಿಕೊಡಲು, ಎಲ್ಲ ಪಾರ್ಟಿಗಳಿಗೂ ಎಲ್ಲ ವೃಂದಗಳಿಗೂ ಮೇಲೆ ನಿಂತ ಐಕ್ಯಕ ವ್ಯಕ್ತಿಯಾಗಿ ಸುಕಾರ್ನೋರವರನ್ನು ಆಜೀವ ರಾಷ್ಟ್ರಾಧ್ಯಕ್ಷರನ್ನಾಗಿ ನೇಮಕ ಮಾಡುವುದು ಅವಶ್ಯವಾಗಿದ್ದಿತು." ರಾಷ್ಟ್ರಾಧ್ಯಕ್ಷರಿಗೆ ತುಂಬ ನಿಕಟವಾಗಿದ್ದಂಥ ಉಪಪ್ರಧಾನಿ ಛೈರುಲ್ ಸಲೇಯವರು ಸುಕಾರ್ನೋರವರಿಗೆ ಮುಚ್ಚುಮರೆ ಇಲ್ಲದೆ ಹೇಳಿದರು: "ಇದೊಂದು ರಾಜಕೀಯ ಆವಶ್ಯಕತೆ. ಇಲ್ಲದಿದ್ದರೆ ನಾವೆಲ್ಲ ಅಂತರ್ಯುದ್ಧಕ್ಕೆ ಎಳೆಯಲ್ಪಡುತ್ತೇವೆ."* ತಾವು ಸಾಮಾಜಿಕ ಸಾಮರಸ್ಯದ ಸಮಾಜವನ್ನು ಸೃಜಿಸದಾಗಿದ್ದರು, ತಾವು ಮಾಡಬಹುದಾಗಿದ್ದುದೆಲ್ಲ ಆಸ್ಫೋಟವನ್ನು ಸ್ವಲ್ಪ ಕಾಲದವರೆಗೆ ತಡ ಮಾಡುವುದಷ್ಟೆ ಆಗಿದ್ದಿತು ಅನ್ನುವುದನ್ನು ಕಂಡುಕೊಂಡಾಗ ಸುಕಾರ್ನೋರವರು ಯಾವ ಭಾವನೆಗಳನ್ನು ಅನುಭವಿಸಿದರೆನ್ನುವುದು ಯಾರಿಗೂ ತಿಳಿಯದು.

ಹೆಚ್ಚುತ್ತಿದ್ದ ಸಮಸ್ಯೆಗಳಿಗೆ ಅಧ್ಯಕ್ಷರು ಪರಿಹಾರ ಕಂಡುಹಿಡಿಯಲು ಯತ್ನಿಸಲಿಲ್ಲವೆಂದು ಹೇಳುವುದು ತಪ್ಪಾಗುತ್ತದೆ. ಐವತ್ತರ ದಶಕದಲ್ಲಿ ಸಾಮ್ರಾಜ್ಯವಾದದ ವಿರುದ್ಧ ಸಂಯುಕ್ತ ಹೋರಾಟದ ಆಧಾರದ ಮೇಲೆ ಸಮಾಜವಾದಿ ದೇಶಗಳೊಂದಿಗೆ ಇಂಡೋನೇಷ್ಯದ ಸಂಬಂಧಗಳನ್ನು ವಿಸ್ತರಿಸುತ್ತ ಸುಕಾರ್ನೋರವರು ಆ ದೇಶಗಳ ಸಾಮಾಜಿಕ ಬೆಳವಣಿಗೆಯ ಅನುಭವದಲ್ಲಿ ಹೆಚ್ಚು ಹೆಚ್ಚು

*Bung Karno, *op. cit.*, p. 416. – ಸಂ.

ಆಸಕ್ತರಾದರು. ಸಮಾಜವಾದಿ ರಾಷ್ಟ್ರಗಳ ನೈತಿಕ ಹಾಗೂ ರಾಜಕೀಯ ಏಕತೆ, ಜನಾಂಗೀಯ ಪ್ರಶ್ನೆಯನ್ನು ಪರಿಣಾಮಕಾರಿಯಾಗಿ ಪರಿಹರಿಸಿದ್ದುದು, ಸಮಾಜವಾದಿ ಏಷ್ಯನ್ ದೇಶಗಳು ತಮ್ಮ ರಾಷ್ಟ್ರೀಯ ಸ್ವಾತಂತ್ರ್ಯವನ್ನು ದೃಢಪಡಿಸಿಕೊಂಡಿದ್ದ ಬಗೆ – ಇವು ಅಧ್ಯಕ್ಷರ ಗಮನವನ್ನು ಹೆಚ್ಚಾಗಿ ಆಕರ್ಷಿಸಿದವು. ಆದರೆ ಇಲ್ಲೂ ಆ ದೇಶಗಳ ಅಧಿರಚನೆಯಲ್ಲಿನ ಪ್ರಕ್ರಿಯೆಗಳೇ ಹೆಚ್ಚಾಗಿ ಅವರನ್ನು ಆಕರ್ಷಿಸಿದುದು. ಸಮಾಜವಾದಿ ದೇಶಗಳಲ್ಲಿನ ಸಾಮರಸ್ಯದಿಂದ ಕೂಡಿದ ಸಮಾಜದ ವರ್ಗ ರಚನೆಗೂ ಇಂಡೋನೇಷ್ಯದಲ್ಲಿದ್ದ ಸಾರಭೂತವಾಗಿ ಶೋಷಕವಾಗಿದ್ದ ಸಮಾಜಕ್ಕೂ ನಡುವೆ ಇದ್ದ ಮೂಲಭೂತ ವ್ಯತ್ಯಾಸಗಳನ್ನೂ, ಈ ವ್ಯತ್ಯಾಸಗಳು ಆರ್ಥಿಕ ಬುನಾದಿಯಿಂದ ಉದ್ಭವಿಸಿದ್ದವೆಂಬುದನ್ನೂ ಅವರು ಕಾಣಲಿಲ್ಲ ಅಥವಾ ಕಾಣಬಯಸಲಿಲ್ಲ. ಇಂಡೋನೇಷ್ಯವು ಸಾಮ್ರಾಜ್ಯವಾದಿಗಳ ವಿರುದ್ಧ ನಡೆಸುತ್ತಿದ್ದ ಹೋರಾಟಕ್ಕೆ ಸಮಾಜವಾದಿ ದೇಶಗಳ ರಾಜಕೀಯ ಬೆಂಬಲಕ್ಕೆ ಹೆಚ್ಚಿನ ಪ್ರಾಮುಖ್ಯ ನೀಡುವಾಗಲೇ ಅಧ್ಯಕ್ಷರೂ ಅವರ ಸರಕಾರವೂ ಆ ದೇಶಗಳಿಂದ ಬರುತ್ತಿದ್ದ ಗಣನೀಯ ಆರ್ಥಿಕ ನೆರವನ್ನು ಪರಿಣಾಮಕಾರಿಯಾಗಿ ಬಳಸುವ ಕಡೆಗೆ ಹೆಚ್ಚಿನ ಗಮನ ನೀಡಲಿಲ್ಲ. ಈ ನೆರವಿನ ಪ್ರಮಾಣವೂ ಸ್ವರೂಪವೂ ಜನರ ಜೀವನ ಮಟ್ಟವನ್ನು ಹೆಚ್ಚಿಸಬಹುದಿದ್ದವಷ್ಟೆ ಅಲ್ಲ ರಾಜ್ಯದ ಆರ್ಥಿಕ ಸ್ವಾತಂತ್ರ್ಯವನ್ನು ದೃಢಗೊಳಿಸಬಲ್ಲವಾಗಿದ್ದವು, ಹಾಗೆ ಸಾಮ್ರಾಜ್ಯಶಾಹಿ ಪ್ರಭಾವ ವಲಯವನ್ನು ಕುಗ್ಗಿಸಬಲ್ಲವಾಗಿದ್ದವು. ಇದು ಸುಕಾರ್ನೋರವರ ಸಮರಶೀಲ ಸಾಮ್ರಾಜ್ಯವಾದ ವಿರೋಧಿ ನೀತಿಗೆ ಸಂಪೂರ್ಣವಾಗಿ ಅನುಗುಣವಾಗಿರುತ್ತಿದ್ದಿತು.

ಅರವತ್ತರ ದಶಕದ ಆರಂಭದಲ್ಲಿ ಇಂಡೋನೇಷ್ಯ ಮತ್ತು ಚೀಣಾಗಳ ನಡುವೆ ವೈಮನಸ್ಯ ಪರಿಹಾರವಾಗಬಹುದೆಂದು ದೇಶದೊಳಗಿನ ಹಾಗೂ ಹೊರಗಿನ ಅಧ್ಯಕ್ಷರ ರಾಜಕೀಯ ಪ್ರತಿಸ್ಪರ್ಧಿಗಳು, ವಿಶೇಷವಾಗಿ ಅಧ್ಯಕ್ಷರ ಜೀವನದ ಕೊನೆಯ ವರ್ಷಗಳಲ್ಲಿ, ತುಂಬ ಊಹಾಪೋಹ ನಡೆಸಿದರು. ಆ ವರ್ಷಗಳಲ್ಲಿದ್ದ ಚೀಣಾ-ಇಂಡೋನೇಷ್ಯಗಳ ನಡುವಿನ ಸಹಕಾರದ ನಾನಾ ಸ್ವರೂಪ ಮತ್ತು ಪರಿಣಾಮಗಳೂ, ಉಭಯ ಪಕ್ಷಗಳೂ ಹೊಂದಿದ್ದ ಆಸಕ್ತಿಗಳೂ ಯೋಜನೆಗಳೂ ಪ್ರತ್ಯೇಕ ವಿಶ್ಲೇಷಣೆಗೆ ಅರ್ಹವಾದ ವಿಷಯಗಳು. ಚೀಣಾಕ್ಕೆ ಸಂಬಂಧಿಸಿ ಸುಕಾರ್ನೋರವರ ನಿಲುವುಗಳನ್ನು ನಿರ್ಧರಿಸಿದಂಥ ಉದ್ದೇಶಗಳು ವಿವಿಧವಾಗಿದ್ದವೆಂದಷ್ಟೆ ಇಲ್ಲಿ ಹೇಳೋಣ. ಸುನ್‌ಯಾತ್‌ಸೆನ್‌ರ ಕಾಲದ ಅವರ ಸ್ಮರಣೆಗಳು ಮುಖ್ಯ ಪಾತ್ರ ನಿರ್ವಹಿಸಿದವು. ಸುನ್‌ಯಾತ್‌ಸೆನ್‌ರನ್ನು ಸುಕಾರ್ನೋ ತಮ್ಮ ಸೈದ್ಧಾಂತಿಕ ಪೂರ್ವಗಾಮಿಗಳಲ್ಲೊಬ್ಬರೆಂದು ಭಾವಿಸಿದ್ದರು.* ಅನಂತರ, ಆ ಕಾಲದ ಎಲ್ಲ ಪುರೋಗಾಮಿಗಳಂತೆ ಸುಕಾರ್ನೋರವರೂ 1949ರ ಚೀಣೀ ಕ್ರಾಂತಿಯಿಂದ ಪ್ರಭಾವಿತರಾದರು. ಆ ಕ್ರಾಂತಿಯ ಸಾಮಾಜಿಕ ಸ್ವರೂಪವೂ ಅದು ಚೀಣೀ ಜನರನ್ನು ಸಾಮ್ರಾಜ್ಯಶಾಹಿಗಳ ಮತ್ತವರ ಅನುಯಾಯಿಗಳ ಮರ್ದನದಿಂದ ವಿಮೋಚನೆಗೊಳಿಸಿದುದೂ ಅಧ್ಯಕ್ಷರ ಮೇಲೆ ಭಾರಿ ಪ್ರಭಾವ ಬೀರಿದವು. ಕೊನೆಯದಾಗಿ, ಐವತ್ತರ ದಶಕದಲ್ಲಿ ಚೀಣೀ ಜನರು ಸಾಮ್ರಾಜ್ಯಶಾಹಿ ದಿಗ್ಬಂಧನವಿದ್ದರೂ ಇತರ ಸಮಾಜವಾದಿ ದೇಶಗಳೊಂದಿಗೆ ನಿಕಟ ಸಹಕಾರ ಏರ್ಪಡಿಸಿಕೊಂಡು ಸಾಧಿಸಿದ ಯಶಸ್ಸುಗಳೂ ಹಿಂದುಳಿದ ಇಂಡೋನೇಷ್ಯದಲ್ಲಿ ವ್ಯಾಪಕವಾಗಿ ತಿಳಿದುಬಂದಿದ್ದವು.

ಮತ್ತೊಂದು ಕಡೆ, ತಮ್ಮ ರಾಜಕೀಯ ಚಿಂತನೆಯ ನಿರ್ದಿಷ್ಟ ಲಕ್ಷಣಗಳಿಂದಾಗಿ ಸುಕಾರ್ನೋ ಆ ಕಾಲದಲ್ಲಿ ಚೀಣಾದಲ್ಲಿ ತುಂಬ ಜನಪ್ರಿಯವಾಗಿದ್ದ "ರಾಜಕಾರಣವು ಒಂದು ಅಜ್ಞಾಪಕ ಶಕ್ತಿ," "ಎಲ್ಲ ಸಾಮ್ರಾಜ್ಯವಾದಿಗಳೂ ಪ್ರತಿಗಾಮಿಗಳೂ ಕಾಗದದ ಹುಲಿಗಳು" ಎಂಬಂಥ ಸಿದ್ಧಾಂತಗಳಿಂದ ಪ್ರಭಾವಿತರಾಗಿದ್ದರು. ಅವು ಅವರ ಸ್ವಂತ ವಿಚಾರಗಳೊಂದಿಗೇ ತಾಳೆಯಾಗುತ್ತಿದ್ದವು. ಅವು ತಮ್ಮ ವಿಚಾರಗಳನ್ನು ಹೆಚ್ಚು ಶಕ್ತಿಯುತವನ್ನಾಗಿ ಮಾಡುತ್ತಿದ್ದವೆಂದು ಅವರು ಭಾವಿಸಿದ್ದರು. ಆದರೆ ಅರವತ್ತರ ದಶಕದ ಆರಂಭದಲ್ಲಿದ್ದ ವಿಶಿಷ್ಟ ಜಾಗತಿಕ ಪರಿಸ್ಥಿತಿಗಳಲ್ಲಿ ಈ ಘೋಷಣೆಗಳನ್ನು ವಿದೇಶಾಂಗ ನೀತಿಯ ಪ್ರಕಲ್ಪನೆಗಳನ್ನಾಗಿ ಕಂಡುಕೊಂಡುದೂ ಅದರಿಂದಾಗಿ ಕೈಕೊಂಡ ಪ್ರಾಯೋಗಿಕ ಕ್ರಮಗಳೂ ಗಣತಂತ್ರದ ವಿದೇಶಾಂಗ ನೀತಿ ನಿಲುವುಗಳಲ್ಲಿ ತೊಡಕುಗಳನ್ನುಂಟುಮಾಡಿದವು.* ಸಮಾಜವಾದಿ ದೇಶಗಳೊಂದಿಗೆ ಗಣತಂತ್ರದ ಸಂಬಂಧ ದುರ್ಬಲಗೊಂಡಿತು. ಅದರಿಂದಾಗಿ ವಿಶ್ವ

---

*ನಿರ್ದಿಷ್ಟವಾಗಿ, 1945ರ ಜೂನ್ 1ರಂದು 'ಪಂಚಶೀಲದ ಜನನ' ಎಂಬ ಭಾಷಣದಲ್ಲಿ ಸುಕಾರ್ನೋ ತಾವು ಸುನ್‌ಯಾತ್‌ಸೆನ್‌ರ 'ಮೂರು ರಾಷ್ಟ್ರೀಯ ಸೂತ್ರಗಳು' ಎಂಬ ಗ್ರಂಥದಿಂದ ಪ್ರಭಾವಿತರಾಗಿ ವಿಶ್ವಬಂಧುತ್ವವಾದದ ಬದಲು ರಾಷ್ಟ್ರೀಯವಾದದ ವಿಚಾರಗಳನ್ನು ಸ್ವೀಕರಿಸಿದ್ದರೆಂದು ಹೇಳಿದರು.

ನೋಡಿ: Sukarno, *Indonesia Accuses*, p. 264. – ಸಂ.

*ಈ ಸಮಯದಲ್ಲೇ ಶಾಂತಿ, ನಿಶ್ಶಸ್ತ್ರೀಕರಣ ಹಾಗೂ ಬೀಜಾಣು ಆಯುಧಗಳನ್ನು ಮಿತಿಗೊಳಿಸುವ ಹೋರಾಟಕ್ಕೆ ಸಂಬಂಧಿಸಿ ಇಂಡೋನೇಷ್ಯದ ವಿದೇಶಾಂಗ ನೀತಿ ಸಿದ್ಧಾಂತದಲ್ಲಿ ಹೆಚ್ಚು ಹೆಚ್ಚು ನಿರಾಧಾರಯುತ ಕಟ್ಟುಪಾಡುಗಳು ಕಾಣಿಸಿಕೊಳ್ಳತೊಡಗಿದವು. ವಿಭಿನ್ನ ಸಾಮಾಜಿಕ ಪದ್ಧತಿಗಳುಳ್ಳ ರಾಜ್ಯಗಳ ನಡುವೆ ಶಾಂತಿಯುತ ಸಹಅಸ್ತಿತ್ವದ ಘೋಷಣೆಗಳು ಸಾಮ್ರಾಜ್ಯವಾದ ವಿರೋಧಿ ಹೋರಾಟಕ್ಕೆ ವಿರುದ್ಧ ಹೋಗುತ್ತವೆಂದು ಹೇಳಲಾಯಿತು; ಸಾಮ್ರಾಜ್ಯವಾದ ಹಾಗೂ ಹೊಸದಾಗಿ ಸ್ವತಂತ್ರಗೊಂಡ ರಾಷ್ಟ್ರಗಳ ನಡುವಿನ ವೈರುಧ್ಯವೇ ಆ ಕಾಲದ ಉಳಿದೆಲ್ಲ ವೈರುಧ್ಯಗಳಿಗಿಂತ ಹೆಚ್ಚು ಪ್ರಮುಖವಾಗಿದ್ದಿತೆಂದು ಪ್ರತಿಪಾದಿಸಲಾಯಿತು.

ಪ್ರಮಾಣದಲ್ಲಿ ಸಾಮ್ರಾಜ್ಯವಾದ ವಿರೋಧಿ ಹೋರಾಟದಲ್ಲಿ ಅವರ ಸಹಭಾಗಿತ್ವದ ಪಾತ್ರವೂ ದುರ್ಬಲಗೊಂಡಿತು. ಇದು ಇಂಡೋನೇಷ್ಯದ ಮೂಲ ರಾಷ್ಟ್ರೀಯ ಹಿತಗಳಿಗೆ ಹಾನಿ ಉಂಟುಮಾಡಿತು, ಆಂತರಿಕ ರಾಜಕೀಯ ವೈರುಧ್ಯಗಳು ತೀವ್ರಗೊಳ್ಳುವಂತೆ ಮಾಡಿತು.

ಸುಕಾರ್ನೋರವರ ಅಭಿಪ್ರಾಯಗಳಲ್ಲಿನ ಹಾಗೂ ಪ್ರಾಯೋಗಿಕ ರಾಜನೀತಿಯಲ್ಲಿನ ಗಾಢವಾದ ಅಂತರ್ಗತ ವೈರುಧ್ಯಗಳು ಇಂಡೋನೇಷ್ಯದ ಕಮ್ಯೂನಿಸ್ಟ್ ಪಾರ್ಟಿಯ ಬಗೆಗೆ ಅವರ ಮನೋಭಾವದಲ್ಲೂ ಪ್ರತಿಬಿಂಬಿತವಾದವು. ಅವರ NASAKOM ಪ್ರಕಲ್ಪನೆಯು ಕ್ರಾಂತಿಯ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಘಟ್ಟದ ಕಾರ್ಯಭಾರಗಳನ್ನು ಪೂರೈಸಿ ದೇಶವನ್ನು ಸಮಾಜವಾದಿ ಮಾರ್ಗದಲ್ಲಿರಿಸಬಲ್ಲಂಥ ದೇಶಪ್ರೇಮಿ ಐಕ್ಯ ರಂಗವೊಂದನ್ನು ಸ್ಥಾಪಿಸುವುದಕ್ಕೆ ಸೈದ್ಧಾಂತಿಕ ಪುರೋಗಾಮಿ ಆಧಾರವಾಗಬಲ್ಲುದಿದ್ದಿತು. ಕಮ್ಯೂನಿಸ್ಟರು ವರ್ಷವರ್ಷಕ್ಕೂ ತಮ್ಮ ಪ್ರಭಾವವನ್ನು ಸತತವಾಗಿ ಹೆಚ್ಚಿಸಿಕೊಳ್ಳುತ್ತಿದ್ದರೆಂಬುದನ್ನು 1955-1958ರಲ್ಲಿನ ಪಾರ್ಲಿಮೆಂಟರಿ ಹಾಗೂ ಸ್ಥಳೀಯ ಚುನಾವಣೆಗಳು ತೋರಿಸಿಕೊಟ್ಟವು. ಸುಕಾರ್ನೋರವರೂ ಇದನ್ನು ಉಪೇಕ್ಷಿಸದಾಗಿದ್ದರು. 1957ರಿಂದ ಅವರು ಕಮ್ಯೂನಿಸ್ಟ್ ಪಾರ್ಟಿಯ ಪ್ರತಿನಿಧಿಗಳನ್ನು ಸರಕಾರದಲ್ಲಿ ಸೇರಿಸಿಕೊಳ್ಳುವುದರ ಪರವಾಗಿ ಹೆಚ್ಚು ನಿಶ್ಚಿತವಾಗಿ ಹೇಳತೊಡಗಿದರು. ವಸಾಹತುವಾದಿಗಳ ವಿರುದ್ಧ ಹೋರಾಟಕ್ಕೆ ಕಮ್ಯೂನಿಸ್ಟ್ ಪಾರ್ಟಿಯು ನೀಡಿದ್ದ ಕಾಣಿಕೆಯಿಂದ ಸುಕಾರ್ನೋ ಆಕರ್ಷಿತರಾಗಿದ್ದರು. ಅದು ದೇಶದ ಅತ್ಯಂತ ಸಂಘಟಿತ, ಸಮರಶೀಲ ಹಾಗೂ ಸುಸಂಗತ ಸಾಮ್ರಾಜ್ಯವಾದ ವಿರೋಧಿ ಶಕ್ತಿಯಾಗಿದ್ದಿತೆಂಬುದನ್ನು ಅವರು ಸರಿಯಾಗಿಯೇ ಕಂಡುಕೊಂಡಿದ್ದರು. ತಮ್ಮ ಸ್ವಂತ ಪಾರ್ಟಿಯೇ ಇಲ್ಲದೆ ಅವರು ಕಮ್ಯೂನಿಸ್ಟರು ತಮ್ಮ ಕೂಟಮಿತ್ರರಾಗಬೇಕೆಂದು ತುಂಬ ಕಾಳಜಿ ಹೊಂದಿದ್ದರು. ಕಮ್ಯೂನಿಸ್ಟ್ ಪಾರ್ಟಿಯ ಅಂತರರಾಷ್ಟ್ರೀಯ ಸಂಪರ್ಕಗಳು ತುಂಬ ಪರಿಣಾಮಕಾರಿಯಾಗಿದ್ದವೆಂದೂ ಅವು ಇಂಡೋನೇಷ್ಯದ ಜನರ ಸಾಮ್ರಾಜ್ಯವಾದ ವಿರೋಧಿ ಯುದ್ಧಕ್ಕೆ ಇಡೀ ಪುರೋಗಾಮಿ ವಿಶ್ವ ಸಾರ್ವಜನಿಕಾಭಿಪ್ರಾಯದ ಬೆಂಬಲ ದೊರಕಿಸಿಕೊಟ್ಟಿದ್ದವೆಂದೂ ಅಧ್ಯಕ್ಷರು ಕಂಡುಕೊಂಡಿದ್ದರು. ಜನರ ನಡುವೆ ಸಮತೆ ಹಾಗೂ ಭ್ರಾತೃತ್ವ ಭಾವನೆಗಳ ಸ್ಥಾಪನೆ, ಮಾನವನಿಂದ ಮಾನವನ ಶೋಷಣೆಯ ನಿರ್ಮೂಲನ, ಸಾರ್ವತ್ರಿಕ ಸಂಕ್ಷೇಮ ಸಾಧನೆ, ಇವೇ ಮುಂತಾದ ಕಮ್ಯೂನಿಸ್ಟರ ಅನೇಕ ಸಾಮಾಜಿಕ ಧ್ಯೇಯಗಳೂ ಸುಕಾರ್ನೋರವರ ದೇಶಪ್ರೇಮಿ ಹೃದಯಕ್ಕೆ ನಿಕಟವಾಗಿದ್ದವು. ಆದರೆ ವರ್ಗಗಳ ಹಾಗೂ ವರ್ಗ ಹೋರಾಟದ ಸಮಸ್ಯೆಗೆ ಸಂಬಂಧಿಸಿ ಅವರ ವ್ಯಕ್ತಿನಿಷ್ಠ ಮನೋಧರ್ಮ, ಇಂಡೋನೇಷ್ಯನ್ ಸಮಾಜವು ಬಂಡವಾಳವಾದಿ ಭ್ರಷ್ಟತೆಗೆ ಒಳಗಾಗುವುದನ್ನು ಇಡೀ ಸಾಮಾಜಿಕ ಪದ್ಧತಿಯನ್ನು ಮೂಲಭೂತವಾಗಿ ಕ್ರಾಂತಿಕಾರಿಯಾಗಿ ಪರಿವರ್ತಿಸದೆಯೇ ತಪ್ಪಿ

ಸುವುದು ಸಾಧ್ಯವೆಂಬ ಅವರ ಮನೋಸಂಜಿಕೆ, ಇವು ಅವರು ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಸಹಕರಿಸುವ ಅವಕಾಶಗಳನ್ನು ಗಣನೀಯವಾಗಿ ಮಿತಿಗೊಳಿಸಿದವು. ಹಾಗಾಗಿ 1960ರಲ್ಲಿ ಕಮ್ಯೂನಿಸ್ಟ್ ಪಾರ್ಟಿ ನಾಯಕತ್ವವು ಸರಕಾರದ ಸಾಮಾಜಿಕ-ಆರ್ಥಿಕ ನೀತಿಯನ್ನು ಸವಿವರವಾಗಿ ಟೀಕಿಸಿದಾಗ, ಮಿಲಿಟರಿ ಆಡಳಿತವು ಪಾರ್ಟಿ ನಾಯಕರನ್ನು ದಮನ ಮಾಡಿತು. ಸ್ವಲ್ಪ ಕಾಲದನಂತರವಷ್ಟೆ ಅಧ್ಯಕ್ಷರು ಈ ಕಮ್ಯೂನಿಸ್ಟ್ ವಿರೋಧಿ ಚಳವಳಿಗೆ ಕೊನೆಹಾಕಿದರು. ತಮ್ಮ ನೀತಿಗಳಿಗೆ ನಿಶ್ಶರ್ತ ಬೆಂಬಲವಷ್ಟೆ ತಮ್ಮ "ನಿಯಂತ್ರಿತ ಪ್ರಜಾಪ್ರಭುತ್ವ"ದಲ್ಲಿ ಕಮ್ಯೂನಿಸ್ಟ್ ಪಾರ್ಟಿಗೆ ಕಾರ್ಯ ಜರುಗಿಸಲು ಅವಕಾಶ ನೀಡಬಲ್ಲುದೆಂದು ಹೀಗೆ ಅವರು ಒತ್ತಿ ತಿಳಿಸಿದ್ದರು.

ದೇಶದ ಪ್ರಮುಖ ಪಾರ್ಟಿಗಳು ಸರಕಾರದ ನೀತಿಗೆ ಬೆಂಬಲ ನೀಡುವ ಮತ್ತು ಅದನ್ನು ಕಾರ್ಯಗತಗೊಳಿಸುವ ಹಿತದೃಷ್ಟಿಯಿಂದ ನಾಯಕತ್ವ ಮಟ್ಟದಲ್ಲಿ ತಮ್ಮ ಚಟುವಟಿಕೆಗಳನ್ನು ಅನ್ಯೋನ್ಯಗೊಳಿಸಿಕೊಳ್ಳುವ ಕ್ರಿಯೆಗಷ್ಟೆ NASAKOM ಪ್ರಕಲ್ಪನೆಯ ಪ್ರಾಯೋಗಿಕ ಈಡೇರಿಕೆಯನ್ನು ಸೀಮಿತಗೊಳಿಸಲಾಯಿತು. ಮೂರು ವಿಚಾರಧಾರಾತ್ಮಕ ಹಾಗೂ ರಾಜಕೀಯ ಪ್ರವೃತ್ತಿಗಳ ನಡುವಿನ ಸಹಕಾರವು ಪ್ರಜಾಸತ್ತಾತ್ಮಕ ಸಾರ್ವಜನಿಕರ ಮಧ್ಯೆಯೂ ಹರಡುವಂತೆ ಮಾಡಿದ್ದರೆ ಅದು ಸಾಮ್ರಾಜ್ಯವಾದದ ವಿರುದ್ಧ ಸಾಮಾಜಿಕ ಪ್ರಗತಿಗಾಗಿ ಹೋರಾಟದಲ್ಲಿ ಪ್ರಬಲ ಅಂಶವಾಗಬಹುದಿದ್ದಿತು. ಬಲಪಂಥದ ಬೂರ್ಷ್ವಾ ವೃತ್ತಗಳೂ ಸುಕಾರ್ನೋರವರ ಸ್ವಂತ ಜಾಗತಿಕ ಮನೋಧರ್ಮದ ವಿಶಿಷ್ಟತೆಗಳೂ ಇದನ್ನು ಸತತವಾಗಿ ವಿರೋಧಿಸಿದವು. ಸುಕಾರ್ನೋರವರು ಜನಸಮೂಹಗಳನ್ನು ನಾಯಕನ ಅಥವಾ ಉದ್ಧಾರಕನ ದೃಷ್ಟಿಯಿಂದ ನಾಯಕತ್ವದ ವಸ್ತುವನ್ನಾಗಷ್ಟೆ ಕಂಡುಕೊಂಡಿದ್ದರು. ಆದ್ದರಿಂದ, ರಾಜಕೀಯ ಘೋಷಣೆಗಳ ಮತ್ತು ಪ್ರಚಾರದ ಮೂಲಕ ಸಾರ್ವಜನಿಕರು ರಾಜ್ಯದ ನೀತಿ ನಿರ್ಧಾರದಲ್ಲಿ ಭಾಗವಹಿಸುತ್ತಿದ್ದರೆಂಬ ಭ್ರಾಂತಿ ಉಂಟುಮಾಡಿದ್ದರೇ ಹೊರತು ಅವರೆಂದೂ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಭಾಗವಹಿಸುವ ಪಾತ್ರವನ್ನು ಜನಸಮೂಹಗಳಿಗೆ ನೀಡಿರಲಿಲ್ಲ.* ರಾಜಕೀಯ ಹಾಗೂ

---

*1982ರ ಏಪ್ರಿಲ್ 16ರಂದು 'ಮೆರ್ದೇಕ' ವೃತ್ತಪತ್ರಿಕೆ ಒಬ್ಬ ಶಿಕ್ಷಾಚಾಲಕನೊಂದಿಗೆ ಸಂದರ್ಶನ ಪ್ರಕಟಿಸಿತು. ಅದರಲ್ಲಿ ಅವನು "ಹಳೆಯ ಪದ್ಧತಿ"ಯ ಕೆಳಗೆ ಅಮೆರಿಕನ್ ವಿರೋಧಿ ಸಭೆಗಳಲ್ಲಿ ಭಾಗವಹಿಸಿದ್ದುದನ್ನು ಹೆಮ್ಮೆಯಿಂದ ನೆನಪಿಸಿಕೊಂಡು ಹೊಸ ಆಡಳಿತದ ಕೆಳಗೆ ಯಾರೂ ತನ್ನ ಬಗೆಗೆ ಕಾಳಜಿ ವಹಿಸುತ್ತಿಲ್ಲವೆಂದೂ ದೇಶದ ರಾಜಕೀಯ ಜೀವನದಲ್ಲಿ ಭಾಗವಹಿಸುವ ತನ್ನ ಹಕ್ಕನ್ನು ಮನ್ನಿಸುತ್ತಿಲ್ಲವೆಂದೂ ದೂರಿದ.

ಕ್ರಾಂತಿಕಾರಿ ಚಟುವಟಿಕೆಯಲ್ಲಿ ಭಾಗವಹಿಸುವ ಜನಸಮೂಹಗಳ ಪಕ್ಷನ್ನು ಮನ್ನಿಸಲಿಲ್ಲ.

ಸುಕಾರ್ನೋರವರು ದುಡಿಯುವ ಜನರ ಪಾರ್ಟಿಯಾದ ಕಮ್ಯೂನಿಸ್ಟ್ ಪಾರ್ಟಿಗೆ ದೇಶದ ಆಡಳಿತದಲ್ಲಿ ವಾಸ್ತವವಾಗಿ ಭಾಗವಹಿಸಲು ಎಂದೂ ಅವಕಾಶ ನೀಡಲಿಲ್ಲ. ನಾವಾಗಲೇ ತಿಳಿಸಿರುವಂತೆ, ಮುಷ್ಕರಗಳ ಮೇಲೆ ನಿಷೇಧ ಹಾಕಲಾಯಿತಷ್ಟೆ ಅಲ್ಲ ಕೃಷಿ ಸುಧಾರಣೆಗಾಗಿ ರೈತರು ನಡೆಸುತ್ತಿದ್ದ ಚಳವಳಿ ಮತ್ತು ಸಾಮ್ರಾಜ್ಯವಾದ ವಿರೋಧಿ ಏಕತೆಯ ನೆಪದ ಮೇಲೆ, ನಿರ್ಬಂಧಗಳಿಗೆ ಒಳಪಡಿಸಲಾಯಿತು. ಬೂರ್ಷ್ವಾ ಹಾಗೂ ಭೂಮಾಲೀಕ ಶಕ್ತಿಗಳು ಈ ಕ್ರಮಗಳಿಗೆ ಕ್ರಿಯಾಶೀಲ ಬೆಂಬಲ ನೀಡಿದವು. ಅಲ್ಲದೆ, ಅಧ್ಯಕ್ಷರ ನೀತಿಯೇ ಇಚ್ಛಿಸಿದ್ದಿತೋ ಇಲ್ಲವೋ, ಅಂತೂ ಈ ಕ್ರಮಗಳು ದುಡಿಯುವ ಜನರ ಮೂಲ ಹಿತಗಳಿಗಾಗಿ ಕಮ್ಯೂನಿಸ್ಟರು ನಡೆಸುತ್ತಿದ್ದ ಹೋರಾಟಕ್ಕೂ ಜನಸಮೂಹಗಳ ನಡುವೆ ಅವರು ನಡೆಸುತ್ತಿದ್ದ ಕಾರ್ಯಕ್ಕೂ ಅಡ್ಡಿ ಉಂಟುಮಾಡಿದವು. ಹೀಗೆ ಸುಕಾರ್ನೋರವರು ಇಂಡೋನೇಷ್ಯನ್ ಶ್ರಮಜೀವಿ ವರ್ಗದ ಹಾಗೂ ದುಡಿಯುವ ರೈತರ ವರ್ಗ ಮುಂಚೂಣಿಯಾಗಿಯೂ, ಒಟ್ಟಿನ ಮೇಲೆ ಇಡೀ ರಾಷ್ಟ್ರದ ಅತ್ಯುನ್ನತ ಹಿತಗಳಿಗಾಗಿ ಹೋರಾಡಲು ಸಮರ್ಥವಾದ ಶಕ್ತಿಯಾಗಿಯೂ ವರ್ತಿಸುತ್ತಿದ್ದ ಕಮ್ಯೂನಿಸ್ಟ್ ಪಾರ್ಟಿಯ ನೆಲೆಯನ್ನು ವಸ್ತುನಿಷ್ಠವಾಗಿ ಶಿಥಿಲಗೊಳಿಸಿದರು. ಇದು ಅಂತಿಮವಾಗಿ "ನಿಯಂತ್ರಿತ ಪ್ರಜಾಪ್ರಭುತ್ವ"ದ ಸಾಮಾಜಿಕ ಬುನಾದಿಯನ್ನು ಸವೆಯಿಸಿತು, ಅದಕ್ಕೆ ಜನರ ಬೆಂಬಲ ದೊರಕದಂತೆ ಮಾಡಿತು. ಈ ಪ್ರಕ್ರಿಯೆ ಪೂರ್ವನಿರ್ಧಾರಿತವಾಗಿದ್ದಿತೆ? ಅನಿವಾರ್ಯವಾಗಿದ್ದಿತೆ? ಇಂಡೋನೇಷ್ಯನ್ ಕಮ್ಯೂನಿಸ್ಟ್ ಪಾರ್ಟಿಯ ಇಂದಿನ ದಸ್ತಾವೇಜುಗಳು ತೋರಿಸಿಕೊಡುವಂತೆ ಪಾರ್ಟಿ ನಾಯಕತ್ವದ ಒಂದು ವಿಭಾಗವು ಗಹನವಾದ ಬಲಪಂಥದ ಸಂಧಾನಸಾಧಕ ತಪ್ಪುಗಳನ್ನು ಮಾಡದಿದ್ದಲ್ಲಿ, ಇದನ್ನು ತಪ್ಪಿಸಬಹುದಾಗಿದ್ದಿತೆಂದೇ ಕಂಡುಬರುತ್ತದೆ. 1954 ಹಾಗೂ 1959ರಲ್ಲಿ 5ನೆಯ ಹಾಗೂ 6ನೆಯ ಪಾರ್ಟಿ ಮಹಾಧಿವೇಶನಗಳಲ್ಲಿ ರೂಪಿಸಿದ್ದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನೀತಿ ಮಾರ್ಗವು, ಕಮ್ಯೂನಿಸ್ಟ್ ಪಾರ್ಟಿಯ ಸಂಪೂರ್ಣ ಸೈದ್ಧಾಂತಿಕ ರಾಜಕೀಯ ಹಾಗೂ ಸಂಘಟನಾತ್ಮಕ ಸ್ವಾತಂತ್ರ್ಯವನ್ನು ಉಳಿಸಿಕೊಂಡಿರುವಾಗಲೇ ದೇಶದಲ್ಲಿನ ಎಲ್ಲ ದೇಶಪ್ರೇಮಿ ಸಾಮ್ರಾಜ್ಯವಾದ ವಿರೋಧಿ ಶಕ್ತಿಗಳನ್ನೂ ಅಣಿನೆರೆಯಿಸುವ ಗುರಿಯನ್ನು ಹೊಂದಿದ್ದಲ್ಲಿ ನಾಯಕತ್ವದ ಈ ಬಲಪಂಥದ ಸಂಧಾನಸಾಧಕ ವಿಭಾಗವು ಅದರ ಸ್ಥಳದಲ್ಲಿ ಸುಕಾರ್ನೋರವರಿಗೆ ವಾಸ್ತವವಾಗಿ ಅನಿರ್ಬಂಧಿತ ಬೆಂಬಲ ನೀಡುವ, ಅಧ್ಯಕ್ಷರ ನೀತಿಮಾರ್ಗವನ್ನು ಯಾವುದೇ ರೀತಿಯಲ್ಲೂ ಟೀಕಿಸುವುದನ್ನು ತಿರಸ್ಕರಿಸುವ ಗುರಿಯನ್ನು ಪಾರ್ಟಿಯು ಮುಂದೆ ಇರಿಸಿತು. ಈ ನೀತಿಮಾರ್ಗವು ಪಾರ್ಟಿಗೆ ಮಾರಕವಾಯಿತಷ್ಟೆ ಅಲ್ಲ ಅಧ್ಯಕ್ಷರಿಗೂ ವಾಸ್ತ-

ವವಾಗಿ ಹಾನಿ ಉಂಟುಮಾಡಿತು. ಅಧ್ಯಕ್ಷರ ಸೈದ್ಧಾಂತಿಕ ವಿಕಸನವು ತೀವ್ರ ಸುಧಾರಣೆಯತ್ತ ಹಾಗೂ ವೈಜ್ಞಾನಿಕ ಸಮಾಜವಾದದತ್ತ ಮುಂದುವರಿಯುವಂತೆ ಉತ್ತೇಜನ ನೀಡಬಲ್ಲಂಥ ಯಾವುದೇ ಶಕ್ತಿಯೂ ದೇಶದಲ್ಲಿ ಇಲ್ಲದಂತಾಯಿತು.

1967ರಲ್ಲಿ ಸುಕಾರ್ನೋರವರನ್ನು ಅಧಿಕಾರದಿಂದ ತೆಗೆದುಹಾಕಿದನಂತರ, ಈ ವಿಖ್ಯಾತ ಹಾಗೂ ಜನಪ್ರಿಯ ನಾಯಕನ ಪರಾಭವಕ್ಕೆ ಸಂಬಂಧಿಸಿ ಅನೇಕ ಅಭಿಪ್ರಾಯಗಳನ್ನು, ಅನೇಕ ಕಾರಣಗಳನ್ನು ವ್ಯಕ್ತಪಡಿಸಲಾಗಿದೆ. ಸೋವಿಯತ್ ಇತಿಹಾಸ ಗ್ರಂಥಗಳಲ್ಲಷ್ಟೆ ಮೊದಲ ಬಾರಿಗೆ ಸುಕಾರ್ನೋರವರ ಪತನಕ್ಕೆ ಸಂಬಂಧಿಸಿ "ದುರಂತ" ಎಂದ ಪದವನ್ನು ಬಳಸಲಾದುದು.* ಸುಕಾರ್ನೋರವರ ನಿಲುವಿನಲ್ಲಿದ್ದ ದುರಂತ ಅಂಶವೆಂದರೆ, ಅವರು ತಮ್ಮ ದೇಶವನ್ನೂ ಜನರನ್ನೂ ನಿಜಕ್ಕೂ ಅಪಾರವಾಗಿ ಪ್ರೀತಿಸುತ್ತಿದ್ದರೂ ತಾವೇ ಎಂತಹ ವಿಚಾರಗಳ ಹಾಗೂ ಅಭಿಪ್ರಾಯಗಳ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದ್ದರೆಂದರೆ ಅದು ಇಂಡೋನೇಷ್ಯನ್ ಸಮಾಜ ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ಒದಗಿಸದಾಗಿದ್ದಿತು. ಮತ್ತು ಆ ವ್ಯವಸ್ಥೆಯು ಪ್ರತಿಪಾದಕನನ್ನೇ ವೈರುಧ್ಯಗಳ ವಿಷವೃತ್ತದಲ್ಲಿ ಸಿಕ್ಕಿಬೀಳಿಸಿತು, ಎಂಬುದಾಗಿದೆ. ಒಂದು ಕಡೆ ಪಾಪ್ಯುಲಿಸ್ಟ್ ಮಾದರಿಯ ಬಂಡವಾಳವಾದ ವಿರೋಧಿ ನಿಲುವು, ಇನ್ನೊಂದು ಕಡೆ ಅತ್ಯಂತ ಯಾತನಾಪೂರ್ಣವಾದ ಪರೋಪಜೀವಿ ಸ್ವರೂಪದ ಅಧಿಕಾರಶಾಹಿ-ಬೂರ್ಷ್ವಾ ರೂಪದಲ್ಲಿ ಸಮಾಜದ ಬೂರ್ಷ್ವಾಕರಣವನ್ನು ಸಹಿಸಿಕೊಂಡು ಹೋದುದು; ಒಂದು ಕಡೆ ಮರ್ಹಎನಿಸಂ, ಅಂದರೆ ಸಾರಭೂತವಾಗಿ ರೈತ ಸಮಾಜವಾದದ ಪ್ರತಿಪಾದನೆ, ಇನ್ನೊಂದು ಕಡೆ ಕೃಷಿ ಸುಧಾರಣೆಗಳನ್ನು ಸ್ಥಗಿತಗೊಳಿಸಿ ರೈತರನ್ನು ಭೂಮಾಲೀಕರ ಶ್ರೀಮಂತ ರೈತರ ಹಾಗೂ ಲೇವಾದೇವಿಗಾರರ ಸ್ವೇಚ್ಛಾಚಾರದ ಎದುರು ನಿಸ್ಸಹಾಯಕರನ್ನಾಗಿ ಮಾಡಿದುದು; ಒಂದು ಕಡೆ ಜನಸಮೂಹಗಳಿಗೆ ಸತತ ಮನವಿ ಹಾಗೂ ಅವರ ಚಟುವಟಿಕೆಗಳಿಗೆ ಉತ್ತೇಜನ, ಇನ್ನೊಂದು ಕಡೆ ದೇಶವನ್ನು ಕುಲಪತಿ ಆಡಳಿತ ಪದ್ಧತಿಯ ನಿರಂಕುಶ ವಿಧಾನಗಳಿಂದ ಆಳಲು ಯತ್ನಿಸಿದುದು; ಒಂದು ಕಡೆ ಸಮರಶೀಲ ಸಾಮ್ರಾಜ್ಯವಾದ ವಿರೋಧ, ಇನ್ನೊಂದು ಕಡೆ ದೇಶವನ್ನು ಹೆಚ್ಚು ಹೆಚ್ಚಾಗಿ ಜಾಗತಿಕ ಸಾಮ್ರಾಜ್ಯವಾದದ ಮೇಲೆ ಅವಲಂಬಿಸಿರುವಂತೆ ಮಾಡಿದ ಆರ್ಥಿಕ ಅರಾಜಕತೆಯನ್ನು ಉಂಟುಮಾಡಿದುದು; ಒಂದು ಕಡೆ ದೇಶಪ್ರೇಮ ಹಾಗೂ ರಾಷ್ಟ್ರೀಯ ಸಾರ್ವಭೌಮತ್ವ ವಿಚಾರಕ್ಕೆ ನಿಷ್ಠೆ, ಜಾಗತಿಕ

---

* ಎ. ಬಿ. ಬೇಲೆನ್‌ಕಿ, ಬಿ. ಐ. ಇಲ್ಯಿಚೆವ್, 'ಇಂಡೋನೇಷ್ಯನ್ ಘಟನೆಗಳಿಂದ ಕೆಲವು ಪಾಠಗಳು', 'ಕಮ್ಯುನಿಸ್ಟ್' ಮಾಸಪತ್ರಿಕೆ, ನಂ. 15, 1968 (ರಷ್ಯನ್‌ನಲ್ಲಿ). – ಸಂ.

ಬೀಗವಲ್ಲ; ಇಂಡೋನೇಷ್ಯದ ವಿಶೇಷ ಪಾತ್ರದಲ್ಲಿ ನಂಬಿಕೆ. ಇನ್ನೊಂದು ಕಡೆ ದೇಶದ ಮೂಲಭೂತ ರಾಷ್ಟ್ರೀಯ ಹಿತಗಳ ಮೇಲೆ ಅತಿಕ್ರಮಣ ಮಾಡುತ್ತಿದ್ದಂಥ ವಿದೇಶಾಂಗ ನೀತಿಯನ್ನು ಅನುಸರಿಸಿದುದು – ಇವೇ ಆ ವಿಷವೃತ್ತ ರಚಿಸಿದ್ದ ವೈರುಧ್ಯಗಳಾಗಿದ್ದವು. ಸುಕಾರ್ನೋರವರು ಜನರ ಬಗೆಗೆ ಅಪಾರ ಪ್ರೀತಿ ಹೊಂದಿದ್ದುದು, ರಾಷ್ಟ್ರೀಯ ಪಾಪ್ಯುಲಿಸಂನಿಂದ ಸುಸಂಗತ ಬೂರ್ಜ್ವಾ ಪ್ರಕಲ್ಪನೆಗಳಿಗೆ ಹಿಂದಿರುಗುವುದಕ್ಕೆ ಅವಕಾಶ ನೀಡಲಿಲ್ಲ. ಅದೇ ಹೊತ್ತಿನಲ್ಲಿ ಅವರು ವೈಜ್ಞಾನಿಕ ಸಮಾಜವಾದದತ್ತ ಮುಂದುವರಿಯಲು ಅವಶ್ಯವಾದಂಥ ನಿರ್ಣಾಯಕವಾದಂಥ ಹೆಜ್ಜೆ ಇಡಲು ಸಾಕಷ್ಟು ಶಕ್ತಿಯನ್ನೂ ಕಂಡುಕೊಳ್ಳದಾಗಿದ್ದರು.

ದೇಶದಲ್ಲಿ ರಾಜಕೀಯ ಹಾಗೂ ಸಾಮಾಜಿಕ ಸಾಮರಸ್ಯ ಉಂಟುಮಾಡುವ ಉದ್ದೇಶದಿಂದ ತಾವು ಸೃಜಿಸಿದ್ದ ರಾಜಕೀಯ ಪದ್ಧತಿಯು ತೀವ್ರವಾಗಿ ಭ್ರಷ್ಟವಾಗುತ್ತಿದ್ದಿತು. ಅದರ ಚೌಕಟ್ಟಿನೊಳಗೇ ಬೂರ್ಜ್ವಾ ಅಧಿಕಾರಶಾಹಿ ಗಣ್ಯಜನರ ವೃಂದವೊಂದು ಹುಟ್ಟಿಕೊಂಡಿದ್ದಿತು, ಅದು ಭಾರಿ ಸಂಪತ್ತನ್ನು ಗುಡ್ಡೆಹಾಕಿಕೊಳ್ಳುತ್ತಿದ್ದಿತು ಮತ್ತು ಅದು ಆ ಸಂಪತ್ತನ್ನು ಉಳಿಸಿಕೊಂಡಿರಲು ಇಲ್ಲವೇ ಹೆಚ್ಚಿಸಿಕೊಳ್ಳಲಷ್ಟೆ ಯತ್ನಿಸುತ್ತಿದ್ದಿತು, ಎನ್ನುವುದನ್ನು ಸುಕಾರ್ನೋರವರು ಕ್ರಮೇಣ ಕಂಡುಕೊಂಡರು. ಈ ಗಣ್ಯ ಜನವೃಂದವು ಅಧ್ಯಕ್ಷರ ಸುತ್ತಮೇ ಬೆಳೆಯುತ್ತ ಹೋಯಿತು, ಸಂಖ್ಯಾವೃದ್ಧಿ ಹೊಂದುತ್ತ ಹೋಯಿತು. ಅದು "ನಿಯಂತ್ರಿತ ಪ್ರಜಾಪ್ರಭುತ್ವ"ದ ಬಗೆಗೆ ಘೋಷಣೆಗಳನ್ನು ಮೊಳಗಿಸುತ್ತ ಗದ್ದಲದ ಚಳವಳಿ ನಡೆಸುತ್ತ ಜನರಿಂದ ತನ್ನನ್ನು ಮುಚ್ಚಿ ಇರಿಸಿಕೊಂಡಿದ್ದಿತು, ಸುಕಾರ್ನೋರವರು ಸೃಜಿಸಿದ್ದ ಪದ್ಧತಿಯನ್ನು ತನ್ನ ಜನ ವಿರೋಧಿ ಹಿತಗಳನ್ನು ತೃಪ್ತಿಪಡಿಸಿಕೊಳ್ಳಲು ಉಪಯೋಗಿಸುತ್ತಿದ್ದಿತು. ಈ ಗಣ್ಯ ಜನವೃಂದವು ಅಧ್ಯಕ್ಷರನ್ನು ತನ್ನ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿತು, ಅವರನ್ನು ಜನರಿಂದ ಬೇರ್ಪಡಿಸಿತು, ಸಾರ್ವಜನಿಕರ ಮುಂದೆ ಅವರನ್ನು ಸಂಶಯಗ್ರಸ್ತರನ್ನಾಗಿ ತೋರಿಸಿತು. ಆದರೆ ಅದು ಎಂದೂ ಸುಕಾರ್ನೋರವರನ್ನು ಸಂಪೂರ್ಣವಾಗಿ ನುಂಗಿ ಹಾಕಲು ಅಥವಾ "ಪಳಗಿಸಲು" ಸಮರ್ಥವಾಗಲಿಲ್ಲ. ಅಧಿಕಾರಶಾಹಿ ಬೂರ್ಜ್ವಾಸೀಯು ಸುಕಾರ್ನೋರವರ ರಾಜಕೀಯ ಪದ್ಧತಿಯನ್ನು ತನ್ನ ಕೇಳಿಕೆಗಳಿಗೆ ಸರಿಹೊಂದಿಸಿಕೊಳ್ಳಲು ಯಶಸ್ವಿಯಾಯಿತೇ ಹೊರತು ಸುಕಾರ್ನೋರವರನ್ನೇ ತನಗೆ ಸರಿಹೋಗುವಂತೆ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಲಿಲ್ಲ. 1965ರಲ್ಲಿ ಅಧ್ಯಕ್ಷರೂ ದೇಶದ ಸಶಸ್ತ್ರ ದಳಗಳ ಸರ್ವೋಚ್ಚ ಸೇನಾಧಿಪತಿಯೂ ಆಗಿದ್ದ ಸುಕಾರ್ನೋರವರು, ಸೈನ್ಯದ ಮೇಲಂತಸ್ತಿನ ಜನರಲ್ಲುಗಳ ಮಧ್ಯೆ ಒಂದು ಬಲಪಂಥದ ಸಂಚುಕೂಟವಿದ್ದಿತೆಂದೂ ಅದು ರಾಷ್ಟ್ರದ ಅಧಿಪತಿಯನ್ನು ಉರುಳಿಸಲು ಇಲ್ಲವೇ ಅವರ ಅಧಿಕಾರವನ್ನು ತೀವ್ರವಾಗಿ ಮಿತಿಗೊಳಿಸಲು, ಇಡೀ ರಾಜಕೀಯ ಮಾರ್ಗವನ್ನು

ಮೂಲಭೂತವಾಗಿ ಮಾರ್ಪಡಿಸಲು, ಎಡಪಂಥದ ಶಕ್ತಿಗಳನ್ನು ಎಲ್ಲಕ್ಕೂ ಮಿಗಿಲಾಗಿ ಕಮ್ಯೂನಿಸ್ಟ್ ಹಾಗೂ ಎಡಪಂಥದ ರಾಷ್ಟ್ರೀಯ ಚಳವಳಿಯ ಶಕ್ತಿಗಳನ್ನು ನಾಶಗೊಳಿಸಲು ಮತ್ತು ಸಾಮ್ರಾಜ್ಯಶಾಹಿ ಪಶ್ಚಿಮ ದೇಶಗಳೊಂದಿಗೆ ಮೈತ್ರೀ ಕೂಟ ಏರ್ಪಡಿಸಿಕೊಳ್ಳಲು, ಹೊಂಚು ಹಾಕುತ್ತಿದ್ದಿತೆಂದೂ ಅರಿತರು.

ಸುಕಾರ್ನೋ ತಮ್ಮ ಸ್ವಭಾವಕ್ಕೆ ತಕ್ಕಂತೆ ವರ್ತಿಸಿದರು: ಮೇಲ್ಮಟ್ಟದಲ್ಲಿ ಕ್ರಮಗಳನ್ನು ಕೈಗೊಳ್ಳುವ ಮೂಲಕ ಪರಿಸ್ಥಿತಿಯನ್ನು ತಹಬಂದಿಗೆ ತರಲು ನಿರ್ಧರಿಸಿದರು, ಘರ್ಷಣೆಯ ಪ್ರಮಾಣವನ್ನು ಸಾಧ್ಯವಾದಷ್ಟೂ ಸೀಮಿತಗೊಳಿಸಲು ಯತ್ನಿಸಿದರು. ಅವರು ಈ ಒಳಸಂಚಿನ ಘಟನೆಯು ಸಮಾಜದಲ್ಲಿನ ಸಾರ್ವತ್ರಿಕ ವರ್ಗ ಪ್ರಕ್ರಿಯೆಯಲ್ಲಿನ ಒಂದು ಅಂಶವಾಗಿದ್ದಿತೆಂದು ಎರಡನ್ನೂ ಸಂಬಂಧಿಸಿ ನೋಡಲಿಲ್ಲ, ಅರಮನೆಯ ರಕ್ಷಣಾ ದಳದ, ಭೂ, ವಾಯು ಹಾಗೂ ನೌಕಾ ಪಡೆಗಳ ನಿಷ್ಠಾವಂತ ಅಧಿಕಾರಿಗಳ ನೆರವಿನಿಂದ ಒಳಸಂಚಿನ ನಾಯಕರನ್ನು ತೆಗೆದು ಹಾಕಿ ರಕ್ತಪಾತವನ್ನು ನಿವಾರಿಸಲು ಆಶಿಸಿದರು. ಅಧ್ಯಕ್ಷರೂ ಅವರ ಬೆಂಬಲಿಗರೂ ಎಡಪಂಥದ ಶಕ್ತಿಗಳ ನಾಯಕರ ಬೆಂಬಲ ಪಡೆದುಕೊಳ್ಳಲು ಯತ್ನಿಸಿದರು. ಆದರೆ ಇಲ್ಲೂ ಜನಸಮೂಹಗಳನ್ನು ರಾಜಕೀಯ ಹೋರಾಟದಲ್ಲಿ ತೊಡಗಿಸುವ ಬಗೆಗೆ ಅವರಲ್ಲಿದ್ದ ಪೆಟಿ ಬೂರ್ಜ್ವಾ ಅಂಜಿಕೆ ಮತ್ತೆ ತನ್ನ ಮಾರಕ ಪಾತ್ರ ನಿರ್ವಹಿಸಿತು. ಸುಕಾರ್ನೋರವರೂ ಅವರು ಅವಲಂಬಿಸಿದ್ದ ಸೈನ್ಯಾಧಿಕಾರಿಗಳೂ ಎಡಪಂಥ ಪಾರ್ಟಿಗಳ, ಎಲ್ಲಕ್ಕೂ ಮಿಗಿಲಾಗಿ ಕಮ್ಯೂನಿಸ್ಟ್ ಪಾರ್ಟಿಯ, ಸದಸ್ಯರ ಸಹಭಾಗಿತೆಯನ್ನು ಮಿಲಿಟರಿ ಘಟಕಗಳ ಆಚರಣೆಯನ್ನು ಖಚಿತಪಡಿಸುವಂಥ, ಘರ್ಷಣೆ ಯಾವ ಪರಿಸ್ಥಿತಿಯಲ್ಲೂ ಹತೋಟಿ ಮೀರಿ ಹೋಗದಂತೆ ನೋಡಿಕೊಳ್ಳುವಂಥ ಸಣ್ಣಪುಟ್ಟ ಸಹಾಯಕ ಚಟುವಟಿಕೆಗಳಿಗಷ್ಟೆ ಸೀಮಿತಗೊಳಿಸಲು ತಮ್ಮೆಲ್ಲ ಯತ್ನ ಮಾಡಿದರು.

ಇಂಡೋನೇಷ್ಯದ ಕಮ್ಯೂನಿಸ್ಟ್ ಪಾರ್ಟಿಯ ಇಂದಿನ ದಸ್ತಾವೇಜುಗಳು ತೋರಿಸಿಕೊಡುವಂತೆ, ದುರದೃಷ್ಟವಶಾತ್ ಸುಕಾರ್ನೋರವರ ಯೋಜನೆಯೊಳಕ್ಕೆ ತರಲಾಗಿದ್ದ ಪಾರ್ಟಿ ನಾಯಕರ ಸಣ್ಣ ಗುಂಪು ಕೇವಲ ಅಧ್ಯಕ್ಷರ ಆಜ್ಞಾನುವರ್ತಿಯಾಗಷ್ಟೆ ನಡೆದುಕೊಂಡಿತು. ಆ ಸಂದರ್ಭಕ್ಕೆ ಅಗತ್ಯವಾಗಿದ್ದಂಥ ರಾಜಕೀಯ ಸ್ವಾತಂತ್ರ್ಯವನ್ನು ತೋರದೆ ಅದು ಅಧ್ಯಕ್ಷರ ಯೋಜನೆಗಳಿಗೆ ಅನುಸಾರ ತನಗೆ ನೀಡಲಾಗಿದ್ದ ಗೌಣವಾದ ಅಧೀನ ಪಾತ್ರವನ್ನಷ್ಟೆ ಒಪ್ಪಿಕೊಂಡು ಕುಳಿತಿತು. ಗಣತಂತ್ರವನ್ನು ಬಲಪಂಥದವರು ಒಡ್ಡಿದ್ದ ಭೀತಿಯಿಂದ ಸಂರಕ್ಷಿಸುವಂತೆ ಅದು ಜನರಿಗೆ ಮನವಿ ಮಾಡಿಕೊಳ್ಳಲಿಲ್ಲ.

ಇದರ ಫಲವೆಂದರೆ ಅಧ್ಯಕ್ಷರು ಕೈಕೊಂಡ ಯೋಜನೆ ಫಲಕಾರಿಯಾಗದುದು. ತದನಂತರ ಎಡಪಂಥದ ಶಕ್ತಿಗಳ ಮೇಲೆ ಪ್ರಮಾಣ ಮತ್ತು ಕ್ರೌರ್ಯಗಳಲ್ಲಿ ಅಭೂತಪೂರ್ವ ಎನ್ನುವಂಥ ಭೀತಿಕಾರಕ ಚಳವಳಿಯನ್ನು ಹರಿಬಿಡಲಾಯಿತು.

ಬಲಪಂಥದ ಶಕ್ತಿಗಳು ಮೊದಲು ಕಮ್ಯೂನಿಸ್ಟ್ ಪಾರ್ಟಿಯನ್ನೂ, ಎಡಪಂಥದ ರಾಷ್ಟ್ರೀಯವಾದಿಗಳನ್ನೂ ನಾಶಗೊಳಿಸಲು ನಿರ್ಧರಿಸಿದವು. ಹಾಗೆ ಅವು ಅಧ್ಯಕ್ಷರಿಗಿದ್ದ ಎಲ್ಲ ಸಂಘಟನಾತ್ಮಕ ಬೆಂಬಲವನ್ನೂ ಇಲ್ಲವಾಗಿಸಿ, ಅಧ್ಯಕ್ಷರ ಅಳಿದುಳಿದ ಜನಪ್ರಿಯತೆಯನ್ನು ತಮ್ಮ ಸ್ವಂತ ಹಿತಗಳಿಗೆ ಉಪಯೋಗಿಸಿಕೊಳ್ಳಲು ಹವಣಿಸಿದವು. ಹೀಗೆ ಈ ಮೊದಲ ಘಟ್ಟದಲ್ಲಿ ಅಧ್ಯಕ್ಷರ ಗತಿ ಇನ್ನೂ ಅಂತಿಮವಾಗಿ ನಿರ್ಧಾರಿತವಾಗಿರಲಿಲ್ಲ. ಅವರನ್ನು ವಿರೋಧಿಸುತ್ತಿದ್ದ ನಾಯಕರಲ್ಲಿ ಕೆಲವರು ಅವರನ್ನು ಕೊನೆಯ ಪಕ್ಷ ರಾಜ್ಯದ ನಾಮಮಾತ್ರ ಅಧಿಪತಿಯನ್ನಾಗಿ ಇರಿಸಿಕೊಂಡಿರುವುದಕ್ಕೆ ಒಪ್ಪಲು ಸಿದ್ಧರಾಗಿದ್ದರು. ಇದು ಸುಕಾರ್ನೋರವರ ಬೆಂಬಲಿಗರಲ್ಲಿ ಮಿತವಾದಿಗಳ ಒಂದು ವಿಭಾಗವನ್ನು ಅವರತ್ತ ಆಕರ್ಷಿಸುವುದಾಗಿದ್ದಿತು. ಅದಕ್ಕೂ ಹೆಚ್ಚು ಮುಖ್ಯವಾಗಿ ಇದು ಹೊಸ ಪ್ರಭುತ್ವವು ಸಂವಿಧಾನಾತ್ಮಕವಾಗಿಯೇ ಮುಂದುವರಿಯುವುದಕ್ಕೆ ಸಾಧ್ಯ ಮಾಡಿಕೊಡುತ್ತಿದ್ದಿತು. ಆದರೆ ಇದು ಜರುಗಲು ಸುಕಾರ್ನೋರವರು ಕೆಲವು ಷರತ್ತುಗಳನ್ನು ಪೂರೈಸಬೇಕಿದ್ದಿತು: ತಮ್ಮ ಅಧಿಕಾರವನ್ನು ತಗ್ಗಿಸುವುದಕ್ಕೆ ಒಪ್ಪಬೇಕಿದ್ದಿತು, ಕಮ್ಯೂನಿಸ್ಟ್ ಪಾರ್ಟಿಯು ದೇಶದಲ್ಲಿ ಅಧಿಕಾರ ವಶಪಡಿಸಿಕೊಳ್ಳಲು ಯತ್ನಿಸುತ್ತಿದೆಯೆಂದು ಆಪಾದನೆ ಹೊರಿಸಿ ಕಮ್ಯೂನಿಸ್ಟರನ್ನು ಸಾಮೂಹಿಕವಾಗಿ ಕಗ್ಗೊಲೆಗಯ್ಯುವುದಕ್ಕೆ ಅನುಮೋದನೆ ನೀಡಬೇಕಿದ್ದಿತು ಮತ್ತು ತಮ್ಮ ವಿದೇಶಾಂಗ ನೀತಿಯಲ್ಲಿ ಸಾಮ್ರಾಜ್ಯವಾದ ವಿರೋಧಿ ಪ್ರವೃತ್ತಿಗಳನ್ನು ತ್ಯಜಿಸಬೇಕಿದ್ದಿತು.

ಇಂಥ ಪರಿಸ್ಥಿತಿಯಲ್ಲಿ ಭುಗಿಲೆದ್ದ ಹೋರಾಟದಲ್ಲಿ ಸುಕಾರ್ನೋರವರ ವ್ಯಕ್ತಿತ್ವ ಅದರೆಲ್ಲ ಸಂಕೀರ್ಣತೆಯೊಂದಿಗೆ, ನಾಟಕೀಯತೆಯೊಂದಿಗೆ ಕಾಣಿಸಿಕೊಂಡಿತು. ವೈರುಧ್ಯಗಳು ಅಪರಿಹಾರ್ಯವೆಂಬುದು ಸುಸ್ಪಷ್ಟವಾದಾಗಲೂ, ವರ್ಗ ವೈಷಮ್ಯಗಳು ಅತ್ಯಂತ ತೀಕ್ಷ್ಣವಾದಾಗಲೂ, ದೇಶದಾದ್ಯಂತ ಕಮ್ಯೂನಿಸ್ಟರನ್ನೂ ಟ್ರೇಡ್ ಯೂನಿಯನ್ ಹಾಗೂ ರೈತ ಕಾರ್ಯಕರ್ತರನ್ನೂ ಕಗ್ಗೊಲೆಗಯ್ಯುತ್ತಿದ್ದಾಗಲೂ, ಸುಕಾರ್ನೋರವರು ತಮ್ಮ ನಿಲುವೇನು ಎನ್ನುವುದನ್ನು ನಿಷ್ಕೃಷ್ಟವಾಗಿ ತಿಳಿಸಿ ತಮ್ಮನ್ನಾಗಲೀ ಅಥವಾ ತಮ್ಮ ವಿರೋಧಿಗಳನ್ನಾಗಲೀ ಆಯ್ಕೆ ಮಾಡಿಕೊಳ್ಳಲು ಜನರಿಗೆ ಬಿಡುವಂಥ ಸಾಕಷ್ಟು ದೃಢ ಸಂಕಲ್ಪವನ್ನು ತೋರಲಿಲ್ಲ. ನಿಜ, ಅವರು ನಿರಂತರ ಪಟ್ಟುಹಿಡಿದು ಹೋರಾಟ ನಡೆಸಿದರು, ಆದರೆ ತಮ್ಮದೇ ರೀತಿಯಲ್ಲಿ. ಅಧ್ಯಕ್ಷರ ಭಾಷಣಗಳು ರಾಷ್ಟ್ರೀಯ ಏಕತೆಗಾಗಿ ಮನವಿಗಳಿಂದ ತುಂಬಿದ್ದವು, ದೇಶದಲ್ಲಿ ರಾಜಕೀಯ ಇತ್ಯರ್ಥ ಉಂಟುಮಾಡುವ ಭರವಸೆಗಳಿಂದ ತುಂಬಿದ್ದವು. ಅವರ ಶತ್ರುಗಳು ಅವರನ್ನು ನಿಜವಾದ ಅಧಿಕಾರದ ಎಲ್ಲ ಸ್ಥಾನಗಳಿಂದಲೂ ಸತತವಾಗಿ ದೂರ ಸರಿಸುತ್ತಿದ್ದಾಗಲೂ ಅವರು ತಮ್ಮೆಲ್ಲ ಭಾಷಣಗಳಲ್ಲೂ "ನಾನು ಇನ್ನೂ ರಾಷ್ಟ್ರಾಧ್ಯಕ್ಷನಾಗಿಯೇ, ಪ್ರಧಾನಿಯಾಗಿಯೇ, ಸರ್ವೋಚ್ಚ ಸೇನಾಧಿಪತಿಯಾಗಿಯೇ ಇದ್ದೇನೆ" ಎಂದು ಒತ್ತಿ ಹೇಳುತ್ತಲೇ ಇದ್ದರು. ಆದರೆ

ಎಷ್ಟೆಲ್ಲ ರಾಜಿಗಳನ್ನು ಮಾಡಿಕೊಂಡರೂ ಯುಕ್ತಿ ಚಲನೆಗಳನ್ನು ಪ್ರದರ್ಶಿಸಿಕೊಂಡರೂ ಅವರು ಯಾವ ಧ್ಯೇಯಗಳನ್ನು ತಾವು ಸೂತ್ರಬದ್ಧವೆಂದು ನಂಬಿದ್ದರೋ ಅವುಗಳನ್ನು ಮಾತ್ರ ಬಿಟ್ಟುಕೊಡಲಿಲ್ಲ. ಅವರು ತಮ್ಮ ಮನೋನಂಬಿಕೆಗಳನ್ನು ತ್ಯಜಿಸಲಿಲ್ಲ, ಕಮ್ಯೂನಿಸ್ಟರನ್ನು ಖಂಡಿಸಲಿಲ್ಲ (ಪ್ರತಿಕ್ರಾಂತಿಯ ಬಗೆಗೆ ನಿಜ ಹೇಳುವ ನಿರ್ಧಾರ ಅವರಲ್ಲಿಲ್ಲದಿದ್ದರೂ ಜನರಿಗೆ ನೇರವಾಗಿ ದ್ರೋಹ ಬಗೆಯುವ ಸಾಮರ್ಥ್ಯವಂತೂ ಅವರಲ್ಲಿರಲಿಲ್ಲ). ವಿದೇಶಾಂಗ ನೀತಿಯಲ್ಲಿ ಮಾರ್ಪಾಟುಗಳನ್ನು ಮಾಡಲೂ ಅವರು ಸಿದ್ಧರಿರಲಿಲ್ಲ. ತಮ್ಮ ರಾಜಕೀಯ ಚಟುವಟಿಕೆಗಳ ಅವಧಿಯಲ್ಲಿ ಸುಕಾರ್ನೋ ತುಂಬ ಆಗಾಗ್ಗೆ ರಿಯಾಯಿತಿಗಳನ್ನು ತೋರಿದರು. ಆದರೆ ಯಾವತ್ತೂ ಏನನ್ನು ಅವರು ತಮ್ಮ ಜನರಿಗೆ ಹಿತವೆಂದು ಸರಿಯಾಗಿಯೋ ತಪ್ಪಾಗಿಯೋ ಭಾವಿಸಿದ್ದರೋ ಅದರ ಹೆಸರಿನಲ್ಲಿ ಹಾಗೆ ಮಾಡಿದರು. ಅವರ ಶುದ್ಧ ಮಾನವ ದೌರ್ಬಲ್ಯಗಳೇನೇ ಇದ್ದರೂ ಅವರು ಎಲ್ಲ ಹಕ್ಕುಗಳನ್ನೂ ಕಳೆದುಕೊಂಡ "ರಾಷ್ಟ್ರಹಿತ"ನೆಂಬ ಥಳುಕಿನ ಬಿರುದಿನೊಂದಿಗೆ ಭೋಗಯುತ ಶಾಂತಿಯುತ ಜೀವನ ನಡೆಸಲೋಸುಗ ತಮ್ಮ ಮನೋನಂಬಿಕೆಗಳನ್ನೇನೂ ಬಿಟ್ಟುಕೊಡಲಿಲ್ಲ. 1967ರಲ್ಲಷ್ಟೆ ಅವರ ವಿರೋಧಿಗಳು ಅವರನ್ನು ಪಳಗಿಸುವ ವಿಚಾರವನ್ನು ಬಿಟ್ಟುಕೊಟ್ಟರು ಮತ್ತು ಅಧಿಕೃತವಾಗಿ ಅವರನ್ನು ರಾಷ್ಟ್ರಾಧ್ಯಕ್ಷರ ಸ್ಥಾನದಿಂದ ತೆಗೆದುಹಾಕಿದರು. ಇದಾದನಂತರ ಅವರನ್ನು ಮೂರು ವರ್ಷಗಳ ಕಾಲ ಗೃಹಬಂಧನದಲ್ಲಿ ಇರಿಸಲಾಗಿತ್ತು, ಸತತವಾಗಿ ವಿಚಾರಣೆಗಳಿಗೆ ಒಳಪಡಿಸಲಾಯಿತು, ಪತ್ರಿಕೆಗಳಲ್ಲಿ ಅವರ ತೇಜೋವಧೆ ಮಾಡುವ ಲೇಖನಗಳನ್ನು ಪ್ರಕಟಿಸಲಾಯಿತು. ಇವೆಲ್ಲವುಗಳ ಫಲವಾಗಿ ಸುಕಾರ್ನೋರವರ ಆರೋಗ್ಯ ಶೀಘ್ರವಾಗಿ ಹದಗೆಟ್ಟಿತು. ಅವರು ತಮ್ಮ ಎಪ್ಪತ್ತನೆಯ ವಯಸ್ಸಿನಲ್ಲಿ 1970ರ ಜೂನ್ 21ರಂದು ತೀರಿ ಹೋದರು.

ಅನಂತರ ಅನಿರೀಕ್ಷಿತವಾದುದು ಸಂಭವಿಸಿತು. ಸುಕಾರ್ನೋರವರ ಹೆಸರು ಹೊಸ ಜೀವ ತಾಳಿತು. ನಿಧಿಸಿದ ನಾಯಕನ ಬಗೆಗೆ ಜನರ ಮಧ್ಯೆ ಸಹಾನುಭೂತಿಯ ಭಾರಿ ಪ್ರವಾಹ ಹೊರಹೊಮ್ಮಿತು. ಅದು ನಾನಾ ರೀತಿಗಳಲ್ಲಿ ಕಾಣಿಸಿಕೊಂಡಿತು. ಪೂರ್ವ ಜಾವಾದಲ್ಲಿನ ಅವರ ಸಮಾಧಿ ಒಂದು ಯಾತ್ರಾ ಸ್ಥಳವಾಯಿತು. ಅವರ ಕುರಿತ ಪುಸ್ತಕಗಳ ಮಹಾ ಪೂರವೇ ಹೊರಬಂದಿತು. ದೇಶದ ಪುಸ್ತಕದ ಮಾರುಕಟ್ಟೆಯಲ್ಲಿ ಅವರನ್ನು ಕುರಿತ ಲೇಖನಗಳು ಸ್ಮರಣೆಗಳು ತುಂಬಿದವು. ಸರಕಾರದ ನಿರ್ಧಾರದ ಪ್ರಕಾರ ಗಣತಂತ್ರದ ಈ ಪ್ರಥಮ ಅಧ್ಯಕ್ಷರ ಸಮಾಧಿಯ ಬಳಿ ಒಂದು ಸ್ಮಾರಕ ಭವನವನ್ನು ನಿರ್ಮಿಸಲಾಯಿತು. "ಇಂಡೋನೇಷ್ಯನ್ ಸ್ವಾತಂತ್ರ್ಯದ ಉದ್ಘೋಷಕ" ಎಂಬ ಮರಣಾನಂತರ ಬಿರುದನ್ನು ಅವರಿಗೆ ಅಧಿಕೃತವಾಗಿ ನೀಡಲಾಯಿತು.

ಈ ಭಾವನಾತ್ಮಕ ಪ್ರತಿಕ್ರಿಯೆಯನ್ನು ಒಂದು ಪಕ್ಕಕ್ಕೆ ಬಿಟ್ಟು ನೋಡಿದಾಗ ಸುಕಾರ್ನೋರವರ ವಿಚಾರ ಮತ್ತು ಚಟುವಟಿಕೆಗಳಲ್ಲಿ ಆಸಕ್ತಿಯ ಮರುಹುಟ್ಟು ದೇಶದ ಭವಿಷ್ಯತ್ತಿನ ಬೆಳವಣಿಗೆಯ ಮಾರ್ಗಕ್ಕೆ ಸಂಬಂಧಿಸಿದ ಸೈದ್ಧಾಂತಿಕ ಹೋರಾಟದ ರೂಪಗಳಲ್ಲಿ ಒಂದಾಗಿರುವುದು ಕಂಡುಬರುತ್ತದೆ. ಆದರೂ ಅರವತ್ತರ ದಶಕದ ಮೊದಲಭಾಗದಲ್ಲಿ ಅಸ್ತಿತ್ವದಲ್ಲಿದ್ದ ರೂಪದಲ್ಲಿ "ನಿಯಂತ್ರಿತ ಪ್ರಜಾಪ್ರಭುತ್ವ" ನೀತಿಯನ್ನು ಮತ್ತೆ ಜಾರಿಗೆ ತರುವುದು ದಿವಂಗತ ನಾಯಕರ ಅತ್ಯಂತ ನಿಷ್ಠಾವಂತ ಅನುಯಾಯಿಗಳಿಗೂ ಅಭಿಮಾನಿಗಳಿಗೂ ಬಹುಶಃ ತೃಪ್ತಿ ನೀಡದು. ಕಳೆದ ಎರಡು ದಶಕಗಳಲ್ಲಿ ಇಂಡೋನೇಷ್ಯನ್ ಸಮಾಜವು ಗಳಿಸಿಕೊಂಡಿರುವ ರಾಜಕೀಯ ಅನುಭವವು ಅತಿ ಮಹತ್ವದ್ದಾಗಿದೆ. 1965ರಲ್ಲಿ ಸುಕಾರ್ನೋರವರ ಅಧಿಕಾರಕ್ಕೆ ಕೊನೆಹಾಕಿದ ಗುರುತರವಾದ ಮುಗ್ಗಟ್ಟಂತೂ ಅವರ ನೀತಿಯನ್ನು ವಿಮರ್ಶಾತ್ಮಕವಾಗಿ ಮರುಪರಿಶೀಲನೆ ಮಾಡುವ ಆವಶ್ಯಕತೆಯನ್ನು ತೋರಿಸಿಕೊಟ್ಟಿದೆ. ಆದ್ದರಿಂದಲೇ ಇಂಡೋನೇಷ್ಯದ ಡೆಮೊಕ್ರಾಟಿಕ್ ಪಾರ್ಟಿಯು 1982ರ ಪಾರ್ಲಿಮೆಂಟು ಚುನಾವಣೆಗಳಲ್ಲಿ ಸುಕಾರ್ನೋರವರ ಹೆಸರನ್ನು ತನ್ನ ಸಂಕೇತ ಹಾಗೂ ಧ್ವಜವನ್ನಾಗಿ ಮಾಡಿಕೊಂಡರೂ ಯಾವುದೇ ಏಕೀಕೃತ ಧನಾತ್ಮಕ ಕಾರ್ಯಕ್ರಮವನ್ನು ಮುಂದಿರಿಸದಿದ್ದುದರಿಂದ ಹೆಚ್ಚಿನ ಮತ ಗಳಿಸಲು ಅಸಮರ್ಥವಾದುದರಲ್ಲಿ ಆಶ್ಚರ್ಯವೇನಿಲ್ಲ. ಆದರೂ ಇಂಡೋನೇಷ್ಯದಲ್ಲಿ ಕ್ರಾಂತಿಕಾರಿ ಪ್ರಕ್ರಿಯೆ ತೀವ್ರವಾಗಿ ಹಾಗೂ ಎದ್ದುಕಾಣುವಂತೆ ಕುಂಠಿತಗೊಂಡಿರುವಂಥ, ಬಹುರಾಷ್ಟ್ರೀಯ ಕಾರ್ಪೊರೇಷನ್‌ಗಳು ರಾಷ್ಟ್ರೀಯ ಸಾರ್ವಭೌಮತ್ವಕ್ಕೆ ಹೆಚ್ಚು ಹೆಚ್ಚಾಗಿ ಭೀತಿ ಒಡ್ಡುತ್ತಿರುವಂಥ, ಸಾಮಾಜಿಕ ಹಾಗೂ ಆಸ್ತಿ ವ್ಯತ್ಯಾಸಗಳೂ ಸಾಮಾಜಿಕ ಹಾಗೂ ವರ್ಗ ಅಸಮಾನತೆಗಳೂ ಗಾಢಗೊಳ್ಳುತ್ತಿರುವಂಥ ಇಂದಿನ ಪರಿಸ್ಥಿತಿಯಲ್ಲಿ, ಹಿಂದೆ ಸುಕಾರ್ನೋರವರು ಘೋಷಿಸಿದ ಅನೇಕ ಧ್ಯೇಯಗಳು ಮತ್ತೆ ಜನರ ಕಣ್ಮುಂದೆ ಆಕರ್ಷಕವಾಗಿ ಕಾಣಬರುತ್ತಿವೆ, ಅನ್ನುವುದರಲ್ಲಿ ಸಂದೇಹವಿಲ್ಲ. "ರಾಜಕೀಯ ಸ್ವಾತಂತ್ರ್ಯ, ಸ್ವಾವಲಂಬನೆ (ಆರ್ಥಿಕತೆಯಲ್ಲಿ), ಸಂಸ್ಕೃತಿಯ ರಾಷ್ಟ್ರೀಯ ಸ್ವೋಪಜ್ಞತೆ, ಇವೇ ಮುಂತಾದ ಸುಕಾರ್ನೋರವರ ಆಶೋತ್ತರಗಳ ಅಂದಾಜು ಮಾಡುವಲ್ಲಿ ಎಲ್ಲ ಛಾಯೆಗಳ ರಾಷ್ಟ್ರೀಯವಾದಿಗಳೂ ಒಮ್ಮತ ಹೊಂದಿದ್ದಾರೆ," ಎಂದು 'ಇಂಡೋನೇಷ್ಯನ್ ಅಬ್ಸರ್‌ವರ್' ಪತ್ರಿಕೆ ಸಂಪಾದಕೀಯ ಲೇಖನವೊಂದರಲ್ಲಿ (ಜುಲೈ 9, 1979) ಬರೆಯಿತು. "ಜನ ಮತ್ತೆ ರಾಷ್ಟ್ರೀಯ ಘನತೆ, ಆರ್ಥಿಕ ಸ್ವಾತಂತ್ರ್ಯ ಹಾಗೂ ರಾಜಕೀಯ ಸಾರ್ವಭೌಮತ್ವ ವಿಚಾರಗಳ ಕಡೆಗೆ ತಿರುಗುತ್ತಿದ್ದಾರೆ. ಇವೆಲ್ಲವನ್ನೂ ಬುಂಗ್ ಕಾರ್ನೋ(ಸುಕಾರ್ನೋ – ಗ್ರಂಥಕರ್ತೃ.)ರವರ ಪ್ರಕಲ್ಪನೆಗಳಲ್ಲಿ ಕಾಣಬಹುದಾಗಿದೆ"* ಎಂದು ಇಂಡೋನೇಷ್ಯದ ಪಾರ್ಲಿಮೆಂಟ್ ಸದಸ್ಯ ಯೂಸೆಫ್ ಹಸಿಮ್ ಒತ್ತಿ ಹೇಳಿದ್ದಾರೆ.

ನಗರ ಹಾಗೂ ಗ್ರಾಮಗಳ ದುಡಿಯುವ ಜನರ ಶೋಷಣೆ ತೀವ್ರಗೊಂಡಿರುವುದು, ಬಹಿರಂಗವಾಗಿಯೇ ವ್ಯಾಪಾರೀ ಸಂಬಂಧಗಳು ಮುನ್ನೆಲೆಯಲ್ಲಿ ಕಾಣಿಸಿಕೊಂಡಿರುವುದು, ಇವು ಸುಕಾರ್ನೋರವರ ಬಂಡವಾಳವಾದ ವಿರೋಧಿ ಸರ್ವಸಮಾನತಾ ಘೋಷಣೆಗಳ ಬಗೆಗೆ ಒಂದು ರೀತಿಯ ಹಂಬಲವನ್ನು ಉಂಟುಮಾಡಿವೆ, ಅವರು ಶಾಸನ ಮಾಡಿ ಘೋಷಿಸಿದ ಭೂಸುಧಾರಣೆಗಳ ನೆನಪನ್ನು ಮರುಕಳಿಸಿವೆ ಮತ್ತು ಕೊನೆಯದಾದರೂ ಕನಿಷ್ಠವಲ್ಲದಂತೆ, ಅವರು ಅಧಿಕಾರದಲ್ಲಿದ್ದಾಗಿನ, ಸಾಮೂಹಿಕ ಬುನಾದಿಯ ಕಮ್ಯೂನಿಸ್ಟ್ ಪಾರ್ಟಿಯೂ ಬಹುಮಿಲಿಯ ಸದಸ್ಯಬಲದ ಪ್ರಜಾಸತ್ತಾತ್ಮಕ ಸಂಘಟನೆಗಳೂ ದೇಶದಲ್ಲಿ ಕಾರ್ಯ ಜರುಗಿಸುತ್ತಿದ್ದಾಗಿನ ಆ ಕಾಲದ ಸ್ಮರಣೆಯನ್ನು ಮತ್ತೆ ಉಂಟುಮಾಡಿವೆ. ಈ ಸಂಘಟನೆಗಳು ಏನೆಲ್ಲ ತೊಂದರೆಗಳನ್ನು ಎದುರಿಸುತ್ತಿದ್ದರೂ ಏನೆಲ್ಲ ತಪ್ಪುಗಳನ್ನು ಮಾಡಿದರೂ ಅವು ಅಸ್ತಿತ್ವದಲ್ಲಿದ್ದವು ಎಂಬ ಅಂಶವೇ ಆಸ್ತಿವಂತ ವರ್ಗಗಳ ಮೇಲೆ ಒಂದು ಕಡಿವಾಣವಾಗಿದ್ದಿತು, ನಿರ್ದಿಷ್ಟ ಸಾಮಾಜಿಕ ರಿಯಾಯಿತಿಗಳನ್ನು ತೋರುವಂತೆ ಅವುಗಳನ್ನು ಒತ್ತಾಯಿಸುತ್ತಿದ್ದಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಇಂಡೋನೇಷ್ಯದ ಪ್ರಜಾಸತ್ತಾತ್ಮಕ ವೃತ್ತಗಳು ಸುಕಾರ್ನೋರವರು ಬಿಟ್ಟುಕೊಟ್ಟು ಹೋಗಿರುವ ಪರಂಪರೆಯ ಕಡೆಗೆ ತಿರುಗುತ್ತಿರುವುದಕ್ಕೆ ಮುಖ್ಯ ಕಾರಣ, ಅವರು ದೇಶದ ನಾಯಕರಾಗಿದ್ದ ಕಾಲಾವಧಿಯ ನಿಜವಾದ ಪ್ರಜಾಸತ್ತಾತ್ಮಕ ಸಾಧನೆಗಳಾಗಿವೆ, ಅವರು ಘೋಷಿಸಿದ ಆದರೆ ಕಾರ್ಯಗತಗೊಳಿಸದ ಗುರಿಗಳು ಹಾಗೂ ಧ್ಯೇಯಗಳೇ ಆಗಿವೆ. ಅವರ ದೇಶದಲ್ಲಿ ವೈಜ್ಞಾನಿಕ ಸಮಾಜವಾದದ ವಿಚಾರಧಾರೆಯ ಪ್ರಚಾರವನ್ನು ನಿಷೇಧಿಸಿದನಂತರ ಸುಕಾರ್ನೋರವರ ಪಾಪ್ಯುಲಿಸ್ಟ್ ವಿಚಾರಗಳೇ ಶಾಸನಬದ್ಧ ರಾಜಕೀಯ ಚೌಕಟ್ಟಿನೊಳಗೆ ಅತ್ಯಂತ ಎಡಪಂಥದ ವಿಚಾರಗಳಾಗಿದ್ದವು, ಇದು ನಿಸ್ಸಂದೇಹವಾಗಿಯೂ ಅವರ ವಿಚಾರಗಳನ್ನು ಹೆಚ್ಚು ಆಕರ್ಷಕವನ್ನಾಗಿ ಮಾಡಿದವು, ಎಂದೂ ಹೇಳಬಹುದಾಗಿದೆ.

ಈ ಪರಿಸ್ಥಿತಿಗಳಲ್ಲಿ ಇಂಡೋನೇಷ್ಯದ ಆಳುವ ವೃತ್ತಗಳು ದಿವಂಗತ ಅಧ್ಯಕ್ಷರ ನೆನಪನ್ನು ಭಾಗಶಃವಾದರೂ ಪುನರುಜ್ಜೀವನಗೊಳಿಸುವುದು ಆವಶ್ಯವೆಂದು ಕಂಡುಕೊಂಡವು. ಅವು ಅವರ ವಿಚಾರಗಳಿಗೆ ತಮ್ಮವೇ ವ್ಯಾಖ್ಯಾನಗಳ ತಿರುವನ್ನು ನೀಡಿದವು. ಅವುಗಳ ನೀತಿಯಲ್ಲಿ ರಾಷ್ಟ್ರೀಯವಾದಿ ಪ್ರವೃತ್ತಿಗಳು ದೃಢಗೊಳ್ಳುವಂತೆ ಅವುಗಳ ಒಂದು ರೀತಿಯ ವಿಕಸನದೊಂದಿಗೆ ಈ ವಿದ್ಯಮಾನ ಸಂಬಂಧಿಸಿದೆಯೇ ಎಂಬುದನ್ನು ಕಾಲವಷ್ಟೆ ತೋರಿಸಿಕೊಡಲಿರುವುದು. ಈ ಮಧ್ಯೆ

Malahari, No. 2, 1978, p.6. – ಸಂ.

1945ರ ಸಂವಿಧಾನದ ಆಧಾರದ ಮೇಲೆ ಮತ್ತು ಅಂಗೀಕೃತ ರಾಷ್ಟ್ರೀಯ ಮನೋಧರ್ಮವಾಗಿ ಪಂಚಶೀಲ ಸೂತ್ರಗಳ ಆಧಾರದ ಮೇಲೆ ಇಂಡೋನೇಷ್ಯದ ಸಾಮಾಜಿಕ ಶಕ್ತಿಗಳನ್ನು ಒಂದುಗೂಡಿಸಲು ಬಯಸುತ್ತ ಇಂದಿನ ಇಂಡೋನೇಷ್ಯದ ಅಧಿಕೃತ ಸಿದ್ಧಾಂತಕರ್ತರು ಆ ದಸ್ತಾವೇಜುಗಳ ಕರ್ತೃವಿನ ವಿಚಾರಗಳಿಂದ ತಮ್ಮನ್ನು ಸಂಪೂರ್ಣವಾಗಿ ಪ್ರತ್ಯೇಕಗೊಳಿಸಿಕೊಳ್ಳುವುದು ಅನವಶ್ಯವೆಂದು ಪರಿಗಣಿಸಿದ್ದಾರೆ. ಅದರಲ್ಲೂ ಆ ವಿಚಾರಗಳಿಗೆ ಇಂದು ನೀಡಲಾಗುತ್ತಿರುವ ವ್ಯಾಖ್ಯಾನಗಳ ಬಗೆಗೆ ಮತ್ತು ಅವುಗಳನ್ನು ಕಾರ್ಯಗತಗೊಳಿಸುತ್ತಿರುವ ಬಗೆಗೆ ಅವುಗಳ ಕರ್ತೃವೇ ಇನ್ನಷ್ಟು ಮಾತ್ರವೂ ತನ್ನ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿಲ್ಲದಿರುವಾಗ. ಜಾತ್ಯತೀತತೆಯು ಸುಕಾರ್ನೋರವರ ವಿಚಾರಗಳ ವಿಶಿಷ್ಟ ಲಕ್ಷಣವಾಗಿದ್ದಿತು. ಇಂದು ಮುಸ್ಲಿಮ್ ವಿರೋಧವು ಬೆಳೆಯುತ್ತಿರುವಾಗ ಈ ಜಾತ್ಯತೀತ ಭಾವನೆಗಳು ವಿಶೇಷವಾಗಿ ಹೆಚ್ಚು ಅಗತ್ಯವಾಗಿವೆ. ಮತ್ತೊಂದು ಕಡೆ, ಈಚೆಗಿನ ವರ್ಷಗಳಲ್ಲಿ ದೇಶದಲ್ಲಿ ವರ್ಗ ವೈಷಮ್ಯಗಳು ತೀವ್ರಗೊಳ್ಳುತ್ತಿರುವಾಗ ಮತ್ತು ಕಾರ್ಮಿಕರ ಚಳವಳಿ ಬೆಳೆಯುತ್ತಿರುವಾಗ, ವರ್ಗಗಳ ನಡುವೆ ಶಾಂತಿಯ ಕುರಿತೂ ಇಂಡೋನೇಷ್ಯದ ಸಮಾಜದಲ್ಲಿನ ಸಾಮಾಜಿಕ ಸಾಮರಸ್ಯತೆಯ ಕುರಿತೂ ಸುಕಾರ್ನೋರವರು ಹೇಳುತ್ತಿದ್ದ ವಿಚಾರಗಳನ್ನು ಪ್ರಚಾರ ಮಾಡುವುದು ಕಾರ್ಮಿಕ ಜನರಲ್ಲಿ ವರ್ಗಜಾಗೃತಿ ಬೆಳೆಯುತ್ತಿರುವುದನ್ನು ನಿಗ್ರಹಿಸುವುದಕ್ಕೆ ಒಂದು ಸಾಧನವಾಗಿ ನೆರವಾಗುತ್ತಿದೆ.

ಸುಕಾರ್ನೋರವರ ವಿರೋಧಿಗಳು ಅವರ ಎಲ್ಲ ತಪ್ಪುಗಳನ್ನೂ, ಆರ್ಥಿಕ ಅರಾಜಕತೆ ಉಂಟುಮಾಡಿದುದನ್ನೂ, ವಿದೇಶಾಂಗ ನೀತಿಯ ಅವರ ತಪ್ಪು ಲೆಕ್ಕಾಚಾರಗಳನ್ನೂ ಮರೆಯಲು ಮತ್ತು ಅವರನ್ನು ಕ್ಷಮಿಸಲು ಸಿದ್ಧರಿದ್ದಾರೆ. ತಾವು ಅವರನ್ನು ಉರುಳಿಸಿದುದು ಅವರ ತಪ್ಪುಗಳಿಗಾಗಿ ಅಷ್ಟಾಗಿ ಅಲ್ಲ, ಆದರೆ ಅವರ ನಿಜವಾದ ಹಾಗೂ ಕಾಲ್ಪನಿಕ ಕ್ರಾಂತಿಕಾರಿ ಸುಪ್ತಶಕ್ತಿಗಳಿಗಾಗಿ, ಎಂದವರು ಹೇಳುತ್ತಾರೆ. ಆದ್ದರಿಂದ ಪ್ರಜಾಸತ್ತಾತ್ಮಕ ಶಕ್ತಿಗಳ ಏಕತೆಯ ಕುರಿತು, ಕಾರ್ಮಿಕ ಜನರು ಸ್ವಂತ ವಿಚಾರಧಾರೆಯನ್ನೂ ಸ್ವಂತ ಪಾರ್ಟಿಯನ್ನೂ ಹೊಂದಿರುವ ಹಕ್ಕಿಗೆ ಮನ್ನಣೆ ನೀಡಿದಂಥ NASAKOM ಪ್ರಕಲ್ಪನೆಯ ಕುರಿತು ಸುಕಾರ್ನೋರವರ ವಿಚಾರಗಳ ಮೇಲೆಯೇ ಇಂದು ಸುಕಾರ್ನೋರವರ ವಿರೋಧಿಗಳ ಟೀಕೆ ಕೇಂದ್ರೀಕೃತವಾಗಿರುವುದು ಆಕಸ್ಮಿಕವೇನಲ್ಲ. ದಿವಂಗತ ಅಧ್ಯಕ್ಷರ ಇತರ ಅನೇಕ ವಿಚಾರಗಳು ಪರಿಗಣಿತವಾಗದೆ ಉಳಿದಿರುವಾಗ, ಅಥವಾ ಕೆಲವು ಮಾರ್ಪಾಟುಗಳನಂತರ ತಮ್ಮ ಪ್ರಸ್ತುತತೆಯನ್ನು ಉಳಿಸಿಕೊಂಡಿವೆಯೆಂದು ಮನ್ನಿತವಾಗುತ್ತಿರುವಾಗ, ಈ ನಿರ್ದಿಷ್ಟ ವಿಚಾರಕ್ಕೆ ಸಂಬಂಧಿಸಿ ಮಾತ್ರ ಅವರ ವಿರೋಧಿಗಳ ನಿಲುವು ಬದಲಾಗದೆ ಉಳಿದಿದೆ.

ಸುಕಾರ್ನೋರವರು ಏನೆಲ್ಲ ಶ್ರೇಷ್ಠ ಗುಣಗಳನ್ನು ಹೊಂದಿದ್ದರೂ, ಸಂಮೋಹಕತೆಯನ್ನು ಹೊಂದಿದ್ದರೂ ಮಾನವ ದೌರ್ಬಲ್ಯಗಳನ್ನು ಹೊಂದಿದ್ದರೂ, ಛಲಗಾರಿಕೆಯನ್ನು ಹೊಂದಿದ್ದರೂ, ಚಂಚಲತೆಯನ್ನು ಹೊಂದಿದ್ದರೂ, ಅವರು ಇಂಡೋನೇಷ್ಯನ್ ಜನರ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನಾ ಹೋರಾಟದ, ಸಾಮ್ರಾಜ್ಯವಾದ ಮತ್ತು ವಸಾಹತುವಾದಗಳ ವಿರುದ್ಧ ಜನತೆಗಳ ಹೋರಾಟದ, ಇತಿಹಾಸಕ್ಕೆ ಸೇರಿದವರಾಗಿದ್ದಾರೆ. ಅದೇ ರೀತಿ ಅವರ ಅನುಭವವು, ಅವರು ದೇಶದ ನಾಯಕರಾಗಿದ್ದ ಕಾಲಘಟ್ಟದ ಅನುಭವವು ಅದರೆಲ್ಲ ವೈವಿಧ್ಯತೆ, ನಾಟಕೀಯತೆ ಹಾಗೂ ಸಾಹಸಗಳೊಂದಿಗೆ ಇಂಡೋನೇಷ್ಯನ್ ಜನರ ಚಾರಿತ್ರಿಕ ಅನುಭವದ ಒಂದು ಭಾಗವಾಗಿದೆ.

ಗಮಾಲ್ ಅಬ್ದೆಲ್ ನಾಸೆರ್

ಈಜಿಪ್ಟ್ ಹಾಗೂ ಅರಬ್ ರಾಷ್ಟ್ರೀಯ-ವಿಮೋಚನಾ ಚಳವಳಿಗಳ ಒಬ್ಬ ಶ್ರೇಷ್ಠ ಕಾರ್ಯಕರ್ತ.

ಜನನ 1918ರ ಜನವರಿ 15ರಂದು, ಆಸ್ಯೂತ್ ಪ್ರಾಂತ (ಮೇಲಿನ ಈಜಿಪ್ಟ್)ದ ಬೆನ್ ಮೂರ್ ಪಟ್ಟಣದಲ್ಲಿ, ಅಂಚೆ ಕಾರ್ಯಕರ್ತನೊಬ್ಬನ ಕುಟುಂಬದಲ್ಲಿ. ಎಂಟನೆಯ ವಯಸ್ಸಿನಲ್ಲಿ ಕೈರೋದಲ್ಲಿ 'ಅಲ್‌ನಾಹ್ದ ಅಲ್‌ಮಿಸ್ರಿಯ' ಸೆಕೆಂಡರಿ ಶಾಲೆ ಸೇರಿ 1935ರಲ್ಲಿ ಶ್ರೇಷ್ಠ ದರ್ಜೆಯಲ್ಲಿ ವ್ಯಾಸಂಗ ಪೂರೈಸಿದರು.

ಎಳೆಯ ವಯಸ್ಸಿನಲ್ಲೇ ರಾಜಕಾರಣದಲ್ಲಿ ಆಸಕ್ತಿ ಮೊಳೆಯಿತು. 16ನೆಯ ವಯಸ್ಸಿನಲ್ಲೇ ದೇಶದಲ್ಲಿ ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಶಾಲಾ ವಿದ್ಯಾರ್ಥಿಗಳ ಪ್ರದರ್ಶನ ಸಂಘಟಿಸಿದ್ದರು.

1937-1939ರಲ್ಲಿ ರಾಯಲ್ ಮಿಲಿಟರಿ ಅಕಾದೆಮಿಯಲ್ಲಿ ವ್ಯಾಸಂಗ ಮಾಡಿದರು. ಜನರಲ್ ಸ್ಟಾಫ್ ಕಾಲೇಜಿನಿಂದ ಉನ್ನತ ಅಂಕಗಳೊಂದಿಗೆ ಕಿರಿಯ ಲೆಫ್ಟಿನೆಂಟ್ ದರ್ಜೆಯಲ್ಲಿ ಪದವೀಧರರಾಗಿ ಹೊರಬಂದರು. 1939-1942ರಲ್ಲಿ ಈಜಿಪ್ಟ್ ಹಾಗೂ ಸುಡಾನ್‌ಗಳಲ್ಲಿ ನಾನಾ ಮಿಲಿಟರಿ ಘಟಕಗಳಲ್ಲಿ ಸೇವೆ ಸಲ್ಲಿಸಿದರು.

1942ರಲ್ಲಿ 'ಸ್ವತಂತ್ರ ಸೈನ್ಯಾಧಿಕಾರಿಗಳು' ಎಂಬ ಶಾಸನಬಾಹಿರ ಸಂಘಟನೆ ಕಟ್ಟಿದರು. 1948-1949ರ ಪ್ಯಾಲೆಸ್ಟೈನ್ ಯುದ್ಧದ ಕದನಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದರು. 1949ರಿಂದ 1952ರವರೆಗೆ ಜನರಲ್ ಸ್ಟಾಫ್ ಕಾಲೇಜಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು.

1953ರ ಜನವರಿ ಹಾಗೂ 1954ರ ಮೇ ನಡುವೆ 'ಲಿಬರೇಷನ್ ರ್‍ಯಾಲಿ' ಸಂಸ್ಥೆಯ (ತದನಂತರ ಇದು ನ್ಯಾಷನಲ್ ಯೂನಿಯನ್ ಪಾರ್ಟಿ ಆಯಿತು) ಪ್ರಧಾನ ಕಾರ್ಯದರ್ಶಿಯಾಗಿದ್ದರು, 1954ರ ಜೂನ್‌ನಿಂದ 1957ರಲ್ಲಿ ಸಂಸ್ಥೆ ವಿಸರ್ಜನೆಗೊಳ್ಳುವವರೆಗೂ ಅದರ ಅಧ್ಯಕ್ಷರಾಗಿದ್ದರು.

1953 ಮೇನಿಂದ 1954ರ ಫೆಬ್ರುವರಿಯವರೆಗೆ ಅವರು 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್'ನ ಉಪಾಧ್ಯಕ್ಷರಾಗಿದ್ದರು; 1953ರ ಜೂನ್‌ನಿಂದ 1954ರ ಫೆಬ್ರುವರಿಯವರೆಗೆ ಪ್ರಧಾನಮಂತ್ರಿ ನಗೀಬ್‌ರವರ ಪ್ರಥಮ ಡೆಪ್ಯೂಟಿ ಆಗಿದ್ದರು, 1953ರ ಜೂನ್‌ನಿಂದ ಅಕ್ಟೋಬರ್‌ವರೆಗೆ ನಗೀಬ್‌ರವರ ಸರಕಾರದಲ್ಲಿ ಆಂತರಿಕ ವ್ಯವಹಾರಗಳ ಸಚಿವರಾಗಿದ್ದರು.

1954ರ ಮಾರ್ಚ್‌ನಲ್ಲಿ ಮತ್ತು ಅನಂತರ 1956ರ ಜೂನ್‌ನಿಂದ ಆಗಸ್ಟ್‌ವರೆಗೆ ಈಜಿಪ್ಟ್‌ನ ಮಿಲಿಟರಿ ಗವರ್ನರ್-ಜನರಲ್ ಆಗಿದ್ದರು. 1954ರ ಏಪ್ರಿಲ್‌ನಿಂದ 1956ರ ಜೂನ್‌ವರೆಗೆ ಪ್ರಧಾನಮಂತ್ರಿ ಹಾಗೂ 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್'ನ ಅಧ್ಯಕ್ಷರಾಗಿದ್ದರು.

1956ರ ಜೂನ್‌ನಿಂದ ಮರಣಿಸುವವರೆಗೆ ಈಜಿಪ್ಟ್ ಗಣತಂತ್ರದ ಅನಂತರ ಐಕ್ಯ ಅರಬ್ ಗಣತಂತ್ರದ ಪ್ರಥಮ ಅಧ್ಯಕ್ಷರಾಗಿದ್ದರು. ಸರಕಾರದ ಅಧಿಪತಿಯಾಗಿಯೂ, ಸಶಸ್ತ್ರ ದಳಗಳ ಕಮಾಂಡರ್-ಇನ್-ಚೀಫ್ ಕೂಡ ಆಗಿದ್ದರು. 'ಅರಬ್ ಸೋಷಲಿಸ್ಟ್ ಯೂನಿಯನ್' ಮತ್ತಿತರ ಸಾಮೂಹಿಕ ರಾಜಕೀಯ ಸಂಘಟನೆಗಳ ಅಧಿಪತಿಯೂ ಆಗಿದ್ದರು.

ನಾಸೆರ್‌ರವರು ಸೋವಿಯತ್ ಒಕ್ಕೂಟಕ್ಕೆ ಹಲವಾರು ಬಾರಿ – 1958, 1965, 1968 ಹಾಗೂ 1970ರಲ್ಲಿ ಭೇಟಿ ಕೊಟ್ಟಿದ್ದರು.

1956ರಲ್ಲಿ ಸಾಮ್ರಾಜ್ಯಶಾಹಿ ದುರಾಕ್ರಮಣವನ್ನು ಹಿಮ್ಮೆಟ್ಟಿಸಿದುದಕ್ಕಾಗಿ, ಅಂತರರಾಷ್ಟ್ರೀಯ ಸೌಮನಸ್ಯ ಹಾಗೂ ಶಾಂತಿ ಧ್ಯೇಯಕ್ಕೆ ಸಲ್ಲಿಸಿದ ಸೇವೆಗಾಗಿ, ಸೋವಿಯತ್ ಒಕ್ಕೂಟ ಮತ್ತು ಐಕ್ಯ ಅರಬ್ ಗಣತಂತ್ರಗಳ ಜನತೆಗಳ ನಡುವೆ ಸ್ನೇಹ ಸಹಕಾರ ದೃಢೀಕರಣದಲ್ಲಿ ಪ್ರಮುಖ ಪಾತ್ರ ವಹಿಸಿದುದಕ್ಕಾಗಿ, ಅವರಿಗೆ 1964ರಲ್ಲಿ 'ಸೋವಿಯತ್ ಒಕ್ಕೂಟ ವೀರ' ಬಿರುದನ್ನೂ 'ಲೆನಿನ್ ಪ್ರಶಸ್ತಿ'ಯನ್ನೂ 'ಸ್ವರ್ಣ ನಕ್ಷತ್ರ ಪದಕ'ವನ್ನೂ ನೀಡಿ ಗೌರವಿಸಲಾಯಿತು.

ಗಮಾಲ್ ಅಬ್ದೆಲ್ ನಾಸೆರ್‌ರವರು 1970ರ ಸೆಪ್ಟೆಂಬರ್ 28ರಂದು ಹಠಾತ್ತನೆ ಮರಣಿಸಿದರು.

ಪ್ರಮುಖ ಈಜಿಪ್ಷಿಯನ್ ರಾಜನೀತಿಜ್ಞ, ರಾಜಕೀಯ ಕಾರ್ಯಕರ್ತ ಗಮಾಲ್ ಅಬ್ದೆಲ್ ನಾಸೆರ್‌ರವರ ಹೆಸರು ಈಜಿಪ್ಟಿನ ಹಾಗೂ ಅರಬ್ ಜಗತ್ತಿನ ಇತರ ಜನತೆಗಳ ರಾಷ್ಟ್ರೀಯ-ವಿಮೋಚನಾ ಹೋರಾಟದ ಇತಿಹಾಸದ ಅತ್ಯಂತ ಉಜ್ವಲ ಪುಟಗಳಲ್ಲಿ ಅಚ್ಚಳಿಯದಂತೆ ದಾಖಲಾಗಿದೆ. ಈಜಿಪ್ಟಿನ ಪ್ರಥಮ ರಾಷ್ಟ್ರಾಧ್ಯಕ್ಷರಾಗಿದ್ದ ನಾಸೆರ್ ತಮ್ಮ ದೇಶವನ್ನು ಸದಾ ಕಾಲಕ್ಕೂ ಸಾಮ್ರಾಜ್ಯಶಾಹಿ ಪ್ರಭಾವದಿಂದ ಮುಕ್ತವನ್ನಾಗಿ ಮಾಡುವ, ದೇಶದ ನೈಜ ಸ್ವಾತಂತ್ರ್ಯವನ್ನು ಭದ್ರಪಡಿಸುವ ಉತ್ಕಟ ಬಯಕೆಯಿಂದ ಪ್ರೇರಿತರಾಗಿದ್ದರು. ಆರ್ಥಿಕ ಸ್ವಾತಂತ್ರ್ಯವಿಲ್ಲದೆ ನಿಜವಾದ ರಾಷ್ಟ್ರೀಯ ಸ್ವಾತಂತ್ರ್ಯ ಅಸಾಧ್ಯ ಅನ್ನುವುದನ್ನು ಅವರು ಸ್ಪಷ್ಟವಾಗಿ ಅರಿತಿದ್ದರು.

ಸಾಮಂತಶಾಹಿ ವಿರೋಧಿ ಭೂ ಸುಧಾರಣೆ, ದೇಶದಲ್ಲಿ ಬ್ರಿಟಿಷ್ ಮಿಲಿಟರಿ ಹಾಜರಿಯನ್ನು ಕೊನೆಗಾಣಿಸಿದುದು, ಸೂಯೆಜ್ ಕಾಲುವೆಯ ರಾಷ್ಟ್ರೀಕರಣ, 1956ರಲ್ಲಿ ಆಂಗ್ಲೋ-ಫ್ರೆಂಚ್-ಇಸ್ರೇಲಿ ದುರಾಕ್ರಮಣವನ್ನು ಹಿಮ್ಮೆಟ್ಟಿಸಿದುದು, ಇವೇ ಮುಂತಾದ ಈಜಿಪ್ಟಿನ ರಾಷ್ಟ್ರ ಜೀವನದಲ್ಲಿನ ಪ್ರಮುಖ ಘಟನೆಗಳೊಂದಿಗೆ ಅವರ ಚಟುವಟಿಕೆ ನಿಕಟವಾಗಿ ಸಂಬಂಧಿತವಾಗಿದೆ. ಈ ಘಟನೆಗಳು ದೇಶದಲ್ಲಿ ಸಾಮ್ರಾಜ್ಯಶಾಹಿ ನೆಲೆಗಳನ್ನು ಶಿಥಿಲಗೊಳಿಸಿದವು, ರಾಷ್ಟ್ರೀಯ ಸಾರ್ವಭೌಮತ್ವವನ್ನು ಈಜಿಪ್ಟಿನ ಅಂತರರಾಷ್ಟ್ರೀಯ ನೆಲೆಗಳನ್ನೂ ದೃಢಗೊಳಿಸಿದವು.

ನಾಸೆರ್‌ರವರು ಈಜಿಪ್ಟಿನ ಸ್ವತಂತ್ರ ವಿದೇಶಾಂಗ ನೀತಿಯನ್ನು ರೂಪಿಸುವುದರಲ್ಲೂ ಅದನ್ನು ಕಾರ್ಯಗತಗೊಳಿಸುವುದರಲ್ಲೂ ಭಾರಿ ಕಾಣಿಕೆ ಸಲ್ಲಿಸಿದರು. ಅದು ದೇಶವನ್ನು ಐವತ್ತರ ದಶಕದ ಮಧ್ಯಭಾಗ ಹಾಗೂ ಅರವತ್ತರ ದಶಕಗಳಲ್ಲಿ ಅರಬ್ ಜನತೆಗಳ ರಾಷ್ಟ್ರೀಯ-ವಿಮೋಚನಾ ಚಳವಳಿಯ ಮುನ್ನೆಲೆಗೆ ತಂದಿತು. ಈಜಿಪ್ಷಿಯನ್ ಅಧ್ಯಕ್ಷರು ಅರಬ್ ಜನತೆಗಳ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಐಕ್ಯತೆಯನ್ನು ತುಂಬ ನಿಷ್ಠೆಯಿಂದ ಹಾಗೂ ಪ್ರಾಮಾಣಿಕವಾಗಿ ಪ್ರತಿಪಾದಿಸಿದರು. ಅವರು ಇತರ ಅನೇಕ ಎಳೆಯ ರಾಷ್ಟ್ರಗಳ ಪ್ರಮುಖ ರಾಜನೀತಿಜ್ಞರೊಂದಿಗೆ ಅಲಿಪ್ತ ಚಳವಳಿಯ ಪ್ರವರ್ತಕರಲ್ಲೊಬ್ಬರಾಗಿದ್ದರು, ಚಳವಳಿಗೆ ಸಾಮ್ರಾಜ್ಯಶಾಹಿ ವಿರೋಧಿ ದಿಕ್ಕನ್ನು ಒದಗಿಸಲು ಕ್ರಿಯಾಶೀಲವಾಗಿ

ಶ್ರಮಿಸಿದರು. ಅವರು ಈಜಿಪ್ಟ್ ಮತ್ತು ಸೋವಿಯತ್ ಒಕ್ಕೂಟಗಳ ನಡುವೆ ಸ್ನೇಹ ಹಾಗೂ ಸರ್ವತೋಮುಖ ಸಹಕಾರಗಳಿಗೆ ನಿರಂತರವಾಗಿ ಬೆಂಬಲ ನೀಡಿದರು.

ಈಜಿಪ್ಟಿನ ರಾಜಕೀಯ ಹಾಗೂ ಆರ್ಥಿಕ ಸ್ವಾತಂತ್ರ್ಯದ ದೃಢೀಕರಣಕ್ಕಾಗಿ ನಾಸೆರ್‌ರವರು ದೃಢವಾದ ಹಾಗೂ ಪಟ್ಟುಹಿಡಿದ ಹೋರಾಟ ನಡೆಸಿದುದು ಕ್ರಾಂತಿಕಾರಿಯಾಗಿ ಅವರು ವಿಕಾಸಗೊಂಡುದರೊಂದಿಗೆ ಅವಿಭಾಜ್ಯವಾಗಿ ಸಂಬಂಧಿತವಾಗಿದ್ದಿತು. ಆರಂಭದಲ್ಲಿ ಅವರು "ಈಜಿಪ್ಟಿನ ಸಮಾಜದ ಸಾಮರಸ್ಯ ಬೆಳವಣಿಗೆ"ಯ ನೀತಿಗೆ, "ಐಕ್ಯ ರಾಷ್ಟ್ರೀಯ ಕುಟುಂಬ"ದ ನೀತಿಗೆ ಬೆಂಬಲ ನೀಡುತ್ತಿದ್ದರು. ಈ ನೆಲೆಯಿಂದ ತಮ್ಮ "ಸ್ವಂತ" ಬೂರ್ಜ್ವಾಸೀಯ ನಿಚ್ಚಳ ವಿರೋಧಿಯಾಗುವ ನೆಲೆಗೆ ಅವರು ಕ್ರಮಿಸಿ ಬಂದ ಮಾರ್ಗವು ಕಷ್ಟಕಾರ್ಪಣ್ಯಗಳಿಂದ ತುಂಬಿದ್ದಿತು. ಈಜಿಪ್ಟ್ ದೇಶವು ಅರವತ್ತರ ದಶಕದಲ್ಲಿ ಸಮಾಜವಾದಿ ದಿಕ್ಕಿನಲ್ಲಿ ವಿಕಾಸಗೊಳ್ಳುವ ಮಾರ್ಗವನ್ನು ರೂಪಿಸಿಕೊಟ್ಟ ಕೀರ್ತಿ ಬೇರೆ ಯಾರಿಗಿಂತ ಹೆಚ್ಚಾಗಿ ಇವರಿಗೇ ಸಲ್ಲಬೇಕು.

ಮೂವತ್ತಕ್ಕೂ ಹೆಚ್ಚು ವರ್ಷಗಳ ಹಿಂದೆ ನಾಸೆರ್‌ರವರ ನಾಯಕತ್ವದಲ್ಲಿ 'ಸ್ವತಂತ್ರ ಸೈನ್ಯಾಧಿಕಾರಿಗಳು' ಎಂಬ ಸಂಘಕೂಟವೊಂದು ರಾಜಪ್ರಭುತ್ವದ ವಿರುದ್ಧ, ಸಾಮ್ರಾಜ್ಯಶಾಹಿಯ ವಿರುದ್ಧ ಕ್ಷಿಪ್ರಕ್ರಾಂತಿ ಜರುಗಿಸಿ ಈಜಿಪ್ಷಿಯನ್ ಕ್ರಾಂತಿಯ (ಜುಲೈ) ಪ್ರಾರಂಭಕ್ಕೆ ನಾಂದಿ ಹಾಡಿತು. ಈ ಕ್ರಾಂತಿಯು ಕೊನೆಯಲ್ಲಿ ಈಜಿಪ್ಟ್ ಗಣತಂತ್ರ ಸ್ಥಾಪನೆಗೆ ದಾರಿ ಮಾಡಿಕೊಟ್ಟಿತು. ಈ ಕ್ರಾಂತಿಯು ಅನೇಕ ವಿಚಿತ್ರ ಲಕ್ಷಣಗಳನ್ನು ಹೊಂದಿದ್ದರೂ, ನಿಧಾನವಾದ ಪರಸ್ಪರ ವಿರೋಧಿ ಮಾರ್ಗ ಹಿಡಿದರೂ, ಅದರ ಕಾರ್ಯಭಾರಗಳು ನಿರ್ಧಾರಿತವಾಗಿ ಅಸಂಪೂರ್ಣವಾಗಿ ಇದ್ದರೂ ಸಾಮಂತಶಾಹಿ ವಿರೋಧಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ಪ್ರಮುಖ ಕಾಣಿಕೆ ಸಲ್ಲಿಸಿತು. ಈಜಿಪ್ಷಿಯನ್ನರ ರಾಷ್ಟ್ರೀಯ ಹಿತಗಳಿಗೆ ಓಗೊಡುತ್ತಲೇ ಜುಲೈ ಕ್ರಾಂತಿಯು ನೆರೆಯ ಅರಬ್ ದೇಶಗಳ ಮೇಲೂ ಭಾರಿ ಪ್ರಭಾವ ಬೀರಿತು. ಅದು ಆ ದೇಶಗಳ ಒಳಗೇ ಪ್ರಗತಿಶೀಲ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಪ್ರಕ್ರಿಯೆಗಳನ್ನು ಉತ್ಕರ್ಷಿಸಿತಲ್ಲದೆ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನೆಗಾಗಿ ಅರಬ್ಬರ ಹೋರಾಟಕ್ಕೆ ಉತ್ತೇಜನವನ್ನೂ ನೀಡಿತು.

ಸಂಘವನ್ನು ಸಂಘಟಿಸಿದ ಈಜಿಪ್ಷಿಯನ್ ಸೈನ್ಯಾಧಿಕಾರಿಗಳು ಯಾವುದೇ ಪಾರ್ಟಿ ಅಥವಾ ರಾಜಕೀಯ ಸಂಘಟನೆಯೊಂದಿಗೆ ಸಂಬಂಧ ಹೊಂದಿರಲಿಲ್ಲ. ವ್ಯಕ್ತಿಗತ ಸ್ನೇಹ ಹಾಗೂ ಸೈನಿಕ ಹಿತಗಳಿಂದಲ್ಲದೆ ಉಜ್ವಲ ದೇಶಭಕ್ತಿಯ ಭಾವನೆಯಿಂದಲೂ ಅವರು ಒಂದುಗೂಡಿದ್ದರು. ಅವರು ರಾಜನ ಆಡಳಿತದಿಂದಲೂ, ವಿದೇಶೀ ದಬ್ಬಾಳಿಕೆಯಿಂದಲೂ ಬೂರ್ಜ್ವಾ ಹಾಗೂ ಭೂಮಾಲೀಕ ಪಾರ್ಟಿಗಳ ನೀತಿಗಳಿಂದಲೂ ಅತೃಪ್ತರಾಗಿದ್ದರು. ಅವರೆಲ್ಲ ರಾಷ್ಟ್ರೀಯವಾದ ಹಾಗೂ ಅರಬ್

ಹಾವಳಿಯಿಂದ ಪ್ರಬಲವಾಗಿ ಪ್ರಭಾವಿತರಾಗಿದ್ದರು. ಬೇರೆ ಮಾತುಗಳಲ್ಲಿ, ಮಿಲಿ ಯೋಧರ ಈಜಿಪ್ಷಿಯನ್ನರು ಫರೂಕ್ ದೊರೆಯ 'ಸಾಮಂತಶಾಹಿ ಆಡಳಿತವನ್ನೂ ಬ್ರಿಟನ್ನಿನ ನಾಯಕತ್ವದ ಸಾಮ್ರಾಜ್ಯಶಾಹಿ ರಾಷ್ಟ್ರಗಳ ದಬ್ಬಾಳಿಕೆಯನ್ನೂ ಇನ್ನೆಷ್ಟು ಮಾತ್ರವೂ ಸಹಿಸಿಕೊಂಡಿರದಾಗಿದ್ದರು ಎಂಬ ಸಂಕಲ್ಪವನ್ನೇ 'ಸ್ವತಂತ್ರ ಸೈನ್ಯಾಧಿಕಾರಿಗಳು' ವ್ಯಕ್ತಪಡಿಸುತ್ತಿದ್ದರು, ಎಂದು ಈ ಒಳಸಂಚಿನ ಯಶಸ್ಸು ಮನವೊಪ್ಪುವಂತೆ ತೋರಿಸಿಕೊಟ್ಟಿತು.

'ಸ್ವತಂತ್ರ ಸೈನ್ಯಾಧಿಕಾರಿಗಳ' ಅಗ್ರಗಾಮಿ ಅಂಗಸಂಸ್ಥೆಯಾದ 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್'(ಆರ್‌ಸಿಸಿ)ನಲ್ಲಿ ವಿವಿಧ ಸಾಮಾಜಿಕ ಸ್ತರಗಳ ಪ್ರತಿನಿಧಿಗಳಿದ್ದರು. ಒಬ್ಬೊಬ್ಬ ಪ್ರತಿನಿಧಿಯೂ ತನ್ನದೇ ವರ್ಗದ ಸಾಮಾಜಿಕ ಸ್ತರಗಳ ಇಲ್ಲವೇ ವೃಂದದ ಹಿತಗಳನ್ನು ಸಂರಕ್ಷಿಸುತ್ತಿದ್ದ ಮತ್ತು ದೇಶದ ಸಮಸ್ಯೆಗಳಿಗೆ ತನ್ನದೇ ಪರಿಹಾರಗಳನ್ನು ಮುಂದಿರಿಸಿ ಅವನ್ನೆ ತುಂಬ ಸರಿಯಾದವೆಂದು ಪ್ರತಿಪಾದಿಸುತ್ತಿದ್ದ. ಆದ್ದರಿಂದ ಕ್ರಾಂತಿಯ ಆರಂಭಿಕ ಕಾಲಾವಧಿಯನ್ನು (ಐವತ್ತರ ದಶಕದ ಕಾಲವನ್ನು, ಅಂದರೆ ಅತ್ಯಂತ ತುರ್ತಿನ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ಮೊದಲ ಕ್ರಮಗಳನ್ನು ಕೈಗೊಂಡ ಕಾಲವನ್ನು) ದೇಶದ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಯ ವಲಯದಲ್ಲಿ ಪ್ರಯೋಗಗಳ ಕಾಲಾವಧಿಯನ್ನಾಗಿ ಸಮರ್ಥನೀಯವಾಗಿಯೇ ವರ್ಣಿಸಬಹುದಾಗಿದೆ. 'ಕ್ರಾಂತಿಯ ತತ್ವಜ್ಞಾನ' ಎಂಬ ತಮ್ಮ ಆರಂಭಿಕ ಕೃತಿಯಲ್ಲಿ ನಾಸೆರ್ ಬರೆದರು: "...ನಾವು ಏನನ್ನು ಮಾಡಲು ಬಯಸುತ್ತಿದ್ದೇವೆ?... ಅದಕ್ಕಾಗಿ ಯಾವ ಸಾಧನಗಳಿವೆ?... ಮೊದಲ ಪ್ರಶ್ನೆಗೆ ಉತ್ತರ ಸ್ವಾತಂತ್ರ್ಯ ಸಾಧನೆ. ಆದರೆ ಎರಡನೆಯ ಪ್ರಶ್ನೆ – ಸ್ವಾತಂತ್ರ್ಯವನ್ನು ಸಾಧಿಸುವುದು ಹೇಗೆ ಎಂಬ ಪ್ರಶ್ನೆ – ದೀರ್ಘ ಚರ್ಚೆಗಳ ವಿಷಯವಾಗಿದ್ದಿತು. ಈ ಚರ್ಚೆಗಳು ಜುಲೈ 23ರ ವರೆಗೂ ನಡೆಯುತ್ತಲೇ ಹೋದವು."* 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್'ನ ಸದಸ್ಯರು ಕ್ರಾಂತಿಯನ್ನು ಮಾಡುತ್ತ ಹೋಗುತ್ತಲೇ ನೈಜ ಸ್ವಾತಂತ್ರ್ಯ ಸಾಧನೆಗಾಗಿ ಮಾರ್ಗಗಳನ್ನು ಇನ್ನೂ ಅರಸುತ್ತಲೇ ಇದ್ದರು. ಅವರು ಇತರ ಆಫ್ರೋ-ಏಷ್ಯನ್ ದೇಶಗಳ ಸ್ವತಂತ್ರ ಬೆಳವಣಿಗೆಯ ಇನ್ನೂ ಅಷ್ಟು ಸ್ಪಷ್ಟವಾಗಿರದಿದ್ದ ಅನುಭವವನ್ನು ಬಳಸಿಕೊಳ್ಳಲು ಯತ್ನಿಸುತ್ತಿದ್ದರು. ಆದರೆ ಈ ಅನುಭವ ಈಜಿಪ್ಷಿಯನ್ ಪರಿಸ್ಥಿತಿಗಳಿಗೆ ಸಂಪೂರ್ಣವಾಗಿ ಹೊಂದುತ್ತಿರಲಿಲ್ಲ. ಅವರು ತಪ್ಪುಗಳನ್ನೇನೋ ಮಾಡಿದರು. ಆದರೂ ಏನೆಲ್ಲ ಚಂಚಲತೆ ತೋರಿದರೂ ಈಜಿಪ್ಷಿಯನ್ ಕ್ರಾಂತಿಯ ನಾಯಕರು ಕ್ರಾಂತಿಯ

*Gamal Abdel Nasser, *Egypt's Liberation. The Philosophy of the Revolution*, Public Affairs Press, Washington, 1955, p. 58. – ಸಂ.

ಆರಂಭಿಕ ಘಟ್ಟದಲ್ಲೇ ದೇಶದ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಬೆಳವಣಿಗೆಯ ಪ್ರಧಾನ ಸಮಸ್ಯೆಗಳಿಗೆ ಉತ್ತರಗಳನ್ನು ಕಂಡುಕೊಳ್ಳಬಲ್ಲವರಾಗಿದ್ದರು. ಇದಕ್ಕೆ ಹೆಚ್ಚಿನ ಪ್ರಶಸ್ತಿ ನಾಸೆರ್‌ರವರಿಗೇ ಸಲ್ಲಬೇಕು.

ಆರಂಭದಲ್ಲಿ 'ಸ್ವತಂತ್ರ ಸೈನ್ಯಾಧಿಕಾರಿಗಳ' ರಾಜಕೀಯ ಕಾರ್ಯಕ್ರಮವು ಕ್ರಾಂತಿಯ "ಆರು ಸೂತ್ರಗಳು" ಎಂದು ಹೇಳಲಾದಂಥ ಸೂತ್ರಗಳಲ್ಲಿ ಪ್ರತಿಬಿಂಬಿತವಾಗಿದ್ದಿತು. ಈ ಸೂತ್ರಗಳನ್ನು 1951ರಷ್ಟು ಹಿಂದೆಯೇ ನಾಸೆರ್‌ರವರ ನೇರ ಮಾರ್ಗದರ್ಶನದಲ್ಲಿ ರೂಪಿಸಲಾಗಿದ್ದಿತು. ಬ್ರಿಟಿಷ್ ಆಕ್ರಮಣ ಆಡಳಿತವನ್ನು ಕೊನೆಗಾಣಿಸಬೇಕು, ಸಾಮಂತವಾದವನ್ನು ತೊಡೆದು ಹಾಕಬೇಕು, ಸರಕಾರದ ಮೇಲೆ ಬಂಡವಾಳದ ಪ್ರಾಬಲ್ಯವನ್ನು ನಿವಾರಿಸಬೇಕು, ಸಾಮಾಜಿಕ ನ್ಯಾಯವನ್ನು ಸ್ಥಾಪಿಸಬೇಕು, ಬಲಿಷ್ಠವಾದ ರಾಷ್ಟ್ರೀಯ ಸೈನ್ಯವನ್ನು ನಿರ್ಮಿಸಬೇಕು, ಕೊನೆಯದಾಗಿ ದೇಶದಲ್ಲಿ ಪ್ರಜಾಪ್ರಭುತ್ವವನ್ನು ದೃಢಗೊಳಿಸಬೇಕು – ಈ ಕೇಳಿಕೆಗಳನ್ನು ಕಾರ್ಯಕ್ರಮದಲ್ಲಿ ಒಡಮೂಡಿಸಲಾಗಿದ್ದಿತು. ಈ ಗುರಿಗಳು ಸಾಮ್ರಾಜ್ಯಶಾಹಿ ವಿರೋಧಿ ಹಾಗೂ ಸಾಮಂತಶಾಹಿ ವಿರೋಧಿ ಕ್ರಾಂತಿಯ ಕಾರ್ಯಭಾರಗಳಿಗೆ ಸಂಪೂರ್ಣವಾಗಿ ಅನುಗುಣವಾಗಿದ್ದವು. ಮೇಲೆ ತಿಳಿಸಿದ "ಆರು ಸೂತ್ರಗಳು" ಮಿಲಿಟರಿ ಕ್ರಾಂತಿಕಾರಿಗಳ ಸೈದ್ಧಾಂತಿಕ ಹಾಗೂ ರಾಜಕೀಯ ವಿಕಸನಕ್ಕೆ ಆರಂಭಿಕ ಬಿಂದುಗಳಾಗಿ ನೆರವಾದವು. ಆದರೆ ಜುಲೈ ಕ್ರಾಂತಿಯಾದ ಕೂಡಲೇ 'ಸ್ವತಂತ್ರ ಸೈನ್ಯಾಧಿಕಾರಿಗಳ' ಈ ನಾಯಕರ ಮಧ್ಯೆ ಭಿನ್ನಾಭಿಪ್ರಾಯಗಳು ತಲೆದೋರಿದವು.

"ಆರು ಸೂತ್ರಗಳ"ಲ್ಲಿ ಮುಂದಿರಿಸಲಾಗಿದ್ದ ಕಾರ್ಯಭಾರಗಳನ್ನು ತದನಂತರ ನಿರ್ದಿಷ್ಟಗೊಳಿಸುವ ಕಾರ್ಯ ಕೈಗೊಂಡಾಗ, ಅದರಲ್ಲೂ ವಿಶೇಷವಾಗಿ, ಅವುಗಳನ್ನು ಆಗುಮಾಡುವ ಮಾರ್ಗೋಪಾಯಗಳಿಗಾಗಿ ಪ್ರಾಯೋಗಿಕ ಶೋಧ ನಡೆಸತೊಡಗಿದಾಗ, 'ಸ್ವತಂತ್ರ ಸೈನ್ಯಾಧಿಕಾರಿಗಳ' ನಾಯಕರ ಮಧ್ಯೆ ಉಗ್ರ ಸೈದ್ಧಾಂತಿಕ ಹಾಗೂ ರಾಜಕೀಯ ಹೋರಾಟ ಪ್ರಾರಂಭವಾಯಿತು. ಇದು ಅವರ ಮಧ್ಯೆ ಮೊದಲ ಗಹನವಾದ ವಿಭಜನೆಗೆ ದಾರಿ ಮಾಡಿಕೊಟ್ಟಿತು.

ಜನರಲ್ ಮಹಮದ್ ನಗೀಬ್‌ರ ನಾಯಕತ್ವದಲ್ಲಿದ್ದ 'ಸ್ವತಂತ್ರ ಸೈನ್ಯಾಧಿಕಾರಿಗಳ' ಒಂದು ವಿಭಾಗವು ಜುಲೈ ಕ್ರಾಂತಿ ಮುಗಿದಿದ್ದಿತೆಂದೂ ಪ್ರಜಾಪ್ರಭುತ್ವೀಕರಣ ಪ್ರಕ್ರಿಯೆಯನ್ನು ಪಾರ್ಲಿಮೆಂಟರಿ ಪದ್ಧತಿ ಸ್ಥಾಪನೆಗೆ ಸೀಮಿತಗೊಳಿಸಬೇಕೆಂದೂ ಭಾವಿಸಿದರೆ, ನಾಸೆರ್‌ರವರೂ ಅವರ ಕೆಳಗಿದ್ದ ರ್‍ಯಾಡಿಕಲ್ ಪಕ್ಷದವರೂ "ಆರು ಸೂತ್ರಗಳ"ಲ್ಲಿ ಗೊತ್ತುಪಡಿಸಿದ್ದಂತೆ ಮತ್ತಷ್ಟು ಸಾಮಾಜಿಕ ಪುನಸ್ಸಂಘಟನೆಯನ್ನು ನಡೆಸಬೇಕೆಂದು ಕರೆ ನೀಡಿದರು. ಈ ಎರಡೂ ವಿಭಾಗಗಳ ನಡುವಿನ ಹೋರಾಟವು 1954ರ ನವೆಂಬರ್‌ನಲ್ಲಿ 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್'ನ ರ್‍ಯಾಡಿಕಲ್ ಪಕ್ಷದವರ ವಿಜಯದಲ್ಲಿ ಕೊನೆಗೊಂಡಿತು.

ಸೈದ್ಧಾಂತಿಕ ಕ್ಷೇತ್ರದಲ್ಲಿ ಈ ಹೋರಾಟವು ಈಜಿಪ್ಟ್‌ನಲ್ಲಿ ಸಾಮಾಜಿಕ ಕ್ರಾಂತಿಯನ್ನು ಆಗುಮಾಡುವುದು ಅವಶ್ಯ ಎಂಬ ನಾಸೆರ್‌ರವರ ವಿಚಾರವನ್ನು ವ್ಯಕ್ತಪಡಿಸಿತು. ಅವರು ಒಂದೇ ಕಾಲದಲ್ಲಿ ಎರಡು ಕ್ರಾಂತಿಗಳನ್ನು ನೆರವೇರಿಸುವ ಕಾರ್ಯಭಾರವನ್ನು ಈಜಿಪ್ಷಿಯನ್ ಜನರ ಮುಂದಿರಿಸಿದರು: ಒಂದು – ರಾಜಕೀಯ ಕ್ರಾಂತಿ. ಇದರಲ್ಲಿ ದೇಶವನ್ನು ಬ್ರಿಟಿಷರ ಆಡಳಿತದಿಂದ ಮುಕ್ತಗೊಳಿಸುವುದು ಮತ್ತು ರಾಜಪ್ರಭುತ್ವವನ್ನು ಕಿತ್ತೊಗೆಯುವುದು ಮುಖ್ಯ ಕಾರ್ಯಭಾರಗಳಾಗಿದ್ದವು. ಇನ್ನೊಂದು – ಸಾಮಾಜಿಕ ಕ್ರಾಂತಿ. "ಎಲ್ಲ ಶೋಷಣೆಯ ಪ್ರವೃತ್ತಿ ಮತ್ತು ಆಶೋತ್ತರಗಳನ್ನೂ" ತೊಡೆದು ಹಾಕುವುದು ಮತ್ತು "ಈಜಿಪ್ಷಿಯನ್ ಸಮಾಜದ ಎಲ್ಲ ಪುನ್ಮರಚಿತ ವರ್ಗಗಳ ಹಾಗೂ ಸಾಮಾಜಿಕ ಸ್ತರಗಳ"* ಹಿತಗಳಿಗೆ ಉತ್ತೇಜನ ನೀಡುವುದು, ಇದರ ಗುರಿಯಾಗಿದ್ದಿತು. ಎರಡು ಕ್ರಾಂತಿಗಳನ್ನು ಒಂದೇ ಕಾಲದಲ್ಲಿ ನೆರವೇರಿಸಬೇಕೆಂಬ ಅವರ ವಿಚಾರವು ಬಹುಶಃ ಐವತ್ತರ ದಶಕದ ಮಧ್ಯಭಾಗದಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟವನ್ನೂ ಈಜಿಪ್ಷಿಯನ್ ಸಮಾಜದಲ್ಲಿ ಸಾಮಾಜಿಕ ನ್ಯಾಯಕ್ಕಾಗಿ ಜರುಗುತ್ತಿದ್ದ ಹೋರಾಟವನ್ನೂ ಸಾವಯವವಾಗಿ ಒಂದುಗೂಡಿಸುವುದು ಅವಶ್ಯ ಎಂಬ ಅವರ ಊಹೆಯ ಅಥವಾ ಅವರ ತಿಳಿವಳಿಕೆಯ, ಪ್ರತಿಫಲನವೇ ಆಗಿದ್ದಿತೆನ್ನಬಹುದು.

ಆದರೆ ಕ್ರಾಂತಿಗೆ ಮುನ್ನವೂ, ಕ್ರಾಂತಿಯಾದನಂತರದ ಮೊದಲ ವರ್ಷಗಳಲ್ಲೂ ನಾಸೆರ್‌ರವರು ಈಜಿಪ್ಟ್‌ನಲ್ಲಿ ವಿವಿಧ ವರ್ಗಗಳೇ ಇರಲಿಲ್ಲವೆಂದೂ ವರ್ಗ ಹೋರಾಟವೇ ಇರಲಿಲ್ಲವೆಂದೂ ತುಂಬ ಖಿಡಾಖಂಡಿತವಾಗಿ ಹೇಳುತ್ತಿದ್ದರೆಂಬುದನ್ನು ಇಲ್ಲಿ ತಿಳಿಸಬೇಕು. ರಾಜಕೀಯ ಹಾಗೂ ಸಾಮಾಜಿಕ ಈ ಎರಡು ಕ್ರಾಂತಿಗಳನ್ನೂ ಒಂದೇ ಕಾಲದಲ್ಲಿ ಸಾಧಿಸಬೇಕೆಂಬ ಆಶೋತ್ತರವು ಒಂದು ವಸ್ತುನಿಷ್ಠ ವೈರುಧ್ಯವನ್ನು ಒಳಗೊಂಡಿದ್ದಿತು: ರಾಜಕೀಯ ಕ್ರಾಂತಿಯು ರಾಷ್ಟ್ರವನ್ನು "ಒಂದುಗೂಡಿಸುತ್ತಿದ್ದಲ್ಲಿ," ಸಾಮಾಜಿಕ ಕ್ರಾಂತಿಯು ಈಜಿಪ್ಷಿಯನ್ ಸಮಾಜದಲ್ಲಿನ ವಿವಿಧ ವರ್ಗಗಳ ಹಾಗೂ ಸಾಮಾಜಿಕ ವೃಂದಗಳ ಸಂಘರ್ಷದ ಹಿತದಿಂದಾಗಿ ಅನಿವಾರ್ಯವಾಗಿಯೇ ವಿಭಜನೆಗೆ ದಾರಿ ಮಾಡಿಕೊಡುತ್ತಿದ್ದಿತು.

ಕ್ರಾಂತಿಗೆ ಸೈನ್ಯದ ಮಾರ್ಗದರ್ಶನ ಮುಂದುವರಿದಲ್ಲಿ ಈ ವೈರುಧ್ಯ ನಿವಾರಣೆಯಾಗುವುದೆಂದು ನಾಸೆರ್‌ರವರೂ ಅವರಂತೆಯೇ ಯೋಚಿಸುತ್ತಿದ್ದ ಅವರ ಸಹೋದ್ಯೋಗಿಗಳೂ ಭಾವಿಸಿದ್ದರು. ಏಕೆಂದರೆ ಸೈನ್ಯವು ಅವರ ಪ್ರಕಾರ ವರ್ಗಗಳಿಗೂ ಮೇಲೆ ನಿಂತ ಸಮರೂಪದ ಶಕ್ತಿಯಾಗಿದ್ದಿತು, ಅದು ಜನರ ಮಧ್ಯದಿಂದ

* ಜಿ. ಎ. ನಾಸೆರ್, 'ಈಜಿಪ್ಷಿಯನ್ ಕ್ರಾಂತಿಯ ಸಮಸ್ಯೆಗಳು. ಆಯ್ದ ಭಾಷಣಗಳು. 1952-1970,' ಅಂತರರಾಷ್ಟ್ರೀಯ ಸಂಬಂಧಗಳ ಪ್ರಕಟಣಾ ಮಂದಿರ, ಮಾಸ್ಕೋ, 1979, ಪು. 13, 18 (ರಷ್ಯನ್‌ನಲ್ಲಿ). – ಸಂ.

ಬಂದುದಾಗಿದ್ದಿತು, ಜನರೊಂದಿಗೆ ಸಂಪರ್ಕ ಉಳಿಸಿಕೊಂಡಿದ್ದಿತು. ಸೈನ್ಯದ ಪಾತ್ರಕ್ಕೆ ಸಂಬಂಧಿಸಿ ಈ ವ್ಯಾಖ್ಯಾನದಿಂದ ಮುಂದುವರಿಯುತ್ತ ನಾಸೆರ್‌ರವರೂ ಅವರ ಸಹೋದ್ಯೋಗಿಗಳೂ "ತಮ್ಮ ಆಶೋತ್ತರಗಳನ್ನೂ ಜನಸಮೂಹಗಳ ಆಶೋತ್ತರಗಳನ್ನೂ ಮೂರ್ತರೂಪ ವಿಚಾರವನ್ನಾಗಿ ನಿರ್ದಿಷ್ಟ ಕಾರ್ಯಕ್ರಮವನ್ನಾಗಿ ಪರಿವರ್ತಿಸುವವರೆಗೂ ಅಧಿಕಾರದಲ್ಲಿರುವುದು"* ಸಹಜವೂ ಹೌದು, ಅವಶ್ಯವೂ ಹೌದು ಎಂದು ಪರಿಗಣಿಸಿದ್ದರು. ಆದ್ದರಿಂದ ದೇಶದಲ್ಲಿನ ಎಲ್ಲ ಆಡಳಿತ ಶಕ್ತಿಯೂ ಸೈನ್ಯದ ಕೈಗಳಲ್ಲೇ ಕೇಂದ್ರೀಕೃತವಾಗಬೇಕೆಂಬ, ರಾಜ್ಯಸಾಧನವನ್ನು ಪರಮಾವಧಿ ಕೇಂದ್ರೀಕರಿಸಬೇಕೆಂಬ, ದೇಶದ ಆಡಳಿತವನ್ನು "ಮಧ್ಯವರ್ತಿಗಳಿಲ್ಲದ" ಅಂದರೆ ರಾಜಕೀಯ ಸಂಘಟನೆಗಳಿಲ್ಲದೆ ನಡೆಸಿಕೊಂಡು ಹೋಗಬೇಕೆಂಬ, ವಿಚಾರವನ್ನು ಸಮರ್ಥಿಸಲಾಯಿತು.

ರಾಜಕೀಯ ಅಧಿಕಾರವನ್ನು ಸಂಪೂರ್ಣವಾಗಿ ತಮ್ಮ ಕೈಗಳಲ್ಲೇ ಕೇಂದ್ರೀಕರಿಸಿಕೊಂಡನಂತರ ನಾಸೆರ್‌ರವರೂ ಅವರ ಬೆಂಬಲಿಗರೂ ಎರಡು ದಿಕ್ಕುಗಳಲ್ಲಿ ಕಾರ್ಯ ಜರುಗಿಸತೊಡಗಿದರು: ಕ್ರಿಯಾಶೀಲ ಸರಕಾರವೊಂದರ ಸ್ಥಾಪನೆ ಹಾಗೂ ದೇಶದ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಮುಖ್ಯ ಸಮಸ್ಯೆಗಳಿಗೆ ಸಂಬಂಧಿಸಿ ಉದ್ದೇಶಪೂರ್ಣವಾದ ಶಾಸಕಾಂಗ ಉಪಕ್ರಮವನ್ನು ಕಾರ್ಯಗತಗೊಳಿಸುವುದು.

ಒಟ್ಟಿನ ಮೇಲೆ ಹೊಸ ಸರಕಾರವು ಜನರ ರಾಜಕೀಯ ಬೆಂಬಲ ಪಡೆಯುವ ಕಾರ್ಯಭಾರವನ್ನು ಸಾಮಾಜಿಕ ಹಾಗೂ ಆರ್ಥಿಕ ಸುಧಾರಣೆಗಳನ್ನು ನೆರವೇರಿಸುವ ಮೂಲಕ ಸರಿಯಾಗಿ ಪರಿಹರಿಸಿತು. ಹಾಗಾಗಿ 1952ರ ಸೆಪ್ಟೆಂಬರ್ ಹೊತ್ತಿಗೆ ಅವರಾಗಲೇ ಕೃಷಿ ಸಂಬಂಧಿ ಸುಧಾರಣೆಗಳನ್ನು ಸೀಮಿತ ರೂಪದಲ್ಲಾದರೂ ಸರಿ, ಜಾರಿಗೆ ತರತೊಡಗಿದ್ದರು. ಸಾಗುವಳಿಯಾಗಿದ್ದ ಭೂಮಿಯಲ್ಲಿ ಶೇ. 10ಕ್ಕೆ ಹೆಚ್ಚಿಲ್ಲದಷ್ಟು ಭೂಮಿಯನ್ನಷ್ಟೆ ಪುನರ್‌ಹಂಚಿಕೆಗೆ ಒಳಪಡಿಸಲಾಯಿತು. ಸಾಕಷ್ಟು ಸಾಗುವಳಿಯೋಗ್ಯ ಭೂಮಿ ಹೊಂದಿರದಿದ್ದ ರೈತರಲ್ಲಿ ಶೇ. 10ರಷ್ಟು ಮಂದಿ ಮಾತ್ರ ಈ ಸುಧಾರಣೆಯಿಂದ ನೇರ ಪ್ರಯೋಜನ ಪಡೆದರು. ಆದರೂ ಶಾಸನಗಳ ಮೂಲಕ ಭೂಮಿ ಗೇಣಿಯನ್ನು ಗಮನಾರ್ಹವಾಗಿ ಕಮ್ಮಿ ಮಾಡಲಾಯಿತು. ಇದು ಅತ್ಯಂತ ಬಡ ರೈತರ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸಿತು. ಹೊಸ ಆಡಳಿತವು ಗ್ರಾಮಾಂತರ ಬೂರ್ಷ್ವಾಸೀಯ ಹಾಗೂ ಭಾರಿ ಅರೆಸಾಮಂತಶಾಹಿ ಭೂಮಾಲೀಕರ ಮೂಲ ಹಿತಗಳಿಗೆ ಯಾವುದೇ ಗಹನವಾದ

*Khaled Mohei El-Din, *The Course of the Egyptian Revolution and Its Future, World Marxist Review*, No. 8, 1966, p. 19.–ಸಂ.

ರೀತಿಯಲ್ಲಿ ಧಕ್ಕೆ ಉಂಟುಮಾಡುವಂಥ ಕ್ರಮಗಳನ್ನು ಇನ್ನೂ ಕೈಗೊಂಡಿರಲಿಲ್ಲ. ತಾನು ವಶಪಡಿಸಿಕೊಂಡ ಭೂಮಿಗಳ ಬದಲಿಗೆ ಅವುಗಳ ಮಾಜಿ ಒಡೆಯರಿಗೆ ನಷ್ಟ ಪರಿಹಾರ ಕೊಡುವುದಾಗಿಯೂ ಅದು ಭರವಸೆ ಕೊಟ್ಟಿದ್ದಿತು. ಆದರೂ ಕ್ರಾಂತಿಗೆ ಮುನ್ನ ಭೂಮಾಲೀಕರ ಈ ಸಾಮಾಜಿಕ ಸ್ತರ ಹೊಂದಿದ್ದ ರಾಜಕೀಯ ಪ್ರಭಾವದ ಆಧಾರವನ್ನು ಈ ಸುಧಾರಣೆಯು ಶಿಥಿಲಗೊಳಿಸಿತೆಂದೇ ಹೇಳಬೇಕು. ಅಲ್ಲದೆ ಅದು ಗ್ರಾಮಾಂತರದಲ್ಲಿ ರಾಜ್ಯಾಧಿಕಾರದ ಸಾಮಾಜಿಕ-ವರ್ಗ ಬೆಂಬಲವನ್ನು ಗಮನಾರ್ಹವಾಗಿ ವಿಶಾಲಗೊಳಿಸಿತು ಮತ್ತು ದೃಢಪಡಿಸಿತು.

1953ರ ಆರಂಭದಲ್ಲಿ 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್' ಮೂರು ವರ್ಷಗಳ "ಸಂಕ್ರಮಣ ಕಾಲಾವಧಿ"ಯೊಂದನ್ನು ಜಾರಿಗೆ ತರುವ ಕಾರ್ಯಕ್ರಮವನ್ನು ಪ್ರಕಟಿಸಿತು. ಈ ಕಾಲಾವಧಿಯಲ್ಲಿ ಅದು ದೇಶದಲ್ಲಿ ಪ್ರಜಾಸತ್ತಾತ್ಮಕ ಸಂವಿಧಾನಾತ್ಮಕ ರಾಜ್ಯವೊಂದರ ನಿರ್ಮಾಣಕ್ಕೆ ಪರಿಸ್ಥಿತಿಗಳನ್ನು ಸಿದ್ಧಗೊಳಿಸಲು ಯೋಜಿಸಿದ್ದಿತು. "ಐಕ್ಯತೆ, ಸುವ್ಯವಸ್ಥೆ, ದುಡಿಮೆ" ಈ ಮೂರು ಗುರಿಗಳನ್ನುಳ್ಳ ಸೂತ್ರವೊಂದನ್ನು ನಾಸೆರ್‌ರವರು ಸಂಕ್ರಮಣ ಕಾಲಾವಧಿಯ ಘೋಷಣೆಯನ್ನಾಗಿ ಪ್ರಕಟಿಸಿದರು. ಆದರೆ ಈ ಸೂತ್ರವೂ ಯಾವುದೇ ವಿಶಿಷ್ಟ ಸಾಮಾಜಿಕ-ವರ್ಗ ಸಾರ ಹೊಂದಿರಲಿಲ್ಲ. ಕ್ರಾಂತಿಯ ಈ ಘಟ್ಟದಲ್ಲಿ 1952ರ ಕ್ರಾಂತಿಯ ವಿಚಾರಗಳನ್ನು ಕಾರ್ಯಗತಗೊಳಿಸಬಲ್ಲಂಥ ಹಾಗೂ ದೇಶದಲ್ಲಿ ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿಕೊಡಬಲ್ಲಂಥ ಏಕೀಕೃತ ರಾಷ್ಟ್ರವ್ಯಾಪಿ ಸಂಘಟನೆಯು ಜನರ ಇಚ್ಛೆಯ ರಾಜಕೀಯ ಮೂರ್ತ ಸ್ವರೂಪವಾಗಬೇಕೆಂದು ನಾಸೆರ್ ಪ್ರತಿಪಾದಿಸಿದರು. 1953ರ ಜನವರಿಯಲ್ಲಿ 'ಲಿಬರೇಷನ್ ರ್‍ಯಾಲಿ' ಎಂಬ ಹೆಸರಿನ ಸಾಮೂಹಿಕ ಸಂಘಟನೆಯೊಂದನ್ನು ರಚಿಸಲಾಯಿತು. ಈ ಸಂಘಟನೆಯು ಪೂರ್ಣವಾಗಿ 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್'ನ ನಿಯಂತ್ರಣದಲ್ಲಿದ್ದಿತು ಮತ್ತು ರಾಜಕೀಯ ಅಧಿಕಾರವನ್ನು ಹೊಂದಿರಲಿಲ್ಲ. ಅದಕ್ಕೆ ಸ್ಪಷ್ಟವಾದ ರಾಜಕೀಯ ಹಾಗೂ ಸಾಮಾಜಿಕ ಕಾರ್ಯಕ್ರಮವು ಇರಲಿಲ್ಲ. ಅದು ಒಂದು ರೀತಿಯ ರೂಪರಹಿತ ಸಂಸ್ಥೆಯಾಗಿದ್ದಿತು, ಈಜಿಪ್ಟ್‌ನಲ್ಲಿ ತದನಂತರ ಹುಟ್ಟಿಕೊಂಡ ಸಾಮೂಹಿಕ ರಾಜಕೀಯ ಸಂಘಟನೆಗಳನ್ನು ಹೆಚ್ಚು ಕಮ್ಮಿ ಹೋಲುವಂಥ ಸಂಸ್ಥೆಯಾಗಿದ್ದಿತು. ಸಾಮೂಹಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವುದು, ಸಾರ್ವಜನಿಕ ಮಿಲಿಟರಿ ಶಿಕ್ಷಣ ನೀಡುವುದು, ನಿರಕ್ಷರತೆಯ ನಿರ್ಮೂಲನದ ಚಳವಳಿ ನಡೆಸುವುದು, ಇವಷ್ಟೆ ಅದರ ಚಟುವಟಿಕೆಗಳಾಗಿದ್ದವು. "ನಾವೆಲ್ಲ 'ಲಿಬರೇಷನ್ ರ್‍ಯಾಲಿ'ಯಲ್ಲೇ ಇದ್ದೇವೆ" ಎಂದು 'ಕ್ರಾಂತಿಕಾರಿ ಕಮಾಂಡ್ ಕೌನ್ಸಿಲ್' ಮಾಡುತ್ತಿದ್ದ ಘೋಷಣೆಯು ಸ್ಪಷ್ಟವಾಗಿಯೇ ಈಜಿಪ್ಟ್‌ನಲ್ಲಿ ರಾಜಕೀಯವಾಗಿ ಕ್ರಿಯಾಶೀಲವಾಗಿದ್ದ ಶಕ್ತಿಗಳೆಲ್ಲವನ್ನೂ, ಅವುಗಳ ನಡುವಿನ ವರ್ಗ ಹಾಗೂ ಸಾಮಾಜಿಕ ವ್ಯತ್ಯಾಸಗಳನ್ನು ಗಣನೆಗೆ ತಂದುಕೊಳ್ಳದೆಯೇ, ರಾಷ್ಟ್ರೀಯವಾದಿ

ಅಡಿಪಾಯದ ಮೇಲೆ ಒಂದುಗೂಡಿಸುವ ಅದರ ಊಹಾತ್ಮಕವಾದರೂ ಪ್ರಾಮಾಣಿಕವಾದ ಬಯಕೆಯನ್ನು ವ್ಯಕ್ತಪಡಿಸುತ್ತಿದ್ದಿತು. ಐವತ್ತರ ದಶಕದ ಆರಂಭದಲ್ಲಿ ನಾಸೆರ್‌ರವರು ಇನ್ನೂ ಈಜಿಪ್ಷಿಯನ್ ಸಮಾಜದ ಸಾಮಾಜಿಕ ಹಾಗೂ ವರ್ಗ ಮೌಲ್ಯೀಕರಣದಿಂದ ದೂರವೇ ಉಳಿದಿದ್ದರು, ಸಮಾಜವಾದಿ ಪ್ರತೀಕ್ಷೆಗಳ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಇನ್ನೂ ರೂಪಿಸಿಕೊಂಡಿರಲಿಲ್ಲ. ಎಲ್ಲ ವರ್ಗಗಳೂ ಪ್ರಗತಿ ಪಡೆಯಬೇಕು, ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ನಿವಾರಣೆಯಾಗಬೇಕು, ಶ್ರೀಮಂತರು ಬಡವರಿಗೆ ನೆರವಾಗುವಂತಹ ಸಾಮಾಜಿಕ ನ್ಯಾಯದ ಸಮಾಜ ಸ್ಥಾಪನೆಯಾಗಬೇಕು ಎಂದು ಮುಂತಾದ ತಮ್ಮ ಹಂಬಲಗಳನ್ನು ಒತ್ತಿ ಹೇಳುತ್ತಿದ್ದುದು, ಆಗ ಅವರು ಮಾಡುತ್ತಿದ್ದ ಭಾಷಣಗಳೆಲ್ಲವುಗಳ ವಿಶಿಷ್ಟ ಲಕ್ಷಣವಾಗಿರುತ್ತಿದ್ದಿತು. ಶ್ರಮಜೀವಿಗಳಿಗೂ ಬಂಡವಾಳಗಾರರಿಗೂ ನಡುವೆ ಇಬ್ಬರಿಗೂ ಅನುಕೂಲವಾಗುವಂತೆ ಸಹಕಾರ ಏರ್ಪಡುವುದು ಅತ್ಯಂತ ಮುಖ್ಯವಾದುದು, ಅದು ಇಡೀ ರಾಷ್ಟ್ರದ ಹಿತಗಳಿಗೆ ಅನುಗುಣವಾಗಿರುತ್ತದೆ, ಎಂದೂ ಅವರು ಆಗ ಒತ್ತಿ ಹೇಳುತ್ತಿದ್ದರು.

ಈ ಕಾಲಾವಧಿಯಲ್ಲಿ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಎಲ್ಲ ಮುಖ್ಯ ಸಮಸ್ಯೆಗಳನ್ನೂ ಬಹುಮಟ್ಟಿಗೆ ರಾಷ್ಟ್ರವ್ಯಾಪೀ ಪ್ರಮಾಣದಲ್ಲಿ ಪರಿಹರಿಸಲಾಯಿತು. ರಾಷ್ಟ್ರೀಯ ಆರ್ಥಿಕತೆಯನ್ನು ಮೇಲ್ಮಟ್ಟಕ್ಕೇರಿಸುವ ಸಮಸ್ಯೆಗಳಿಗೆ ಸಂಬಂಧಿಸಿ ಅಧಿಕಾರಿಗಳ ಈ ಮನೋಭಾವವು ಅವರು ಸಾಮಂತಶಾಹಿ ವಿಭಾಗವೊಂದನ್ನು ಬಿಟ್ಟು ಬಹುಮಟ್ಟಿಗೆ ಉಳಿದೆಲ್ಲ ಸಾಮಾಜಿಕ-ಆರ್ಥಿಕ ವಿಭಾಗಗಳಿಗೂ ಉತ್ತೇಜನ ನೀಡುವ ಮೂಲಕ ಆರ್ಥಿಕ ಬೆಳವಣಿಗೆಯನ್ನು ಪ್ರೋತ್ಸಾಹಿಸುವ ವಿಧಾನದಲ್ಲಿ ವಿಶೇಷವಾಗಿ ಕಂಡುಬಂದಿತು. ಅದೇ ಹೊತ್ತಿನಲ್ಲಿ ಅಸ್ತಿತ್ವದಲ್ಲಿದ್ದ ಕೈಗಾರಿಕೋತ್ಪಾದನೆಯನ್ನು ಪುನರುಜ್ಜೀವನಗೊಳಿಸಲು ಪಾರಂಪರಿಕ ಮುಕ್ತ ವ್ಯಾಪಾರ ಮಾದರಿಯ ಹಾಗೂ dirigiste* ಮಾದರಿಯ ಶಾಸನಗಳನ್ನು ಮಾಡಲಾಯಿತು. ತುಲನಾತ್ಮಕವಾಗಿ ಸಣ್ಣ ಪ್ರಮಾಣದಲ್ಲಿದ್ದ ರಾಜ್ಯ ವಿಭಾಗಕ್ಕೆ ಮಾರ್ಗದರ್ಶನ ನೀಡುವುದು, ಖಾಸಗಿ ಬಂಡವಾಳ ಹೂಡಿಕೆಗೆ ಒತ್ತು ನೀಡಿ ಆರ್ಥಿಕತೆಯ ಯೋಜನಾಬದ್ಧ ಬೆಳವಣಿಗೆಯ ಸಾಧ್ಯತೆಗಳನ್ನು ಅಭ್ಯಸಿಸುವುದು, ಸ್ಟಾಕ್ ಕಂಪನಿಗಳ ಸಂಘಟನಾತ್ಮಕ ರಚನೆಯನ್ನು ನಿಯಂತ್ರಿಸುವ ಶಾಸನಗಳನ್ನು ರಚಿಸುವುದು, ಉನ್ನತ ಲಾಭಗಳ ಮೇಲೆ ತೆರಿಗೆ ಹಾಕುವುದು, ಇತ್ಯಾದಿಗಳಿಗಷ್ಟೆ ರಾಜ್ಯವು ಆರ್ಥಿಕತೆಯಲ್ಲಿ ತನ್ನ ಚಟುವಟಿಕೆಗಳನ್ನು ಸೀಮಿತಗೊಳಿಸಿಕೊಂಡಿದ್ದಿತು. ಆಸ್ವಾನ್ ಅಣೆಕಟ್ಟೆಯನ್ನೂ ಕೃಷಿ-ಕೈಗಾರಿಕಾ ಸಂಕೀರ್ಣವೊಂದನ್ನೂ

* ನಿರ್ದೇಶಿಸಬಲ್ಲುದಾದುದು. – ಸಂ.

10—1576

ನಿರ್ಮಿಸಲು 1954ರಲ್ಲಿ ಕೈಕೊಂಡ ನಿರ್ಧಾರವು ಭಾರಿ ಮಹತ್ವದ್ದಾಗಿದ್ದಿತು.

ರಾಜಕೀಯ ಹಾಗೂ ಆರ್ಥಿಕ ಬೆಳವಣಿಗೆಯ ಸಮಸ್ಯೆಗಳಿಗೆ ಸಂಬಂಧಿಸಿ ಆ ಕಾಲದಲ್ಲಿ ನಾಸೆರ್‌ರವರು ಮಂಡಿಸಿದ್ದ ವಿಚಾರಗಳು 1956ರ ಸಂವಿಧಾನದ ಮೂಲ ಪಾಠದಲ್ಲಿ ಸಾಂದ್ರೀಕೃತ ರೂಪದಲ್ಲಿ ಕಾಣಿಸಿಕೊಂಡವು. ಈ ಸಂವಿಧಾನದ ರಚನೆಯಲ್ಲಿ ಗಣತಂತ್ರದ ಅಧ್ಯಕ್ಷರೇ ಸ್ವತಃ ಭಾಗವಹಿಸಿದ್ದರು. ಅದು ಈ ಕೆಳಗಿನ ಮುಖ್ಯ ಕಟ್ಟುಪಾಡುಗಳನ್ನು ಒಳಗೊಂಡಿದ್ದಿತು:

"...ಸಾಮಾಜಿಕ ಸಮೈಕ್ಯತೆ ಇಜಿಪ್ಷಿಯನ್ ಸಮಾಜದ ಅಡಿಪಾಯ;

"...ಸಾಮಾಜಿಕ ನ್ಯಾಯವನ್ನು ಸಂರಕ್ಷಿಸುವಂಥ, ಉತ್ಪಾದನೆಯನ್ನು ವಿಸ್ತರಿಸುವ ಹಾಗೂ ಜೀವನ ಮಟ್ಟವನ್ನು ಹೆಚ್ಚಿಸುವ ಗುರಿಯುಳ್ಳಂಥ ಯೋಜನೆಗನುಗುಣವಾಗಿ ರಾಷ್ಟ್ರೀಯ ಆರ್ಥಿಕತೆಯನ್ನು ಸಂಘಟಿಸಬೇಕು;

"...ಬಂಡವಾಳವನ್ನು ರಾಷ್ಟ್ರೀಯ ಆರ್ಥಿಕತೆಯ ಹಿತಗಳಿಗೆ ಅನುಗುಣವಾಗಿ ಬಳಸಬೇಕು. ಅದರ ಬಳಕೆಯು ಸಾರ್ವಜನಿಕ ಹಿತದೊಂದಿಗೆ ಸಂಘರ್ಷಿಸಬಾರದು;

"...ಕಾನೂನು ವ್ಯವಸ್ಥೆ ಸಾರ್ವಜನಿಕ ಆರ್ಥಿಕ ಚಟುವಟಿಕೆಗಳ ವಲಯದಲ್ಲಿ ಸಹಕಾರವನ್ನು ಖಚಿತಪಡಿಸಿಕೊಡುತ್ತದೆ ಮತ್ತು ವ್ಯಾಪಾರೀ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತದೆ;

"...ರಾಜ್ಯವು ಸಾಮಾಜಿಕ ವಿಮೆಯ ಸಂಘಟನೆಯನ್ನು ತನ್ನ ಕೈಗೇ ತೆಗೆದುಕೊಳ್ಳುತ್ತದೆ."*

ಇಜಿಪ್ಟಿನ ಜನಜೀವನದ ನಾನಾ ವಲಯಗಳಲ್ಲಿ ಅಧ್ಯಕ್ಷ ನಾಸೆರ್‌ರವರ ಸರಕಾರದ ಸುಧಾರಣಾತ್ಮಕ ಚಟುವಟಿಕೆಗಳು ಕ್ರಾಂತಿಯ ಆರಂಭಿಕ ಘಟ್ಟದಲ್ಲಿ, ಸ್ವತಂತ್ರ ಹಾಗೂ ಸಕ್ರಿಯ ಸಾಮ್ರಾಜ್ಯಶಾಹಿ ವಿರೋಧಿ ವಿದೇಶಾಂಗ ನೀತಿಯ ಹಾಗೂ ಸೋವಿಯತ್ ಒಕ್ಕೂಟದೊಂದಿಗೂ ಸಮಾಜವಾದಿ ಸಮುದಾಯದ ಇತರ ದೇಶಗಳೊಂದಿಗೂ ನಿಕಟ ಸ್ನೇಹ ಸಂಬಂಧಗಳನ್ನು ಏರ್ಪಡಿಸಿಕೊಳ್ಳುವ ನೀತಿಯ ಹಿನ್ನೆಲೆಯಲ್ಲಿ, ಜರುಗಿದವು. ಬ್ರಿಟಿಷ್ ದಳಗಳು ದೇಶದ ಭೂಪ್ರದೇಶದಿಂದ ನಿರ್ಗಮಿಸುವುದಕ್ಕೆ ಸಂಬಂಧಿಸಿ ಒಪ್ಪಂದ ಮಾಡಿಕೊಂಡುದು (ಜೂನ್ 1956), ಸೂಯೆಜ್ ಕಾಲುವೆ ಕಂಪನಿಯನ್ನು ರಾಷ್ಟ್ರೀಕರಿಸಿದುದು (ಜುಲೈ 1956) – ಇವು ಇಜಿಪ್ಟಿನ ಸರಕಾರ ಈ ಕಾಲದಲ್ಲಿ ನೆರವೇರಿಸಿದ ಮಹತ್ವದ ರಾಜಕೀಯ ಕಾರ್ಯಗಳಾಗಿದ್ದವು. ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ರಾಜ್ಯಗಳ, ಪ್ರಗತಿಗಾಮಿ ಸಾರ್ವಜನಿಕಾಭಿಪ್ರಾಯದ ದೃಢ ಬೆಂಬಲದ

* *World Marxist Review*, No. 8, 1966, p. 20. – ಸಂ.

ಮೇಲೆ ಆಧರಿಸಿಕೊಂಡು ಇಜಿಪ್ಟ್ 1956ರಲ್ಲಿ ಆಂಗ್ಲೋ-ಫ್ರೆಂಚ್-ಇಸ್ರೇಲಿ ದುರಾಕ್ರಮಣವನ್ನು ಹಿಮ್ಮೆಟ್ಟಿಸುವುದರಲ್ಲಿ ಯಶಸ್ವಿಯಾಯಿತು. ದುರಾಕ್ರಮಣಕಾರರ ಮೇಲಿನ ವಿಜಯವು ಇಜಿಪ್ಟಿನ ಈಚಿನ ಇತಿಹಾಸದಲ್ಲಿ ಒಂದು ಸಂಧಿಕಾಲವಾಯಿತು. ಅದು ತದನಂತರದ ದೇಶದ ವಿದೇಶಾಂಗ ನೀತಿಮಾರ್ಗವನ್ನು ಬಹುಮಟ್ಟಿಗೆ ಪೂರ್ವನಿರ್ಧರಿಸಿತು. ಅದು ಗೃಹ ನೀತಿಯಲ್ಲಿನ ಕೆಲವು ಪ್ರವೃತ್ತಿಗಳಿಗೂ ಕಾರಣಭೂತವಾಯಿತು. ಆಂಗ್ಲೋ-ಫ್ರೆಂಚ್-ಇಸ್ರೇಲಿ ದುರಾಕ್ರಮಣದ ನಂತರ ನಾಸೆರ್‌ರವರ ಸರಕಾರವು ವಿದೇಶೀ ಆಸ್ತಿಯನ್ನು ಕೂಡಲೇ ಮುಟ್ಟುಗೋಲು ಹಾಕಿಕೊಂಡಿತು. ಅನಂತರ ಅದರ ಮೇಲಿನ ನಿಯಂತ್ರಣವನ್ನು ಇಜಿಪ್ಷಿಯನ್ ತಜ್ಞರಿಗೆ ವರ್ಗಾಯಿಸಿಕೊಟ್ಟಿತು. ತದನಂತರ ಪಾಶ್ಚಿಮಾತ್ಯ ದೇಶಗಳು ಇಜಿಪ್ಟಿನ ಮೇಲೆ ಆರ್ಥಿಕ ದಿಗ್ಬಂಧನ ಹಾಕಿದುದು ಕ್ರಿಯಾಶೀಲ ಸಾಮ್ರಾಜ್ಯಶಾಹಿ ವಿರೋಧಿ ನೀತಿಮಾರ್ಗವನ್ನು ಅನುಸರಿಸುವ ನಾಸೆರ್‌ರವರ ನಿರ್ಧಾರವನ್ನು ಮತ್ತೂ ಹೆಚ್ಚು ಬಲಪಡಿಸಿತಷ್ಟೆ.

ಐವತ್ತರ ದಶಕದ ಮಧ್ಯಭಾಗದಲ್ಲಿ ಇಜಿಪ್ಟ್‌ನಲ್ಲಿ ನೆರವೇರಿಸಲಾದ ರಾಜಕೀಯ ಹಾಗೂ ಆರ್ಥಿಕ ಕ್ರಮಗಳು, ಮಧ್ಯಪ್ರಾಚ್ಯದಲ್ಲೂ ಉತ್ತರ ಆಫ್ರಿಕದಲ್ಲೂ ರಾಷ್ಟ್ರೀಯ-ವಿಮೋಚನಾ ಚಳವಳಿ ಅಭಿವೃದ್ಧಿಗೊಂಡುದು (ಇವರಲ್ಲಿ ಇಜಿಪ್ಟ್ ಅಗ್ರಗಾಮಿ ಪಾತ್ರ ನಿರ್ವಹಿಸಿತು) ಮತ್ತು ಇಜಿಪ್ಟ್ ಹಾಗೂ ಸಿರಿಯಾಗಳನ್ನು ಒಳಗೊಂಡ ಐಕ್ಯ ಅರಬ್ ಗಣತಂತ್ರವನ್ನು ಸೃಜಿಸಿದುದು ಇವು ಇಜಿಪ್ಷಿಯನ್ ಜನರ ರಾಷ್ಟ್ರೀಯ ಜಾಗೃತಿಯ ಬೆಳವಣಿಗೆಗೆ ಕ್ರಿಯಾಶೀಲವಾಗಿ ಪ್ರೋತ್ಸಾಹ ನೀಡಿದವು. ಈ ಪರಿಸ್ಥಿತಿಗಳಲ್ಲಿ, ದೇಶವು ಗಾಢವಾದ ಸಾಮಾಜಿಕ ಆರ್ಥಿಕ ಪುನಸ್ಸಂಘಟನೆಯ ಕಾರ್ಯಭಾರಗಳನ್ನು ಎದುರಿಸುತ್ತಿದ್ದಾಗ ಅಧ್ಯಕ್ಷ ನಾಸೆರ್‌ರವರ ನಾಯಕತ್ವದಲ್ಲಿ ಕ್ರಾಂತಿಕಾರಿ ಅಧಿಕಾರಿಗಳು ರಾಜ್ಯದ ಆಂತರಿಕ ರಾಜಕಾರಣದಲ್ಲಿ ವಿವಿಧ ವರ್ಗಗಳೂ ಸಾಮಾಜಿಕ ವೃಂದಗಳೂ ನಿರ್ದಿಷ್ಟ ಕೋಟಿ ಏರ್ಪಡಿಸಿಕೊಂಡು ಶಾಶ್ವತವಾಗಿ ಭಾಗವಹಿಸುವ ರೂಪಗಳನ್ನು ರಚಿಸಲು ನಿರಂತರವಾಗಿ ಯತ್ನಿಸಿದರು. 'ನ್ಯಾಷನಲ್ ಯೂನಿಯನ್' ಎಂಬ ಒಂದು ಹೊಸ ಸಂಘಟನೆಯನ್ನು ವಿಸರ್ಜಿಸಲಾದ 'ಲಿಬರೇಷನ್ ರ್‍ಯಾಲಿ' ಸಂಸ್ಥೆಯ ಸ್ಥಳದಲ್ಲಿ ಸ್ಥಾಪಿಸಲಾಯಿತು. ಅದು "ಸಮಾಜದ ಎಲ್ಲ ಹಿತವಾದಿ ಶಕ್ತಿಗಳನ್ನೂ" ಅದೇ ವರ್ಗ ಸಹಕಾರದ ಆಧಾರದ ಮೇಲೆ ಒಂದುಗೂಡಿಸಿತು.

ಹೊಸ ರಾಜಕೀಯ ಸಂಘಟನೆಯ ಕಾರ್ಯಭಾರಗಳ ಸಾರವನ್ನು ನಾಸೆರ್‌ರವರೇ ಹೀಗೆ ನಿರೂಪಿಸಿದರು: "...'ನ್ಯಾಷನಲ್ ಯೂನಿಯನ್' ನಮಗೆ ಸಮಾಜವಾದಿ, ಪ್ರಜಾಸತ್ತಾತ್ಮಕ, ಸಹಕಾರಿ ಸಮಾಜವನ್ನು ನಿರ್ಮಿಸಲು ಸಾಧ್ಯಮಾಡಿಕೊಡುವಂಥ ಒಂದು ಸಾಧನ. ಅದರ ಸಹಾಯದಿಂದ ನಾವು ಈ ಸಮಾಜ ನಿರ್ಮಾಣದ ನಮ್ಮ ಧ್ಯೇಯಗಳನ್ನು ರಕ್ಷಿಸಿಕೊಳ್ಳಬಹುದು. ನಾವು ನಮ್ಮ ಈ

ಬೆಳವಣಿಗೆಯನ್ನು ಅಂತರ್ಯುದ್ಧವಿಲ್ಲದೆ, ರಕ್ತಪಾತವಿಲ್ಲದೆ, ವರ್ಗ ಸಮರವಿಲ್ಲದೆ, ಆದರೆ ಪ್ರೇಮ ಹಾಗೂ ಭ್ರಾತೃತ್ವಗಳಿಂದ ಸಾಧಿಸುವುದೂ ಸಾಧ್ಯವಿದೆ."* ಈ ಹೊಸ ಸಂಸ್ಥೆಯು ರಾಷ್ಟ್ರೀಯವಾದಿ ವಿಚಾರಧಾರೆಯಿಂದ ಮಾರ್ಗದರ್ಶಿತವಾಗಿದ್ದುದು ಎಂಬುದನ್ನು ಅದರ ಹೆಸರೇ ಸ್ಪಷ್ಟಪಡಿಸುತ್ತದೆ. ಸಾಮಾಜಿಕ ಸುಧಾರಣೆಗೆ "ಸ್ವಾತಂತ್ರ್ಯ, ಏಕತೆ, ಸಮಾಜವಾದ"ಗಳು ಪೂರ್ವಾವಶ್ಯಕತೆಗಳಾಗಿದ್ದವು. ಹೊಸ ಸಂಘಟನೆಯ ಘೋಷಣೆಯೂ ಅದೇ ಆಗಿದ್ದಿತು.

ಇಜಿಪ್ಟ್‌ನಲ್ಲಿ ಸಮಾಜವಾದಿ ಮಾದರಿಯ ಸಮಾಜವನ್ನು ನಿರ್ಮಿಸುವುದರ ಪರವಾಗಿ ತಾವು ಇದ್ದಾರೆಂದು ನಾಸೆರ್ ಅನೇಕ ಬಾರಿ ಮುಚ್ಚುಮರೆ ಇಲ್ಲದೆ ಹೇಳಿದರು. ನಾಸೆರ್‌ರವರು 1955ರಲ್ಲಿ ಬಾಂಡುಂಗ್‌ನಿಂದ ಹಿಂದಿರುಗಿದನಂತರ ಮಾಡಿದ ಭಾಷಣವೊಂದರಲ್ಲಿ ಸಮಾಜವಾದಕ್ಕೆ ಉಲ್ಲೇಖವಿದ್ದಿತು. ವರ್ಗಗಳ ನಡುವಿನ ಅಂತರವನ್ನು ತೊಡೆದು ಹಾಕುವ ಮೂಲಕ ಸಮಾಜವಾದವನ್ನು ನಿರ್ಮಿಸಬೇಕೆಂದು ಅವರು ಸೂಚಿಸಿದ್ದರು. ಆದರೆ ಅದು ಆ ಕಾಲದಲ್ಲಿ ಗಮನಕ್ಕೆ ಬಾರದೆಯೇ ಹೋಯಿತು. ಅನಂತರ ಅವರು "ಸಮಾಜವಾದಿ, ಪ್ರಜಾಸತ್ತಾತ್ಮಕ, ಸಹಕಾರೀ ಸಮಾಜ"ವೊಂದರ ಬಗೆಗೆ ಹೇಳಿದರು. ಕೆಲವು ವೇಳೆ ಅವರು ಸಮಾಜವಾದವನ್ನು ಶೋಷಕರಿಲ್ಲದ ಸಮಾಜವೆಂದು ವರ್ಣಿಸಿದರು. ಇತರ ಕೆಲವು ವೇಳೆ ಅವರು ಅದನ್ನು ಒಡೆಯರ ಅಥವಾ "ಮಾಲೀಕರ" ಸಮಾಜವೆಂದು ವರ್ಣಿಸಿದರು. 1957ರಲ್ಲಿ ಭಾರತೀಯ ಪತ್ರಕರ್ತರಿಗೆ ನೀಡಿದ ಸಂದರ್ಶನವೊಂದರಲ್ಲಿ ಅಧ್ಯಕ್ಷ ನಾಸೆರ್, ಸಮಾಜವಾದ ಎಂದರೆ ಕಾರ್ಮಿಕರಿಗೂ ಉದ್ಯಮಿಗಳಿಗೂ ನಡುವೆ, ಆರ್ಥಿಕತೆಯ ಖಾಸಗಿ ಹಾಗೂ ರಾಜ್ಯ ವಿಭಾಗಗಳ ನಡುವೆ ಸಹಕಾರ ಹಾಗೂ ಯೋಜನಾಬದ್ಧ ಆರ್ಥಿಕ ಬೆಳವಣಿಗೆ, ಎಂದು ತಾವು ಅರ್ಥಮಾಡಿಕೊಂಡಿರುವುದಾಗಿ ವಿವರಿಸಿದರು. 1958ರ ನವಂಬರ್‌ನಲ್ಲಿ ಜರುಗಿದ ಸಹಕಾರಿ ಸಂಸ್ಥೆಗಳ ನಾಲ್ಕನೆಯ ಮಹಾಧಿವೇಶನದಲ್ಲಿ ನಾಸೆರ್ ತಮ್ಮ ಸಮಾಜವಾದಿ ಪ್ರಕಲ್ಪನೆಯನ್ನು ಸ್ವಲ್ಪ ಹೆಚ್ಚು ವಿಶಾಲ ಅರ್ಥದೊಂದಿಗೆ ವ್ಯಾಖ್ಯಾನಿಸಿದರು: "ಸಮಾಜವಾದ ಎಂದರೆ ಸಾಮಂತವಾದದ ಹಾಗೂ ಏಕಸ್ವಾಮ್ಯಗಳ ನಿರ್ಮೂಲನ, ರಾಜ್ಯಾಧಿಕಾರದ ಮೇಲೆ ಬಂಡವಾಳದ ಪ್ರಾಬಲ್ಯದ ನಿರ್ಮೂಲನ, ಶೋಷಣೆಯ ನಿರ್ಮೂಲನ. ಧನಾತ್ಮಕ ಅರ್ಥದಲ್ಲಿ ಸಮಾಜವಾದ ಎಂದರೆ ಮೊದಲು ರಾಷ್ಟ್ರೀಯ ಆರ್ಥಿಕತೆಯೊಂದನ್ನು ನಿರ್ಮಿಸುವುದು, ಅನಂತರ ಈ ಆರ್ಥಿಕತೆಯಲ್ಲಿ ಸಮಾಜದ

* Khaled Mohei El-Din, *The Course of the Egyptian Revolution and Its Future*, *World Marxist Review*, No. 8, 1966, p. 21. – ಸಂ.

ಅವಶ್ಯಕತೆಗಳನ್ನು ಪೂರೈಸಬಲ್ಲಂಥ, ಸಾಮಾಜಿಕ ನ್ಯಾಯವನ್ನು ಸೃಜಿಸಬಲ್ಲಂಥ ಪರಿಸ್ಥಿತಿಗಳನ್ನು ವಿಕಾಸಗೊಳಿಸುವುದು."*

ಐವತ್ತರ ದಶಕದಲ್ಲಿ ಸಾಮಾಜಿಕ ಬೆಳವಣಿಗೆಗೆ ಸಂಬಂಧಿಸಿ ನಾಸೆರ್‌ರವರ ಹಾಗೂ ಒಟ್ಟಿನಲ್ಲಿ ದೇಶದ ನಾಯಕತ್ವದ ಆರ್ಥಿಕ ಮನೋಧರ್ಮದಲ್ಲಿ ಸಮಾಜವಾದದ ಪ್ರಶ್ನೆಯನ್ನು ಹೀಗೆ ನಿರೂಪಿಸುವುದೇ ಪ್ರಧಾನವಾಗಿದ್ದಿತು. ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿಯೂ ಊಹಾತ್ಮಕವಾದ, ವರ್ಗಾತೀತವಾದ ಮನೋಧರ್ಮವೇ ಪ್ರಧಾನವಾಗಿದ್ದಿತು. ಆದರೂ ಇಜಿಪ್ಷಿಯನ್ ಸಮಾಜದಲ್ಲಿ ಹೇಗಾದರೂ ಸರಿ ಮಾನವನಿಂದ ಮಾನವನ ಶೋಷಣೆಯನ್ನು ಮಿತಿಗೊಳಿಸಬೇಕು ಎಂಬ ಬಯಕೆಯೂ ಅದರಲ್ಲಿದ್ದಿತು. ಆ ಕಾಲದಲ್ಲಿ ನಾಸೆರ್‌ರವರು ತಮ್ಮ ಸಮಾಜವಾದದ ಬಗೆಗಿನ ಪ್ರಕಲ್ಪನೆಯಲ್ಲಿ ಮುಖ್ಯ ಉತ್ಪಾದನಾ ಸಾಧನಗಳ ಮೇಲೆ ಜನತಾ ನಿಯಂತ್ರಣದ ಅಂಶವನ್ನು ಇನ್ನೂ ಸೇರಿಸಿರಲಿಲ್ಲ. ಆದರೆ ಅಧಿಕಾರದಲ್ಲಿದ್ದ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿಗಳು ಹೆಚ್ಚು ಹೆಚ್ಚು ಆಗಾಗ್ಗೆ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಸಮಸ್ಯೆಗಳೊಂದಿಗೆ (ಕೃಷಿ ಸಂಬಂಧಿ ಸುಧಾರಣೆ ಹಾಗೂ ಗ್ರಾಮಾಂತರದಲ್ಲಿ ಸಹಕಾರಿ ಸಂಘಟನೆ, ಸೂಯೆಜ್ ಕಾಲುವೆಯ ರಾಷ್ಟ್ರೀಕರಣ ಹಾಗೂ ವಿದೇಶೀ ಉದ್ಯಮಗಳ ಇಜಿಪ್ಟೀಕರಣ, ಖಾಸಗಿ ಬಂಡವಾಳ ಬೆಳವಣಿಗೆ, ಸಾಮಾಜಿಕ ವೈಷಮ್ಯಗಳಲ್ಲಿ ಹೆಚ್ಚಳ ಹಾಗೂ ಅನಿವಾರ್ಯವಾಗಿ ವರ್ಗ ಹೋರಾಟದ ತೀಕ್ಷ್ಣತೆ, ಇಂತಹ ಸಮಸ್ಯೆಗಳೊಂದಿಗೆ) ವ್ಯವಹರಿಸತೊಡಗಿದಾಗ ನಾಸೆರ್‌ರವರು ಈ ಗುರಿಯನ್ನು ಹೆಚ್ಚು ಹೆಚ್ಚಾಗಿ ಮನಗಾಣತೊಡಗಿದರು.

ಇಜಿಪ್ಷಿಯನ್ ರಾಷ್ಟ್ರೀಯ ಬೂರ್ಷ್ವಾಸೀಯು ಐವತ್ತರ ದಶಕದ ಕೊನೆಯಲ್ಲಿ ರಾಜ್ಯವು ಸ್ವದೇಶೀ ಕೈಗಾರಿಕೆಗಳಿಗೆ ನೀಡಿದ ಸಂರಕ್ಷಣೆಯ ಹಾಗೂ ಬೆಂಬಲದ ಮೇಲೆ ಅವಲಂಬಿಸಿಕೊಂಡು ತನ್ನ ಆರ್ಥಿಕ ನೆಲೆಗಳನ್ನು ಗಣನೀಯವಾಗಿ ದೃಢಪಡಿಸಿಕೊಳ್ಳಲು ಸಮರ್ಥವಾಯಿತು. ಅದೇ ಹೊತ್ತಿನಲ್ಲಿ ರಾಜ್ಯ ವ್ಯವಹಾರಗಳಲ್ಲಿ ಅದರ ರಾಜಕೀಯ ಪ್ರಭಾವ ಹೆಚ್ಚುವ ಪ್ರವೃತ್ತಿಯೂ ಕಂಡುಬಂದಿತು. ಇಜಿಪ್ಟ್‌ನ ಭಾರಿ ಬಂಡವಾಳದ ಹಾಗೂ ಅದಕ್ಕೆ ಸಂಬಂಧಿಸಿದ ವೃತ್ತಗಳ ಪ್ರತಿನಿಧಿಗಳು ಪಾರ್ಲಿಮೆಂಟಿನ ಮೇಲೆ ಹಾಗೂ 'ನ್ಯಾಷನಲ್ ಯೂನಿಯನ್' ಸಂಸ್ಥೆಯ ಮೇಲೆ ನಿಯಂತ್ರಣ ಸ್ಥಾಪಿಸಿಕೊಳ್ಳುವುದರಲ್ಲಿ ಯಶಸ್ವಿಯಾದರು. ಕ್ರಾಂತಿಯನ್ನು ಮತ್ತಷ್ಟು ವಿಕಾಸಗೊಳಿಸುವ ಬಗೆಗೆ ತಮ್ಮ ನಕಾರಾತ್ಮಕ ಮನೋಧರ್ಮವನ್ನು ಅವರೇನೂ ಮುಚ್ಚಿಡಲಿಲ್ಲ. ಕ್ರಾಂತಿಯು ತನ್ನ ಕಾರ್ಯಭಾರಗಳನ್ನು ಆಗಲೇ ಪೂರೈಸಿದ್ದಿತು ಎಂದವರು ತಿಳಿಸಿದರು. ಹೀಗೆ ಸ್ಥಳೀಯ ಭಾರಿ ಬೂರ್ಷ್ವಾಸೀಯು

* *Speeches and Statements by President G. A. Nasser*, Vol. 9, Cairo, s. a., p. 52 (in Arabic). – ಸಂ.

ಹೊಂದಿದ್ದ ಪತ್ರಿಕೆಗಳು ಹೆಚ್ಚು ಹೆಚ್ಚಾಗಿ ರಾಜಕೀಯ ಅಧಿಕಾರಿಗಳಿಗೆ ವಿರುದ್ಧ ನಿಂತವು, ಅವರ ವಿಶೇಷ ಹಕ್ಕುಗಳ ಮೇಲೆ ಅತಿಕ್ರಮಣ ನಡೆಸಿದವು.

ರಾಷ್ಟ್ರೀಯ ಆರ್ಥಿಕತೆಯ ಬೆಳವಣಿಗೆಯನ್ನು ಉತ್ಕರ್ಷಿಸುವ ಮತ್ತು ಅಧ್ಯಕ್ಷರ ಮಾತುಗಳಲ್ಲೇ ಹೇಳುವುದಾದರೆ, "ಕಬ್ಬಿಣ ಹಾಗೂ ಉಕ್ಕಿನ ಈಜಿಪ್ಟ್"ಅನ್ನು ನಿರ್ಮಿಸುವ ಕಾರ್ಯಭಾರಗಳನ್ನು ನೆರವೇರಿಸಬೇಕಾಗಿ ಬಂದಾಗ ಸ್ಥಳೀಯ ಭಾರಿ ಬಂಡವಾಳವು ಸರಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ವಿರೋಧಿಸುತ್ತಿದ್ದುದನ್ನು ಕಂಡು ಅಧ್ಯಕ್ಷ ನಾಸೆರ್ "ಬಂಡವಾಳದ ಭೀತಿ"ಯನ್ನು ಟೀಕಿಸುವ ಒತ್ತಾಯಕ್ಕೊಳಗಾದರು. ಬಂಡವಾಳ ಎಂದರೆ ಅವರ ಅರ್ಥದಲ್ಲಿ ಒಟ್ಟಿನಲ್ಲಿ ಖಾಸಗಿ ವಿಭಾಗವಾಗಿರಲಿಲ್ಲ, ಆದರೆ ಏಕಸ್ವಾಮ್ಯಗಳ ಸ್ವರೂಪ ಪಡೆದುಕೊಂಡಿದ್ದ ಭಾರಿ ಬಂಡವಾಳಶಾಹಿ ಸಂಸ್ಥೆಗಳಷ್ಟೆ ಆಗಿದ್ದವು. ಟೀಕೆ ಮಾಡಿದುದಷ್ಟೆ ಅಲ್ಲ ಪ್ರಾಯೋಗಿಕ ಕ್ರಮಗಳನ್ನೂ ತಕ್ಷಣವೇ ಕೈಗೊಳ್ಳಲಾಯಿತು: 1960ರಲ್ಲಿ ಭಾರಿ ಖಾಸಗಿ 'ಮಿಸ್ರ್' ಹಾಗೂ 'ನ್ಯಾಷನಲ್' ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು. ಇವು ಭಾರಿ ಕೈಗಾರಿಕಾ ಹಾಗೂ ವಾಣಿಜ್ಯ ಸಂಸ್ಥೆಗಳಲ್ಲಿ ಬಂಡವಾಳದ ಬಹುಭಾಗದ ಮೇಲೆ ಹತೋಟಿ ಹೊಂದಿದ್ದವು. ಇದಾದನಂತರ "ಸಮಾಜವಾದಿ ಕಾನೂನುಗಳನ್ನು" (1961) ಘೋಷಿಸಲಾಯಿತು. ಇದರ ಪ್ರಕಾರ ಕೈಗಾರಿಕೆಯಲ್ಲಿ ಅತಿ ದೊಡ್ಡ ಉದ್ಯಮಗಳು, ಸಾರಿಗೆ, ಸಾಲ ಹಾಗೂ ಹಣಕಾಸು ಸಂಸ್ಥೆಗಳು ರಾಜ್ಯದ ಒಡೆತನಕ್ಕೆ ಬಂದವು ಇಲ್ಲವೇ ರಾಜ್ಯದ ನಿಯಂತ್ರಣದ ಕೆಳಗೆ ಬಂದವು. ಜೊತೆಗೆ ವಿದೇಶೀ ವ್ಯಾಪಾರದ ಮೇಲೂ, ಭಾಗಶಃ ದೇಶೀಯ ಸಗಟು ವ್ಯಾಪಾರದ ಮೇಲೂ, ರಾಜ್ಯ ನಿಯಂತ್ರಣವನ್ನು ಸ್ಥಾಪಿಸಲಾಯಿತು. 1963ರಲ್ಲಿ ರಾಷ್ಟ್ರೀಕರಣದ ಕಾನೂನುಗಳನ್ನು ಲಘು ಕೈಗಾರಿಕೆಯಲ್ಲಿನ ನೂರಾರು ಮಧ್ಯಮ ಪ್ರಮಾಣದ ಹಾಗೂ ಸಣ್ಣ ಖಾಸಗಿ ಉದ್ಯಮಗಳನ್ನೂ ಒಳಗೊಳ್ಳುವಂತೆ ವಿಸ್ತರಿಸಲಾಯಿತು. ನಾಸೆರ್‌ರವರ ಸರಕಾರವು 1961ರ ಜುಲೈನಲ್ಲಿ ಒಂದು ಹೊಸ ಕೃಷಿ ಸಂಬಂಧಿ ಸುಧಾರಣಾ ಶಾಸನವನ್ನು ಹೊರಡಿಸಿತು. ಅದು ಭೂಒಡೆತನದ ಗರಿಷ್ಠ ಪ್ರಮಾಣವನ್ನು ಮತ್ತಷ್ಟು ಕಮ್ಮಿ ಮಾಡಿತು (ಐದು ಮಂದಿಯ ಕುಟುಂಬಕ್ಕೆ 42 ಹೆಕ್ಟಾರುಗಳು). ರಾಜ್ಯವು ವಶಪಡಿಸಿಕೊಂಡ ಭೂಮಿಗಳಿಗಾಗಿ ಭೂಮಾಲೀಕರಿಗೆ ಪರಿಹಾರ ನೀಡುವುದನ್ನು ರದ್ದುಪಡಿಸಿತು, ಸುಧಾರಣೆಯ ಚೌಕಟ್ಟಿನೊಳಗೇ ರೈತರಿಗೆ ನೀಡಲಾಗಿದ್ದ ಭೂಮಿಗಳಿಗಾಗಿ ಗೇಣಿಯನ್ನು ಗಣನೀಯವಾಗಿ ಕಮ್ಮಿ ಮಾಡಿತು. ಸುಧಾರಣೆಯ ಮೂಲಕ ಭೂಮಿ ಪಡೆದುಕೊಂಡಿದ್ದ ರೈತರು ಕೃಷಿ ಕಾರ್ಯವನ್ನು ಸಹಕಾರಿ ರೀತಿಯಲ್ಲಿ ಸಂಘಟಿಸಿಕೊಳ್ಳುವುದಕ್ಕೆ ಹೊಸ ಉತ್ತೇಜನ ನೀಡಲಾಯಿತು.

ಈ "ಸಮಾಜವಾದಿ ಕಾನೂನುಗಳು" ಇಷ್ಟಕ್ಕೇ ಮುಗಿಯಲಿಲ್ಲ. ಅದೇ ಹೊತ್ತಿನಲ್ಲಿ ಸರಕಾರವು ಜನರ ಸಾಮಾಜಿಕ ಹಾಗೂ ಭೌತಿಕ ಸಂಕ್ಷೇಮವನ್ನು

ಸುಧಾರಿಸಲು ಅನೇಕ ಕ್ರಮಗಳನ್ನೂ ಕಾರ್ಯಗತಗೊಳಿಸತೊಡಗಿತು. 42 ಗಂಟೆಗಳ ಕೆಲಸದ ವಾರವನ್ನು ಅಧಿಕೃತವಾಗಿ ಜಾರಿಗೆ ತರಲಾಯಿತು. ಆರ್ಥಿಕತೆಯ ಪ್ರಧಾನ ಶಾಖೆಗಳಲ್ಲಿನ ಕಾರ್ಮಿಕರಿಗೂ ನೌಕರರಿಗೂ ನಿರ್ದಿಷ್ಟ ಕನಿಷ್ಠ ವೇತನವನ್ನು ಗೊತ್ತುಪಡಿಸಲಾಯಿತು, ಅವರಿಗೆ ವೇತನಸಹಿತ ರಜೆಯ ಹಾಗೂ ನಿವೃತ್ತಿ ವೇತನದ ಹಕ್ಕುಗಳನ್ನು ನೀಡಲಾಯಿತು. ರಾಜ್ಯ ಹಾಗೂ ಖಾಸಗಿ ಉದ್ಯಮಗಳಲ್ಲಿ ಲಾಭದ ಶೇ. 25ರಷ್ಟನ್ನು ಕಾರ್ಮಿಕರ ಹಾಗೂ ನೌಕರರ ಬಳಕೆಗಾಗಿ ತೆಗೆದಿರಿಸಬೇಕೆಂದೂ, ಉದ್ಯಮಗಳ ನಿರ್ವಹಣೆಯ ಹಾಗೂ ಉತ್ಪಾದನಾ ಬೆಳವಣಿಗೆಯ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಕಾರ್ಮಿಕರೂ ಭಾಗವಹಿಸುವಂತಾಗಬೇಕೆಂದೂ, ಒಂದು ಮುಖ್ಯ ಹೊಸ ನಿರ್ಧಾರವನ್ನು ಜಾರಿಗೆ ತರಲಾಯಿತು. ನಿರುದ್ಯೋಗವನ್ನು ಕಮ್ಮಿ ಮಾಡಲೂ, ಆಹಾರ ಪದಾರ್ಥಗಳ ಬೆಲೆಗಳನ್ನೂ ಮನೆ ಬಾಡಿಗೆಗಳನ್ನೂ ನಿಯಂತ್ರಿಸಲೂ ಕ್ರಮಗಳನ್ನು ಕೈಗೊಳ್ಳಲಾಯಿತು. ಶಾಲೆಗಳಲ್ಲೂ ಉನ್ನತ ವಿದ್ಯಾಸಂಸ್ಥೆಗಳಲ್ಲೂ ಉಚಿತ ಶಿಕ್ಷಣವನ್ನು ಜಾರಿಗೆ ತರಲಾಯಿತು.

1961-1963 ಪ್ರಗತಿಶೀಲ ಸಾಮಾಜಿಕ-ಆರ್ಥಿಕ ಕ್ರಮಗಳು ಈಜಿಪ್ಟಿನ ಜೀವನದಲ್ಲಿ ಮಹೋನ್ನತ ಘಟನೆಗಳಾಗಿದ್ದವು. ಅವನ್ನು ದುಡಿಯುವ ಜನರು ಹೃತ್ಪೂರ್ವಕವಾಗಿ ಸ್ವಾಗತಿಸಿ ಬೆಂಬಲಿಸಿದರು. ಆದರೆ ಅನೇಕ ಅತೃಪ್ತ ಜನರೂ ಇದ್ದರು, ಎಲ್ಲಕ್ಕೂ ಮಿಗಿಲಾಗಿ "ನೊಂದ" ಬೂರ್ಷ್ವಾಸೀಯ ಮಧ್ಯದಲ್ಲಿ. ಹೀಗೆ ಜೀವನದ ತರ್ಕವೇ "ವರ್ಗ ಶಾಂತಿ"ಯನ್ನಲ್ಲ ಆದರೆ ವರ್ಗ ಹೋರಾಟವನ್ನು ಮುನ್ನೆಲೆಗೆ ತಂದಿದ್ದಿತು. ಶೋಷಕ ಜನರ ಹಿತಗಳ ಮೇಲೆ ಎಷ್ಟು ಹೆಚ್ಚಾಗಿ ಹೊಡೆತಗಳು ಬಿದ್ದಂತೆ ಈ ವರ್ಗ ಹೋರಾಟದ ತೀಕ್ಷ್ಣತೆಯು ಅಷ್ಟೂ ಹೆಚ್ಚಾಗತೊಡಗಿತು.

ಸಹಜವಾಗಿಯೇ, ಈ ಪರಿಸ್ಥಿತಿಗಳಲ್ಲಿ ಅಧ್ಯಕ್ಷ ನಾಸೆರ್‌ರವರೂ ಅವರ ಸರಕಾರವೂ ಶೋಷಕ ವರ್ಗಗಳ ರಾಜಕೀಯ ಪ್ರಭಾವವನ್ನು ಮಿತಿಗೊಳಿಸಲು ಹೆಚ್ಚು ದೃಢ ಕಾರ್ಯ ಕೈಗೊಳ್ಳಬೇಕಾಯಿತು. ಈ ಗುರಿಯನ್ನು ಮನಸ್ಸಿನಲ್ಲಿಟ್ಟುಕೊಂಡು 1961ರ ನವಂಬರ್‌ನಲ್ಲಿ ಪಾರ್ಲಿಮೆಂಟನ್ನೂ 'ನ್ಯಾಷನಲ್ ಯೂನಿಯನ್' ಪಾರ್ಟಿಯನ್ನೂ ವಿಸರ್ಜಿಸಲಾಯಿತು, ಏಕೆಂದರೆ ಅವು ಪುರೋಗಾಮಿ ಸುಧಾರಣೆಗಳಿಗೆ ವಿರೋಧವಿದ್ದವು. ಸರಕಾರದ ಸಾಮಾಜಿಕ-ಆರ್ಥಿಕ ಕ್ರಮಗಳನ್ನು ವಿರೋಧಿಸಿದಂಥ ಪ್ರಮುಖ ಧನಾಧಿಪತಿಗಳ, ಕೈಗಾರಿಕೋದ್ಯಮಿಗಳ ಹಾಗೂ ವ್ಯಾಪಾರಗಾರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವ ಮೂಲಕ "ಲಕ್ಷಾಧೀಶರ ವಿರುದ್ಧ ಚಳವಳಿ"ಯನ್ನು ಪ್ರಾರಂಭಿಸಲಾಯಿತು. ಈ ಕ್ರಮಗಳನ್ನು ವಿರೋಧಿಸಿದ ಒಂದು ವಿಭಾಗದ ಪಾರ್ಲಿಮೆಂಟ್ ಸದಸ್ಯರನ್ನೂ 'ನ್ಯಾಷನಲ್ ಯೂನಿಯನ್'ನ ಕಾರ್ಯಕರ್ತರನ್ನೂ, ಭೂಮಾಲೀಕರನ್ನೂ ಹಾಗೂ ಬಂಡವಾಳಗಾರರನ್ನೂ "ನಾಗರಿಕ ಬಹಿಷ್ಕಾರ"ಕ್ಕೆ ಗುರಿಮಾಡಲಾಯಿತು. ಅಂದರೆ, ರಾಜಕೀಯ ಜೀವನದಲ್ಲಿ ಭಾಗವಹಿಸುವ ಹಕ್ಕನ್ನು ಅವರಿಂದ ಕಸಿದುಕೊಳ್ಳಲಾ

ಯಿತು. 1962ರ ಫೆಬ್ರವರಿಯಲ್ಲಿ ಹೊಸ ಅಧಿಕಾರದ ಸಂಸ್ಥೆಗೆ–'ನ್ಯಾಷನಲ್ ಕಾಂಗ್ರೆಸ್ ಆಫ್ ಪೀಪಲ್ಸ್ ಫೋರ್ಸಸ್'ಗೆ–ಚುನಾವಣೆಗಳು ನಡೆದವು. ಅಧ್ಯಕ್ಷ ನಾಸೆರ್‌ರವರು 'ನ್ಯಾಷನಲ್ ಚಾರ್ಟರ್'ನ ಕರಡನ್ನು ನ್ಯಾಷನಲ್ ಕಾಂಗ್ರೆಸ್‌ನ ಪರಿಶೀಲನೆಗೆ ಒಪ್ಪಿಸಿದರು. ಈ ಚಾರ್ಟರ್ ಈಜಿಪ್ಟಿನ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಕಾರ್ಯಕ್ರಮ-ದಸ್ತೈವಜಾಯಿತು.

ಅಧ್ಯಕ್ಷ ನಾಸೆರ್ ಸ್ವತಃ ಭಾಗವಹಿಸಿ ರಚಿಸಿದಂಥ ಈ ನ್ಯಾಷನಲ್ ಚಾರ್ಟರ್* ಈಜಿಪ್ಷಿಯನ್ ನಾಯಕತ್ವದ ಪ್ರಗತಿಶೀಲ ವಿಭಾಗದ ಅಭಿಪ್ರಾಯಗಳನ್ನು ಅತ್ಯಂತ ಪೂರ್ಣವಾಗಿ ಅತ್ಯಂತ ವ್ಯವಸ್ಥಾತ್ಮಕ ರೂಪದಲ್ಲಿ ವ್ಯಕ್ತಪಡಿಸಿತು. ಈ ವಿಭಾಗದ ನಾಯಕರನ್ನು ಅವರ ಚಟುವಟಿಕೆ, ರಾಜಕೀಯ ಹಾಗೂ ಸೈದ್ಧಾಂತಿಕ ವಿಕಸನದ ಸ್ವರೂಪಕ್ಕನುಗುಣವಾಗಿ, ಕ್ರಾಂತಿಕಾರಿ ಡೆಮೊಕ್ರಾಟರನ್ನಾಗಿ ವರ್ಣಿಸಬಹುದು. ಈ ಚಾರ್ಟರ್ 1952ರ ಜುಲೈ 23ರ ಕ್ರಾಂತಿಯ ಸಮಯದಿಂದ ನಾಸೆರ್‌ರವರ ಸೈದ್ಧಾಂತಿಕ ವಿಕಸನವನ್ನು ಪ್ರತಿಬಿಂಬಿಸುತ್ತಿದ್ದಿತಷ್ಟೆ ಅಲ್ಲ, ಈಜಿಪ್ಟಿನ ಸಾಮಾಜಿಕ-ಆರ್ಥಿಕ ಬೆಳವಣಿಗೆಯ ಸಮಸ್ಯೆಗಳಿಗೆ ಸಂಬಂಧಿಸಿ ಅವರ ಅಭಿಪ್ರಾಯಗಳು ಹೇಗೆ ವೈಜ್ಞಾನಿಕ ಸಮಾಜವಾದದ ಕೆಲವು ಪ್ರಮುಖ ಸೂತ್ರಗಳೊಂದಿಗೆ ಹೆಚ್ಚು ಹೆಚ್ಚಾಗಿ ಮೇಳೈಸುತ್ತಿದ್ದವು ಅನ್ನುವುದನ್ನೂ ಸಮರ್ಥಿಸುತ್ತಿದ್ದಿತು.

ಈಜಿಪ್ಟ್‌ನಲ್ಲಿ ಸಮಾಜವಾದವನ್ನು ಸಾಮಾಜಿಕ ಸಂರಚನೆಯ ಒಂದು ರೂಪವಾಗಿ ಸ್ಥಾಪಿಸುವುದು ಅವಶ್ಯ ಎಂಬ ಸ್ಪಷ್ಟವಾಗಿ ನಿರೂಪಿಸಿದ ಪರಿಕಲ್ಪನೆಯು ಚಾರ್ಟರಿನ ಅತ್ಯಂತ ಮುಖ್ಯ ನಿಬಂಧನೆಗಳಲ್ಲೊಂದಾಗಿದ್ದಿತು. ಈ ದಸ್ತೈವಜಿನ ಕರ್ತೃಗಳು ಒತ್ತಿ ಹೇಳಿದ್ದರು: "ಈಜಿಪ್ಟಿನ ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿದಿರುವಿಕೆಯನ್ನು ಹೋಗಲಾಡಿಸಿಕೊಳ್ಳುವ ಸಮಸ್ಯೆಗೆ ಸಮಾಜವಾದಿ ಪರಿಹಾರವು – ಕ್ರಾಂತಿಕಾರಿ ರೀತಿಯಲ್ಲಿ ಪ್ರಗತಿ ಸಾಧಿಸುವ ದೃಷ್ಟಿಯಿಂದ – ಎಂದೂ ಮುಕ್ತ ಆಯ್ಕೆಯ ಪ್ರಶ್ನೆಯಾಗಿರಲಿಲ್ಲ. ಸಮಾಜವಾದಿ ಪರಿಹಾರವು ಒಂದು ಚಾರಿತ್ರಿಕ ಅನಿವಾರ್ಯತೆಯಾಗಿದ್ದಿತು. ವಾಸ್ತವಿಕತೆಯೂ, ಜನಸಮೂಹಗಳ ವಿಶಾಲ ಆಶೋತ್ತರಗಳೂ, 20ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಜಗತ್ತಿನ ಬದಲುತ್ತಿದ್ದ ಸ್ವರೂಪವೂ, ಅದನ್ನು ಕಡ್ಡಾಯವನ್ನಾಗಿ ಮಾಡಿದ್ದವು."** ಅಷ್ಟೇ

---

* *The National Charter. President Gamal Abdel Nasser's Speeches and Press Interviews. January-December*, 1962, Information Department, U.A.R., Cairo, 1962.–ಸಂ.

** *The National Charter, President Gamal Abdel Nasser's Speeches and Press Interviews, January-December*, 1962, Information Department, U.A.R., Cairo, 1962, p. 322.–ಸಂ.

ಅಲ್ಲ, ದೇಶದಲ್ಲಿ ಸಮಾಜವಾದಿ ಪುನಸ್ಸಂಘಟನೆಯ ಪ್ರಶ್ನೆಯನ್ನು ವಿವೇಚಿಸುವಾಗ ಚಾರ್ಟರ್ ಇನ್ನೆಷ್ಟು ಮಾತ್ರವೂ ಸ್ವಲ್ಪ ಮುನ್ನವಷ್ಟೆ ಜನಪ್ರಿಯವಾಗಿದ್ದಂಥ "ಅರಬ್ ಸಮಾಜವಾದ," "ಈಜಿಪ್ಷಿಯನ್ ಸಮಾಜವಾದ" ಎಂದು ಮುಂತಾದ ಪದಗಳನ್ನು ಬಳಸಲಿಲ್ಲ. ಅದು ವೈಜ್ಞಾನಿಕ ಸಮಾಜವಾದವೇ ಪ್ರಗತಿಗೆ ಸರಿಯಾದ ಮಾರ್ಗವನ್ನು ಕಂಡುಹಿಡಿಯುವ ಅತ್ಯಂತ ಸೂಕ್ತವಾದ ಮಾರ್ಗವೆಂದು ತಿಳಿಸಿತು, ಅಂದರೆ "ಸಮಾಜವಾದಕ್ಕೆ ಈಜಿಪ್ಟಿನ ಮಾರ್ಗ"ವನ್ನು ಗೊತ್ತುಪಡಿಸಿತು.

ಚಾರ್ಟರ್ ಒಳಗೊಂಡಿದ್ದ ಸಮಾಜವಾದ ಪ್ರಕಲ್ಪನೆಯ ಮುಖ್ಯಾಂಶಗಳನ್ನು ಈ ಕೆಳಗಿನಂತೆ ಸೂಚಿಸಬಹುದು: ದೇಶದ ಆರ್ಥಿಕತೆಯಲ್ಲಿ ರಾಷ್ಟ್ರೀಕೃತ (ರಾಜ್ಯ) ವಿಭಾಗವೊಂದನ್ನು ಸೃಜಿಸಬೇಕು, ಅದೇ ಪ್ರಬಲ ಸ್ಥಾನದಲ್ಲಿರಬೇಕು: ಖಾಸಗಿ ವಿಭಾಗವೂ ಮುಂದುವರಿಯಬೇಕು, ಆದರೆ ಅದು "ಜನಸಮೂಹಗಳ ಸೇವೆ ಸಲ್ಲಿಸುವಂತಿರಬೇಕು, ಅವುಗಳ ನಿಯಂತ್ರಣದಲ್ಲಿರಬೇಕು;" ಎಲ್ಲ ವಲಯಗಳಲ್ಲೂ ಆಯೋಜನೆ ಅವಶ್ಯವೆಂಬುದನ್ನು ಮನ್ನಿಸಬೇಕು; ಭಾರಿ ಕೈಗಾರಿಕೆಗೆ ಆದ್ಯತೆ ನೀಡಬೇಕು; "ದೇಶದ ಸಂಪತ್ತನ್ನು ಎಲ್ಲ ಸಾಮಾಜಿಕ ಸ್ತರಗಳ ಹಾಗೂ ವರ್ಗಗಳ ಹಿತಗಳಿಗೆ ಅನುಗುಣವಾಗಿ ಪುನರ್‌ಹಂಚಿಕೆ ಮಾಡುವ ಮೂಲಕ" ಸಾಮಾಜಿಕ ನ್ಯಾಯದ ಸ್ಥಾಪನೆಯಾಗಬೇಕು; ನಗರಗಳಲ್ಲಿನ ಹಾಗೂ ಗ್ರಾಮಾಂತರದಲ್ಲಿನ ಸಾಮಾಜಿಕ-ಆರ್ಥಿಕ ಬೆಳವಣಿಗೆಯಲ್ಲಿನ ಮಟ್ಟಗಳ ನಡುವಿನ ಅಂತರವನ್ನು ಕುಗ್ಗಿಸಬೇಕು; ಕೊನೆಯದಾಗಿ, ಸಹಕಾರಿ ಚಳವಳಿಯನ್ನೂ ಟ್ರೇಡ್ ಯೂನಿಯನ್‌ಗಳನ್ನೂ ಬೆಳೆಸಬೇಕು. ಟ್ರೇಡ್ ಯೂನಿಯನ್‌ಗಳಿಗೆ ಅಂತಿಮವಾಗಿ "ರಾಜಕೀಯ ಜವಾಬ್ದಾರಿಯನ್ನು ವಹಿಸಿಕೊಡುವುದೂ" ಸಾಧ್ಯವೆಂದು ಚಾರ್ಟರ್ ಸೂಚಿಸಿತು.

ವೈಜ್ಞಾನಿಕ ಸಮಾಜವಾದದ ತಮ್ಮ ಪ್ರಕಲ್ಪನೆಯನ್ನು ಅಥವಾ "ಸಮಾಜವಾದಕ್ಕೆ ಈಜಿಪ್ಟಿನ ಮಾರ್ಗ"ವನ್ನು ವರ್ಣಿಸುವಾಗ ನಾಸೆರ್‌ರವರೂ ಚಾರ್ಟರ್‌ನ ಸಹಕರ್ತೃಗಳೂ ಈಜಿಪ್ಷಿಯನ್ ಸಮಾಜದಲ್ಲಿ ವರ್ಗಗಳೂ ವರ್ಗ ಹೋರಾಟವೂ ಇದ್ದಿತೆಂಬುದನ್ನು ಇನ್ನೆಷ್ಟು ಮಾತ್ರವೂ ನಿರಾಕರಿಸಲಿಲ್ಲ. ಆದರೆ ಈ ಹೋರಾಟವನ್ನು ಸಾಧ್ಯವಾದಷ್ಟೂ ಶಾಂತಿಯುತ ರೀತಿಯಲ್ಲಿ ನಡೆಸುವ ವಿಚಾರಕ್ಕೇ ಬೆಂಬಲ ನೀಡುತ್ತಲೇ ಹೋದರು. ಚಾರ್ಟರ್ ತಿಳಿಸುತ್ತದೆ: "ಅನಿವಾರ್ಯವಾದ ಹಾಗೂ ಸಹಜವಾದ ವರ್ಗ ಹೋರಾಟಗಳನ್ನು ಉಪೇಕ್ಷಿಸುವುದೂ ಸಾಧ್ಯವಿಲ್ಲ, ನಿರಾಕರಿಸುವುದೂ ಸಾಧ್ಯವಿಲ್ಲ."* ಅಷ್ಟೇ ಅಲ್ಲ ವರ್ಗ ಹೋರಾಟವನ್ನು ಇನ್ನೆಷ್ಟು ಮಾತ್ರವೂ ರಾಷ್ಟ್ರೀಯ-ವಿಮೋಚನಾ ಚಳವಳಿಗೆ ಬಾಧಕವನ್ನಾಗಿ ಪರಿಗಣಿಸಲಿಲ್ಲ, ಆದರೆ ಆ ಚಳವಳಿಯ ಯಶಸ್ಸಿಗೆ ಅವಶ್ಯ ಪೂರ್ವಾವಶ್ಯಕತೆಯನ್ನಾಗಿಯೇ ಭಾವಿಸಲಾಯಿತು, ಎಂದೂ ನಾವು ಸೂಚಿಸುತ್ತೇವೆ. ಚಾರ್ಟರ್ ವರ್ಗ ಹೋರಾಟ

---

* *The National Charter*..., p. 317.–ಸಂ.

ವನ್ನು ಮೊಟ್ಟಮೊದಲನೆಯದಾಗಿ ಸಾಮಾಜಿಕ ಪ್ರಗತಿ ಉಂಟುಮಾಡುವಂಥ ಶಕ್ತಿಗಳಿಗೂ (ಅಂದರೆ ದುಡಿಯುವ ಜನರಿಗೂ) ಹಳೆಯ ಸಂಪ್ರದಾಯಬದ್ಧ ಶಕ್ತಿಗೂ (ಅಂದರೆ ಸಾಮ್ರಾಜ್ಯವಾದದೊಂದಿಗೆ ನಿಕಟ ಸಂಬಂಧ ಹೊಂದಿದ್ದಂಥ ಭಾರಿ ಬೂರ್ಷ್ವಾಸೀಯ ಹಾಗೂ ಭೂಮಾಲೀಕರ ಪ್ರತಿಗಾಮಿ ಬಣಕ್ಕೂ) ನಡುವಿನ ಘರ್ಷಣೆಯನ್ನಾಗಿ ನಿರೂಪಿಸುತ್ತದೆ. ವರ್ಗ ಹೋರಾಟವು ಯಾವ ರೂಪ ತಾಳುತ್ತದೆ ಎನ್ನುವುದು ಶೋಷಕರು ಯಾವ ನಿಲುವು ತಳೆಯುತ್ತಾರೆ ಹಾಗೂ ಹೇಗೆ ವರ್ತಿಸುತ್ತಾರೆ ಎನ್ನುವುದರ ಮೇಲೆ ಅವಲಂಬಿಸಿರುತ್ತದೆ ಎಂದು ಗಮನಿಸಿ ಚಾರ್ಟರ್, ಈ ಕಾರಣದಿಂದಾಗಿಯೇ ವರ್ಗ ಹೋರಾಟವನ್ನು ಒಂದು ಪರಿಸ್ಥಿತಿಯಲ್ಲಷ್ಟೆ ಶಾಂತಿಯುತವಾಗಿ ನಡೆಸಬಹುದು, ಅದೆಂದರೆ, ಪ್ರತಿಗಾಮಿ ಶಕ್ತಿಗಳನ್ನು ಪ್ರತಿರೋಧ ನೀಡಲು ಅಸಮರ್ಥವಾಗುವಂತೆ ಮಾಡುವುದು, ಎಂದು ತಿಳಿಸುತ್ತದೆ. ಮುಖ್ಯ ವೈಷಮ್ಯವನ್ನು ತೊಡೆದು ಹಾಕುವುದಷ್ಟೆ "ಇತರ ವರ್ಗಗಳ ನಡುವಿನ ವ್ಯತ್ಯಾಸಗಳನ್ನು ನಿವಾರಿಸದು," ಎಂದು ಚಾರ್ಟರ್ ಸರಿಯಾಗಿಯೇ ತಿಳಿಸುತ್ತದೆ. "ಆದರೆ ಅದು ಈ ವ್ಯತ್ಯಾಸಗಳನ್ನು ಪ್ರಜಾಸತ್ತಾತ್ಮಕ ವಿಧಾನಗಳ ಮೂಲಕ ಶಾಂತಿಯುತವಾಗಿ ಪರಿಹರಿಸಲು ಸಾಧ್ಯತೆಗಳನ್ನು ತೆರೆಯುತ್ತದೆ" ಎಂದೂ ಚಾರ್ಟರ್ ಸೂಚಿಸುತ್ತದೆ.

ಆದರೆ ಇಲ್ಲಿ ಭೂಮಾಲೀಕರ ಹಾಗೂ ಭಾರಿ ಬೂರ್ಷ್ವಾಸೀಯ ಪ್ರತಿಗಾಮಿ ಬಣವನ್ನು (ಇದನ್ನು "ಶೋಷಕ ಒಡೆತನ" ಎಂದು ನಿರೂಪಿಸಲಾಗಿದೆ) ವಿರೋಧಿಸುವ ಎಲ್ಲ ರಾಷ್ಟ್ರೀಯ ಶಕ್ತಿಗಳನ್ನೂ, ಅಂದರೆ, ರೈತರು, ಕಾರ್ಮಿಕರು, ಸೈನಿಕರು, ಬುದ್ಧಿಜೀವಿಗಳು, ರಾಷ್ಟ್ರೀಯ ಪೆಟ್ಟಿ ಹಾಗೂ ಮಧ್ಯಮ ಬೂರ್ಷ್ವಾಸೀ ಇವರೆಲ್ಲರನ್ನೂ (ಇವರನ್ನು "ಶೋಷಕರಲ್ಲದ ಒಡೆತನ" ಎಂದು ನಿರೂಪಿಸಲಾಗಿದೆ) ಚಾರ್ಟರ್‌ನಲ್ಲಿ ದುಡಿಯುವ ಜನರು ಎಂಬ ಒಂದೇ ಸಂವರ್ಗದಲ್ಲಿ ಸೇರಿಸಿರುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲವೆನ್ನಿ. ಚಾರ್ಟರ್‌ನ ಕರ್ತೃಗಳು ಈ ಎರಡೂ ಮಾದರಿ "ಒಡೆತನ"ಗಳ ನಡುವಿನ ವ್ಯತ್ಯಾಸವನ್ನು ಒಂದು ಅಂಶದಲ್ಲಿ ಕಂಡುಕೊಂಡರು. ಅದೆಂದರೆ, ಅವರ ಪ್ರಕಾರ, "ಶೋಷಕ ಒಡೆತನ"ವು ಸಾಮ್ರಾಜ್ಯವಾದದ ಮೇಲೆ ಅವಲಂಬಿಸಿಕೊಂಡು ಸರಕಾರದ ಮೇಲೆ ತನ್ನ ಪ್ರಾಬಲ್ಯ ಸ್ಥಾಪಿಸಿಕೊಳ್ಳಲು ಯತ್ನಿಸುತ್ತಿದ್ದಿತು, ಕಾರ್ಮಿಕ ವರ್ಗವನ್ನು ಶೋಷಿಸುತ್ತಿದ್ದಿತು, ಪರಮಾವಧಿ ಲಾಭ ಗಳಿಸಲು ಯತ್ನಿಸುತ್ತಿದ್ದಿತು. "ಶೋಷಕವಲ್ಲದ ಒಡೆತನ"ವಾದರೋ ಇದಕ್ಕೆ ವಿರುದ್ಧವಾಗಿ ರಾಜ್ಯಾಧಿಕಾರದ ವಿಶೇಷ ಹಕ್ಕುಗಳಿಗಾಗಿ ಯಾವುದೇ ಕೇಳಿಕೆ ಮುಂದಿಡುತ್ತಿರಲಿಲ್ಲ, ಕಾರ್ಮಿಕ ವರ್ಗದ ಶೋಷಣೆಯನ್ನು ತಿರಸ್ಕರಿಸಿದ್ದಿತು, ಕಾರ್ಮಿಕರಿಗೆ ನ್ಯಾಯೋಚಿತ ಕೂಲಿಯನ್ನೂ ಲಾಭಗಳಲ್ಲೂ ಉದ್ಯಮದ ನಿರ್ವಹಣೆಯಲ್ಲೂ ಪಾಲ್ಗೊಳ್ಳುವ ಹಕ್ಕನ್ನೂ ನೀಡುವುದರ ಪರವಾಗಿದ್ದಿತು. ಇದಿಷ್ಟೆ ಅವರು ಕಂಡುಕೊಂಡ ಅವುಗಳ ನಡುವಿನ ವ್ಯತ್ಯಾಸವಾಗಿದ್ದಿತು. ವ್ಯೂಹಾತ್ಮಕ

ವಾಗಿ ಈ ಕೇಳಿಕೆಗಳನ್ನು ಬಲವಂತಕ್ಕೊಳಗಾಗಿ ಮಾಡಲಾಗಿದ್ದಿತು. ಆದರೆ ಇದನ್ನೇ ಅವರು ಸಾರ್ವತ್ರಿಕ ಸೈದ್ಧಾಂತಿಕ ಸೂತ್ರದ ಮಟ್ಟಕ್ಕೆ ಏರಿಸಿದ್ದರು. ಇದು ಸಹಜವಾಗಿಯೇ ಒಂದು ತಪ್ಪಾಗಿದ್ದಿತು. ತದನಂತರ ಈ ದಸ್ತಾವೇಜಿನ ಕರ್ತೃಗಳೇ "ಶೋಷಕವಲ್ಲದ ಒಡೆತನ"ದ ಚಟುವಟಿಕೆಗಳನ್ನೂ ನಿಯಂತ್ರಿಸುವುದು ಅವಶ್ಯ, ಅದನ್ನು ಪ್ರಧಾನವಾಗಿ ವ್ಯಾಪಾರ ಹಾಗೂ ಲಘು ಕೈಗಾರಿಕೆಗಳಿಗಷ್ಟೆ, ಆಗಲೂ ತುಂಬ ಕಟ್ಟುಪಾಡುಗಳೊಂದಿಗೆ, ಸೀಮಿತಗೊಳಿಸುವುದು ಅವಶ್ಯ, ಎಂದು ಭಾವಿಸುವಂತಾದುದು ಲಾಕ್ಷಣಿಕವೇ ಆಗಿದೆ. ಉದಾಹರಣೆಗೆ, ಲಘು ಕೈಗಾರಿಕೆಯು ಖಾಸಗಿ ಒಡೆತನಕ್ಕೆ ತೆರೆದಿದ್ದುದಾಗಿ ಘೋಷಿಸಲಾದರೂ ದೇಶದಾದ್ಯಂತ ಜನರ ಹಿತದೃಷ್ಟಿಯಿಂದ ಈ ಶಾಖೆಯ ಮೇಲೆ ನಿಯಂತ್ರಣವಿರಿಸುವ ಪಾತ್ರವನ್ನು ರಾಜ್ಯ ವಿಭಾಗಕ್ಕೆ ವಹಿಸಿಕೊಡಲಾಯಿತು.

ರಾಷ್ಟ್ರೀಯ ಬಂಡವಾಳವು ಕೃಷಿ ವಿಭಾಗದಲ್ಲಿ ಕಾರ್ಯ ಜರುಗಿಸುವ ವಿಷಯವನ್ನು ಬೇರೆಯೇ ರೀತಿಯಲ್ಲಿ ನಿರೂಪಿಸಲಾಯಿತು. ಅರೆಸಾಮಂತಶಾಹಿ ಮಾದರಿಯ ದೊಡ್ಡ ಎಸ್ಟೇಟುಗಳು ಪುನರುಜ್ಜೀವನಗೊಳ್ಳುವುದನ್ನು ತಪ್ಪಿಸಲು ಚಾರ್ಟರ್ ಕ್ರಮಗಳನ್ನು ಗೊತ್ತುಪಡಿಸಿತಷ್ಟೆ. ಆದರೆ ಬಂಡವಾಳಶಾಹಿ ಮಾದರಿಯ ದೊಡ್ಡ ಶೋಷಕ ಕೃಷಿಕ್ಷೇತ್ರಗಳನ್ನು ದೃಢಗೊಳಿಸುವುದರಲ್ಲಿ ಇದ್ದ ಅಪಾಯಗಳ ಬಗೆಗೆ ಅದು ಏನನ್ನೂ ಹೇಳಲಿಲ್ಲ. ರೈತರನ್ನು ಸಹಕಾರಿ ಸಂಸ್ಥೆಗಳಲ್ಲಿ ಒಂದುಗೂಡುವಂತೆ ಸಂಘಟಿಸುವ ಪ್ರಾಮುಖ್ಯವನ್ನು ಸರಿಯಾಗಿಯೇ ಒತ್ತಿ ಹೇಳಲಾಯಿತು (ಕೃಷಿ ಸಂಬಂಧಿ ಸುಧಾರಣೆಯ ಪ್ರಕಾರ ಭೂಮಿಯನ್ನು ಪಡೆದ ರೈತರೆಲ್ಲರನ್ನೂ ಸಹಕಾರಿ ಕೃಷಿಕ್ಷೇತ್ರಗಳಲ್ಲಿ ಕಡ್ಡಾಯವಾಗಿ ಒಂದುಗೂಡಿಸಲಾಯಿತು). ಈ ಸಹಕಾರಿ ಸಂಸ್ಥೆಗಳನ್ನು ಚಾರ್ಟರ್‌ನ ಕರ್ತೃಗಳು ಗ್ರಾಮಾಂತರದಲ್ಲಿ ಸಮಾಜವಾದಿ ಅಂಶಗಳನ್ನಾಗಿ ಭಾವಿಸಿದ್ದರು. ಆದರೆ ಇದನ್ನು ಒಪ್ಪುವುದು ಸಾಧ್ಯವಿಲ್ಲ, ಏಕೆಂದರೆ ಈ ಸಹಕಾರಿ ಸಂಸ್ಥೆಗಳು ಚಾರ್ಟರ್‌ನಲ್ಲಿ ಘೋಷಿಸಲಾದ ಈ ಕೆಳಗಿನ ಸೂತ್ರಗಳ ಆಧಾರದ ಮೇಲೆ ಖಾಸಗಿ ಆಸ್ತಿಒಡೆತನವನ್ನು ಸಂರಕ್ಷಿಸುತ್ತಿದ್ದವು, ಬಲಪಡಿಸುತ್ತಿದ್ದವು: "...ಭೂಮಿಯನ್ನು ಸಾರ್ವಜನಿಕ ಒಡೆತನಕ್ಕೆ ವರ್ಗಾಯಿಸುವುದಷ್ಟೆ ಕೃಷಿ ಸಮಸ್ಯೆಗೆ ಸರಿಯಾದ ಪರಿಹಾರವಾಗದು. ಅದಕ್ಕೆ ಭೂಮಿಯ ವೈಯಕ್ತಿಕ ಒಡೆತನ ಅಸ್ತಿತ್ವದಲ್ಲಿರುವುದು ಅವಶ್ಯ. ಅತ್ಯಂತ ಹೆಚ್ಚಿನ ಸಂಖ್ಯೆಯ ಕೃಷಿ ಕೂಲಿಗಾರರು ಭೂಮಿಯನ್ನು ಹೊಂದಿರುವ ಹಕ್ಕನ್ನು ಒದಗಿಸುವ ಮೂಲಕ ಈ ವೈಯಕ್ತಿಕ ಒಡೆತನವನ್ನು ವಿಸ್ತರಿಸುವುದು ಅವಶ್ಯ...." *

ನಾಸೆರ್‌ರವರ ನಾಯಕತ್ವದಲ್ಲಿ ಈಜಿಪ್ಟಿನ ಕ್ರಾಂತಿಕಾರಿ ಡೆಮೊಕ್ರಾಟರು

* ಅದೇ ಗ್ರಂಥ, ಪು. 333.–ಸಂ.

ತಮ್ಮ ಯುಗದ ವಾಸ್ತವಿಕತೆಗಳನ್ನು ಮನಗಂಡಿದ್ದರೆಂಬುದರಲ್ಲಿ ಸಂಶಯವಿಲ್ಲ. 20ನೆಯ ಶತಮಾನದ ದ್ವಿತೀಯಾರ್ಧದಲ್ಲಿ ಜಗತ್ತಿನಲ್ಲಿ ಶಕ್ತಿಗಳ ಅನ್ಯೋನ್ಯ ಸಂಬಂಧವು ಸಮಾಜವಾದದ ಪರವಾಗಿ ಬದಲಿದ್ದಿತು. ಈ ಬದಲಾವಣೆಗಳು ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನೆಯ ಶಕ್ತಿಗಳನ್ನು ಕ್ರಿಯಾಶೀಲಗೊಳಿಸುವುದಕ್ಕೆ ಮುಂಗೇಕಾರಿಯಾಗಿದ್ದವು, ಎಂಬುದನ್ನೂ ಅವರು ಮನಗಂಡಿದ್ದರು. "ರಾಜಕೀಯ ಪ್ರಜಾಪ್ರಭುತ್ವ ಅಥವಾ ರಾಜಕೀಯ ಸ್ವರೂಪಗಳಲ್ಲಿ ಸ್ವಾತಂತ್ರ್ಯವು, ಆರ್ಥಿಕ ಪ್ರಜಾಪ್ರಭುತ್ವ ಅಥವಾ ಆರ್ಥಿಕ ಸ್ವರೂಪಗಳಲ್ಲಿ ಸ್ವಾತಂತ್ರ್ಯ ಇಲ್ಲದೆ ನಿರರ್ಥಕ... ಆ ಸ್ಥಿತಿಯಲ್ಲಿ ರಾಜಕೀಯ ಸ್ವಾತಂತ್ರ್ಯವು ಸಾಮಂತವಾದದ ಸ್ವಾತಂತ್ರ್ಯವಷ್ಟೆ ಆಗಬಲ್ಲುದು"* ಎಂದು ನಾಸೆರ್‌ರವರೂ ಅವರ ಸಮಮನಸ್ಕ ಸಹೋದ್ಯೋಗಿಗಳೂ ಚಾರ್ಟರ್‌ನಲ್ಲಿ ತಮ್ಮ ಮನೋಸಂಬಿಕೆಯನ್ನು ವ್ಯಕ್ತಪಡಿಸಿದ್ದರು. ಅವರು ಸಾಮಂತವಾದವನ್ನೂ ಏಕಸ್ವಾಮ್ಯಗಳನ್ನೂ ("ಶೋಷಕ ಒಡೆತನ"ವನ್ನು) ಕ್ರಾಂತಿಯ ಶತ್ರುಗಳ ಪ್ರತಿಗಾಮಿ ಶಿಬಿರದೊಂದಿಗೆ ನಿಸ್ಸಂದಿಗ್ಧವಾಗಿ ಒಂದುಗೂಡಿಸುತ್ತಾರೆ ಮತ್ತು ಅವನ್ನು ಸಾಮ್ರಾಜ್ಯವಾದದ ಸಹಜ ಕೂಟಮಿತ್ರರನ್ನಾಗಿ ಕಂಡುಕೊಳ್ಳುತ್ತಾರೆ. ಈ ತಿಳಿವಳಿಕೆಯಿಂದ ಅವರು "ರಾಷ್ಟ್ರೀಯ ಬಂಡವಾಳವು ... ಇನ್ನೆಷ್ಟು ಮಾತ್ರವೂ ಆರ್ಥಿಕ ಕ್ಷೇತ್ರದಲ್ಲಿ ನಾಯಕ ಪಾತ್ರ ನಿರ್ವಹಿಸದಾಗಿದೆ"** ಎಂಬ ಸರಿಯಾದ ತೀರ್ಮಾನಕ್ಕೆ ಬರುತ್ತಾರೆ.

ಚಾರ್ಟರ್‌ನ ಮುಖ್ಯ ಪ್ರತಿಪಾದನೆಗಳಲ್ಲೊಂದು 'ಅರಬ್ ಸೋಷಲಿಸ್ಟ್ ಯೂನಿಯನ್' ಎಂಬ ಒಂದು ಹೊಸ ರಾಜಕೀಯ ಸಂಘಟನೆಯನ್ನು ಸೃಜಿಸುವುದಕ್ಕೆ ಸಂಬಂಧಿಸಿದ್ದಿತು. ಇಜಿಪ್ಟಿನಲ್ಲಿ ಸಾಮಾಜಿಕ ಬೆಳವಣಿಗೆಯ ಹೊಸ ಪ್ರಕಲ್ಪನೆಯನ್ನು ಕಾರ್ಯಗತಗೊಳಿಸುವಂತೆ ಮಾಡುವುದು ಈ ಸಂಘಟನೆಯ ಕಾರ್ಯಭಾರವಾಗಿದ್ದಿತು. ಈ ಸಂಘಟನೆಗೂ ಇದಕ್ಕೆ ಮುನ್ನ ಇದ್ದ 'ನ್ಯಾಷನಲ್ ಯೂನಿಯನ್'ಗೂ ನಡುವೆ ಇದ್ದ ಒಂದು ಮುಖ್ಯ ವ್ಯತ್ಯಾಸವೆಂದರೆ, 'ಅರಬ್ ಸೋಷಲಿಸ್ಟ್ ಯೂನಿಯನ್'ನ ಚುನಾಯಿತ ಅಂಗಸಂಸ್ಥೆಗಳಲ್ಲೂ (ಪಾರ್ಲಿಮೆಂಟಿನಲ್ಲೂ ಸ್ವಯಮಾಡಳಿತದ ಸ್ಥಳೀಯ ಅಂಗಸಂಸ್ಥೆಗಳಲ್ಲೂ ಸಹ) ಅರ್ಧಭಾಗದಷ್ಟು ಕಾರ್ಮಿಕರೂ ರೈತರೂ ಇರಬೇಕೆಂದು ಗೊತ್ತುಪಡಿಸಿದ್ದುದು. ಏಕೆಂದರೆ, ಚಾರ್ಟರ್ ತಿಳಿಸಿದಂತೆ, ಕಾರ್ಮಿಕರು ರೈತರೇ ರಾಷ್ಟ್ರದ ಬಹುಸಂಖ್ಯಾತರಾಗಿದ್ದರು ಮತ್ತು ಇವರು ಇತರ ಸಾಮಾಜಿಕ ವೃಂದಗಳಿಗೆ ಹೋಲಿಸಿದಂತೆ, ಹೆಚ್ಚಿನ ಕಾಲದಿಂದ ತಮ್ಮ ಭವಿತವ್ಯವನ್ನು ತಾವೇ ನಿರ್ಮಿಸಿಕೊಳ್ಳುವ ಹಕ್ಕಿನಿಂದ ವಂಚಿತರಾಗಿದ್ದರು. ಈ ಕಾರಣದಿಂದಾಗಿ ಚಾರ್ಟರ್ ತಿಳಿಸಿದ್ದಿತು: "...ಜನಪ್ರಿಯ ಸಂಘಟನೆಗಳು,

* ಅದೇ ಗ್ರಂಥ, ಪು. 312-313. – ಸಂ.

** ಅದೇ ಗ್ರಂಥ, ಪು. 323. – ಸಂ.

ಅವರಲ್ಲೂ ವಿಶೇಷವಾಗಿ ಸಹಕಾರಿ ಸಂಸ್ಥೆಗಳೂ ಟ್ರೇಡ್ ಯೂನಿಯನ್‌ಗಳೂ, ಪುಷ್ಟಿಯುತವಾದ ಪ್ರಜಾಪ್ರಭುತ್ವ ನಿರ್ಮಾಣದಲ್ಲಿ ಪರಿಣಾಮಕಾರಿ ಹಾಗೂ ಪ್ರಭಾವಶಾಲಿ ಪಾತ್ರ ನಿರ್ವಹಿಸಬಲ್ಲವು. ಈ ಸಂಘಟನೆಗಳು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಿಯೆಯ ನಾನಾ ಕ್ಷೇತ್ರಗಳಲ್ಲಿ ಮುಂಚೂಣಿ ಬಲವನ್ನು ರೂಪಿಸಬೇಕು." ಬಂಡವಾಳವಾದಿ ಪದ್ಧತಿಯ ವಿಶಿಷ್ಟ ಲಕ್ಷಣವಾದ "ಪ್ರತಿಗಾಮಿ ಶಕ್ತಿಗಳ ಹಾಗೂ ಶೋಷಕ ಬಂಡವಾಳ"*ದ ಸರ್ವಾಧಿಕಾರದ ಸ್ಥಳದಲ್ಲಿ ಹೊಸ ಮೈತ್ರೀಕೂಟವೊಂದನ್ನು – "ದುಡಿಯುವ ಜನರನ್ನು ಪ್ರತಿನಿಧಿಸುವ ಶಕ್ತಿಗಳ ನಡುವೆ ಸಹಕಾರ"**ವನ್ನು – ಸ್ಥಾಪಿಸಬೇಕೆಂದು ಚಾರ್ಟರ್ ಕರೆ ಕೊಟ್ಟಿತು. ಈ ಮೈತ್ರೀಕೂಟದ ಗುರಿ ಸಮಾಜವಾದವಾಗಿದ್ದಿತು, ಅಂದರೆ, "ಎಲ್ಲರಿಗೂ ತಕ್ಕಮಟ್ಟಿಗಿನ ಸಾಧನ ಸಂಪತ್ತೂ, ನ್ಯಾಯ, ದುಡಿಮೆ ಹಾಗೂ ಸಮಾನ ಅವಕಾಶಗಳು ಆಧಾರವಾಗಿರುವ ಸಮಾಜ ಸ್ಥಾಪನೆ"*** ಆಗಿದ್ದಿತು.

ಚಾರ್ಟರ್‌ನ ಮುಖ್ಯ ಸೂತ್ರಗಳನ್ನು 1964ರ ಮಾರ್ಚ್ 23ರ ಸಂವಿಧಾನಾತ್ಮಕ ಘೋಷಣೆ ಪುನರ್‌ಸಮರ್ಥಿಸಿತು. ಹಾಗೆ ಅವು ಅಧಿಕೃತ ರಾಜ್ಯ ರಾಜಕೀಯ ಸಿದ್ಧಾಂತದ ಸ್ಥಾನಕ್ಕೆ ಏರಿದವು.

ನ್ಯಾಷನಲ್ ಚಾರ್ಟರ್‌ನ ಕರ್ತೃಗಳು, ಎಲ್ಲರಿಗೂ ಮಿಗಿಲಾಗಿ ಅಧ್ಯಕ್ಷ ನಾಸೆರ್‌ರವರೇ ಸ್ವತಃ, ಇಜಿಪ್ಷಿಯನ್ ಜನರ ಸಾಮ್ರಾಜ್ಯಶಾಹಿ ವಿರೋಧಿ ಸಾಮಂತಶಾಹಿ ವಿರೋಧಿ ಅನುಭವವನ್ನು ಸಾರ್ವತ್ರಿಕವಾಗಿ ಅನ್ವಯವಾಗುವಂತೆ ಮಾಡಲು, ದೇಶವು ಸಮಾಜವಾದಿ ದಿಶೆಯ ಮಾರ್ಗದಲ್ಲಿ ಮತ್ತಷ್ಟು ಬೆಳವಣಿಗೆ ಪಡೆಯುವ ಕಾರ್ಯಕ್ರಮವೊಂದನ್ನು ಯೋಜಿಸಲು, ಪ್ರಯತ್ನಿಸುತ್ತಿದ್ದರು, ಎನ್ನುವುದು ಚಾರ್ಟರ್‌ನ ಮುಖ್ಯ ನಿಬಂಧನೆಗಳ ಸಾರಾಂಶವೇ ತೋರಿಸಿಕೊಡುತ್ತದೆ. ನಾಸೆರ್‌ರವರೂ ಮತ್ತವರ ಸಹೋದ್ಯೋಗಿಗಳೂ ವರ್ಗ ಹೋರಾಟವನ್ನು ಮನ್ನಿಸುವವರೆಗೂ ಹೋದರು. ಅವರು ಅದನ್ನು ಪ್ರಧಾನವಾಗಿ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ, ಸಾಮಂತಶಾಹಿ ಅಂಶಗಳ ಹಾಗೂ ಬೂರ್ಜ್ವಾಸಿಯ ಮೇಲುಸ್ತರದವರ ವಿರುದ್ಧ, ಹೋರಾಟವನ್ನಾಗಿ ವ್ಯಾಖ್ಯಾನಿಸಿದರು. ಅವರು ಶ್ರೀಮಂತ ಶೋಷಕ ಅಲ್ಪಮತೀಯರ ಹಿತಗಳಿಗೆ ಸೇವೆ ಸಲ್ಲಿಸುವಂಥ ಪ್ರಜಾಪ್ರಭುತ್ವದ ಬೂರ್ಜ್ವಾ ಪ್ರಕಲ್ಪನೆಯನ್ನು ತಿರಸ್ಕರಿಸಿದರು. ಅವರ ತತ್ವಜ್ಞಾನವು ಮಾನವನಿಂದ ಮಾನವನ ಶೋಷಣೆಯ ನಿವಾರಣೆ, ಭಾರಿ ಸಾಮಂತಶಾಹಿ ಹಾಗೂ ಭಾರಿ ಬಂಡವಾಳಶಾಹಿ ಆಸ್ತಿಒಡೆತನವನ್ನು ತೊಡೆದು ಹಾಕುವುದು, ಕ್ರಾಂತಿಕಾರಿ ಸುಧಾರಣೆ

* ಅದೇ ಗ್ರಂಥ, ಪು. 313. – ಸಂ.

** ಅದೇ ಗ್ರಂಥ, ಪು. 318. – ಸಂ.

*** ಅದೇ ಗ್ರಂಥ, ಪು. 310. – ಸಂ.

ಗಳಲ್ಲಿ ದುಡಿಯುವ ಜನಸಮೂಹಗಳ ಪಾತ್ರ, ಇವೇ ಮುಂತಾದ ಪ್ರಮುಖ ಸೂತ್ರಗಳನ್ನು ಒಳಗೊಂಡಿದ್ದಿತು.

ಅದೇ ಹೊತ್ತಿನಲ್ಲಿ ಚಾರ್ಟರ್‌ನಲ್ಲಿ ವಿವರಿಸಲಾಗಿರುವಂತೆ ಅವರ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ವಿಚಾರಗಳ ಪದ್ಧತಿಯು ಸಾರಸಂಗ್ರಹವಾದದ ಛಾಯೆಯನ್ನೂ, ಅವೈಜ್ಞಾನಿಕ ದಾರ್ಶನಿಕ ಹಾಗೂ ಸಾಮಾಜಿಕ-ರಾಜಕೀಯ ಅಭಿಪ್ರಾಯಗಳ ಭಾರಿ ಪ್ರಭಾವವನ್ನೂ ಇನ್ನೂ ತೋರಿಸಿಕೊಡುತ್ತಿದ್ದಿತು. ಚಾರ್ಟರ್‌ನಲ್ಲಿ ಅನೇಕ ಸರಿಯಾದ ನಿರ್ಧಾರಗಳೂ ಪ್ರಮೇಯಗಳೂ ಇವೆ. ಆದರೆ ಅವುಗಳ ಜೊತೆ ಜೊತೆಗೇ, ಭವಿಷ್ಯತ್ತಿನಲ್ಲಾದರೂ ಸರಿಯೆ ಕಾರ್ಮಿಕ ವರ್ಗವು ಅಗ್ರಗಾಮಿ ಪಾತ್ರ ನಿರ್ವಹಿಸುತ್ತದೆ ಎಂಬ ವಿಚಾರವನ್ನು ನಿರಾಕರಿಸುವಂಥ, ಖಾಸಗಿ ಆಸ್ತಿಯನ್ನು ರಾಷ್ಟ್ರೀಕರಿಸುವುದೇ ಮತ್ತು ಗ್ರಾಮಾಂತರದಲ್ಲಿ ಸಹಕಾರಿ ಕೃಷಿಯ ಅತ್ಯಂತ ಮೂಲರೂಪಗಳನ್ನು ವಿಕಾಸಗೊಳಿಸುವುದೇ ಸಮಾಜವಾದಿ ಸುಧಾರಣೆಗಳ [illegible] ಎನ್ನುವಂಥ ಸೂತ್ರಗಳೂ ಇವೆ. "ಜನರ ಬಗೆಗೆ ಅಂಜಿಕೆ"ಯನ್ನು ವ್ಯಕ್ತಪಡಿಸುವ ವರ್ಗ ವೈಷಮ್ಯಗಳನ್ನು ಚಿತ್ತಮನೋಧರ್ಮದೊಂದಿಗೆ ರಾಷ್ಟ್ರೀಯ ಏಕತೆಯ ಚೌಕಟ್ಟಿನೊಳಗೇ "ಶಾಂತಿಯುತ" ಸಾಧನಗಳ ಮೂಲಕ ಪರಿಹರಿಸುವುದನ್ನು ಬಯಸುವ, ಈಜಿಪ್ಷಿಯನ್ ಜನರ ರಾಷ್ಟ್ರೀಯತೆ ಅನನ್ಯವಾದಂತಹುದು ಅವರ ಆತ್ಮಿಕ ಸಂಪತ್ತು ಅದ್ವಿತೀಯವಾದಂತಹುದು ಎಂಬಂಥ ವಿಚಾರಗಳನ್ನು ಉತ್ಪ್ರೇಕ್ಷಿಸುವ, ಛಾಯೆಗಳೂ ಚಾರ್ಟರ್‌ನಲ್ಲಿ ಇವೆ. ಸ್ವಲ್ಪದರಲ್ಲಿ, ಚಾರ್ಟರ್ ಕ್ರಾಂತಿಕಾರಿ ಡೆಮೊಕ್ರಾಟರ ದುರ್ಬಲಾಂಶಗಳನ್ನೂ ಪ್ರಬಲಾಂಶಗಳನ್ನೂ ಪ್ರತಿಬಿಂಬಿಸುತ್ತಿದ್ದಿತು. ವಸಾಹತುವಾದದ ಹಾಗೂ ಪರಾಧೀನ ಬಂಡವಾಳವಾದದ ಮರ್ದನವನ್ನು ಅನುಭವಿಸಿದ್ದ ನಗರ ಹಾಗೂ ಗ್ರಾಮಾಂತರಗಳ ಅಸಂಖ್ಯಾತ ಅಲ್ಪಶ್ರಮಜೀವಿ ಹಾಗೂ ಮಧ್ಯಮವರ್ಗ ಸಾಮಾಜಿಕ ಸ್ತರಗಳ ಪೆಟಿ ಬೂರ್ಷ್ವಾ ಮನಸ್ತತ್ವವು ಕ್ರಾಂತಿಕಾರಿ ಡೆಮೊಕ್ರಾಟರ ಮೇಲೆ ಬೀರಿದ್ದ ಪ್ರಭಾವವನ್ನೂ ಚಾರ್ಟರ್ ಪ್ರತಿಬಿಂಬಿಸುತ್ತಿದ್ದಿತು. ಅದೇ ಹೊತ್ತಿನಲ್ಲಿ ಅದು ವೈಜ್ಞಾನಿಕ ಸಮಾಜವಾದದ ವಿಚಾರಗಳೂ ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳ ಸಾಧನೆಗಳೂ ಅವರಲ್ಲಿ ಮೂಡಿಸಿದ್ದ ಹೆಚ್ಚು ಹೆಚ್ಚಾದ ಆಕರ್ಷಣೆಯನ್ನೂ ಪ್ರತಿಬಿಂಬಿಸುತ್ತಿದ್ದಿತು.

ಸ್ಪಷ್ಟವಾಗಿಯೇ, ಅದು ಸಮಾಜವಾದಿ ಕಾರ್ಯಕ್ರಮವಾಗಿರಲಿಲ್ಲ, ಆದರೆ ಸಮಾಜವಾದಿಪೂರ್ವ ಬೆಳವಣಿಗೆಯ, ಸಮಾಜವಾದಿ ದಿಕ್ಕಿನಲ್ಲಿ ಕರೆದೊಯ್ಯುವ ಉದ್ದೇಶದ ಕಾರ್ಯಕ್ರಮವಾಗಿದ್ದಿತು. ಅರವತ್ತರ ದಶಕದ ಆರಂಭದಲ್ಲಿ ಮಾರ್ಕ್ಸ್‌ವಾದಿಗಳಲ್ಲ ಆದರೆ ಕ್ರಾಂತಿಕಾರಿ ಡೆಮೊಕ್ರಾಟರು ಅದನ್ನು ಒಟ್ಟಿಗೆ ಕೂಡಿಸಿ ಈಜಿಪ್ಟಿಗಾಗಿ ರಚಿಸಿದ್ದರು ಎನ್ನುವುದನ್ನು ಪರಿಗಣಿಸಿದಾಗ, ಅದು ಕಾಣಿಸಿಕೊಂಡುದು ಅರಬ್ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಸಿದ್ಧಾಂತದ ಬೆಳವಣಿಗೆಯಲ್ಲಿ ಎಂತಹ

ಅತ್ಯಂತ ಮಹತ್ವಪೂರ್ಣವಾದ ಘಟನೆಯಾಗಿದ್ದಿತು ಎನ್ನುವುದು ತಿಳಿದುಬರುತ್ತದೆ.

ಚಾರ್ಟರ್‌ನಲ್ಲಿ ನಿರೂಪಿಸಲಾದ ವಿಸ್ತೃತ ಸಾಮಾಜಿಕ-ಆರ್ಥಿಕ ಸುಧಾರಣೆಗಳ ಮಾರ್ಗವನ್ನು ಅನುಸರಿಸುತ್ತ ನಾಸೆರ್‌ರವರ ನೇತೃತ್ವದಲ್ಲಿದ್ದ ಕ್ರಾಂತಿಕಾರಿ ನಾಯಕತ್ವವು ಈಜಿಪ್ಟಿನ ಮುಂದೆ ಹೊಸ ಅತ್ಯಂತ ಮುಖ್ಯ ದಿಗಂತಗಳನ್ನು ತೆರೆದಿರಿಸಿತು. ಐವತ್ತರ ಹಾಗೂ ಅರವತ್ತರ ದಶಕಗಳಲ್ಲಿ ಆಧುನಿಕ ಕೈಗಾರಿಕೆಗೆ ಅಡಿಪಾಯ ಹಾಕಲಾಯಿತು. ಆಫ್ರೋ-ಏಷ್ಯನ್ ಅಭಿವೃದ್ಧಿಶೀಲ ದೇಶಗಳಲ್ಲಿ ಈಜಿಪ್ಟ್ ಅತ್ಯಂತ ಶೀಘ್ರವಾಗಿ ಕೈಗಾರಿಕೀಕರಣಗೊಂಡ ದೇಶವಾಗಿದ್ದಿತು (ಅರವತ್ತರ ದಶಕದ ಕೊನೆಯ ಹೊತ್ತಿಗೆ ದೇಶದ ಕೈಗಾರಿಕೋತ್ಪಾದನೆಯ ಪ್ರಮಾಣ 1952ರ ಮಟ್ಟಕ್ಕೆ ಹೋಲಿಸಿದಂತೆ ಸುಮಾರು ಐದು ಪಟ್ಟು ಹೆಚ್ಚಿದ್ದಿತು). ರಾಜ್ಯ ವಿಭಾಗವು ರಾಷ್ಟ್ರೀಯ ಆರ್ಥಿಕತೆಯ ಆಧಾರವಾಯಿತು. ಈ ವಿಭಾಗದ ಹೃತ್ಕೇಂದ್ರದಲ್ಲಿ ಸುಸಂಘಟಿತ ಕಾರ್ಮಿಕ ವರ್ಗ ಉದಯಿಸಿತು. ರಾಜ್ಯ ವಿಭಾಗದ ಬದಿಯಲ್ಲೇ ಸಾಕಷ್ಟು ಶಾಖೆಶಾಖೆಗಳಾಗಿ ಕವಲೊಡೆದ ಖಾಸಗಿ ವಿಭಾಗವು ಸೇವಾ ಕ್ಷೇತ್ರಗಳಲ್ಲೂ, ಕೈಗಾರಿಕೆಯಲ್ಲೂ, ವಿಶೇಷವಾಗಿ ಕೃಷಿ ವಲಯದಲ್ಲಿ, ಬೆಳೆದಿದ್ದಿತು. ಗ್ರಾಮಾಂತರದಲ್ಲಿ ಕೃಷಿ ಸಂಬಂಧಿ ಸುಧಾರಣೆಗಳನ್ನು ಜಾರಿಗೆ ತಂದುದು ಭಾರಿ ಭೂಮಾಲೀಕತ್ವವನ್ನು ಪ್ರಬಲವಾಗಿ ಶಿಥಿಲಗೊಳಿಸಿತು, ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಉತ್ತೇಜನ ನೀಡಿತು, ಹೊಸ ಉತ್ಪಾದನಾ ಸಂಬಂಧಗಳಿಗೆ ಮಾರ್ಗವನ್ನು ಸುಗಮಗೊಳಿಸಿತು.

ಈಜಿಪ್ಟ್‌ನಲ್ಲಿ ಆಡಳಿತದಲ್ಲಿದ್ದ ಕ್ರಾಂತಿಕಾರಿ ಪ್ರಜಾಪ್ರಭುತ್ವವು ನೆರವೇರಿಸಿದ ಸಾಮಾಜಿಕ-ರಾಜಕೀಯ ಮಗ್ಗುಲಿನ ಕಡೆಗೆ ತಿರುಗಿ ನೋಡಿದಲ್ಲಿ, ಒಟ್ಟಿನಲ್ಲಿ, ನಗರದಲ್ಲೂ ಗ್ರಾಮಾಂತರದಲ್ಲೂ ಸಾಮಂತಶಾಹಿ ಸಂಬಂಧಗಳ ಹಾಗೂ ಭಾರಿ ಖಾಸಗಿ ಆಸ್ತಿಒಡೆತನದ ಪದ್ಧತಿಯನ್ನು ತೊಡೆದು ಹಾಕಿದುದು, ಸಾಮಂತವಾದಿಗಳನ್ನೂ ಭಾರಿ ಬಂಡವಾಳಗಾರರನ್ನೂ ರಾಜಕೀಯ ಕ್ಷೇತ್ರದಿಂದ ತೊಲಗಿಸಿದುದು ಕಂಡುಬರುತ್ತವೆ. "ದುಡಿಯುವ ಜನರನ್ನು ಪ್ರತಿನಿಧಿಸುತ್ತಿದ್ದ ಶಕ್ತಿಗಳ ನಡುವಿನ ಸಹಕಾರ"ವೇ ರಾಜ್ಯಾಧಿಕಾರದ ರಾಜಕೀಯ ಬುನಾದಿಯೆಂದು ಘೋಷಿಸಲಾಯಿತು. ಈ ದುಡಿಯುವ ಜನರ ಸಮೂಹದಲ್ಲಿ ಐದು ಉಪವರ್ಗಗಳ ಈಜಿಪ್ಷಿಯನ್ ಜನರಿದ್ದರು: ರೈತರು, ಕಾರ್ಮಿಕರು, ಬುದ್ಧಿಜೀವಿಗಳು, ಸೈನ್ಯ ಹಾಗೂ ರಾಷ್ಟ್ರೀಯ ("ಶೋಷಕರಲ್ಲದ") ಬೂರ್ಷ್ವಾಸೀ.

ಪ್ರಾಯೋಗಿಕವಾಗಿ ನಾಸೆರ್‌ರವರ ಸರಕಾರವು ಚಾರ್ಟರ್‌ನ ನಿಬಂಧನೆಗಳಿಗೆ ಅನುಗುಣವಾಗಿ ಜನರಿಗೆ ಎಲ್ಲ ಚುನಾಯಿತ ಅಂಗಸಂಸ್ಥೆಗಳಲ್ಲೂ ಮತ್ತು ದೇಶದ ಏಕೈಕ ಸಾಮೂಹಿಕ ರಾಜಕೀಯ ಸಂಘಟನೆಯಾದ 'ಅರಬ್ ಸೋಷಲಿಸ್ಟ್ ಯೂನಿಯನ್'ನಲ್ಲೂ (ನಾಸೆರ್‌ರವರೇ ಇದರ ಅಧ್ಯಕ್ಷರಾಗಿದ್ದರು) ಶೇ. 50ಕ್ಕಿಂತ ಕಮ್ಮಿ ಇಲ್ಲದಷ್ಟು ಸ್ಥಾನಗಳನ್ನು ನೀಡುವ ಮೂಲಕ ರಾಷ್ಟ್ರಾಡಳಿತದ ಮೇಲೆ

ಜನರ ನಿಯಂತ್ರಣವನ್ನು ವಿಸ್ತೃತಪಡಿಸಲು ಅನೇಕ ಕ್ರಮಗಳನ್ನು ಕೈಗೊಂಡಿತು. ರಾಜಕೀಯ ಜೀವನವನ್ನು ಪಟ್ಟಿಪಟ್ಟಿಯಾಗಿ ಪ್ರಜಾಪ್ರಭುತ್ವೀಕರಿಸಲಾಯಿತು. ಕಮ್ಯೂನಿಸ್ಟರನ್ನು ಅವರ ಚಟುವಟಿಕೆಗಳಿಗಾಗಿ ಕಿರುಕುಳಕ್ಕೆ ಒಳಪಡಿಸಿ ಸೆರೆಮನೆಗೆ ದಬ್ಬುತ್ತಿದ್ದ ಇಲ್ಲವೇ ಬಂದಿ ಶಿಬಿರಗಳಲ್ಲಿ ದೂಡುತ್ತಿದ್ದ ಕಾಲವೂ ಒಂದಿದ್ದಿತು. ಈಗ ಸೈನಿಕ ಶಾಸನ(ಮಾರ್ಷಲ್ ಲಾ)ವನ್ನೂ ತುರ್ತು ಪರಿಸ್ಥಿತಿಯ ಕಾನೂನುಗಳನ್ನೂ ತೆಗೆದುಹಾಕುವುದರ ಫಲವಾಗಿ ಬಹುಸಂಖ್ಯಾತ ರಾಜಕೀಯ ಕೈದಿಗಳು ಸೆರೆಮನೆಗಳಿಂದ ಹೊರಬಂದರು. ನಾಸೆರ್‌ರವರ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ಆಡಳಿತವು ಅನೇಕ ಕಮ್ಯೂನಿಸ್ಟರಿಗೂ 'ಅರಬ್ ಸೋಷಲಿಸ್ಟ್ ಯೂನಿಯನ್'ನ ಕಾರ್ಯಕಾರಿ ಸಂಸ್ಥೆಗಳಲ್ಲೂ ಸಾಮೂಹಿಕ ಮಾಧ್ಯಮಗಳಲ್ಲೂ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿತು. ಈಜಿಪ್ಟ್‌ನಲ್ಲಿ ಮಾರ್ಕ್ಸ್‌ವಾದಿ ಸಾಹಿತ್ಯ ಪ್ರಸಾರದ ಮೇಲೆ ಹಾಕಲಾಗಿದ್ದ ನಿಷೇಧವನ್ನೂ ತೆಗೆದುಹಾಕಲಾಯಿತು. ಪತ್ರಿಕೆಗಳು ಸಮಾಜವಾದಿ ನಿರ್ಮಾಣದ ವರದಿಗಳನ್ನು ಹೆಚ್ಚು ಹೆಚ್ಚಾಗಿ ಪ್ರಕಟಿಸತೊಡಗಿದವು. ಪುಸ್ತಕದ ಅಂಗಡಿಗಳ ಬಡುಗಳಲ್ಲಿ ಮಾರ್ಕ್ಸ್ ಎಂಗೆಲ್ಸ್ ಲೆನಿನರ ಕೃತಿಗಳು ಕಾಣಿಸಿಕೊಂಡವು. ನಾಸೆರ್‌ರವರೂ ಅವರ ಸಂಗಡಿಗರೂ ಈಜಿಪ್ಟಿನ ಮಾರ್ಕ್ಸ್‌ವಾದಿಗಳೊಂದಿಗೆ ಸಹಕರಿಸುವುದು ಅವಶ್ಯ ಎನ್ನುವುದನ್ನು ನಿಧಾನವಾಗಿ ಆದರೆ ಖಚಿತವಾಗಿ ಅರ್ಥಮಾಡಿಕೊಳ್ಳತೊಡಗಿದರು ಮತ್ತು ಅದನ್ನು ಆಚರಣೆಗೆ ತರತೊಡಗಿದರು.

ಈ ಎಲ್ಲ ಕ್ರಮಗಳೂ ಪೂರ್ಣವಾಗಿ ಪೂರೈಕೆಗೊಳ್ಳದಿದ್ದರೂ (ಉದಾಹರಣೆಗೆ, ರಾಜ್ಯಸಾಧನದ ಪುನಸ್ಸಂಘಟನೆಯ ಕಾರ್ಯ ಪೂರ್ಣಗೊಳ್ಳಲಿಲ್ಲ, ರಾಜ್ಯಸಾಧನವು ಹಿಂದೆ ಸಮಾಜದ ಭೂಮಾಲೀಕ ಹಾಗೂ ಬಂಡವಾಳಶಾಹಿ ವಿಭಾಗಗಳಿಗೆ ಸೇವೆ ಸಲ್ಲಿಸುತ್ತಿದ್ದವರ ಕೈಗಳಲ್ಲೇ ಉಳಿದಿದ್ದಿತು) ಅವು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಗಳಿಕೆಗಳನ್ನು ಸಂರಕ್ಷಿಸುವ ಬಯಕೆಯಿಂದಂತೂ ಪ್ರೇರಿತವಾಗಿದ್ದವು. ತಾವು ಮುಂದಿರಿಸಿಕೊಂಡಿದ್ದ ಗುರಿಯನ್ನು ಸಾಧಿಸಿಕೊಳ್ಳಲು ದುಡಿಯುವ ಜನರ ಹಾಗೂ ಪುರೋಗಾಮಿ ಕ್ರಾಂತಿಕಾರಿ ಬುದ್ಧಿಜೀವಿಗಳ ಬೆಂಬಲ ಪಡೆಯುವುದು ಅವಶ್ಯ ಎನ್ನುವುದನ್ನು ನಾಸೆರ್‌ರವರಿಗೆ ಕ್ರಾಂತಿಯ ಕಾರ್ಯಕ್ರಮವನ್ನು ಈಡೇರಿಸುವ ಹೋರಾಟದ ತರ್ಕವೇ ತೋರಿಸಿಕೊಟ್ಟಿದ್ದಿತು.

ವಿದೇಶಾಂಗ ನೀತಿ ಕ್ಷೇತ್ರದಲ್ಲಿ, ಸಮಾಜವಾದಿ ದೇಶಗಳೊಂದಿಗೆ, ಅದರಲ್ಲೂ ವಿಶೇಷವಾಗಿ ಸೋವಿಯತ್ ಒಕ್ಕೂಟದೊಂದಿಗೆ ಸ್ನೇಹ ಹಾಗೂ ಸರ್ವತೋಮುಖ ಸಹಕಾರಗಳು ಈಜಿಪ್ಷಿಯನ್ ಕ್ರಾಂತಿಯ ಯಶಸ್ವಿ ಬೆಳವಣಿಗೆಗೆ ಖಾಚಿತ್ಯವಾಗಿದ್ದವೆಂದು ನಾಸೆರ್ ಕಂಡುಕೊಂಡರು. ಅಲ್ಲಿಂದ ಈಜಿಪ್ಟಿನ ಗೃಹ ನೀತಿಯಲ್ಲಿ ಪ್ರಗತಿಶೀಲ ಪ್ರವೃತ್ತಿ ಗಾಢಗೊಂಡಂತೆ ಸೋವಿಯತ್-ಈಜಿಪ್ಷಿಯನ್ ಸಂಬಂಧಗಳೂ ಬಲಗೊಂಡವು, ವಿಸ್ತಾರಗೊಂಡವು. ಸಾಮ್ರಾಜ್ಯವಾದ ಹಾಗೂ ಪ್ರತಿಗಾಮಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಎರಡೂ ದೇಶಗಳ ಹಿತಗಳು ಒಂದೇ ಆಗಿದ್ದುದು ಅಥವಾ ಸಮೀಪವಾಗಿದ್ದುದು ಈ ಸಂಬಂಧಗಳ ಆಧಾರವಾಗಿದ್ದಿತು. ಜನತೆಗಳ ಸ್ವಾತಂತ್ರ್ಯಕ್ಕಾಗಿ ಸಾಮಾಜಿಕ-ಆರ್ಥಿಕ ಹಾಗೂ ಸಾಂಸ್ಕೃತಿಕ ಪ್ರಗತಿಗಾಗಿ ಚಳವಳಿಯೂ ಈ ಸಂಬಂಧಗಳಿಗೆ ಆಧಾರ ಒದಗಿಸಿದ್ದಿತು. ಸಮಾಜವಾದದ ದಿಶೆಯಲ್ಲಿ ಸಾಗಿ ಹೋಗುವುದು ತಮ್ಮ ನೀತಿಯ ಗುರಿ ಎಂದು ಘೋಷಿಸಿದ ನಂತರ ನಾಸೆರ್‌ರವರ ನೇತೃತ್ವದಲ್ಲಿದ್ದ ಈಜಿಪ್ಷಿಯನ್ ಕ್ರಾಂತಿಕಾರಿ ನಾಯಕರು ಬೆಂಬಲಕ್ಕೆ ಸೋವಿಯತ್ ಒಕ್ಕೂಟದ ಕಡೆಗೆ ತಿರುಗಿದುದು ಸಂಪೂರ್ಣವಾಗಿ ಸಹಜವೇ ಆಗಿದ್ದಿತು, ಯುಕ್ತವೇ ಆಗಿದ್ದಿತು.

ಅರವತ್ತರ ದಶಕದಲ್ಲಿ ಸೋವಿಯತ್-ಈಜಿಪ್ಷಿಯನ್ ಸಹಕಾರವು ವಿಶಾಲ ಪ್ರಮಾಣದಲ್ಲಿ ಬೆಳೆದು ಆರ್ಥಿಕತೆ, ರಾಜಕಾರಣ, ವ್ಯಾಪಾರ ಹಾಗೂ ಮಿಲಿಟರಿ ವ್ಯವಹಾರಗಳ, ಸಂಸ್ಕೃತಿ, ವಿಜ್ಞಾನ ಹಾಗೂ ಪ್ರವಾಸೋದ್ಯಮಗಳ ಎಲ್ಲ ಕ್ಷೇತ್ರಗಳಿಗೂ ಹರಡಿದುದಕ್ಕೆ ಇದೇ ಕಾರಣವಾಗಿದ್ದಿತು. ಉದಾಹರಣೆಯಾಗಿ, ಈಜಿಪ್ಟ್‌ನಲ್ಲಿ ಸೋವಿಯತ್ ಒಕ್ಕೂಟದ ಸಹಭಾಗಿತ್ವದೊಂದಿಗೆ ಸುಮಾರು 150 ಭಿನ್ನ ವಿಭಿನ್ನ ಉದ್ಯಮಗಳನ್ನು ನಿರ್ಮಿಸಲಾಯಿತು, ಎಂದು ಹೇಳಿದರೆ ಸಾಕಾದೀತು. ಸುಪ್ರಸಿದ್ಧ ಆಸ್ವಾನ್ ಉನ್ನತ ಅಣೆಕಟ್ಟೆ, ದೇಶದ ಅತ್ಯಂತ ಪ್ರಬಲ ಆಸ್ವಾನ್ ಜಲವಿದ್ಯುತ್ಕೇಂದ್ರ, ಹೆಲ್ವಾನ್‌ನಲ್ಲಿನ ದೇಶದ ಅತ್ಯಂತ ದೊಡ್ಡ ಲೋಹ ಯಂತ್ರಸ್ಥಾವರ, ನಾಗ್ ಹಮ್ಮಾಡಿಯಲ್ಲಿನ ಅಲ್ಯೂಮಿನಿಯಂ ಯಂತ್ರಸ್ಥಾವರ ಸಂಕೀರ್ಣ, ಆಫ್ರಿಕಾದಲ್ಲೇ ಏಕೈಕವಾದ 500 ಕಿ. ವಾ. ಸಾಮರ್ಥ್ಯದ ವಿದ್ಯುದ್ವಾಹಕ ಮಾರ್ಗ—ಇವು ಅವುಗಳಲ್ಲಿ ಕೆಲವಾಗಿವೆ.

ಈಜಿಪ್ಟ್ ದೇಶವು ಸೋವಿಯತ್ ಒಕ್ಕೂಟದೊಂದಿಗೆ ನಾನಾ ಕ್ಷೇತ್ರಗಳಲ್ಲಿ ಸಹಕರಿಸುವುದು ಎಷ್ಟು ಅತ್ಯಮೂಲ್ಯವಾಗಿದ್ದಿತು, ಪ್ರಾಮುಖ್ಯವಾಗಿದ್ದಿತು ಎಂಬುದನ್ನು ನಾಸೆರ್‌ರವರು ತಮ್ಮೆಲ್ಲ ಭಾಷಣಗಳಲ್ಲೂ ಅನೇಕ ಬಾರಿ ಒತ್ತಿ ಹೇಳುತ್ತಿದ್ದುದರಲ್ಲಿ ಆಶ್ಚರ್ಯವೇನಿಲ್ಲ. ಈ ಸಹಕಾರವು ನಾನಾ ಕ್ಷೇತ್ರಗಳಲ್ಲಿ ಈಜಿಪ್ಟಿನ ಯಶಸ್ಸಿಗೆ ಮುಖ್ಯ ಉಪಾಧಿಗಳಲ್ಲಿ ಒಂದಾಗಿದ್ದಿತೆಂದು ಅವರು ನಿಜಕ್ಕೂ ಪರಿಗಣಿಸಿದ್ದರು. ಅಷ್ಟೇ ಅಲ್ಲ ಸೋವಿಯತ್-ಈಜಿಪ್ಟ್ ಸಹಕಾರವು ಯಾವತ್ತೂ ಅನ್ಯೋನ್ಯತೆಯ ಆಧಾರದ ಮೇಲೆ ನಿರ್ಮಿತವಾಗಿದ್ದಿತು ಎನ್ನುವುದನ್ನೂ ಒತ್ತಿ ಹೇಳಬೇಕು.

ಅರವತ್ತರ ದಶಕದಲ್ಲಿ ನಾಸೆರ್‌ರವರ ನೇತೃತ್ವದಲ್ಲಿದ್ದ ಆಳುವ ಕ್ರಾಂತಿಕಾರಿ ಪ್ರಜಾಪ್ರಭುತ್ವವು ಜಾರಿಗೆ ತಂದ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಸುಧಾರಣೆಗಳ ಪ್ರಗತಿಶೀಲ ಸ್ವರೂಪವು ಸುಸ್ಪಷ್ಟವೇ ಆಗಿದ್ದಿತು. ಈ ಸುಧಾರಣೆಗಳು ಜನರಿಗೆ ತಂದ ಪ್ರಯೋಜನ ಹಾಗೂ ಅವರ ಜೀವನ ಮಟ್ಟದಲ್ಲಾದ ನಿಜವಾದ ಮೆಟ್ಟಿಲುಗಳಿಂದ ಮುಖ್ಯವಾಗಿ ಅವುಗಳ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು

ಅಳವಡಿಸಲಾಯಿತು. ಆದರೂ ಈ ಪ್ರಗತಿಶೀಲ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ದುಡಿಯುವ ಜನಸಮೂಹಗಳು ಇಡೀಯಾಗಿ ಸ್ವತಂತ್ರವಾಗಿಯೂ ಆಸಕ್ತಿಯುಳ್ಳವರಂತೆಯೂ ಭಾಗವಹಿಸುವಂತಾದಾಗಲಷ್ಟೆ ಆ ಸುಧಾರಣೆಗಳ ಮಹತ್ವ ಅಗಣಿತವಾಗಿ ಹೆಚ್ಚುತ್ತದೆ ಹಾಗೂ ಅವು ತಿರೋಗಮಿಸದಂತಾಗುತ್ತವೆ, ಎಂಬುದೂ ಸ್ಪಷ್ಟವಾಗಿದ್ದಿತು. ಆದರೆ ದುಡಿಯುವ ಜನರನ್ನು ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಅಣಿನೆರೆಯಿಸುವ ವಿಷಯದಲ್ಲಿ ಅನೇಕ ಸಮಸ್ಯೆಗಳು ಅಪರಿಹಾರ್ಯವಾಗಿಯೇ ಉಳಿದವು. ಚಾರ್ಟರ್‌ನ ಕಾರ್ಯಕ್ರಮ ಸೂತ್ರಗಳಿಗೆ ಹಾಗೂ ಕೋರಿಕೆಗಳಿಗೆ ಅನುಗುಣವಾಗಿ 'ಅರಬ್ ಸೋಷಲಿಸ್ಟ್ ಯೂನಿಯನ್'ನ ಕಾರ್ಯವನ್ನು ಶೀಘ್ರವಾಗಿ ಚುರುಕುಗೊಳಿಸಬೇಕೆಂದು ನಾಸೆರ್‌ರವರು ಇಟ್ಟುಕೊಂಡಿದ್ದ ಮಹದಾಸೆಯು ಪೂರ್ಣವಾಗಿ ಫಲಗೊಳ್ಳಲೇ ಇಲ್ಲ. 'ಅರಬ್ ಸೋಷಲಿಸ್ಟ್ ಯೂನಿಯನ್'ನ ತಳ ಮಧ್ಯಮ ಹಾಗೂ ಅದಕ್ಕೂ ಹೆಚ್ಚಾಗಿ ಉನ್ನತ ವಿಭಾಗಗಳಲ್ಲಿ ಕಾರ್ಮಿಕರ ಹಾಗೂ ರೈತರ ನೆಲೆಗಳನ್ನು ದೃಢಗೊಳಿಸಬೇಕೆಂದು ರಾಜಕೀಯ ನಾಯಕತ್ವ ಬಯಸಿದ್ದರೂ, ಸಮಾಜದ ಪೆಟಿ ಬೂರ್ಜ್ವಾ ಸ್ತರದವರೇ ಅದರಲ್ಲಿ ಹೆಚ್ಚಾಗಿ ಪ್ರತಿನಿಧಿತವಾಗಿದ್ದರು.

'ಅರಬ್ ಸೋಷಲಿಸ್ಟ್ ಯೂನಿಯನ್'ನ ಚಟುವಟಿಕೆಗಳು ಒಟ್ಟಿನ ಮೇಲೆ ಹೆಚ್ಚಿನ ರಾಜಕೀಯ ಪರಿಣಾಮವನ್ನೇನೂ ಉಂಟುಮಾಡಲಿಲ್ಲ, ಏಕೆಂದರೆ, ಅದರ "ವರ್ಗಾತೀತ" ಲಕ್ಷಣವು ಅದನ್ನು ಮೂಲತಃ ನಿಷ್ಕ್ರಿಯೆಗೆ ಗುರಿ ಮಾಡಿದ್ದಿತು. ದೇಶದಲ್ಲಿ ಹೆಚ್ಚು ಹೆಚ್ಚಾಗಿ ತೀವ್ರಗೊಳ್ಳುತ್ತಿದ್ದ ವರ್ಗ ಹೋರಾಟವು ಈ ಸಂಸ್ಥೆಯೊಳಗಿನ ಹಾಗೂ ಇತರ ಸಾರ್ವಜನಿಕ ಸಂಘಟನೆಗಳೊಳಗಿನ ಸಾಮಾಜಿಕ-ರಾಜಕೀಯ ಪರಿಸ್ಥಿತಿಗಳಲ್ಲಿ ಪ್ರತಿಬಿಂಬಿತವಾಗಿದ್ದಿತು. ಇದು ಪರಿಸ್ಥಿತಿಯನ್ನು ಮತ್ತಷ್ಟು ಉಲ್ಬಣಗೊಳಿಸಿದ್ದಿತು. ಶೋಷಕ ವರ್ಗಗಳು ದೇಶದ ಕ್ರಾಂತಿಕಾರಿ ನಾಯಕತ್ವದ ನೀತಿಗೆ ಭಿನ್ನ ವಿಭಿನ್ನ ರೀತಿಗಳಲ್ಲಿ ಉಗ್ರ ಪ್ರತಿರೋಧ ತೋರಿದವು. ಪ್ರತಿಗಾಮಿ ಶಕ್ತಿಗಳು ಸರಕಾರದ ವಿರುದ್ಧ ಬಹಿರಂಗವಾಗಿಯೇ ಪ್ರದರ್ಶನ ನಡೆಸುವವರೆಗೂ ಹೋದವು. ರಾಷ್ಟ್ರೀಕರಣದನಂತರವೂ ಭಾರಿ ಬೂರ್ಜ್ವಾಸೀಯು ಶಾಸನಗಳಲ್ಲಿದ್ದ ಅನೇಕಾನೇಕ ಛಿದ್ರಗಳನ್ನು ಬಳಸಿಕೊಂಡು ವ್ಯಾಪಾರ, ಸೇವಾ ಕಾರ್ಯಗಳು, ನಿರ್ಮಾಣ, ವೃತ್ತಿ ಹಾಗೂ ಮಧ್ಯಮ ಪ್ರಮಾಣಗಳ ಕೈಗಾರಿಕೆಗಳು ಮುಂತಾದ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಲೇ ಹೋಯಿತು. ಗ್ರಾಮಾಂತರದಲ್ಲಿ ಭೂ ಸುಧಾರಣೆಯನಂತರ ಶ್ರೀಮಂತ ರೈತ ವರ್ಗವೂ ಕೃಷಿ ಬೂರ್ಜ್ವಾಸೀಯೂ ಶೀಘ್ರವಾಗಿ ಬೆಳೆದವು. ಬೂರ್ಜ್ವಾಸೀಯ ಪುನರುದ್ಧಾರವು ರಾಜ್ಯದ, ಆಡಳಿತಾಂಗಗಳ ಹಾಗೂ ಸೈನಿಕ ವಿಭಾಗಗಳ ಉನ್ನತ ಸ್ತರಗಳವರೆಗೂ ವ್ಯಾಪಿಸಿತು. ಇದು ಪ್ರಗತಿಶೀಲ ಸುಧಾರಣೆಗಳನ್ನು ಒಳಗಿಂದೊಳಗೇ ಭಂಗಗೊಳಿಸಿತು. ಈ ಸ್ತರಗಳ ನೆರವಿನಿಂದ ಮತ್ತು ಅವುಗಳ ಭಾಗವಹಿಸು

ವಿಕೆಯಿಂದಲೂ ಬೂರ್ಜ್ವಾಸೀಯು ತನ್ನ ಪುರೋಭಿವೃದ್ಧಿ ಸಾಧಿಸುವ ಚಟುವಟಿಕೆಗಳನ್ನು ಬೆಳೆಸಿಕೊಂಡಿತು. ಸಟ್ಟಾ ವ್ಯಾಪಾರ ಮತ್ತು ಕಾಂಟ್ರಾಕ್ಟುಗಳ ಮೂಲಕ ಇಲ್ಲವೇ ಸುಮ್ಮನೆ ಲಂಚ ಹಾಗೂ ಶುದ್ಧ ಕಳ್ಳತನಗಳ ಮೂಲಕ ತನ್ನ ಸಂಪತ್ತನ್ನು ಹೆಚ್ಚಿಸಿಕೊಂಡಿತು.

ಈ ಎಲ್ಲ ಪ್ರತಿಕ್ರಾಂತಿಕಾರಿ ಶಕ್ತಿಗಳೂ ಸ್ವಯಂಸ್ಫೂರ್ತಿಯಿಂದಲೂ ಮತ್ತು ಸಂಘಟಿತ ರೀತಿಯಲ್ಲೂ ದೇಶದ ಒಳ ರಾಜಕೀಯ ಬೆಳವಣಿಗೆಯನ್ನು ಬದಲಿಸಲು ದೇಶವು ಸಮಾಜವಾದಿ ದಿಶೆಯ ಮಾರ್ಗದಿಂದ ವಿಮುಖಗೊಳ್ಳುವಂತೆ ಮಾಡಲು, ಯತ್ನಿಸಿದವು. ಇಡೀ ಅರಬ್ ಪ್ರತಿಗಾಮಿ ಶಕ್ತಿಗಳೇ ಈ ಶಕ್ತಿಗಳೊಂದಿಗೆ ಕೂಡಿಕೊಂಡು ಕಾರ್ಯ ಜರುಗಿಸಿದವು, ಏಕೆಂದರೆ ಇಜಿಪ್ಷಿಯನ್ ಕ್ರಾಂತಿಯು ಅವುಗಳ ಅಸ್ತಿತ್ವಕ್ಕೂ ಭೀತಿ ಉಂಟುಮಾಡಿದ್ದಿತು.

ಒಂದು ಹೊಸ ಪ್ರಬಲವಾದ ಸ್ವತಂತ್ರವಾದ ಇಜಿಪ್ಟನ್ನು ನಿರ್ಮಿಸುವ ಗುರಿ ಹೊಂದಿದ್ದ ನಾಸೆರ್‌ರವರ ಗೃಹ ಹಾಗೂ ವಿದೇಶಾಂಗ ನೀತಿಯೂ ಅವರು ಇತರ ಅರಬ್ ದೇಶಗಳಲ್ಲಿನ ರಾಷ್ಟ್ರೀಯ ದೇಶಪ್ರೇಮಿ ಶಕ್ತಿಗಳಿಗೆ ಬೆಂಬಲ ನೀಡುತ್ತಿದ್ದುದೂ, ಇಸ್ರೇಲಿನ ವಿಸ್ತರಣಾಕಾಂಕ್ಷಿಗಳ ಯೋಜನೆಗಳಿಗೆ ವಿರುದ್ಧ ಹೋಗುತ್ತಿದ್ದವು. ಅವರು ಅರಬ್ ದೇಶಗಳ ಭೂಪ್ರದೇಶಗಳನ್ನು ಆಕ್ರಮಿಸಿಕೊಂಡು ಆ ದೇಶಗಳಲ್ಲಿನ, ಎಲ್ಲಕ್ಕೂ ಮಿಗಿಲಾಗಿ ಇಜಿಪ್ಟಿನ, ಪುರೋಗಾಮಿ ಆಡಳಿತಗಳನ್ನು ನಿರ್ಮೂಲಗೊಳಿಸುವ ತಮ್ಮ ಉದ್ದೇಶವನ್ನು ಮುಚ್ಚುಮರೆಯಾಗೇನೂ ಇರಿಸಿರಲಿಲ್ಲ.

ಈ ಪರಿಸ್ಥಿತಿಯಲ್ಲಿ ಇಸ್ರೇಲಿ ದುರಾಕ್ರಮಣಕಾರರು 1967ರ ಜೂನ್‌ನಲ್ಲಿ ಮಧ್ಯಪ್ರಾಚ್ಯದಲ್ಲಿ ವಿಸ್ತೃತ ಪ್ರಮಾಣದ ಮಿಲಿಟರಿ ಘರ್ಷಣೆಯನ್ನು ಪ್ರಾರಂಭಿಸಿದರು, ಇಜಿಪ್ಟಿನ ಮಿಲಿಟರಿ ಸ್ಥಾವರಗಳ ಮೇಲೆ ಬಾಂಬು ದಾಳಿ ಮಾಡಿದರು, ಸಿನೈ ಪರ್ಯಾಯದ್ವೀಪವನ್ನು ವಶಪಡಿಸಿಕೊಂಡು ಸೂಯೆಜ್ ಕಾಲುವೆಯನ್ನು ನಿಷ್ಕ್ರಿಯಗೊಳಿಸಿದರು.

ಇಜಿಪ್ಟಿನ ಸೈನ್ಯವು ಅನುಭವಿಸಿದ ಪರಾಜಯವನ್ನು ಸಮಾಜದ ವಿವಿಧ ವಿಭಾಗಗಳು ವಿವಿಧ ರೀತಿಗಳಲ್ಲಿ ಕಂಡುಕೊಂಡವು. ಸರಕಾರದ ಪುರೋಗಾಮಿ ಸುಧಾರಣೆಗಳಿಂದ ಬಾಧಿತರಾಗಿದ್ದ ನಗರ ಗ್ರಾಮಗಳಲ್ಲಿದ್ದ, ರಾಜ್ಯಸಾಧನ, ಸೈನ್ಯ ಹಾಗೂ ಧಾರ್ಮಿಕ ವೃತ್ತಗಳಲ್ಲಿದ್ದ ಆಸ್ತಿವಂತ ವರ್ಗಗಳ ಸದಸ್ಯರು ಇಜಿಪ್ಟಿನ ಪರಾಜಯದಿಂದ ಒಳಗೊಳಗೇ, ಕೆಲವು ವೇಳೆ ಬಹಿರಂಗವಾಗಿಯೂ, ಹಿಗ್ಗಿದರು. ತಮ್ಮ ಹಿತಗಳಿಗೆ ಪರಕೀಯವಾಗಿದ್ದ, ತಮ್ಮ ಆಸ್ತಿ ಹಾಗೂ ರಾಜಕೀಯ ವಿಶೇಷಾಧಿಕಾರಗಳ ಮೇಲೆ ಅತಿಕ್ರಮಣವೆಸಗಿದ್ದ ಆಡಳಿತವನ್ನು ತೊಡೆದು ಹಾಕುವ ಅವಕಾಶವನ್ನು ಅವರು ಅದರಲ್ಲಿ ಕಂಡುಕೊಂಡರು. ಅಧ್ಯಕ್ಷ ನಾಸೆರ್‌ರವರ ಸರಕಾರವನ್ನು ಉರುಳಿಸುವ ಗುರಿಯೊಂದಿಗೆ ಅವರು ಒಳಸಂಚು ನಡೆಸತೊಡಗಿದರು.

ಇವಕ್ಕೆ ವಿರುದ್ಧವಾಗಿ ಈಜಿಪ್ಟಿನ ದುಡಿಯುವ ಜನರಿಗೆ – ಕಾರ್ಮಿಕರು, ರೈತರು, ಕೈಕಸುಬುದಾರರು, ದೇಶಪ್ರೇಮಿ ಬುದ್ಧಿಜೀವಿಗಳು, ಇವರಿಗೆ – ಮತ್ತು ಯುವ ಜನರ ಹಾಗೂ ವಿದ್ಯಾರ್ಥಿಗಳ ಒಂದು ಗಣನೀಯ ಭಾಗಕ್ಕೆ, ಈಜಿಪ್ಷಿಯನ್ ಸೈನ್ಯದ ಪರಾಜಯವು ಅನಿರೀಕ್ಷಿತ ಪ್ರಹಾರವಾಗಿ ಬಂದಿತು. ದೇಶದಲ್ಲಿನ ಪರಿಸ್ಥಿತಿಯನ್ನು ಹೊಸ ರೀತಿಯಲ್ಲಿ ಕಾಣುವಂತೆ ಅವರನ್ನು ಪ್ರೇರಿಸಿತು. ಅಧ್ಯಕ್ಷ ನಾಸೆರ್‌ರವರ ಪುರೋಗಾಮಿ ಆಡಳಿತದ ಮೇಲೂ ದುಡಿಯುವ ಜನವಿಭಾಗಗಳ ಹಿತದೃಷ್ಟಿಯಿಂದ ಅದು ಎಸಗಿದ್ದ ಸ್ತುತ್ಯಾರ್ಹ ಕಾರ್ಯಗಳ ಮೇಲೂ ವಿನಾಶಕಾರಕ ಭೀತಿ ತೂಗಿ ನಿಂತಿದ್ದುದನ್ನು ಅವರು ಕಂಡುಕೊಂಡರು.

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸಮಾಜದ ಈ ವಿಭಾಗಗಳು ನಾಸೆರ್‌ರವರಲ್ಲಿ ತಮ್ಮ ಸಂಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸಿದವು, ಶತ್ರುವನ್ನು ಹಿಮ್ಮೆಟ್ಟಿಸಲೋಸುಗ ಸಾಮಾಜಿಕ-ಆರ್ಥಿಕ ಸುಧಾರಣೆಗಳನ್ನು ಮತ್ತಷ್ಟು ವಿಸ್ತರಿಸುವುದಕ್ಕೆ ದೇಶದ ಎಲ್ಲ ಸಂಪನ್ಮೂಲಗಳನ್ನೂ ಅಣಿನೆರೆಯಿಸಲು ನಾಸೆರ್‌ರವರಿಗೆ ಸಂಪೂರ್ಣ ಅಧಿಕಾರ ನೀಡಿದವು. ಇಸ್ರೇಲಿ ದುರಾಕ್ರಮಣದ ದುಷ್ಪರಿಣಾಮಗಳನ್ನು ತೊಡೆದು ಹಾಕಲು ಮತ್ತು ಎಲ್ಲ ಆಕ್ರಮಿತ ಅರಬ್ ಪ್ರದೇಶಗಳನ್ನೂ ವಿಮೋಚನೆಗೊಳಿಸಲು ಈಜಿಪ್ಟಿನ ಜನರು ನಾಸೆರ್‌ರವರ ನಾಯಕತ್ವದಲ್ಲಿ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದ್ದರೆಂಬುದು ಸ್ಪಷ್ಟವಿದ್ದಿತು. ಸೋವಿಯತ್ ಒಕ್ಕೂಟದ ನೆರವಿನೊಂದಿಗೆ ಈಜಿಪ್ಟಿನ ಸೈನ್ಯದ ಹೋರಾಟ ಶಕ್ತಿಯನ್ನು ಬೇಗ ಪುನಶ್ಚೈತನ್ಯಗೊಳಿಸಲಾಯಿತು.

ದೇಶವನ್ನು ಗಾಢವಾಗಿ ಅಲುಗಿಸಿದಂಥ 1967ರ ಅರಬ್-ಇಸ್ರೇಲಿ ಯುದ್ಧದ ಘಟನೆಗಳು ಸೂತ್ರಬದ್ಧವಾದ ರಾಜಕೀಯ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷ ನಾಸೆರ್‌ರವರನ್ನು ಬಲಾತ್ಕರಿಸಿದವು. ಸಂಪ್ರದಾಯಶರಣ ಅಭಿಪ್ರಾಯಗಳನ್ನು ಹೊಂದಿದ್ದ ಜನರನ್ನು 'ಅರಬ್ ಸೋಷಲಿಸ್ಟ್ ಯೂನಿಯನ್'ನಿಂದ ಹೊರಹಾಕುವ ಮೂಲಕ, ಕ್ರಾಂತಿಯ ಬೆಳವಣಿಗೆಯನ್ನು ನಿಧಾನಿಸಲು ಯತ್ನಿಸುತ್ತಿದ್ದ "ಮಿಲಿಟರಿ ಬೂರ್ಷ್ವಾಸೀ"ಯ ಹಲವಾರು ನೂರು ಸದಸ್ಯರನ್ನು ರಾಜ್ಯಸಾಧನದಿಂದ ತೆಗೆದುಹಾಕುವ ಮೂಲಕ, ತಮಗೂ ತಮ್ಮ ನಾಯಕತ್ವಕ್ಕೂ ವಿರುದ್ಧ ಕ್ರಮೇಣ ಹುಟ್ಟಿಕೊಳ್ಳುತ್ತಿದ್ದ ಹೊಸ ಶಕ್ತಿ ಕೇಂದ್ರಗಳನ್ನು ತೊಡೆದು ಹಾಕಲು ಅವರು ಶಕ್ತಿ ಕೂಡಿಸಿಕೊಳ್ಳತೊಡಗಿದರು. 1968ರ ಮಾರ್ಚ್ 30ರಂದು ನಾಸೆರ್‌ರವರು ಒಂದು ಘೋಷಣೆಯನ್ನು ಹೊರಡಿಸಿದರು. ಅದು ಅಧಿಕಾರಶಾಹಿಯ ಮೇಲೆ ಯುದ್ಧ ಸಾರಿತು. 'ಅರಬ್ ಸೋಷಲಿಸ್ಟ್ ಯೂನಿಯನ್'ನ ಪಾತ್ರವನ್ನು ಬಲಗೊಳಿಸುವಂತೆ, ಈಜಿಪ್ಟ್ ಸಮಾಜವಾದಿ ದಿಶೆಯಲ್ಲೇ ಮುಂದುವರಿಯುವುದನ್ನು ಪುನರ್‌ಸಮರ್ಥಿಸುವಂತೆ, ಆಗ್ರಹಿಸಿತು. ರಾಷ್ಟ್ರೀಯ ಏಕತೆಯನ್ನು ಮತ್ತಷ್ಟು ಬಲಗೊಳಿಸಬೇಕೆಂದೂ ಆಕ್ರಮಿತ ಪ್ರದೇಶಗಳನ್ನು ವಿಮೋಚನೆಗೊಳಿ

ಸಲು ದೇಶದ ಎಲ್ಲ ಸಂಪನ್ಮೂಲಗಳನ್ನೂ ಬಳಸಬೇಕೆಂದೂ ಅದು ಮನವಿ ಮಾಡಿಕೊಂಡಿತು. ಈ ರಾಷ್ಟ್ರೀಯ ಏಕತೆಯಲ್ಲಿ ರಾಷ್ಟ್ರದ ದುಡಿಯುವ ಜನವಿಭಾಗಗಳ ಮೈತ್ರಿಕೂಟವು ಅಗ್ರ ಪಾತ್ರ ವಹಿಸಬೇಕೆಂದೂ ಈ ಪಾತ್ರವನ್ನು ಸುಧಾರಿತ 'ಅರಬ್ ಸೋಷಲಿಸ್ಟ್ ಯೂನಿಯನ್' ಮೂಲಕ, "ಈ ಯೂನಿಯನ್ ಒಳಗೇ ಸೃಜಿಸಲಿದ್ದಂಥ ರಾಜಕೀಯ ಬೀಜಕೇಂದ್ರದ ಮೂಲಕ" ಚಲಾಯಿಸಬೇಕೆಂದೂ ಘೋಷಣೆಯಲ್ಲಿ ನೇರವಾಗಿ ತಿಳಿಸಲಾಯಿತು. "ಈ ಬೀಜಕೇಂದ್ರವು ವರ್ಗಗಳ ನಡುವಿನ ಎಲ್ಲ ವ್ಯತ್ಯಾಸಗಳನ್ನೂ ತೊಡೆದು ಹಾಕುವ ನೀತಿಯನ್ನು ನೆರವೇರಿಸುವುದರಲ್ಲಿ ಅನ್ಯೋನ್ಯೀಕೃತ ಮಾರ್ಗದರ್ಶನ ನೀಡಲು ಸಮರ್ಥರಾದಂಥ ಕಾದರುಗಳನ್ನು ಒಳಗೊಂಡಿರಬೇಕು"* ಎಂದು ಅದು ತಿಳಿಸಿತು.

ದೇಶದ ಒಳಗಿನ ಹಾಗೂ ಹೊರಗಿನ ಪ್ರತಿಗಾಮಿಗಳ ಕುತಂತ್ರಗಳನ್ನು ವಿಫಲಗೊಳಿಸಲೋಸುಗ ಅಧ್ಯಕ್ಷ ನಾಸೆರ್‌ರವರು ಸಾಮಾಜಿಕ-ಆರ್ಥಿಕ ಸುಧಾರಣೆಗಳನ್ನು ಸಂರಕ್ಷಿಸುವಂಥ ಹಾಗೂ ಗಾಢಗೊಳಿಸುವಂಥ ಅನೇಕ ಕ್ರಮಗಳನ್ನು ಕೈಗೊಂಡರು. 1969ರಲ್ಲಿ ಬಹಿರಂಗವಾಗಿಯೇ ಬೂರ್ಷ್ವಾ ಪರವಾದ ಹಾಗೂ ಭ್ರಷ್ಟವಾದ ಶಕ್ತಿಗಳನ್ನು 'ಅರಬ್ ಸೋಷಲಿಸ್ಟ್ ಯೂನಿಯನ್'ನಿಂದಲೂ ರಾಜ್ಯಸಾಧನದಿಂದಲೂ ಹೊರಹಾಕಲಾಯಿತಲ್ಲದೆ ಹೊಸ 'ಭೂ ಸುಧಾರಣಾ ಶಾಸನ'ವೊಂದನ್ನು ಅನುಮೋದಿಸಲಾಯಿತು. ಅದು ಭೂಒಡೆತನದ ಗರಿಷ್ಠ ಪ್ರಮಾಣವನ್ನು ಮತ್ತಷ್ಟು ಕಮ್ಮಿ ಮಾಡಿತು (20 ಹೆಕ್ಟಾರುಗಳಿಗೆ). ಗ್ರಾಮಾಂತರದಲ್ಲಿ ಬಂಡವಾಳವಾದಿ ಶಕ್ತಿಗಳ ಬೆಳವಣಿಗೆಯನ್ನು ಮಿತಿಗೊಳಿಸುವುದು ಈ ಹೊಸ ಶಾಸನದ ಉದ್ದೇಶವಾಗಿದ್ದಿತು. ಆದರೆ ನಾಸೆರ್‌ರವರು ಈ ಕ್ರಮಗಳನ್ನು ಪೂರ್ತಿಯಾಗಿ ಕಾರ್ಯಗತಗೊಳಿಸುವುದರಲ್ಲಿ ಯಶಸ್ವಿಯಾಗಲಿಲ್ಲ. ಈ ವಾಸ್ತವಾಂಶವನ್ನು ಅವರ ಆಡಳಿತದ ಕೆಳಗೂ ಬಲಿಷ್ಠವಾಗಿ ಬೆಳೆದಿದ್ದಂಥ ಪ್ರತಿಗಾಮಿ ಶಕ್ತಿಗಳು ಸ್ವಪ್ರಯೋಜನಕ್ಕೆ ಬಳಸಿಕೊಂಡವು.

* * *

ಅಧ್ಯಕ್ಷ ನಾಸೆರ್‌ರವರು ದೇಶದೊಳಗೂ ವಿದೇಶಾಂಗ ನೀತಿ ವಲಯದಲ್ಲೂ ಅನುಸರಿಸಿದ ನೀತಿಮಾರ್ಗ ಎಷ್ಟು ಚೈತನ್ಯಯುತವಾಗಿದ್ದಿತು, ಎಷ್ಟು ದೂರದೃಷ್ಟಿಯಿಂದ ಕೂಡಿದ್ದಿತು ಎನ್ನುವುದನ್ನು ಚಾರಿತ್ರಿಕ ಅನುಭವವೇ ಮನವೊಪ್ಪುವಂತೆ ತೋರಿಸಿಕೊಟ್ಟಿದೆ. ಈಜಿಪ್ಟಿನ ಪುರೋಗಾಮಿ ಬೆಳವಣಿಗೆಗೆ ಅವರು ನೀಡಿದ ನಿರ್ಧಾರಕ ಕಾಣಿಕೆಯನ್ನು ಯಾರೂ ನಿರಾಕರಿಸಲಾರರು. ಈಜಿಪ್ಟ್ ಗಣತಂತ್ರವು

---

* G.A.Nasser, *Problems of the Egyptian Revolution, Selected Speeches, 1952-1970*, p. 179. – ಸಂ.

ಸಮಾಜವಾದಿ ದಿಶೆಯಲ್ಲಿ ಮುಂದುವರಿಯಬೇಕು ಎಂದು ಘೋಷಿಸಿದುದೇ ಈಜಿಪ್ಟಿಯನ್ ಜನತ ಈ ಶ್ರೇಷ್ಠ ಪುತ್ರನ ಮಹತ್ಸಾಧನೆಯಾಗಿದ್ದಿತು. ಅವರು ಸೋವಿಯತ್ ಒಕ್ಕೂಟ ಮತ್ತು ಈಜಿಪ್ಟ್‌ಗಳ ನಡುವಿನ ಸ್ನೇಹವನ್ನು ದೃಢಗೊಳಿಸಲು ತುಂಬ ಕಾರ್ಯ ಎಸಗಿದರು. ನಾಸೆರ್‌ರವರು ಮಾರ್ಕ್ಸ್‌ವಾದಿಯೇನೂ ಆಗಿರಲಿಲ್ಲ. ಅವರ ದೇಶದಲ್ಲಿ ಪ್ರಗತಿಶೀಲ ಸಾಮಾಜಿಕ-ಆರ್ಥಿಕ ಸುಧಾರಣೆಗಳನ್ನು ಕಾರ್ಯಗತಗೊಳಿಸಿದಂತೆ ಮತ್ತು ಅರಬ್ ರಾಷ್ಟ್ರಗಳ ಸಾಮ್ರಾಜ್ಯವಾದ ವಿರೋಧಿ ಹೋರಾಟ ತೀವ್ರಗೊಂಡಂತೆ ಅವರ ಮೇಲೆ ವೈಜ್ಞಾನಿಕ ಸಮಾಜವಾದದ ಪ್ರಭಾವ ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿತು. ನಾಸೆರ್‌ರವರು ಕ್ರಾಂತಿಯ ಬಗೆಗೆ, ಅದರ ಪ್ರೇರಕ ಶಕ್ತಿಗಳ ಮತ್ತು ಪ್ರತೀಕ್ಷೆಗಳ ಬಗೆಗೆ ತಮ್ಮ ವಿಚಾರಗಳನ್ನು ನಿಧಾನವಾಗಿ ಆದರೆ ಖಚಿತವಾಗಿ ಬದಲಿಸಿಕೊಂಡರು. ಅವರು ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳ ಅನುಭವದಿಂದ ತುಂಬ ತಿಳುವಳಿಕೆ ಪಡೆದುಕೊಂಡರು.

ರಾಜನೀತಿಜ್ಞರೂ ಶ್ರೇಷ್ಠ ರಾಜಕಾರಣಿಗಳೂ ಆಗಿದ್ದ ನಾಸೆರ್‌ರವರ ವಿಚಾರಧಾರೆಯು ಸಮಾಜದ ಮಧ್ಯಂತರ ಸ್ತರಗಳ ಪ್ರಮುಖ ಸದಸ್ಯರಾಗಿದ್ದಂಥವರ ಕ್ರಾಂತಿಕಾರಿ ಪ್ರಜಾಸತ್ತಾತ್ಮಕ ವಿಚಾರಧಾರೆಯಾಗಿದ್ದಿತು. ಇವರು ಸುಸಂಗತ ದೇಶಪ್ರೇಮದಿಂದ ಪ್ರಾರಂಭಿಸಿ ಕ್ರಮೇಣ ವೈಜ್ಞಾನಿಕ ಸಮಾಜವಾದದ ಅನೇಕ ಸೂತ್ರಗಳನ್ನು ಗ್ರಹಿಸಿಕೊಂಡರು. ಆದರೆ ನಾಸೆರ್‌ರವರ ಮತ್ತು ಅವರ ಸಹ ಮನಸ್ಕ ಸಹೋದ್ಯೋಗಿಗಳ ವಿಚಾರಧಾರೆಯ ವಿಕಸನದ ಪ್ರವೃತ್ತಿಯು ಸಾಕಷ್ಟು ಸ್ಪಷ್ಟವಾಗಿ ನಿರೂಪಿತವಾಗಿದ್ದಿತು: ಇವರಂಥ ಜನರು ತಮ್ಮ ದೇಶಗಳ ಜನರನ್ನು ಎಂಥ ಮಾರ್ಗದಲ್ಲಿ ಕರೆದೊಯ್ಯುತ್ತಾರೆಂದರೆ, ಅದು ಅಂತಿಮವಾಗಿ ಸಮಾಜವಾದದ ವಿಜಯದಲ್ಲಿ ಪರಿಣಾಮಗೊಳ್ಳಬಲ್ಲುದಾಗಿರುತ್ತದೆ.

ಗಮಾಲ್ ಅಬ್ದೆಲ್ ನಾಸೆರ್‌ರವರ ಅನುಭವವೂ ಅವರ ಕೆಳಗೆ ಈಜಿಪ್ಟ್‌ನಲ್ಲಿ ನೆರವೇರಿಸಲಾದ ಆಮೂಲಾಗ್ರ ಆರ್ಥಿಕ ಸುಧಾರಣೆಗಳೂ ಸಾಮಾಜಿಕ ಪುನಸ್ಸಂಘಟನೆಯೂ ಗಹನವಾದ ವಿಶ್ಲೇಷಣೆಗೆ ಅರ್ಹವಾದ ವಿಷಯಗಳಾಗಿವೆ. ನಿಜ, ಈ ಅನುಭವವು ಧನಾತ್ಮಕ ಹಾಗೂ ಋಣಾತ್ಮಕ ಸ್ವರೂಪಗಳನ್ನು ಹೊಂದಿದೆ. ಆದರೂ ಕ್ರಾಂತಿಕಾರಿಯಾಗಿ ಹಿರಿಯ ರಾಜಕಾರಣಿಯಾಗಿ ನಾಸೆರ್‌ರವರು ಮುಂದೆ ಬಂದು ನಿಲ್ಲುತ್ತಾರೆ. ಅಂತೆಯೇ ಈಜಿಪ್ಟಿನ ಕ್ರಾಂತಿಕಾರಿ ಪ್ರಜಾಪ್ರಭುತ್ವವೂ ತನ್ನೆಲ್ಲ ವೈವಿಧ್ಯತೆ, ಜಟಿಲತೆ ಹಾಗೂ ಆಂತರಿಕ ವೈರುಧ್ಯಗಳೊಂದಿಗೆ ನಮ್ಮ ಮುಂದೆ ಬಂದು ನಿಲ್ಲುತ್ತದೆ.

ಆಂಟೋನಿಯೋ ಅಗೊಸ್ತಿನೊ ನೆಟೊ

ಆಫ್ರಿಕದ ರಾಷ್ಟ್ರೀಯ-ವಿಮೋಚನಾ ಚಳವಳಿಯ ಒಬ್ಬ ಪ್ರಮುಖ ವ್ಯಕ್ತಿ.

ಜನನ 1922ರ ಸೆಪ್ಟೆಂಬರ್ 17ರಂದು, ಲುಆಂಡಾ ಬಳಿಯ ಇಕೊಲು-ಇ-ಬೆಂಗು ಎಂಬ ಗ್ರಾಮದಲ್ಲಿ. ಕಿಂಬುಂದು ಬುಡಕಟ್ಟಿನ ಮೆಥೋಡಿಸ್ಟ್ ಕ್ರೈಸ್ತ ಪಾದ್ರಿಯ ಕುಟುಂಬವೊಂದರಲ್ಲಿ.

ವಿದ್ಯಾಭ್ಯಾಸ ಲುಆಂಡಾದಲ್ಲಿನ ಪ್ರಾಟೆಸ್ಟೆಂಟ್ ಶಾಲೆಯೊಂದರಲ್ಲಿ ('ಸಾಲ್ವಡೋರ್ ಕೊರೆಯ್ಯ').

1944 ಹಾಗೂ 1947ರ ನಡುವೆ ನೆಟೊ ಲುಆಂಡಾದಲ್ಲಿ ಆರೋಗ್ಯ ಸೇವಾ ಸಂಸ್ಥೆಗಳಲ್ಲಿ ಕೆಲಸ ಮಾಡಿದರು. 1947ರಲ್ಲಿ ಲಿಸ್ಬನ್ ವಿಶ್ವವಿದ್ಯಾಲಯದಲ್ಲೂ ಕೊಯಿಂಬ್ರ ವಿಶ್ವವಿದ್ಯಾಲಯದಲ್ಲೂ ವೈದ್ಯಕೀಯ ವಿಭಾಗದಲ್ಲಿ ಅಭ್ಯಸಿಸಲೋಸುಗ ಪೋರ್ಚುಗಲ್‌ಗೆ ತೆರಳಿದರು.

ಪೋರ್ಚುಗಲ್‌ನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ನೆಟೊ ಅಂಗೋಲ ಮತ್ತಿತರ ಪೋರ್ಚುಗೀಸ್ ವಸಾಹತುಗಳಿಗೆ ಸ್ವಾತಂತ್ರ್ಯ ದೊರಕಿಸಿಕೊಡುವ ಹೋರಾಟದಲ್ಲಿ ಭಾಗವಹಿಸಿದರು. ಭೂಗತ ಪೋರ್ಚುಗೀಸ್ ಕಮ್ಯೂನಿಸ್ಟ್ ಪಾರ್ಟಿಯೊಂದಿಗೆ ಸಂಪರ್ಕ ಇರಿಸಿಕೊಂಡಿದ್ದರು.

ನೆಟೊ ಒಬ್ಬ ಪ್ರತಿಭಾನ್ವಿತ ಕವಿಯಾಗಿದ್ದರು. ವಿದ್ಯಾರ್ಥಿ ದಿನಗಳಲ್ಲೇ ಪೋರ್ಚುಗೀಸ್ ಸಾಹಿತ್ಯರಂಗದಲ್ಲಿ ಮನ್ನಣೆ ಗಳಿಸಿದ್ದರು.

1952-1960ರ ನಡುವೆ ರಾಜಕೀಯ ಚಟುವಟಿಕೆಗಳಿಗಾಗಿ ಪೋರ್ಚುಗೀಸ್ ಅಧಿಕಾರಿಗಳಿಂದ ಹಲವಾರು ಬಾರಿ ಬಂಧಿಸಲ್ಪಟ್ಟಿದ್ದರು.

1956ರ ಡಿಸೆಂಬರ್‌ನಲ್ಲಿ ಕಾರಾಗೃಹದಲ್ಲಿದ್ದಾಗಲೇ ನೆಟೊರವರು ಎಂಪಿಎಲ್‌ಎ('ಅಂಗೋಲ ವಿಮೋಚನೆಯ ಜನತಾ ಚಳವಳಿ')ಯ ಸ್ಥಾಪನೆಯಲ್ಲಿ ನಾಯಕತ್ವ ವಹಿಸಿದ್ದರು. 1957ರಿಂದ ಎಂಪಿಎಲ್‌ಎ ಸದಸ್ಯರು.

1957ರಲ್ಲಿ ಲಿಸ್ಬನ್ ವಿಶ್ವವಿದ್ಯಾಲಯದಲ್ಲಿ ಶಸ್ತ್ರವೈದ್ಯ ಪದವೀಧರರಾದರು. 1958ರಲ್ಲಿ ಅಂಗೋಲಕ್ಕೆ ಹಿಂದಿರುಗಿದರು.

ಲುಆಂಡಾದಲ್ಲಿ ವೈದ್ಯವೃತ್ತಿಯಲ್ಲಿ ಕೆಲಸ ಮಾಡುತ್ತಲೇ ಎಂಪಿ

ಎಲ್‌ಎ ನಾಯಕರಾಗಿ ರಾಜಕೀಯ ಚಟುವಟಿಕೆಗಳನ್ನೂ ನಡೆಸುತ್ತಿದ್ದರು.

1960ರ ಜೂನ್ 8ರಂದು ನೆಟೋರವರನ್ನು ಲುಆಂಡಾದಲ್ಲಿ ದಸ್ತಗಿರಿ ಮಾಡಲಾಯಿತು. ಅದೇ ವರ್ಷ ಸೆಪ್ಟೆಂಬರ್‌ನಲ್ಲಿ ಪೋರ್ಚುಗೀಸ್ ಅಧಿಕಾರಿಗಳು ಅವರನ್ನು ಕೇಪ್ ವೆರ್ಡೆ ದ್ವೀಪಗಳಿಗೆ ಗಡೀಪಾರು ಮಾಡಿದರು. ತದನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ 1961ರ ನವಂಬರ್‌ನಲ್ಲಿ ಮತ್ತೆ ಕೇಪ್ ವೆರ್ಡೆ ದ್ವೀಪಗಳ ಗವರ್ನರನ ಆಜ್ಞೆಯ ಮೇರೆಗೆ ಅವರನ್ನು ದಸ್ತಗಿರಿ ಮಾಡಿ ಅಲ್ಜುಬದಲ್ಲಿನ ಪೋರ್ಚುಗೀಸ್ ಮಿಲಿಟರಿ ಕಾರಾಗೃಹಕ್ಕೆ ಕಳುಹಿಸಲಾಯಿತು.

ಪೋರ್ಚುಗಲ್‌ನ ಪ್ರಜಾಸತ್ತಾತ್ಮಕ ಸಂಘಟನೆಗಳ ಒತ್ತಾಯಕ್ಕೊಳಗಾಗಿ ಅಧಿಕಾರಿಗಳು ನೆಟೋರವರನ್ನು 1962ರ ವಸಂತದಲ್ಲಿ ಬಿಡುಗಡೆ ಮಾಡಬೇಕಾಯಿತು. ಆದರೂ ಅವರು ಲಿಸ್ಬನ್ ಬಳಿ ಗೃಹ ಬಂಧನದಲ್ಲೇ ಇದ್ದರು. 1962ರ ಜುಲೈನಲ್ಲಿ ಎಂಪಿಎಲ್‌ಎ ನೆಟೋರವರಿಗೆ (ತಮ್ಮ ಕುಟುಂಬದೊಂದಿಗೆ) ಲಿಯೊಪೋಲ್ಡ್‌ವಿಲೆಗೆ (ಈಗ ಕಿನ್‌ಶಾಸಾ) ಬಂಧನದಿಂದ ತಪ್ಪಿಸಿಕೊಂಡು ಹೋಗಲು ನೆರವಾಯಿತು.

ನೆಟೊ 1962ರಿಂದ 1979ರವರೆಗೆ ಎಂಪಿಎಲ್‌ಎ ಸಂಸ್ಥೆಯ ಅಧ್ಯಕ್ಷರಾಗಿದ್ದರು (1977ರಲ್ಲಿ ಪುನರಾಯ್ಕೆಯಾದರು).

1969ರಿಂದ 1977ರವರೆಗೆ ವಿಶ್ವ ಶಾಂತಿ ಪರಿಷತ್ತಿನ ಅಧ್ಯಕ್ಷ ವೃಂದದ ಸದಸ್ಯರಾಗಿದ್ದರು.

1974ರಲ್ಲಿ, ಮೊಜಾಂಬಿಕ್, ಅಂಗೋಲ ಹಾಗೂ ಗಿನಿ-ಬಿಸೌಗಳ ಸ್ವಾತಂತ್ರ್ಯ ಸಂಗ್ರಾಮ ಸಮಿತಿ ಪ್ರಕಟಿಸುತ್ತಿದ್ದ 'ಗೆರಿಲ್ಹೆರೊ' ಬುಲೆಟಿನ್ ವರದಿ ಮಾಡಿದಂತೆ, ನೆಟೋರವರನ್ನು ಕೊಲೆಮಾಡಲು ಪಾರ್ಟಿಯೊಳಗೇ ಒಳಸಂಚು ನಡೆದಿದ್ದುದನ್ನು ಎಂಪಿಎಲ್‌ಎ ನಾಯಕತ್ವ ಪತ್ತೆಹಚ್ಚಿತು (ಅವರ ಹತ್ಯೆಗಾಗಿ ಎರಡು ಬಾರಿ ವಿಫಲ ಯತ್ನ ಮಾಡಲಾಯಿತು).

1974 ಹಾಗೂ 1977ರ ನಡುವೆ ನೆಟೊ ಎಂಪಿಎಲ್‌ಎ-ಲೇಬರ್ ಪಾರ್ಟಿಯ ಅಧ್ಯಕ್ಷರಾಗಿದ್ದರು.

ಅನೇಕ ವರ್ಷ ಹೊರದೇಶಗಳಲ್ಲಿದ್ದನಂತರ ನೆಟೊ 1975ರ ಫೆಬ್ರವರಿ 4ರಂದು ಅಂಗೋಲಕ್ಕೆ ಹಿಂದಿರುಗಿದರು.

1975ರ ನವಂಬರ್ 11ರಂದು ಅಂಗೋಲದ ಸ್ವಾತಂತ್ರ್ಯ ಘೋಷಣೆಯೊಂದಿಗೆ ನೆಟೊ ಅಂಗೋಲ ಜನತಾ ಗಣತಂತ್ರದ ಪ್ರಥಮ ಅಧ್ಯಕ್ಷರಾದರು, ಎಂಪಿಎಲ್‌ಎ ರಚಿಸಿದ ಸರಕಾರದ ಅಧಿಪತಿಯಾದರು. ಅಂಗೋಲ ರಾಷ್ಟ್ರೀಯ ಸೈನ್ಯದ ಕಮಾಂಡರ್-ಇನ್-ಚೀಫ್ ಆದರು. 1975ರ ನವಂಬರ್‌ನಿಂದ 1979ರ ಸೆಪ್ಟೆಂಬರ್‌ವರೆಗೆ ಅಂಗೋಲ ಜನತಾ ಗಣತಂತ್ರದ ಕ್ರಾಂತಿ ಕೌನ್ಸಿಲ್‌ನ ಅಧ್ಯಕ್ಷರಾಗಿದ್ದರು.

ನೆಟೊ ಸೋವಿಯತ್ ಒಕ್ಕೂಟಕ್ಕೆ 1967, 1970, 1971, 1973, 1976, 1977, 1978 ಹಾಗೂ 1979ರಲ್ಲಿ ಭೇಟಿ ಕೊಟ್ಟಿದ್ದರು.

1976ರ ಅಕ್ಟೋಬರ್ 8ರಂದು ಅವರು ಸೋವಿಯತ್ ಒಕ್ಕೂಟ ಮತ್ತು ಅಂಗೋಲ ಜನತಾ ಗಣತಂತ್ರಗಳ ನಡುವೆ ಸ್ನೇಹ ಸಹಕಾರಗಳ ಒಡಂಬಡಿಕೆಗೆ ಸಹಿ ಹಾಕಿದರು.

1979ರ ಸೆಪ್ಟೆಂಬರ್ ಆರಂಭದಲ್ಲಿ ನೆಟೊ ಸೋವಿಯತ್ ಒಕ್ಕೂಟಕ್ಕೆ ವೈದ್ಯಕೀಯ ಚಿಕಿತ್ಸೆಗಾಗಿ ಆಗಮಿಸಿದರು. ಸೆಪ್ಟೆಂಬರ್ 10ರಂದು ಶಸ್ತ್ರಕ್ರಿಯೆಯ ನಂತರ ಅಸು ನೀಗಿದರು.

ಸ್ವಾತಂತ್ರ್ಯ ಗಳಿಸಿಕೊಂಡಿರುವ ಆಫ್ರಿಕನ್ ದೇಶಗಳೆಲ್ಲೆಲ್ಲ, ಈ ಗುರಿ ಸಾಧನೆಗಾಗಿ ಅಂಗೋಲ ನಡೆಸಿ ಬಂದ ದಾರಿಯೇ ಬಹುಶಃ ಅತ್ಯಂತ ಕಠಿಣವಾಗಿದ್ದಿತು. ಅಂಗೋಲದ ದೇಶಪ್ರೇಮಿಗಳೇ ಆಗಿನ ಪೋರ್ಚುಗೀಸ್ ವಸಾಹತುಗಳೆಲ್ಲೆಲ್ಲ ಲುಆಂಡಾದಲ್ಲಿ 1961ರ ಫೆಬ್ರವರಿ 4ರಂದು ಸಶಸ್ತ್ರ ಬಂಡಾಯ ಪ್ರಾರಂಭಿಸಿದ ಮೊದಲ ಜನರಾಗಿದ್ದರು. ಆಗ ಪೋರ್ಚುಗಾಲ್‌ನಲ್ಲಿದ್ದ ಸಲಜಾರ್ ಫ್ಯಾಸಿಸ್ಟ್ ಸರ್ವಾಧಿಕಾರವು ವಸಾಹತು ಜನತೆಗಳಿಗೂ ವಸಾಹತು ಪ್ರಭುದೇಶದಲ್ಲಿನ ಆಳುವ ವೃತ್ತಗಳಿಗೂ ನಡುವಿನ ಘರ್ಷಣೆಯನ್ನು ಶಾಂತಿಯುತವಾಗಿ ಪರಿಹರಿಸುವುದನ್ನು ಸಂಪೂರ್ಣವಾಗಿ ತಿರಸ್ಕರಿಸಿದ್ದಿತು. 1961ರ ಬಂಡಾಯವು ವಿದೇಶೀ ದಬ್ಬಾಳಿಕೆಯ ವಿರುದ್ಧ ದೃಢ ನಿರ್ಧಾರದ ಹೋರಾಟಕ್ಕೆ ನಾಂದಿ ಹಾಡಿತು. ಅದು ಅಂಗೋಲದ ಮತ್ತಿತರ ಪೋರ್ಚುಗೀಸ್ ವಸಾಹತುಗಳ ಜನರಿಗೆ ಹೋರಾಟಕ್ಕೆ ನೀಡಿದ ಒಂದು ಕರೆಧ್ವನಿಯಾಗಿದ್ದಿತು.

ಆದರೆ ಲುಆಂಡಾ ಬಂಡಾಯವನ್ನು ಸರಿಯಾಗಿ ಸಂಘಟಿಸಲಾಗಿರಲಿಲ್ಲ. ಅದರ ಸಂಘಟನಕಾರರು ಫ್ಯಾಸಿಸ್ಟ್ ಆಡಳಿತದ ವಿರುದ್ಧ ಹೋರಾಟದ ವಿಶಿಷ್ಟ ಪರಿಸ್ಥಿತಿಗಳನ್ನು ಗಣನೆಗೆ ತೆಗೆದುಕೊಂಡಿರಲಿಲ್ಲ. ಬಂಡಾಯದಲ್ಲಿ ಭಾಗವಹಿಸಿದ ಹೆಚ್ಚಿನ ಜನರು ಹೋರಾಟದ ಗುರಿಗಳೇನು ಅನ್ನುವುದನ್ನೇ ತಿಳಿದಿರಲಿಲ್ಲ. ವಸಾಹತು ಸೈನ್ಯ ದಳಗಳು ಬಂಡಾಯವನ್ನು ಭೀಕರವಾಗಿ ಹತ್ತಿಕ್ಕಿದವು. ಅನೇಕ ಕೆಚ್ಚೆದೆಯ ಅಂಗೋಲ ದೇಶಭಕ್ತರು ಕೊಲ್ಲಲ್ಪಟ್ಟರು. ಇದಾದನಂತರ ರಾಷ್ಟ್ರೀಯ-ವಿಮೋಚನಾ ಶಕ್ತಿಗಳನ್ನು ಪುನರ್ರಚಿಸಲಾಯಿತು, ಸುದೀರ್ಘ ಸಶಸ್ತ್ರ ಹೋರಾಟಕ್ಕೆ ಸಿದ್ಧತೆ ಮಾಡಲಾಯಿತು. ವಿದೇಶೀ ದುರಾಕ್ರಮಣವನ್ನು ಹಿಮ್ಮೆಟ್ಟಿಸಿ, ಅಂತರರಾಷ್ಟ್ರೀಯ ಸಾಮ್ರಾಜ್ಯವಾದದ ಬೆಂಬಲ ಪಡೆದಿದ್ದ ಪ್ರತ್ಯೇಕತಾವಾದಿ ಗುಂಪುಗಳನ್ನು ಪರಾಭವಗೊಳಿಸಿ, ಸಾರ್ವಭೌಮ ಆಫ್ರಿಕನ್ ದೇಶಗಳ ನಡುವೆ ತನ್ನ ಸ್ಥಾನ ಕಂಡುಕೊಳ್ಳಲು ಅಂಗೋಲಕ್ಕೆ 15 ವರ್ಷಗಳ ಸತತವಾದ ಪಟ್ಟುಹಿಡಿದ ಸಶಸ್ತ್ರ ಹೋರಾಟವೇ ಅವಶ್ಯವಾಯಿತು.

ಅಂಗೋಲದ ಜನರು ಈ ಎಲ್ಲ ಅಗ್ನಿಪರೀಕ್ಷೆಯ ಮೂಲಕ ಗೌರವದಿಂದ ಯಶಸ್ವಿಯಾಗಿ ಹೊರಬೀಳುವುದಕ್ಕೆ ಮುಖ್ಯ ಕಾರಣವೆಂದರೆ, ಅವರ ಬಳಿ ತುಂಬ ಅನುಭವ ಪಡೆದಿದ್ದ, ಸತ್ವಪರೀಕ್ಷೆಗಳಲ್ಲಿ ಗೆದ್ದು ಬಂದಿದ್ದ ಮುಂಚೂಣಿ

ಎಂಪಿಎಲ್‌ಎ ಇದ್ದುದು. ಈ ಸಂಸ್ಥೆಗೆ ಅಂತರರಾಷ್ಟ್ರೀಯ ಕಾರ್ಮಿಕರ, ಕಮ್ಯೂನಿಸ್ಟ್ ಹಾಗೂ ರಾಷ್ಟ್ರೀಯ-ವಿಮೋಚನಾ ಚಳವಳಿಗಳ ಬೆಂಬಲವಿದ್ದಿತು. ಸುಸಂಗತವಾಗಿ ಐಕ್ಯಗೊಂಡಿದ್ದ ಧೀರ ಕ್ರಾಂತಿಕಾರಿಗಳ ಒಂದು ವೃಂದ ಆ ಸಂಸ್ಥೆಗೆ ನಾಯಕನಾಗಿದ್ದಿತು. ಈ ನಾಯಕ ವೃಂದದಲ್ಲಿ ಅಗ್ರಗಣ್ಯರಾಗಿದ್ದವರೆಂದರೆ ನಿಸ್ಸಂದೇಹವಾಗಿಯೂ ಎಂಪಿಎಲ್‌ಎಯ ಸರ್ವಮಾನ್ಯ ನಾಯಕ ಅಗೊಸ್ತಿನೊ ನೆಟೊ.

ನೆಟೊರವರು ವಸಾಹತು ಆಡಳಿತದ ಕೃಪಾಶ್ರಯದ ಕೆಳಗೆ (ಸ್ಥಳೀಯ ಜನರ ಸಾಮಾನ್ಯ ಜೀವನ ಮಟ್ಟಕ್ಕೆ ಹೋಲಿಸಿದಂತೆ) ಸುಖಸೌಲಭ್ಯಗಳ ನೆಮ್ಮದಿಯ ಜೀವನ ನಡೆಸಬಹುದಿತ್ತು. ಆದರೆ ಅವರು ರಾಷ್ಟ್ರೀಯ-ವಿಮೋಚನಾ ಹೋರಾಟದ ತ್ಯಾಗ, ನಷ್ಟ, ಅಪಾಯಗಳಿಂದ ಕೂಡಿದ ಬಾಳನ್ನೇ ಹೆಚ್ಚು ಇಷ್ಟಪಟ್ಟಂಥ ಕೆಲವೇ ಖ್ಯಾತ ಆಫ್ರಿಕನ್ ಕ್ರಾಂತಿಕಾರಿ ಬುದ್ಧಿಜೀವಿಗಳ ಸಾಲಿನಲ್ಲಿ ನಿಲ್ಲುವುದನ್ನೇ ಆಯ್ದುಕೊಂಡರು. ಈ ಬುದ್ಧಿಜೀವಿಗಳೇ ರಾಷ್ಟ್ರೀಯ ಕ್ರಾಂತಿಕಾರಿ ಚಳವಳಿಗೆ ಸಂಘಟನೆ ಹಾಗೂ ವಿಚಾರಧಾರೆ ಒದಗಿಸಿಕೊಟ್ಟ ಬೀಜಕೇಂದ್ರವಾಗಿದ್ದರು. ಅವರು ಪೋರ್ಚುಗೀಸ್ ವಸಾಹತುವಾದದಿಂದ ಮರ್ದಿತವಾಗಿದ್ದ ಜನಸಮೂಹಗಳನ್ನು ಹೋರಾಟಕ್ಕೆ ಅಣಿನೆರೆಯಿಸುವ ಮತ್ತು ಅವರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ವಿಕಾಸಗೊಳಿಸುವ ಮುಖ್ಯ ಕಾರ್ಯವನ್ನು ನೆರವೇರಿಸಿದರು.

ಒಳ್ಳೆಯ ವೈದ್ಯರೂ ಪ್ರತಿಭಾನ್ವಿತ ಕವಿಯೂ ಆಗಿದ್ದ ನೆಟೊ ದೇಶಭಕ್ತಿ ಹಾಗೂ ಸಾಮಾಜಿಕ ನ್ಯಾಯದ ಉದಾತ್ತ ಭಾವನೆಗಳಿಂದ ಪ್ರೇರಿತರಾಗಿ ತಾಯ್ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದನ್ನೇ ತಮ್ಮ ಬಾಳಿನ ಪರಮ ಧ್ಯೇಯವನ್ನಾಗಿ ಮಾಡಿಕೊಂಡರು.

1940ರ ದಶಕದ ಹೊತ್ತಿಗಾಗಲೇ ಅವರ ವಿಶೇಷ ಕಾವ್ಯಾತ್ಮಕ ಪ್ರತಿಭೆಯು ಅವರನ್ನು ಅಂಗೋಲದ ರಾಷ್ಟ್ರೀಯ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ ಚಳವಳಿಯಲ್ಲಿ ಒಬ್ಬ ಪ್ರಮುಖ ವ್ಯಕ್ತಿಯನ್ನಾಗಿ ಮಾಡಿದ್ದಿತು. ಅವರ ಚೊಚ್ಚಲ ಕೃತಿಗಳೂ ದೇಶದ ಮುಂದಿದ್ದ ಪ್ರಮುಖ ಸಮಸ್ಯೆಯೊಂದಿಗೆ–ಅಂಗೋಲವನ್ನು ವಸಾಹತು ದಬ್ಬಾಳಿಕೆಯಿಂದ ವಿಮೋಚನೆಗೊಳಿಸುವ ಸಮಸ್ಯೆಯೊಂದಿಗೆ–ನಿಕಟ ಸಂಬಂಧ ಹೊಂದಿದ್ದವು.

ಸಾಕಷ್ಟು ಹಣ ಕೂಡಿಸಿಕೊಂಡು ನೆಟೊ 1947ರಲ್ಲಿ ಪೋರ್ಚುಗಾಲ್‌ಗೆ ಹೋಗಿ ಮೊದಲು ಲಿಸ್ಬನ್ ವಿಶ್ವವಿದ್ಯಾಲಯದಲ್ಲೂ ಅನಂತರ ಕೊಯಿಂಬ್ರ ವಿಶ್ವವಿದ್ಯಾಲಯದಲ್ಲೂ ವೈದ್ಯಕೀಯ ವ್ಯಾಸಂಗ ನಡೆಸಿದರು.

ನೆಟೊರವರು 1952ರಲ್ಲಿ ಸ್ಟಾಕ್‌ಹೋಂ ಶಾಂತಿ ಮನವಿಗೆ ಸಹಿ ಸಂಗ್ರಹಿಸಿದುದಕ್ಕಾಗಿ ಮೊದಲ ಬಾರಿಗೆ ದಸ್ತಗಿರಿಯಾದರು. ಕಾರಾಗೃಹದಿಂದ ಹೊರಬಂದನಂತರ ಅವರು ಆಮೂಲಾಗ್ರ ಸುಧಾರಣೆಯನ್ನು ಪ್ರತಿಪಾದಿಸುತ್ತಿದ್ದ

ವಿದ್ಯಾರ್ಥಿ ಚಳವಳಿಯಲ್ಲಿ ಕ್ರಿಯಾಶೀಲರಾಗಿ ಭಾಗವಹಿಸತೊಡಗಿದರು. ಅವರು ಈ ಚಳವಳಿಯಲ್ಲಿ ಪೋರ್ಚುಗೀಸ್ ವಸಾಹತುಗಳ ಯುವ ವಿದ್ಯಾರ್ಥಿಗಳನ್ನು ಪ್ರತಿನಿಧಿಸುತ್ತಿದ್ದರು. ನೆಟೋರವರು ಮತ್ತೆ 1955ರಲ್ಲಿ ಸಭೆಯೊಂದರಲ್ಲಿ ಬಂಧಿಸಲ್ಪಟ್ಟರು. ಅವರು ಈ ಬಾರಿ 1957ರವರೆಗೆ ತುರಂಗವಾಸಕ್ಕೆ ಗುರಿಯಾಗಿದ್ದರು. ಅವರ ಬಿಡುಗಡೆಯಾಗಬೇಕೆಂಬ ಮನವಿಗೆ 1957ರಲ್ಲಿ ವಿಶ್ವವಿಖ್ಯಾತ ಸಾಹಿತಿಗಳಾದ ಜೀನ್-ಪಾಲ್ ಸಾರ್ತ್ರೆ, ಲೂಯಿ ಅರಗಾನ್, ಸಿಮೋನ್ ದಿ ಬೋವ್ವ, ಆರ್. ನಿಕೊಲಾಸ್ ಗಿಲ್ಯೇನ್, ಡಿಯೆಗೊ ರಿವೆರಾ ಮುಂತಾದವರು ಸಹಿ ಹಾಕಿದ್ದರೆಂಬ ವಾಸ್ತವಾಂಶವೇ ಅವರಾಗಲೇ "ಪೋರ್ಚುಗೀಸ್" ಆಫ್ರಿಕದ ಒಬ್ಬ ವರಕವಿಯಾಗಿ ಅಂತರರಾಷ್ಟ್ರೀಯ ಖ್ಯಾತಿ ಗಳಿಸಿದ್ದರೆಂಬುದಕ್ಕೆ ಸಾಕ್ಷಿಯಾಗಿದ್ದಿತು.

1958ರಲ್ಲಿ ನೆಟೊ ತಮ್ಮ ವೈದ್ಯಕೀಯ ವ್ಯಾಸಂಗ ಪೂರೈಸಿ ಅಂಗೋಲಕ್ಕೆ ಹಿಂದಿರುಗಿದರು. ಅಲ್ಲಿ ಅವರು ಕೂಡಲೇ 1956ರಲ್ಲಿ ಸಂಸ್ಥಾಪಿತವಾಗಿದ್ದ ಎಂಪಿಎಲ್‌ಎ ಸಂಸ್ಥೆಯ ನಾಯಕರಾದರು. ಅದೇ ಹೊತ್ತಿನಲ್ಲಿ ವೈದ್ಯ ವೃತ್ತಿಯಲ್ಲೂ ನಿರತರಾಗಿದ್ದರು. ಅವರು 1960ರ ಜೂನ್ 8ರಂದು ಮೂರನೆಯ ಬಾರಿಗೆ ದಸ್ತಗಿರಿಯಾಗಿ ಪೋರ್ಚುಗಲ್‌ನ ಸೆರೆಮನೆಯೊಂದಕ್ಕೆ ಕಳುಹಲ್ಪಟ್ಟರು. ಅನಂತರ ಕೇಪ್ ವರ್ಡೆ ದ್ವೀಪಗಳಲ್ಲೊಂದಕ್ಕೆ ಅವರನ್ನು ಗಡೀಪಾರು ಮಾಡಲಾಯಿತು. ನೆಟೋರವರ ಬಂಧನದ ಸುದ್ದಿ ತಿಳಿದಾಗ ಅಂಗೋಲದ ಜನರು ಪ್ರತಿಭಟನೆಯ ಬೃಹತ್ ಪ್ರದರ್ಶನಗಳನ್ನು ನಡೆಸಿದರು. ಈ ಪ್ರದರ್ಶನಗಳು ಎಷ್ಟು ಭಾರಿಯವಾಗಿದ್ದವೆಂದರೆ ಅವುಗಳನ್ನು ಹತ್ತಿಕ್ಕಲು ಅಧಿಕಾರಿಗಳು ವಸಾಹತು ಸರಕಾರದ ಇತಿಹಾಸದಲ್ಲೇ ಮೊದಲ ಬಾರಿಗೆ ಪೊಲೀಸ್ ದಳಗಳ ಜೊತೆಗೆ ಸೈನ್ಯದಳಗಳನ್ನೂ ಬಳಸಬೇಕಾಯಿತು. ಈ ಕಾಲದಲ್ಲೇ ನೆಟೋರವರನ್ನು ಎಂಪಿಎಲ್‌ಎ ಸಂಸ್ಥೆಯ ಗೌರವ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಇದು ಅವರು ವಿಮೋಚನಾ ಚಳವಳಿಗೆ ಸಲ್ಲಿಸಿದ ಸೇವೆಯ ಮನ್ನಣೆಯ ಕುರುಹಾಗಿದ್ದಿತು.

1961ರ ನವೆಂಬರ್‌ನಲ್ಲಿ ನೆಟೋರವರನ್ನು ಪೋರ್ಚುಗಲ್‌ನ ಮಿಲಿಟರಿ ಸೆರೆಮನೆಗೆ ವರ್ಗಾಯಿಸಲಾಯಿತು. 1962ರಲ್ಲಿ ರಾಜಕೀಯ ಬಂದಿಗಳ ಬಿಡುಗಡೆಗಾಗಿ ಎಂಪಿಎಲ್‌ಎ ಪ್ರಾರಂಭಿಸಿದ ಅಂತರರಾಷ್ಟ್ರೀಯ ಚಳವಳಿಯ ಒತ್ತಡದ ಫಲವಾಗಿ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ ಸ್ವಲ್ಪ ಕಾಲ ಅವರು ಲಿಸ್ಬನ್ ಬಳಿಯೇ ಗೃಹಬಂಧನದಲ್ಲಿ ಉಳಿಯಬೇಕಾಯಿತು. ಕೆಲವು ಪೋರ್ಚುಗೀಸ್ ಮಿತ್ರರ ಸಹಾಯದಿಂದ ಅವರು ದೇಶವನ್ನು ಶಾಸನ ಬಾಹಿರವಾಗಿ ಬಿಟ್ಟು ಹೋಗುವುದರಲ್ಲಿ ಯಶಸ್ವಿಯಾದರು. 1962ರ ಜುಲೈನಲ್ಲಿ ಅವರು ಲಿಯೊಪೋಲ್ಡ್‌ವಿಲೆ(ಈಗ ಕಿನ್‌ಷಾಸಾ)ಗೆ ಆಗಮಿಸಿದರು. 1961ರ ಬಂಡಾಯದಲ್ಲಿ ಪರಾಭವಗೊಂಡನಂತರ ಎಂಪಿಎಲ್‌ಎ ತನ್ನ ನೆಲೆಯನ್ನು ಇಲ್ಲೇ ತಾತ್ಕಾಲಿಕವಾಗಿ ಸ್ಥಾಪಿಸಿಕೊಂಡಿದ್ದಿತು. ಅಲ್ಲಿಂದಾಚೆಗೆ ನೆಟೊ ತಮ್ಮ ಸಾವಿನ

ವರೆಗೂ ಅಂಗೋಲನರ ಹೋರಾಟದ ನೇತಾರ ಹಾಗೂ ಶಾಶ್ವತ ನಾಯಕರಾಗಿದ್ದರು. 1961ರ ಗಹನವಾದ ಪರಾಭವದ ನಂತರ ಎಂಪಿಎಲ್‌ಎ ಪುನರುಜ್ಜೀವನಗೊಂಡುದರ ಪ್ರಶಸ್ತಿ ನೆಟೋರವರಿಗೇ ಸಲ್ಲಬೇಕು.

1962ರ ಡಿಸೆಂಬರ್‌ನಲ್ಲಿ ಎಂಪಿಎಲ್‌ಎ ಸಂಸ್ಥೆಯ ಮೊದಲ ರಾಷ್ಟ್ರೀಯ ಸಮ್ಮೇಳನ ಲಿಯೊಪೋಲ್ಡ್‌ವಿಲೆಯಲ್ಲಿ ಜರುಗಿತು. ಇದು ಹೋರಾಟಕ್ಕೆ ಮುಂದಿನ ಘಟ್ಟವನ್ನು ಸಿದ್ಧಗೊಳಿಸುವ ಕಷ್ಟಕರವಾದ ಮಾರ್ಗದಲ್ಲಿ ಒಂದು ಹೆಜ್ಜೆಗುರುತಾಗಿದ್ದಿತು. ಈ ಸಮ್ಮೇಳನ ನೆಟೋರವರ ಮಾರ್ಗದರ್ಶನದಲ್ಲೇ ಜರುಗಿತು. 1961ರ ಘಟನೆಗಳ ಅನುಭವದ ಮೇಲೆ ಎಂಪಿಎಲ್‌ಎ ಹೊಸ ಕಾರ್ಯಯೋಜನೆಯೊಂದನ್ನು ಮುಂದಿರಿಸಿತು. ಸ್ವಾತಂತ್ರ್ಯ ಸಾಧಿಸುವುದು ಶಾಂತಿಯುತ ವಿಧಾನಗಳಿಂದ ಸಾಧ್ಯವಿಲ್ಲವೆಂದು ಕಂಡುಬಂದುದರಿಂದ ಚಳವಳಿಯು ತನ್ನ ಗಮನವನ್ನು ಸಶಸ್ತ್ರ ಹೋರಾಟದ ಕಡೆಗೆ ತಿರುಗಿಸಿತು. ಆದರೆ ಅದಕ್ಕಾಗಿ ಕೂಲಂಕಷ ಹಾಗೂ ಸರ್ವತೋಮುಖ ಸಿದ್ಧತೆಯಾಗಬೇಕೆಂಬ ಅಂಶವನ್ನು ಒತ್ತಿತಿಳಿಸಿತು. ರೈತರನ್ನೂ ವಿಮೋಚನಾ ಚಳವಳಿಯೊಳಕ್ಕೆ ಸೆಳೆಯುವ ಉದ್ದೇಶದಿಂದ ರೈತರ ಮಧ್ಯೆ ರಾಜಕೀಯ ಹಾಗೂ ಸಂಘಟನಾತ್ಮಕ ಚಟುವಟಿಕೆಯನ್ನು ಬೆಳೆಸಬೇಕೆಂದೂ ಸಮ್ಮೇಳನ ಒಂದು ಅತ್ಯಂತ ಮುಖ್ಯ ನಿರ್ಣಯವನ್ನು ಅನುಮೋದಿಸಿತು.

1961ರ ಅನುಭವ ತೋರಿಸಿಕೊಟ್ಟಂತೆ ಹಠಾತ್ ಕ್ರಾಂತಿಕಾರಿ ಕ್ರಿಯೆ ಅಥವಾ ಮಿಲಿಟರಿ ಕ್ಷಿಪ್ರಕ್ರಾಂತಿ ಸಾಧ್ಯವಿಲ್ಲವೆಂದು ಅಂಗೋಲದ ದೇಶಪ್ರೇಮಿಗಳು ತಿಳಿದಿದ್ದರು. ವಸಾಹತು ದಬ್ಬಾಳಿಕೆಯಿಂದ ಮುಕ್ತಗೊಳ್ಳಲು ಇದ್ದ ಏಕೈಕ ಮಾರ್ಗವೆಂದರೆ ಕಠಿಣವಾದ ದೀರ್ಘವಾದ ಗೆರಿಲ್ಲಾ ಕದನ. ಇದನ್ನೇ ಒಂದು ಪೂರ್ಣ ದೇಶಪ್ರೇಮಿ ಯುದ್ಧವನ್ನಾಗಿ ವಿಕಾಸಗೊಳಿಸಬೇಕಿದ್ದಿತು. ಆದರೆ ಇದಕ್ಕೆ ವ್ಯವಸ್ಥಿತವಾದ, ಸಕಾಲಿಕವಾದ ದೀರ್ಘವಾದ ಹಾಗೂ ಸಮಗ್ರವಾದ ಸಿದ್ಧತೆ ಅವಶ್ಯವಾಗಿದ್ದಿತು. ಈ ಗುರಿಯನ್ನು ಮುಂದಿಟ್ಟುದೇ ಎಂಪಿಎಲ್‌ಎಯ ಈ ಮೊದಲ ರಾಷ್ಟ್ರೀಯ ಸಮ್ಮೇಳನದ ಚಾರಿತ್ರಿಕ ಪ್ರಾಮುಖ್ಯವಾಗಿದ್ದಿತು. ಜನರನ್ನು ರಾಜಕೀಯವಾಗಿ ಸನ್ನದ್ಧಗೊಳಿಸಬೇಕು, ರಾಷ್ಟ್ರೀಯ ಹಿತಗಳೂ ವಸಾಹತು ದಬ್ಬಾಳಿಕೆಯೂ ಹೊಂದಿಕೊಂಡು ಹೋಗಲಾರವು ಎಂಬುದನ್ನು ಸಶಸ್ತ್ರ ಹೋರಾಟ ಅನಿವಾರ್ಯ ಎಂಬುದನ್ನು ಮನಗಾಣುವಂತೆ ಜನರನ್ನು ಸುಶಿಕ್ಷಿತಗೊಳಿಸಬೇಕು ಎಂದು ಸಮ್ಮೇಳನ ಸ್ಪಷ್ಟಪಡಿಸಿತು. ಆದ್ದರಿಂದ ಮಿಲಿಟರಿ ಪಡೆಗಳಿಗೆ ರಾಜಕೀಯ ಬೋಧನೆ ನೀಡುವುದನ್ನು, ಮಿಲಿಟರಿ ಹಾಗೂ ರಾಜಕೀಯ ಕಾರ್ಯಕರ್ತರಿಗೆ ತರಬೇತಿ ನೀಡುವುದನ್ನು, ಪ್ರಥಮ ಕಾರ್ಯಭಾರವನ್ನಾಗಿ ಮುಂದಿಡಲಾಯಿತು. ವಸ್ತು ಹಾಗೂ ತಾಂತ್ರಿಕ ಸ್ಥಿತಿಗತಿಗಳ ಕಡೆಗೂ ಸಾಕಷ್ಟು ಗಮನ ನೀಡಲಾಯಿತು. ಎಂಪಿಎಲ್‌ಎ ಸಶಸ್ತ್ರ ಹೋರಾಟಕ್ಕೆ ವ್ಯವಸ್ಥಿತ ತಯಾರಿ ನಡೆಸುವ ಕಾರ್ಯವನ್ನು ಕೈಕೊಂಡಿತು. ಇದಕ್ಕಾಗಿ ಚಳವಳಿಯು ಅನೇಕ ಕಾರ್ಯಕರ್ತರು

ಗಳನ್ನು ಸ್ನೇಹಪರ ದೇಶಗಳಿಗೆ, ಪ್ರಥಮತಃ ಸಮಾಜವಾದಿ ದೇಶಗಳಿಗೆ, ಕಳುಹಿಸಿಕೊಡಲಾಯಿತು. ಎಂಪಿಎಲ್‌ಎ ಸಂಸ್ಥೆಯ ಸಂಘಟನೆಯನ್ನು ಬಲಗೊಳಿಸಲೂ ಸಮ್ಮೇಳನ ಕ್ರಮಗಳನ್ನು ಅಂಗೀಕರಿಸಿತು. ವಿವಿಧ ಕಾರ್ಯಕ್ರಮಗಳನ್ನು ಸುಸಂಬದ್ಧಗೊಳಿಸಲೂ, ಆಚರಣೆಯಲ್ಲಿ ಮಾರ್ಗದರ್ಶನ ನೀಡಲೂ ಒಂದು ಮಿಲಿಟರಿ ಹಾಗೂ ರಾಜಕೀಯ ಸಮಿತಿಯನ್ನು ಸ್ಥಾಪಿಸಲಾಯಿತು. ನೆಟೋರವರನ್ನು ಎಂಪಿಎಲ್‌ಎಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು.

ಎಂಪಿಎಲ್‌ಎಯ ಮೊದಲ ರಾಷ್ಟ್ರೀಯ ಸಮ್ಮೇಳನವು ವಿಮೋಚನಾ ಹೋರಾಟಕ್ಕೆ ಸಂಬಂಧಿಸಿ ಒಂದು ಹೊಸ ಮನೋಧರ್ಮವನ್ನು ನಿರೂಪಿಸಿತು. ಅಲ್ಲಿಂದಾಚೆಗೆ ಸಶಸ್ತ್ರ ಪ್ರತಿರೋಧವನ್ನು ವಿಶಿಷ್ಟವಾಗಿ ಒಂದು ಮಿಲಿಟರಿ ಚರ್ಯೆಯನ್ನಾಗಿ ಅಲ್ಲ, ಆದರೆ ರಾಜಕೀಯ ಹೋರಾಟದ ಒಂದು ರೂಪವನ್ನಾಗಿ ಪರಿಗಣಿಸಲಾಯಿತು. ಅದಕ್ಕಾಗಿ ಎಲ್ಲ ದೇಶಪ್ರೇಮಿ ಶಕ್ತಿಗಳನ್ನೂ ಅಣಿನೆರೆಯಿಸುವುದು, ಒಂದುಗೂಡಿಸುವುದು, ಅವುಗಳ ರಾಜಕೀಯ ಪ್ರಜ್ಞೆಯನ್ನು ಹೆಚ್ಚಿಸುವುದು ಅವಶ್ಯವಾಗಿದ್ದಿತು. ಅದಕ್ಕೆ ಅಂಗೋಲದಲ್ಲಷ್ಟೆ ಅಲ್ಲ ಅದರ ಗಡಿಗಳಾಚೆಯೂ ಇದ್ದ ಎಲ್ಲ ವಸಾಹತುವಾದ ವಿರೋಧಿ ಶಕ್ತಿಗಳೊಂದಿಗೂ, ಅದರಲ್ಲೂ ವಿಶೇಷವಾಗಿ ಸಾಮ್ರಾಜ್ಯಶಾಹಿ ದುರಾಕ್ರಮಣದ ವಿರುದ್ಧ ಹೋರಾಡುತ್ತಿರುವ ಜನತೆಗಳಿಗೆ ಬೆಂಬಲ ನೀಡಲು ಸದಾ ಸಿದ್ಧವಾಗಿರುವಂಥ ಸಮಾಜವಾದಿ ದೇಶಗಳೊಂದಿಗೆ ಮೈತ್ರೀಕೂಟ ಹಾಗೂ ಸಹಕಾರ ಏರ್ಪಡಿಸಿಕೊಳ್ಳುವುದೂ ಅಗತ್ಯವಾಗಿದ್ದಿತು. ಈ ನೀತಿಮಾರ್ಗವನ್ನು ತೀವ್ರ ಎಡಪಂಥದ ಶಕ್ತಿಗಳು ವಿರೋಧಿಸಿದವು. ಅವುಗಳಿಗೆ ಎಂಪಿಎಲ್‌ಎಯ ಮಾಜಿ ಪ್ರಧಾನ ಕಾರ್ಯದರ್ಶಿ ವಿರಿಯಾಟೊ ದ ಕ್ರೂಜ್ ಅಧಿಪತಿಯಾಗಿದ್ದರು. ಈ ಶಕ್ತಿಗಳನ್ನು ಅಂತಿಮವಾಗಿ 1962ರಲ್ಲಿ ಚಳವಳಿಯಿಂದ ಹೊರಹಾಕಲಾಯಿತು. ಈ ಶಕ್ತಿಗಳು "ತಮ್ಮ ಸ್ವಂತ ಶಕ್ತಿಯ ಮೇಲೆ ಆಧರಿಸಿರಬೇಕು" ಎಂದು ಪ್ರತಿಪಾದಿಸುತ್ತಿದ್ದವು, ಎಂಪಿಎಲ್‌ಎಯನ್ನು ಸಮಾಜವಾದಿ ಸಮುದಾಯದ ದೇಶಗಳಿಂದಲೂ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯಿಂದಲೂ ಪ್ರತ್ಯೇಕಗೊಳಿಸಲು ಯತ್ನಿಸುತ್ತಿದ್ದವು, ಎಲ್ಲ ಪೋರ್ಚುಗೀಸ್ ಜನರ ಬಗೆಗೂ ಮಿಶ್ರ ಸಂತತಿಯ ಜನರ ಬಗೆಗೂ ಅಪನಂಬಿಕೆಯ ಕುಲವಾದೀ ಮನೋಭಾವವನ್ನು ತಳೆಯುವಂತೆ ಚಳವಳಿಯನ್ನು ಒತ್ತಾಯಿಸಲು ಯತ್ನಿಸುತ್ತಿದ್ದವು. ರಾಷ್ಟ್ರೀಯ-ವಿಮೋಚನಾ ಚಳವಳಿಯಲ್ಲಿ ಅಗ್ರಗಾಮಿ ಪಾತ್ರದ ಹಕ್ಕು ಸಾಧಿಸುತ್ತಿದ್ದ ಆಫ್ರಿಕನ್ ಬುಡಕಟ್ಟು ಸಂಘಟನೆಗಳಿಗೆ ಮೂಲಭೂತ ರಿಯಾಯಿತಿಗಳನ್ನು ತೋರಬೇಕೆಂದು ಈ ತೀವ್ರ ಎಡಪಂಥದ ವೃಂದ ಆಗ್ರಹಿಸುತ್ತಿದ್ದಿತು.

ಈ ಬುಡಕಟ್ಟು ಸಂಘಟನೆಯ ಪ್ರಭಾವವು ಪ್ರಬಲವಾಗಿದ್ದುದು ಅಂಗೋಲದಲ್ಲಿ ಸಾಮ್ರಾಜ್ಯವಾದ ವಿರೋಧಿ ಚಳವಳಿಗೆ ನಿಜವಾದ ಶಾಪವಾಗಿದ್ದಿತು.

ನಿಜ, ಅದು ಸ್ವಲ್ಪಮಟ್ಟಿಗೆ ಒಂದು ಏಕೀಕೃತ ಅಂಗೋಲ ರಾಷ್ಟ್ರ ರೂಪಿಸುವ ಪ್ರಕ್ರಿಯೆ ಇನ್ನೂ ಭ್ರೂಣಾವಸ್ಥೆಯಲ್ಲಿದ್ದುದರ ಫಲವಾಗಿದ್ದಿತು. ಅಲ್ಲಿ ಅಧಿಕ ಸಂಖ್ಯೆಯಲ್ಲಿ ಉಪಜನಾಂಗಗಳೂ (ಕೆಲವು ಲೆಕ್ಕಾಚಾರದ ಪ್ರಕಾರ 11) ಬುಡಕಟ್ಟುಗಳೂ (100ಕ್ಕೂ ಹೆಚ್ಚು) ಇದ್ದವು. ದೇಶದ ಭೂಪ್ರದೇಶದಾದ್ಯಂತ ಜನರ ಹಂಚಿಕೆಯೂ ಒಂದೇ ಸಮನಾಗಿರಲಿಲ್ಲ. ಆದರೆ ಅಂಗೋಲದಲ್ಲಾಗಲೀ ಇತರ ಆಫ್ರಿಕನ್ ದೇಶಗಳಲ್ಲಾಗಲೀ ಬುಡಕಟ್ಟುವಾದವು ಒಂದು ರಾಜಕೀಯ ವಿದ್ಯಮಾನವಾಗಿ ಕಾಣಿಸಿಕೊಂಡಿದ್ದುದಕ್ಕೆ ಮೂಲ ಕಾರಣ ದೇಶದ ನರಕುಲಸಂರಚನೆಯ ಸಂಕರ ಲಕ್ಷಣವೇನೂ ಆಗಿರಲಿಲ್ಲ, ಆದರೆ ಅಧಿಕಾರದಾಹಿ ಆಫ್ರಿಕನ್ ರಾಜಕಾರಣಿಗಳು ಬುಡಕಟ್ಟುವಾದವನ್ನು ತಮ್ಮ ಸ್ವಂತ ಸಂಕುಚಿತ ಧನಲೋಭದ ಗುರಿಗಳಿಗೆ ಬಳಸಿಕೊಳ್ಳುತ್ತಿದ್ದುದಾಗಿದ್ದಿತು, ಇಂತಹ ಆಶೋತ್ತರಗಳಿಗೆ ಸಾಮ್ರಾಜ್ಯಶಾಹಿ ಬೃಹತ್‌ರಾಷ್ಟ್ರಗಳು ಬೆಂಬಲ ನೀಡುತ್ತಿದ್ದುದಾಗಿದ್ದಿತು. ರಾಷ್ಟ್ರೀಯ-ವಿಮೋಚನಾ ಚಳವಳಿಯನ್ನು ನಾಶಗೊಳಿಸುವಂಥ ಯಾವುದೇ ಚರ್ಯೆಗೂ ಹಣಕಾಸು ಒದಗಿಸಲು ಸಾಮ್ರಾಜ್ಯಶಾಹಿ ಶಕ್ತಿಗಳು ಸದಾ ಸಿದ್ಧವಾಗಿರುತ್ತಿದ್ದವು.

ವಿದೇಶೀ ಹಸ್ತಕ್ಷೇಪ ಇಲ್ಲದೆ ಇದ್ದಾಗ, ರಾಷ್ಟ್ರೀಯ ಹಿತಗಳನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುತ್ತಿದ್ದ ಯಾವುದೇ ಆಫ್ರಿಕನ್ ರಾಜಕಾರಣಿಯ ಪಾತ್ರವೂ ಅವನು ದೇಶದಲ್ಲಿ ವಾಸ್ತವವಾಗಿ ಹೊಂದಿದ್ದ ಪ್ರಭಾವದಿಂದ ನಿರ್ಧರಿತವಾಗುತ್ತಿದ್ದಿತು. ಆದರೆ ಪ್ರತ್ಯೇಕತಾವಾದಿ ಕೈಗೊಂಬೆ ಗುಂಪುಗಳಿಗೆ ದೇಶದ ಹೊರಗಿನಿಂದ ಉತ್ತೇಜನವೂ ಉದಾರ ಧನಸಹಾಯವೂ ಲಭಿಸುತ್ತಿದ್ದವು. ಗುಂಪುಗಳು ರಾಷ್ಟ್ರೀಯ ಭೂಪ್ರದೇಶದ ಹೊರಗೆ ಪ್ರಬಲ ನೆಲೆಗಳನ್ನು ಸ್ಥಾಪಿಸಿಕೊಳ್ಳುವ ಸಾಧ್ಯತೆ ಇದ್ದಿತು. ಅವು ತಮ್ಮ ಯತ್ನಗಳನ್ನು ವಸಾಹತುವಾದದ ವಿರುದ್ಧ ಕೇಂದ್ರೀಕರಿಸಿರಲಿಲ್ಲ ಆದರೆ ನೈಜ ದೇಶಪ್ರೇಮಿ ಸ್ವಾತಂತ್ರ್ಯ ಯೋಧರೊಂದಿಗೆ ಪೈಪೋಟ ನಡೆಸುವುದರ ಮೇಲೆ ಕೇಂದ್ರೀಕರಿಸಿದ್ದವು.

ಅಪಾರ ನೈಸರ್ಗಿಕ ಸಂಪತ್ತು, ವಿಶಾಲ ಭೂಪ್ರದೇಶ ಹಾಗೂ ಉತ್ತಮ ಭೌಗೋಳಿಕ ಸ್ಥಾನದಿಂದಾಗಿ ಅಂಗೋಲ ಅಂತರರಾಷ್ಟ್ರೀಯ ಸಾಮ್ರಾಜ್ಯವಾದದ ದೃಷ್ಟಿಯಲ್ಲಿ ವ್ಯೂಹಾತ್ಮಕವಾಗಿ ಅತ್ಯಂತ ಮುಖ್ಯವಾದ ದೇಶವಾಗಿದ್ದಿತು. ಅಷ್ಟೇ ಅಲ್ಲ ಅದರ ಗಡಿಗಳಿಗೆ ಹೊಂದಿಕೊಂಡಂತೆ ಇದ್ದ ರಾಜ್ಯಗಳಲ್ಲಿ (ಜಾಯಿರ್) ಎಂತಹ ನಾಯಕರಿದ್ದರೆಂದರೆ ಅವರು ಎಂಪಿಎಲ್‌ಎಯ ಕ್ರಾಂತಿಕಾರಿ ನೀತಿಮಾರ್ಗವನ್ನು ಅನುಮೋದಿಸುತ್ತಿರಲಿಲ್ಲ ಇಲ್ಲದೇ ರಾಷ್ಟ್ರೀಯ-ವಿಮೋಚನಾ ಚಳವಳಿಗೆ ಬಹಿರಂಗವಾಗಿಯೇ ವಿರೋಧವಿದ್ದರು (ದಕ್ಷಿಣ ಆಫ್ರಿಕ ಗಣತಂತ್ರ ಆಕ್ರಮಿಸಿಕೊಂಡಿದ್ದ ನಮೀಬಿಯದ ಅಧಿಕಾರಿಗಳು). ಎಂಪಿಎಲ್‌ಎಯ ಸುಸಂಗತ ಸಾಮ್ರಾಜ್ಯವಾದ ವಿರೋಧಿ ನೀತಿಯು ಅವರಿಗೆ ಸೂಕ್ತವಾಗಿ ಕಂಡುಬರಲಿಲ್ಲ. ಅವರು ವಿವಿಧ ಬುಡಕಟ್ಟುವಾದಿ ಸಂದರ್ಭಸಾಧಕ ವೃಂದಗಳಿಗೆ ಎಲ್ಲ ಬೆಂಬಲ ನೀಡಿದರು. ಈ

ವೃಂದಗಳಿಗೆ ಜನಸಮೂಹದ ನಿಜವಾದ ಬೆಂಬಲವೇನೂ ಇರಲಿಲ್ಲ. ಅವು ಅಮೆರಿಕದಲ್ಲಿನ ಸಾಮ್ರಾಜ್ಯಶಾಹಿ ವೃತ್ತಗಳಿಂದಲೂ ಪಾಶ್ಚಿಮಾತ್ಯ ಬೃಹತ್ ರಾಷ್ಟ್ರಗಳಿಂದಲೂ ದಕ್ಷಿಣ ಆಫ್ರಿಕ ಗಣರಾಜ್ಯದ ಕುಲವಾದಿಗಳಿಂದಲೂ ಮಾರ್ಗದರ್ಶನ ಪಡೆಯುತ್ತಿದ್ದವು.

ಹೋಲ್ಡೆನ್ ರೊಬೆರ್ಟೋ ನಾಯಕತ್ವದಲ್ಲಿ ಜಾಯಿರ್‌ನಿಂದ ಕಾರ್ಯ ಜರುಗಿಸುತ್ತಿದ್ದ 'ಅಂಗೋಲ ವಿಮೋಚನಾ ರಾಷ್ಟ್ರೀಯ ರಂಗ' (ಎಫ್‌ಎನ್‌ಎಲ್‌ಎ) ಹಾಗೂ 'ಅಂಗೋಲದ ಸಂಪೂರ್ಣ ವಿಮೋಚನೆಯ ರಾಷ್ಟ್ರೀಯ ಒಕ್ಕೂಟ' (ಯುಎನ್‌ಐಟಿಎ) – ಇವು ಅಂಥವುಗಳಲ್ಲಿ ಎರಡು ಮುಖ್ಯ ವೃಂದಗಳಾಗಿದ್ದವು. ಈ 'ಯುನಿಟಾ' ಸಂಸ್ಥೆಯು 1966ರಲ್ಲಿ ಜೊನಾಸ್ ಸವಿಂಬಿಯವರ ನಾಯಕತ್ವದಲ್ಲಿ ಹುಟ್ಟಿಕೊಂಡಿದ್ದಿತು. ಇದು ಅಂಗೋಲದ ದಕ್ಷಿಣ ಭಾಗದಲ್ಲಿ ನೆಲೆಗೊಂಡಿದ್ದು ದಕ್ಷಿಣ ಆಫ್ರಿಕ ಗಣತಂತ್ರದ ಬೆಂಬಲ ಪಡೆದಿದ್ದಿತು.

ಅಮೆರಿಕದ ಕೇಂದ್ರ ಗೂಢಚಾರ ಸಂಸ್ಥೆ(ಸಿಐಎ)ಯ ಆಶ್ರಯದಲ್ಲಿ ಜಾಯಿರ್‌ನಿಂದ ಹೋಲ್ಡೆನ್ ರೊಬೆರ್ಟೋ ನಡೆಸುತ್ತಿದ್ದ ದ್ರೋಹಾತ್ಮಕ ಚಟುವಟಿಕೆಗಳು ಎಂಪಿಎಲ್‌ಎಗೆ ವಿಶೇಷವಾಗಿ ಕಷ್ಟಕರವಾದ ಪರಿಸ್ಥಿತಿಗಳನ್ನು ಉಂಟುಮಾಡಿದ್ದವು. ಎಂಪಿಎಲ್‌ಎಯನ್ನು ನಿಷೇಧಿಸಲಾಯಿತು. ಅದು ತನ್ನ ಕೇಂದ್ರವನ್ನು ಕಾಂಗೋ (ಬ್ರಾಜವಿಲ್)ಗೆ ವರ್ಗಾಯಿಸಿತು. ಅಲ್ಲಿ 1963ರಲ್ಲಿ ಪ್ರತಿಗಾಮಿ ಆಡಳಿತವನ್ನು ಕಿತ್ತೊಗೆದನಂತರ ಕ್ರಾಂತಿಕಾರಿ ಚಟುವಟಿಕೆ ಸಾಧ್ಯವಾಗಿದ್ದಿತು. ಹಾಗಾಗಿ 1964ರಲ್ಲಷ್ಟೆ ಎಂಪಿಎಲ್‌ಎ ಕಬಿಂದದಲ್ಲಿ ಸಶಸ್ತ್ರ ಹೋರಾಟಕ್ಕೆ ಸಿದ್ಧತೆಯನ್ನು ಪ್ರಾರಂಭಿಸಬಲ್ಲದಿದ್ದಿತು. 1961ರ ಪರಾಭವದನಂತರ ಸಿಕ್ಕಿಬಿದ್ದಿದ್ದ ಮುಗ್ಗಟ್ಟಿನ ಪರಿಸ್ಥಿತಿಯಿಂದ ಎಂಪಿಎಲ್‌ಎ ಹೊರಬಂದಿದ್ದಿತು ಮತ್ತು ಅಂಗೋಲದಲ್ಲಿ ಗಹನವಾದ ವಸಾಹತು ವಿರೋಧಿ ಮಿಲಿಟರಿ ಕ್ರಿಯೆ ಜರುಗಿಸುತ್ತಿದ್ದಂಥ ಏಕೈಕ ಚಳವಳಿಯಾಗಿ ಕಾಣಿಸಿಕೊಂಡಿದ್ದಿತು, ಎಂದು ಇದು ಸಾಧಿಸಿ ತೋರಿತು. ಅಲ್ಲಿಂದಾಚೆಗೆ ಎಂಪಿಎಲ್‌ಎಯ ಚಟುವಟಿಕೆ ವಿಸ್ತರಿಸಿತು ಮತ್ತು ಹೆಚ್ಚುಹೆಚ್ಚಾಗಿ ಜನರ ಬೆಂಬಲ ಪಡೆದುಕೊಳ್ಳತೊಡಗಿತು. ಚಳವಳಿಯು ಅಂಗೋಲದ ಭಾರಿ ಪ್ರಮಾಣದ ಭೂಪ್ರದೇಶವನ್ನು ವಿಮೋಚನೆಗೊಳಿಸಿ ಅಲ್ಲಿ ಪ್ರಜಾಪ್ರಭುತ್ವ, ಸಾಮೂಹಿಕತ್ವ ಹಾಗೂ ಪರಸ್ಪರ ನೆರವಿನ ಆಧಾರದ ಮೇಲೆ ನವ ಬಾಳನ್ನು ನಿರ್ಮಿಸತೊಡಗಿತು.

1974ರಲ್ಲಿ ಪೋರ್ಚುಗಾಲ್‌ನಲ್ಲಿ ಫ್ಯಾಸಿಸ್ಟ್ ವಿರೋಧಿ ಕ್ರಾಂತಿಯ ಫಲವಾಗಿ ಸಲಜಾರ್-ಕಯೆತಾನೊ ಪ್ರಭುತ್ವ ಪತನಗೊಂಡಿತು. ಸ್ವಾತಂತ್ರ್ಯ ಹೋರಾಟ ನಿರ್ಧಾರಕ ಘಟ್ಟ ಮುಟ್ಟಿದ್ದಿತೆಂಬುದು ಸ್ಪಷ್ಟವಾಗಿದ್ದಿತು. ಹತ್ತು ವರ್ಷಗಳ ಮುನ್ನ ಇದ್ದಂತೆ ಈಗಲೂ ಎಂಪಿಎಲ್‌ಎ ಒಂದಷ್ಟೆ ದೇಶದಲ್ಲಿ ಘನವಾದ ಮಿಲಿಟರಿ ಹಾಗೂ ರಾಜಕೀಯ ಬುನಾದಿ ಹೊಂದಿದ್ದ ರಾಷ್ಟ್ರೀಯ ಸಂಘಟನೆಯಾಗಿದ್ದಿತು.

ಇಂತಹ ಸ್ಥಿತಿ ತಲುಪಲು ಸಂಸ್ಥೆಗೆ ನೆಟೊರವರು ಸಲ್ಲಿಸಿದ ಸೇವೆ ನಿಜಕ್ಕೂ ಅಮೂಲ್ಯವಾಗಿದ್ದಿತು.

ಆದರೆ ಪ್ರತ್ಯೇಕತಾವಾದಿ ವೃಂದಗಳ ಚಟುವಟಿಕೆ ರಾಷ್ಟ್ರೀಯ-ವಿಮೋಚನಾ ಹೋರಾಟದ ಯಶಸ್ವೀ ಮುಕ್ತಾಯಕ್ಕೆ ಇನ್ನೂ ಭೀತಿ ಒಡ್ಡಿದ್ದಿತು. ಅದ್ದರಿಂದಲೇ 1975ರ ನವೆಂಬರ್‌ನಲ್ಲಿ ಅಂಗೋಲದ ಸ್ವಾತಂತ್ರ್ಯವನ್ನು ಘೋಷಿಸಿದ ಘಳಿಗೆಯು ಬಹಳ ಕಾಲದಿಂದ ಸಂಕಷ್ಟ ಅನುಭವಿಸಿಕೊಂಡು ಬಂದಿದ್ದ ಈ ದೇಶಕ್ಕೆ ಅತ್ಯಂತ ಅಪಾಯದ ಘಳಿಗೆಯೂ ಆಯಿತು. ಜಾಯಿರ್‌ನ ಸಹಾಯದಿಂದ ಬಲವರ್ಧಿಸಿಕೊಂಡ, ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಚೆನ್ನಾಗಿ ಶಸ್ತ್ರಸಜ್ಜಿತಗೊಳಿಸಲ್ಪಟ್ಟಿದ್ದ ಎಫ್‌ಎನ್‌ಎಲ್‌ಎ ದಳಗಳು ಹೊಸ ಗಣತಂತ್ರದ ರಾಜಧಾನಿಯ ಮೇಲೆ ಉತ್ತರ ದಿಕ್ಕಿನಿಂದ ದಾಳಿ ಮಾಡಿಕೊಂಡು ಬಂದವು. ದಕ್ಷಿಣ ಆಫ್ರಿಕ ಗಣತಂತ್ರದ ಸ್ಥಾಯಿಾ ಸೈನ್ಯ ಘಟಕಗಳೂ ಕೂಲಿ ಸಿಪಾಯಿಗಳ ಸೈನ್ಯವೂ 'ಯೂನಿಟಾ' ದಳಗಳೊಂದಿಗೆ ಒಂದುಗೂಡಿಕೊಂಡು ದಕ್ಷಿಣದಿಂದ ಶೀಘ್ರ ದಾಳಿ ಮಾಡಿಕೊಂಡು ಬಂದವು. ಹೀಗೆ "ದ್ವಿತೀಯ ಸ್ವಾತಂತ್ರ್ಯ ಯುದ್ಧ" ಪ್ರಾರಂಭವಾಯಿತು. ಅಂಗೋಲದ ದೇಶಪ್ರೇಮಿಗಳು ನೆಟೊರವರ ನಾಯಕತ್ವದಲ್ಲಿ ಎಂಪಿಎಲ್‌ಎ ಸುತ್ತ ಅಣಿನೆರೆದು ದೇಶದ ಸ್ವಾತಂತ್ರ್ಯಕ್ಕಾಗಿ ಪೋರ್ಚುಗೀಸ್ ವಸಾಹತುವಾದಿಗಳ ವಿರುದ್ಧವಲ್ಲ ಆದರೆ ಈ ಬಾರಿ ಪ್ರತ್ಯೇಕತಾವಾದಿ ವೃಂದಗಳಿಗೆ ಶಸ್ತ್ರಾಸ್ತ್ರ ನೀಡಿ ನಿಯಂತ್ರಿಸುತ್ತಿದ್ದ ಅಂತರರಾಷ್ಟ್ರೀಯ ಪ್ರತಿಗಾಮಿ ಶಕ್ತಿಗಳ ವಿರುದ್ಧ ಹಾಗೂ ಸಾಮ್ರಾಜ್ಯವಾದದ ವಿರುದ್ಧ ಹೋರಾಡತೊಡಗಿದರು.

ಈ ಸಂದಿಗ್ಧ ಘಳಿಗೆಯಲ್ಲಿ ನೆಟೊರವರ ನೇತೃತ್ವದಲ್ಲಿ ಎಂಪಿಎಲ್‌ಎ ನಾಯಕತ್ವವು ಶತ್ರುವಿನ ದಾಳಿಗಳನ್ನು ಹಿಮ್ಮೆಟ್ಟಿಸಲು ಎಳೆಯ ರಾಜ್ಯದ ಎಲ್ಲ ಸಂಪನ್ಮೂಲಗಳನ್ನೂ ಅಣಿನೆರೆಯಿಸಿತು ಮತ್ತು ಸಮಾಜವಾದಿ ಸಮುದಾಯದ ದೇಶಗಳ ಕಡೆಗೆ ನೆರವಿಗಾಗಿ ತಿರುಗಿತು. ಕ್ಯೂಬ, ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳು ನೀಡಿದ ಬೆಂಬಲವು ಅಂಗೋಲದ ದೇಶಪ್ರೇಮಿಗಳಿಗೆ ಹಸ್ತಕ್ಷೇಪಕರನ್ನು ತಮ್ಮ ದೇಶದಿಂದ ಹೊರಹಾಕಲು ಮತ್ತು ತಾವು ಅಷ್ಟು ಕಷ್ಟಪಟ್ಟು ಗಳಿಸಿದ್ದ ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳಲು ನೆರವಾಯಿತು. ಈ "ದ್ವಿತೀಯ ಸ್ವಾತಂತ್ರ್ಯ ಯುದ್ಧ"ದ ಅಂತಿಮ ಕಾರ್ಯವೆಂದರೆ 1976ರ ಮಾರ್ಚ್‌ನಲ್ಲಿ ದಕ್ಷಿಣ ಆಫ್ರಿಕ ಗಣತಂತ್ರದ ದಳಗಳನ್ನು ಅಂಗೋಲದ ಭೂಪ್ರದೇಶದಿಂದ ಹೊರಗಟ್ಟಿದುದಾಗಿದ್ದಿತು.

ಅನಂತರವಷ್ಟೆ ಅಂಗೋಲದ ಜನತಾ ಗಣತಂತ್ರವು ರಾಷ್ಟ್ರೀಯ-ವಿಮೋಚನಾ ಚಳವಳಿಯ ಸಾಮಾಜಿಕ-ಆರ್ಥಿಕ ಕಾರ್ಯಭಾರಗಳನ್ನು ನೆರವೇರಿಸುವುದನ್ನು ಪ್ರಾರಂಭಿಸಲು ಸಾಧ್ಯವಾಯಿತು. ಆದರೆ ಇವನ್ನು ನೆರವೇರಿಸಬೇಕಾಗಿದ್ದ ಪರಿಸ್ಥಿತಿಗಳನ್ನು ನಿಜಕ್ಕೂ ಶಾಂತಿಯುತವೆಂದೇನೂ ಕರೆಯಲಾಗುತ್ತಿರಲಿಲ್ಲ. ಏಕೆಂದರೆ

ಪ್ರತ್ಯೇಕತಾವಾದಿ ವೃಂದಗಳ ಪ್ರಚೋದನೆಗಳೂ ದಕ್ಷಿಣ ಆಫ್ರಿಕ ಗಣತಂತ್ರದ ದಳಗಳ ಘೋರ ದಾಳಿಗಳೂ ನಿಜಕ್ಕೂ ಮುಂದುವರಿದೇ ಇದ್ದವು.

ನೆಟೋರವರು ಎಂಪಿಎಲ್‌ಎಯ ಕ್ರಾಂತಿಕಾರಿ ನೀತಿಮಾರ್ಗವನ್ನು ನಿರ್ಧರಿಸುವವರಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ಈ ಹೊತ್ತಿಗೆ ಅವರು ಅಂಗೋಲದ ಬೆಳವಣಿಗೆಯ ಪ್ರತಿಕ್ಷೇತ್ರಗಳಿಗೆ ಸಂಬಂಧಿಸಿ ನಿಜಕ್ಕೂ ಮಾರ್ಕ್ಸ್‌ವಾದಿಯಾದ ಅಭಿಪ್ರಾಯಗಳನ್ನು ರೂಪಿಸಿಕೊಂಡಿದ್ದರು. ಅವರು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಾಹಿತ್ಯವನ್ನು ತುಂಬ ಓದಿದರು, ಅಭ್ಯಸಿಸಿದರು, ಸೋವಿಯತ್ ಒಕ್ಕೂಟಕ್ಕೂ ಇತರ ಸಮಾಜವಾದಿ ದೇಶಗಳಿಗೂ ಅನೇಕ ಬಾರಿ ಭೇಟಿಕೊಟ್ಟರು. ಅವರ ದಾರ್ಶನಿಕ ಮನೋಧರ್ಮವು ದ್ವಂದ್ವಾತ್ಮಕ ಭೌತಿಕವಾದಿಯ ಮನೋಧರ್ಮವಾಗಿದ್ದಿತೆಂದು ಅವರು ನೀಡಿರುವ ಹೇಳಿಕೆಗಳೆಲ್ಲ ಸಾಧಿಸಿ ತೋರುತ್ತವೆ.

ಅಗೊಸ್ತಿನೊ ನೆಟೋರವರು ಅಂಗೋಲದ ಜನರ ನಿಜವಾದ ಹಾಗೂ ರಾಷ್ಟ್ರಮನ್ನಿತ ನಾಯಕರಾದರು, ರಾಜ್ಯದ ಅಧಿಪತಿಯಾದರು. ವಸಾಹತುವಾದಿಗಳ ವಿರುದ್ಧ ಸುದೀರ್ಘ ಸಶಸ್ತ್ರ ಹೋರಾಟದ ಇಪ್ಪತ್ತು ವರ್ಷಗಳ ಅನುಭವ ಅವರಿಗಿದ್ದಿತು. ಅವರು ಎಂಪಿಎಲ್‌ಎ ಸಂಸ್ಥೆಯ ದಳಗಳನ್ನು ಪುನಸ್ಸಂಘಟಿಸುವುದು ಮತ್ತು ಅದನ್ನು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಮಾದರಿಯ ರಾಜಕೀಯ ಪಾರ್ಟಿಯನ್ನಾಗಿ ಪರಿವರ್ತಿಸುವುದು ಅವಶ್ಯವೆಂದು ಸ್ಪಷ್ಟವಾಗಿ ಮನಗಂಡಿದ್ದರು. ಇದಕ್ಕನುಗುಣವಾಗಿ ಚಳವಳಿಯನ್ನು ಒಂದು ಮುಂಚೂಣಿ ಕಾರ್ಮಿಕರ ಪಾರ್ಟಿಯನ್ನಾಗಿ ಪರಿವರ್ತಿಸುವುದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಚರ್ಚಿಸಲೋಸುಗ ಪ್ರಥಮ ಎಂಪಿಎಲ್‌ಎ ಮಹಾಧಿವೇಶನವೊಂದನ್ನು ಸೇರಿಸಬೇಕೆಂದು ನಿರ್ಧಾರ ಕೈಗೊಳ್ಳಲಾಯಿತು.

ಅಂತಹ ಪ್ರಥಮ ಎಂಪಿಎಲ್‌ಎ ಮಹಾಧಿವೇಶನ 1977ರ ಡಿಸೆಂಬರ್ 4ರಿಂದ 10ರವರೆಗೆ ಲುಆಂಡಾದಲ್ಲಿ ಜರುಗಿತು.

ಅದರಲ್ಲಿ ನೆಟೋರವರು ನೀಡಿದ ಕೇಂದ್ರ ಸಮಿತಿಯ ವರದಿಯು, ಇಪ್ಪತ್ತು ವರ್ಷಗಳ ಹೋರಾಟವನ್ನು ಕ್ರೋಡೀಕರಿಸಿತು, ಸ್ವಾತಂತ್ರ್ಯ ಸಾಧನೆಗೆ ಸಂಬಂಧಿಸಿ ಎಂಪಿಎಲ್‌ಎಯಲ್ಲಿ ಜರುಗಿದ್ದ ಮುಖ್ಯ ಬದಲಾವಣೆಗಳನ್ನು ಗಮನಕ್ಕೆ ತಂದಿತು, ಹೋರಾಟದ ಅಂತಿಮ ಗುರಿಗಳನ್ನೂ ಆ ಕಾಲದ ಹೋರಾಟದ ಮಜಲನ್ನೂ ನಿರೂಪಿಸಿತು, ವಿಶಿಷ್ಟ ಸಾಮಾಜಿಕ-ರಾಜಕೀಯ, ಆರ್ಥಿಕ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕ ಕಾರ್ಯಭಾರಗಳನ್ನು ಸ್ಪಷ್ಟಪಡಿಸಿತು. ಮಹಾಧಿವೇಶನವು ಅನೇಕ ಅತ್ಯಂತ ಮುಖ್ಯ ದಸ್ತೈವಜುಗಳನ್ನು – 'ಎಂಪಿಎಲ್‌ಎ-ಲೇಬರ್ ಪಾರ್ಟಿಯ ಕಾರ್ಯಕ್ರಮ ಹಾಗೂ ನಿಯಮಗಳು,' '1978-1980ರ ಕಾಲಾವಧಿಯಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆಗಾಗಿ ಮಾರ್ಗದರ್ಶಕ ಸೂತ್ರಗಳು' ಮುಂತಾದ ದಸ್ತೈವಜುಗಳನ್ನು – ಅಂಗೀಕರಿಸಿತು.

ಸಮಾಜವಾದ ನಿರ್ಮಾಣವೇ ಎಂಪಿಎಲ್‌ಎಯ ಮುಖ್ಯ ಗುರಿ ಎಂದು ಮಹಾಧಿವೇಶನ ಘೋಷಿಸಿತು. ಅಂಗೋಲದ ಬೆಳವಣಿಗೆಯಲ್ಲಿನ ಅಂದಿನ ಘಟ್ಟವು ರಾಷ್ಟ್ರೀಯ ಪ್ರಜಾಸತ್ತಾತ್ಮಕ ಕ್ರಾಂತಿಯ ಘಟ್ಟವಾಗಿದ್ದಿತು, ಸಮಾಜವಾದಿ ನಿರ್ಮಾಣದತ್ತ ಸಾಗಿ ಹೋಗುವ ಸಂಕ್ರಮಣ ಕಾಲಘಟ್ಟವಾಗಿದ್ದಿತು ಎಂದು ಅದು ನಿರೂಪಿಸಿತು. ಅಂಗೋಲ ಜನತಾ ಗಣತಂತ್ರ ರಚನೆಯೊಂದಿಗೆ ಎಂಪಿಎಲ್‌ಎ ರಾಷ್ಟ್ರೀಯ-ವಿಮೋಚನಾ ಚಳವಳಿಯಾಗಿ ತನ್ನ ಚಾರಿತ್ರಿಕ ಧ್ಯೇಯ ಕಾರ್ಯವನ್ನು ಪೂರೈಸಿದ್ದಿತು, ಜನತಾ ಪ್ರಜಾಪ್ರಭುತ್ವದ ಹಾಗೂ ಸಮಾಜವಾದಿ ಸಮಾಜ ನಿರ್ಮಿಸುವುದಕ್ಕೆ ಅಂಗೋಲದ ದುಡಿಯುವ ಜನರೆಲ್ಲರನ್ನೂ ಒಂದುಗೂಡಿಸುವ ಹಾಗೂ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸೂತ್ರಗಳ ಮೇಲೆ ಆಧರಿತವಾದ ಮುಂಚೂಣಿ ಪಾರ್ಟಿಯೊಂದನ್ನು ಸ್ಥಾಪಿಸುವುದು ಅವಶ್ಯ, ಎಂದು ನೆಟೊ ತಮ್ಮ ವರದಿಯಲ್ಲಿ ತಿಳಿಸಿದರು. ಹೀಗೆ ಎಂಪಿಎಲ್‌ಎ ಪಾರ್ಟಿಯು ತನ್ನ ಹೆಸರನ್ನು ಎಂಪಿಎಲ್‌ಎ-ಲೇಬರ್ ಪಾರ್ಟಿ ಎಂದು ಬದಲಿಸಿಕೊಂಡಿತು.

ಮಹಾಧಿವೇಶನವು ಅನುಮೋದಿಸಿದ ನಿರ್ಣಯಗಳಲ್ಲೊಂದು ಕಾಮ್ರೇಡ್ ಅಂಟೋನಿಯೋ ಅಗೊಸ್ತಿನೊ ನೆಟೋರವರನ್ನು ಕುರಿತಾಗಿದ್ದಿತು. ಅದು ಅವರ ಕಾರ್ಯಗಳಲ್ಲಿ ಯಾವತ್ತೂ ಕಂಡುಬರುವಂಥ "ದೃಢತೆ, ಧೈರ್ಯ ಹಾಗೂ ಚುರುಕು ಬುದ್ಧಿಗಳನ್ನು" ವಿಶೇಷವಾಗಿ ಎತ್ತಿ ತೋರಿಸಿ ಅವರನ್ನು "ನಮ್ಮ ಹೋರಾಟದ ಹಿರಿಮಣಿ, ಅಂಗೋಲ ಜನತೆಯ ವಿಜಯಗಳ ಅವಿಶ್ರಾಂತ ನಿರ್ಮಾತೃ"* ಎಂದು ವರ್ಣಿಸಿತು. ತದನಂತರದ ವರ್ಷಗಳಲ್ಲಿ ಅಂಗೋಲವು ಯುದ್ಧದಿಂದಲೂ ವಸಾಹತುವಾದಿಗಳ ಹಾಗೂ ಅವರ ಅಡಿಯಾಳುಗಳ ವಿಧ್ವಂಸನದಿಂದಲೂ ನಾಶಗೊಂಡಿದ್ದ ರಾಷ್ಟ್ರೀಯ ಆರ್ಥಿಕತೆಯನ್ನು ಪುನರುಜ್ಜೀವನಗೊಳಿಸುವುದರಲ್ಲಿ, ದೇಶದ ಸುಭದ್ರತೆಯನ್ನೂ ಶಾಂತಿ ಹಾಗೂ ಕಾನೂನು ವ್ಯವಸ್ಥೆಯನ್ನೂ ದೃಢಗೊಳಿಸುವುದರಲ್ಲಿ ಮತ್ತು ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಮೊದಲ ಯಶಸ್ಸುಗಳನ್ನು ಸಾಧಿಸಿದಾಗ ನೆಟೋರವರ ಈ ಸದ್ಗುಣಗಳು ವಿಶೇಷವಾಗಿ ಎದ್ದುಕಂಡುಬಂದವು. ನೆಟೋರವರು 1979ರ ಸೆಪ್ಟೆಂಬರ್‌ನಲ್ಲಿ ತಮ್ಮ 57ನೆಯ ವಯಸ್ಸಿನಲ್ಲಿ ನಿಧನರಾದರು.

ಈ ಮಹೋನ್ನತ ಕ್ರಾಂತಿಕಾರಿಯ ಸಾವು ಹಠಾತ್ತನೆ ಉಂಟಾಯಿತು. ಅದು ಒಂದು ಆಘಾತವಾಗಿ ಬಂದೆರಗಿತು. ಅಂಗೋಲದ ಅತ್ಯಂತ ತುರ್ತಿನ ಸಮಸ್ಯೆಗಳನ್ನು ಇನ್ನೂ ಪರಿಹರಿಸಲಾಗಿರಲಿಲ್ಲ. ದೇಶವು ಇನ್ನೂ ಬೆಳವಣಿಗೆಯ ಪ್ರಸ್ತುತ ಹಾಗೂ ಪ್ರಯಾಸಕರ ಕಾಲಾವಧಿಯ ಮೂಲಕ ಸಾಗಿ ಹೋಗುತ್ತಿದ್ದಿತು. ಅವರ

---

* *MPLA. Congresso I. Luanda, 1977. Theses e Resoluções*, Luanda, 1978, p. 145. – ಸಂ.

ನೆಟೋ ಒಂದು ಭವ್ಯ ಪರಂಪರೆಯನ್ನು ಬಿಟ್ಟು ಹೋಗಿದ್ದರು. ಅವರ ಹೆಸರು ಅಂಗೋಲದ ಜನತೆಯೊಂದಿಗೆ, ಅವರು ಸೃಷ್ಟಿಸಿದ ಎಂಪಿಎಲ್‌ಎ-ಲೇಬರ್ ಪಾರ್ಟಿಯೊಂದಿಗೆ ಚಿರಸ್ಥಾಯಿಯಾಗಿ ಉಳಿಯಲಿರುವುದು. ನೆಟೋರವರ ನಾಯಕತ್ವದಲ್ಲೇ ದೇಶ ತನ್ನ ಸ್ವಾತಂತ್ರ್ಯವನ್ನು ಗೆದ್ದುಕೊಂಡಿದ್ದುದು. ನೆಟೋರವರೇ ದೇಶದ ಅಭಿವೃದ್ಧಿ ಪ್ರತೀಕ್ಷೆಗಳನ್ನು ರಚಿಸಿಕೊಟ್ಟಿದ್ದುದು. ಅವರ ಸಹೋದ್ಯೋಗಿಗಳೂ ಅಂಗೋಲದ ದುಡಿಯುವ ಜನರೂ ನೆಟೋರವರು ಹಾಕಿಕೊಟ್ಟ ಸಮಾಜವಾದಿ ದಿಶೆಯ ಮಾರ್ಗದಲ್ಲೇ ಮುಂದುವರಿಯಲು ನಿರ್ಧರಿಸಿದ್ದಾರೆಂಬುದನ್ನು ತೋರಿಸಿಕೊಡಲು ಬೇಕಾದಷ್ಟು ಪುರಾವೆಗಳಿವೆ. ನೆಟೋರವರು ಅಂಗೋಲಕ್ಕಷ್ಟೆ ಅಲ್ಲ ಒಟ್ಟಿನ ಮೇಲೆ ಆಫ್ರಿಕಕ್ಕೇ ಅತ್ಯಂತ ಕಷ್ಟದ ಪರಿಸ್ಥಿತಿಗಳಲ್ಲೂ ಕ್ರಾಂತಿಕಾರಿ ಹೋರಾಟವನ್ನು ಯಶಸ್ವಿಯಾಗಿ ನಡೆಸುವ ಅತ್ಯಮೂಲ್ಯ ಅನುಭವವನ್ನು ಬಿಟ್ಟುಕೊಟ್ಟು ಹೋಗಿದ್ದಾರೆ. ಈ ಅನುಭವವು ನಿಸ್ಸಂದೇಹವಾಗಿಯೂ ಗಣನೀಯ ಅಂತರರಾಷ್ಟ್ರೀಯ ಪ್ರಾಮುಖ್ಯದ್ದೂ ಆಗಿದೆ.

ನೆಟೋರವರು ಪ್ರಧಾನವಾಗಿ ಎಪ್ಪತ್ತರ ದಶಕದ ಮಧ್ಯಭಾಗದಲ್ಲಿ ಅಧಿಕಾರಕ್ಕೆ ಬಂದ ಆಫ್ರಿಕದ ಕ್ರಾಂತಿಕಾರಿ ಪ್ರಜಾಪ್ರಭುತ್ವದ "ಹೊಸ ಅಲೆ"ಯ ಅತ್ಯುತ್ತಮ ಹಾಗೂ ಹೆಚ್ಚು ಅಧಿಕಾರಯುತ ಪ್ರತಿನಿಧಿಗಳಲ್ಲಿ ಒಬ್ಬರಾಗಿದ್ದರು. ನೆಟೋರವರೂ ಅವರ ಸಹೋದ್ಯೋಗಿಗಳೂ ತಮ್ಮ ಚಟುವಟಿಕೆಗಳಲ್ಲಿ ತಮ್ಮದೇ ದೀರ್ಘ ವ್ಯಕ್ತಿಗತ ಸಶಸ್ತ್ರ ಹೋರಾಟದ ಅನುಭವದ ಮೇಲಷ್ಟೆ ಅಲ್ಲ (ಈ ಅನುಭವವು ಅವರನ್ನು ಚೆನ್ನಾಗಿ ದೃಢಗೊಳಿಸಿದ್ದಿತು ಮತ್ತು ಸಮಾಜವಾದಕ್ಕಾಗಿ ಹೋರಾಡುವ ಆವಶ್ಯಕತೆಯತ್ತ ತರ್ಕಬದ್ಧವಾಗಿಯೇ ಕರೆದೊಯ್ದಿದ್ದಿತು) ಆಗಲೇ ಹತ್ತು-ಹದಿನೈದು ವರ್ಷಗಳ ಸ್ವತಂತ್ರ ಬೆಳವಣಿಗೆ ಹೊಂದಿದ್ದ ಆಫ್ರಿಕನ್ ರಾಜ್ಯಗಳ ಅನುಭವದ ಮೇಲೂ ಆಧರಿಸಿದ್ದರು. ಆಫ್ರಿಕನ್ ಕ್ರಾಂತಿಕಾರಿ ಡೆಮೊಕ್ರಾಟರ ಈ "ಹೊಸ ಅಲೆ"ಯು ವೈಜ್ಞಾನಿಕ ಸಮಾಜವಾದದತ್ತ ಮುನ್ನಡೆಯುವುದರಲ್ಲಿ, ಆಫ್ರಿಕನ್ ಸಮಾಜ, ಕ್ರಾಂತಿಯ ಗುರಿ ಹಾಗೂ ಘಟ್ಟಗಳು ಮತ್ತು ವರ್ಗ ಶಕ್ತಿಗಳ ವ್ಯವಸ್ಥಾಪನೆ – ಇವುಗಳ ವೈಜ್ಞಾನಿಕ ವಿಶ್ಲೇಷಣೆ ಮಾಡುವುದರಲ್ಲಿ ಹಾಗೂ ಪ್ರಾಯೋಗಿಕ ಸುಧಾರಣೆಗಳನ್ನು ಜಾರಿಗೆ ತರುವುದರಲ್ಲಿ ಅವರ ಪೂರ್ವಿಕರಿಗಿಂತ, ಅರವತ್ತರ ದಶಕದ ರಾಷ್ಟ್ರೀಯ ಪ್ರಜಾಪ್ರಭುತ್ವದ ಅಗ್ರಗಾಮಿಗಳಿಗಿಂತ, ತುಂಬ ಮುಂದೆ ಹೋಗಿದ್ದಿತು. ನೆಟೋರವರು ತಮ್ಮ ಸ್ವಂತ ಕ್ರಾಂತಿಕಾರಿ ಅನುಭವದಿಂದಲೂ ಇತರ ಕ್ರಾಂತಿಕಾರಿಗಳ ಅನುಭವದಿಂದಲೂ ಬಂದ ತೀರ್ಮಾನಗಳು ಎಪ್ಪತ್ತರ ದಶಕದಲ್ಲಿ ಆಫ್ರಿಕದ ರಾಷ್ಟ್ರೀಯ-ವಿಮೋಚನಾ ಚಳವಳಿಯ ರಾಜಕೀಯ ಚಿಂತನೆಯ ಉನ್ನತಾಂಶಗಳನ್ನೇ ವ್ಯಕ್ತಪಡಿಸುತ್ತಿದ್ದವು. ಅವು ಸಾರ್ವತ್ರಿಕ ಕ್ರೋಢೀಕರಣಕ್ಕೆ ಹಾಗೂ ವಿಶ್ಲೇಷಣೆಗೆ ಅರ್ಹವಾದವುಗಳಾಗಿವೆ. ನೆಟೋರವರು ಬಿಟ್ಟುಕೊಟ್ಟು ಹೋಗಿರುವ ರಾಜಕೀಯ ವಿಚಾರಸಂಪತ್ತಿನ ವಿವೇಚನೆ

ನಡೆಸುವುದು ಇಲ್ಲಿ ನಮ್ಮ ಕಾರ್ಯಭಾರವಲ್ಲ. ಅವರೂ ಆಫ್ರಿಕದ ಜನತೆಗಳ ಕ್ರಾಂತಿಕಾರಿ ರಾಷ್ಟ್ರೀಯ-ವಿಮೋಚನಾ ಚಳವಳಿಯ ಭವಿಷ್ಯತ್ತಿಗೆ ವಿಶೇಷವಾಗಿ ಮುಖ್ಯವಾದಂಥ ಅದರ ಕೆಲವು ಅಂಶಗಳನ್ನು ಗಮನಿಸಬಹುದಾಗಿದೆ.

ಪೋರ್ಚುಗೀಸ್ ವಸಾಹತುವಾದವನ್ನು ವಿರೋಧಿಸಲು ಸಶಸ್ತ್ರ ಹೋರಾಟವಷ್ಟೆ ಏಕೈಕ ಸಾಧನ ಎಂಬುದಕ್ಕೆ ಸಂಬಂಧಿಸಿ ಹೇಳುವುದಾದರೆ, ನೆಟೋರವರೂ ಎಂಪಿಎಲ್‌ಎಯಲ್ಲಿನ ಅವರ ಸಹೋದ್ಯೋಗಿಗಳೂ ಅಂತೆಯೇ ಮೊಜಾಂಬಿಕ್ ಹಾಗೂ ಗಿನಿ-ಬಿಸಾಗಳಲ್ಲಿ ವಿಮೋಚನಾ ಚಳವಳಿಗಳ ಅಧಿಪತಿ ಸ್ಥಾನದಲ್ಲಿದ್ದ FRELIMO ಹಾಗೂ PAIGOCಗಳಲ್ಲಿನ ಅವರ ಸಹೋದ್ಯೋಗಿಗಳೂ, ಮಿಲಿಟರಿ ಕಾರ್ಯಾಚರಣೆಯನ್ನು ನಿರಪೇಕ್ಷ ಮೌಲ್ಯದ್ದನ್ನಾಗಿಯೇನೂ ಪರಿಗಣಿಸಲಿಲ್ಲ. ನೆಟೋರವರು ವಿಮೋಚನಾ ಸಮರದ ರಾಜಕೀಯ ಸ್ವರೂಪವನ್ನೂ ಅದಕ್ಕಾಗಿ ರಾಜಕೀಯ ಸಿದ್ಧತೆ ಹಾಗೂ ರಾಜಕೀಯ ನಾಯಕತ್ವ ಅವಶ್ಯ ಎಂಬುದನ್ನೂ ಅರ್ಥಮಾಡಿಕೊಂಡಿದ್ದರು. ಮಿಲಿಟರಿ ಕಾರ್ಯಾಚರಣೆಯನ್ನು ಸೈದ್ಧಾಂತಿಕ, ರಾಜಕೀಯ, ಸಾಮಾಜಿಕ ಹಾಗೂ ಪ್ರಚಾರಾತ್ಮಕ ಕಾರ್ಯಾಚರಣೆಯೊಂದಿಗೆ ಸಾವಯವವಾಗಿ ಸಂಯೋಜಿಸಿ ನಡೆಸಬೇಕು ಎಂದವರು ಒತ್ತಿ ಹೇಳಿದರು. ವಿಮೋಚನಾ ಚಳವಳಿಯು ತನ್ನನ್ನು ಬಂಡಾಯ ಚಟುವಟಿಕೆಯ ಚೌಕಟ್ಟಿನೊಳಗೆ ಸೀಮಿತಗೊಳಿಸಿಕೊಳ್ಳಬಾರದು, ತದ್ವಿರುದ್ಧವಾಗಿ ಅದು ರಾಷ್ಟ್ರೀಯ ಜೀವನದ ಎಲ್ಲ ಕ್ಷೇತ್ರಗಳನ್ನೂ ತನ್ನ ಕಾರ್ಯ ವ್ಯಾಪ್ತಿಯೊಳಗೆ ತಂದುಕೊಳ್ಳಬೇಕು, ಇದಷ್ಟೆ ನಿಜಕ್ಕೂ ಚಳವಳಿಯ ಯಶಸ್ಸಿಗೆ ಖಾತರಿ, ಎಂದವರು ಒತ್ತಿ ಹೇಳಿದರು. ಅಂಗೋಲ, ಮೊಜಾಂಬಿಕ್ ಹಾಗೂ ಗಿನಿ-ಬಿಸಾಗಳ ಅನುಭವವೂ, ಅದಕ್ಕೆ ಮುಂಚೆ ವಿಯೆತ್ನಾಂನ ಅನುಭವವೂ ಸಹ, ಈ ಮನೋಧರ್ಮ ಎಷ್ಟು ಸರಿ ಎಂಬುದನ್ನೇ ತೋರಿಸಿಕೊಟ್ಟಿದ್ದವು. ಇದಕ್ಕೆ ವಿರುದ್ಧವಾಗಿ ಶುದ್ಧ ಮಿಲಿಟರಿಯ ತಪ್ಪು ಮನೋಧರ್ಮ ತಳೆದ ಲ್ಯಾಟಿನ್ ಅಮೆರಿಕದ ಅನೇಕ ವಿಮೋಚನಾ ಚಳವಳಿಗಳು ಪರಾಭವಗೊಂಡಿದ್ದವು.

ದ್ವಂದ್ವಾತ್ಮಕತೆಯು ನೆಟೋರವರ ಚಟುವಟಿಕೆಯ ವಿಶಿಷ್ಟ ಲಕ್ಷಣವಾಗಿದ್ದಿತು. ಅವರು ಯಾವುದೇ ಬದಲಿಸದಂತೆ ಗಡುಸಾದ ಘೋಷಣೆಗಳನ್ನೂ ವಿಚಾರಗಳನ್ನೂ ಮತ್ತು ರೂಪಗಳನ್ನೂ ತಿರಸ್ಕರಿಸಿದರು. ಅಂಗೋಲದ ದುಡಿಯುವ ಜನರ ಸಂಪೂರ್ಣ ರಾಜಕೀಯ ಹಾಗೂ ಸಾಮಾಜಿಕ ವಿಮೋಚನೆಗಾಗಿ ಸುಸಂಗತವಾಗಿ ನಡೆಸಿದ ಕಾರ್ಯದಲ್ಲಿ ಅವರು ನಿರ್ದಿಷ್ಟ ಕಾರ್ಯಭಾರಗಳನ್ನು ಮುಂದಿರಿಸಿಕೊಳ್ಳುವಾಗ ಅಸ್ತಿತ್ವದಲ್ಲಿದ್ದ ಸಾಧ್ಯತೆಗಳನ್ನು ಯಥಾವತ್ತು ಗಣನೆಗೆ ತಂದುಕೊಳ್ಳುತ್ತಿದ್ದರು. ಕ್ರಾಂತಿಕಾರಿ ಪ್ರಕ್ರಿಯೆಯು ವಿವಿಧ ಘಟ್ಟಗಳಲ್ಲಿ ಬೆಳೆಯುತ್ತ ಹೋಗುತ್ತದೆ ಎಂಬ ವೈಜ್ಞಾನಿಕ ವಿಚಾರವನ್ನು ಅವರು ಆರಂಭಬಿಂದುವನ್ನಾಗಿ ಪರಿಗಣಿಸಿದ್ದರು.

ಪೋರ್ಚುಗೀಸ್ ವಸಾಹತು ಆಳ್ವಿಕೆಯನ್ನು ಕಿತ್ತೊಗೆಯುವುದರಿಂದಷ್ಟೆ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಖಚಿತಗೊಳಿಸುವುದು ಸಾಧ್ಯವಿಲ್ಲ, ಹಳೆಗಾಲದ ಪೋರ್ಚುಗೀಸ್ ವಸಾಹತುವಾದದ ಸ್ಥಳದಲ್ಲಿ ನವವಸಾಹತುವಾದದ ಹೆಚ್ಚು ಸೂಕ್ಷ್ಮವಾದ ರೂಪಗಳನ್ನು ಸ್ಥಾಪಿಸಲು ಸಾಮ್ರಾಜ್ಯಶಾಹಿ ಶಕ್ತಿಗಳು ಮಾಡುತ್ತಿದ್ದ ಯತ್ನಗಳ ಬಗೆಗೆ ಎಚ್ಚರದಿಂದಿರುವುದೂ ಅವಶ್ಯ ಎಂದು ನೆಟೋರವರು ಅರವತ್ತರ ದಶಕದ ಆರಂಭದಲ್ಲಿಷ್ಟೇ ಮನಗಂಡರು. ಎಂಪಿಎಲ್ಎಯ ದಸ್ತಾವೇಜುಗಳಲ್ಲೂ ಇದನ್ನೇ ಗಮನಿಸಲಾಗಿದೆ. ನೆಟೋರವರು ಅನೇಕ ಸಾಮಾಜಿಕ ಕಾರ್ಯಭಾರಗಳನ್ನು ಮುಂದಿರಿಸಿ ಅಂಗೋಲ ಸಮಾಜದ ಸುಧಾರಣೆಯಲ್ಲಿ, ಕಾರ್ಮಿಕರ ಹಾಗೂ ರೈತರ ಹಿತಗಳನ್ನು ಸಂರಕ್ಷಿಸುವುದರಲ್ಲಿ ಹಾಗೂ ಸ್ವಾತಂತ್ರ್ಯದ ಪರಿಸ್ಥಿತಿಗಳಲ್ಲಿ ಸಾಮಾಜಿಕ ನ್ಯಾಯ ಸ್ಥಾಪನೆಯಲ್ಲಿ, ತಮಗಿದ್ದ ಬಯಕೆಯನ್ನು ತೋರಿಸಿಕೊಟ್ಟರು.

ಆದರೆ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನೆಟೋರವರಾಗಲೀ ಇತರ ಎಂಪಿಎಲ್ಎ ನಾಯಕರಾಗಲೀ ಸಮಾಜವಾದವೇ ಚಳವಳಿಯ ಗುರಿ ಎಂದೇನೂ ಹೇಳಲಿಲ್ಲ. ರಾಷ್ಟ್ರೀಯ ವಿಮೋಚನೆಯೇ ಒಂದು ಮಹೋನ್ನತ ಗುರಿಯಾಗಿದ್ದಿತು, ಅದು ಎಲ್ಲ ದೇಶಪ್ರೇಮಿ ಶಕ್ತಿಗಳನ್ನೂ ಒಣಸೇರಿಯಿಸಲು ಒಂದು ನಂಬಲರ್ಹ ಆಧಾರವಾಗಿದ್ದಿತು, ಎಂಬುದನ್ನು ಅವರು ಮನಗಂಡಿದ್ದರು. ಸಾಮ್ರಾಜ್ಯಶಾಹಿ ವಿರೋಧಿ ರಾಷ್ಟ್ರೀಯವಾದಿ ಘಟ್ಟವು ವಸಾಹತು ದೇಶಗಳ ಜನತೆಗಳ ಸಾಮೂಹಿಕ ಹೋರಾಟದ ಬೆಳವಣಿಗೆಯಲ್ಲಿ ಒಂದು ತರ್ಕಬದ್ಧ ಹೆಜ್ಜೆಯಾಗಿದ್ದಿತು ಎಂಬುದನ್ನು ಕಂಡುಕೊಂಡಿದ್ದ ಅವರು ಈ ಘಟ್ಟವನ್ನು ಬಿಟ್ಟುಕೊಡುವ ಅವಸರ ತೋರಲಿಲ್ಲ, ಅಥವಾ ಅದು ಮುಗಿದು ಹೋಯಿತು ಎಂದಾಗಲೀ ಅದರ ನಿವಾರಣೆಯಾಯಿತು ಎಂದಾಗಲೀ ಘೋಷಿಸಲು ಹೋಗಲಿಲ್ಲ. ಆದರೆ ಅವರು ನಿರಪೇಕ್ಷ ರಾಷ್ಟ್ರೀಯತಾವಾದವನ್ನು, ಸಂಕುಚಿತವಾದ, ಅಹಂಭಾವದಿಂದ ಕೂಡಿದ ಹಾಗೂ ಸಾರಭೂತವಾಗಿ ಬೂರ್ಷ್ವಾ ಆದ ರಾಷ್ಟ್ರೀಯತಾವಾದವನ್ನು, ದೃಢವಾಗಿ ತಿರಸ್ಕರಿಸಿದರು.

ಸಾಮ್ರಾಜ್ಯವಾದ ವಿರೋಧಿ ರಾಷ್ಟ್ರೀಯವಾದ ಸಮಸ್ಯೆಗೆ ಸಂಬಂಧಿಸಿ ಎರಡು ತೀವ್ರತರದ ಮನೋಧರ್ಮಗಳು ಕಳೆದ ಎರಡು ದಶಕಗಳಲ್ಲಿ ರಾಷ್ಟ್ರೀಯ-ವಿಮೋಚನಾ ಚಳವಳಿಯ ಇತಿಹಾಸದಲ್ಲಿ ಕಂಡುಬಂದಿರುವ ಅನೇಕ ನಿದರ್ಶನಗಳಿವೆ. ಒಂದು ಕಡೆ ಬೂರ್ಷ್ವಾ ವೃತ್ತಗಳು ಮರ್ದಿತ ರಾಷ್ಟ್ರಗಳ ಪ್ರಜಾಸತ್ತಾತ್ಮಕ ಸಾಮ್ರಾಜ್ಯವಾದ ವಿರೋಧಿ ರಾಷ್ಟ್ರೀಯವಾದದ ಕ್ರಾಂತಿಕಾರಿ ಒಳಸಾರವನ್ನು ನಿರ್ವೀರ್ಯಗೊಳಿಸಲು ಯತ್ನಿಸಿವೆ, ಸಾಮಾಜಿಕ ಸುಧಾರಣೆಯ ಹಾಗೂ ದುಡಿಯುವ ಜನರ ಅಗತ್ಯಗಳನ್ನು ತೃಪ್ತಿಗೊಳಿಸುವ ವಿಚಾರಗಳನ್ನು ಅವುಗಳಿಂದ ತೊಡೆದುಹಾಕಲು ಯತ್ನಿಸಿವೆ, ವಸಾಹತು ಸಮಾಜದಲ್ಲಿ ವರ್ಗ ಹಿತಗಳ ಹಾಗೂ

ವರ್ಗ ಹೋರಾಟದ ಪ್ರಕಲ್ಪನೆಗಳು ದ್ರೋಹಕರವಾದವು ರಾಷ್ಟ್ರವಿರೋಧಿಯಾದವು, ಯೂರೋಪಿಯನ್ನರಿಂದ ಎರವಲು ತಂದಂಥವು, ಎಂದು ಮುಂತಾಗಿ ಘೋಷಿಸಲು ಯತ್ನಿಸಿವೆ. ಇದು ಬೂರ್ಷ್ವಾ ಅಹಂಭಾವಿ ರಾಷ್ಟ್ರೀಯತಾವಾದಕ್ಕೆ ಲಾಕ್ಷಣಿಕವಾಗಿದೆ. ಅದರಲ್ಲಿ ವಿದೇಶೀ ದಬ್ಬಾಳಿಕೆಯ ವಿರುದ್ಧ ಪ್ರತಿಭಟನೆಯ ಅಂಶಗಳೂ ಸಾಮಾನ್ಯವಾಗಿ ನಶಿಸಿ ಹೋಗುತ್ತವೆ. ಇದು ಕ್ರಾಂತಿಕಾರಿ ಶಕ್ತಿಗಳನ್ನು ವಿರೋಧಿಸಲು ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಸಹಕರಿಸುವ ಬಯಕೆಗೆ ದಾರಿ ಮಾಡಿಕೊಡುತ್ತದೆ.

ಮತ್ತೊಂದು ಕಡೆ ತೀವ್ರ ಎಡಪಂಥವಾದಿಗಳು ಮರ್ದಿತ ಜನಾಂಗಗಳ ರಾಷ್ಟ್ರೀಯವಾದದ ಪ್ರಜಾಸತ್ತಾತ್ಮಕ ತಿರುಳನ್ನು, ಕ್ರಾಂತಿಕಾರಿ ರಾಷ್ಟ್ರೀಯವಾದದ ಅಸ್ತಿತ್ವವನ್ನೇ, ನಿರಾಕರಿಸಲು ಯತ್ನಿಸಿದ್ದಾರೆ. ಅವರು ಅದನ್ನು ಸಂಪೂರ್ಣವಾಗಿ ಸಂದರ್ಭಸಾಧಕ ಅಪಾಯಕಾರಿ ಪ್ರವೃತ್ತಿಯನ್ನಾಗಿ ಕಂಡುಕೊಂಡರು, ದುಡಿಯುವ ಜನರ ವರ್ಗ ಜಾಗೃತಿಯನ್ನು ಬೆಳೆಸುವುದಕ್ಕೆ ವಿರೋಧಿಯಾದಂಥ, ದುಡಿಯುವ ಜನರ ಹಿತಗಳನ್ನು ಸ್ಥಳೀಯ ಬಂಡವಾಳಕ್ಕೆ ಬಲಿಕೊಡಲು ಯತ್ನಿಸುವಂಥ ಪ್ರವೃತ್ತಿಯನ್ನಾಗಿ ಕಂಡುಕೊಂಡರು. ಎಲ್ಲ ರೀತಿಯ ರಾಷ್ಟ್ರೀಯವಾದದ ವಿರುದ್ಧವೂ ಹೋರಾಡುವ ಅಮೂರ್ತ ಘೋಷಣೆಯೂ, ವರ್ಗ ಹಿತಗಳ ಹಾಗೂ ಸಮಾಜವಾದದ ಆಧಾರದ ಮೇಲಷ್ಟೆ ದುಡಿಯುವ ಜನರನ್ನು ಪ್ರತ್ಯೇಕವಾಗಿ ಒಂದುಗೂಡಿಸಬೇಕು ಎಂಬ ಘೋಷಣೆಯೂ, ಮೇಲಿನ ತೀವ್ರ ಎಡಪಂಥ ಮನೋಧರ್ಮದಿಂದಲೇ ಬಂದಂಥವು. ಈ ಎರಡನೆಯ ಘೋಷಣೆಯಂತೂ ಬಹುಮಟ್ಟಿಗೆ ಯಾವತ್ತೂ ದುಡಿಯುವ ಜನರ ವರ್ಗ ಜಾಗೃತಿಯ ಮಟ್ಟಕ್ಕೆ ಭಿನ್ನವಾಗಿರುವಂತೆಯೇ ಕಾಣಿಸಿಕೊಂಡಿದೆ. ಹಾಗೆ ಅದು ಮುಂಚೂಣಿಗೂ ಜನಸಮೂಹಗಳಿಗೂ ನಡುವೆ ಅಂತರ ಉಂಟುಮಾಡಿ ದೇಶಪ್ರೇಮಿ ಶಕ್ತಿಗಳನ್ನು ದೂರ ಮಾಡುವುದಕ್ಕೆ ಕಾರಣವಾಗಿದೆ. ವಾಸ್ತವವಾಗಿ ದೇಶಪ್ರೇಮಿ ಶಕ್ತಿಗಳು ರಾಷ್ಟ್ರೀಯ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಪ್ರಗತಿಯ ಹೋರಾಟದಲ್ಲಿ ದುಡಿಯುವ ಜನರ ಮಿತ್ರಶಕ್ತಿಗಳಾಗಬೇಕಾಗಿದ್ದವು, ಆಗಬಲ್ಲವಾಗಿದ್ದವು.

ಆದರೆ ಎಂಪಿಎಲ್ಎ ಆಗಲೀ ಅಥವಾ ಅದರ ನಾಯಕ ನೆಟೋ ಆಗಲೀ ಇಲ್ಲವೇ ಪೋರ್ಚುಗೀಸ್ ವಸಾಹತುವಾದದ ವಿರುದ್ಧ ಹೋರಾಡುತ್ತಿದ್ದ ಗಿನಿ-ಬಿಸೌ ಹಾಗೂ ಮೊಜಾಂಬಿಕ್‌ಗಳಲ್ಲಿನ ಅವರ ಸಹೋದ್ಯೋಗಿಗಳಾಗಲೀ ಈ ಯಾವುದೇ ಮಾರ್ಗವನ್ನೂ ಹಿಡಿಯಲಿಲ್ಲ. ಅವರು ಕ್ರಾಂತಿಕಾರಿ, ಪ್ರಜಾಸತ್ತಾತ್ಮಕ, ಸಾಮ್ರಾಜ್ಯವಾದ ವಿರೋಧಿ ರಾಷ್ಟ್ರೀಯವಾದದ ದೀರ್ಘವೂ ಕಷ್ಟಕರವೂ ಆದರೂ ಸರಿಯಾದ ಮಾರ್ಗ ಹಿಡಿದರು. ಅವರು ಅದರ ಸಾಮಾಜಿಕ ಒಳತಿರುಳನ್ನು ಗಾಢಗೊಳಿಸಿದರು, ಶೋಷಕ ಅಂಶಗಳನ್ನು ಕ್ರಮೇಣ ಹಾಗೂ ಸತತವಾಗಿ ದುರ್ಬಲಗೊಳಿಸಿದರು, ಹೊರಹಾಕಿದರು. ಹಾಗೆ ದುಡಿಯುವ ಜನರನ್ನು

ಈ ಪ್ರಜಾಸತ್ತಾತ್ಮಕ ರಾಷ್ಟ್ರೀಯವಾದದ ಮೂಲಕ ವೈಜ್ಞಾನಿಕ ಸಮಾಜವಾದದ ವಿಚಾರಗಳನ್ನು ಕಲಿಯತೊಡಗಿದರು. ದೀರ್ಘ ಹೋರಾಟದ ವರ್ಷಗಳಲ್ಲಿ ಎಂಪಿಎಲ್‌ಎ ಹಿಡಿದ ಈ ಮಾರ್ಗವು ಆಫ್ರಿಕ ವಸಾಹತುವಾದದ ವಿರುದ್ಧ ಹೋರಾಡಲು ತುಂಬ ವಿಶಾಲವಾದ ಜನ ವಿಭಾಗಗಳನ್ನು ಒಂದುಗೂಡಿಸಲು ಸಾಧ್ಯಮಾಡಿಕೊಟ್ಟಿತು.

ರಾಜಕೀಯ ಸ್ವಾತಂತ್ರ್ಯವನ್ನು ಆಗಲೇ ಗಳಿಸಿಕೊಂಡಿದ್ದಾಗ 1976ರ ಕೊನೆಯ ಭಾಗದಲ್ಲಿ ಜರುಗಿದ ಎಂಪಿಎಲ್‌ಎ ಕೇಂದ್ರ ಸಮಿತಿಯ ತೃತೀಯ ಪ್ಲಿನಮ್‌ನಲ್ಲಿಷ್ಟೆ ಚಳವಳಿಯ ಅಂತಿಮ ಗುರಿ ಸಮಾಜವಾದ ಎಂದು ಘೋಷಿಸಲಾದುದು. ಹಾಗೆ ಘೋಷಿಸಿದಾಗಲೂ ಆಗಿನ ಬೆಳವಣಿಗೆಯ ಘಟ್ಟವನ್ನು ಸಮಾಜವಾದವೆಂದಲ್ಲ ಬದಲೆ ಜನತಾ-ಪ್ರಜಾಸತ್ತಾತ್ಮಕ ಘಟ್ಟವೆಂದು ಸುಸ್ಪಷ್ಟವಾಗಿ ನಿರೂಪಿಸಲಾಯಿತು. ಎಂಪಿಎಲ್‌ಎ-ಲೇಬರ್ ಪಾರ್ಟಿಯ ಪ್ರಥಮ ಮಹಾಧಿವೇಶನದಲ್ಲಿ ಅಂಗೀಕರಿಸಲಾದ ಕಾರ್ಯಕ್ರಮವೂ ಇದನ್ನೇ ಸಮರ್ಥಿಸಿತು. ಈ ದಸ್ತೈವಜಿನಲ್ಲಿ ಹೀಗೆ ತಿಳಿಸಲಾಯಿತು: "ಪೋರ್ಚುಗೀಸ್ ವಸಾಹತುವಾದದ ಪರಾಭವದೊಂದಿಗೆ ಹೋರಾಟದಲ್ಲಿ ಒಂದು ಹೊಸ ಘಟ್ಟಕ್ಕೆ – ಜನತಾ-ಪ್ರಜಾಸತ್ತಾತ್ಮಕ ಕ್ರಾಂತಿಯ ಘಟ್ಟಕ್ಕೆ – ಸಂಕ್ರಮಿಸಲು ಸೂಕ್ತ ಪರಿಸ್ಥಿತಿಗಳು ಉಂಟಾಗಿವೆ... ಈ ಪ್ರಜಾಸತ್ತಾತ್ಮಕ ಕ್ರಾಂತಿಯ ಘಟ್ಟದಲ್ಲಿ ಮುಂದಿನ ಘಟ್ಟಕ್ಕೆ, ಸಮಾಜವಾದಿ ಕ್ರಾಂತಿಯ ಘಟ್ಟಕ್ಕೆ, ಸಂಕ್ರಮಿಸಲು ಅವಶ್ಯವಾದ ರಾಜಕೀಯ ಹಾಗೂ ಭೌತಿಕ ಪರಿಸ್ಥಿತಿಗಳನ್ನು ಸೃಜಿಸಲಾಗುವುದು."*

ಹೋರಾಟದ ಗುರಿಗಳಿಗೆ ಸಂಬಂಧಿಸಿ ಈ ಹೊಸ ನಿರೂಪಣೆಯು ಸೈದ್ಧಾಂತಿಕ ಹಾಗೂ ರಾಜಕೀಯ ಆಧಾರತತ್ವದಲ್ಲಿ ಒಂದು ಮೂಲಭೂತ ಬದಲಾವಣೆಯನ್ನು ಉಂಟುಮಾಡಿದ್ದಿತಷ್ಟೆ ಅಲ್ಲ, ವೈಜ್ಞಾನಿಕ ಸಮಾಜವಾದದ ವಿಚಾರಧಾರೆಗೆ ಸಂಬಂಧಿಸಿದಂತೆ ಚಳವಳಿಯ ಬಹುಮಂದಿ ಸಹಭಾಗಿಗಳು ತಳೆದಿದ್ದ ಒಂದು ಹೊಸ ಮನೋಧರ್ಮವೂ ಆಗಿದ್ದಿತೆಂಬುದನ್ನು ನೆಟೊ ಚೆನ್ನಾಗಿ ತಿಳಿದಿದ್ದರು. ನಾವಾಗಲೇ ತಿಳಿಸಿರುವಂತೆ ನೆಟೊರವರ ಉಪಕ್ರಮದ ಮೇರೆಗೇ ಎಂಪಿಎಲ್‌ಎ-ಲೇಬರ್ ಪಾರ್ಟಿಯು ತನ್ನ ಪ್ರಥಮ ಮಹಾಧಿವೇಶನದಲ್ಲಿ ವೈಜ್ಞಾನಿಕ ಸಮಾಜವಾದವನ್ನು ತನ್ನ ಸೈದ್ಧಾಂತಿಕ ಬುನಾದಿಯನ್ನಾಗಿ ಘೋಷಿಸಿದುದು. ಇದನ್ನು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಎಂದೂ ಮಾಡಲಿಲ್ಲ – ಎಂಪಿಎಲ್‌ಎಯ ಅಗ್ರ ನಾಯಕರೂ, ಎಲ್ಲರಿಗೂ ಮಿಗಿಲಾಗಿ ನೆಟೊರವರೇ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತದ ಅನುಯಾಯಿಗಳಾಗಿದ್ದರು ಎಂಬುದು ಸ್ವಯಂವೇದ್ಯವಾಗಿದ್ದಿತು. ಅಂತಹ ಹೆಜ್ಜೆ ಕೈಗೊಳ್ಳುವಾಗ ಹೋರಾಟದ ವ್ಯೂಹಾತ್ಮಕ ಗುರಿ ಹಾಗೂ ಅಗತ್ಯಗಳಿಂದ ಮಾರ್ಗದರ್ಶಿತವಾಗಿರುವುದು ಅವಶ್ಯ, ಸ್ವಂತ ಜಾಗೃತಿಯ ಮಟ್ಟವನ್ನಲ್ಲ ಆದರೆ ಚಳವಳಿಯಲ್ಲಿ ಭಾಗವಹಿಸುತ್ತಿರುವವರಲ್ಲಿ ಬಹುಮಂದಿಯ ಜಾಗೃತಿಯ ಮಟ್ಟವನ್ನು ಗಮನಕ್ಕೆ ತಂದುಕೊಳ್ಳುವುದು ಅವಶ್ಯ ಎಂಬುದು ನೆಟೊರವರ ನಂಬಿಕೆಯಾಗಿದ್ದಿತು. ಅವರು ವೈಜ್ಞಾನಿಕ ಸಮಾಜವಾದವನ್ನು ಎಂಪಿಎಲ್‌ಎ-ಲೇಬರ್ ಪಾರ್ಟಿಯ ಸೈದ್ಧಾಂತಿಕ ಬುನಾದಿಯನ್ನಾಗಿ ಘೋಷಿಸಲು ಅವಸರಿಸಲಿಲ್ಲ. ಹಾಗೆ ಮಾಡಿ ಅವರು ಸಾಮಾಜಿಕ ಸ್ಥಾನಮಾನ ಅಥವಾ ರಾಜಕೀಯ ಪರಿಪಕ್ವತೆಯ ಪ್ರಮಾಣದ ಕಾರಣದಿಂದಾಗಿ ವೈಜ್ಞಾನಿಕ ಸಮಾಜವಾದವನ್ನು ಅಂಗೀಕರಿಸಲು ಇನ್ನೂ ಸಿದ್ಧರಿರದಂಥ ಜನವಿಭಾಗಗಳನ್ನು ಗಾಬರಿಗೊಳಿಸಿ ಅವು ಚಳವಳಿಯಿಂದ ಹೊರ ಹೋಗುವಂತೆ ಮಾಡ ಬಯಸಲಿಲ್ಲ.

ನೆಟೊರವರ ಉಪಕ್ರಮದ ಮೇರೆಗೆ ಎಂಪಿಎಲ್‌ಎ ಸ್ವಾತಂತ್ರ್ಯ ಗಳಿಸಿದನಂತರವಷ್ಟೆ ವೈಜ್ಞಾನಿಕ ಸಮಾಜವಾದದ ಪರವಾಗಿ ತನ್ನ ಆಯ್ಕೆ ಮಾಡಿಕೊಂಡಿತು. ಆಗ ಅಂಗೋಲದಲ್ಲಿ ವರ್ಗ ವೈಷಮ್ಯ ತೀವ್ರಗೊಂಡಿದ್ದಿತು. ಸಾಮ್ರಾಜ್ಯಶಾಹಿಗಳು ದೇಶದಲ್ಲಿ ಬೂರ್ಷ್ವಾ ಹಾಗೂ ಪೆಟಿ ಬೂರ್ಷ್ವಾ ಜನಸ್ತರವನ್ನು ನಿರ್ಮಿಸಿ ಅದನ್ನು ಸಾಧ್ಯವಾದಷ್ಟು ಬೇಗ ಪ್ರತಿಕ್ರಾಂತಿಕಾರಿ ಶಕ್ತಿಯನ್ನಾಗಿ ಪರಿವರ್ತಿಸಲು ಯತ್ನಿಸುತ್ತಿದ್ದರು. ಅಂತರ್ಯುದ್ಧದನಂತರ ದೇಶದಲ್ಲಿ ವಿವಿಧ ಸಾಮಾಜಿಕ ಶಕ್ತಿಗಳ ಧ್ರುವೀಕರಣ ಪೂರ್ಣಗೊಂಡಿದ್ದಿತು. ಜೋಸ್ ವಾನ್-ದುನೆಮ್‌ರ ತೀವ್ರ-ಎಡ ದುಸ್ಸಾಹಸವಾದಿ ವೃಂದವು ತನ್ನನ್ನು ನಿಷ್ಠಾವಂತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಅನುಯಾಯಿಯೆಂದು ಘೋಷಿಸಿಕೊಂಡು ಎಂಪಿಎಲ್‌ಎ ನಾಯಕತ್ವದ ಮೇಲೆ ಪೆಟಿ ಬೂರ್ಷ್ವಾ ಮನೋಧರ್ಮದ ಆಪಾದನೆ ಹೊರಿಸಿದ್ದಿತು. ಇಂತಹ ಪರಿಸ್ಥಿತಿಯಲ್ಲಿಷ್ಟೆ ಎಂಪಿಎಲ್‌ಎ ವೈಜ್ಞಾನಿಕ ಸಮಾಜವಾದದ ಗುರಿಯನ್ನು ಘೋಷಿಸಿದುದು. ಈ ವಿಷಯಕ್ಕೆ ಸಂಬಂಧಿಸಿ ಚಳವಳಿ ಸಂಪೂರ್ಣವಾಗಿ ಸುಸಂಗತವಾಗಿದ್ದಿತು. ಅದು "ಆಫ್ರಿಕನ್ ಸಮಾಜವಾದ"ದ ಅನೇಕ ಪಕ್ಷಕಾರರಿಗೆ ಲಾಕ್ಷಣಿಕವಾಗಿದ್ದ ಅನಿಶ್ಚಯತೆಯನ್ನು ಎಂದೂ ತೋರಲಿಲ್ಲ. "ಯೂರೋಪಿಯನ್ ಸಮಾಜವಾದ" ಅಥವಾ "ಆಫ್ರಿಕನ್ ಸಮಾಜವಾದ" ಇರಲು ಸಾಧ್ಯವಿಲ್ಲ, ಅಭಿವೃದ್ಧಿಗೊಂಡ ದೇಶಗಳಿಗೆ ಒಂದು ಸಮಾಜವಾದ, ಅಭಿವೃದ್ಧಿಶೀಲ ದೇಶಗಳಿಗೆ ಇನ್ನೊಂದು ಸಮಾಜವಾದ ಇರಲು ಸಾಧ್ಯವಿಲ್ಲ, ಎಂದು ನೆಟೊ ಘೋಷಿಸಿದರು. "ಸಮಾಜವಾದ ಇರುವುದು ಒಂದೇ. ಅದೇ ವೈಜ್ಞಾನಿಕ ಸಮಾಜವಾದ. ಅದು ಭೂಮಂಡಲದ ಗಣನೀಯ ಭಾಗದಲ್ಲಿ ಒಂದು ವಾಸ್ತವಿಕತೆಯಾಗಿದೆ"* ಎಂದವರು ಹೇಳಿದರು. ಅಂಗೋಲದ ವಿಶಿಷ್ಟ ಪರಿಸ್ಥಿತಿಗಳನ್ನು ಗಣನೆಗೆ ತಂದುಕೊಂಡು ಮಾರ್ಕ್ಸ್‌ವಾದ-

---

*MPLA. *Partido de Trabalho, Estatutos e Programa*, Luanda, 1978, pp. 37, 41. – ಸಂ.

Relatório de Comité Central ao 1° Congresso de MPLA, Luanda, 1979, p. 53. – ಸಂ.

ಜ್ಞಾನವಾದದ ಉಜ್ವಲ ಸಿದ್ಧಾಂತವನ್ನು ಆಚರಣೆಗೆ ತರುವುದು ಅಂದಿನ ಕಾರ್ಯ ಭಾರವಾಗಿದ್ದಿತು ಎಂದೂ ಅವರು ತಿಳಿಸಿದರು. ಎಂಪಿಎಲ್‌ಎ ಸಂಸ್ಥೆಯನ್ನು ಒಂದು ಮುಂಚೂಣಿ ಕಾರ್ಮಿಕರ ಪಾರ್ಟಿಯನ್ನಾಗಿ ಪರಿವರ್ತಿಸುವ ಕಾರ್ಯ ಆಗಷ್ಟೆ ಪ್ರಾರಂಭವಾಗಿದ್ದಿತು. ವೈಜ್ಞಾನಿಕ ಸಮಾಜವಾದದ ಅಗತ್ಯಗಳನ್ನು ತೃಪ್ತಿಪಡಿಸು ವಂಥ ಕಾರ್ಯಕ್ರಮವೊಂದನ್ನು ರೂಪಿಸಿ ಅಂಗೀಕರಿಸುವುದಷ್ಟೆ ಸಾಲದು, ಎಂಬು ದನ್ನು ನೆಟೊ ಚೆನ್ನಾಗಿ ಮನಗಂಡಿದ್ದರು. ಮುಖ್ಯ ಕಾರ್ಯಭಾರ, ವೈಜ್ಞಾನಿಕ ಸಮಾಜವಾದದ ವಿಚಾರಗಳನ್ನು ಪಾರ್ಟಿಯ ಎಲ್ಲ ಸದಸ್ಯರಿಗೂ ಮನವರಿಕೆ ಮಾಡಿಕೊಡುವುದಾಗಿದ್ದಿತು, ಅದನ್ನು ಅವಿಚಲವಾಗಿ ಆಚರಣೆಯಲ್ಲಿ ತರುವು ದಾಗಿದ್ದಿತು.

ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ವರ್ಗ ಶಕ್ತಿಗಳು ಹೇಗೆ ಸಾಲುಗೂಡಿವೆ ಎಂಬುದನ್ನು ನಿರೂಪಿಸುವ ಸಮಸ್ಯೆಯು ಕ್ರಾಂತಿಯು ಯಾವ ಮಜಲಿನಲ್ಲಿದೆ ಎನ್ನುವುದನ್ನು ನಿರ್ಧರಿಸುವ ಸಮಸ್ಯೆಯೊಂದಿಗೆ ಅವಿಭಾಜ್ಯವಾಗಿ ಸಂಬಂಧಿತ ವಾಗಿದೆ. ನೆಟೊರವರು ಈ ಸಮಸ್ಯೆಯನ್ನು ಪರಿಹರಿಸಲು ಮಹತ್ಕಾಣಿಕೆ ಸಲ್ಲಿ ಸಿದರು. ಸಾಮ್ರಾಜ್ಯಶಾಹಿಗಳನ್ನು ಹಿಮ್ಮೆಟ್ಟಿಸಲು ರಾಷ್ಟ್ರೀಯ ಶಕ್ತಿಗಳನ್ನೆಲ್ಲ ಪರಮಾವಧಿ ಪ್ರಮಾಣದಲ್ಲಿ ಒಂದುಗೂಡಿಸಬೇಕು ಎಂಬ ವಿಚಾರಕ್ಕೆ ಅವರು ಬೆಂಬಲ ನೀಡಿದರು. ಎಲ್ಲ ಸಾಮಾಜಿಕ ಸ್ತರಗಳೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವಂತೆ ಮಾಡುವುದೇ "ರಾಷ್ಟ್ರೀಯ ರಂಗ" ನೀತಿಯ ಮುಖ್ಯೋ ದ್ದೇಶ ಎಂದು ಎಂಪಿಎಲ್‌ಎ ದಸ್ತೈವಜುಗಳು ಒತ್ತಿ ತಿಳಿಸಿದವು. ಸಾಮ್ರಾಜ್ಯವಾದ ವಿರೋಧಿ ಆಧಾರದ ಮೇಲೆ ಇಡೀ ಜನರನ್ನು ಒಂದುಗೂಡಿಸುವುದೆಂದರೆ ಅದರಲ್ಲಿ ಭಾಗವಹಿಸುವವರನ್ನೆಲ್ಲ ಒಂದೇ ಮಟ್ಟಕ್ಕೆ ಇಳಿಸುವುದು ಎಂದೇನೂ ಅರ್ಥವಲ್ಲ. ಸಮಾಜದ ವಿವಿಧ ಸ್ತರಗಳ ಜನರು ತಮ್ಮ ಆರ್ಥಿಕ ಸ್ಥಾನಮಾನದಿಂದಾಗಿ ವಿಭಿನ್ನ ಪಾತ್ರಗಳನ್ನು ನಿರ್ವಹಿಸುತ್ತಾರೆಂಬುದನ್ನು ಮರೆಯುವುದು ಮತ್ತು ಅವರ ನಡುವಿನ ವೈರುಧ್ಯಗಳನ್ನು, ವೈಷಮ್ಯಗಳನ್ನೂ ಸಹ, ಉಪೇಕ್ಷಿಸುವುದು, ಎಂದೇನೂ ಅದರ ಅರ್ಥವಲ್ಲ, ಎಂದು ದಸ್ತೈವಜುಗಳಲ್ಲಿ ತಿಳಿಸಲಾಯಿತು. ನೆಟೊರವರು ಕಂಡುಕೊಂಡಂತೆ, ರಾಷ್ಟ್ರೀಯ ಏಕತೆಯು ವರ್ಗ ಹೋರಾಟ ಸೂತ್ರವನ್ನು ಮನ್ನಿಸುವವರ ಮೇಲೆ, ವರ್ಗ ಹೋರಾಟವನ್ನು ಕ್ರಾಂತಿಕಾರಿ ಪ್ರಕ್ರಿಯೆಯ ಬೆಳವಣಿಗೆಗನುಗುಣವಾಗಿ ಪರಿವರ್ತಿಸುವ ಅಗತ್ಯದ ಮೇಲೆ, ಆಧರಿಸಿದ್ದಿತು.

ಸ್ವಾತಂತ್ರ್ಯ ಹೋರಾಟದ ವರ್ಷಗಳಲ್ಲಿ ಪ್ರತಿರೋಧ ಚಳವಳಿಯಲ್ಲಿ ಭಾಗ ವಹಿಸುತ್ತಿದ್ದ ಯಾವುದೇ ಸಾಮಾಜಿಕ ಸ್ತರಗಳನ್ನೂ ಹೋರಾಟದ ಪ್ರಧಾನ ಶಕ್ತಿ ಯೆಂದು ಎಂಪಿಎಲ್‌ಎ ಕಾರ್ಯಕ್ರಮ ದಸ್ತೈವಜುಗಳು ಎತ್ತಿ ತೋರಿಸಲಿಲ್ಲ. ರಾಜಕೀಯ ಸ್ವಾತಂತ್ರ್ಯ ಗಳಿಸಿಕೊಂಡಾಗ ಪರಿಸ್ಥಿತಿ ಬದಲಿದ್ದಿತು. ಭವಿಷ್ಯತ್ತಿನಲ್ಲಿ ಸಮಾಜವಾದಿ ಕ್ರಾಂತಿಯ ಮಜಲಿಗೆ ಸಂಕ್ರಮಿಸಲೋಸುಗ ನೆಲೆ ಸಿದ್ಧಗೊಳಿಸಲು

ಪ್ರಸ್ತುತದಲ್ಲಿ ಜನತಾ ಪ್ರಜಾಪ್ರಭುತ್ವವನ್ನು ನಿರ್ಮಿಸುವ ಕಾರ್ಯಭಾರವನ್ನು ಮುಂದಿರಿಸಲಾಗಿದ್ದಿತು. ಸ್ವಾತಂತ್ರ್ಯಕ್ಕೆ ಮುನ್ನ ಅಂಗೋಲ ಸಮಾಜದಲ್ಲಿನ ಅಂತ ರಿಕ ವೈರುಧ್ಯಗಳು ಹಿನ್ನೆಲೆಗೆ ಸರಿದಿದ್ದವು, ಏಕೆಂದರೆ, ಪೋರ್ಚುಗೀಸ್ ವಸಾಹತು ವಾದಿಗಳ ವಿರುದ್ಧ ಹೋರಾಟದ ಸಾಮಾನ್ಯ ಗುರಿಗಳು ಎಲ್ಲರ ಮುಂದಿದ್ದವು. ದೇಶವನ್ನು ವಿಮೋಚನೆಗೊಳಿಸಿದನಂತರ, ನೆಟೊರವರು ಎಂಪಿಎಲ್‌ಎಯ ಪ್ರಥಮ ಮಹಾಧಿವೇಶನದಲ್ಲಿ ತಿಳಿಸಿದಂತೆ, ಅಂಗೋಲ ಸಮಾಜದ ಒಳಗಿದ್ದ ವೈರುಧ್ಯ ಗಳು ತೀವ್ರಗೊಂಡಿದ್ದವು, ವರ್ಗ ಹೋರಾಟ ಹೆಚ್ಚು ಹರಿತವಾಗಿದ್ದಿತು ಮತ್ತು ಪೆಟಿ ಬೂರ್ಜ್ವಾ ಶಕ್ತಿಗಳು ಹೆಚ್ಚು ಕ್ರಿಯಾಶೀಲವಾಗಿದ್ದವು.* ಹೀಗೆ, ಅಂಗೋಲದ ಜನತಾ ಗಣತಂತ್ರದಲ್ಲಿ ಅಧಿಕಾರವು ದುಡಿಯುವ ಜನರ ಕೈಗಳಲ್ಲಿದ್ದಿತು, ಎಲ್ಲ ದೇಶಪ್ರೇಮಿ ಶಕ್ತಿಗಳ ಏಕತೆಯು ರೈತ ಕಾರ್ಮಿಕರ ಮೈತ್ರೀಕೂಟದ ಮೇಲೆ ಆಧ ರಿಸಿದ್ದಿತು, ಈ ಮೈತ್ರೀಕೂಟದಲ್ಲಿ ಕಾರ್ಮಿಕ ವರ್ಗವು ಅಗ್ರಗಾಮಿ ಪಾತ್ರ ನಿರ್ವಹಿ ಸುತ್ತಿದ್ದಿತು, ಎಂದು ಎಂಪಿಎಲ್‌ಎ ಕಾರ್ಯಕ್ರಮದಲ್ಲೂ ನೆಟೊರವರ ಭಾಷಣ ಗಳಲ್ಲೂ ಒತ್ತಿ ತಿಳಿಸಲಾಯಿತು.

ದುಡಿಯುವ ಜನಸಮೂಹಗಳಿಗೆ ಶ್ರಮಜೀವಿ ವರ್ಗವು ನಾಯಕನಾಗಿರುವ ವಿಚಾರವನ್ನು ರಾಷ್ಟ್ರೀಯ ಏಕತೆಯ ವಿಚಾರಕ್ಕೆ ವಿರುದ್ಧವಾಗಿ ಎತ್ತಿ ಹಿಡಿಯುವ, ಕ್ರಾಂತಿಯನ್ನು ಕೃತಕವಾಗಿ ಬಲಾತ್ಕಾರದಿಂದ ಉಂಟುಮಾಡುವ ಮೂಲಕ ಕಾರ್ಮಿಕ ವರ್ಗವನ್ನು ಮಧ್ಯಂತರ ಪೆಟಿ ಬೂರ್ಜ್ವಾ ಜನಸ್ತರಗಳ ವಿರುದ್ಧ ಎತ್ತಿ ಕಟ್ಟುವ, ವಾನ್-ದೂನೆಮ್‌ರ ಒಳಗುಂಪುಗಾರಿಕೆಯ ವೃಂದದ ದುಸ್ಸಾಹಸಿಕ ಯತ್ನಗಳನ್ನು ನೆಟೊ ದೃಢವಾಗಿ ವಿರೋಧಿಸಿದರು. ಅಧಿಕಾರದಾಹದಿಂದ ಈ ಒಳಗುಂಪು ಗಾರಿಕೆಯ ವೃಂದವು ನಡೆಸುತ್ತಿದ್ದ ಪ್ರಚಾರ ತಂತ್ರಕ್ಕೆ ವಿರುದ್ಧವಾಗಿ ನೆಟೊ "ಕ್ರಾಂತಿ ಯನ್ನು ಸಾಧಿಸಲು ಎಲ್ಲ ದೇಶಪ್ರೇಮಿ ಶಕ್ತಿಗಳೂ ಒಂದುಗೂಡಿ ಶ್ರಮಿಸಬೇಕು..." ಎಂಬ ಎಂಪಿಎಲ್‌ಎಯ ಪ್ರಧಾನ ಸೂತ್ರವನ್ನು ದೃಢವಾಗಿ ಒತ್ತಿಹೇಳಿದರು. "ನಾವು ರಾಷ್ಟ್ರೀಯ ಏಕತೆಯನ್ನು ಸಮರ್ಥಿಸುತ್ತೇವೆ" ಎಂದು ನೆಟೊ ಘೋಷಿ ಸಿದರು. "ಅವರಾದರೋ ಅದನ್ನು ಸಮರ್ಥಿಸರು. ಕಾರ್ಮಿಕ ವರ್ಗ ಶಾಸನ ಮಾಡುವುದನ್ನು ಅವರು ಕಾಣಬಯಸುತ್ತಾರೆ, ಅದರೆ ಒಂಟಿಯಾಗಿ ಶಾಸನ ಮಾಡುವುದನ್ನು, ಇತರ ವರ್ಗಗಳೊಂದಿಗೆ ಸತತವಾಗಿ ಹೋರಾಡುತ್ತ ಶಾಸನ ಮಾಡುವುದನ್ನು."** ಪ್ರತ್ಯೇಕತಾವಾದಿ ವೃಂದದ ಚಟುವಟಿಕೆಯನ್ನು ಬಯಲು

---

*See *Relatório de Comité Central ao 1° Congresso de MPLA*, p. 14.—ಸಂ.

**Africa Contemporary Record, Annual Survey and Documents, 1977-1978*, Africana Publishing Company, London, 1979, p. 497.—ಸಂ.

ಪರಿಣಾಮ, ಎಂಪಿಎಲ್‌ಎ ಕೇಂದ್ರ ಸಮಿತಿಯ ರಾಜಕೀಯ ಮಂಡಳಿಯು 1977ರ ಜುಲೈ 12ರಂದು ಒಂದು ಹೇಳಿಕೆಯನ್ನು ಹೊರಡಿಸಿತು. "ವೈಜ್ಞಾನಿಕ ಸಮಾಜವಾದದ ಸಿದ್ಧಾಂತವನ್ನಾಯುಧವನ್ನು ಪ್ರವರ್ತಿಸ ಕಾರ್ಮಿಕ ವರ್ಗವು ರಾಷ್ಟ್ರೀಯ ಕ್ರಾಂತಿಯಲ್ಲಿ ಇತರ ಶಕ್ತಿಗಳಿಂದ ತನ್ನನ್ನು ಪ್ರತ್ಯೇಕಗೊಳಿಸಿಕೊಳ್ಳದೆಯೇ ತನ್ನ ಅಗ್ರಗಾಮಿ ಪಾತ್ರ ನಿರ್ವಹಿಸುವಂತೆ ಮಾಡಲೋಸುಗ"* ಎಂಪಿಎಲ್‌ಎ ಪಾರ್ಟಿಯು ಹೋರಾಟವನ್ನು ಮುಂದುವರಿಸುತ್ತಲೇ ಹೋಗುವುದೆಂದು ಆ ಹೇಳಿಕೆ ತಿಳಿಸಿತು. ಎಲ್ಲ ಸಂಪ್ರದಾಯನಿಷ್ಠರ ವಿರುದ್ಧ, ಅದರಲ್ಲೂ ವಿಶೇಷವಾಗಿ ತೀವ್ರ-ಎಡ ವೃಂದದ ಪರಾಭವದೊಂದಿಗೆ ಪಾತ್ರ ಅನಿರ್ಬಂಧಿತವಾಗಿ ಸಿರಿವಂತರಾಗುವ ಕಾಲ ಬಂದಿದ್ದಿತೆಂದು ಭಾವಿಸಿದ್ದಂಥ ಪೆಟಿ ಬೂರ್ಷ್ವಾಸೀಯ ಹಲವು ಸದಸ್ಯರ ವಿರುದ್ಧ, ಹೋರಾಟ ನಡೆಸುವುದು ಅಗತ್ಯವಾಗಿದ್ದಿತೆಂದೂ** ಆ ಹೇಳಿಕೆ ಒತ್ತಿ ತಿಳಿಸಿತು.

1979ರ ಜುಲೈ ಮತ್ತು ಆಗಸ್ಟ್‌ಗಳಲ್ಲಿ ಮಾಡಿದ ತಮ್ಮ ಕೊನೆಯ ಭಾಷಣಗಳಲ್ಲಿ ನೆಟೊ ತುಂಬ ಆಗಾಗ್ಗೆ ಪೆಟಿ ಬೂರ್ಷ್ವಾ ಪ್ರಭಾವ ಬೆಳೆಯುತ್ತಿರುವುದರ ಅಪಾಯದ ಕಡೆಗೆ ಗಮನ ಸೆಳೆದರು. ಈ ಪೆಟಿ ಬೂರ್ಷ್ವಾ ಪ್ರಭಾವವು ಪ್ರಥಮ ಎಂಪಿಎಲ್‌ಎ ಮಹಾಧಿವೇಶನದ ನಿರ್ಣಯವನ್ನು ಕಾರ್ಯಗತಗೊಳಿಸುವುದನ್ನು ನಿರರ್ಥಕಗೊಳಿಸಬಹುದಿದ್ದಿತು. ದೇಶದಲ್ಲಿ ಅಧಿಕಾರವು ರೈತ ಕಾರ್ಮಿಕರಿಗೆ ಸೇರಿರಬೇಕೇ ಹೊರತು ಬೂರ್ಷ್ವಾಸೀಗಲ್ಲ ಎಂದವರು ಒತ್ತಿ ಹೇಳಿದರು. ಅಂಗೋಲದಲ್ಲಿ ಬೂರ್ಷ್ವಾಸೀ ಅಧಿಕಾರ ಹೊಂದಿರದಿದ್ದರೂ ಎಚ್ಚರಿಕೆಯಿಂದಿರದಿದ್ದಲ್ಲಿ ಅದು ಅಧಿಕಾರಕ್ಕೆ ಬರಬಲ್ಲುದಿದ್ದಿತೆಂದೂ ಅವರು ಒತ್ತಿ ಹೇಳಿದರು. ಪೆಟಿ ಬೂರ್ಷ್ವಾಸೀಯು ರೈತ ಕಾರ್ಮಿಕರಿಗೆ ಅಂಜಬೇಕಾದುದಿಲ್ಲ, ಅದು ದುಡಿಯುವ ಜನರ ಹಿತಗಳಿಗೆ ತನ್ನನ್ನು ಅಧೀನಗೊಳಿಸಿಕೊಂಡು ಇದ್ದಲ್ಲಿ ಮತ್ತು ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳದೆ ಇದ್ದಲ್ಲಿ ತನ್ನ ಆರ್ಥಿಕ ಚಟುವಟಿಕೆಗಳನ್ನು ನಡೆಸಿಕೊಂಡೇ ಹೋಗಲು ಅದು ಅವಕಾಶ ಉಳಿಸಿಕೊಂಡಿರಬಲ್ಲುದು, ಎಂದು ಅವರು ತಿಳಿಸಿದರು. ಹೀಗೆ ಆರ್ಥಿಕತೆಯ ಕೆಲವು ಶಾಖೆಗಳಲ್ಲಿ ಖಾಸಗಿ ಉದ್ಯಮಕ್ಕೆ ಅವಕಾಶ ನೀಡಲಾಯಿತು, ಉತ್ತೇಜನವನ್ನೂ ನೀಡಲಾಯಿತು. ಅದೇ ಹೊತ್ತಿನಲ್ಲಿ ಖಾಸಗಿ ಉದ್ಯಮವು ರಾಜಕೀಯ ನಾಯಕತ್ವಕ್ಕೆ, ಅಧಿಕಾರಕ್ಕೆ ಮಾಡುತ್ತಿದ್ದ ಹಕ್ಕು ಸಾಧನೆಯನ್ನು ಕೊನೆಗಾಣಿಸಲಾಯಿತು. ಈ ರೀತಿಯ ಸಂಯೋಜನೆಯು ರಾಷ್ಟ್ರೀಯ ರಂಗ ಹಾಗೂ ವರ್ಗ ಹೋರಾಟ ಅನುಸರಿಸಿದ ನೀತಿಯ ದ್ವಂದ್ವಾತ್ಮಕ ಏಕತೆಯಾಗಿದ್ದಿತು. ಅದು ಎಲ್ಲ ರಾಷ್ಟ್ರೀಯ ಶಕ್ತಿಗಳನ್ನೂ ಒಂದುಗೂಡಿಸಿತು, ಕಾರ್ಮಿಕ ವರ್ಗದ ಅಗ್ರಗಾಮಿ ಪಾತ್ರವನ್ನು ದೃಢಗೊಳಿಸಿತು. ಇದು ನೆಟೊರವರ ಕ್ರಾಂತಿಕಾರಿ ನೀತಿಮಾರ್ಗದ ವಿಶಿಷ್ಟ ಲಕ್ಷಣವಾಗಿದ್ದಿತು.

———

*The African Communist, No. 71, 1977, London, p. 49. – ಸಂ.

**ಅದೇ ಗ್ರಂಥ, ಪು. 50. – ಸಂ.

ಅಂಗೋಲದಲ್ಲಷ್ಟೆ ಅಲ್ಲ ಆಫ್ರಿಕದ ಅನೇಕ ದೇಶಗಳಲ್ಲಿ ರಾಷ್ಟ್ರೀಯ ಏಕತೆಯ ಸಮಸ್ಯೆಯು ವರ್ಗ ಸ್ವರೂಪವನ್ನಷ್ಟೆ ಅಲ್ಲ ಸರಕುಲ ಸಂಬಂಧದ ಒಂದು ಮುಗ್ಗುಲನ್ನೂ ಹೊಂದಿದೆ. ಸರಕುಲ ಸಂಬಂಧಿ ವೈವಿಧ್ಯತೆಯನ್ನು ರಾಜಕೀಯ ಉದ್ದೇಶಗಳಿಗಾಗಿ ಬಳಸಿಕೊಳ್ಳಲು ಮಾಡಿದ ಯತ್ನಗಳ ಫಲವಾಗಿ ಅಂಗೋಲ ಎಂತಹ ಘೋರ ವಿಪತ್ತುಗಳನ್ನು ಅನುಭವಿಸಬೇಕಾಗಿ ಬಂದಿತೆಂಬುದನ್ನು ನಾವಾಗಲೇ ತಿಳಿದಿದ್ದೇವೆ. ಅಂಗೋಲದಲ್ಲಿ ವಾಸಿಸುತ್ತಿದ್ದ ಎಲ್ಲ ಬುಡಕಟ್ಟುಗಳೂ ಕುಲಗಳೂ ಹಾಗೂ ಉಪಜನಾಂಗಗಳೂ ಐಕ್ಯಗೊಂಡಿರಬೇಕೆಂಬ ವಿಚಾರವನ್ನು ನೆಟೊ ನಿರಂತರವಾಗಿ ಬೆಂಬಲಿಸಿದರು. ವಿವಿಧ ಬುಡಕಟ್ಟುಗಳು ತಮ್ಮವೇ ಗುಂಪುಗಳನ್ನು ರಚಿಸಿಕೊಂಡು ತಮ್ಮವೇ ಚಳವಳಿಗಳನ್ನು ನಡೆಸುತ್ತ ಕುಲವಾದಿ ಘೋಷಣೆಗಳನ್ನು ಅಂಗೀಕರಿಸಲೂ ಹೇಸದಿದ್ದಂಥ ಸಂದರ್ಭದಲ್ಲಿ ಅದಕ್ಕೆ ವಿರುದ್ಧವಾಗಿ ಎಂಪಿಎಲ್‌ಎ ನೆಟೊರವರ ನಾಯಕತ್ವದಲ್ಲಿ ನಿಜಕ್ಕೂ ರಾಷ್ಟ್ರವ್ಯಾಪಿಯಾದ ಸಂಘಟನೆಯಾಗಿ ಬೆಳೆಯಿತು. ನೆಟೊರವರು ರಾಷ್ಟ್ರೀಯ ಹಿತಗಳಿಗಾಗಿ ಹೋರಾಡುತ್ತಿದ್ದ ಎಲ್ಲರೊಂದಿಗೆ ಜೊತೆಗೂಡಿ ಕಾರ್ಯ ಜರುಗಿಸಲು ಸಿದ್ಧರಿದ್ದರು. ಆದರೆ ಅಧಿಕಾರ ಲಾಲಸೆಗಾಗಿ ದೇಶದ ಹಿತವನ್ನು ಬಲಿ ಕೊಡಲು ಸಿದ್ಧರಿದ್ದ ನೀತಿರಹಿತ ರಾಜಕಾರಣಿಗಳನ್ನು ಅವರು ಬದ್ಧವಾಗಿ ವಿರೋಧಿಸಿದರು. "ಪಸಾಹತುವಾದಿಗಳ ಕೈಗೊಂಬೆಗಳೊಂದಿಗೆ ಏಕತೆ ಎಂದಿಗೂ ಸಾಧ್ಯವಿಲ್ಲ" ಎಂದು ನೆಟೊ ಘೋಷಿಸಿದರು. "ವಿವಿಧ ಪ್ರವೃತ್ತಿಗಳ ದೇಶಪ್ರೇಮಿ ಶಕ್ತಿಗಳ ನಡುವೆಯಷ್ಟೆ ಏಕತೆಯ ಪ್ರಶ್ನೆ ಪರಿಶೀಲನೆಗೆ ಅರ್ಹವಾಗಿರುತ್ತದೆ, ದೇಶಪ್ರೇಮಿಗಳ ಹಾಗೂ ದೇಶದ್ರೋಹಿಗಳ ನಡುವೆಯಲ್ಲ."* ನೆಟೊರವರು ಈ ಅಭಿಪ್ರಾಯಗಳಿಗೆ ದೃಢವಾಗಿ ಬದ್ಧರಾಗಿದ್ದರು. ಇದು ಅವರು ಅಂಗೋಲ ರಾಷ್ಟ್ರಕ್ಕೆ ನೀಡಿದ ಅಣತಿಗಳಲ್ಲೊಂದಾಗಿದೆ.

ನೆಟೊರವರು ಸೋವಿಯತ್ ಒಕ್ಕೂಟಕ್ಕೂ ತಮ್ಮ ದೇಶಕ್ಕೂ ನಡುವೆ ಇದ್ದ ಸೋದರ ಸ್ನೇಹವನ್ನು ದೃಢಗೊಳಿಸಲು ತುಂಬ ಯತ್ನ ಮಾಡಿದರು. ಈ ಅರ್ಥದಲ್ಲಿ ಅವರ ಅನುಭವ ಅಂತರರಾಷ್ಟ್ರೀಯ ಮಹತ್ವವುಳ್ಳದ್ದಾಗಿದೆ. ಸಮಾಜವಾದಿ ದೇಶಗಳೊಂದಿಗೆ ಸಮೈಕ್ಯತೆಯೂ ಅವುಗಳ ಅಂತರರಾಷ್ಟ್ರೀಯ ನೆರವೂ ರಾಷ್ಟ್ರೀಯ-ವಿಮೋಚನಾ ಚಳವಳಿಯ ಪ್ರಾಣಾಧಾರ ವ್ಯೂಹಾತ್ಮಕ ಮೀಸಲು

———

*Don Barnett and Roy Harvey, *The Revolution in Angola. MPLA, Life Histories and Documents*, The Bobbs-Merrill Company, Inc., New York, 1972, p. 300. – ಸಂ.

ಶಕ್ತಿಗಳಾಗಿದ್ದವೆಂಬುದನ್ನು ಸಾಮ್ರಾಜ್ಯಶಾಹಿ ಅತಿಕ್ರಮಣಗಳಿಗೆ ವಿರುದ್ಧವಾಗಿ ಅವರ ವಿಜಯಗಳಿಗೆ ಸಮರ್ಥ ಖಾತರಿಯಾಗಿದ್ದವೆಂಬುದನ್ನು ಮನಗಂಡ ಮೊದಲ ಆಫ್ರಿಕನ್ ನಾಯಕರಲ್ಲಿ ಇವರೂ ಒಬ್ಬರಾಗಿದ್ದರು.

ರಾಜ್ಯದ ಅಧಿಪತಿಯಾದ ಕೂಡಲೇ ನೆಟೋರವರು ಸಮಾಜವಾದಿ ದೇಶಗಳೊಂದಿಗೆ ಸಂಬಂಧಗಳನ್ನು ವಿಕಾಸಗೊಳಿಸಲು ಹೊಸ ಅವಕಾಶಗಳನ್ನು ವಿಶಾಲವಾಗಿ ಬಳಸಿಕೊಂಡರು. ಅಂಗೋಲದ ಕ್ರಾಂತಿಯು ಭಾರಿ ಅಪಾಯ ಎದುರಿಸಬೇಕಾಗಿ ಬಂದಾಗ ಅವರು ನೆರವಿಗೆ ಸೋವಿಯತ್ ಒಕ್ಕೂಟ, ಕ್ಯೂಬ ಮತ್ತಿತರ ಸಮಾಜವಾದಿ ದೇಶಗಳ ಕಡೆಗೆ ತಿರುಗಲು ಸ್ವಲ್ಪವೂ ಹಿಂದು ಮುಂದು ನೋಡಲಿಲ್ಲ. 1976ರ ಅಕ್ಟೋಬರ್‌ನಲ್ಲಿ ಅವರು ಮಾಸ್ಕೋಗೆ ಭೇಟಿ ನೀಡಿದಾಗ ಸೋವಿಯತ್ ಒಕ್ಕೂಟ ಮತ್ತು ಅಂಗೋಲದ ಜನತಾ ಗಣತಂತ್ರಗಳ ನಡುವೆ ಸ್ನೇಹ ಸಹಕಾರಗಳ ಒಡಂಬಡಿಕೆಗೆ ಸಹಿ ಹಾಕಿದರು. ಅದು ದ್ವಿಪಕ್ಷೀಯ ಸಹಕಾರಕ್ಕೆ ದೃಢ ಅಡಿಪಾಯ ಹಾಕಿಕೊಟ್ಟಿತು. ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಾರ್ಟಿ ಹಾಗೂ ಎಂಪಿಎಲ್‌ಎ-ಲೇಬರ್ ಪಾರ್ಟಿಗಳ ನಡುವೆ ಅಂತರಪಾರ್ಟಿ ಸಂಬಂಧಗಳೂ ವಿಕಾಸಗೊಳ್ಳತೊಡಗಿದವು.

ಸಂಘಟನಾತ್ಮಕವಾಗಿಯೂ ಸೈದ್ಧಾಂತಿಕವಾಗಿಯೂ ಪ್ರಬಲವಾದ ರಾಜಕೀಯ ಪಾರ್ಟಿಯೊಂದು ದೇಶದ ರಾಜಕೀಯ ಹಾಗೂ ಸಾಮಾಜಿಕ ಜೀವನದಲ್ಲಿ ಮಾರ್ಗದರ್ಶಕ ಕೇಂದ್ರ ಶಕ್ತಿಯಾಗಿರಬೇಕು, ಎಂಬುದೇ ಆಫ್ರಿಕದ ಅನುಭವದಿಂದ ತಾವು ಕಲಿತ ದೊಡ್ಡ ಪಾಠ ಎಂದು ನೆಟೊ ಅನೇಕ ಬಾರಿ ತಿಳಿಸಿದರು. ಹಿಂದೆ, ಪೋರ್ಚುಗೀಸ್ ಫ್ಯಾಸಿಸಂ ವಿರುದ್ಧ ಹೋರಾಡುತ್ತಿದ್ದ ವರ್ಷಗಳಲ್ಲೇ ನೆಟೊ ಹೇಳಿದರು: "ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಪಣ ತೊಟ್ಟಂಥ ಪಾರ್ಟಿಯೊಂದನ್ನು ಕಟ್ಟುವುದು ಅವಶ್ಯ. ಅದು ರಾಷ್ಟ್ರ ಜೀವನದ ಬೆನ್ನೆಲುಬಾಗಬೇಕು, ಅಡಿಪಾಯವಾಗಬೇಕು, ಪ್ರಧಾನ ಶಕ್ತಿಯಾಗಬೇಕು... ಎಲ್ಲಿ ಪಾರ್ಟಿ ಇರುವುದಿಲ್ಲವೋ, ಎಲ್ಲಿ ಸಮರಶೀಲ ಕಾರ್ಯಕರ್ತರು ಕಟ್ಟುನಿಟ್ಟಾದ ಶಿಸ್ತಿನ ಕೆಳಗೆ ಇರುವುದಿಲ್ಲವೋ, ಎಲ್ಲಿ ನಾಯಕರು ಕ್ರಾಂತಿಕಾರಿ ಸೂತ್ರಗಳಿಗೆ ಬದ್ಧರಾಗಿರುವುದಿಲ್ಲವೋ, ಅಲ್ಲಿ ಅರಾಜಕತೆ ಪ್ರವೇಶಿಸುತ್ತದೆ. ಅಲ್ಲಿ ಶತ್ರುಗಳು ಬಹು ಸುಲಭವಾಗಿ ನಮ್ಮ ಸೇನೆಯೊಳಕ್ಕೆ ನುಗ್ಗುತ್ತಾರೆ. ಸ್ವಾತಂತ್ರ್ಯದ ಬದಲು ನಾವು ನವವಸಾಹತುವಾದವನ್ನು ಹೊಂದುತ್ತೇವೆ, ಅಥವಾ ಪರಾಧೀನತೆ ಹಾಗೂ ಸ್ವಾಧೀನತೆ, ಪ್ರಗತಿ ಹಾಗೂ ಪ್ರತಿಗಾಮಿತ್ವ ಇವುಗಳ ನಡುವೆ ಅಭದ್ರವಾದ ಸಂತುಲನವನ್ನು ಪಡೆಯುತ್ತೇವೆ.*

ಪಾರ್ಟಿಯನ್ನು ಸೃಜಿಸುವುದಷ್ಟೆ ಅಲ್ಲ, ಅದನ್ನು ಸತತವಾಗಿ ಬೆಳೆಸಬೇಕು.

*ಅದೇ ಗ್ರಂಥ, ಪು. 34.–ಸಂ.

ಅವರ ಸಮಾಜವಾದಿ ಅಂತಃಶಕ್ತಿಯನ್ನು ವೃದ್ಧಿಗೊಳಿಸಬೇಕು, ಇದು ಅಂಗೋಲದ ಕ್ರಾಂತಿಕಾರಿಗಳ ಗುರಿಯಾಗಿರಬೇಕು, ಎಂದು ನೆಟೊ ಕಂಡುಕೊಂಡಿದ್ದರು. ಈ ನಿಟ್ಟಿನಲ್ಲಿ ಪ್ರಥಮ ಎಂಪಿಎಲ್‌ಎ ಮಹಾಧಿವೇಶನ ಒಂದು ನಿರ್ಧಾರಕ ಘಟನೆಯಾಗಿದ್ದಿತು. ಅದು "ಕಾರ್ಮಿಕರನ್ನೂ ರೈತರನ್ನೂ ಕ್ರಾಂತಿಕಾರಿ ಬುದ್ಧಿಜೀವಿಗಳನ್ನೂ ಮತ್ತು ಶ್ರಮಜೀವಿಗಳ ಧ್ಯೇಯಕ್ಕೆ ನಿಷ್ಠರಾಗಿರುವಂಥ ಇತರ ದುಡಿಯುವ ಜನರನ್ನೂ ಒಂದೇ ನಿಕಟ ಮೈತ್ರೀಕೂಟದಲ್ಲಿ"* ಒಂದುಗೂಡಿಸುವಂಥ ದುಡಿಯುವ ಜನರ ಪಾರ್ಟಿಯೊಂದನ್ನು ಸೃಜಿಸುವ ಕಾರ್ಯಭಾರವನ್ನು ಮುಂದಿರಿಸಿತು. ನೆಟೊರವರು ಎಂಪಿಎಲ್‌ಎ ಪ್ರಥಮ ಮಹಾಧಿವೇಶನ ಘೋಷಿಸಿದ ಸೂತ್ರಗಳಿಗನುಗುಣವಾಗಿ ಸಂಸ್ಥೆಯ ಸಂರಚನೆ ಹಾಗೂ ಚಟುವಟಿಕೆಗಳನ್ನು ಪುನಸ್ಸಂಘಟಿಸುವ ಕಡೆಗೆ ಸತತ ಗಮನ ನೀಡಿದರು. ಈ ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು 1978ರಲ್ಲಿ ಪಾರ್ಟಿಯನ್ನು "ಶುದ್ಧಗೊಳಿಸುವ ಚಳವಳಿ"ಯೊಂದನ್ನು ಪ್ರಾರಂಭಿಸಲಾಯಿತು.

ಅಂಗೋಲದಲ್ಲಿ ಜನತಾ ಅಧಿಕಾರದ ಅಂಗಸಂಸ್ಥೆಗಳನ್ನು ನಿರ್ಮಿಸುವುದಕ್ಕೂ ನೆಟೊ ಹೆಚ್ಚಿನ ಯತ್ನ ಹಾಕಿದರು. ಅವುಗಳನ್ನು ಸಂಘಟಿಸುವ ಕಾರ್ಯ ಬಹಳ ಕಾಲದವರೆಗೆ ಎಳೆದುಕೊಂಡೇ ಹೋಯಿತು. ಏಕೆಂದರೆ ಪ್ರತಿಗಾಮಿಗಳು ಅದಕ್ಕೆ ಉಗ್ರ ವಿರೋಧ ನೀಡುತ್ತಿದ್ದರು. ಜೊತೆಗೆ ಪಾರ್ಟಿಯಲ್ಲಿ ಒಳಗುಂಪುಗಾರಿಕೆಯ ವೃಂದವು ನಡೆಸುತ್ತಿದ್ದ ಕುತಂತ್ರಗಳೂ ಅಡ್ಡಿ ಬರುತ್ತಿದ್ದವು. ಅಧಿಕಾರದ ಅಂಗಸಂಸ್ಥೆಗಳಿಗೆ ನಡೆದ ಚುನಾವಣೆಗಳನ್ನು ಈ ವೃಂದವು ಸ್ವಾರ್ಥ ಹಿತಕ್ಕೆ ಬಳಸಿಕೊಳ್ಳಲು ಯತ್ನಿಸಿತು. ಹಾಗಾಗಿ ಜನತಾ ಅಧಿಕಾರದ ಈ ಅಂಗಸಂಸ್ಥೆಗಳ ನಿಜಕ್ಕೂ ಜನಪ್ರಿಯವಾದ ಲಕ್ಷಣಗಳನ್ನು, ಅವುಗಳಲ್ಲಿ ರೈತ ಕಾರ್ಮಿಕರು ಸಾಕಷ್ಟು ಪ್ರಾತಿನಿಧ್ಯ ಪಡೆಯುವುದನ್ನು ಖಚಿತಗೊಳಿಸಲು ತುಂಬ ಕಾಲವೇ ಹಿಡಿಸಿತು. ಈ ಕಾರ್ಯವನ್ನು ನೆಟೊರವರ ಸಾವಿನನಂತರವಷ್ಟೆ ಪೂರೈಸಲಾಯಿತು.

ಸಾವಿಗೆ ಸ್ವಲ್ಪ ಕಾಲದ ಮುನ್ನವಷ್ಟೆ ನೆಟೊ ದೇಶದ ವಿವಿಧ ಪ್ರದೇಶಗಳಲ್ಲಿ ಪ್ರವಾಸ ಕೈಕೊಂಡು ಸಾಮೂಹಿಕ ಸಭೆಗಳನ್ನುದ್ದೇಶಿಸಿ ಭಾಷಣ ಮಾಡಿದರು. ಪಾರ್ಟಿಯನ್ನೂ ರಾಜ್ಯವನ್ನೂ ಅಭಿವೃದ್ಧಿಗೊಳಿಸುವ ಪ್ರಶ್ನೆಗಳೇ ಅವರ ಗಮನದ ಕೇಂದ್ರದಲ್ಲಿದ್ದವು. ಪಾರ್ಟಿಯಲ್ಲೂ ರಾಜ್ಯಸಾಧನದಲ್ಲೂ ಬೂರ್ಷ್ವಾ ಶಕ್ತಿಗಳೂ ಅಧಿಕಾರಶಾಹಿ ಶಕ್ತಿಗಳೂ ಮೇಲುಗೈ ಪಡೆಯುವ ಅಪಾಯದ ವಿರುದ್ಧ ಅವರು ಜನತೆಗೆ ಎಚ್ಚರಿಕೆ ನೀಡಿದರು. ಪಾರ್ಟಿಯ ಹಾಗೂ ರಾಜ್ಯದ ಚಟುವಟಿಕೆಗಳು ಜನತೆಯ ಎಲ್ಲ ವಿಭಾಗಗಳಿಗೂ ರಾಜಕೀಯ ಶಿಕ್ಷಣ ನೀಡುವ ಹಾಗೂ ಅವುಗಳನ್ನು

**Relatório de Comité Central ao 1° Congresso de MPLA*, p. 18.–ಸಂ.

ಅನುಸರಿಸುವ ಅಗತ್ಯಗಳಿಗೆ ಇನ್ನೂ ಪೂರ್ಣವಾಗಿ ಅನುಗುಣವಾಗಿಲ್ಲವೆಂದು ಅವರು ಗಮನಿಸಿದರು. ರಾಜಕೀಯ ಜೀವನದೊಳಕ್ಕೆ ಹೆಚ್ಚು ಕಾರ್ಮಿಕರನ್ನೂ ರೈತರನ್ನೂ ಸೆಳೆಯಬೇಕೆಂದೂ ಅದಷ್ಟೆ ಸಮಾಜವಾದದತ್ತ ಪ್ರಗತಿಗೆ ಖಾಚಿತ್ಯ ಒದಗಿಸಬಲ್ಲುದು ಎಂದೂ ಅವರು ಒತ್ತಿ ಹೇಳಿದರು.

ಕ್ರಾಂತಿಯಲ್ಲಿ ಭಾಗವಹಿಸುತ್ತಿರುವವರಲ್ಲಿ ಯಾರೊಬ್ಬರು ಕಾಲವಾದರೂ ಕ್ರಾಂತಿ ಮುಂದುವರಿಯುತ್ತಲೇ ಹೋಗುವುದೆಂದು ನೆಟೊ ತಮ್ಮ ಕೊನೆಯ ಭಾಷಣಗಳೊಂದರಲ್ಲಿ, ಸಮೀಪಿಸುತ್ತಿದ್ದ ಸಾವಿನ ಮುನ್ನಳುಕು ಹೊಂದಿದ್ದರೋ ಎನ್ನುವಂತೆ, ಹೇಳಿದರು. ನಿಜವೇ. ಕ್ರಾಂತಿಯು ಮುಂದುವರಿಯುತ್ತಲೇ ಇದೆ, ಅಗೊಸ್ತಿನೊ ನೆಟೊ ಬಿಟ್ಟುಕೊಟ್ಟು ಹೋಗಿರುವ ಅನುಭವ ಹಾಗೂ ವಿಚಾರ ಸಂಪತ್ತಿನಿಂದ ಶಕ್ತಿ ಪಡೆದುಕೊಳ್ಳುತ್ತಿದೆ. ಅವರು ಸ್ವಾತಂತ್ರ್ಯ ಹೋರಾಟದ ಅತ್ಯಂತ ಕಷ್ಟಕರ ಪರಿಸ್ಥಿತಿಗಳಲ್ಲಿ ಹೋರಾಟಕ್ಕೆ ಮಾರ್ಗದರ್ಶನ ನೀಡಿದರಷ್ಟೆ ಅಲ್ಲ, ತಮ್ಮ ಜನತೆಗೆ ಮುಂದಿನ ಬೆಳವಣಿಗೆಯ ಏಕೈಕ ನೈಜ ಮಾರ್ಗವನ್ನೂ ತೋರಿಸಿಕೊಟ್ಟರು. ಅಂಗೋಲದ ಮತ್ತು ಇತರ ದೇಶಗಳ ಕ್ರಾಂತಿಕಾರಿಗಳು ರಾಷ್ಟ್ರೀಯ ಹಿತಗಳಿಗೆ ಸಂಬಂಧಿಸಿ, ನ್ಯಾಯ ಹಾಗೂ ಸಮಾಜವಾದದ ಧ್ಯೇಯಗಳಿಗೆ ಸಂಬಂಧಿಸಿ ನೆಟೊರವರು ತೋರಿದ ನಿಷ್ಠೆ, ಅವರ ದೃಢ ನಿರ್ಧಾರ, ಧೈರ್ಯ ಸಂಯಮ, ವಾಸ್ತವಿಕ ದೃಷ್ಟಿ ಇವುಗಳನ್ನು ಅನುಮೋದನೆಯೊಂದಿಗೆ ಅನುಕರಿಸುತ್ತಾರೆ.

ಪ್ಯಾತ್ರಿಸ್ ಲುಮುಂಬ

ಆಫ್ರಿಕನ್ ರಾಷ್ಟ್ರೀಯ-ವಿಮೋಚನಾ ಚಳವಳಿಯ ಒಬ್ಬ ಪ್ರಮುಖ ವ್ಯಕ್ತಿ, ಕಾಂಗೋ (ಈಗ ಜಾಯಿರ್) ಗಣತಂತ್ರದ ಪ್ರಥಮ ಸರಕಾರದ ಅಧಿಪತಿ.

ಜನನ 1925ರ ಜುಲೈ 2ರಂದು, ಓನಲುವಾ ಹಳ್ಳಿಯಲ್ಲಿ (ಹಿಂದಿನ ಬೆಲ್ಜಿಯನ್ ಕಾಂಗೋ ವಸಾಹತಿನ ಕಸಾಯ್ ಪ್ರಾಂತದಲ್ಲಿ), ಬಡ ಬಟೆತೆಲ ರೈತ ಕುಟುಂಬವೊಂದರಲ್ಲಿ. ಕ್ಯಾಥೊಲಿಕ್ ಮಿಷನ್ ಶಾಲೆಯೊಂದರಲ್ಲಿ ವಿದ್ಯಾಭ್ಯಾಸ ಪಡೆದನಂತರ ಕಾರಕೂನರಾಗಿ, ಅಂಚೆ ಅಧಿಕಾರಿಯಾಗಿ, ಅನೇಕ ಬೆಲ್ಜಿಯನ್ ಕಂಪನಿಗಳಲ್ಲಿ ನೌಕರರಾಗಿ ಕೆಲಸ ಮಾಡಿದರು.

23ನೆಯ ವಯಸ್ಸಿನಿಂದ ದೇಶದ ರಾಜಕೀಯ ಜೀವನದಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿದರು; ಅನೇಕ ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳಿಗೆ ನಾಯಕತ್ವ ನೀಡಿದರು, 'ಉಹುರು' ('ಸ್ವಾತಂತ್ರ್ಯ') ಹಾಗೂ *Independence* ಪತ್ರಿಕೆಗಳ ಪ್ರಕಾಶಕರಾಗಿದ್ದರು. 1958ರಲ್ಲಿ ಕಾಂಗೋ ರಾಷ್ಟ್ರೀಯ ಚಳವಳಿ(ಎಂಎನ್‌ಸಿ)ಯ ಪ್ರಧಾನ ರಾಜಕೀಯ ಪಾರ್ಟಿಯನ್ನು ಸಂಸ್ಥಾಪಿಸಿ ಅದರ ಶಾಶ್ವತ ಅಧ್ಯಕ್ಷರಾಗಿದ್ದರು.

1958-1959ರಲ್ಲಿ ಘಾನದ ರಾಜಧಾನಿ ಅಕ್ರಾದಲ್ಲಿ ಜರುಗಿದ ಪ್ರಥಮ ಅಖಿಲ ಆಫ್ರಿಕ ಜನತಾ ಸಮ್ಮೇಳನದ ಹಾಗೂ ನೈಜೀರಿಯದ ಇಬದಾನ್‌ನಲ್ಲಿ ಜರುಗಿದ ಅಂತರರಾಷ್ಟ್ರೀಯ ಸಾಂಸ್ಕೃತಿಕ ಕಾರ್ಯಕರ್ತರ ವಿಚಾರ ಗೋಷ್ಠಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು. ಅನಂತರ 1960ರ ಜನವರಿ-ಫೆಬ್ರವರಿಯಲ್ಲಿ ಬ್ರುಸ್ಸೆಲ್ಸ್‌ನಲ್ಲಿ ಜರುಗಿದ ಬೆಲ್ಜಿಯನ್-ಕಾಂಗೋ ಸಮ್ಮೇಳನದಲ್ಲೂ ಭಾಗವಹಿಸಿದ್ದರು. ಈ ಸಮ್ಮೇಳನವೇ ಕಾಂಗೋಗೆ ಸ್ವಾತಂತ್ರ್ಯ ನೀಡುವ ನಿರ್ಧಾರ ಕೈಗೊಂಡುದು. ಅವರು ಅನೇಕ ಬಾರಿ ವಸಾಹತುವಾದ ವಿರೋಧಿ ಚಟುವಟಿಕೆಗಳಿಗಾಗಿ ಮರ್ದನಕ್ಕೆ, ತುರುಂಗವಾಸಕ್ಕೆ ಗುರಿಯಾಗಿದ್ದರು.

1960ರ ಮೇ ತಿಂಗಳಿನಲ್ಲಿ ಜರುಗಿದ ಪಾರ್ಲಿಮೆಂಟ್ ಚುನಾವಣೆಗಳಲ್ಲಿ ಎಂಎನ್‌ಸಿ ಹಾಗೂ ಅದಕ್ಕೆ ಬೆಂಬಲ ನೀಡಿದ್ದ ಪಾರ್ಟಿಗಳು ಬಹು

ಮತ ಪಡೆದವು; 1960ರ ಜೂನ್‌ನಲ್ಲಿ ಲುಮುಂಬ ಕಾಂಗೋ ಗಣತಂತ್ರ ಸರಕಾರದ ಅಧಿಪತಿಯಾದರು. ಆದರೆ ಸೆಪ್ಟೆಂಬರ್‌ನಲ್ಲಿ ಅವರನ್ನು ವಜಾಮಾಡಲಾಯಿತು. 1961ರ ಜನವರಿಯಲ್ಲಿ, ಅನೇಕ ತಿಂಗಳುಗಳ ಕಾನೂನುಬಾಹಿರ ಬಂಧನದನಂತರ, ಅವರನ್ನು ಕುತ್ಸಿತವಾಗಿ ಕೊಲೆ ಮಾಡಲಾಯಿತು.

ಪ್ಯಾತ್ರಿಸ್ ಲುಮುಂಬರವರು ಒಬ್ಬ ಹಿರಿಯ ನಾಯಕನಾಗಿ, ಸಾಮ್ರಾಜ್ಯವಾದದ ವಸಾಹತು ಪದ್ಧತಿಯ ನಿರ್ಮೂಲನಕ್ಕೆ ಕ್ರಿಯಾಶೀಲ ಬೆಂಬಲ ನೀಡಿದವರಾಗಿ ಆಫ್ರಿಕದ ಇತಿಹಾಸದಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ. ಇಂದು ಅವರ ವಿಚಾರಗಳೂ ಪ್ರಾಯೋಗಿಕ ಚಟುವಟಿಕೆಗಳೂ ಆಫ್ರಿಕದ ಒಳಗೂ ಹೊರಗೂ ಪುರೋಗಾಮಿ ಬೆಳವಣಿಗೆಯ ಬೆಂಬಲಿಗರ ಹಾಗೂ ವಿರೋಧಿಗಳ ನಡುವೆ ತೀವ್ರ ಸೈದ್ಧಾಂತಿಕ ಚರ್ಚೆಯ ವಿಷಯಗಳಾಗಿವೆ. ಲುಮುಂಬರವರ ಕುರಿತ ಪ್ರಕಟಣೆಗಳು ಸತತವಾಗಿ ಹೊರಬರುತ್ತಿವೆ. ಅವರಲ್ಲಿ ರಾಜಕೀಯ ಕೌಶಲ್ಯ ಸಾಲದಿದ್ದಿತು, ಕೆಲವು ವೇಳೆ ಅವರ ಚರ್ಯೆಗಳು ಅತಿಮುಗ್ಧತೆಯ ಅಂಚಿನಲ್ಲಿರುತ್ತಿದ್ದವು, ಎಂದು ಮುಂತಾಗಿ ಕೆಲವು ಗ್ರಂಥಕರ್ತೃಗಳು ತಮ್ಮ ಗಮನವನ್ನು ಲುಮುಂಬರವರ ಲೋಪವಾಗೂ ತಪ್ಪು ಲೆಕ್ಕಾಚಾರಗಳ ಮೇಲೆ ಕೇಂದ್ರೀಕರಿಸಲು ಮತ್ತು ಅವರ ಪಾತ್ರವನ್ನು ತೃಣೀಕರಿಸಿ ತೋರಿಸಲು ಯತ್ನಿಸಿದ್ದಾರೆ. ಇತರ ಕೆಲವರು ಇವಕ್ಕೆ ವಿರುದ್ಧವಾಗಿ ಲುಮುಂಬರವರನ್ನು ಒಬ್ಬ ಮಹೋನ್ನತ ನಾಯಕನನ್ನಾಗಿ ಹುತಾತ್ಮನನ್ನಾಗಿ ಆದರ್ಶೀಕರಿಸಿ ತೋರಿಸಲು ಯತ್ನಿಸಿದ್ದಾರೆ.

ಆದರೆ ಲುಮುಂಬರವರ ನಿಜವಾದ ರಾಜಕೀಯ ನುಡಿಚಿತ್ರ ರಚಿಸಲು ಒಂದಕ್ಕೊ ಹೆಚ್ಚು ಬಣ್ಣಗಳು ಬೇಕೆಂದೇ ಹೇಳಬೇಕು. ಅವರ ನುಡಿಚಿತ್ರವನ್ನು ಪುನರ್‌ಸೃಷ್ಟಿಸಲು ಯತ್ನಿಸುವಾಗ ಸಾರ್ವಜನಿಕ ವ್ಯಕ್ತಿಯಾಗಿ ಹಾಗೂ ರಾಜನೀತಿಜ್ಞರಾಗಿ ಅವರ ವ್ಯಕ್ತಿತ್ವವನ್ನು ರೂಪಿಸಿದಂಥ ಅಂದಿನ ವಿಶಿಷ್ಟ ಪರಿಸ್ಥಿತಿಗಳನ್ನು ಮನಸ್ಸಿನಲ್ಲಿಟ್ಟಿರುವುದು ಅವಶ್ಯ.

ಅವರ ಬಾಳಿನಲ್ಲಿ ದುಡಿಮೆ ಬಹುಬೇಗನೆಯೇ ಪ್ರಾರಂಭವಾಯಿತು. ವಸಾಹತು ಅಧಿಕಾರಿಗಳು ಹೇರುತ್ತಿದ್ದ ತೆರಿಗೆಗಳನ್ನೂ ನಾನಾ ರೀತಿಯ ಕಡ್ಡಾಯ ಕರಗಳನ್ನೂ ನೀಡಿಕೊಂಡು ಅತ್ಯಂತ ದಾರಿದ್ರ್ಯದ ಜೀವನ ನಡೆಸಿಕೊಂಡು ಹೋಗಲು ತಮ್ಮ ತಾಯಿತಂದೆಯರಿಗೆ ನೆರವಾಗಲೋಸುಗ ಲುಮುಂಬರವರು ಆರನೆಯ ವಯಸ್ಸಿನಿಂದಲೇ ಹೊಲದಲ್ಲಿ ದುಡಿಯಬೇಕಾಗಿ ಬಂದಿತು. ಹತ್ತನೆಯ ವಯಸ್ಸಿನಲ್ಲಿ ಅವರು ಮಿಷನ್ ಶಾಲೆಯೊಂದನ್ನು ಸೇರಿಕೊಂಡರು. ಆದರೆ ಜೀವನದಲ್ಲಿ ಭೌತಿಕ ಭದ್ರತೆ ನೀಡುತ್ತಿದ್ದ ಇನ್ನೊಂದು ವೃತ್ತಿ ಸೈನಿಕ ಸೇವಾ ವೃತ್ತಿಯಂತೆಯೇ

ಪಾದ್ರಿಯ ವೃತ್ತಿಯೂ ಅವರಿಗೆ ಹಿಡಿಸಲಿಲ್ಲ. ಹದಿನಾರರ ಹರೆಯದ ತರುಣ ಲುಮುಂಬ ವೈದ್ಯಕೀಯ ಪರಿಚಾರಕನ ತರಬೇತು ಪಡೆಯಲು ಸೇರಿಕೊಂಡರು. ಆದರೆ ಸ್ವಲ್ಪ ಸಮಯದಲ್ಲೇ ಈ ವೈದ್ಯಕೀಯ ಕ್ಷೇತ್ರವನ್ನೂ ತೊರೆದು ಅವರು ಸಮಾಜಶಾಸ್ತ್ರ ಹಾಗೂ ರಾಜಕೀಯ ಶಾಸ್ತ್ರಗಳಲ್ಲಿ ಒಲವು ಬೆಳೆಸಿಕೊಂಡರು. ವಸಾಹತು ಕಾಂಗೋದಲ್ಲಿ ಉನ್ನತ ಶಿಕ್ಷಣ ಲಭ್ಯವಿರಲಿಲ್ಲ. ಅವರು ಸ್ವಯಂಶಿಕ್ಷಣದ ಮೇಲೆಯೇ ಅವಲಂಬಿಸಿ ಇರಬೇಕಾಯಿತು. ಈ ಗುರಿಸಾಧನೆಗಾಗಿ ಅವರು 1943ರಲ್ಲಿ ಕಿಂಡು ನಗರಕ್ಕೆ, ಅನಂತರ ಕಿವು ಪ್ರಾಂತದ ಕಲಿಮ ನಗರಕ್ಕೆ ತೆರಳಿದರು. ಅಲ್ಲಿ ಅವರು 'ಸಿಮೆಟಾನ್' ತವರ ಗಣಿ ಕಂಪನಿಯಲ್ಲಿ ಕಾರಕೂನರಾಗಿ ಕೆಲಸಕ್ಕೆ ಸೇರಿಕೊಂಡರು. ಅಲ್ಲೇ ಲುಮುಂಬ ಮೊದಲ ಬಾರಿಗೆ ಕಾಂಗೋ ಶ್ರಮಜೀವಿಗಳ ಜೀವನದ ಪರಿಚಯ ಪಡೆದುಕೊಂಡುದು.

ಈ ಹೊತ್ತಿಗೆ ಪ್ಯಾಟ್ರಿಸ್ ಫ್ರೆಂಚ್ ಭಾಷೆಯಲ್ಲೂ ಅನೇಕ ಸ್ಥಳೀಯ ಭಾಷೆಗಳಲ್ಲೂ ಪರಿಣತಿ ಪಡೆದುಕೊಂಡಿದ್ದರು. ಅವರ ಓದುವ ಹಂಬಲ ಹಿಂಗದಾಗಿತ್ತು. ಅದಕ್ಕಾಗಿ ಕಷ್ಟಪಟ್ಟು ನಾನಾ ಕಡೆಗಳಿಂದ ನಾನಾ ರೀತಿಗಳಲ್ಲಿ ಪುಸ್ತಕಗಳನ್ನು ಪಡೆದುಕೊಳ್ಳುತ್ತಿದ್ದರು. ಬಿಡುವು ವೇಳೆಯನ್ನೆಲ್ಲ ಹ್ಯೂಗೋ ಹಾಗೂ ಮೊಲ್ಯೇರ್‌ರ ಗ್ರಂಥಗಳನ್ನು ಓದುವುದರಲ್ಲಿ ಕಳೆಯುತ್ತಿದ್ದರು. ಅರಿಸ್ಟಾಟಲನ ಕೃತಿಗಳನ್ನು ಓದಿ ಅವುಗಳ ಸಾರಾಂಶಗಳನ್ನೆಲ್ಲ ಬರೆದಿರಿಸಿಕೊಂಡರು. ಅಂತೆಯೇ ಅಸಾಧ್ಯಾದರ್ಶ ಸಮಾಜವಾದಿಗಳ ಕೃತಿಗಳನ್ನೂ, ಫ್ರೆಂಚ್ ವಿಶ್ವಜ್ಞಾನಿಗಳ ಹಾಗೂ ಜ್ಞಾನೋದ್ದೀಪಕರ ಕೃತಿಗಳನ್ನೂ ಅಭ್ಯಸಿಸಿದರು. ಅವರ ಸಮಕಾಲೀನರ ಕೃತಿಗಳಲ್ಲಿ ಬಂಡವಾಳವಾದವನ್ನೂ ಬೂರ್ಷ್ವಾ ಪ್ರಜಾಪ್ರಭುತ್ವವನ್ನೂ ಟೀಕಿಸುತ್ತಿದ್ದ ಗ್ರಂಥಗಳು ಅವರಿಗೆ ಹೆಚ್ಚು ಪ್ರಿಯವಾಗಿದ್ದವು.

ಹದಿನೆಂಟರ ವಯಸ್ಸಿನಲ್ಲಿ ಲುಮುಂಬ ಸ್ಥಳೀಯ ಪತ್ರಿಕೆಗಳಲ್ಲಿ ತಮ್ಮ ಮೊದಲ ಕವನಗಳನ್ನೂ ಪ್ರಬಂಧಗಳನ್ನೂ ಪ್ರಕಟಿಸಿದರು. ಅವುಗಳಲ್ಲಿ ಅವರು ಬೆಲ್ಜಿಯನ್ನರನ್ನು ಹೊಗಳಿದರು. ಬೆಲ್ಜಿಯನ್ನರು ಕಾಂಗೋವನ್ನು ಅಜ್ಞಾನ ದಾಸ್ಯಗಳಿಂದ ರಕ್ಷಿಸಿದ್ದಾರೆಂದು ಆಗ ಹೇಳಲಾಗುತ್ತಿದ್ದಂತೆ ಇವರೂ ಅಂತಹುದೇ ಭಾವನೆಗಳನ್ನು ವ್ಯಕ್ತಪಡಿಸಿದರು. ಅಧಿಕೃತ ವಸಾಹತುವಾದಿಗಳ ಪ್ರಚಾರ ಸಾಧನಗಳು ಆಫ್ರಿಕನರ ಮನಸ್ಸಿನಲ್ಲಿ ತುಂಬುತ್ತಿದ್ದಂಥ ಇಂತಹ ಭಾವನೆಗಳಿಂದ ಮುಕ್ತವಾಗಲು ಅವರಿಗೆ ಸಾಕಷ್ಟು ಕಾಲವೇ ಹಿಡಿಯಿತು. ಈ ಹೊತ್ತಿಗೆ ಅವರು ಬೆಲ್ಜಿಯನ್ ಅಧಿಕಾರಿಗಳ ಪ್ರಚಾರ ಘೋಷಣೆಗಳಿಗೂ ಕಾಂಗೋದಲ್ಲಿ ಅವರ ಚಟುವಟಿಕೆಗಳಿಗೂ ನಡುವೆ ಇದ್ದ ಭಿನ್ನತೆಯ ಕಡೆಗೆ ತಮ್ಮ ಗಮನ ಹರಿಸತೊಡಗಿದ್ದರು.

ಕಾಂಗೋ ಜನರ ಜೀವನ ಮಟ್ಟ ಆಫ್ರಿಕದಲ್ಲಿ ಬೇರೆಲ್ಲಿ ಇದ್ದುದಕ್ಕಿಂತ ತೀರ ಕೀಳಾಗಿದ್ದಿತು. ಬೆಲ್ಜಿಯನ್ ಆಳ್ವಿಕೆಯ 80 ವರ್ಷಗಳಲ್ಲಿ ದೇಶದ ಜನಸಂಖ್ಯೆ ಅರ್ಧಕ್ಕರ್ಧ ಇಳಿದು ಹೋಗಿತ್ತು. ವಸಾಹತೀಕರಣ ಕಾಲದಲ್ಲಿ ವಸಾಹತುವಾದಿ

ಗಳು ಸಹಸ್ರಾರು ಕಾಂಗೋ ಜನರನ್ನು ನೇರವಾಗಿ ಸಂಹರಿಸಿದ್ದುದರ ಹಾಗೂ ಅನಂತರ ದೇಶವನ್ನು ನಿರ್ದಯವಾಗಿ ಶೋಷಿಸುತ್ತಿದ್ದುದರ ಫಲವಾಗಿದ್ದಿತು ಇದು.

ಆದರೆ ಕಾಂಗೋ ಜನರು ಎಂದೂ ಗುಲಾಮಗಿರಿಗೆ ತಮ್ಮನ್ನು ಒಪ್ಪಿಸಿಕೊಂಡು ಸುಮ್ಮನಿರಲಿಲ್ಲ. ಅವರು ಅನೇಕ ಬಾರಿ ದಂಗೆ ಎದ್ದುದರ ಬಗೆಗೆ, ಆ ದಂಗೆಗಳನ್ನು ಬೆಲ್ಜಿಯನ್ನರು ಕ್ರೌರ್ಯದಿಂದ ಹತ್ತಿಕ್ಕಿದುದರ ಬಗೆಗೆ ವೃದ್ಧ ಜನರು ಹೇಳುತ್ತಿದ್ದ ಕಥೆಗಳನ್ನು ಬಾಲಕ ಲುಮುಂಬ ಕೇಳಿದ್ದರು. 19ನೆಯ ಶತಮಾನದ ಕೊನೆ ಹಾಗೂ 20ನೆಯ ಶತಮಾನದ ಆರಂಭದಲ್ಲಿ ಜರುಗಿದ ಬತೆತೆಲ ಬುಡಕಟ್ಟಿನ ದಂಗೆಗಳ ಕುರಿತ, 1931ರಲ್ಲಿ ಜರುಗಿದ ಬಪೆಂಡೆ ದಂಗೆಗಳ ಕುರಿತ ಕಥೆಗಳು ವಿಶೇಷವಾಗಿ ಲುಮುಂಬರವರ ಸ್ಮರಣೆಯಲ್ಲಿ ಅಚ್ಚಳಿಯದೆ ಉಳಿದವು. ಕಿಂಡು ನಗರದಲ್ಲಿ ಅವರು ಕಿವು ಕಾಡುಗಳಲ್ಲಿ ಜರುಗುತ್ತಿದ್ದ ವಸಾಹತುವಾದ ವಿರೋಧಿ ರಾಜಕೀಯ ಹಾಗೂ ಧಾರ್ಮಿಕ ಚಳವಳಿಯ ಬಗೆಗೆ ತಿಳಿದರು. ಈ ಚಳವಳಿಯನ್ನು ನಡೆಸುತ್ತಿದ್ದವರು ಜನರಿಗೆ ಬಂಡೆದ್ದು "ಅಧಿಕಾರವನ್ನು ತಮ್ಮ ಕೈಗೇ ತೆಗೆದುಕೊಳ್ಳುವಂತೆ" ಕರೆ ನೀಡುತ್ತಿದ್ದರು. 1941ರಲ್ಲಿ ಲುಲುವಾಬರ್ಗ್ (ಈಗ ಕನಾಂಗಾ)ದಲ್ಲಿ ಮಿಲಿಟರಿ ಠಾಣ್ಯದಲ್ಲಿ ಕಾಂಗೋ ಸೈನಿಕರು ದಂಗೆ ನಡೆಸಿದ್ದರು. 1944ರ ಮಧ್ಯಭಾಗದಲ್ಲಿ ಲುಮುಂಬರವರು ಸ್ಟಾನ್ಲಿವಿಲ್ (ಈಗ ಕಿಸಾಂಗಾನಿ)ಗೆ ವಾಸ ಮಾಡಲು ಬಂದಿದ್ದರು. ಅಲ್ಲಿ 1945ರಲ್ಲಿ ಮಟಾಡಿಯಲ್ಲಿ ಹಡಗುಕಟ್ಟೆ ಕೆಲಸಗಾರರು ಸಶಸ್ತ್ರ ಬಂಡಾಯ ಜರುಗಿಸಿದುದರ ಬಗೆಗೂ, ಕಾಂಗೋ ಜನರ ಇತರ ಅನೇಕ ವಸಾಹತುವಾದ ವಿರೋಧಿ ಪ್ರದರ್ಶನಗಳ ಬಗೆಗೂ ಲುಮುಂಬ ಕೇಳಿ ತಿಳಿದರು.

ಅವರು ಸ್ಟಾನ್ಲಿವಿಲೆಯಲ್ಲಿ ಮೂರು ವರ್ಷ ಇದ್ದರು. ಮೊದಲು ಅಂಚೆ ಕಚೇರಿಯೊಂದರಲ್ಲಿ ಅನಂತರ ತೆರಿಗೆ ಕಾರ್ಯಾಲಯದಲ್ಲಿ ಕಾರಕೂನರಾಗಿ ಕೆಲಸ ಮಾಡಿದರು. 1947ರ ಜುಲೈನಲ್ಲಿ ವಸಾಹತು ಆಡಳಿತ ಕೇಂದ್ರ ಲಿಯೊಪೋಲ್ಡ್‌ವಿಲ್ (ಈಗ ಕಿನ್‌ಷಾಸಾ)ಯಲ್ಲಿ ಅಂಚೆ ಕಾರ್ಮಿಕರ ಶಾಲೆ ಸೇರಿಕೊಂಡರು. ಒಂದು ವರ್ಷದನಂತರ ಪದವೀಧರರಾಗಿ ಹೊರ ಬಂದರು. ಶಾಲೆಯ ಪಠ್ಯಪುಸ್ತಕಗಳಲ್ಲದೆ ಅವರು ತತ್ವಶಾಸ್ತ್ರ, ರಾಜಕೀಯ ಅರ್ಥಶಾಸ್ತ್ರ, ರಾಜಕೀಯ ಸಿದ್ಧಾಂತಗಳ ಇತಿಹಾಸ, ರಾಜ್ಯ ಹಾಗೂ ಕಾನೂನು ಸಿದ್ಧಾಂತ, ಪ್ರಸಕ್ತ ಆಫ್ರಿಕನ್ ಇತಿಹಾಸ, ಇವುಗಳಿಗೆ ಸಂಬಂಧಿಸಿದ ಗ್ರಂಥಗಳನ್ನೂ ಶ್ರದ್ಧೆಯಿಂದ ಅಭ್ಯಸಿಸಿದರು.

ನಿಜ, ಅವರ ಅನುಭವ ಅಲ್ಪವಾಗಿದ್ದಿತು. ಆದರೆ ಗ್ರಂಥಗಳನ್ನು ಓದುವ ಮೂಲಕ ಅವರು ಅನೇಕ ಪ್ರಮುಖ ವ್ಯಕ್ತಿಗಳ ಜೀವನ ಚಟುವಟಿಕೆಗಳ ಪರಿಚಯ ಪಡೆದುಕೊಂಡು ಅವುಗಳಿಂದ ಸ್ಫೂರ್ತಿಗೊಂಡರು. ತಾವು ದೇಶದ ಸಾರ್ವ

ಜನಿಕ ಹಾಗೂ ರಾಜಕೀಯ ಜೀವನದಲ್ಲಿ ಕ್ರಿಯಾಶೀಲವಾಗಿ ತೊಡಗಿದಲ್ಲಿ ತಮ್ಮ ನಾಡಿಗೆ ಹೆಚ್ಚು ಒಳ್ಳೆಯ ಸೇವೆ ಸಲ್ಲಿಸುವುದು ಸಾಧ್ಯವಿದೆಯೆಂದು ಅವರು ಕೊನೆಗೆ ಮನಗಂಡರು. ಅವರು ಸ್ಟಾನ್ಲಿವಿಲೆಗೆ 1948ರಲ್ಲಿ [illegible] ಬಂದು ಅಲ್ಲೇ 1956ರವರೆಗೆ ಇದ್ದರು. ಅಲ್ಲಿದ್ದಾಗ ಅವರು ಬೆಲ್ಜಿಯನ್ ಲಿಬರಲ್ ಪಾರ್ಟಿಯ ತಾವೇ ಸಂಸ್ಥಾಪಿಸಿದ ಒಂದು ವಿಭಾಗವನ್ನೂ ಒಳಗೊಂಡು ಆರು ಸಾರ್ವಜನಿಕ ಸಂಘಟನೆಗಳ ಅಧಿಪತಿಗಳಾಗಿದ್ದರು. ಈ ಯಾವೊಂದು ಸಂಸ್ಥೆಯೂ ಎಷ್ಟು ಮಾತ್ರವೂ ಬುಡಕಟ್ಟುವಾದಿ ವ್ಯವಸ್ಥೆಯ ಆಧಾರದ ಮೇಲೆ ನಿರ್ಮಿತವಾದವುಗಳಾಗಿರಲಿಲ್ಲ. ವಾಸ್ತವವಾಗಿ ಲುಮುಂಬರವರು ಎಂದೂ ಜನರನ್ನು ಅವರ ನರಕುಲ ಸಂಬಂಧಗಳ ಸೂತ್ರಗಳನುಗುಣವಾಗಿ ವಿಭಜಿಸಲಿಲ್ಲ.

ಈ ಕಾಲಾವಧಿಯಲ್ಲೇ ಅವರು ಆಫ್ರಿಕನ್ ಸಾರ್ವಜನಿಕ ಸಂಘಟನೆಯ ಕಾರ್ಯ ನಡೆಸುವುದಕ್ಕೆ ಸಂಬಂಧಿಸಿ ತಮ್ಮ ಪ್ರಗಾಢವಾದ ಪ್ರಜಾಸತ್ತಾತ್ಮಕ ವಿಚಾರಗಳನ್ನು ರೂಪಿಸಿಕೊಳ್ಳತೊಡಗಿದುದು. ಯಾವುದೇ ಸಂಸ್ಥೆಯೂ ತನ್ನ ಶಕ್ತಿಯನ್ನು ತನ್ನ ಸದಸ್ಯರ ಸಾಮೂಹಿಕ ಸೃಜನಾತ್ಮಕ ಚಟುವಟಿಕೆಯಿಂದ ಪಡೆದುಕೊಳ್ಳುತ್ತದೆಂದು 1952ರಲ್ಲಿ ಅವರು ನುಡಿದರು. ಸಂಸ್ಥೆಯು ನಶಿಸಿ ಹೋಗದಿರಲು ಸತತವಾಗಿ ಕಾರ್ಯ ಜರುಗಿಸಬೇಕು, ತನ್ನ ಮುಂದೆ ಹೊಸ ಕಾರ್ಯಭಾರಗಳನ್ನು ಇರಿಸಿಕೊಂಡು ಅವುಗಳನ್ನು ಪರಿಹರಿಸಬೇಕು. ಸಂಸ್ಥೆಯ ಯಶಸ್ಸು ಹೆಚ್ಚಾಗಿ ಅವರ ನಾಯಕರ ಮೇಲೆ ಅವಲಂಬಿಸಿರುತ್ತದೆ. ಅವರು ವಿಚಾರಸಂಪನ್ನರಾಗಿರಬೇಕು, ದಕ್ಷರಾಗಿರಬೇಕು, ಕಸುವಿನಿಂದ ಕೂಡಿರಬೇಕು, ಧೈರ್ಯಸ್ಥರಾಗಿರಬೇಕು, ನಿಸ್ವಾರ್ಥ ಭಾವದಿಂದ ದುಡಿಯಬೇಕು. "ತಾವೇ ಯಾವ ಯತ್ನವನ್ನೂ ಮಾಡದೆ ತಮ್ಮ ಮುಂದಿರುವ ಕಾರ್ಯಭಾರಗಳು ತಮ್ಮಷ್ಟಕ್ಕೆ ತಾವೇ ಪರಿಹಾರವಾಗಲೆಂದು ಕಾಯುತ್ತ ಕೈಕಟ್ಟಿ ತೂಕಡಿಸುತ್ತ ಕುಳಿತುಕೊಂಡಿರಬಾರದು"* ಎಂದವರು ಹೇಳಿದರು.

ಲುಮುಂಬರವರು ತಮ್ಮ ದೇಶದಾದ್ಯಂತ ತುಂಬ ಸುತ್ತಾಡಿದರು. ಇದು ಅವರಿಗೆ ಅವರ ಜನರ ಜೀವನ, ವಿಚಾರ, ಆಶೋತ್ತರಗಳ ನೇರ ಪರಿಜ್ಞಾನ ನೀಡಿತು. ಅವರೊಬ್ಬ ಸ್ವಾರಸ್ಯಕರ ಮಾತುಗಾರರಾಗಿದ್ದರಷ್ಟೆ ಅಲ್ಲ ಪ್ರಭಾವಶಾಲಿ ವಾಗ್ಮಿಯೂ ಆಗಿದ್ದರೆಂದು ಅವರ ದೇಶೀಯರು ಕಂಡುಕೊಂಡರು. ಅವರು ನೀಡುತ್ತಿದ್ದ ಉಪನ್ಯಾಸಗಳನ್ನು ಹಾಗೂ ಭಾಷಣಗಳನ್ನು ಕೇಳಲು ಜನ ಸಹಸ್ರಾರು ಸಂಖ್ಯೆಯಲ್ಲಿ ಕಿಕ್ಕಿರಿದು ನೆರೆಯುತ್ತಿದ್ದರು. ತಾವು 'ಕಾಂಗೋ: ಭವಿಷ್ಯತ್ತಿನ ನಾಡು ಭೀತಿಯ ಹಿಡಿತದಲ್ಲಿ?' (1956) ಎಂಬ ತಮ್ಮ ಗ್ರಂಥವನ್ನು "ಸ್ಥಳೀಯ ಜನರ ನಾನಾ ಸ್ತರಗಳ ನಡುವೆ

La voix du Congolais, Léopoldville, No. 89, 1953, p. 578. – ಸಂ.

ಕೂಲಂಕಷ ಪರಿಶೋಧನೆ ನಡೆಸಿದ ನಂತರವಷ್ಟೆ"* ಬರೆದುದು ಎಂದವರು ಹೇಳಿದುದಕ್ಕೆ ಎಲ್ಲ ಕಾರಣಗಳಿದ್ದವು. ಅವರು ತುಂಬ ಆಗಾಗ್ಗೆ ಇತರ ಆಫ್ರಿಕನ್ ದೇಶಗಳಿಗೆ, ಬೆಲ್ಜಿಯಂ ಹಾಗೂ ಅಮೆರಿಕಕ್ಕೂ ಹೋಗಿ ಬಂದರು.

1955ರ ಜುಲೈನಲ್ಲಿ ವಸಾಹತು ಆಡಳಿತವು ಲುಮುಂಬರವರನ್ನು ಕಾಂಗೋದ ಅತ್ಯಂತ ಪ್ರಮುಖ ಸಾರ್ವಜನಿಕ ವ್ಯಕ್ತಿಯನ್ನಾಗಿ ಸ್ಟಾನ್ಲಿವಿಲೆಗೆ ಭೇಟಿ ಕೊಟ್ಟಿದ್ದ ಬೆಲ್ಜಿಯಂ ದೊರೆ ಬೊದುಯಿನ್‌ಗೆ ಪರಿಚಯ ಮಾಡಿಕೊಟ್ಟಿತು. ಇಬ್ಬರೂ ದೀರ್ಘ ಕಾಲ ಮಾತುಕತೆ ನಡೆಸಿದರು. ಆ ಎಳೆಯ ವಯಸ್ಸಿನ ದೊರೆಯು ತಮ್ಮ ವಿಚಾರಗಳನ್ನು ಸಹಾನುಭೂತಿಯಿಂದ ಸ್ವೀಕರಿಸುತ್ತಿದ್ದರೆಂದೇ ಲುಮುಂಬರವರಿಗೆ ಕಂಡುಬಂದಿತು. ಕಾಂಗೋ ಜನರೂ ಯೂರೋಪಿಯನ್ನರೂ ಜೊತೆಗೂಡಿ ದೇಶವ ಮೇಲೆ ಕವಿದಿದ್ದ ಮೋಡವನ್ನು ಚೆದುರಿಸುವುದು ಸಾಧ್ಯವೆಂದು ಲುಮುಂಬ ನಂಬಬಯಸಿದ್ದರು. 1957ರಲ್ಲಿ ಅವರು ಬರೆದರು: "ನಮ್ಮ ಅತ್ಯಂತ ಪ್ರೀತಿಯ ಬಯಕೆಯೆಂದರೆ – ಬಹುಶಃ ಇದನ್ನು ಕೆಲವರು ಅಸಾಧ್ಯಾದರ್ಶವೆಂದೇ ಭಾವಿಸಬಹುದು – ಕಾಂಗೋದಲ್ಲಿ ಕುಲ ಹಾಗೂ ಧಾರ್ಮಿಕ ವ್ಯತ್ಯಾಸಗಳು ಕರಗಿ ಹೋಗಿರುವಂಥ, ಬೆಲ್ಜಿಯನ್ನರೂ ಕಾಂಗೋ ಜನರೂ ಕೂಡಿ ಐಕ್ಯಕ ಭಾವಸ್ಫುರಣದಿಂದ ತಮ್ಮ ಹೃದಯಗಳನ್ನು ದೇಶದ ಭವಿತವ್ಯದೊಂದಿಗೆ ಬೆಸೆದಿರುವಂಥ ಸಾಮರಸ್ಯ ಸಮಾಜವುಳ್ಳ ರಾಷ್ಟ್ರವನ್ನು ಸಂಸ್ಥಾಪಿಸುವುದಾಗಿದೆ."**

1950ರ ಮಧ್ಯಭಾಗದಲ್ಲಿ ಅನೇಕ ಕಾಂಗೋ ರಾಜಕೀಯ ಕಾರ್ಯಕರ್ತರು ಕಾಂಗೋಗೆ ಸ್ವಾತಂತ್ರ್ಯವನ್ನು ಆಗ್ರಹಿಸಿ ಕೋರಿಕೆ ಮುಂದಿಟ್ಟರು. ಲುಮುಂಬರವರು ಕೂಡಲೇ ಅವರ ಜೊತೆ ಕೂಡಲಿಲ್ಲ. ಅವರು "ಬೆಲ್ಜಿಯನ್-ಕಾಂಗೋ ಸಮುದಾಯ" ರಚಿಸುವುದರ ಪರವಾಗಿಯೇ ಇದ್ದರು. ಅದು ಕುಲ ಪಕ್ಷಪಾತ ನಿವಾರಣೆ, ಜೀವನ ಮಟ್ಟಗಳ ಏರಿಕೆ, ಉತ್ತಮ ಶಿಕ್ಷಣ ಪದ್ಧತಿಯ ವಿಕಸನ, ಆಫ್ರಿಕನ್ ಮಹಿಳೆಯರ ವಿಮೋಚನೆ, ದೇಶದ ಆಡಳಿತದಲ್ಲಿ ಕಾಂಗೋ ಜನರು ಕ್ರಿಯಾಶೀಲವಾಗಿ ಭಾಗವಹಿಸುವುದು, ಇವೇ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ತುಂಬ ಸೂಕ್ತವಾಗಿದ್ದಿತೆಂದು ಅವರು ಭಾವಿಸಿದ್ದರು. ಈ ಸಮಸ್ಯೆಗಳನ್ನು ಚರ್ಚಿಸಲೂ ವಸಾಹತು ಅಧಿಕಾರಿಗಳು ನಿರಾಕರಿಸುತ್ತಿದ್ದುದನ್ನು ಟೀಕಿಸುತ್ತ ಲುಮುಂಬರವರು "ಕ್ರಮೇಣ ಸುಸಂಗತವಾದ ಕ್ರಿಯೆ ಕೈಗೊಳ್ಳುವ" ವಿಚಾರವನ್ನು ಪ್ರತಿಪಾದಿಸಿದರು.

*P. Lumumba, *Le Congo, terre d'avenir est-il menacé?*, Brussels, 1961, p. 8. – ಸಂ.

**George Brausch, *Belgian Administration in the Congo*, Oxford University Press, London, 1961, p. 78. – ಸಂ.

ಅವರೂ ಜಾಗತಿಕ ಪರಿಸ್ಥಿತಿ ಬದಲುತ್ತಿದ್ದುದೂ, ವಸಾಹತು ಜನತೆಗಳ ವಿಮೋಚನಾ ಹೋರಾಟ ತೀವ್ರಗೊಳ್ಳುತ್ತಿದ್ದುದೂ ಮತ್ತು ಆಫ್ರಿಕ ಯೂರೋಪ್ ಪ್ರವಾಸಗಳಲ್ಲಿ ಮೂಡಿದ ಭಾವನೆಗಳೂ, ಅವರ ಮನೋದಿಗಂತಗಳನ್ನು ವಿಶಾಲಗೊಳಿಸಿದವು ಮತ್ತು ಕಾಂಗೋದ ಸಮಸ್ಯೆಗಳನ್ನು ಭಿನ್ನ ದೃಷ್ಟಿಕೋನದಿಂದ ನೋಡಲು ನೆರವಾದವು. ಲುಮುಂಬರವರ ವಿಚಾರಗಳೂ ಪ್ರಾಯೋಗಿಕ ಚಟುವಟಿಕೆಯೂ ಬೆರಗುಗೊಳಿಸುವಷ್ಟು ಶೀಘ್ರವಾಗಿ ವಿಕಾಸಗೊಂಡವು. 1950ರ ದಶಕದ ಕೊನೆಯ ಹೊತ್ತಿಗೆ ಅವರಾಗಲೇ ವಸಾಹತುವಾದ ಹಾಗೂ ನವವಸಾಹತುವಾದಗಳ ಬಿಗಿ ಹಿಡಿತದಿಂದ ಆಫ್ರಿಕವನ್ನು ಸಂಪೂರ್ಣವಾಗಿ ವಿಮೋಚನೆಗೊಳಿಸಲು ಕಂಕಣಬದ್ಧರಾಗಿ ನಿಂತ ಅಗ್ರಗಾಮಿ ಯೋಧರುಗಳಲ್ಲೊಬ್ಬರಾಗಿದ್ದರು.

1958ರಲ್ಲಿ ಲುಮುಂಬರವರು 'ಕಾಂಗೋ ರಾಷ್ಟ್ರೀಯ ಚಳವಳಿ' (ಎಂಎನ್‌ಸಿ) ಎಂಬ ಪಾರ್ಟಿಯನ್ನು ಸ್ಥಾಪಿಸಿದರು. ಅದು ದೇಶದಲ್ಲೇ ಅತ್ಯಂತ ವಿಶಾಲ ಬುನಾದಿ ಹೊಂದಿದ್ದ ಪ್ರಭಾವಶಾಲಿಯಾದ ರಾಜಕೀಯ ಸಂಘಟನೆಯಾಗಿದ್ದಿತು. ಲುಮುಂಬರವರೇ ಪಾರ್ಟಿಯ ಪ್ರಥಮ ಕಾರ್ಯಕ್ರಮವನ್ನು ರಚಿಸಿಕೊಟ್ಟರು. ಪಾರ್ಟಿಯು "ಕಾಂಗೋವನ್ನು ಸಾಮ್ರಾಜ್ಯಶಾಹಿ ವಸಾಹತುವಾದದಿಂದ ಮುಕ್ತಗೊಳಿಸಲು ಎಲ್ಲ ಮಾರ್ಗೋಪಾಯಗಳನ್ನೂ ಬಳಸಲಿರುವುದು"* ಎಂದು ಆ ಕಾರ್ಯಕ್ರಮ ತಿಳಿಸಿತು. ಪಾರ್ಟಿಯ ಸದಸ್ಯರು ದೇಶದ ಏಕತೆ ಹಾಗೂ ಅಖಂಡತೆಗಾಗಿ ಹೋರಾಡುವುದನ್ನು, ಪಾರ್ಟಿಯ ಪ್ರಧಾನ ಅಂಗಸಂಸ್ಥೆಗಳ ನಿರ್ಧಾರಗಳನ್ನು ನೆರವೇರಿಸುವುದರಲ್ಲಿ ವೈಯಕ್ತಿಕವಾಗಿ ಪಾಲ್ಗೊಳ್ಳುವುದನ್ನು, ತಮ್ಮ ವೈಯಕ್ತಿಕ ರಾಜಕೀಯ ಜಾಗೃತಿಯನ್ನು ಸತತವಾಗಿ ಮೇಲ್ಮಟ್ಟಕ್ಕೊಯ್ಯುವುದನ್ನು ಮತ್ತು ವಸಾಹತುವಾದಿಗಳ ದುಷ್ಕೃತ್ಯಗಳನ್ನು ಬಯಲುಮಾಡುವುದನ್ನು ತಮ್ಮ ಆದ್ಯ ಕರ್ತವ್ಯವನ್ನಾಗಿ ಪರಿಗಣಿಸಬೇಕು, ಎಂದು ಪಾರ್ಟಿಯ ನಿಯಮಗಳು ತಿಳಿಸುತ್ತಿದ್ದವು.**

1958ರ ಕೊನೆಯಲ್ಲಿ ಲುಮುಂಬ ಅಕ್ರಾ(ಘಾನ)ದಲ್ಲಿ ಜರುಗಿದ ಆಫ್ರಿಕನ್ ಜನತೆಗಳ ಮಹಾ ಸಮ್ಮೇಳನದಲ್ಲಿ ಕಾಂಗೋದ ಪ್ರತಿನಿಧಿಯಾಗಿ ಭಾಗವಹಿಸಿದ್ದರು ಮತ್ತು ಅದರ ಸ್ಥಾಯಿ ಕಾರ್ಯದರ್ಶಿ ಮಂಡಲಿಯ ಸದಸ್ಯರಾಗಿ ಆಯ್ಕೆಗೊಂಡರು. ಮುಂದಿನ ವರ್ಷ ಇಬದಾನ್(ನೈಜೀರಿಯ)ನಲ್ಲಿ ಜರುಗಿದ ಸಾಂಸ್ಕೃತಿಕ ಕಾರ್ಯ

---

*_L'avenir politique du Congo belge_, Les Editions de la Librarie encyclopedique, Brussels, p. 47. – ಸಂ.

**René Lemarchand, Kenneth W. Grundy, Charles F. Andrian, _African Political Thought: Lumumba, Nkrumah and Toure_, University of Denver, Denver, 1968, pp. 40-41. – ಸಂ.

ಕರ್ತರ ಅಂತರರಾಷ್ಟ್ರೀಯ ವಿಚಾರಗೋಷ್ಠಿಯೊಂದರಲ್ಲಿ ಭಾಗವಹಿಸಿದರು. ಅಲ್ಲಿ ಅವರು 'ಆಫ್ರಿಕದ ಏಕತೆ ಹಾಗೂ ರಾಷ್ಟ್ರೀಯ ಸ್ವಾತಂತ್ರ್ಯ' ಎಂಬ ವಿಷಯದ ಮೇಲೆ ಭಾಷಣ ಮಾಡಿದರು. "ಎಲ್ಲ ವಸಾಹತು ದೇಶಗಳ ಜನತೆಗಳ ಆಶೋತ್ತರಗಳೂ ಒಂದೇ ಆಗಿವೆ, ಅವುಗಳ ಭವಿತವ್ಯಗಳೂ ಒಂದೇ ಆಗಿವೆ, ಅವು ತಮ್ಮ ರಾಷ್ಟ್ರೀಯ ಬೆಳವಣಿಗೆಯಲ್ಲಿ ಅನುಸರಿಸುವ ಗುರಿಗಳೂ ಒಂದೇ ಆಗಿವೆ. ಆಫ್ರಿಕವನ್ನು ವಸಾಹತುವಾದದ ನೊಗದಿಂದ ವಿಮೋಚನೆಗೊಳಿಸುವುದು – ಇದೇ ಆಗಿದೆ ಆ ಗುರಿ. ಆಫ್ರಿಕದ ಯಾವುದೇ ಭಾಗವೂ ವಿದೇಶೀ ದಬ್ಬಾಳಿಕೆಯ ಕೆಳಗಿದ್ದರೂ ಖಂಡ ಎಂದೂ ಸ್ವತಂತ್ರವಾಗಿ ನಿರಾಧೀನವಾಗಿ ಇರುವುದಿಲ್ಲ"* ಎಂದವರು ಒತ್ತಿ ಹೇಳಿದರು.

ಏಕತೆಯಿಲ್ಲದೆ ಆಫ್ರಿಕನರು ಸಾಮ್ರಾಜ್ಯಶಾಹಿಗಳ ರಾಕ್ಷಸೀ ಬಲವುಗಳನ್ನು ವಿರೋಧಿಸಲಾರರು, ಎಂದು ಲುಮುಂಬ ಲಿಯೊಪೋಲ್ಡ್‌ವಿಲೆಯಲ್ಲಿ 1960ರ ಆಗಸ್ಟ್‌ನಲ್ಲಿ ಜರುಗಿದ ಸ್ವತಂತ್ರ ಆಫ್ರಿಕನ್ ರಾಜ್ಯಗಳ ಸಮ್ಮೇಳನದಲ್ಲಿ ಸ್ಪಷ್ಟಪಡಿಸಿದರು. ಹೊಸದಾಗಿ ಸ್ವತಂತ್ರಗೊಂಡ ಆಫ್ರಿಕನ್ ಜನತೆಗಳೂ ಇನ್ನೂ ತಮ್ಮ ವಿಮೋಚನೆಗಾಗಿ ಹೋರಾಡುತ್ತಿರುವ ಜನತೆಗಳೂ ಒಂದು ಐಕ್ಯ ರಂಗ ರಚಿಸಿಕೊಳ್ಳಬೇಕು, ಒಂದೊಂದು ರಾಜ್ಯವೂ ಇಡೀ ಖಂಡದ ನೆರವನ್ನು ನಿರೀಕ್ಷಿಸುವುದು ಸಾಧ್ಯವಾಗಬೇಕು, ಎಂದವರು ತಿಳಿಸಿದರು.

ಕಾಂಗೋದಲ್ಲಿ ಸ್ವಾತಂತ್ರ್ಯ ಚಳವಳಿಯ ಇತರ ಅನೇಕ ನಾಯಕರಿಗಿಂತ ಮುನ್ನವೇ ಇವರು ದೇಶದೊಳಗಿನ ವಸಾಹತು ವಿರೋಧಿ ಶಕ್ತಿಗಳೆಲ್ಲ ಒಂದುಗೂಡುವುದರ ಆವಶ್ಯಕತೆಯನ್ನು ಹೆಚ್ಚು ಗಾಢವಾಗಿ ಮನಗಂಡಿದ್ದರು. "ನಾವು ಎಷ್ಟು ಹೆಚ್ಚು ಐಕ್ಯಗೊಂಡಿದ್ದರೆ ಅಷ್ಟೂ ಹೆಚ್ಚು ಯಶಸ್ವಿಯಾಗಿ 'ವಿಭಜಿಸಿ ಆಳುವ' ನೀತಿಯ ಪ್ರತಿಪಾದಕರ ಮರ್ದನ, ಭ್ರಷ್ಟಾಚಾರ ಹಾಗೂ ಅನೈಕ್ಯಗೊಳಿಸುವ ಯತ್ನಗಳನ್ನು ವಿರೋಧಿಸಬಲ್ಲೆವು"** ಎಂದವರು 1956ರಷ್ಟು ಮುನ್ನವೇ ಬರೆದರು.

ಲುಮುಂಬರವರೂ ಅವರ ಬೆಂಬಲಿಗರೂ ಕಾಂಗೋ ಜನರನ್ನು ಒಂದುಗೂಡಿಸಲು ಅತ್ಯಂತ ತೊಡಕಿನ ಪರಿಸ್ಥಿತಿಗಳಲ್ಲೂ ತುಂಬ ಕಷ್ಟಪಟ್ಟು ಪ್ರಯತ್ನಿಸುತ್ತಿದ್ದರು. ಆಫ್ರಿಕದ ಬೇರೆ ಯಾವ ಪ್ರದೇಶಗಳಿಗೆ ಹೋಲಿಸಿದಂತೆಯೂ ಕಾಂಗೋದಲ್ಲಿ ನರಕುಲ ವೃಂದಗಳ ವೈವಿಧ್ಯತೆ ತುಂಬ ಹೆಚ್ಚಾಗಿದ್ದಿತು. ದೇಶದಲ್ಲಿ 200ಕ್ಕೂ ಹೆಚ್ಚು ಬುಡಕಟ್ಟುಗಳೂ ನರಕುಲ ವೃಂದಗಳೂ ವಾಸಿಸುತ್ತಿದ್ದವು. ಅವುಗಳ ಸಾಮಾ

---

*_Remarques congolaises et africaines_, Brussels, No. 3, 1964, p. 47. – ಸಂ.

**ಅದೇ ಗ್ರಂಥ, ಪು. 46. – ಸಂ.

ಜಿಕ ಹಾಗೂ ಆರ್ಥಿಕ ಬೆಳವಣಿಗೆಯ ಮಟ್ಟಗಳು ಭಿನ್ನಭಿನ್ನವಾಗಿದ್ದವು. ದೇಶದ ವಿವಿಧ ಭಾಗಗಳ ನಡುವೆ ಮತ್ತು ನಗರ ಗ್ರಾಮಗಳ ನಡುವೆ ಸ್ಥಿರವಾದ ಆರ್ಥಿಕ ಸಂಪರ್ಕಗಳಿರಲಿಲ್ಲ. ಒಂದು ಜನಾಂಗ ಹೆಚ್ಚಾಗಿ ವಾಸಿಸುತ್ತಿದ್ದ ಪ್ರದೇಶಗಳಲ್ಲಿ (ಕೆಳಗಿನ ಕಾಂಗೋ, ಕಸಾಯ್ ಹಾಗೂ ಕಟಾಂಗ) ಪ್ರತ್ಯೇಕತಾ ಪ್ರವೃತ್ತಿಗಳು ಹೆಚ್ಚು ಸ್ಪಷ್ಟವಾಗಿ ಕಂಡುಬರುತ್ತಿದ್ದವು.

ಬುಡಕಟ್ಟುವಾದವೇ ದೇಶದ ಅತ್ಯಂತ ಅಪಾಯಕಾರಿ "ಆಂತರಿಕ ಶತ್ರು" ಎಂದು ಭಾವಿಸಿಕೊಂಡು ಲುಮುಂಬರವರು ಇಡೀ ರಾಷ್ಟ್ರದ ಹಿತವನ್ನು ಸಂಕುಚಿತ ನರಕುಲ ವೃಂದಗಳ ಹಿತಗಳಿಗೂ ಮೇಲಿರಿಸಬೇಕೆಂದು ತಮ್ಮ ದೇಶೀಯರಿಗೆ ಅವಿಶ್ರಾಂತವಾಗಿ ಕರೆ ಕೊಟ್ಟರು. ಬಂಡವಾಳ ತೊಡಗಿಸುವ ಹಾಗೂ ಲಾಭ ಗಳಿಸುವ ದೃಷ್ಟಿಯಿಂದ ಅತ್ಯುತ್ತಮ ಪ್ರತೀಕ್ಷೆಗಳಿರುವ ಜಿಲ್ಲೆಗಳಿಗೇ ವಸಾಹತುವಾದಿ ಅಧಿಕಾರಿಗಳು ಸಾಮಾಜಿಕ-ಆರ್ಥಿಕ ಬೆಳವಣಿಗೆಯಲ್ಲಿ ಹೆಚ್ಚಿನ ಆದ್ಯತೆ ನೀಡುತ್ತಿದ್ದರು. ಅದು ಇಡೀ ದೇಶದ ಸಾಮರಸ್ಯ ಬೆಳವಣಿಗೆಗೆ ತುಂಬ ಹಾನಿಕರವಾಗಿದ್ದಿತು. ಲುಮುಂಬರವರು ಈ ನೀತಿಯನ್ನು ಪ್ರಬಲವಾಗಿ ವಿರೋಧಿಸಿದರು. ಕಾಂಗೋವನ್ನು ಸಣ್ಣಪುಟ್ಟ ಆರ್ಥಿಕವಾಗಿ ಅಸಿಂಧುವಾದ ಪ್ರಾಂತಗಳನ್ನಾಗಿ ವಿಭಜಿಸಲು ವಸಾಹತುವಾದಿಗಳು ಮಾಡಿದ್ದ ಯೋಜನೆಗಳನ್ನೂ, ಈ ಪ್ರಾಂತಗಳನ್ನು ಅರೆ ಸ್ವತಂತ್ರವಾದ "ಪುಟ್ಟ ಗಣತಂತ್ರಗಳ"ನ್ನಾಗಿ ಪರಿವರ್ತಿಸಿಕೊಂಡು ಅವುಗಳನ್ನು ತಮ್ಮ ಸ್ವಂತ ಧನಲೋಭದ ಹಿತಗಳಿಗಾಗಿ ಬಳಸಿಕೊಳ್ಳಲು ಹವಣಿಸುತ್ತಿದ್ದ ಕೆಲವು ರಾಜಕಾರಣಿಗಳ ಹಂಚಿಕೆಗಳನ್ನೂ ಅವರು ತೀವ್ರವಾಗಿ ವಿರೋಧಿಸಿದರು. ಕಾಂಗೋದ ಸ್ವಾತಂತ್ರ್ಯದ ಪ್ರಶ್ನೆಯನ್ನು ತೀರ್ಮಾನಿಸಲು ಕರೆಯಲಾಗಿದ್ದ ಬ್ರಸ್ಸೆಲ್ಸ್ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಅವರು ಹೇಳಿದರು: "ನಮ್ಮ ದೇಶವನ್ನು ವಿಭಜಿಸುವ ಯಾವುದೇ ಯತ್ನವನ್ನೂ ನಾವು ವಿರೋಧಿಸುತ್ತೇವೆ. ಕಾಂಗೋದ ಹಿರಿಮೆ ಇರುವುದು ಅದರ ರಾಜಕೀಯ ಹಾಗೂ ಆರ್ಥಿಕ ಏಕತೆಯನ್ನು ಕಾಪಾಡುವುದರಲ್ಲೇ."* ಏಕೀಕೃತವಾದ ಕಾಂಗೋ ರಾಷ್ಟ್ರವನ್ನು ನಿರ್ಮಿಸಬೇಕಾದರೆ ಮೊದಲು ವಸಾಹತುವಾದದಿಂದ ಪಡೆದುಕೊಂಡಿದ್ದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಸಂರಚನೆಗಳನ್ನು ನಾಶಗೊಳಿಸಬೇಕು ಎಂದವರು ಮುಚ್ಚುಮರೆ ಇಲ್ಲದೆ ನೇರವಾಗಿಯೇ ಹೇಳಿದರು.

ಅದೇ ಹೊತ್ತಿನಲ್ಲಿ ಲುಮುಂಬ ಕಾಂಗೋ ಸಮಾಜದ ವಿವಿಧ ವರ್ಗಗಳ ಹಾಗೂ ಸಾಮಾಜಿಕ ವೃಂದಗಳ ನಡುವೆ – ರೈತರು, ಕೃಷಿ ಹಾಗೂ ಕೈಗಾರಿಕಾ

La pensée politique de Patrice Lumumba, Présence africaine, Paris, 1963, p. 165. – ಸಂ.

ಕಾರ್ಮಿಕರು (ಇವರು ಕಾಂಗೋದಲ್ಲಿ ಇತರ ಆಫ್ರಿಕನ್ ದೇಶಗಳಲ್ಲಿದ್ದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿದ್ದರು), ಉದಯೋನ್ಮುಖಿ ಬೂರ್ಷ್ವಾಸೀ, ರಾಷ್ಟ್ರೀಯ ಬುದ್ಧಿಜೀವಿಗಳು, ಪಾರಂಪರಿಕ ಗಣ್ಯ ಜನರು, ಇವರುಗಳ ನಡುವೆ – ಸಹಕಾರವನ್ನು ಬೋಧಿಸಿದರು. ಅಂತಹ ಸಹಕಾರವು ಒಂದು ಭ್ರಾಂತಿಯಷ್ಟೆ ಆಗಿದ್ದಿತು. ಲುಮುಂಬರವರು ಅಂತಹ ಅನೇಕ ಭ್ರಾಂತಿಗಳನ್ನು ಹೊಂದಿದ್ದರು. ಇದರಿಂದಾಗಿ ಅವರು ಒಂದು ಕಡೆ ತಮ್ಮ ನೀತಿ ಯಾರ ಹಿತಗಳಿಗೆ ಸವಾಲು ಹಾಕಿದ್ದಿತೋ ಆ ಹಿತಗಳನ್ನು ಹೊಂದಿದ್ದ ಸಾಮಾಜಿಕ ಸ್ತರಗಳನ್ನು ಕಂಡುಕೊಳ್ಳದಾಗಿದ್ದರು, ಮತ್ತೊಂದು ಕಡೆ, ಯಾರ ಬೆಂಬಲವನ್ನು ತಾವು ಪಡೆದುಕೊಳ್ಳಬಹುದಿದ್ದಿತೋ ಆ ಶಕ್ತಿಗಳನ್ನೂ ಅವರು ಗುರುತು ಹಚ್ಚದಾಗಿದ್ದರು. "ಪ್ರಿಯ ಸೋದರರೇ, ಸೋದರಿಯರೇ, ಕಾರ್ಮಿಕರೇ, ಸರಕಾರಿ ನೌಕರರೇ, ಬುದ್ಧಿಜೀವಿಗಳೇ, ಶ್ರಮಿಕರೇ, ಶ್ರೀಮಂತರೇ, ಬಡವರೇ ಆಫ್ರಿಕನರೇ, ಯೂರೋಪಿಯನ್ನರೇ, ಕ್ಯಾಥೊಲಿಕ್ಕರೇ, ಪ್ರಾಟೆಸ್ಟೆಂಟರೇ, ಕಿಂಬಾಂಗಿಸ್ಟರೇ, ಕಿತವಾಲಿಸ್ಟರೇ (ಧಾರ್ಮಿಕ-ರಾಜಕೀಯ ವಸಾಹತುವಾದ ವಿರೋಧಿ ಚಳವಳಿಗಳ ಬೆಂಬಲಿಗರು. – ಸಂ.), ಎಲ್ಲರೂ ಒಂದುಗೂಡೋಣ, ಒಂದು ಮಹೋನ್ನತ ಕಾಂಗೋ ರಾಷ್ಟ್ರವನ್ನು ನಿರ್ಮಿಸೋಣ"* ಎಂದವರು ಕಳಕಳಿಯ ಮನವಿ ಮಾಡಿಕೊಂಡರು.

ದೇಶದಲ್ಲಿ ಸಾಮಾಜಿಕ ಪ್ರತ್ಯೇಕತೆಯ ಪ್ರಕ್ರಿಯೆ ಆಗಲೇ ಸುಸ್ಪಷ್ಟವಾಗಿ ಗೋಚರಕ್ಕೆ ಬರುತ್ತಿದ್ದುದನ್ನು ಅವರು ಕಂಡುಕೊಂಡಿದ್ದರು. ಅವರೂ ಆಫ್ರಿಕನರ ಮಧ್ಯೆ ಸಾಮಾಜಿಕ ಸಾಮರಸ್ಯ ಸಾಧ್ಯ ಎಂದವರು ವಾದಿಸಿದರು, ಏಕೆಂದರೆ, ಕಾಂಗೋದ ನರಕುಲ ವೃಂದಗಳ ವೈವಿಧ್ಯತೆಯಲ್ಲಿ ಅಂತರ್ಗತವಾಗಿದ್ದ ಅಪಾಯವನ್ನು ಅವರು ಅರಿತಿದ್ದರು. ಅಲ್ಲದೆ ಕಾಂಗೋ ಸಮಾಜದ ಎಲ್ಲ ರಾಷ್ಟ್ರೀಯ ಶಕ್ತಿಗಳ ಏಕತೆ ದೇಶದ ರಾಜಕೀಯ ವಿಮೋಚನೆಗಷ್ಟೆ ಅಲ್ಲ ಆರ್ಥಿಕ ವಿಮೋಚನೆಗೂ ಅತ್ಯಗತ್ಯ ಎಂಬ ಅವರ ಗಾಢ ಮನವರಿಕೆಯೂ ಸ್ವಲ್ಪಮಟ್ಟಿಗೆ ಅವರು ಹಾಗೆ ವಾದಿಸುವುದಕ್ಕೆ ಕಾರಣವಾಗಿದ್ದಿತೆಂಬುದನ್ನೂ ಮರೆಯಬಾರದು.

ಹುಟ್ಟಿನಲ್ಲಿ ಬಡ ರೈತರಾಗಿದ್ದು ಕೆಳ ದರ್ಜೆಯ ಸರಕಾರೀ ಅಧಿಕಾರಿಯ ಸ್ಥಾನದಿಂದ ಪ್ರಧಾನ ಮಂತ್ರಿಯ ಸ್ಥಾನಕ್ಕೆ ಏರಿದ್ದ ಲುಮುಂಬರವರು ಯಾವತ್ತೂ ಜನರೊಂದಿಗೆ ತಾದಾತ್ಮ್ಯ ಭಾವ ಹೊಂದಿದ್ದರು, ದುಡಿಯುವ ಜನರನ್ನು ಗಾಢವಾಗಿ ಗೌರವಿಸುತ್ತಿದ್ದರು, ಅವರನ್ನು ಆತ್ಮೀಯ ಸೋದರರನ್ನಾಗಿ, ಸಹಯೋಧರನ್ನಾಗಿ ಕಾಣುತ್ತಿದ್ದರು. "ಕೆಲವು ಕಾಂಗೋ ಜನರು ಸುಸ್ಥಿತಿಯಲ್ಲಿದ್ದಾರೆಂಬುದನ್ನು ನಾವು ಬಲ್ಲೆವು. ಆದರೆ ಅಂಥವರ ಸಂಖ್ಯೆ ಅತ್ಯಲ್ಪ. ನಾವಾದರೋ ಬಡ

---

* ಅದೇ ಗ್ರಂಥ, ಪು. 246. – ಸಂ.

ಸಂಸ್ಕೃತಿ ಜನರ ಸುಕ್ಷೇಮದ ಬಗೆಗೆ ಕಾಳಜಿ ಹೊಂದಿದ್ದೇವೆ"* ಎಂದವರು 1956ರಲ್ಲಿ ಬರೆದರು.

ಅವರು ಕಾಂಗೋ ರಾಷ್ಟ್ರೀಯ ಚಳವಳಿ(ಎಂಎನ್‌ಸಿ)ಯನ್ನು ಜನಸಮೂಹಗಳೊಂದಿಗೆ ಪರಿಣಾಮಕಾರಿಯಾಗಿ ಸಂಪರ್ಕ ಇರಿಸಿಕೊಳ್ಳಲು ಸಾಧನವನ್ನಾಗಿ ಮಾಡಲು ಯತ್ನಿಸಿದರು. ಅವರು ಕಂಡುಕೊಂಡಂತೆ ಎಂಎನ್‌ಸಿಯು ವಸಾಹತು ಆಡಳಿತದ ವಿರುದ್ಧ ಹೋರಾಟಕ್ಕಾಗಿಯಷ್ಟೆ ಅಲ್ಲ ಮಾನವನಿಂದ ಮಾನವನ ಶೋಷಣೆಯನ್ನು ನಿರ್ಮೂಲನ ಮಾಡಲೂ ಜನರನ್ನು ಅಣಿನೆರೆಯಿಸಬೇಕಿದ್ದಿತು. ಹಾಗಾಗಿ ಎಂಎನ್‌ಸಿಯ ನಾಯಕರು ಜನಸಮೂಹಗಳೊಂದಿಗೆ ವಿಶಾಲ ಸಂಪರ್ಕಗಳನ್ನು ಬೆಳೆಸಿಕೊಳ್ಳಲು ಯತ್ನಿಸಿದರು. "ಸ್ವಾತಂತ್ರ್ಯ ಹೋರಾಟದಲ್ಲಿ ಬಿಡಿ ರಾಜಕೀಯ ವ್ಯಕ್ತಿಗಳನ್ನಲ್ಲ ಅವರೆ ತಮ್ಮ ಸ್ಥಿತಿಯಿಂದ ಅತೃಪ್ತಿಗೊಂಡಿರುವಂಥ ಇಡೀ ಜನತೆಯನ್ನು ಗಣನೆಗೆ ತಂದುಕೊಳ್ಳಬೇಕು."** ಎಂದು ಲುಮುಂಬ ಹೇಳಿದರು. ಎಂಎನ್‌ಸಿಯು ದೇಶದ ಅನೇಕ ಭಾಗಗಳಲ್ಲಿ ಸ್ಥಾಪಿಸಿದ್ದ ಸ್ಥಳೀಯ ಶಾಖೆಗಳ ಹಾಗೂ ಕೇಂದ್ರ ಅಂಗಸಂಸ್ಥೆಗಳ ಸಭೆಗಳನ್ನು ತುಂಬ ಆಗಾಗ್ಗೆ ಕ್ರಮಬದ್ಧವಾಗಿ ಜರುಗಿಸುತ್ತಿದ್ದಿತು. ಪಾರ್ಟಿಯ ನಾಯಕತ್ವವು ಆಗಾಗ್ಗೆ ರೈತರ, ಮರ ಕಡಿಯುವವರ ಹಾಗೂ ಕೃಷಿ ಕಾರ್ಮಿಕರ ಸಭೆಗಳನ್ನು ಕೂಡಿಸುತ್ತಿದ್ದಿತು. ಕಾಂಗೋದ ಇತರ ಪಾರ್ಟಿಗಳಂತಲ್ಲದೆ ಎಂಎನ್‌ಸಿ ಟ್ರೇಡ್ ಯೂನಿಯನ್‌ಗಳೊಂದಿಗೂ ಸಂಪರ್ಕ ಇರಿಸಿಕೊಂಡಿದ್ದಿತು. ವಾಸ್ತವವಾಗಿ ಅದು ಐಕ್ಯ ರಾಷ್ಟ್ರೀಯ ರಂಗವನ್ನು ಹೋಲುವಂಥ ಸಂಘಟನೆಯಾಗಿದ್ದಿತು.

ದೇಶದ ಒಳಗೂ ಹೊರಗೂ ಇದ್ದ ಲುಮುಂಬರವರ ಶತ್ರುಗಳು ಅವರ ಪ್ರಜಾಪ್ರಭುತ್ವವಾದಿ ಮನೋಧರ್ಮವನ್ನು ಹೆಚ್ಚು ಅಪಾಯಕಾರಿಯನ್ನಾಗಿ ಭಾವಿಸಿದ್ದರು, ಏಕೆಂದರೆ, ಈ ಮನೋಧರ್ಮದ ಜೊತೆಗೆ ಲುಮುಂಬರವರ ವಿಚಾರಗಳೂ ನೀತಿಗಳೂ ಆಮೂಲಾಗ್ರವಾಗಿ ಸುಧಾರಣೆಗೊಳ್ಳುತ್ತಿದ್ದವು.

ಕಾಂಗೋದ ಜನರ ಸಂಕಷ್ಟಗಳಿಗೆ ಸಾಮ್ರಾಜ್ಯವಾದವೇ ಪ್ರಧಾನವಾಗಿ ಕಾರಣವಾಗಿದ್ದಿತೆಂದು ಎಂಎನ್‌ಸಿಯ ನಾಯಕರು, ಮುಖ್ಯವಾಗಿ ಲುಮುಂಬರವರೇ ಸ್ವತಃ, ಭಾವಿಸಿದ್ದರು. ನವವಸಾಹತುವಾದಿಗಳು ಆಫ್ರಿಕದಲ್ಲಿ ತಮ್ಮ ಆಡಳಿತವನ್ನು

*P. Lumumba, *Le Congo, terre d'avenir est-il menacé?*, p. 28.—ಸಂ.

**See *Notes pour servir a l'étude des "Groupements politiques" à Léopoldville*, Part 3, L'office de l'Information et des Relations Publiques pour le Congo et le Ruanda-Urundi. Brussels, 1959, p. 80.—ಸಂ.

ಶಾಶ್ವತವನ್ನಾಗಿ ಮಾಡಲು ಹಾಕಿಕೊಂಡಿದ್ದ ಯೋಜನೆಗಳನ್ನು ಅವರು ಬಯಲು ಮಾಡಿದರು. "ಯೂರೋಪಿಯನ್ ರಾಷ್ಟ್ರಗಳು ತಮ್ಮ ನಾಯಕತ್ವವನ್ನು ಅನುಸರಿಸುವಂಥ ಹಾಗೂ ಸ್ವಂತ ಜನರನ್ನೇ ಮೋಸಗೊಳಿಸುವಂಥ ಆಫ್ರಿಕನ್ ನಾಯಕರ ಸಹಾನುಭೂತಿಯನ್ನು ಗಳಿಸಿಕೊಳ್ಳಲು ಬಯಸುತ್ತಿವೆ. ಈ ಕೆಲವು ರಾಷ್ಟ್ರಗಳು ಕಾಂಗೋದಲ್ಲಿ ಹಾಗೂ ಆಫ್ರಿಕದಲ್ಲಿ ಇರುವುದಕ್ಕೆ ಮುಖ್ಯ ಕಾರಣ ಆ ದೇಶಗಳ ಸಂಪತ್ತನ್ನು ಸಾಧ್ಯವಾದಷ್ಟೂ ಹೆಚ್ಚು ಶೋಷಿಸುವುದೇ ಆಗಿದೆ. ಇದಕ್ಕಾಗಿ ಅವು ಆ ದೇಶಗಳ ಭ್ರಷ್ಟ ನಾಯಕರ ಸಹಾಯ ಪಡೆದುಕೊಳ್ಳುತ್ತಿವೆ"* ಎಂದು ಲುಮುಂಬ ಹೇಳಿದರು.

ಪಾಶ್ಚಿಮಾತ್ಯ ದೇಶಗಳ ನೀತಿಗಳನ್ನು ಬೆಲೆಗಟ್ಟುವಾಗ ಲುಮುಂಬರವರ ಮನೋಧರ್ಮದಲ್ಲಿ ವರ್ಗ ನಿಲುವಿನ ಪ್ರಬಲಾಂಶಗಳು ಇದ್ದುದು ಗೋಚರಕ್ಕೆ ಬರುತ್ತದೆ. "ಬೆಲ್ಜಿಯಂನ ಜನರಲ್ಲೇ ಅತ್ಯಧಿಕ ಬಹುಮತೀಯರು ಆಫ್ರಿಕನರ ಮೇಲಿನ ದಬ್ಬಾಳಿಕೆಯ ವಿರುದ್ಧವಿದ್ದಾರೆಂಬುವನ್ನು ನಾನು ಬಲ್ಲೆ" ಎಂದವರು 1959ರ ಅಕ್ಟೋಬರ್‌ನಲ್ಲಿ ಹೇಳಿದರು. "ಕಾಂಗೋದ ವಸಾಹತು ಸ್ಥಿತಿಯನ್ನು ಅವರು ಅನುಮೋದಿಸರು. ಈ ಸ್ಥಿತಿಯ ಪ್ರಕಾರ 14 ಮಿಲಿಯ ಕಾಂಗೋ ಜನರು ಒಂದು ಸಣ್ಣ ಆರ್ಥಿಕ ಅಲ್ಪಜನಾಧಿಪತ್ಯದ ಸರ್ವಾಧಿಕಾರಕ್ಕೆ ತುತ್ತಾಗಿದ್ದಾರೆ. ಬೆಲ್ಜಿಯನ್ ಜನರ ಭಾವನೆಗಳೇ ಮೇಲುಗೈ ಪಡೆಯುವ ಸಾಧ್ಯತೆ ಇದ್ದಿದ್ದಲ್ಲಿ ಕಾಂಗೋ ಇಂದು ಅದನ್ನು ಬಾಧಿಸುತ್ತಿರುವಂಥ ದುಸ್ಥಿತಿಗೆ ಎಂದೂ ಒಳಗಾಗುತ್ತಿರಲಿಲ್ಲ."** ಇದಕ್ಕೆ ಸ್ವಲ್ಪ ಮುನ್ನ, ಅದೇ ವರ್ಷ ಸೆಪ್ಟೆಂಬರ್ 6ರಂದು, ಲುಲುವಾಬುರ್ಗ್‌ನಲ್ಲಿ ಆರು ಸಾವಿರ ಜನರ ಬೃಹತ್ ಸಭೆಯೊಂದನ್ನುದ್ದೇಶಿಸಿ ಮಾತನಾಡುತ್ತ ಅವರು "ಕಾಂಗೋ ಹಾಗೂ ಬೆಲ್ಜಿಯಂಗಳ ನಡುವಿನ ಸಂಬಂಧಗಳಲ್ಲಿ ಬಿಕ್ಕಟ್ಟುಗಳನ್ನು ಕಾಂಗೋದ ಸಂಪತ್ತನ್ನು ಶೋಷಿಸುವುದರಲ್ಲಿ ಆಸಕ್ತವಾದ ಹಾಗೂ ವಸಾಹತು ಆಡಳಿತವನ್ನು ವಿಸ್ತರಿಸುವಂತೆ ಅಧಿಕಾರಿಗಳನ್ನು ಪ್ರೇರಿಸುತ್ತಿರುವ ವೃಂದಗಳಷ್ಟೆ, ಖಾಸಗಿ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ಹೊರಟಿರುವ ಕೆಲವು ಅಧಿಕಾರಿಗಳಷ್ಟೆ, ಮತ್ತಷ್ಟು ಉಲ್ಬಣಗೊಳಿಸುತ್ತಿರುವುದು"*** ಎಂದು ತಿಳಿಸಿದರು.

ಸ್ವಾತಂತ್ರ್ಯ ಹಾಗೂ ಸಾಮಾಜಿಕ ಪ್ರಗತಿಗಳಿಗಾಗಿ ಹೋರಾಟದಲ್ಲಿ ಜನರಷ್ಟೆ ಪ್ರಧಾನ ಚಾಲಕ ಶಕ್ತಿ ಎಂದು ಲುಮುಂಬ ಭಾವಿಸಿದ್ದರು. 1959ರ ಏಪ್ರಿಲ್‌ನಲ್ಲಿ ಬ್ರಸ್ಸೆಲ್ಸ್‌ನಲ್ಲಿ ನೀಡಿದ ಉಪನ್ಯಾಸವೊಂದರಲ್ಲಿ ಅವರು ಜನಸಮೂಹಗಳ ರಾಜಕಾರಣಗಳನ್ನು ವಿಶಿಷ್ಟ ಕೇಳಿಕೆಗಳನ್ನೂ ಘೋಷಣೆಗಳನ್ನೂ ಮುಂದಿಡುವಂತೆ

Afrique-Asie, Paris, No. 154, 1978, p. 10.—ಸಂ.

***La pensée politique de Patrice Lumumba*, pp. 87-88.—ಸಂ.

***ಅದೇ ಗ್ರಂಥ, ಪು. 66.—ಸಂ.

ಪ್ರೇರಿಸುತ್ತಿದ್ದವು, ಏಕೆಂದರೆ, ಜನತೆ "ನಾವು (ಜನ ನಾಯಕರು. – ಸಂ.) ಬಯಸುವುದಕ್ಕಿಂತ ಹೆಚ್ಚು ಶೀಘ್ರವಾಗಿ ಮುನ್ನಡೆಯಲು ಬಯಸುತ್ತಿರುವುದು"* ಎಂದು ಹೇಳಿದರು. ಜನಸಮೂಹಗಳ ಪಾತ್ರದ ಬಗೆಗೆ ಅವರು ಹೊಂದಿದ್ದ ಈ ಭಾವನೆಯೇ ಅವರ ದೇಶದಲ್ಲಷ್ಟೆ ಅಲ್ಲ ಇತರ ಆಫ್ರಿಕನ್ ರಾಷ್ಟ್ರಗಳಲ್ಲೂ ಇದ್ದ ಅನೇಕ ಅವರ ಸಮಕಾಲೀನ ರಾಜಕೀಯ ವ್ಯಕ್ತಿಗಳಿಂದ ಅವರನ್ನು ಹೆಚ್ಚು ಉತ್ತಮರನ್ನಾಗಿ ಪ್ರತ್ಯೇಕಿಸಿ ತೋರಿಸುತ್ತಿದ್ದುದು. ಅವರು ಹೇಳಿದರು: "ಸ್ವಾತಂತ್ರ್ಯವನ್ನು ನಿಮಗೆ ಬೆಳ್ಳಿಯ ತಟ್ಟೆಯಲ್ಲಿ ಉಡುಗೊರೆಯಾಗಿ ಎಂದೂ ತಂದುಕೊಡಲಾಗುವುದಿಲ್ಲ ಎಂದು ಇತಿಹಾಸ ರುಜುವಾತು ಮಾಡುತ್ತದೆ. ಸ್ವಾತಂತ್ರ್ಯವನ್ನು ಹೋರಾಡಿ ಗೆಲ್ಲಬೇಕು. ಆ ಗುರಿಸಾಧನೆಗಾಗಿ ನಾವು ನಮ್ಮನ್ನೇ ಚೆನ್ನಾಗಿ ಸಂಘಟಿಸಿಕೊಳ್ಳಬೇಕು, ದೇಶದಲ್ಲಿರುವ ಎಲ್ಲ ಹಿತಕರವಾದ ಶಕ್ತಿಗಳನ್ನೂ ಅಣಿನೆರೆಯಿಸಬೇಕು. ಕಾಂಗೋ ಜನರು ನಮ್ಮ ಮನವಿಗೆ ಓಗೊಟ್ಟಿದ್ದಾರೆ ಮತ್ತು ಈ ಐಕ್ಯ ಬಲದ ಫಲವಾಗಿಯೇ ನಾವು ಲೊಡ್ಡೆದ್ದ ವಸಾಹತುವಾದಕ್ಕೆ ಮಾರಕ ಪ್ರಹಾರ ನೀಡಿದ್ದೇವೆ."**

ಈ ವಿಷಯಕ್ಕೆ ಸಂಬಂಧಿಸಿ ಕಾಂಗೋದ ಬಹುತೇಕ ಸಂಪ್ರದಾಯಶರಣ ರಾಜಕೀಯ ನಾಯಕರು ಪ್ಯಾಟ್ರಿಸ್ ಲುಮುಂಬರವರ ಅಭಿಪ್ರಾಯಗಳನ್ನು ಒಪ್ಪಲಿಲ್ಲ. ಲುಮುಂಬರವರು ಜನಸಮೂಹಗಳ ಮನಸ್ಸಿನಲ್ಲಿ ಹಾನಿಕರ ವಿಚಾರಗಳನ್ನು ತುಂಬುತ್ತಿರುವುದಾಗಿ ಅವರು ಲುಮುಂಬರವರ ಮೇಲೆ ಆಪಾದನೆ ಹೊರಿಸಿದರು. ಲುಮುಂಬರವರು ಇವರಿಂದ ಭಿನ್ನರಾಗಿದ್ದರಷ್ಟೆ ಅಲ್ಲ ತಮ್ಮ ಸಮಕಾಲೀನ ಕ್ರಾಂತಿಕಾರಿ ಪ್ರಜಾಸತ್ತೆಯ ಕೆಲವು ಪ್ರತಿನಿಧಿಗಳಿಗಿಂತಲೂ ತುಂಬ ಮುಂದುವರಿದಿದ್ದರು. ಆ ಕೆಲವರು ಒಂದಲ್ಲ ಒಂದು ಸಾಮಾಜಿಕ ವೃಂದದ ಪಾತ್ರವನ್ನು ಉತ್ಪ್ರೇಕ್ಷಿಸುವ ಮತ್ತು ಇಂದು ಹೊಸದಾಗಿ ರೂಪಿತಗೊಂಡ ರಾಜ್ಯಗಳಲ್ಲಿ ಜರುಗುತ್ತಿರುವ ಕ್ರಾಂತಿಕಾರಿ ಸುಧಾರಣೆಗಳಿಗೆ ದುಡಿಯುವ ಜನಸಮೂಹಗಳ ಕಾಣಿಕೆಯನ್ನು ಅಲ್ಪ ಅಂದಾಜು ಮಾಡುವ ಮನೋಬಲವನ್ನೇ ಹೆಚ್ಚಾಗಿ ಹೊಂದಿದ್ದರು.

ಬೆಲ್ಜಿಯನ್ ಸಾಮ್ರಾಜ್ಯವಾದವು ಹೆಚ್ಚು ಹೆಚ್ಚು ವೃದ್ಧಿಗೊಳ್ಳುತ್ತಿದ್ದ ರಾಷ್ಟ್ರೀಯ-ವಿಮೋಚನಾ ಚಳವಳಿಗೆ ಮಣಿಯಲೇ ಬೇಕಾಯಿತು. 1960ರ ಜೂನ್ 30ರಂದು ಕಾಂಗೋ ಗಣತಂತ್ರ ಸ್ಥಾಪನೆಯನ್ನು ಘೋಷಿಸಲಾಯಿತು. ಪ್ಯಾಟ್ರಿಸ್ ಲುಮುಂಬ ಈ ಗಣತಂತ್ರದ ಪ್ರಥಮ ರಾಷ್ಟ್ರೀಯ ಸರಕಾರದ ಅಧಿಪತಿಯಾದರು. ಸ್ವಾತಂತ್ರ್ಯ ಘೋಷಣೆಯ ಸಮಾರಂಭದಲ್ಲಿ ಅವರು ಆಡಿದ ಮಾತುಗಳನ್ನು ನೆನಪಿಗೆ ತಂದುಕೊಳ್ಳದೆ ಇರಲು ಆಗುವುದಿಲ್ಲ: "ನಾವು ಈ

*ಅದೇ ಗ್ರಂಥ, ಪು. 45.

***Afrique-Asie*, Paris, No. 154, 1978, p. 11. – ಸಂ.

ಸ್ವಾತಂತ್ರ್ಯವನ್ನು ಹೋರಾಟದ ಮೂಲಕ ಗಳಿಸಿಕೊಂಡಿದ್ದೇವೆಂಬುದನ್ನು ಯಾವ ಕಾಂಗೋಲೀಸನೂ ಎಂದೂ ಮರೆಯಲಾರ. ಅದೊಂದು ಅನುದಿನವೂ ಪಟ್ಟು ಹಿಡಿದು ನಡೆಸಿದ ಆದರ್ಶಗಳಿಂದ ಕೂಡಿದ ಹೋರಾಟವಾಗಿದ್ದಿತು. ಕೊರತೆ, ಸಂಕಷ್ಟ ಅಥವಾ ಮಹಾತ್ಯಾಗಗಳಿಗೆ ಅಂಜದೆ, ನಮ್ಮ ಜನತೆಗಳು ಹರಿಸಿದ ರಕ್ತದ ಕೋಡಿಗೆ ಅಂಜದೆ, ನಾವು ನಡೆಸಿದ ಮಹಾ ಹೋರಾಟವಾಗಿದ್ದಿತು ಅದು."*

ಪ್ರಧಾನ ಮಂತ್ರಿಯಾದ ಕೂಡಲೇ ಲುಮುಂಬರವರು ಬಿಗಿಯಾದ ಸಾಮ್ರಾಜ್ಯಶಾಹಿ ವಿರೋಧಿ ನೀತಿಯನ್ನು ಅನುಸರಿಸತೊಡಗಿದರು. ಆದರೆ ಅಧಿಕಾರದ ನಿಜವಾದ ಸೂತ್ರಗಳು ತಮ್ಮ ಕೈಗಳಲ್ಲಿರಲಿಲ್ಲ ಮತ್ತು ಕಾಂಗೋದಲ್ಲಿ ಸಾಮ್ರಾಜ್ಯವಾದವು ಇನ್ನೂ ತನ್ನ ಆರ್ಥಿಕ ಹಾಗೂ ರಾಜಕೀಯ ನೆಲೆಗಳನ್ನು ಉಳಿಸಿಕೊಂಡಿದ್ದಿತು, ಎನ್ನುವುದನ್ನು ಬಹುಶಃ ಅವರು ತಿಳಿದಿರಲಿಲ್ಲ. "ಸರಕಾರದ ನೀತಿಯು ಜನರ ನೀತಿಯೇ ಆಗಿರಲಿರುವುದು. ಜನರೇ ನಮಗೆ ಆದೇಶ ನೀಡುವಂಥವರು. ನಾವು ಅವರ ಆಶೋತ್ತರಗಳಿಗೆ ಅನುಗುಣವಾಗಿ ಮತ್ತು ಅವರ ಹಿತಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ವರ್ತಿಸುವೆವು"** ಎಂದವರು ಘೋಷಿಸಿದರು. ಆದರೆ ಸರಕಾರೀ ಕಾರ್ಯಕ್ರಮವೊಂದನ್ನು ಪೂರ್ಣವಾಗಿ ರಚಿಸುವುದರಲ್ಲಿ ಅವರು ಯಶಸ್ವಿಯಾಗಲಿಲ್ಲ. ಆದರೂ ರಾಜಕೀಯ ಸ್ವಾತಂತ್ರ್ಯದ ಹೋರಾಟವನ್ನು ಶೋಷಕ ಸಂಬಂಧಗಳ ವಿರುದ್ಧ ಹೋರಾಟವನ್ನಾಗಿ ವಿಕಾಸಗೊಳಿಸುವುದು ಅವಶ್ಯ ಎನ್ನುವುದನ್ನು ಅವರು ಮನಗಂಡಿದ್ದರು ಎಂಬ ತೀರ್ಮಾನಕ್ಕೆ ಬರಲು ಅವರ ಸ್ಥೂಲ ಕರಡುಗಳೂ ಸಿದ್ಧತಾ ಸಾಮಗ್ರಿಯೂ ನಮಗೆ ಆಧಾರ ಒದಗಿಸುತ್ತವೆ.

"ರಾಜಕೀಯ ಸ್ವಾತಂತ್ರ್ಯಕ್ಕೆ ಪೂರಕವಾಗಿ ತಕ್ಷಣವೇ ಆರ್ಥಿಕ ಬೆಳವಣಿಗೆಯಾಗದಿದ್ದಲ್ಲಿ ಅಂತಹ ರಾಜಕೀಯ ಸ್ವಾತಂತ್ರ್ಯವು ಅರ್ಥರಹಿತವಾಗಿಯೇ ಉಳಿಯುತ್ತದೆ"*** ಎಂಬ ಸಂಪೂರ್ಣವಾಗಿ ಸರಿಯಾದ ಭಾವನೆಯಿಂದ ಮುಂದುವರಿಯುತ್ತ ಲುಮುಂಬರವರು ದೇಶದ ಸಂಪನ್ಮೂಲಗಳ ಮೇಲೆ ಮತ್ತು ಆರ್ಥಿಕತೆಯ ಮೇಲೆ ರಾಷ್ಟ್ರದ ನಿಯಂತ್ರಣ ಸ್ಥಾಪಿಸಲು ಕಸುವಿನಿಂದ ಕಾರ್ಯ ಜರುಗಿಸತೊಡಗಿದರು. ಬಂಡವಾಳವನ್ನು ಕಾಂಗೋದಿಂದ ಹೊರಕ್ಕೆ ರಫ್ತು ಮಾಡುವುದನ್ನು ಸರಕಾರ ನಿಷೇಧಿಸಿತು, ಕೈಗಾರಿಕೆಯಲ್ಲಿ ರಾಜ್ಯ ವಿಭಾಗದ ಮತ್ತು ಕೃಷಿಯಲ್ಲಿ ಉತ್ಪಾದನಾ ಸಹಕಾರದ ಆಧಾರದ ಮೇಲೆ ಆರ್ಥಿಕೋನ್ನತಿಯ ಯೋಜನೆಯೊಂದನ್ನು ರಚಿಸತೊಡಗಿತು. ಜನರ ಜೀವನ ಮಟ್ಟವನ್ನು ಹೆಚ್ಚಿಸಲು ಸರ

**La pensée politique de Patrice Lumumba*, p. 148. – ಸಂ.

***Congo 1960*, Vol. 2, Centre de Recherche et l'Information Socio-Politique, Brussels, 1961, p. 593. – ಸಂ.

****La pensée politique de Patrice Lumumba*, p. 140. – ಸಂ.

ಕವಸ್ತು ಬೆಲೆಗಳ ಮೇಲೆ ನಿಯಂತ್ರಣ ಏರ್ಪಡಿಸಲು, ವೇತನಗಳನ್ನು ಹೆಚ್ಚಿಸುವಂತೆ ಉದ್ಯಮಗಳ ಮಾಲೀಕರನ್ನು ಒಪ್ಪಿಸಲು, ಪೂರ್ಣ ಉದ್ಯೋಗವನ್ನು ಏರ್ಪಡಿಸಲು ಮತ್ತು ಏಕೀಕೃತ ಶ್ರಮಶಾಸನವೊಂದನ್ನು ರಚಿಸಲು, ಯತ್ನಿಸಿತು.

ಲುಮುಂಬರವರ ಪ್ರಜಾಪ್ರಭುತ್ವವಾದವು ರಾಜ್ಯದ ಕುರಿತು ಅವರ ಅಭಿಪ್ರಾಯಗಳಲ್ಲೂ ರಾಜ್ಯಸಾಧನದ ಕಾರ್ಯವನ್ನು ಕ್ರಮಬದ್ಧಗೊಳಿಸುವುದರಲ್ಲಿ ಅವರ ಪ್ರಾಯೋಗಿಕ ಚಟುವಟಿಕೆಯಲ್ಲೂ ಸುಸ್ಪಷ್ಟವಾಗಿ ವ್ಯಕ್ತಗೊಂಡಿತು. ಆಫ್ರಿಕದಲ್ಲಿ ಉದಯಿಸುತ್ತಿದ್ದ ಹೊಸ ಸಮಾಜವು ಜೀವಶಕ್ತಿಯಿಂದ ಕೂಡಿದ್ದಿತು ಮತ್ತು ಅದು ಯುರೋಪಿಯನ್ ರಾಜ್ಯ ವ್ಯವಸ್ಥೆಯ ಅಂಶಗಳನ್ನೂ ಪಾರಂಪರಿಕ ಆಫ್ರಿಕನ್ ಸೂತ್ರಗಳನ್ನೂ ತನ್ನಲ್ಲಿ ಮೇಳೈಸಿಕೊಳ್ಳಲಿದ್ದಿತು, ಎಂದು ಅವರು ದೃಢವಾಗಿ ನಂಬಿದ್ದರು. ಅಷ್ಟೇ ಅಲ್ಲ ಅವರು ಪಾಶ್ಚಿಮಾತ್ಯ ರಾಜಕೀಯ ಹಾಗೂ ಸಾಮಾಜಿಕ ಸೂತ್ರಗಳನ್ನು ಎರವಲು ತಂದು ಅವುಗಳನ್ನು ಆಫ್ರಿಕನ್ ಸಮಾಜದಲ್ಲಿ ಯಾಂತ್ರಿಕವಾಗಿ ಅನ್ವಯಿಸುವುದರ ವಿರುದ್ಧವಿದ್ದರು. ಉದಾಹರಣೆಗೆ, ಪಾರ್ಲಿಮೆಂಟರಿ ಚಟುವಟಿಕೆಯ (ಸುದೀರ್ಘ ಹಾಗೂ ಬಹು ವೇಳೆ ನಿರರ್ಥಕವಾದ ಚರ್ಚೆಗಳು, ಬಣಗುಂಪುಗಳ ನಡುವೆ ಘರ್ಷಣೆಗಳು, ಇತ್ಯಾದಿ) ಸೂತ್ರಗಳು ಕಾಂಗೋಗೆ ಎಷ್ಟು ಮಾತ್ರವೂ ಸರಿಹೋಗದವೆಂದು ಅವರು ಭಾವಿಸಿದ್ದರು. ಆದ್ದರಿಂದ ಕಾಂಗೋ ಪರಿಸ್ಥಿತಿಗಳಿಗೆ ಸ್ವಲ್ಪವೂ ಹೋಲಿಕೆ ಇಲ್ಲದಂಥ ಯುರೋಪಿಯನ್ ದೇಶ ಬೆಲ್ಜಿಯಂನ ಪರಿಸ್ಥಿತಿಗಳಿಗೆ ತಕ್ಕಂತೆ ರೂಪಿತವಾಗಿದ್ದ ಪಾರ್ಲಿಮೆಂಟ್ ಪದ್ಧತಿಯನ್ನು ವಸಾಹತು ಅಧಿಕಾರಿಗಳು ಭವಿಷ್ಯತ್ತಿನ ಕಾಂಗೋ ಗಣತಂತ್ರದಲ್ಲಿ ನೆಡಲು ಯತ್ನಿಸಿದ್ದುದನ್ನು ಲುಮುಂಬ ವಿರೋಧಿಸಿದರು. ಕಾಂಗೋದ ಸ್ವಾತಂತ್ರ್ಯ ಘೋಷಣೆಯ ಮುನ್ನಾಕಾಲದಲ್ಲಿ ಬೆಲ್ಜಿಯನ್ ಅಧಿಕಾರಿಗಳು ರಾಜ್ಯಸಾಧನದ ಕಾರ್ಯಕ್ಕೆ ಸಂಬಂಧಿಸಿ ರಚಿಸಿದ್ದ ಅನೇಕ ಸೂತ್ರಗಳ ಬಗೆಗೆ ಭಿನ್ನಮತ ಹೊಂದಿದ್ದರೂ ಲುಮುಂಬರವರು ತಮ್ಮ ಅನೇಕ ರಾಜಕೀಯ ವಿರೋಧಿಗಳು ಮಾಡಿದಂತೆ ಸಂವಿಧಾನಕ್ಕೆ ವಿರುದ್ಧವಾದ ಯಾವುದೇ ಚರ್ಯೆಗಳಲ್ಲಿ ತೊಡಗಲು ಒಪ್ಪಿಕೊಳ್ಳಲಿಲ್ಲ. ಅವರು ಸಾಮ್ರಾಜ್ಯವಾದ ಉಂಟುಮಾಡಿದ ಮುಗ್ಗಟ್ಟಿನ ಕಷ್ಟಕರ ದಿನಗಳಲ್ಲೂ ಸರಕಾರದೊಂದಿಗೂ ಪಾರ್ಲಿಮೆಂಟಿನೊಂದಿಗೂ ನಿಕಟ ಸಂಪರ್ಕ ಇರಿಸಿಕೊಂಡೇ ಕಾರ್ಯ ಜರುಗಿಸಿದರು.

ಯುರೋಪಿಯನ್ ಅಧಿಕಾರಿಗಳ ಸ್ಥಳದಲ್ಲಿ ಕಾಂಗೋ ಅಧಿಕಾರಿಗಳನ್ನು ಯಾಂತ್ರಿಕವಾಗಿ ಇರಿಸುವುದನ್ನೆ ಆಫ್ರಿಕೀಕರಣ ಪ್ರಕ್ರಿಯೆ ಎಂದೇನೂ ಲುಮುಂಬ ಭಾವಿಸಲಿಲ್ಲ. ರಾಷ್ಟ್ರೀಯ ನಾಯಕರು ಭಾರಿ ವೃತ್ತಿಪರ ಹಾಗೂ ರಾಜಕೀಯ ಮುತ್ಸದ್ದಿತನ ಜವಾಬ್ದಾರಿಕೆಗಳನ್ನು ತೋರಬೇಕೆಂದು ಅವರು ಆಗ್ರಹಿಸಿದರು. ರಾಜಕೀಯ ನಾಯಕರು ಜನತೆಯ ಸೇವಕರು ಎಂಬ ಅಂಶವನ್ನು ಅವರು ಆ

ನಾಯಕರಿಗೆ ಸತತವಾಗಿ ನೆನಪಿಗೆ ತರುತ್ತಿದ್ದರು. "ನಾಯಕರು ತಮ್ಮ ಕರ್ತವ್ಯಗಳನ್ನು ಮನಃಪೂರ್ವಕವಾಗಿ, ದಕ್ಷತೆಯೊಂದಿಗೆ ಹಾಗೂ ದೇಶಪ್ರೇಮದ ಭಾವನೆಯೊಂದಿಗೆ ನೆರವೇರಿಸಬೇಕು. ಜನರ ಹಿತಗಳಿಗೆ ಅನುಗುಣವಾಗಿ ಕೆಲಸ ಮಾಡಲು ಬಯಸದ ಯಾವುದೇ ಕಾಂಗೋ ಅಧಿಕಾರಿಯನ್ನೂ ಕೆಲಸದಿಂದ ತೆಗೆದು ಹಾಕಬೇಕು. ನಮಗೆ ಯೋಗ್ಯರಾದಂಥ ಜನ ಬೇಕು. ದೇಶದ ಒಳಿತಿಗಾಗಿ ಕೆಲಸ ಮಾಡುವಂಥ ಜನ ಬೇಕು."*

"ಅನೇಕ ಶತಮಾನಗಳ ವಸಾಹತೀಕರಣವು ನಮ್ಮಲ್ಲಿ ತುಂಬಿರುವಂಥ ಅಭ್ಯಾಸಗಳನ್ನೂ ಮನಃಪ್ರವೃತ್ತಿಗಳನ್ನೂ ಮನೋವಿಕಾರಗಳನ್ನೂ ನಾವು ನಮ್ಮಿಂದ ತೊಡೆದು ಹಾಕಿಕೊಳ್ಳಬೇಕು"** ಎಂದವರು ಒತ್ತಾಯಿಸಿದರು. ಇದಕ್ಕಾಗಿ ಅವರು ಸರಕಾರದ ಚಟುವಟಿಕೆಗಳಲ್ಲಿ ಕಾಂಗೋ ಜನರ ಆತ್ಮಿಕ ನಿರ್ವಸಾಹತೀಕರಣಕ್ಕೆ ಮಹತ್ವದ ಸ್ಥಾನ ನೀಡಿದ್ದರು. ವಸಾಹತು ಕಾಲಾವಧಿಯಲ್ಲಿ ಚರ್ಚು ನಿರ್ವಹಿಸುತ್ತಿದ್ದ ಋಣಾತ್ಮಕ ಪಾತ್ರವನ್ನೂ ಸ್ವಾತಂತ್ರ್ಯಾನಂತರ ಸಾರ್ವಭೌಮ ಕಾಂಗೋ ರಾಜ್ಯದ ಅಧಿಕಾರಿಗಳ ವಿರುದ್ಧ ಅದು ನಡೆಸುತ್ತಿದ್ದ ದೌರ್ಜನ್ಯಕಾರಕ ಕೃತ್ಯಗಳನ್ನೂ ಖಂಡಿಸಿ ಲುಮುಂಬರವರು ಚರ್ಚನ್ನು ರಾಜ್ಯದಿಂದ ಪ್ರತ್ಯೇಕಗೊಳಿಸಿದರು ಮತ್ತು ಶಾಲೆಗಳನ್ನು ಜಾತ್ಯತೀತಗೊಳಿಸಿದರು.

ಆಫ್ರಿಕ ಖಂಡದಲ್ಲಿ ಸಾಮ್ರಾಜ್ಯಶಾಹಿ ಬೃಹತ್‌ರಾಷ್ಟ್ರಗಳ ಮಿಲಿಟರಿ ಹಾಜರಿ ಕೊನೆಗೊಳ್ಳಬೇಕು, ಅದರಲ್ಲೂ ವಿಶೇಷವಾಗಿ ನ್ಯಾಟೋ ನೆಲೆಗಳನ್ನು ರಾಷ್ಟ್ರೀಯ ಸರಕಾರಗಳ ಹತೋಟಿಯಲ್ಲಿರಿಸಬೇಕು, ಎಂದು ಲುಮುಂಬರವರು ಮುಂದಿರಿಸಿದ ಕೇಳಿಕೆಯು ಬಹುಶಃ ಆಫ್ರಿಕ ಖಂಡದಲ್ಲಿ ಪಾಶ್ಚಿಮಾತ್ಯ ಹಿತಾಸಕ್ತಿಗಳಿಗೆ ಅತ್ಯಂತ ಅಪಾಯಕಾರಿಯಾದ ಕೇಳಿಕೆಯಾಗಿದ್ದಿತು. ಕಾಂಗೋ ವಿಮೋಚನಾ ಚಳವಳಿಯ ನಾಯಕರಲ್ಲಿ ಲುಮುಂಬರವರಷ್ಟೆ ಈ ಪ್ರಶ್ನೆಯನ್ನು ಎತ್ತಿದುದು. 1960ರ ಫೆಬ್ರವರಿಯಷ್ಟು ಹಿಂದೆಯೇ ಅಂಥ ಮಿಲಿಟರಿ ನೆಲೆಗಳಲ್ಲೊಂದಕ್ಕೆ ಉಲ್ಲೇಖಿಸುತ್ತ ಅವರು ಹೇಳಿದರು: "ಕಾಮಿನಾ ನೆಲೆಯು ನಾವು ಕಾಂಗೋದಲ್ಲಿ ರಾಷ್ಟ್ರೀಕರಿಸಲಿರುವ ಮೊದಲ ಉದ್ಯಮವಾಗಲಿರುವುದು."***

ಲುಮುಂಬ ಸರಕಾರವು ಕೈಕೊಂಡ ಮೊದಲ ಕ್ರಮಗಳೇ ಸಾಮ್ರಾಜ್ಯವಾದಿಗಳನ್ನು ಗಾಬರಿಯಿಂದ ಜಾಗರೂಕಗೊಳ್ಳುವಂತೆ ಮಾಡಿದವು. ಏಕೆಂದರೆ ಅವು

---

*G. Heinz and H. Donnay, *Lumumba Patrice, Les cinquante derniers jours de sa vie,* Editions du C.R.I.S.P., Paris, 1966, p. 192.—ಸಂ.

**ಅದೇ ಗ್ರಂಥ, ಪು. 194.—ಸಂ.

****La pensée politique de Patrice Lumumba*, p. 158.—ಸಂ.

ಕಾಂಗೋದಲ್ಲಿ ಪಾಶ್ಚಿಮಾತ್ಯ ದೇಶಗಳ ಆರ್ಥಿಕ ಹಿತಗಳಿಗೆ ಭೀತಿ ಒಡ್ಡಿದ್ದವು. ಆ ದೇಶಗಳು ಲುಮುಂಬರವರ ವಿದೇಶಾಂಗ ನೀತಿ ಕಾರ್ಯಕ್ರಮದಿಂದಲೂ ಅಸಂತುಷ್ಟರಾಗಿದ್ದರು. ಏಕೆಂದರೆ ಆ ನೀತಿಮಾರ್ಗವು ಅಲಿಪ್ತ ನೀತಿಯನ್ನು ಅನುಸರಿಸುವ, ಆಫ್ರಿಕವನ್ನು ವಸಾಹತು ಹಾಗೂ ಕುಲವಾದಿ ಆಡಳಿತಗಳಿಂದ ಸಂಪೂರ್ಣವಾಗಿ ವಿಮೋಚನೆಗೊಳಿಸುವ ಹಾಗೂ ಸಮಾಜವಾದಿ ದೇಶಗಳಿಗೂ ಕಾಂಗೋ ದೇಶಕ್ಕೂ ನಡುವೆ ಸಮಾನತೆಯ ಸಂಬಂಧಗಳನ್ನು ಸ್ಥಾಪಿಸುವ ಮತ್ತು ಬೆಳೆಸುವ ಸೂತ್ರಗಳನ್ನು ರೂಪಿಸಿಕೊಟ್ಟಿದ್ದಿತು.

ಬೆಲ್ಜಿಯಂನೊಂದಿಗೆ ಮೈತ್ರೀಕೂಟ ಏರ್ಪಡಿಸಿಕೊಂಡಿರುವುದು ಕಾಂಗೋಗೆ "ಅನುಕೂಲವಾಗಿರುತ್ತದೆ" ಎಂಬ ಭ್ರಾಂತಿಯನ್ನು ಕೊನೆಗೂ ಬಿಟ್ಟುಕೊಟ್ಟು ಲುಮುಂಬರವರು ಬೆಲ್ಜಿಯಂನ ರಾಜನ ಕೆಳಗೆ ಎರಡೂ ದೇಶಗಳನ್ನು ಒಂದೇ ರಾಜ್ಯವನ್ನಾಗಿ ಮಿಳನಗೊಳಿಸುವ ಸಲಹೆಯನ್ನು ತಿರಸ್ಕರಿಸಿದರು. ವಿಶ್ವಸಂಸ್ಥೆಯ ಆಶ್ರಯದಲ್ಲಿ ಕಾಂಗೋ ಮೇಲೆ ಪಾಶ್ಚಿಮಾತ್ಯ ದೇಶಗಳ ನ್ಯಾಸಧಾರಿತ್ವವನ್ನು ಸ್ಥಾಪಿಸುವ ವಿಚಾರವನ್ನೂ ಅವರು ತೀವ್ರವಾಗಿ ವಿರೋಧಿಸಿದರು. 1960ರ ಜುಲೈ 9ರಂದು ನೀಡಿದ ಸಾರ್ವಜನಿಕ ಹೇಳಿಕೆಯೊಂದರಲ್ಲಿ ಅವರು ತಿಳಿಸಿದರು: "ನಮ್ಮ ಮೇಲೆ 15 ವರ್ಷಗಳವರೆಗೆ ಒಂದು ರೀತಿಯ ಅಂತರರಾಷ್ಟ್ರೀಯ ಉಸ್ತುವಾರಿಯನ್ನು ಹೊರಿಸಲೋಸುಗ ಕೆಲವು ಜನ ವಿಶ್ವಸಂಸ್ಥೆಯನ್ನು ಬಳಸಿಕೊಳ್ಳಲು ಬಯಸುತ್ತಿದ್ದಾರೆ. ...ಕಾಂಗೋ ಒಂದು ಸಾರ್ವಭೌಮ ರಾಜ್ಯ. ಅದು ಎಂದೂ ವಿಶ್ವಸಂಸ್ಥೆಯ ನ್ಯಾಸಧಾರಿತ್ವದ ಕೆಳಗಿನ ದೇಶವಾಗುವುದಿಲ್ಲ ಎಂದು ನಾನು ಕಾಂಗೋ ಜನರ ಹಾಗೂ ಸರಕಾರದ ಪರವಾಗಿ ಘೋಷಿಸುತ್ತೇನೆ."*

ಸ್ವತಂತ್ರ ಕಾಂಗೋದಲ್ಲಿ ತನ್ನ ಸ್ಥಾನವನ್ನು ಉಳಿಸಿಕೊಂಡಿರಲು ಯತ್ನಿಸುತ್ತ ಸಾಮ್ರಾಜ್ಯವಾದವು ಸ್ಥಳೀಯ ಪ್ರತಿಗಾಮಿಗಳೊಂದಿಗೆ ಕೂಡಿಕೊಂಡು ದೇಶದಲ್ಲಿ ಆರ್ಥಿಕ ಹಾಗೂ ರಾಜಕೀಯ ಅರಾಜಕತೆಯನ್ನು ಉಂಟುಮಾಡಲು ಹವಣಿಸಿತು. ಈ ಕಷ್ಟಕರ ಪರಿಸ್ಥಿತಿಯಲ್ಲಿ ಲುಮುಂಬರವರು ತಮ್ಮ ದೇಶದ ಹಿತವನ್ನು ಧೈರ್ಯದಿಂದ ಎತ್ತಿ ಹಿಡಿದರು ಮತ್ತು ಸಾಮ್ರಾಜ್ಯಶಾಹಿ ನೀತಿಯನ್ನು ಬಯಲು ಮಾಡಿ ಕಾಂಗೋದ ಆಂತರಿಕ ವ್ಯವಹಾರಗಳಲ್ಲಿ ವಿದೇಶೀ ಹಸ್ತಕ್ಷೇಪ ಕೊನೆಗಾಣಬೇಕೆಂದು ಆಗ್ರಹಿಸಿದರು. 1960ರ ಜುಲೈನಲ್ಲಿ ಅವರು ಬೆಲ್ಜಿಯಂ ಮತ್ತು ಕಾಂಗೋಗಳ ನಡುವಿನ 'ಸ್ನೇಹ ಸಹಕಾರ ಒಡಂಬಡಿಕೆ'ಯನ್ನು ರದ್ದುಪಡಿಸಿದರು. ಇದಕ್ಕಾಗಿ ಅವರು ಬೆಲ್ಜಿಯಂ ಜನರನ್ನಲ್ಲ ಆದರೆ ಆ ದೇಶದ ಶಾಸಕರನ್ನು ಜವಾಬ್ದಾರರನ್ನಾಗಿ ಕಂಡರು. ಬೆಲ್ಜಿಯಂ ದೇಶದ ಶಾಸಕರು "ಕಾಂಗೋವನ್ನು ಶೋಷಣೆ,

*Congo 1960, Vol. 2, p. 588. – ಸಂ.

ದಬ್ಬಾಳಿಕೆ ಹಾಗೂ ಸ್ವಾರ್ಥ ಹಿತಗಳ ಗುರಿ ವಸ್ತುವನ್ನಾಗಲ್ಲದೆ ಬೇರಾವ ರೀತಿಯಲ್ಲಿ ಕಾಣಲೂ ನಿರಾಕರಿಸಿದ್ದರು."*

ಆಗಲೇ ಈ ಕಾಂಗೋ ನಾಯಕನ ವಿರುದ್ಧ ಒಳಸಂಚೊಂದು ಚಾಲನೆಗೆ ಬಂದುದು. ವಾಸ್ತವವಾಗಿ ಲುಮುಂಬರವರು ವಸಾಹತು ಕಾಲಾವಧಿಯಲ್ಲೇ ಹಿಂಸೆ ಪೀಡನೆಗಳಿಗೆ ಈಡಾಗಿದ್ದರು. ಅವರ ಚಲನವಲನಗಳ ಮೇಲೆ ಕಣ್ಣಿಟ್ಟಿರಲಾಗಿತ್ತು, ಅವರನ್ನು ಬೆದರಿಸಿ ನಿಷ್ಕ್ರಿಯರನ್ನಾಗಿ ಮಾಡಲು ಹವಣಿಸಲಾಗಿತ್ತು, ಎರಡು ಬಾರಿ ಮಾನನಷ್ಟ ಉಂಟುಮಾಡಿದ ಸುಳ್ಳು ಆಪಾದನೆ ಹೊರಿಸಿ ನ್ಯಾಯ ವಿಚಾರಣೆಗೆ ಗುರಿಪಡಿಸಲಾಗಿತ್ತು.

1956-1957ರಲ್ಲಿ ಹಣ ದುರುಪಯೋಗದ ಸುಳ್ಳು ಆಪಾದನೆ ಹೊರಿಸಿ ಅವರನ್ನು ಹಲವಾರು ತಿಂಗಳು ಕಾರಾಗೃಹದಲ್ಲಿರಿಸಲಾಗಿತ್ತು. 1959ರ ಕೊನೆಯ ಭಾಗದಲ್ಲಿ ಸ್ಟಾನ್ಲಿವಿಲೆ ನಿವಾಸಿಗಳನ್ನು ದಂಗೆ ಏಳುವಂತೆ ಪ್ರಚೋದಿಸಿದ "ರಾಜಕೀಯ" ಆಪಾದನೆ ಹೊರಿಸಿ ಅವರನ್ನು ಜೈಲಿಗೆ ದಬ್ಬಲಾಯಿತು. ಅನಂತರ ವಸಾಹತು ಅಧಿಕಾರಿಗಳು ಅವರನ್ನು ಕಟಾಂಗದಲ್ಲಿನ ಸೆರೆಮನೆಗೆ ವರ್ಗಾಯಿಸುವ ನಾಟಕ ಏರ್ಪಡಿಸಿದರು. ಆದರೆ ಕಾಂಗೋ ರಾಜಕೀಯ ಕಾರ್ಯಕರ್ತರ ಆಗ್ರಹದ ಮೇರೆಗೆ ಅವರನ್ನು ಅಲ್ಲಿಂದ ಬಿಡುಗಡೆ ಮಾಡಬೇಕಾಯಿತು. ಈ ರಾಜಕೀಯ ಕಾರ್ಯಕರ್ತರು ಬೆಲ್ಜಿಯನ್ ವಸಾಹತಿನ ಸ್ವಾತಂತ್ರ್ಯದ ಪ್ರಶ್ನೆಯನ್ನು ಚರ್ಚಿಸಲು ಬ್ರಸ್ಸೆಲ್ಸ್‌ನಲ್ಲಿ ಸಭೆ ಸೇರಿದ್ದರು.

ಪಾರ್ಲಿಮೆಂಟಿನಲ್ಲಿ ಬಹುಮತೀಯರ ನಾಯಕರಾಗಿದ್ದ ಲುಮುಂಬ ಕಾಂಗೋ ಗಣತಂತ್ರ ಸರಕಾರದ ಅಧಿಪತಿಗಳಾಗಲು ಎಲ್ಲ ಹಕ್ಕು ಹೊಂದಿದ್ದರು. ಆದರೆ ವಸಾಹತುವಾದಿಗಳು 1960ರ ಜೂನ್‌ನಲ್ಲಿ ಲುಮುಂಬರವರ ಈ ಹಕ್ಕಿಗೆ ಸವಾಲು ಹಾಕಲು ಯತ್ನಿಸಿದರು. ಲುಮುಂಬರವರು ತಮ್ಮನ್ನು ಕಮ್ಯೂನಿಸ್ಟರಿಗೆ ಮಾರಿಕೊಂಡಿದ್ದರು ಎಂದು ಸಾಮ್ರಾಜ್ಯಶಾಹಿ ಪ್ರಚಾರ ಯಂತ್ರವು ಆ ಕಾಲದಲ್ಲಿ ಹರಡುತ್ತಿದ್ದ ಆಪಾದನೆಯನ್ನು ತಳ್ಳಿ ಹಾಕುತ್ತ ಅವರು, ಪಶ್ಚಿಮ ದೇಶಗಳೊಂದಿಗೆ ಮೋಸದ ಒಪ್ಪಂದಕ್ಕೆ ಬರುವ ಸಲಹೆಗಳನ್ನು ತಾವು ತಿರಸ್ಕರಿಸಿದ ನಂತರವಷ್ಟೆ ಅಂತಹ ಪ್ರಚಾರವಾಗುತ್ತಿದ್ದುದನ್ನು ಎತ್ತಿ ತೋರಿಸಿ "ಅಂತಹ ಒಪ್ಪಂದವು ವಾಸ್ತವವಾಗಿ ಒಂದು ರಾಜಕೀಯ ಭ್ರಷ್ಟಾಚಾರವಾಗುತ್ತಿದ್ದಿತೆ"ಂದು** ಸ್ಪಷ್ಟಪಡಿಸಿದರು.

1960ರ ಆಗಸ್ಟ್‌ನಲ್ಲಿ ಅಮೆರಿಕದ ಸಂಯುಕ್ತ ಸಂಸ್ಥಾನಗಳಿಂದ ಹಿಂದಿರುಗಿದಾಗ ಅವರಿಗೆ ಲಂಚ ನೀಡಿ ಅವರನ್ನು ಕೊಂಡುಕೊಳ್ಳುವ ಯತ್ನ ಮಾಡಲಾ

*ಅದೇ ಗ್ರಂಥ, ಪು. 586. – ಸಂ.

**See Congo 1960, Vol. 2, p. 833. – ಸಂ.

ಮಿತು. ಆಗ ಅವರು ಹೇಳಿದರು: "ನಾವು ಅವರಿಗೆ ಅಧೀನರಾಗಲು ಬಯಸ ದಿದ್ದುದರಿಂದ ಭ್ರಷ್ಟಾಚಾರವನ್ನು ತಿರಸ್ಕರಿಸುತ್ತಿರುವುದರಿಂದ, ಅವರ ದಾಳಿ ಗೀಗೆ ಗುರಿಯಾಗಿದ್ದೇವೆ. ಅವರು ನಮಗೆ ಲಂಚ ನೀಡಲು ಯತ್ನಿಸಿದರು. ನನಗೆ ಮಿಲಿಯಾಂತರ ಹಣ ನೀಡುವ ಮಾತು ಕೊಡಲಾಯಿತು. ಆದರೆ ನಾನು ನಿರಾಕ ರಿಸಿದೆ. ನಾನು ಅವರಿಂದ ಚೆಕ್ಕನ್ನೂ ಸ್ವೀಕರಿಸಲಿಲ್ಲ."*

1960ರ ಸೆಪ್ಟೆಂಬರ್‌ನಲ್ಲಿ ಅಧಿಕಾರಶಾಹಿ ಬೂರ್ಜ್ವಾಸೀಯ ಹಾಗೂ ಕಾಂಗೋ ಸಮಾಜದ ಇತರ ಶ್ರೀಮಂತ ಸ್ತರಗಳ ಹಿತಗಳನ್ನು ಪ್ರತಿಬಿಂಬಿಸುವಂಥ ನೀತಿಯನ್ನು ಅನುಸರಿಸುತ್ತಿದ್ದ ವಿರೋಧ ಪಕ್ಷದ ನಾಯಕರ ವೃಂದವೊಂದು ಸಾಮ್ರಾಜ್ಯಶಾಹಿ ಬೃಹತ್‌ರಾಷ್ಟ್ರಗಳ ಬೆಂಬಲದೊಂದಿಗೆ ಲುಮುಂಬರವರನ್ನು ಪ್ರಧಾನ ಮಂತ್ರಿ ಸ್ಥಾನದಿಂದ ತೆಗೆದು ಹಾಕಿತು. ಅದೇ ವರ್ಷ ನವಂಬರ್‌ನಲ್ಲಿ ಅವ ರನ್ನು ಛಮ್ರಿತಾ ಪಡೆಗಳ ಏಜೆಂಟರು ಬಂಧಿಸಿ ಜೈಲಿನಲ್ಲಿರಿಸಿದರು. ಆದಾಗ್ಯೂ ಲುಮುಂಬರವರು ಜನಸಮೂಹಗಳ ಬೆಂಬಲದೊಂದಿಗೆ ಕಾಂಗೋದ ನೈಜ ಸಾರ್ವ ಭೌಮತ್ವಕ್ಕಾಗಿ ಹೋರಾಟವನ್ನು ಮುಂದುವರಿಸಲು ನಿರ್ಭೀತಿಯಿಂದ ನಿರ್ಧರಿ ಸಿದರು. ಥಿಸ್ವಿಲೆ ಕಾರಾಗೃಹವೊಂದರಿಂದ ಜನರಿಗೆ ಮಾಡಿಕೊಂಡ ಕೊನೆಯ ಮನವಿಯಲ್ಲಿ ಅವರು ಹೇಳಿದರು: "ನನ್ನ ಪ್ರಿಯ ಸಹದೇಶೀಯರೇ! ಸುಖ ದಲ್ಲಾಗಲೀ ದುಃಖದಲ್ಲಾಗಲೀ ನಾನು ಯಾವತ್ತೂ ನಿಮ್ಮೊಟ್ಟಿಗೇ ಇರುತ್ತೇನೆ. ನಿಮ್ಮೊಟ್ಟಿಗೆ ಕೂಡಿಕೊಂಡೇ ನಾನು ನಮ್ಮ ದೇಶವನ್ನು ವಿದೇಶೀ ಆಳ್ವಿಕೆಯಿಂದ ಮುಕ್ತಗೊಳಿಸಲು ಹೋರಾಡುತ್ತಿದ್ದೇನೆ. ನಿಮ್ಮೊಟ್ಟಿಗೆ ಕೂಡಿಕೊಂಡೇ ನಾನು ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯವನ್ನು ದೃಢಗೊಳಿಸಲು ಹೋರಾಡುತ್ತಿದ್ದೇನೆ. ನಿಮ್ಮೊಟ್ಟಿಗೆ ಕೂಡಿಕೊಂಡೇ ನಾನು ಕಾಂಗೋ ಗಣತಂತ್ರದ ಅಖಂಡತೆಯನ್ನೂ ರಾಷ್ಟ್ರೀಯ ಏಕತೆಯನ್ನೂ ಸಂರಕ್ಷಿಸಲು ಹೋರಾಡುವೆನು."**

ಆದರೆ ಅನಂತರ ಅವರು ಹೆಚ್ಚು ದಿನ ಬಾಳಲಿಲ್ಲ. ಜನವರಿ 17ರಂದು ರಹಸ್ಯ ಪೋಲೀಸರು ಲುಮುಂಬರವರನ್ನೂ ಅವರ ಇಬ್ಬರು ಸಹೋದ್ಯೋಗಿಗಳು – ಎಂಪೋಲೊ ಹಾಗೂ ಒಕಿಟೊರವರನ್ನೂ ವಿಮಾನವೊಂದರಲ್ಲಿ "ಸ್ವತಂತ್ರ" ಕಟಾಂಗದ ರಾಜಧಾನಿಗೆ ಕರೆದೊಯ್ದರು. ಎಲಿಜಬೆತ್‌ವಿಲೆ (ಈಗ ಲುಮುಂಬಷಿ) ತಲುಪುವ ಮುನ್ನ ಅನೇಕ ಗಂಟೆಗಳ ಯಾನ ಕಾಲದಲ್ಲಿ ಆ ಬಂದಿಗಳನ್ನು ಗಿಡ್ಡು ಮೊಳೆ ಹಾಕಿದ್ದ ಮೋಜಾಗಳಿಂದಲೂ ಮಷೀನ್‌ಗನ್‌ಗಳ ದಪ್ಪ ತುದಿಗಳಿಂದಲೂ ಮೃಗೀಯವಾಗಿ ಥಳಿಸಲಾಯಿತು. ಲುಅನೊ ವಿಮಾನ ನಿಲ್ದಾಣದಲ್ಲಿ ಕಟಾಂಗದ

*G. Heinz and H. Donnay, *Lumumba Patrice, Les cinquante derniers jours de sa vie*, p. 193. – ಸಂ.

***La pensée politique de Patrice Lumumba*, p. 394. – ಸಂ.

ಪ್ರತ್ಯೇಕತಾವಾದಿಗಳ ಮತ್ತವರ ಐರೋಪ್ಯ ಪ್ರಭುಗಳ ಸಮ್ಮುಖದಲ್ಲಿ ಜೀವ ಶ್ಶವಗಳಂತಾಗಿದ್ದ ಈ ಮೂವರು ಹುತಾತ್ಮರನ್ನೂ ಜೀಪೊಂದರಲ್ಲಿ ಕುಳ್ಳಿರಿಸಿ ಒಂದು ಹೊಲಕ್ಕೆ ಕರೆದೊಯ್ಯಲಾಯಿತು. ಅಲ್ಲಿ ಅವರನ್ನು ಅಂದೇ ಸಂಜೆ ಗುಂಡಿಟ್ಟು ಕೊಲ್ಲಲಾಯಿತು.

"ಎಂತಹುದೇ ಕ್ರೌರ್ಯ, ಹಿಂಸಾಚಾರ ಅಥವಾ ಚಿತ್ರಹಿಂಸೆಯೂ ನನ್ನನ್ನು ಕೃಪಾ ಭಿಕ್ಷೆ ಬೇಡುವಂತೆ ಮಾಡಲಾರದು. ಏಕೆಂದರೆ ನಾನು ನನ್ನ ಪವಿತ್ರ ನೀತಿ ನಿಯಮಗಳನ್ನು ಬಿಟ್ಟುಕೊಟ್ಟು ದಾಸ್ಯದಲ್ಲಿ ಬಾಳುವುದಕ್ಕಿಂತ ನನ್ನ ದೇಶದ ಅದೃಷ್ಟ ದಲ್ಲಿ ಅಚಲ ವಿಶ್ವಾಸವಿಟ್ಟು ನನ್ನ ತಲೆಯನ್ನು ಉನ್ನತವಾಗಿ ಎತ್ತಿ ಹಿಡಿದು ಸಾಯುವುದನ್ನೇ ಹೆಚ್ಚು ಇಷ್ಟಪಡುತ್ತೇನೆ."* ಲುಮುಂಬರವರ ಈ ಮಾತುಗಳು ಅವರ ಪ್ರಸ್ತವಾದ ಆದರೆ ಚೆಲುವಾದ ಬಾಳಿಗೆ ಮಂಗಳ ಹಾಡುತ್ತವೆ.

ಲುಮುಂಬರವರ ಸಾವಿನ ಪರಿಸ್ಥಿತಿಗಳನ್ನು ಪರಿಶೋಧಿಸಲು ವಿಶ್ವಸಂಸ್ಥೆಯು ಒಂದು ಆಯೋಗವನ್ನು ನೇಮಿಸಿತು. ಅದು, ಆಗ ಕಾಂಗೋದ ಅಧ್ಯಕ್ಷ ಕಸವುಬು ನಾಯಕತ್ವದ ಲಿಯೊಪೋಲ್ಡ್‌ವಿಲೆ ಆಡಳಿತಾಂಗ, ಕಟಾಂಗ ಅಧಿಕಾರಿಗಳು, ಬೆಲ್ಜಿಯಂನ ಗಣಿ ಉದ್ಯಮ ಸಂಸ್ಥೆ Minière du Haut Katangaದ ಮ್ಯಾನೇಜರುಗಳು, ಮತ್ತು ಕಟಾಂಗ ಪ್ರತ್ಯೇಕತಾವಾದಿಗಳ ನಾಯಕ ಚೋಂಬೆಯ ಸೇವೆಯಲ್ಲಿದ್ದ ಬೆಲ್ಜಿಯನ್ ಕೂಲಿಸಿಪಾಯಿಗಳ ಒಂದು ತಂಡ, ಇವರನ್ನು ಈ ಕೊಲೆಯಲ್ಲಿ ಸಹಭಾಗಿಗಳನ್ನಾಗಿ ಹೆಸರಿಸಿತು.

1970ರ ಮಧ್ಯಭಾಗದಲ್ಲಿ ಅಮೆರಿಕದ ಗೂಢಚಾರ ಸಂಸ್ಥೆಯ ಚಟುವಟಿಕೆ ಗಳನ್ನು ತನಿಖೆ ಮಾಡಲು ನೇಮಕವಾದ ಅಮೆರಿಕನ್ ಸೆನೆಟ್‌ನ ಆಯೋಗವು, 1960ರ ಆಗಸ್ಟ್‌ನಷ್ಟು ಹಿಂದೆಯೇ ಅಮೆರಿಕದ ಗೂಢಚಾರ ಸಂಸ್ಥೆ ತನ್ನ ಮುಂದೆ "ಒಂದು ತುರ್ತಿನ ಹಾಗೂ ಪ್ರಧಾನವಾದ ಗುರಿ"**ಯನ್ನು ಇರಿಸಿ ಕೊಂಡಿದ್ದಿತೆಂಬ ಅಂಶವನ್ನು ಕಂಡುಹಿಡಿಯಿತು. ಕಾಂಗೋದ ಪ್ರಧಾನ ಮಂತ್ರಿ ಯನ್ನು ಕೊಲೆ ಮಾಡಲು ಒಂದು ಒಳಸಂಚನ್ನು ಸಂಘಟಿಸುವುದೇ ಆ ಗುರಿಯಾಗಿ ದ್ದಿತು. ಅಮೆರಿಕದ ಗೂಢಚಾರ ಸಂಸ್ಥೆಯ ಆಗಿನ ಡೈರೆಕ್ಟರ್ ಅಲೆನ್ ಡಲ್ಲೆಸ್ ಪ್ರಕಾರ, ಕಾಂಗೋ ಪ್ರಧಾನಿಯು "ಗುರುತರವಾದ ಅಪಾಯದ"*** ವ್ಯಕ್ತಿಯಾ ಗಿದ್ದರು.

* *Afrique-Asie*, No. 154, 1978, p. 10 – ಸಂ.

***An Interim Report of the Select Committee to Study Governmental Operations with Respect to Intelligence Activities*. US Government Printing Office, Washington, D.C., 1975, p. 15. – ಸಂ.

***ಅದೇ ಗ್ರಂಥ, ಪು. 62. – ಸಂ.

ಕಾಂಗೋದ ರಾಷ್ಟ್ರೀಯ ವೀರನು ಸಾಮ್ರಾಜ್ಯಶಾಹಿ ಒಳಸಂಚಿಗೆ ಬಲಿಯಾದನು. ಉನ್ಮತ್ತ ಮುಂದಿಘಾತಕಾರರು ಅವರ ಮೇಲೆ ಅಪ್ರಾಮಾಣಿಕತೆಯ ಅಪಾದನೆ ಹೊರಿಸಿದರು, ಪದವಿ ಅತಿಕ್ರಮಣಕಾರರು ಅವರ ಮೇಲೆ ಸರಕಾರದ ಪ್ರಜಾಸತ್ತಾತ್ಮಕ ಸೂತ್ರಗಳನ್ನು ಉಲ್ಲಂಘಿಸಿದ ಅಪಾದನೆ ಹೊರಿಸಿದರು, ಅಜ್ಞಾನಿಗಳು ಅವರ ಮೇಲೆ ದೇಶದ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಅಶಕ್ತರಾಗಿದ್ದ ಅಪಾದನೆ ಹೊರಿಸಿದರು. ವಿದೇಶೀ ಏಕಸ್ವಾಮ್ಯಗಳ ಕೈಗೊಂಬೆಗಳು ಅವರ ಮೇಲೆ ರಾಷ್ಟ್ರೀಯ ಹಿತಗಳನ್ನು ಮರೆತ ಅಪಾದನೆ ಹೊರಿಸಿದರು.

ಆದರೆ ಇತಿಹಾಸವು ಅವರ ಬಗೆಗೆ ಬೇರೆಯೇ ತೀರ್ಪು ನೀಡಿದೆ. ಇಂದು ಆಫ್ರಿಕವೂ ಜಗತ್ತೂ ಲುಮುಂಬರವರ ಕೊಲೆಗಾರರನ್ನು ನೆನಪಿನಲ್ಲಿಟ್ಟಿದ್ದರೆ ಆ ಕೊಲೆಗಾರರನ್ನು ಖಂಡಿಸಲೆಂದೇ, ಅವರ ಬಗೆಗೆ ತುಚ್ಛೀಕಾರ ವ್ಯಕ್ತಪಡಿಸಲೆಂದೇ. ಆದರೆ ಲುಮುಂಬರವರ ಬಗೆಗಾದರೋ ಆಫ್ರಿಕನ್ನರ ಸ್ವಾತಂತ್ರ್ಯ ಹೋರಾಟಕ್ಕೆ ಮಹತ್ಸೇವೆ ಸಲ್ಲಿಸಿದ ಶ್ರೇಷ್ಠ ವ್ಯಕ್ತಿಯನ್ನಾಗಿ ಮೆಚ್ಚಿಕೆಯ ಶ್ಲಾಘನೆಯ ಮಾತುಗಳನ್ನಾಡಲಾಗುತ್ತಿದೆ, ಬರೆಯಲಾಗುತ್ತಿದೆ. ಕಾರ್ಖಾನೆಗಳಿಗೆ, ಶಾಲೆಗಳಿಗೆ ಬೀದಿಗಳಿಗೆ ಅವರ ಹೆಸರನ್ನಿಡಲಾಗುತ್ತಿದೆ, ಅವರ ಜ್ಞಾಪಕಾರ್ಥ ಸ್ಮಾರಕಗಳನ್ನು ನಿರ್ಮಿಸಲಾಗುತ್ತಿದೆ, ಅವರ ಬಗೆಗೆ ಕಥೆ ಕಾದಂಬರಿಗಳನ್ನು ರಚಿಸಲಾಗುತ್ತಿದೆ.

ಪ್ಯಾಟ್ರಿಸ್ ಲುಮುಂಬರವರು ಪ್ರಥಮ ಪ್ರಮುಖ ಆಫ್ರಿಕನ್ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿಗಳಲ್ಲಿ ಒಬ್ಬರಾಗಿದ್ದರು. ಅವರ ಜಾಗತಿಕ ಮನೋಧರ್ಮವು ಸಾರಸಂಗ್ರಹವಾದದಿಂದ ಮುಕ್ತವಾಗಿರದಿದ್ದರೂ, ಪೆಟಿ ಬೂರ್ಷ್ವಾ ಪ್ರಭಾವದ ವಿಶಿಷ್ಟ ಆಫ್ರಿಕನ್ ಪಾಪ್ಯುಲಿಸಂನ ಅಂಶಗಳನ್ನು ಹೊಂದಿದ್ದರೂ, ಅಸಾಧ್ಯಾದರ್ಶ ಸಮಾಜವಾದಿಗಳ ಹಾಗೂ ಆಫ್ರಿಕನ್ ಅದಿ ಬೂರ್ಷ್ವಾ ಸಮಾಜದ ಸಿದ್ಧಾಂತಿಗಳ ಪ್ರಭಾವಕ್ಕೊಳಗಾಗಿದ್ದರೂ, ಅವರೊಬ್ಬ ಸತ್ಯಸಂಧರಾದ ದೃಢ ನಿಷ್ಠೆಯ ರಾಷ್ಟ್ರೀಯ ಕ್ರಾಂತಿಕಾರಿಯಾಗಿದ್ದರು, ಪ್ರಜಾಪ್ರಭುತ್ವವಾದಿಯಾಗಿದ್ದರು, ಸಾಮ್ರಾಜ್ಯವಾದ ವಿರೋಧಿ ಕುಟಿಲವಾದ ವಿರೋಧಿ ಆಗಿದ್ದರು ಎಂಬುದನ್ನು, ಅವರು ರಾಷ್ಟ್ರೀಯ ಸುಧಾರಣಾವಾದವನ್ನೂ ನವವಸಾಹತುವಾದವನ್ನೂ ವಿರೋಧಿಸಿದರು ಎಂಬುದನ್ನು, ಒಪ್ಪಿಕೊಳ್ಳಲೇ ಬೇಕು. ಮತ್ತೂ ಹೆಚ್ಚಿನ ಹೋರಾಟದ ಅವಧಿಯಲ್ಲಿ ಅವರು ಕೊನೆಗೆ ವೈಜ್ಞಾನಿಕ ಸಮಾಜವಾದದ ವಿಚಾರಗಳ ತಿಳಿವಳಿಕೆ ಪಡೆಯುವ ಸಾಧ್ಯತೆಯೂ ಇದ್ದಿತು.

ಆಫ್ರಿಕದಲ್ಲೂ ಇತರ ಖಂಡಗಳಲ್ಲೂ ಮಿಲಿಯಾಂತರ ಜನರಿಗೆ ಲುಮುಂಬರವರು ಸ್ವಾತಂತ್ರ್ಯ ಪ್ರೇಮದ, ದೇಶಭಕ್ತಿಯ ಹಾಗೂ ರಾಷ್ಟ್ರೀಯ-ವಿಮೋಚನಾ ಹೋರಾಟದಲ್ಲಿ ಧೈರ್ಯಸಾಹಸಗಳ ಸಂಕೇತವಾಗಿ ಉಳಿದಿದ್ದಾರೆ.

ಕ್ವಾಮೆ ಎನ್‌ಕ್ರೂಮ

ಆಫ್ರಿಕನ್ ರಾಷ್ಟ್ರೀಯ ವಿಮೋಚನಾ ಚಳವಳಿಯ ಒಬ್ಬ ಪ್ರಮುಖ ವ್ಯಕ್ತಿ. ಘಾನ ಗಣತಂತ್ರದ ಸಂಸ್ಥಾಪಕ, ಅದರ ಪ್ರಥಮ ರಾಷ್ಟ್ರಾಧ್ಯಕ್ಷ.

ಜನನ 1909ರ ಸೆಪ್ಟೆಂಬರ್ 21ರಂದು, ಆಗ ಬ್ರಿಟಿಷ್ ವಸಾಹತಾಗಿದ್ದ ಗೋಲ್ಡ್ ಕೋಸ್ಟ್‌ನ ಪಶ್ಚಿಮ ಪ್ರಾಂತದಲ್ಲಿನ ಎನ್‌ಕ್ರೊಫುಲ್ ಎಂಬ ಹಳ್ಳಿಯಲ್ಲಿ, ಎನ್‌ಜಿಮ ಬುಡಕಟ್ಟಿಗೆ ಸೇರಿದ ಅಕ್ಕಸಾಲಿಗ ಕುಟುಂಬವೊಂದರಲ್ಲಿ.

1926ರಲ್ಲಿ ಹಾಫ್ ಅಸಿನಿಯಲ್ಲಿ ಕ್ಯಾಥೊಲಿಕ್ ಪ್ರಾಥಮಿಕ ಶಾಲೆಯಲ್ಲಿ ವ್ಯಾಸಂಗ ಮುಗಿಸಿದನಂತರ ಅಕ್ರಾದಲ್ಲೂ ಅಚಿಮೋಟಾದಲ್ಲೂ ಶೈಕ್ಷಣಿಕ ಕಾಲೇಜುಗಳಲ್ಲಿ ತರಬೇತು ಪಡೆದುಕೊಂಡರು.

ಎಲ್ಮಿನ ಮತ್ತು ಆಕ್ಸಿಮ್(ಘಾನ)ಗಳಲ್ಲಿ ಕ್ಯಾಥೊಲಿಕ್ ಶಾಲೆಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತ್ತ ಸ್ವತಂತ್ರ ಜೀವನ ಪ್ರಾರಂಭಿಸಿದರು.

1935 ಹಾಗೂ 1945ರ ನಡುವೆ ಅಮೆರಿಕದ ಪೆನ್ಸಿಲ್ವೇನಿಯಾ ರಾಜ್ಯದ ಲಿಂಕನ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡುತ್ತಲೂ ಬೋಧನ ಮಾಡುತ್ತಲೂ ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ದೇವತಾಶಾಸ್ತ್ರಗಳಲ್ಲಿ ಬ್ಯಾಚಲರ್ ಪದವಿ ಪಡೆದರು. ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಹಾಗೂ ತತ್ವಶಾಸ್ತ್ರ ಅಧ್ಯಾಪಕರಾಗಿ ಕೆಲಸ ಮಾಡುತ್ತಲೇ ಶಿಕ್ಷಣಶಾಸ್ತ್ರ ಹಾಗೂ ತತ್ವಶಾಸ್ತ್ರಗಳಲ್ಲಿ ಮಾಸ್ಟರ್ ಪದವಿ ಪಡೆದರು.

ಅಮೆರಿಕದಲ್ಲಿ ಅಭ್ಯಾಸ ಮಾಡುತ್ತಿದ್ದಾಗ ಅವರು ಹಡಗುಕಟ್ಟೆಗಳಲ್ಲಿ, ಸಾಬೂನು ಕಾರ್ಖಾನೆಯಲ್ಲಿ ಕೆಲಸಗಾರರಾಗಿ, ಹಡಗುಗಳಲ್ಲಿ ಪರಿಚಾರಕರಾಗಿಯೂ ಮೊಗಸಾಲೆ ಸೇವಕರಾಗಿಯೂ ದುಡಿದರು. ಅಮೆರಿಕದಲ್ಲಿದ್ದಾಗಲೇ ಅವರು ಕ್ರಿಯಾಶೀಲ ರಾಜಕೀಯ ಕಾರ್ಯ ಪ್ರಾರಂಭಿಸಿದರು. ಅವರು ಮಾರ್ಕ್ಸ್, ಎಂಗೆಲ್ಸ್ ಹಾಗೂ ಲೆನಿನರ ಕೃತಿಗಳನ್ನೂ ಅಮೆರಿಕದಲ್ಲಿನ ಕಪ್ಪು ಜನರ ಸಿದ್ಧಾಂತಕಾರರ ಹಾಗೂ ಬೋಧಕರ ಬರಹಗಳನ್ನೂ ಅಭ್ಯಸಿಸಿದರು. ಲಂಡನ್ ವಿಶ್ವವಿದ್ಯಾಲಯದಲ್ಲೂ

ಲಂಡನ್ ಅರ್ಥಶಾಸ್ತ್ರ ಹಾಗೂ ರಾಜಕೀಯಶಾಸ್ತ್ರ ವಿದ್ಯಾಸಂಸ್ಥೆಯಲ್ಲೂ ವ್ಯಾಸಂಗ ಮಾಡಿದರು.

ಎನ್‌ಕ್ರೂಮರವರು ಮಾಸ್ಕೋ, ಲಿಂಕನ್, ಕೈರೊ ಮತ್ತಿತರ ವಿಶ್ವವಿದ್ಯಾಲಯಗಳ ಡಾಕ್ಟರ್ ಆಫ್ ಲಾ ಗೌರವ ಪದವಿಗಳನ್ನೂ ಪಡೆದಿದ್ದರು.

1945ರಿಂದ 1947ರವರೆಗೆ ಇಂಗ್ಲೆಂಡಿನಲ್ಲಿ ವಾಸವಾಗಿದ್ದರು. ಅಲ್ಲಿ ಅವರು ಮ್ಯಾಂಚೆಸ್ಟರ್‌ನಲ್ಲಿ 1945ರ ಅಕ್ಟೋಬರ್‌ನಲ್ಲಿ ಜರುಗಿದ ಐದನೆಯ ಪ್ಯಾನ್-ಆಫ್ರಿಕನ್ ಕಾಂಗ್ರೆಸ್‌ನ (ಅಖಿಲ ಆಫ್ರಿಕನ್ ಮಹಾಧಿವೇಶನದ) ಸಿದ್ಧತಾ ಕಾರ್ಯದಲ್ಲಿ ಭಾಗವಹಿಸಿದ್ದರು. ಈ ಮಹಾಧಿವೇಶನದ ಸಂಘಟನಾ ಸಮಿತಿಯ ಕಾರ್ಯದರ್ಶಿಯಾಗಿದ್ದರು, ಅನಂತರ ಮಹಾಧಿವೇಶನ ಯೋಜಿಸಿದ ಆಫ್ರಿಕನ್ ವಿಮೋಚನಾ ಕಾರ್ಯಕ್ರಮವನ್ನು ಈಡೇರಿಸಲೋಸುಗ ಆಯ್ಕೆಗೊಂಡಿದ್ದ ಅದರ ಕಾರ್ಯಕಾರಿ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಈ ಸಮಯದಲ್ಲಿ ಅವರು ಲಂಡನ್ನಿನಲ್ಲಿ ಸ್ಥಾಪಿತವಾಗಿದ್ದ 'ಪಶ್ಚಿಮ ಆಫ್ರಿಕನ್ ರಾಷ್ಟ್ರೀಯ ಸೆಕ್ರೆಟಾರಿಯಟ್'ನ ಪ್ರಧಾನ ಕಾರ್ಯದರ್ಶಿಯೂ ಆಗಿದ್ದರು. 1946-1947ರಲ್ಲಿ ಲಂಡನ್ನಿನಲ್ಲಿ ಪ್ರಕಟವಾಗುತ್ತಿದ್ದ 'ನ್ಯೂ ಆಫ್ರಿಕನ್' ವೃತ್ತಪತ್ರಿಕೆಯ ಸಂಪಾದಕರಾಗಿದ್ದರು.

ಕ್ವಾಮೆ ಎನ್‌ಕ್ರೂಮ 1947ರ ಡಿಸೆಂಬರ್‌ನಲ್ಲಿ ಸ್ವದೇಶಕ್ಕೆ ಹಿಂದಿರುಗಿ 'ಯುನೈಟೆಡ್ ಗೋಲ್ಡ್ ಕೋಸ್ಟ್ ಕನ್ವೆನ್ಷನ್'(ಯುಜಿಸಿಸಿ)ನ ಸದಸ್ಯರೂ ಅನಂತರ ಅದರ ಪ್ರಧಾನ ಕಾರ್ಯದರ್ಶಿಯೂ ಆದರು. 1948ರ ಫೆಬ್ರುವರಿ ಹಾಗೂ ಮಾರ್ಚ್‌ಗಳಲ್ಲಿ ದೇಶದಲ್ಲಿ ಜರುಗಿದ ಆಂದೋಳನದಲ್ಲಿ ಭಾಗವಹಿಸಿದುದಕ್ಕಾಗಿ ಅವರು ಮಾರ್ಚ್ 12ರಂದು ಬಂಧಿಸಲ್ಪಟ್ಟು ದೇಶದ ಉತ್ತರ ಭಾಗಕ್ಕೆ ಗಡೀಪಾರು ಮಾಡಲ್ಪಟ್ಟರು. ದೇಶದಲ್ಲಿ ಕ್ರಾಂತಿಕಾರಿ ಮನೋಭಾವ ಹೆಚ್ಚಿದುದರ ಫಲವಾಗಿ ಎನ್‌ಕ್ರೂಮರವರು ಯುಜಿಸಿಸಿಯನ್ನು ಬಿಟ್ಟು ಹೊರ ಬರಬೇಕಾಯಿತು.

1949ರ ಜೂನ್‌ನಲ್ಲಿ ಅವರು 'ಕನ್ವೆನ್ಷನ್ ಪೀಪಲ್ಸ್ ಪಾರ್ಟಿ'ಯನ್ನು ಸ್ಥಾಪಿಸಿದರು. ದೇಶಕ್ಕೆ ತಕ್ಷಣವೇ ಸ್ವಾತಂತ್ರ್ಯ ನೀಡಬೇಕೆಂಬುದು ಅದರ ಕರೆಯಾಗಿದ್ದಿತು.

1948ರ ಸೆಪ್ಟೆಂಬರ್‌ನಲ್ಲಿ ಎನ್‌ಕ್ರೂಮರವರು 'ಆಕ್ರ ಈವಿನಿಂಗ್ ನ್ಯೂಸ್' ಎಂಬ ವೃತ್ತಪತ್ರಿಕೆಯನ್ನು ಪ್ರಕಟಿಸತೊಡಗಿದರು. 1950ರ ಜನವರಿಯಲ್ಲಿ ಅವರನ್ನು ಮತ್ತೆ ದಸ್ತಗಿರಿ ಮಾಡಲಾಯಿತು. ಮುಷ್ಕರಗಳನ್ನು ಸಂಘಟಿಸಿದುದಕ್ಕಾಗಿ ಕಾರಾಗೃಹದಲ್ಲಿರಿಸಲಾಯಿತು.

1951ರ ಫೆಬ್ರುವರಿಯಲ್ಲಿ ಶಾಸನ ಸಭೆಗೆ ನಡೆದ ಚುನಾವಣೆಗಳಲ್ಲಿ

'ಕನ್ವೆನ್ಷನ್ ಪೀಪಲ್ಸ್ ಪಾರ್ಟಿ' ಜಯಭೇರಿ ಗಳಿಸಿತು. ಅದರ ನಾಯಕ ಇನ್ನೂ ಕಾರಾಗೃಹದಲ್ಲಿದ್ದಾಗಲೇ ಅಕ್ರಾದ ಕೇಂದ್ರ ಮತದಾರ ಕ್ಷೇತ್ರವೊಂದರಿಂದ ಶಾಸನ ಸಭೆಗೆ ಚುನಾಯಿತರಾದರು. 1951ರ ಫೆಬ್ರವರಿ 12ರಂದು ಅವರನ್ನು ಶಿಕ್ಷೆಯ ಗಡವು ತೀರುವ ಮುನ್ನವೇ ಕಾರಾಗೃಹದಿಂದ ಬಿಡುಗಡೆ ಮಾಡಲಾಯಿತು.

1952ರಿಂದ ಎನ್‌ಕ್ರೂಮ ಗೋಲ್ಡ್ ಕೋಸ್ಟ್‌ನ ಪ್ರಥಮ ಆಫ್ರಿಕನ್ ಸರಕಾರದ ಪ್ರಧಾನಮಂತ್ರಿಯಾಗಿದ್ದರು. ಅದೇ ಹೊತ್ತಿನಲ್ಲಿ ಅವರು ರಕ್ಷಣೆ, ಗೃಹ ಹಾಗೂ ವಿದೇಶಾಂಗ ವ್ಯವಹಾರಗಳ ಸಚಿವರೂ ಆಗಿದ್ದರು.

1957ರ ಮಾರ್ಚ್ 6ರಂದು ಗೋಲ್ಡ್ ಕೋಸ್ಟ್ ಸ್ವಾತಂತ್ರ್ಯ ಪಡೆದುಕೊಂಡನಂತರ ಅವರ ಸಲಹೆಯ ಮೇರೆಗೇ ದೇಶದ ಹೆಸರನ್ನು ಘಾನ ಎಂದು ಬದಲಿಸಲಾಯಿತು. ಅವರು ಈ ದೇಶದ ಪ್ರಧಾನಮಂತ್ರಿಯಾದರು. 1960ರ ಜುಲೈ 1ರಂದು ಘಾನವನ್ನು ಒಂದು ಗಣತಂತ್ರವನ್ನಾಗಿ ಘೋಷಿಸಿದಾಗ ಅವರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. 1966ರ ಫೆಬ್ರುವರಿ 24ರವರೆಗೂ ಅವರು ರಾಷ್ಟ್ರಾಧ್ಯಕ್ಷರಾಗಿಯೇ ಇದ್ದರು.

1961ರಲ್ಲಿ ಅವರು ಕನ್ವೆನ್ಷನ್ ಪೀಪಲ್ಸ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಅದರ ಆಜೀವ ಅಧ್ಯಕ್ಷರಾಗಿಯೂ ಚುನಾಯಿತರಾದರು.

1962ರ ಏಪ್ರಿಲ್‌ನಲ್ಲಿ ಅಂತರರಾಷ್ಟ್ರೀಯ ಲೆನಿನ್ ಪ್ರಶಸ್ತಿ ಸಮಿತಿಯು ಎನ್‌ಕ್ರೂಮರವರಿಗೆ ಜನತೆಗಳ ನಡುವೆ ಶಾಂತಿ ದೃಢೀಕರಣಕ್ಕಾಗಿ 1961ರ ಅಂತರರಾಷ್ಟ್ರೀಯ ಲೆನಿನ್ ಪ್ರಶಸ್ತಿಯನ್ನು ನೀಡಿತು.

ಕ್ವಾಮೆ ಎನ್‌ಕ್ರೂಮರವರು ಸೋವಿಯತ್ ಒಕ್ಕೂಟಕ್ಕೆ ಎರಡು ಬಾರಿ, ಮೊದಲು 1961ರಲ್ಲಿ ಅನಂತರ 1966ರ ಮಾರ್ಚ್‌ನಲ್ಲಿ, ಭೇಟಿ ಕೊಟ್ಟಿದ್ದರು.

1966ರ ಫೆಬ್ರವರಿ 24ರಂದು ಘಾನದಲ್ಲಿ ಸೈನಿಕ ಕ್ಷಿಪ್ರಕ್ರಾಂತಿ ಜರುಗಿ ಎನ್‌ಕ್ರೂಮರವರನ್ನು ಎಲ್ಲ ಪದವಿಗಳಿಂದಲೂ ತೆಗೆದುಹಾಕಲಾಯಿತು. ಅವರು ದೇಶ ಬಿಟ್ಟು ಹೊರಹೋಗುವ ಒತ್ತಾಯಕ್ಕೊಳಗಾದರು. ಅವರು ಗಿನಿಗೆ ಹೋಗಿ ನೆಲಸಿದರು. ಅಲ್ಲವರು ಪ್ರಜಾ ಪ್ರತಿನಿಧಿ ಸಭೆಯ ಗೌರವ ಸದಸ್ಯರಾದರು, ಗಿನಿಯ ಸಹ-ಅಧ್ಯಕ್ಷರಾದರು, ದೇಶದ ಡೆಮೊಕ್ರಾಟಿಕ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯಾದರು.

ಕ್ವಾಮೆ ಎನ್‌ಕ್ರೂಮರವರು 1972ರ ಏಪ್ರಿಲ್ 27ರಂದು ಬುಕಾರೆಸ್ಟ್‌ನಲ್ಲಿ ನಿಧನರಾದರು. ಅದೇ ವರ್ಷ ಜುಲೈ 9ರಂದು ಅವರ ಕಳೇಬರವನ್ನು ಅವರ ಹುಟ್ಟು ಹಳ್ಳಿ ಎನ್‌ಕ್ರೊಫುಲ್‌ನಲ್ಲಿ ಸಮಾಧಿ ಮಾಡಲಾಯಿತು.

ಎನ್‌ಕ್ರೂಮರವರು ಆಫ್ರಿಕದ 1940-1960ರ ದಶಕಗಳಲ್ಲಿನ ವಸಾಹತುವಾದ ವಿರೋಧಿ ಚಳವಳಿಯ ಅಗ್ರಗಣ್ಯ ವ್ಯಕ್ತಿಗಳಲ್ಲೊಬ್ಬರಾಗಿದ್ದರು. ದ್ವಿತೀಯ ಜಾಗತಿಕ ಯುದ್ಧದನಂತರ ಈ ಖಂಡದ ಬೆಳವಣಿಗೆಗಾಗಿ ಅವರು ನೀಡಿದ ಕಾಣಿಕೆಯು ಅವರ ದೇಶದ ಗಡಿಗಳ ಆಚೆಗೂ ವ್ಯಾಪಿಸಿದ್ದಿತು. ರಾಜಕಾರಣಿಯಾಗಿ ಎನ್‌ಕ್ರೂಮ ಆಫ್ರಿಕದ ಸ್ವಾತಂತ್ರ್ಯ ಹಾಗೂ ಏಕತೆಯ ಮತ್ತು ವಸಾಹತು ನವವಸಾಹತು ಶೋಷಣೆಯ ವಿರುದ್ಧ ಅವಿರತ ಹೋರಾಟದ ಸಂಕೇತವಾಗಿದ್ದರು. ಅವರೊಬ್ಬ ಅಂತರರಾಷ್ಟ್ರೀಯ ಗೌರವಕ್ಕೆ ಪಾತ್ರರಾದ ರಾಜನೀತಿಜ್ಞರಾಗಿದ್ದರು, ಗಮನಾರ್ಹ ಸಿದ್ಧಾಂತಕಾರರೂ ರಾಜಕೀಯ ಚಿಂತಕರೂ ಆಗಿದ್ದರು. ಅವರು ವಸಾಹತು ದೇಶಗಳ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನೆಯ ಪ್ರಕ್ರಿಯೆಯನ್ನು ತತ್ವಶಾಸ್ತ್ರೀಯವಾಗಿ ಅರ್ಥಮಾಡಿಕೊಳ್ಳಲು ಯತ್ನಿಸಿದರು. ರಾಷ್ಟ್ರೀಯ-ವಿಮೋಚನಾ ಚಳವಳಿಯ ಆಂತರಿಕ ವೈರುಧ್ಯಗಳನ್ನೂ ಚಳವಳಿಯ ಪ್ರಗತಿಗೂ ಮುಗ್ಗಟ್ಟುಗಳಿಗೂ ಕಾರಣವಾದಂಥ ಅದರಲ್ಲಿನ ಪ್ರಬಲ ಸುಪ್ತ ಶಕ್ತಿಗಳನ್ನೂ ಅನಾವರಣ ಮಾಡಿ ಅಳೆದು ನೋಡುವುದು ಅವರ ಗುರಿಯಾಗಿದ್ದಿತು. ನಿಧಾನವಾಗಿಯಾದರೂ ಅವರು ಖಚಿತವಾಗಿ ಆಫ್ರಿಕದಲ್ಲಿನ ಇಂದಿನ ಸಾಮಾಜಿಕ ಜೀವನದಲ್ಲಿ ಸಾಮ್ರಾಜ್ಯವಾದ ವಿರೋಧಿ ಹಾಗೂ ವರ್ಗ ಹೋರಾಟದ ನಿರ್ಧಾರಕ ಪಾತ್ರವನ್ನು ತಿಳಿಯುವಂತಾಗಿದ್ದರು.

ಎನ್‌ಕ್ರೂಮರವರ ಅಂತ್ಯ ದುರಂತವಾಗಿದ್ದಿತು. ಬ್ರಿಟಿಷ್ ವಸಾಹತಾಗಿದ್ದ ಗೋಲ್ಡ್ ಕೋಸ್ಟ್‌ನಲ್ಲಿ ಶಾಂತಿಯುತ ವಿಧಾನಗಳ ಮೂಲಕ ವಿಮೋಚನಾ ಹೋರಾಟವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿದ ನಂತರ ಮತ್ತು ಘಾನ ಗಣತಂತ್ರದಲ್ಲಿ ಅನೇಕ ವರ್ಷಗಳ ಮೇಲುನೋಟಕ್ಕೆ ಸ್ಥಿರವೆಂದು ಕಾಣುತ್ತಿದ್ದ ಉತ್ತಮ ಸರಕಾರ ನಡೆಸಿದನಂತರ ಅವರು ತಮ್ಮ ಕೊನೆಯ ದಿನಗಳನ್ನು ಏಕಾಂತದಲ್ಲಿ ದೇಶಾಂತರವಾಸದಲ್ಲಿ ಕಳೆಯಬೇಕಾಯಿತು. ಈ ಕಷ್ಟಕರವಾದ ನೈತಿಕ ಹಾಗೂ ರಾಜಕೀಯ ವಾತಾವರಣದಲ್ಲಿ ಅವರ ಚಟುವಟಿಕೆಗಳು ಅವರ ಇಚ್ಛೆಗೆ ವಿರುದ್ಧವಾಗಿಯೇ ನಿರ್ಬಂಧಕ್ಕೊಳಗಾಗಿದ್ದಾಗ, ಅವರು ತಮ್ಮ ಸಾಹಿತ್ಯಿಕ ಅಥವಾ ಪರಿಶೋಧನಾತ್ಮಕ ಕಾರ್ಯವನ್ನು ಇಮ್ಮಡಿ ಶಕ್ತಿಯೊಂದಿಗೆ ಕೈಕೊಂಡರು. ಆಫ್ರಿಕನ್ ಕ್ರಾಂತಿಯ ಇತಿಹಾಸವನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸಿ ಅದರ ಪ್ರತೀಕ್ಷೆ

ಗಳ ರೂಪುರೇಷೆಗಳನ್ನು ನೀಡಲು ಯತ್ನಿಸಿದರು. ಹಾಗಾಗಿ ಅವರ ಜೀವನದ ಅಂತ್ಯವು ಹತಾಶೆ ನಿರುತ್ಸಾಹಗಳ ದುರಂತವಾಗಿರಲಿಲ್ಲ ಎಂದೇ ಹೇಳಬೇಕು. ಅದು ತಮ್ಮ ಯೋಜನೆಗಳಿಗೆ ತಮ್ಮ ದೇಶದಲ್ಲಾಗಲೀ ಖಂಡದಲ್ಲಾಗಲೀ ಸಾಕಷ್ಟು ಬೆಂಬಲ ಕಂಡುಕೊಳ್ಳದೆ ಹೋದ, ಆಫ್ರಿಕದ ಉತ್ತಮ ಭವಿತವ್ಯಕ್ಕಾಗಿ ಹೋರಾಡಿದ, ಮಹಾ ಯೋಧನೊಬ್ಬನ ದುರಂತವಾಗಿದ್ದಿತು.

ಎನ್‌ಕ್ರೂಮರ ಚಟುವಟಿಕೆಗಳು ಅವರ ಕಾಲದ ರಾಷ್ಟ್ರೀಯ ವಿಮೋಚನಾ ಚಳವಳಿಯ ಕೆಲವು ನಾಯಕರಿಗೆ ವಿಶಿಷ್ಟವಾಗಿದ್ದ ಅನೇಕ ಪರಸ್ಪರ ವಿರೋಧಿ ಲಕ್ಷಣಗಳನ್ನು ಪ್ರತಿಬಿಂಬಿಸುತ್ತಿದ್ದವು. ವಿಮೋಚನಾ ಚಳವಳಿಯ ಕಾಲಘಟ್ಟದಲ್ಲಿ ಜನಸಮೂಹಗಳ ನಾಯಕನೊಬ್ಬನ ಪ್ರಜಾಸತ್ತಾತ್ಮಕತೆ ಮತ್ತು ಆಫ್ರಿಕದ ಬುಡಕಟ್ಟು ವ್ಯವಸ್ಥೆಯ ಮಧ್ಯಯುಗ ಪರಂಪರೆಗಳು ಒದಗಿಸಿದ್ದಂಥ ಅಧಿಕಾರ ವಿಧಾನಗಳು; ಸಮಾಜವಾದದತ್ತ ಆಕರ್ಷಣೆ ಹಾಗೂ ಅಪರಿಷ್ಕೃತ ರಾಷ್ಟ್ರೀಯತಾವಾದಿ ಪೂರ್ವಾಗ್ರಹಗಳು; ಜನರಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುವ ಬಯಕೆ ಹಾಗೂ ಮಿತಿಮೀರಿದ ವೈಯಕ್ತಿಕ ಮಹತ್ವಾಕಾಂಕ್ಷೆ; ಲೇಬರ್ ಮಾದರಿಯ ಸುಧಾರಣಾವಾದಿ ಭ್ರಾಂತಿಗಳು ಹಾಗೂ ವಾಮಪಂಥೀಯ ರ‍್ಯಾಡಿಕಲಿಸ್ಮ್ – ಇವೇ ಆ ಲಕ್ಷಣಗಳು. ಇವೆಲ್ಲವೂ ವಸಾಹತು ಹಾಗೂ ಅರೆವಸಾಹತು ದೇಶಗಳಲ್ಲಿ ಮಧ್ಯಂತರ ಪೆಟಿ ಬೂರ್ಷ್ವಾ ಸ್ತರಗಳಿಗೆ – ದ್ವಿತೀಯ ಜಾಗತಿಕ ಯುದ್ಧದನಂತರ 1950ರ ಹಾಗೂ 1970ರ ದಶಕಗಳಲ್ಲಿ ಹುಟ್ಟಿಕೊಂಡ ಹತ್ತಾರು ಎಳೆಯ ರಾಷ್ಟ್ರಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮುನ್ನಾಲಿಗೆ ಬಂದ ಹಾಗೂ ಅತ್ಯಂತ ಕ್ರಿಯಾಶೀಲ ಶಕ್ತಿಯಾಗಿ ಬೆಳೆದ ಸ್ತರಗಳಿಗೆ – ವಿಶಿಷ್ಟವಾದ ತೀವ್ರ ಹಾಗೂ ತೀರ ನೈಜ ವೈರುಧ್ಯಗಳನ್ನು ಪ್ರತಿಬಿಂಬಿಸುತ್ತಿದ್ದವು. ಈ ಕಾರಣದಿಂದಾಗಿಯೇ ಎನ್‌ಕ್ರೂಮರವರ ಇಡೀ ರಾಜಕೀಯ ಜೀವನವು, ಅದರೆಲ್ಲ ಏರು ತಗ್ಗುಗಳೊಂದಿಗೆ, ಅವರ ಇಡೀ ಸೈದ್ಧಾಂತಿಕ ಸಂಪತ್ತು, ಅದರೆಲ್ಲ ಸರಿಯಾದ ಇಲ್ಲವೇ ತಪ್ಪಾದ ವಿಚಾರಗಳೊಂದಿಗೆ, ಆಫ್ರಿಕನ್ ಕ್ರಾಂತಿಕಾರಿಗಳಿಗೆ ಒಂದು ಪ್ರಧಾನ ಪ್ರಾಯೋಗಿಕ ಶಾಲೆಯಾಗಿದೆ.

ಎನ್‌ಕ್ರೂಮರವರ ಹೆಸರು ಯುದ್ಧಾನಂತರ ವ್ಯಾಪಕ ಖ್ಯಾತಿ ಗಳಿಸಿತು. ಆಗ ಅಖಿಲ ಆಫ್ರಿಕನ್ ಚಳವಳಿ ಹೊಸ ಘಟ್ಟ ಪ್ರವೇಶಿಸುತ್ತಿದ್ದಿತು. ಅದು ಖಂಡದೊಳಗೇ ನಾನಾ ದೇಶಗಳ ರಾಷ್ಟ್ರೀಯ ವಿಮೋಚನಾ ಚಳವಳಿಗಳನ್ನು ಒಂದುಗೂಡಿಸುವ ಸಂಘಟನೆಯಾಗಿ ಬೆಳೆದಿದ್ದಿತು. 1945ರ ಅಕ್ಟೋಬರ್‌ನಲ್ಲಿ ಮಾಂಚೆಸ್ಟರ್‌ನಲ್ಲಿ ಜರುಗಿದ ಐದನೆಯ ಅಖಿಲ ಆಫ್ರಿಕನ್ ಮಹಾಧಿವೇಶನದಲ್ಲಿ ಎನ್‌ಕ್ರೂಮರವರೇ ಪಶ್ಚಿಮ ಆಫ್ರಿಕ ಜನತೆಗಳ ಸ್ವಾತಂತ್ರ್ಯ ಹೋರಾಟ ಸಮಸ್ಯೆಗಳನ್ನು ವಿವೇಚಿಸಿದ ಪ್ರಧಾನ ಭಾಷಣಕಾರರಾಗಿದ್ದರು. ಅಲ್ಲಿ ಅವರು ಉಗ್ರ ಸಾಮ್ರಾಜ್ಯವಾದ ವಿರೋಧಿಗಳಾಗಿ ಕಾಣಿಸಿಕೊಂಡರು. ಆ ಮುನ್ನಿನ ಮಹಾಧಿವೇಶನಗಳ ರಾಜಿ ಮನೋಭಾವ ಹಾಗೂ ಸುಧಾರಣಾವಾದಗಳನ್ನು ತಿರಸ್ಕರಿಸಿದರು.

ಆದರೆ ವಸಾಹತುವಾದವು ಜನಾಂಗಗಳನ್ನು ನಾಗರಿಕಗೊಳಿಸುವ ಧ್ಯೇಯ ಹೊಂದಿತ್ತೆಂಬ ಬಲಪಂಥ ಸಮಾಜವಾದಿಗಳ ಹಾಗೂ ಬೂರ್ಷ್ವಾಸೀಯ ಸುಳ್ಳು ಪ್ರತಿಪಾದನೆಗಳನ್ನು ಅವರು ತಿರಸ್ಕರಿಸಿದರು. ರಾಷ್ಟ್ರೀಯ ವಿಮೋಚನಾ ಹೋರಾಟದ ಗುರಿಗಳು ಸ್ವಾತಂತ್ರ್ಯ ಸಾಧನೆಗಷ್ಟೆ ಸೀಮಿತಗೊಂಡಿರಲಿಲ್ಲ, ಅವರ ಸಮಾಜವಾದದ ಆಧಾರದ ಮೇಲೆ ಜನರ ಸಂಕ್ಷೇಮವನ್ನು ಸುಧಾರಿಸುವುದೂ ಪ್ರಜಾಸತ್ತಾತ್ಮಕ ವ್ಯವಸ್ಥೆಯೊಂದನ್ನು ಸ್ಥಾಪಿಸುವುದೂ ಆ ಗುರಿಗಳ ಪರಿಧಿಯೊಳಗೇ ಬರುತ್ತಿದ್ದವು, ಎಂದು ಐದನೆಯ ಪಾನ್-ಆಫ್ರಿಕನ್ ಕಾಂಗ್ರೆಸ್‌ನಲ್ಲಿ ಭಾಗವಹಿಸಿದ ಬಹುಮಂದಿಯಂತೆ ಎನ್‌ಕ್ರೂಮರವರೂ ಭಾವಿಸಿದ್ದುದು ಗಮನಾರ್ಹವಾಗಿದೆ. ಅವರ ರಾಜಕೀಯ ಅಭಿಪ್ರಾಯಗಳು ನಿಜಕ್ಕೂ ಪ್ರಗತಿಶೀಲ ದಿಶೆಯಲ್ಲಿ ವಿಕಾಸಗೊಂಡಿದ್ದವು ಎಂಬುದನ್ನು ಇದು ತೋರಿಸಿಕೊಡುತ್ತದೆ. ಆ ಕಾಲದಲ್ಲಿ ಅನೇಕ ಆಫ್ರಿಕನ್ ನಾಯಕರು ಈ ಪ್ರಗತಿಶೀಲ ದಿಶೆಯನ್ನು ಅರ್ಥಮಾಡಿಕೊಳ್ಳದಾಗಿದ್ದರು, ಮುಂಗಾಣದಾಗಿದ್ದರು.

ನಿಜ, ಸಮಾಜವಾದದ ಕುರಿತ ಎನ್‌ಕ್ರೂಮರವರ ವಿಚಾರಗಳು ಆ ಕಾಲದಲ್ಲಿ ಸಂಪೂರ್ಣವಾಗಿ ವರ್ಗ ಮನೋಭಾವದಿಂದ ಕೂಡಿದವಾಗಿರಲಿಲ್ಲ. ಈ ವಲಯದಲ್ಲಿ ಅವರಿನ್ನೂ ಸುಧಾರಣಾವಾದಿ ಭ್ರಾಂತಿಗಳನ್ನು ಬಿಟ್ಟುಕೊಟ್ಟಿರಲಿಲ್ಲ. ನಲವತ್ತರ ಹಾಗೂ ಆರಂಭಿಕ ಐವತ್ತರ ದಶಕಗಳಲ್ಲಿ ಸಮಾಜವಾದದ ಕುರಿತ ಅವರ ವಿಚಾರಗಳ ಕೆಲವು ಮಗ್ಗುಲುಗಳು ಯೂರೋಪಿನ ಸೋಷಲ್ ಡೆಮೊಕ್ರಾಟಿಕ್ ಹಾಗೂ ರಾಷ್ಟ್ರೀಯತಾವಾದಿ ಪ್ರಕಲ್ಪನೆಗಳ ರಂಗುಗಳಿಂದ ಕೂಡಿದ್ದವು. ಅವರು ನಲವತ್ತರ ದಶಕದಲ್ಲಿ ಪಾನ್-ಆಫ್ರಿಕನ್ ಚಳವಳಿಯಲ್ಲಿ ಅಧಿಕಾರಯುತ ವ್ಯಕ್ತಿಯೆಂದು ಪರಿಗಣಿತರಾಗಿದ್ದ ಜಾರ್ಜ್ ಪದ್ಮೋರ್‌ರ ಪ್ರಭಾವಕ್ಕೆ ಒಳಗಾಗಿದ್ದರು. ಘಾನದ ಸ್ವಾತಂತ್ರ್ಯ ಘೋಷಣೆಯನಂತರ ಜಾರ್ಜ್ ಪದ್ಮೋರ್‌ರೇ ಎನ್‌ಕ್ರೂಮರವರ ಸಲಹೆಗಾರರಾದರು. "ಪಾನ್-ಆಫ್ರಿಕನಿಸಂ ಇಲ್ಲವೇ ಕಮ್ಯೂನಿಸಂ" ಎಂಬ ಪದ್ಮೋರ್‌ರ ತಪ್ಪಾದ ಪ್ರತಿಪಾದನೆಯನ್ನು ಎನ್‌ಕ್ರೂಮರವರು ಆ ಕಾಲದಲ್ಲಿ ನಿರಾಕರಿಸಿರಲಿಲ್ಲ.

ಘಾನದ ಅಧ್ಯಕ್ಷರಾಗಿ ಎನ್‌ಕ್ರೂಮ ಪ್ರಸ್ಫುಟ್ಟ ಘಟ್ಟದ ಮೂಲಕ ಹಾದು ಬಂದರು. ಆ ಘಟ್ಟದಲ್ಲಿ ಅವರು ರಾಷ್ಟ್ರೀಯ ಸುಧಾರಣಾವಾದದಿಂದ ಭಾರಿ ಪ್ರಭಾವಿತರಾಗಿದ್ದರು. ರಾಷ್ಟ್ರೀಯ ವರ್ಗಗಳನ್ನು ಸಾಮರಸ್ಯ ಸ್ಥಿತಿಯಲ್ಲಿ ಶಾಶ್ವತವಾಗಿ ಇರಿಸುವುದು ಸಾಧ್ಯ, ಆಫ್ರಿಕನ್ ಸಮಾಜದಲ್ಲಿ ವರ್ಗ ಹೋರಾಟವಿಲ್ಲ, ಎಂದು ಮುಂತಾದ ಆ ಸುಧಾರಣಾವಾದದ ಭ್ರಾಂತಿಗಳಿಂದ ಅವರು ತುಂಬ ಪ್ರಭಾವಿತರಾಗಿದ್ದರು.

ಎನ್‌ಕ್ರೂಮರವರು ಈ ಘಟ್ಟಕ್ಕೇ ಕಟ್ಟಿ ಕುಳಿತು ಬಿಡಲಿಲ್ಲ ಎಂಬುದು ಅವರ ತದನಂತರ ವಿಕಸನದ ಒಂದು ಧನಾತ್ಮಕ ಮಗ್ಗುಲಾಗಿದೆ. ಉಳಿದೆಲ್ಲ ಆಫ್ರಿಕನ್

ರಾಷ್ಟ್ರೀಯ ಸುಧಾರಣಾವಾದಿಗಳೂ ಸೋಷಲಿಸ್ಟ್ ಇಂಟರ್‌ನ್ಯಾಷನಲ್‌ನೊಂದಿಗೆ ಒಲವು ತೋರುತ್ತ ಈಗ ಇಪ್ಪತ್ತು ಮೂವತ್ತು ವರ್ಷಗಳಿಂದ ಅದೇ ಘಟ್ಟದಲ್ಲಿಯೇ ಉಳಿದುಕೊಂಡಿದ್ದಾರೆ. ವಸಾಹತುವಾದ ವಿರೋಧಿ ಚಳವಳಿಯ ಕ್ರಾಂತಿಕಾರಿ ಪಕ್ಷದ ಕೆಲವು ತತ್ವಭ್ರಷ್ಟರೂ ಇದೇ ಮಾದರಿಯ ರಾಜಕೀಯ ನಿಲುವನ್ನು ಪ್ರತಿಪಾದಿಸುತ್ತಿದ್ದಾರೆ. ಆಫ್ರಿಕನ್ ಜನತೆಗಳು ವಿಶಿಷ್ಟವಾದಂಥ ಅದ್ವಿತೀಯವಾದಂಥ ಚಾರಿತ್ರಿಕ ಬೆಳವಣಿಗೆಯನ್ನು ಹೊಂದಿದ್ದಾರೆ ಎಂಬ ವಿಚಾರಗಳಿಂದ ಬಲಪಂಥದ ಯೂರೋಪಿಯನ್ ಸೋಷಲ್ ಡೆಮೊಕ್ರಸಿಗೆ ಮಾದರಿಯಾದಂಥ ಪ್ರಕಲ್ಪನೆಗಳಿಗೆ ತಮ್ಮ ನಿಲುವನ್ನು ವರ್ಗಾಯಿಸಿದುದಷ್ಟೆ ಇವರು ಸಾಧಿಸಿದ ವಿಕಸನವಾಗಿದೆ. ಎಪ್ಪತ್ತರ ದಶಕದ ದ್ವಿತೀಯಾರ್ಧದಲ್ಲಿ ಆಫ್ರಿಕನ್ ರಾಷ್ಟ್ರೀಯ ಸುಧಾರಣಾವಾದದ ಈ ಮಾರ್ಪಾಟು ಲಿಯೋಪೋಲ್ಡ್ ಸೆಂಘೋರ್‌ರ ಕೃತಿಯಲ್ಲಿ ಬಿಂಬಿತವಾಗಿದೆ. ಸೋಷಲಿಸ್ಟ್ ಇಂತರ್‌ನ್ಯಾಷನಲ್‌ನತ್ತ ತಿರುಗಿದುದರಲ್ಲಿ ಮತ್ತು 'ಆಫ್ರಿಕನ್ ಸಮಾಜವಾದಿ ಪಾರ್ಟಿಗಳ ಸಮೂಖ್ಯ' ಎಂಬ ಸಂಸ್ಥೆಯನ್ನು ನಿರ್ಮಿಸುವ ಮೂಲಕ ತಮ್ಮ ಶಕ್ತಿಗಳನ್ನು ಇಡೀ ಖಂಡದ ಪ್ರಮಾಣದಲ್ಲಿ ಒಂದುಗೂಡಿಸುವ ಅವರ ಬಯಕೆಯಲ್ಲಿ ಬಿಂಬಿತವಾಗಿದೆ. ಈ ಮಾದರಿಯ ವಿಕಸನವು ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ನವವಸಾಹತುವಾದದ ಅಧಿಕಾಧಿಕ ಪ್ರಭಾವದೊಂದಿಗೆ ಸಂಬಂಧಿತವಾಗಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಐವತ್ತರ ದಶಕದ ಕೊನೆಯ ಭಾಗದಲ್ಲಿ ಆಫ್ರಿಕನ್ ರಾಷ್ಟ್ರೀಯತಾವಾದದ ಸಾರಸಂಗ್ರಹ ಸಿದ್ಧಾಂತದಿಂದ ನಾನಾ ಸೈದ್ಧಾಂತಿಕ ಹಾಗೂ ರಾಜಕೀಯ ಪ್ರವೃತ್ತಿಗಳು ರೂಪುಗೊಳ್ಳತೊಡಗಿದವು. ಈ ಸಿದ್ಧಾಂತವು ಐದನೆಯ ಪಾನ್-ಆಫ್ರಿಕನ್ ಕಾಂಗ್ರೆಸ್ ತೋರಿಸಿಕೊಟ್ಟಂತೆ, ಕ್ರಾಂತಿಕಾರಿ ಹಾಗೂ ಸುಧಾರಣಾವಾದಿ ಪ್ರವೃತ್ತಿಗಳ ಸಂಯೋಜನೆಯಾಗಿದ್ದಿತು. ಬಲಪಂಥದ ರಾಷ್ಟ್ರೀಯತಾವಾದಿಗಳು ದೃಢವಾಗಿ ಬೂರ್ಷ್ವಾ ಸುಧಾರಣಾವಾದಿ ನಿಲುವುಗಳನ್ನು ತಳೆದರು. ತಮ್ಮ ಸುಧಾರಣಾವಾದಿ ವಿಚಾರಗಳನ್ನು ಗೃಹ ನೀತಿಗಳಿಗಷ್ಟೆ ಅಲ್ಲ ವಿದೇಶಾಂಗ ನೀತಿಗಳಿಗೂ ಅನ್ವಯಿಸಿದರು, ಬಹು ಬೇಗ ಸಾಮ್ರಾಜ್ಯಶಾಹಿ ಬೃಹತ್‌ರಾಷ್ಟ್ರಗಳೊಂದಿಗೆ ಸಹಕರಿಸತೊಡಗಿದರು. ಎಡಪಂಥದವರು ಬಂಡವಾಳಶಾಹಿ ಅಲ್ಲದ ಬೆಳವಣಿಗೆಯ ವಿಚಾರದ ಕಡೆಗೆ ತಿರುಗಿದರು. ರಾಷ್ಟ್ರೀಯ ಪ್ರಜಾಪ್ರಭುತ್ವದ ನೀತಿಗಳನ್ನೂ ಸೈದ್ಧಾಂತಿಕ ಸೂತ್ರಗಳನ್ನೂ ರಚಿಸಿದರು. ಎನ್‌ಕ್ರೂಮರವರು ಈ ಎಡಪಂಥ ಚಳವಳಿಯ ಆರಂಭಕಾರರಲ್ಲಿ ಒಬ್ಬರಾಗಿದ್ದರು, ಅದರ ಅತ್ಯುತ್ತಮ ಪ್ರತಿನಿಧಿಗಳಲ್ಲಿ ಒಬ್ಬರಾಗಿದ್ದರು. ಈ ಚಳವಳಿಯು ಕ್ರಾಂತಿಕಾರಿ ಅಂತಃಶಕ್ತಿಯನ್ನು ದೃಢಗೊಳಿಸಲು ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟದ ಸಾಮಾಜಿಕ ಸಾರವನ್ನು ಗಾಢಗೊಳಿಸಲು ಯತ್ನಿಸಿತು. ಸಮಾಜವಾದಿ ದಿಶೆಯನ್ನು ಮುಂದುವರಿ

ಬುನಾದಿಯನ್ನು ನಿಜವಾದ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಆರ್ಥಿಕ ಹಾಗೂ ರಾಜಕೀಯ ಮಟ್ಟಗಳಲ್ಲಿ ದೃಢಗೊಳಿಸುವುದನ್ನು, ಸಾಮ್ರಾಜ್ಯಶಾಹಿ ಶೋಷಣೆಯ ವಿರುದ್ಧ ತೀವ್ರ ಹೋರಾಟವನ್ನು ಮುಂದುವರಿಸುವುದೂ ಬೂರ್ಶ್ವಾ ಶಕ್ತಿಗಳ ಅಪಾಯಕಾರಿ ಆಶೋತ್ತರಗಳನ್ನು ನಿಗ್ರಹಿಸುವುದೂ ಅಗತ್ಯ ಎಂದು ಎನ್‌ಕ್ರೂಮರವರು ಮಾರ್ಕ್ಸ್‌ವಾದಿ ತೀರ್ಮಾನಗಳಿಗೆ ಬಂದರು. ಈ ರೀತಿಯಲ್ಲೇ ಅವರು ವೈಜ್ಞಾನಿಕ ಸಮಾಜವಾದದ ಸಿದ್ಧಾಂತ ಹಾಗೂ ಆಚರಣೆಗಳ ಬಗೆಗೆ ತಮ್ಮಲ್ಲಿದ್ದ ರಾಷ್ಟ್ರೀಯ ಸುಧಾರಣಾವಾದಿ ವೈರೀಯ ಮನೋಭಾವವನ್ನು ಕ್ರಮೇಣ ಹೋಗಲಾಡಿಸಿಕೊಂಡರು. ಎನ್‌ಕ್ರೂಮರವರ ಯತ್ನದ ಫಲವಾಗಿಯೇ ಆಫ್ರಿಕದಲ್ಲಿ ರಾಷ್ಟ್ರೀಯ ವಿಮೋಚನಾ ಚಳವಳಿಯು ಸಮಾಜವಾದಿ ದೇಶಗಳಿಗೆ ಹೆಚ್ಚು ಹತ್ತಿರವಾಗತೊಡಗಿತು ಮತ್ತು ಅದರ ಸಿದ್ಧಾಂತವು ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವಿಚಾರಗಳಿಂದ ಸಕ್ರಿಯವಾಗಿ ಪ್ರಭಾವಿತವಾಗತೊಡಗಿತು. ಟ್ರಾಪಿಕಲ್ ಆಫ್ರಿಕದಲ್ಲಿನ ಈ ಪ್ರಕ್ರಿಯೆಗಳು ಎನ್‌ಕ್ರೂಮರವರ ನಾಯಕತ್ವದಲ್ಲಿ ಘಾನ ಗಣತಂತ್ರದ ನೀತಿಗಳಲ್ಲೂ ಮತ್ತು ಅವರ ಸೈದ್ಧಾಂತಿಕ ಕೃತಿಗಳಲ್ಲೂ ತುಂಬ ನಿಚ್ಚಳವಾಗಿ ಮೈದೋರಿದವು.

ಹಿಂದಿನ ವಸಾಹತು ಬೃಹತ್‌ರಾಷ್ಟ್ರಗಳೊಂದಿಗಿನ ವೈಮನಸ್ಯ ಸಂಘರ್ಷಗಳನ್ನು ಮರೆತು ಬಿಡಬೇಕು ಎಂದು ರಾಷ್ಟ್ರೀಯ ಸುಧಾರಣಾವಾದಿಗಳು ಒತ್ತಾಯಿಸುತ್ತಿದ್ದ ಕಾಲದಲ್ಲಿ ಎನ್‌ಕ್ರೂಮರವರು ಸಾಮ್ರಾಜ್ಯಶಾಹಿ ಒಳಸಂಚುಗಳ ಬಗೆಗೆ ಎಚ್ಚರದಿಂದಿರುವುದು ಸಾಮ್ರಾಜ್ಯವಾದಿಗಳನ್ನು ನಿರ್ಧಾರಕವಾಗಿ ವಿರೋಧಿಸಲು ಎಲ್ಲ ಕ್ರಾಂತಿಕಾರಿ ಶಕ್ತಿಗಳನ್ನೂ ಒಂದುಗೂಡಿಸುವುದು, ಅವಶ್ಯವೆಂದು ಒತ್ತಿ ಹೇಳಿದರು. ಆಫ್ರಿಕನ್ ಏಕತೆಗಾಗಿ ಅವರು ಭಾವಪೂರಿತವಾಗಿ ಪ್ರಕ್ಷೋಭೆ ನಡೆಸಿದುದು ಮೇಲಿನ ಗುರಿಸಾಧನೆಗೆ ನೆರವಾಯಿತು. ಆದರೆ ಇವನ್ನು ಎನ್‌ಕ್ರೂಮರವರು ಅತಿಪೆಟ್ಟಿನ ಪ್ರಮಾಣದಲ್ಲಿ ನಡೆಸುವ ಒಲವನ್ನೇ ತೋರಿದರೆಂದು ಹೇಳಬೇಕು. ಅವರು ಎಲ್ಲ ಪ್ರಾದೇಶಿಕ ಒಕ್ಕೂಟಗಳನ್ನೂ ಹೆಚ್ಚು ವಿಶಾಲ ಆಫ್ರಿಕನ್ ಏಕತೆಗೆ ಪೀಠಿಕೆಗಳನ್ನಾಗಿಯೇ ಭಾವಿಸಿದರು, ತಕ್ಷಣವೇ ಇಡೀ ಖಂಡಕ್ಕೆ ಅನ್ವಯಿಸುವಂತೆ ಒಂದು ಸರಕಾರವನ್ನೂ ಸೈನ್ಯವನ್ನೂ ನಿರ್ಮಿಸಲು ಹವಣಿಸಿದರು. ಅದಕ್ಕೆ ಅವಶ್ಯವಾದ ಪರಿಸ್ಥಿತಿಗಳು ಅಸ್ತಿತ್ವದಲ್ಲಿರಲಿಲ್ಲ ಅನ್ನುವುದನ್ನು ಅವರು ಮರೆತಿದ್ದರು. ಆಫ್ರಿಕನ್ ರಾಜಕೀಯ ಪ್ರವೃತ್ತಿಗಳಲ್ಲಿ ಆಳವಾಗುತ್ತಿದ್ದ ಭಿನ್ನತೆಗಳೂ ಹೊಸದಾಗಿ ಉದಯಿಸುತ್ತಿದ್ದ ರಾಷ್ಟ್ರಗಳ ಭಿನ್ನವಿಭಿನ್ನ ಸಾಮಾಜಿಕ ಧೋರಣೆಗಳೂ ಅಂತಹ ಇಡೀ ಆಫ್ರಿಕನ್ ಏಕತೆಗೆ ಜಟಿಲ ಹಾಗೂ ದೊಡ್ಡ ಅಡಚಣೆಗಳನ್ನು ಉಂಟುಮಾಡಿದ್ದವು ಎಂಬುದನ್ನೂ ಅವರು ಮರೆತಿದ್ದರು. ಆದರೂ 'ಆಫ್ರಿಕನ್ ಏಕತೆಯ ಸಂಘಟನೆ'ಯನ್ನು ನಿರ್ಮಿಸುವುದರಲ್ಲಿ ಎನ್‌ಕ್ರೂಮರವರು ನಿಸ್ಸಂದೇಹವಾಗಿಯೂ ಒಂದು ಹಿರಿಯ ಪಾತ್ರ ನಿರ್ವಹಿಸಿದ್ದರು. ಸಾಮ್ರಾಜ್ಯವಾದವು ಇನ್ನೂ ನೀಡು

ತ್ತಿದ್ದ ಗುರುತರವಾದ ಭೀತಿಯನ್ನು ಹಿಮ್ಮೆಟ್ಟಿಸಲು ಆಫ್ರಿಕನ್ ದೇಶಗಳು ತಮ್ಮಲ್ಲಿ ರಾಜಕೀಯ ಆರ್ಥಿಕ ಹಾಗೂ ಮಿಲಿಟರಿ ಸಂಪನ್ಮೂಲಗಳನ್ನೂ ಒಂದುಗೂಡಿಸುವುದು ಅಗತ್ಯ ಎಂಬ ಅವರ ಮನವರಿಕೆಯೇ ಆಫ್ರಿಕನ್ ಏಕತೆಯ ಆಶೋತ್ತರಗಳನ್ನು ಹೊಂದಿರುವುದಕ್ಕೆ ಅವರಿಗೆ ಮಾರ್ಗದರ್ಶಕವಾಗಿದ್ದಿತು. ಕಾಂಗೋದಲ್ಲಾದ ದುರಂತವು ಅವರ ಈ ಮನೋನಂಬಿಕೆಯನ್ನು ದೃಢಪಡಿಸಿದ್ದಿತು.

ಸಾಮ್ರಾಜ್ಯವಾದವು ಒಡ್ಡಿದ್ದ ಭಾರಿ ಅಪಾಯದ ಬಗೆಗೆ ಅವರು ನಿರಂತರವಾಗಿ ಎಚ್ಚರಿಕೆ ನೀಡುತ್ತಿದ್ದರು ಮತ್ತು ಸಾಮ್ರಾಜ್ಯಶಾಹಿಗಳ ವಿಸ್ತರಣೆಯ ಹಾಗೂ ಮರ್ದನದ ಹೊಸ ರೂಪಗಳನ್ನು ಬಯಲು ಮಾಡುತ್ತಿದ್ದರು. ಇದು, ಉದಾಹರಣೆಗೆ, 1965ರಲ್ಲಿ ಲಂಡನ್ನಿನಲ್ಲಿ ಪ್ರಕಟವಾದ ಅವರ 'ನವವಸಾಹತುವಾದ – ಸಾಮ್ರಾಜ್ಯವಾದದ ಕೊನೆಯ ಘಟ್ಟ' ಎಂಬ ಗ್ರಂಥದಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಆಫ್ರಿಕನ್ ರಾಜ್ಯಗಳ ಮೇಲೆ "ರಕ್ಷಣಾ" ಒಡಂಬಡಿಕೆಗಳನ್ನು ಹೊರಿಸಲಾಗುತ್ತಿದ್ದುದು, ಆಫ್ರಿಕನ್ ಭೂಪ್ರದೇಶಗಳಲ್ಲಿ ಮಿಲಿಟರಿ ನೆಲೆಗಳನ್ನು ನಿರ್ಮಿಸಲಾಗುತ್ತಿದ್ದುದು, ಕೈಗೊಂಬೆ ಸರಕಾರಗಳಿಗೆ ಬೆಂಬಲ ನೀಡುತ್ತಿದ್ದುದು, ನೆರವು ಹಾಗೂ ಸಾಲಗಳ ರೂಪದಲ್ಲಿ ಆರ್ಥಿಕ ಹತೋಟಿ ಪಡೆದುಕೊಳ್ಳುತ್ತಿದ್ದುದು, ಅಸಮ ವ್ಯಾಪಾರ, ಅಂತರರಾಷ್ಟ್ರೀಯ ಕಾರ್ಪೊರೇಷನ್‌ಗಳು ಸ್ಥಳೀಯ ಆರ್ಥಿಕತೆಗಳನ್ನು ಹತ್ತಿಕ್ಕುತ್ತಿದ್ದುದು, ಸ್ಥಳೀಯ ಬೂರ್ಶ್ವಾಸಿಯ ಮೂಲಕ ಆಫ್ರಿಕನ್ ಸಾಮಾಜಿಕ ಪರಿಸರದೊಳಕ್ಕೆ ನುಗ್ಗಿ ಬರುತ್ತಿದ್ದುದು, ಸಾಮ್ರಾಜ್ಯಶಾಹಿ ಸೈದ್ಧಾಂತಿಕ ಪ್ರಚಾರ ಕಾರ್ಯ – ಇವೇ ಮುಂತಾದ ನವವಸಾಹತುವಾದದ ವಿಧಾನಗಳನ್ನು ಅವರು ಈ ಗ್ರಂಥದಲ್ಲಿ ವಿವೇಚಿಸಿದ್ದಾರೆ. ಅವರ ಈ ಗ್ರಂಥವು ಇಂದಿಗೂ ತನ್ನ ಸಮಂಜಸತೆಯನ್ನು ಕಳೆದುಕೊಂಡಿಲ್ಲ.

ವರ್ಗ ಹೋರಾಟವನ್ನು ಮನ್ನಿಸಿದುದು ಎನ್‌ಕ್ರೂಮರವರು ಹಾಗೂ ಒಟ್ಟಿನಲ್ಲಿ ರಾಷ್ಟ್ರೀಯ ಪ್ರಜಾಪ್ರಭುತ್ವವಾದಿಗಳು ಆಫ್ರಿಕನ್ ದೇಶಗಳಲ್ಲಿನ ಆಂತರಿಕ ಪರಿಸ್ಥಿತಿಯನ್ನು ವಿಶ್ಲೇಷಿಸುವುದರಲ್ಲಿ ಗಳಿಸಿದ ಅತ್ಯಂತ ಮುಖ್ಯವಾದ ಹಾಗೂ ಮೂಲಭೂತವಾಗಿ ಗುಣಾತ್ಮಕವಾಗಿ ಹೊಸತಾದ ಸೈದ್ಧಾಂತಿಕ ಮತ್ತು ರಾಜಕೀಯ ಸಾಧನೆಯಾಗಿದ್ದಿತು. ಎನ್‌ಕ್ರೂಮರವರ 'ಅಂತಃಸಾಕ್ಷಿವಾದ' ಎಂಬ ಗ್ರಂಥವು ಆಫ್ರಿಕನ್ ಸಮಾಜದಲ್ಲಿ ವರ್ಗ ವೈರುಧ್ಯಗಳ ಬಗೆಗೆ ಸಾರ್ವತ್ರಿಕವಾದ, ಪರೀಕ್ಷಾರ್ಥಕವಾದ, ಸಾಮಾಜಿಕ-ಆರ್ಥಿಕಕ್ಕಿಂತ ಹೆಚ್ಚಾಗಿ ರಾಜಕೀಯವಾದ ಮನೋಧರ್ಮವನ್ನು ತುಂಬ ಚೆನ್ನಾಗಿ ವ್ಯಕ್ತಪಡಿಸಿತು. ಈ ಮನೋಧರ್ಮವು ಇಡೀ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಚಳವಳಿಯ, ಅದರ ಮೊದಲ ಘಟ್ಟದ ಬೆಳವಣಿಗೆಯ, ವಿಶಿಷ್ಟ ಲಕ್ಷಣವಾಗಿದ್ದಿತು. ಈ ಗ್ರಂಥದಲ್ಲಿ ಎನ್‌ಕ್ರೂಮರವರು "ಧನಾತ್ಮಕ ಶಕ್ತಿ" ಹಾಗೂ "ಋಣಾತ್ಮಕ ಶಕ್ತಿ"ಗಳ ನಡುವಿನ ಘರ್ಷಣೆಯ ಬಗೆಗೆ, ಅಂದರೆ ಸಾಮಾಜಿಕ ನ್ಯಾಯ ಸ್ಥಾಪನೆಗಾಗಿ, ಅಲ್ಪಜನಾಧಿಪತ್ಯ ಶೋಷಣ

ನೆಯ ನಿರ್ಮೂಲನಕ್ಕಾಗಿ, ವಸಾಹತು ಆಳ್ವಿಕೆಯನ್ನು ಮುಂದುವರಿಸಿಕೊಂಡೇ ಹೋಗಲು ಬಯಸುತ್ತಿದ್ದ ಪ್ರತಿಗಾಮಿ ಶಕ್ತಿಗಳನ್ನು ದಮನ ಮಾಡುವುದಕ್ಕಾಗಿ ಪ್ರಗತಿಶೀಲ ಶಕ್ತಿಗಳು ನಡೆಸುತ್ತಿದ್ದ ಹೋರಾಟದ ಬಗೆಗೆ ಬರೆದಿದ್ದಾರೆ. ಇಂತಹ ವಿಭಜನೆಯ ಔಪಾಧಿಕ ಸ್ವರೂಪವನ್ನು ಎನ್‌ಕ್ರೂಮ ಗಮನಕ್ಕೆ ತಂದುಕೊಂಡಿದ್ದರು. ಧನಾತ್ಮಕ ಕ್ರಾಂತಿಕಾರಿ ಪ್ರಕ್ರಿಯೆಯೊಳಗೇ ವಿಭಜನೆಗೊಳಗಾಗುವ ಮತ್ತು ಅದರ ಕೆಲವು ಶಕ್ತಿಗಳು ಪ್ರತಿಗಾಮಿತ್ವದ ಪಕ್ಷಕ್ಕೆ ಹೋಗುವ ಸಾಧ್ಯತೆಯನ್ನೂ ಎನ್‌ಕ್ರೂಮ ಮುಂಗಂಡಿದ್ದರು.*

ಪರಿಸ್ಥಿತಿಯನ್ನು ಈ ರೀತಿ ಪರಿಶೀಲಿಸುವುದು ಸಾಮಾಜಿಕ ವರ್ಗಗಳ ಬಗೆಗೆ ಮಾರ್ಕ್ಸ್‌ವಾದಿ ತಿಳಿವಳಿಕೆಯನ್ನಾಗಲೀ ಸಮಾಜದ ಸಾಮಾಜಿಕ-ಆರ್ಥಿಕ ಹಾಗೂ ರಾಜಕೀಯ ಸಂರಚನೆಯ ವೈಜ್ಞಾನಿಕ ವಿಶ್ಲೇಷಣೆಯನ್ನಾಗಲೀ ಏನೂ ಹೊರಗೆಡಹುವುದಿಲ್ಲ ಎಂಬುದರಲ್ಲಿ ಸಂದೇಹವಿಲ್ಲ. ಆದರೂ ಅದು ಸಾಮ್ರಾಜ್ಯಶಾಹಿ ವಿರೋಧಿ ಐಕ್ಯರಂಗ ನಿರ್ಮಿಸುವುದಕ್ಕೆ ವಸ್ತುನಿಷ್ಠವಾಗಿ ಅವಶ್ಯವಾದ ತಂತ್ರಗಳಿಗೆ ಒಂದು ರೀತಿಯ ಆಧಾರವನ್ನಂತೂ ಒಳಗೊಂಡಿದೆ. ಇದು ವಿಷಯವನ್ನು ಮಾರ್ಕ್ಸ್‌ವಾದಿ ರೀತಿಯಲ್ಲಿ ಅರ್ಥಮಾಡಿಕೊಳ್ಳುವ ಮಟ್ಟಕ್ಕೆ ಏರದಿದ್ದರೂ ಅದನ್ನು ಮೂಲಭೂತವಾಗಿಯೇನೂ ಅಲ್ಲಗಳೆಯುವುದಿಲ್ಲ. ಈ ನಿಲುವು ಹೋರಾಟದ ಅವಧಿಯಲ್ಲಿ, ಅನುಭವ ಸಂಚಯಗೊಂಡಂತೆ, ಮಾರ್ಕ್ಸ್‌ವಾದಿ ಸಾರವನ್ನೂ ಪಡೆದುಕೊಳ್ಳಲೂ ಬಹುದು. ನಿಜ, ತಮ್ಮ 'ಅಂತಃಸಾಕ್ಷಿವಾದ' ಗ್ರಂಥದಲ್ಲಿ ಎನ್‌ಕ್ರೂಮರವರು ಮೂಲಾವಸ್ಥೆಯ ವಿಭಜನೆಯನ್ನು ಮುನ್ನಿರೀಕ್ಷಿಸುವಂತೆ ಮತ್ತು "ಮುಂದೆ ಆಗಲಿದ್ದ ವಿಭಜನಾತ್ಮಕ ಪ್ರವೃತ್ತಿಗಳನ್ನು ಅಡೆಯಲ್ಲಿರಿಸಲು ಒಂದು ಮಾರ್ಗವನ್ನು ಕಂಡುಹಿಡಿಯುವಂತೆ"** ಪ್ರಗತಿಶೀಲ ಶಕ್ತಿಗಳಿಗೆ ("ಧನಾತ್ಮಕ ಶಕ್ತಿ"ಗೆ) ಕರೆ ನೀಡಿದರು. ಈ ಸಲಹೆಯಲ್ಲಿ ಯಾವ ಅಂಶ ಮುಖ್ಯವಾದುದು – ಏನೇ ಆಗಲಿ ಪ್ರಗತಿಶೀಲ ಶಕ್ತಿಗಳ ಏಕತೆಯನ್ನು ಉಳಿಸಿಕೊಂಡು ಬರಬೇಕು ಎಂಬ ಬಯಕೆಯ ಅಂಶವೇ ಅಥವಾ ವರ್ಗ ಹೋರಾಟವು ಮಸುಕಾಗುತ್ತದೆಂಬ ಭ್ರಾಂತ್ಯಾತ್ಮಕ ಭರವಸೆಯ ಅಂಶವೇ – ಎಂದು ಹೇಳುವುದು ಕಷ್ಟ. ವರ್ಗ ಹೋರಾಟ ಮಸುಕಾಗುವುದು ಸಾಧ್ಯ ಎಂಬ ಭಾವನೆಯನ್ನು ಎನ್‌ಕ್ರೂಮ ಕೆಲವು ವೇಳೆ ವ್ಯಕ್ತಪಡಿಸಿದ್ದರು. ಅವರ ವಿಕಸನದ ವೈರುಧ್ಯಪೂರ್ಣ ಸ್ವರೂಪವನ್ನು ಪ್ರತಿಬಿಂಬಿಸುವಂಥ ಘಾನ ವೃತ್ತಪತ್ರಿಕೆ 'ಕಿಡಿ'ಯಲ್ಲಿ ಅವರು ಬರೆದ ಕೆಲವು ಲೇಖನಗಳು ಇದನ್ನು ತೋರಿಸಿಕೊಡುತ್ತವೆ.

---

* See: Kvame Nkrumah, *Consciencism*, Heinemann, London, 1964, pp. 104-105. –ಸಂ.

** ಅದೇ ಗ್ರಂಥ, ಪು. 104-105. –ಸಂ.

'ಅಂತಃಸಾಕ್ಷಿವಾದ' ಕೃತಿಯು "ಎನ್‌ಕ್ರೂಮವಾದಿ ಸಿದ್ಧಾಂತ"ದ ಚರಮ ರೂಪ ಎಂದು ಅಧಿಕೃತ ಘಾನ ಪ್ರಚಾರಯಂತ್ರ ವರ್ಣಿಸಿತು. ಈ ಸಿದ್ಧಾಂತದ ಮೇಲೆ ವೈಜ್ಞಾನಿಕ ಸಮಾಜವಾದದ ವಿಚಾರಗಳ ಪ್ರಬಲ ಪ್ರಭಾವ ಸ್ವಯಂ ಸ್ಪಷ್ಟವಾಗಿದ್ದಿತು. ಐತಿಹಾಸಿಕ ಬೆಳವಣಿಗೆಯ ಸಾರ್ವತ್ರಿಕ ನಿಯಮಗಳನ್ನು ಅವರು ಮನ್ನಿಸಿದ್ದುದು, ಮಾರ್ಕ್ಸ್‌ವಾದಿ ದ್ವಂದ್ವಾತ್ಮಕ ಭೌತಿಕವಾದ ಅವರ ಮೇಲೆ ಬೀರಿದ್ದ ಸ್ಪಷ್ಟ ಪ್ರಭಾವ, ಸಾಮ್ರಾಜ್ಯವಾದದ ಸ್ವರೂಪವನ್ನು ಎನ್‌ಕ್ರೂಮರವರು ತಿಳಿದುಕೊಂಡಿದ್ದ ರೀತಿ – ಇವುಗಳಲ್ಲಿ ಅದು ಕಂಡು ಬರುತ್ತಿದ್ದಿತು. 1963ರಷ್ಟು ಹಿಂದೆಯೇ ಫೆನ್ನರ್ ಬ್ರಾಕ್‌ವೇರವರು ಎನ್‌ಕ್ರೂಮರವರನ್ನು "ಆಫ್ರಿಕನ್ ಮಾರ್ಕ್ಸ್‌ವಾದ"ದ ಪ್ರತಿನಿಧಿ ಎಂದು ಕರೆದಿದ್ದರು. ಆದಾಗ್ಯೂ ಅರವತ್ತರ ದಶಕದ ಆರಂಭದಲ್ಲಿ ಎನ್‌ಕ್ರೂಮರವರು ಕೆಲವು ತತ್ವಶಾಸ್ತ್ರ ಅಂಶಗಳಿಗೆ ಸಂಬಂಧಿಸಿ ತಾವು ಮಾರ್ಕ್ಸ್‌ವಾದದೊಂದಿಗೆ ಭಿನ್ನಾಭಿಪ್ರಾಯ ಹೊಂದಿದ್ದರೆಂದು ತಿಳಿಸಿದರು. ಆದರೆ ಎಂಗೆಲ್ಸ್‌ರು ಹೇಳಿದಂತೆ, "ಬಂಡವಾಳವಾದಿ ಉತ್ಪಾದನೆಯ ಅಪಕ್ವ ರೂಪಗಳಿಗೆ ತಕ್ಕಂತೆ, ಅಪಕ್ವ ವರ್ಗ ಸಂಬಂಧಗಳಿಗೆ ತಕ್ಕಂತೆ, ಅಪಕ್ವ ಸಿದ್ಧಾಂತಗಳು ಸೃಷ್ಟಿಯಾಗುತ್ತವೆ."*

ಎನ್‌ಕ್ರೂಮವಾದವನ್ನು ಭೌತಿಕವಾದಿ ತತ್ವಶಾಸ್ತ್ರವೆಂದು ಪರಿಗಣಿಸಿದರೂ ಘಾನದ ವೃತ್ತಪತ್ರಿಕೆಗಳು ಅದು ನಾಸ್ತಿಕವಾದವಾಗಿರಲಿಲ್ಲವೆಂದು ಒತ್ತಿಹೇಳಿದವು. ಕ್ರಾಂತಿಯು ನಿಯಮಬದ್ಧವಾಗಿ ಜರುಗುವ ಸ್ವರೂಪದ್ದೆಂಬುದನ್ನು ತತ್ವತಃ ಮನ್ನಿಸುವಾಗಲೇ ಎನ್‌ಕ್ರೂಮರವರು ಪಾರಂಪರಿಕ ಪರಿಸ್ಥಿತಿಗಳನ್ನು ಉಳಿಸಿಕೊಂಡಲ್ಲಿ ಆಫ್ರಿಕದಲ್ಲಿ ಸಮಾಜವಾದವನ್ನು ವಿಕಸನವಾದಿ ವಿಧಾನಗಳ ಮೂಲಕವೇ ಪಡೆದುಕೊಳ್ಳುವುದು ಸಾಧ್ಯವೆಂದು ಭಾವಿಸಿದ್ದರು. ಎನ್‌ಕ್ರೂಮವಾದವನ್ನು ಮಾರ್ಕ್ಸ್‌ವಾದದೊಂದಿಗೆ ಜೊತೆಗೂಡಿಸುವುದನ್ನು 'ಕಿಡಿ' ಪತ್ರಿಕೆಯು ಬಲಪಂಥದವರಿಂದ ಎನ್‌ಕ್ರೂಮವಾದದ ಮೇಲೆ ದಾಳಿಯನ್ನಾಗಿ ವರ್ಣಿಸಿತು. ಅಂದರೆ ಅದು ಘಾನದಲ್ಲಿ ಸಾಮ್ರಾಜ್ಯವಾದಿ ಪ್ರಚಾರದ ಪ್ರಭಾವಕ್ಕೊಳಗಾಗಿ ಕಮ್ಯೂನಿಸಂಅನ್ನು ಡಕಾಯಿತಿತನ ಹಾಗೂ ಅನೈತಿಕತೆ ಎಂದು ಭಾವಿಸುತ್ತಿದ್ದಂಥ ಜನರನ್ನು ಉದ್ರೇಕಿಸುವುದಕ್ಕೆ ದಾರಿ ಮಾಡಿಕೊಡುತ್ತದೆ,** ಎಂದು ಪತ್ರಿಕೆ ಭಾವಿಸಿತು. ಹೀಗೆ ಮಾರ್ಕ್ಸ್‌ವಾದ ಹಾಗೂ ಎನ್‌ಕ್ರೂಮವಾದಗಳ ನಡುವೆ ಪ್ರತ್ಯೇಕತಾ

---

*Frederick Engels, *Socialism: Utopian and Scientific*, in: Karl Marx and Frederick Engels, *Selected Works in three volumes*, Vol. 3, Progress Publishers, Moscow, 1973, p. 119. –ಸಂ.

** *The Spark*, March 5, 1963. –ಸಂ.

ನೆಲೆಯನ್ನು ಪಡೆಯಲು ಮೂಲತಃ ತಾತ್ವಿಕವಾದ ಆದರೆ ಸಂಪೂರ್ಣವಾಗಿ ನಿರಾಧಾರವೇನೂ ಆಗಿರದ ಪರಿಗಣನೆಗಳನ್ನು ಮುಂದಿಡಲಾಯಿತು.

ನಿಜ, ವೈಜ್ಞಾನಿಕ ವಸ್ತುನಿಷ್ಠತೆಯ ದೃಷ್ಟಿಯಿಂದಲೂ ಮಾರ್ಕ್ಸ್‌ವಾದ ಎನ್‌ಕ್ರೂಮವಾದವನ್ನು ಒಂದೇ ಎಂದು ಭಾವಿಸುವುದು ತಪ್ಪಾಗುತ್ತದೆ. ಎನ್‌ಕ್ರೂಮವಾದವು ಸುಧಾರಣಾವಾದಿ ಹಾಗೂ ರಾಷ್ಟ್ರೀಯತಾವಾದಿ ವಿಚಾರಗಳನ್ನು ಎಸೆದು ದೂರಮಾಡಿಕೊಳ್ಳಲಿಲ್ಲ. ಆದರೆ ಅದು ಮಾರ್ಕ್ಸ್‌ವಾದದ ಕಡೆಗೆ ಸರಿಯಿತು. ಅದರಿಂದ ದೂರ ಹೋಗಲಿಲ್ಲ, ಎಂಬುದಂತೂ ನಿಸ್ಸಂದೇಹವಾದುದು. ಅಷ್ಟೇ ಅಲ್ಲ, ಬಂಡವಾಳವಾದಿ ಅಲ್ಲದ ಮಾರ್ಗದಲ್ಲಿ ಯಶಸ್ವಿಯಾಗಿ ಬೆಳವಣಿಗೆ ಪಡೆಯುವುದು ಸಾಧ್ಯ ಮತ್ತು ಅದರ ಆಧಾರದ ಮೇಲೆ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳ ಐಕ್ಯರಂಗವನ್ನು ಸಂಘಟಿಸುವುದು ಸಾಧ್ಯ, ಎಂಬ ವಿಚಾರಕ್ಕೆ ಸಂಬಂಧಿಸಿ ಈ ಎರಡು ವಾದಗಳ ನಡುವೆ ಮೂಲಭೂತವಾದ ವೈರುಧ್ಯಗಳೇನೂ ಇರಲಿಲ್ಲ – ಎರಡೂ ಈ ವಿದ್ಯಮಾನಗಳನ್ನು ಭಿನ್ನಭಿನ್ನವಾಗಿ ಅರ್ಥಮಾಡಿಕೊಂಡಿದ್ದರೂ. ಎನ್‌ಕ್ರೂಮವಾದವು ಸತತವಾಗಿ ವಿಕಾಸಗೊಳ್ಳುತ್ತಿದ್ದುದು, ಬಂಡವಾಳವಾದಿ ಅಲ್ಲದ ಬೆಳವಣಿಗೆಯ ಚೌಕಟ್ಟಿನಲ್ಲಿ ಸಮಾಜವಾದಿ ಪ್ರವೃತ್ತಿಗಳು ಕ್ರಮೇಣ ಗಾಢಗೊಳ್ಳುವುದರ ಆಧಾರದ ಮೇಲೆ ಅದು ವೈಜ್ಞಾನಿಕ ಸಮಾಜವಾದದೊಂದಿಗೆ ಮತ್ತೂ ಹೆಚ್ಚು ಸೌಮನಸ್ಯ ಸಾಧಿಸುವುದೆಂದು ಆಶಿಸುವುದಕ್ಕೆ ದಾರಿ ಮಾಡಿಕೊಟ್ಟಿದ್ದಿತು. ಅಂತಹ ಸೌಮನಸ್ಯ ಉಂಟಾಗಿಯೂ ಆಯಿತು. 'ಕಿಡಿ' ಪತ್ರಿಕೆಯ ಹಲವಾರು ಸಂಚಿಕೆಗಳಲ್ಲಿ ಪ್ರಕಟವಾದ ಬರಹಗಳು ಇದನ್ನು ಸಾಬೀತು ಮಾಡುತ್ತವೆ. ಈ ಪತ್ರಿಕೆಯ ಸುತ್ತ ಕೂಡಿಕೊಂಡಿದ್ದ 'ಎಡ ಎನ್‌ಕ್ರೂಮವಾದ'ದ ಪ್ರತಿನಿಧಿಗಳು ಈ ಬರಹಗಳನ್ನು ಬರೆದಿದ್ದರು. ಅಲ್ಲದೆ ಪತ್ರಿಕೆಯ ಪ್ರಧಾನ ಸಂಪಾದಕ ಕೋಫಿ ಬಾತ್ಸರವರು ನೀಡಿದ ಕೆಲವು ಹೇಳಿಕೆಗಳೂ "ಧನಾತ್ಮಕ ಶಕ್ತಿ"ಯ ಪ್ರಕಲ್ಪನೆಯಲ್ಲಿ ಕೆಲವು ಬದಲಾವಣೆಗಳುಂಟಾಗಿದ್ದವು ಎಂಬುದಕ್ಕೆ ಸಾಕ್ಷ್ಯ ನೀಡಿದವು. ಈಗ ಪ್ರಗತಿಶೀಲ ಶಕ್ತಿಗಳ ಮೈತ್ರೀಕೂಟದಲ್ಲಿ ಕಾರ್ಮಿಕ ಜನರ ವಿಶೇಷ ಪಾತ್ರವನ್ನು ಒತ್ತಿ ತಿಳಿಸಲಾಯಿತು, ರಾಷ್ಟ್ರೀಯ ಬಂಡವಾಳವಾದಿಗಳ ಅಭಿಪ್ರಾಯಗಳಲ್ಲಿದ್ದ ಇಬ್ಬಂದಿತನವನ್ನೂ ವೈರುಧ್ಯಗಳನ್ನೂ ಎತ್ತಿ ತೋರಿಸಲಾಯಿತು, ಅವರು ಸಮಾಜವಾದಿ ಪ್ರವೃತ್ತಿಗಳ ಬಗೆಗೆ ಹೊಂದಿದ್ದ ಹಗೆತನವನ್ನು ಬಯಲು ಮಾಡಲಾಯಿತು. ಆಫ್ರಿಕದಲ್ಲಿನ ವೈಜ್ಞಾನಿಕ ಸಮಾಜವಾದ ಎಂದು ವರ್ಣಿಸಿದಂಥ ಎನ್‌ಕ್ರೂಮವಾದಕ್ಕೂ ರಾಷ್ಟ್ರೀಯ ಸುಧಾರಣಾವಾದಿ "ಆಫ್ರಿಕನ್ ಸಮಾಜವಾದ"ಕ್ಕೂ ನಡುವೆ ಇದ್ದ ಮೂಲಭೂತ ವ್ಯತ್ಯಾಸಗಳನ್ನು ಒತ್ತಿ ತಿಳಿಸಲಾಯಿತು.

ಆದರೆ 1966ರ ಫೆಬ್ರವರಿಯಲ್ಲಿ ಘಾನದಲ್ಲಿ ಜರುಗಿದ ಪ್ರತಿಗಾಮಿ ಕ್ಷಿಪ್ರ ಕ್ರಾಂತಿಯು ಎನ್‌ಕ್ರೂಮವಾದವು ವೈಜ್ಞಾನಿಕ ಸಮಾಜವಾದಕ್ಕೆ ಇನ್ನಷ್ಟು ಸಮೀಪ ಹೋಗುವುದಕ್ಕೂ ಅಡ್ಡಿ ಬಂದಿತು. ಈ ಕ್ಷಿಪ್ರಕ್ರಾಂತಿಯ ಫಲವಾಗಿ ಎನ್‌ಕ್ರೂಮ

ರವರ ಸರಕಾರ ಉರುಳಿತು. ದೇಶವು ಬಂಡವಾಳವಾದಿ ಅಲ್ಲದ ಮಾರ್ಗದಲ್ಲಿ ಮುಂದುವರಿಯುವುದಕ್ಕೆ ತಡೆ ಹಾಕಿದಂಥ ಈ ಭಾರಿ ರಾಜಕೀಯ ಪರಾಭವವು ಎನ್‌ಕ್ರೂಮರವರನ್ನು ಪರಿಸ್ಥಿತಿಯನ್ನು ಹೊಸ ರೀತಿಯಲ್ಲಿ ಅವಲೋಕಿಸುವಂತೆ ಒತ್ತಾಯಿಸುವುದು ಖಂಡಿತವಿದ್ದಿತು. ಘಾನ ನಾಯಕತ್ವವು ಅನೇಕ ತಪ್ಪುಗಳನ್ನು ಮಾಡಿದ್ದಿತು. ಆ ತಪ್ಪುಗಳನ್ನು ಮಾಡಿರದೆ ಇದ್ದಲ್ಲಿ ಪ್ರತಿಕ್ರಾಂತಿಕಾರಿ ಕ್ಷಿಪ್ರ ಕ್ರಾಂತಿಯು ಅಷ್ಟು ಸುಲಭವಾಗಿ ಹಾಗೂ ಯಶಸ್ವಿಯಾಗಿ ಜರುಗುತ್ತಿರಲಿಲ್ಲ, ಎಂದು ಎನ್‌ಕ್ರೂಮ ಕ್ರಮೇಣ ಮನಗಂಡರು. ಸಮಾಜವಾದಿ ಮಾರ್ಗಕ್ಕೆ ಬೆಂಬಲ ನೀಡುತ್ತಿದ್ದವರೆಲ್ಲ ಈಗ ಉತ್ಸಾಹ ಭಂಗಗೊಂಡಿದ್ದರು. ಅಲ್ಲದೆ ಅವರು ತಮ್ಮ ಹುಟ್ಟು ನೆಲದಿಂದ ಮೂಲೋತ್ಪಾಟನೆಗೊಂಡಿದ್ದರು. ಹಾಗಾಗಿ ಎನ್‌ಕ್ರೂಮರವರು ಗತ ಘಟನೆಗಳನ್ನು ಸರಿಯಾದ ರೀತಿಯಲ್ಲಿ ಪುನರ್‌ಪರಿಶೀಲಿಸುವುದು ಇನ್ನೂ ಹೆಚ್ಚು ಕಷ್ಟವಾಯಿತು. ಜೊತೆಗೆ ಅನೇಕ ವರ್ಷಗಳ ಅವರ ಆಳ್ವಿಕೆಯ ಕೆಳಗೆ ಜನರು ಅವರ ವ್ಯಕ್ತಿ ಆರಾಧನೆಗೆ ಒಗ್ಗಿಕೊಂಡು ಬಿಟ್ಟಿದ್ದರು. ಅವರೇ ಒಂಟಿಯಾಗಿ ಆಡಳಿತ ನಡೆಸುವ ಮತ್ತು ಸಮಸ್ಯೆಗಳನ್ನು ಶಾಸನಗಳ ಮೂಲಕ ಪರಿಹರಿಸುವ ಮನೋಪ್ರವೃತ್ತಿಯನ್ನು ಬೆಳೆಸಿಕೊಂಡು ಬಿಟ್ಟಿದ್ದರು. ಈ ಕಾರಣದಿಂದಾಗಿ ಪದಚ್ಯುತರಾದನಂತರವೂ ಎನ್‌ಕ್ರೂಮರವರು ಘಾನದಲ್ಲಿನ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಯನ್ನಾಗಲೀ ತಮ್ಮ ಸ್ವಂತ ತಪ್ಪು ತೀರ್ಮಾನಗಳನ್ನಾಗಲೀ ವಸ್ತುನಿಷ್ಠವಾಗಿ ವಿಶ್ಲೇಷಿಸಲು, ಇಲ್ಲದೇ ದೇಶದ ಕ್ರಾಂತಿಕಾರಿ ಶಕ್ತಿಗಳನ್ನು ಸಂಘಟಿಸಿ ಅಣಿನೆರೆಯಿಸುವ ಮಾರ್ಗೋಪಾಯಗಳನ್ನು ರೂಪಿಸಲು, ಅಸಮರ್ಥರಾಗಿದ್ದರು. ದೇಶಾಂತರವಾಸಿಯಾಗಿ ಎನ್‌ಕ್ರೂಮರವರು ಹಲವಾರು ಗ್ರಂಥಗಳನ್ನು ರಚಿಸಿದರು. ಅವುಗಳಲ್ಲಿ 'ಕ್ರಾಂತಿಕಾರಿ ಯುದ್ಧ ಕಾರ್ಯಾಚರಣೆಯ ಕೈಪಿಡಿ' (1969) ಹಾಗೂ 'ಆಫ್ರಿಕದಲ್ಲಿ ವರ್ಗ ಹೋರಾಟ' (1970) ಎಂಬ ಎರಡು ಗ್ರಂಥಗಳು ಆಫ್ರಿಕದ ಸಾಮಾಜಿಕ-ರಾಜಕೀಯ ಚಿಂತನೆಯ ಇತಿಹಾಸದ ದೃಷ್ಟಿಕೋನದಿಂದ ಗಣನೀಯ ಆಸಕ್ತಿಯುದಾಗಿವೆ. ಆದರೆ ಅವರು ತಮ್ಮ ಸ್ವಂತ ಪರಾಭವಕ್ಕೆ ಕಾರಣಗಳ ಬಗೆಗೇ, ಘಾನದಲ್ಲಿದ್ದ ಪ್ರಗತಿಶೀಲ ಆಡಳಿತದ ದೌರ್ಬಲ್ಯ ಹಾಗೂ ವೈರುಧ್ಯಗಳ ಬಗೆಗೇ, ಗ್ರಂಥ ರಚನೆ ಮಾಡಲು ಶಕ್ತರಾಗಲಿಲ್ಲ. ಸ್ಪಷ್ಟವಾಗಿಯೇ, ಅವರು ತಮ್ಮ ಸ್ವಂತ ತಪ್ಪುಗಳತ್ತ ವಸ್ತುನಿಷ್ಠವಾಗಿ ನಿರ್ಭಯದಿಂದ ನೋಡುವ ಧೈರ್ಯ ಹೊಂದಿರಲಿಲ್ಲ.

ಬದಲು ಅವರು ಹೆಚ್ಚು ಸುಲಭವಾದ ಮಾರ್ಗವನ್ನು ವ್ಯೂಹ ಹಾಗೂ ತಂತ್ರಗಳನ್ನು ಅಮೂರ್ತವಾಗಿ ತಾತ್ವಿಕವಾಗಿ ಪರಿಶೀಲಿಸುವ ಮಾರ್ಗವನ್ನು – ಹೆಚ್ಚು ಇಷ್ಟಪಟ್ಟರು. ಘಾನದಲ್ಲಿ ಪ್ರತಿಗಾಮಿ ಕ್ಷಿಪ್ರಕ್ರಾಂತಿಯಾದನಂತರ ಅವರು ತಮ್ಮ ಸ್ವಂತ ದೇಶದಲ್ಲಲ್ಲ ಆದರೆ ಇಡೀ ಖಂಡದಲ್ಲಿ ಕ್ರಾಂತಿ ಆಗುವ ಕನಸು ಕಂಡರು ಮತ್ತು ತಮ್ಮ ಹೊಸ ಸೈದ್ಧಾಂತಿಕ ಹಾಗೂ ರಾಜಕೀಯ ವಿಚಾರಗಳನ್ನು

ಉತ್ತರದಿಂದ ಹಿಡಿದು ದಕ್ಷಿಣದವರೆಗೆ, ಪೂರ್ವದಿಂದ ಹಿಡಿದು ಪಶ್ಚಿಮದವರೆಗೆ ಇಡೀ ಆಫ್ರಿಕಕ್ಕೆ ಅನ್ವಯಿಸುವಂತೆ, ಇಡೀ ಆಫ್ರಿಕವನ್ನುದ್ದೇಶಿಸಿ, ರಚಿಸಿದರು. ಇವರಲ್ಲೇ ಅವರ ಚಿಂತನೆಗಳು ಎಷ್ಟು ಅಮೂರ್ತ ಸ್ವರೂಪದ್ದಾಗಿದ್ದವು ಎಂಬುದು ಸ್ಪಷ್ಟವಾಗಿ ಕಂಡುಬರುತ್ತದೆ.

ಘಾನದಲ್ಲಿ ಕ್ರಾಂತಿಕಾರಿ ಶಕ್ತಿಗಳು ಪರಾಭವಗೊಂಡುದು ಅವು ತಮ್ಮ ಶಕ್ತಿಗಳನ್ನು ತುಲನಾತ್ಮಕವಾಗಿ ಸೀಮಿತವಾದ ರಣರಂಗದಲ್ಲಿ ಕೇಂದ್ರೀಕರಿಸುವುದಕ್ಕೆ ದಾರಿ ಮಾಡಿಕೊಡಬೇಕಿದ್ದಿತು. ತುಲನಾತ್ಮಕವಾಗಿ ಮಿತವಾದ ತಕ್ಷಣದ ಗುರಿಗಳನ್ನು ಮುಂದಿರಿಸಿ, ಈ ಗುರಿ ಸಾಧನೆಗಾಗಿ ಅಳಿದುಳಿದ ಭಂಗಗೊಂಡಿದ್ದ ಸೈನ್ಯದಳಗಳನ್ನು ಮತ್ತೆ ಜೊತೆಗೂಡಿಸಿ ಅವನ್ನು ಹೊಸ ಹೋರಾಟಕ್ಕೆ ಕ್ರಮೇಣ ಸಿದ್ಧಗೊಳಿಸಬೇಕಿದ್ದಿತು. ಬದಲು ಎನ್‌ಕ್ರೂಮರವರು ಘಾನದಲ್ಲಿ ಬಂಡವಾಳವಾದಿ ಅಲ್ಲದ ಬೆಳವಣಿಗೆಯ ಮಾರ್ಗವೇ ಪರಾಭವಗೊಂಡಿದ್ದಾಗಲೂ ಇಡೀ ಆಫ್ರಿಕದಲ್ಲಿ ಸಮಾಜವಾದಿ ಕ್ರಾಂತಿಯ ಬಗೆಗೆ ಮಾತನಾಡತೊಡಗಿದರು. ಅವರು ತುಂಬ ಮಟ್ಟಿಗೆ ವಾಸ್ತವಿಕತೆಯೊಂದಿಗೆ ಸಂಪರ್ಕ ಕಳೆದುಕೊಂಡಿದ್ದರೆಂದೇ ಸ್ಪಷ್ಟವಾಗುತ್ತಿದ್ದಿತು. ತಮ್ಮ ಕಟು ಪರಾಭವಕ್ಕೆ ಅವರ ಪ್ರತಿಕ್ರಿಯೆಯು ಈ ರೀತಿಯ ವಿರೋಧಾಭಾಸದಿಂದ ಕೂಡಿದ್ದಿತು. ಇದು ಅವರ ಅಸಾಧ್ಯಾದರ್ಶವಾದಿ ಸಾಮಾಜಿಕ-ರಾಜಕೀಯ ವಿಚಾರಗಳೊಂದಿಗೆ, ತಮ್ಮ ಸ್ವಂತ ವ್ಯಕ್ತಿತ್ವದ ಪಾತ್ರವನ್ನೇ ಉತ್ಪ್ರೇಕ್ಷಿಸಿ ಕಂಡುಕೊಂಡಿದ್ದುದರೊಂದಿಗೆ, ಸಂಬಂಧಿಸಿದ್ದಿತೆಂದು ಖಂಡಿತ ಹೇಳಬಹುದಾಗಿದೆ.

ಘಾನದಲ್ಲಿ ಜರುಗಿದ ಕ್ಷಿಪ್ರಕ್ರಾಂತಿಯು ದೇಶದಲ್ಲಿನ ಆಗಿನ ಸಾಮಾಜಿಕ ಆರ್ಥಿಕ ಹಾಗೂ ರಾಜಕೀಯ ತೊಂದರೆಗಳ ಫಲವಾಗಿದ್ದಿತೆಂಬುದನ್ನು ಯಾರೂ ಸಂಶಯಿಸಲಾರರು. ಎನ್‌ಕ್ರೂಮರವರೇ ಹೀಗೆಂದು ಭಾವಿಸಿದ್ದರು. ತಮ್ಮ ಆಳ್ವಿಕೆಯ ಕಾಲದಲ್ಲಿ ಎನ್‌ಕ್ರೂಮವಾದದ ಸೈದ್ಧಾಂತಿಕ ಹಾಗೂ ರಾಜಕೀಯ ವಿಚಾರಗಳಲ್ಲಿ ಒಂದು ರೀತಿಯ ಸಂದಿಗ್ಧತೆ, ಅಪೂರ್ಣತೆ ಹಾಗೂ ವೈರುಧ್ಯಗಳಿದ್ದವೆಂಬುದಕ್ಕೆ ಅವರೇ ಮೌನ ಒಪ್ಪಿಗೆ ನೀಡಿದ್ದುದೂ ಸರಿಯಾಗಿಯೇ ಇದ್ದಿತು. ಆದರೆ, ದುರದೃಷ್ಟವಶಾತ್ ಈಗಾಗಲೇ ಹೇಳಲಾಗಿರುವಂತೆ, ಎನ್‌ಕ್ರೂಮರವರು ಸ್ವಾತಂತ್ರ್ಯದ ಮೊದಲ ವರ್ಷಗಳಲ್ಲಿ ಘಾನದ ಸಾಮಾಜಿಕ-ರಾಜಕೀಯ ಹಾಗೂ ಆರ್ಥಿಕ ಬೆಳವಣಿಗೆಯನ್ನು ಕೂಲಂಕಷವಾಗಿ ವಿಮರ್ಶಾತ್ಮಕವಾಗಿ ವಿಶ್ಲೇಷಣೆ ಮಾಡಲಿಲ್ಲ; ರಾಜ್ಯಯಂತ್ರದ ಹಾಗೂ ಪಾರ್ಟಿಯ ಬೆಳವಣಿಗೆಯನ್ನಾಗಲೀ, ದೇಶದಲ್ಲಿ ವರ್ಗಗಳ ಸಾಲುಗೂಡಿಕೆಯನ್ನಾಗಲೀ ಅಥವಾ ಸೈನ್ಯದ ನಿಲುವನ್ನಾಗಲೀ ಕೂಲಂಕಷವಾಗಿ ವಿಶ್ಲೇಷಿಸಲಿಲ್ಲ. ಅಧಿಕಾರಶಾಹಿ ಬೂರ್ಷ್ವಾಸಿಯು ಬೆಳೆಯುತ್ತಿದ್ದುದನ್ನು ಅವರು ಗಮನಿಸಲಿಲ್ಲ ಮತ್ತು ದೇಶದಲ್ಲಿ ಸಾರ್ವತ್ರಿಕ ಭ್ರಷ್ಟಾಚಾರ ಹೆಚ್ಚುತ್ತಿದ್ದುದನ್ನೂ ಕಾಣ ಬಯಸಲಿಲ್ಲ.

ಅವರು ಅಂತಹ ವಿಶ್ಲೇಷಣೆಯನ್ನು ಕೈಕೊಂಡಿದ್ದಲ್ಲಿ ಘಾನದ ಆಂತರಿಕ ಬೆಳವಣಿಗೆಯಲ್ಲಿನ ಅನೇಕ ಋಣಾತ್ಮಕ ಲಕ್ಷಣಗಳನ್ನು ಕಂಡುಕೊಳ್ಳುತ್ತಿದ್ದರು. ಅವು ಅವರು ಇಟ್ಟುಕೊಂಡಿದ್ದ ವ್ಯೂಹಾತ್ಮಕ ಗುರಿಗಳಿಂದಾಗಿ ಅಷ್ಟಾಗಿ ಅಲ್ಲ ಅವರ ಅವರ ಉದ್ದೇಶಗಳಿಗೂ ಕ್ರಿಯೆಗಳಿಗೂ ನಡುವಿನ ನಿಜವಾದ ತೀವ್ರವಾದ ವೈರುಧ್ಯಗಳಿಂದಾಗಿ ಉಂಟಾಗಿದ್ದವು ಅನ್ನುವುದನ್ನೂ ಕಂಡುಕೊಳ್ಳುತ್ತಿದ್ದರು. ದೇಶದ ಆರ್ಥಿಕತೆಯಲ್ಲಿ ಅಸಾಮಂಜಸ್ಯವಿದ್ದಿತೆಂಬುದನ್ನೂ, ತಕ್ಷಣವೇ ಗರಿಷ್ಠ ಕೈಗಾರಿಕೀಕರಣವನ್ನೂ ಭಾರಿ ಪ್ರಾಯೋಜನೆಗಳ ಈಡೇರಿಕೆಯನ್ನೂ ಸಾಧಿಸಬೇಕೆಂಬ ಬಯಕೆಯು ದೇಶದ ಆರ್ಥಿಕತೆಯ ಸ್ಥಿತಿಗತಿಗಳಿಗೆ ಅನುಗುಣವಾಗಿಯೂ ಇರಲಿಲ್ಲ ಅವರ ಅತ್ಯಂತ ತುರ್ತಿನ ಅಗತ್ಯಗಳನ್ನು ಪೂರೈಸುವಂತೆಯೂ ಇರಲಿಲ್ಲ, ಎಂಬುದನ್ನೂ ಅವರು ಮನಗಾಣುತ್ತಿದ್ದರು. ಸಮಾಜವಾದ ಸ್ಥಾಪನೆಯ ಅವರ ಬಯಕೆಯು ಬಂಡವಾಳವಾದಿ ಪ್ರವೃತ್ತಿಗಳ ತೀವ್ರ ಬೆಳವಣಿಗೆಯನ್ನೇನೂ ತಪ್ಪಿಸುತ್ತಿರಲಿಲ್ಲ, ಹೊಸ ಅಧಿಕಾರದಿಂದ ಸಾಮಾನ್ಯ ಜನರು ಏನನ್ನೂ ಗಳಿಸಿರಲಿಲ್ಲ, ಅವರ ಜೀವನ ಮಟ್ಟ ಎಷ್ಟು ಮಾತ್ರವೂ ಹೆಚ್ಚಿರಲಿಲ್ಲ, ರಾಜ್ಯಸಾಧನವು ಜನಸಮೂಹಗಳಿಂದ ಪ್ರತ್ಯೇಕಗೊಂಡಿದ್ದಿತು, ಅದು ವ್ಯಕ್ತಿಗತವಾದ ಮತ್ತು ಸಾರದಲ್ಲಿ ಆದಿಸ್ವರೂಪದ ಬಂಡವಾಳ ಸಂಚಯದ ಸಾಧನವಾಗಿ ಆಗಿದ್ದಿತು, ಎಂಬುದನ್ನೂ ಅವರು ಅರ್ಥಮಾಡಿಕೊಳ್ಳುತ್ತಿದ್ದರು. 'ಕನ್ವೆನ್ಷನ್ ಪೀಪಲ್ಸ್ ಪಾರ್ಟಿ'ಯು ವಿಶಾಲವೂ ಆಗುತ್ತಿರಲಿಲ್ಲ, ಬಲವನ್ನು ಹೆಚ್ಚಿಸಿಕೊಳ್ಳುತ್ತಲೂ ಇರಲಿಲ್ಲ, ಬದಲು ತನ್ನನ್ನು ಅಧಿಕಾರಕ್ಕೆ ತಂದ ಜನಸಮೂಹಗಳೊಂದಿಗೆ ಅದು ಸಂಪರ್ಕ ಕಳೆದುಕೊಳ್ಳುತ್ತಿದ್ದಿತು ಎಂಬುದನ್ನೂ, ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಕಾಣಬರುತ್ತಿದ್ದ ನೈಜ ಕ್ರಾಂತಿಕಾರಿ ಉತ್ಸಾಹವು ಮಂದವಾದ ಅಧಿಕಾರ ಆಡಂಬರತೆಗೆ ಮತ್ತು ನಾಯಕ ಬೋಧಕ 'ಒಸಜೆಫೊ'ನ ಉದ್ರೇಕದ ಹೊಗಳಿಕೆಗೆ ದಾರಿಬಿಟ್ಟುಕೊಟ್ಟಿದ್ದಿತು ಎಂಬುದನ್ನೂ, ಇವೆಲ್ಲವೂ ಅಧಿಕಾರ ಭ್ರಷ್ಟಗೊಂಡಿದ್ದುದನ್ನು ಅದು ಜನರಿಂದ ಪ್ರತ್ಯೇಕಗೊಂಡಿದ್ದುದನ್ನು ಸಾಬೀತು ಮಾಡುತ್ತಿದ್ದವು ಎಂಬುದನ್ನೂ, ಅವರು ಕಂಡುಕೊಳ್ಳುತ್ತಿದ್ದರು.

ಎನ್‌ಕ್ರೂಮರವರು ನಿಸ್ಸಂದೇಹವಾಗಿಯೂ ಒಬ್ಬ ಬುದ್ಧಿವಂತ ವ್ಯಕ್ತಿಯಾಗಿದ್ದರೂ ನುರಿತ ರಾಜಕಾರಣಿಯಾಗಿದ್ದರೂ ಇವೆಲ್ಲವನ್ನೂ ಕಾಣದೆ ಹೋದರು. ಅವರು ಸಾಮ್ರಾಜ್ಯವಾದದ ಹಾಗೂ ಆಂತರಿಕ ಪ್ರತಿಗಾಮಿ ಶಕ್ತಿಗಳ ವಿನಾಶಕ ಚಟುವಟಿಕೆಗಳನ್ನು, ಮಿಶ್ರಿತ ಆರ್ಥಿಕತೆಯ ಫಲವಾಗಿ ಘಾನ ಸಮಾಜದ ವರ್ಗ ರಚನೆಯು ಭಿನ್ನಭಿನ್ನ ಅಂಶಗಳಿಂದ ಕೂಡಿದ್ದಿತೆಂಬುದನ್ನು, ಸಶಸ್ತ್ರ ದಳಗಳ ಸೈನ್ಯಾಧಿಕಾರಿಗಳ, ಸರಕಾರೀ ಅಧಿಕಾರಿಗಳ ಹಾಗೂ ಪೋಲೀಸು ಅಧಿಕಾರಿಗಳ ಮಧ್ಯೆ ಕೆಲವು ಜನಸ್ತೋಮಗಳು ಪ್ರತಿಗಾಮಿಗಳಾಗಿ ಕೆಲಸ ಮಾಡಲು ಸಿದ್ಧವಿದ್ದುದನ್ನು, ಎತ್ತಿ ತೋರಿಸಲಷ್ಟೆ ತಮ್ಮನ್ನು ಸೀಮಿತಗೊಳಿಸಿಕೊಂಡರು. ತಾವು

ಅಧಿಕಾರದಲ್ಲಿದ್ದಾಗ ಇದೆಲ್ಲವನ್ನೂ ಕಂಡುಕೊಂಡರು. ಅಷ್ಟೇ ಅಲ್ಲ ಮಾರ್ಕ್ಸ್‌ವಾದಿ-ಲೆನಿನ್‌ವಾದಿಗಳೂ ಅವರಿಗೆ ಈ ವಿಷಯಗಳನ್ನು ಪದೇ ಪದೇ ಹೇಳುತ್ತಿದ್ದರು. ಸಮಾಜವಾದಿ ದೇಶಗಳ ನಾಯಕರು ಎನ್‌ಕ್ರೂಮರವರಿಗೆ ಕಳುಹಿಸುತ್ತಿದ್ದ ಸಂದೇಶಗಳಲ್ಲೂ ಆ ದೇಶದಲ್ಲಿ ಜರುಗುತ್ತಿದ್ದ ಅಪ್ರಿಯ ಪ್ರಕ್ರಿಯೆಗಳ ಬಗ್ಗೆ ಸತತವಾಗಿ ಎಚ್ಚರಿಕೆ ನೀಡುತ್ತಿದ್ದರು. ಆದರೆ ಎಲ್ಲವೂ ನಿರರ್ಥಕವಾದವು. ಎನ್‌ಕ್ರೂಮರವರು ತಾವು ಅಧಿಕಾರದಲ್ಲಿದ್ದಾಗ ತಮಗೆ ಭೀತಿ ಒಡ್ಡಿದ್ದ ಅಪಾಯವನ್ನು ಮನಗಾಣಲಿಲ್ಲ. ಅಧಿಕಾರ ಕಳೆದುಕೊಂಡ ಮೇಲೂ ತಮ್ಮ ಪರಾಭವವನ್ನು ಉಂಟುಮಾಡಿದ್ದ ಕಾರಣಗಳ ಇಡೀ ವೈವಿಧ್ಯತೆಯನ್ನು ಗ್ರಹಿಸದಾಗಿದ್ದರು.

ಪರಾಭವದನಂತರ ಎನ್‌ಕ್ರೂಮರವರ ಸೈದ್ಧಾಂತಿಕ ಹಾಗೂ ವಿಧಾನಶಾಸ್ತ್ರೀಯ ತೀರ್ಮಾನಗಳು ಹೆಚ್ಚು ಪಕ್ವಗೊಂಡವು. ಅವರು ವೈಜ್ಞಾನಿಕ ಸಮಾಜವಾದದತ್ತ ಒಂದು ಹೊಸ ಹೆಜ್ಜೆ ಇಟ್ಟಂತೆ ಕಂಡುಬಂದಿತು. "ನಿಜವಾದ ಸಮಾಜವಾದ ಇರುವುದು ಒಂದೇ ಒಂದು, ಅದೇ ವೈಜ್ಞಾನಿಕ ಸಮಾಜವಾದ. ಅದರ ಸೂತ್ರಗಳು ಶಾಶ್ವತವಾದವು, ಸಾರ್ವತ್ರಿಕವಾದವು"* ಎಂದವರು ಈಗ ಪ್ರತಿಪಾದಿಸತೊಡಗಿದರು. ವರ್ಗ ಹೋರಾಟವು ಮಸುಕಾಗುತ್ತದೆಂಬ ಬಗ್ಗೆ ಅವರು ಹೊಂದಿದ್ದ ಭ್ರಾಂತಿಗಳ ಸ್ಥಳದಲ್ಲಿ ಈಗ "ಸಮಾಜವಾದವನ್ನು ವರ್ಗ ಹೋರಾಟದ ಮೂಲಕವಷ್ಟೆ ಸಾಧಿಸುವುದು ಸಾಧ್ಯ"** ಎಂಬ ಸ್ಪಷ್ಟ ಹೇಳಿಕೆ, ತಡವಾಗಿಯಾದರೂ ಸರಿ, ಬಂದಿತು. ಮೊದಲು ಅವರು ಪುರೋಗಾಮಿ ಹಾಗೂ ಪ್ರತಿಗಾಮಿ ಶಕ್ತಿಗಳ ರಾಜಕೀಯ ಬಣಗಳು ("ಧನಾತ್ಮಕ ಶಕ್ತಿ" ಹಾಗೂ "ಋಣಾತ್ಮಕ ಶಕ್ತಿಗಳು") ಎಂದು ಮುಂತಾಗಿ ಸಾಮಾನ್ಯ ರೀತಿಯಲ್ಲಿ ವಾದ ಮಾಡುತ್ತಿದ್ದಲ್ಲಿ, ಈಗ ಉತ್ಪಾದನಾ ಪ್ರಕ್ರಿಯೆಯಲ್ಲಿ ವಿವಿಧ ಸಾಮಾಜಿಕ ಸ್ತರಗಳ ಸ್ಥಿತಿಗತಿಗಳನ್ನೂ ಅವು ವಿಶೇಷಾಧಿಕಾರವುಳ್ಳ ಹಾಗೂ ಮರ್ದಿತ ಸ್ತರಗಳಾಗಿ ವಿಭಜನೆಗೊಂಡಿದ್ದುದರ ಮೇಲೆ ಆಧರಿಸಿದ ಆಫ್ರಿಕನ್ ಸಮಾಜದ ಸಂರಚನೆಯನ್ನೂ ಮೂರ್ತರೂಪದಲ್ಲಿ ವಿಶ್ಲೇಷಿಸತೊಡಗಿದರು.

ಎನ್‌ಕ್ರೂಮರವರ ವಿಚಾರಗಳಲ್ಲಿನ ಈ ಎಲ್ಲ ಧನಾತ್ಮಕ ಬದಲಾವಣೆಗಳೂ ಇನ್ನೂ ಮುಂಚೆಯೇ, ಅವರ ಪರಾಭವಕ್ಕೆ ಮುನ್ನವೇ, ಉಂಟಾಗಬಹುದಿದ್ದವು. ಏಕೆಂದರೆ ಅವು ಅರವತ್ತರ ದಶಕದ ಪ್ರಥಮಾರ್ಧದಲ್ಲಿ ಅವರು ಅನುಸರಿಸುತ್ತಿದ್ದ

---

* Kwame Nkrumah, *Handbook of Revolutionary Warfare. A Guide to the Armed Phase of the African Revolution*, Panaf Books Limited, London, 1968, p. 29. - ಸಂ.

** Kwame Nkrumah, *Class Struggle in Africa*, International Publishers, New York, 1971, p. 84. – ಸಂ.

ರಾಜಕೀಯ ಮಾರ್ಗಕ್ಕೆ ತುಂಬ ಸರಿಹೊಂದುತ್ತಿದ್ದವು. ಅವು ಅವರ ಸಮಾಜವಾದಿ ಪ್ರವೃತ್ತಿಗಳಲ್ಲಿ ಹೆಚ್ಚಿನ ಸುಸಂಗತತೆಗೆ ಪ್ರೋತ್ಸಾಹ ನೀಡಬಲ್ಲವಿದ್ದವು. ಆದರೆ ಅರವತ್ತರ ದಶಕದ ಕೊನೆ ಹಾಗೂ ಎಪ್ಪತ್ತರ ದಶಕದ ಆದಿ ಭಾಗಗಳಲ್ಲಿ ಎನ್‌ಕ್ರೂಮರವರು, ಭಾರಿ ಆಘಾತಕ್ಕೊಳಗಾಗಿದ್ದ ಎನ್‌ಕ್ರೂಮರವರು, ತಮ್ಮ ಹಳೆಯ ಮಾರ್ಗವನ್ನು ಪೂರ್ಣವಾದ, ಬಹುಶಃ ಕೆಲವು ವೇಳೆ ತುಂಬ ತೀವ್ರಗಾಮಿಯೂ ಆದ, ಪುನರ್‌ವಿಮರ್ಶೆಗೆ ಒಳಪಡಿಸಿದರು. ವಿಮೋಚನಾ ಚಳವಳಿಯ ಗುರಿಗಳನ್ನು ಸಾಧಿಸಲು ಸಶಸ್ತ್ರ ಹೋರಾಟವಷ್ಟೆ ಏಕೈಕ ಮಾರ್ಗವೆಂದು ಅವರು ಘೋಷಿಸತೊಡಗಿದರು. 1967ರನಂತರ ಬರೆಯಲಾದ ಎಲ್ಲ ಎನ್‌ಕ್ರೂಮರವರ ಕೃತಿಗಳೂ ಕ್ರಾಂತಿಯಲ್ಲಿ ಒಂದು ಹೊಸ ನಿರ್ಧಾರಕ ಮಜಲು ಸಮೀಪಿಸುತ್ತಿದ್ದುದರ ಬಗೆಗೇ ಹೇಳುತ್ತವೆ. ಪ್ರತಿಗಾಮಿ ಶಕ್ತಿಗಳ ವಿರುದ್ಧ ಸಶಸ್ತ್ರ ಹೋರಾಟವು ಈ ಮಜಲಿನ ವಿಶಿಷ್ಟ ಲಕ್ಷಣವೆಂದು ಅವು ತಿಳಿಸುತ್ತವೆ.

ಎನ್‌ಕ್ರೂಮರವರು ಕ್ರಾಂತಿಕಾರಿ ಸಮರವು ಸ್ವಾತಂತ್ರ್ಯ ಸಾಧನೆಗಷ್ಟೆ ಒಂದು ಸಾಧನ ಎಂದೇನೂ ಸಲಹೆ ಮಾಡುವುದಿಲ್ಲ. ಕ್ರಾಂತಿಕಾರಿ ಸಮರವು ಒಂದು ರೀತಿಯಲ್ಲಿ ಆ ಕಾಲದಲ್ಲಿ ಸಮರ್ಥನೀಯವೇ ಆಗಿದ್ದಿತು. ಏಕೆಂದರೆ ಪೋರ್ಚುಗೀಸ್ ವಸಾಹತುಗಳಲ್ಲಿ ಮತ್ತು ದಕ್ಷಿಣ ಆಫ್ರಿಕದಲ್ಲಿ ವಿಮೋಚನಾ ಚಳವಳಿಯು ಸ್ಪಷ್ಟವಾಗಿ ಆ ಮಾರ್ಗವನ್ನೇ ಹಿಡಿದಿದ್ದಿತು. ಅವರು ಅದನ್ನು ನವವಸಾಹತುವಾದ ಹಾಗೂ ಪ್ರತಿಗಾಮಿತ್ವದ ವಿರುದ್ಧ ಹೋರಾಡುವ ಸಾಧನವನ್ನಾಗಿಯೂ ಸಲಹೆ ಮಾಡಿದರು. ಆಫ್ರಿಕದ ನಾನಾ ದೇಶಗಳಲ್ಲೂ ಭಾಗಗಳಲ್ಲೂ ಪ್ರಜಾಸತ್ತಾತ್ಮಕ ಕ್ರಾಂತಿಕಾರಿ ಚಳವಳಿಯ ಪರಿಸ್ಥಿತಿಗಳೂ ಕಾರ್ಯಭಾರಗಳೂ ತುಂಬ ವೈವಿಧ್ಯಮಯವಾಗಿದ್ದರೂ ಎನ್‌ಕ್ರೂಮರವರು ಎಲ್ಲರಿಗೂ ಒಂದೇ ಸಾರ್ವತ್ರಿಕ ವಿಧಾನವನ್ನು – ಸಶಸ್ತ್ರ ಹೋರಾಟದ ವಿಧಾನವನ್ನು – ಶಿಫಾರಸು ಮಾಡಿದರು. ಅದು ಸಶಸ್ತ್ರ ಹೋರಾಟದ ಪಾತ್ರದ ಉತ್ಪ್ರೇಕ್ಷೆಯಾಗಿದ್ದಿತು. ಅದರ ಮೂಲಾಧಾರಣೆಯಾಗಿದ್ದಿತು. ಘಾನದಲ್ಲಿ ವರ್ಗ ಹೋರಾಟದ ಪಾತ್ರವನ್ನು ಕಡಿಮೆಯಾಗಿ ಎಣಿಸಿದುದರ ಫಲವಾಗಿ ತಾವು ಅನುಭವಿಸಿದ ಪರಾಭವಕ್ಕೆ ಅವರು ತೋರಿದ ಪ್ರತಿಕ್ರಿಯೆಯಾಗಿದ್ದಿತು. ತಮ್ಮ ಬಾಳಿನ ಕೊನೆಯಲ್ಲಷ್ಟೆ ಅವರು ವರ್ಗ ಹೋರಾಟದ ಪಾತ್ರವನ್ನು ಅರ್ಥಮಾಡಿಕೊಂಡರು. ಆದರೆ ಆಗ ಅವರು ಅದನ್ನು ಪ್ರಧಾನವಾಗಿ ಒಂದು ರೂಪದಲ್ಲಷ್ಟೆ – ಸಶಸ್ತ್ರ ಹೋರಾಟದ ರೂಪದಲ್ಲಷ್ಟೆ – ಕಂಡುಕೊಂಡರು ಮತ್ತು ವಿವಿಧ ಪ್ರದೇಶಗಳ ಸ್ಪಷ್ಟ ಚಾರಿತ್ರಿಕ ಪರಿಸ್ಥಿತಿಯನ್ನೂ ವಾಸ್ತವಿಕ ಸ್ಥಿತಿಗತಿಗಳನ್ನೂ ಗಣನೆಗೆ ತೆಗೆದುಕೊಳ್ಳದೆಯೇ ಅದನ್ನು ಇಡೀ ಆಫ್ರಿಕ ಖಂಡಕ್ಕೆ ಅನ್ವಯಿಸಿದರು.

ಆಫ್ರಿಕವನ್ನು ಹೀಗೆ "ಏಕ ರೂಪಕ್ಕೆ ತರುವುದು" ಎನ್‌ಕ್ರೂಮರವರ ಬಯಕೆಗಳಲ್ಲಿ ಒಂದನ್ನು – ಪಾನ್-ಆಫ್ರಿಕನ್ ಸರಕಾರ ರಚಿಸುವ ಬಯಕೆಯನ್ನು –

ಬಯಸುತ್ತಿದ್ದಿತು ಏಕೆಂದರೆ ಆ ಬಯಕೆಯು ವಿಧಾನಶಾಸ್ತ್ರೀಯ ಸ್ವರೂಪದ್ದಾಗಿದ್ದಿತಷ್ಟೆ ಅಲ್ಲ ಸಂಘಟನಾತ್ಮಕ ಸ್ವರೂಪದ್ದೂ ಆಗಿದ್ದಿತು. ಎನ್‌ಕ್ರೂಮರವರು ಏಕೀಕೃತ ಆಫ್ರಿಕನ್ ಕ್ರಾಂತಿಕಾರಿ ಸೈನ್ಯವೊಂದನ್ನೂ ಪಾರ್ಟಿಯನ್ನೂ ಸೃಜಿಸುವ ಪ್ರಸ್ತಾವನೆಯನ್ನು ಮುಂದಿಟ್ಟರು. ಅವರು ಅವುಗಳಲ್ಲಿ ಆಫ್ರಿಕನ್ ಜನತೆಗಳ ರಾಷ್ಟ್ರೀಯ ಹಾಗೂ ಸಾಮಾಜಿಕ ವಿಮೋಚನೆಯನ್ನು ಉಂಟುಮಾಡಬಲ್ಲಂಥ ಶಕ್ತಿಯನ್ನು ಕಂಡುಕೊಂಡರು. ಈ ಬಯಕೆಯು ಆಗ ಎಷ್ಟು ಅವಾಸ್ತವಿಕವಾಗಿದ್ದಿತೋ ಈಗಲೂ ಅಷ್ಟೇ ಅವಾಸ್ತವಿಕ. ಏಕೆಂದರೆ ಅದು ಅಂತಹ ಸಂಘಟನೆಗೆ ಅವಶ್ಯವಾದ ಪರಿಸ್ಥಿತಿಗಳು ಆಫ್ರಿಕ ಖಂಡದಲ್ಲಿ ಎಷ್ಟು ಮಾತ್ರವೂ ಅಸ್ತಿತ್ವದಲ್ಲಿಲ್ಲದಿರುವುದನ್ನೂ, ಆಫ್ರಿಕನ್ ಕ್ರಾಂತಿಕಾರಿ ಚಳವಳಿಗಳು ಸಾರತಃ ಭಿನ್ನವಿಭಿನ್ನ ಕಾರ್ಯಭಾರಗಳನ್ನೂ ವರ್ಗ ಹಾಗೂ ರಾಜಕೀಯ ಲಕ್ಷಣಗಳನ್ನೂ ಹೊಂದಿರುವುದನ್ನೂ ಸಂಪೂರ್ಣವಾಗಿ ಉಪೇಕ್ಷಿಸುತ್ತದೆ. ಅಷ್ಟೇ ಅಲ್ಲ ಅವರ ಬಯಕೆಯು ಹಾನಿಕರವೂ ಆಗಿದ್ದಿತು, ಏಕೆಂದರೆ ಅದು ಒಂದೊಂದೂ ರಾಷ್ಟ್ರದ ಗಡಿಗಳೊಳಗೇ ನಡೆಸುವ ಹೋರಾಟದ ಸ್ವತಂತ್ರ ಪ್ರಾಮುಖ್ಯವನ್ನು ಅಲ್ಲಗಳೆಯುವುದಕ್ಕೆ ಸಮೀಪ ಬರುತ್ತಿದ್ದಿತು. ಹಾಗಾಗಿ ಇಂದಿಗೂ ಅದು ತಪ್ಪು ದಾರಿಗೆ ಸೆಳೆಯುವ ಗುರಿಯಾಗಿಯೇ ಇದ್ದುಕೊಂಡಿದೆ.

ಎನ್‌ಕ್ರೂಮರವರು ಆಫ್ರಿಕದಲ್ಲಿನ ಕ್ರಾಂತಿಕಾರಿ ಚಳವಳಿಯ ಗುರಿಗಳನ್ನೂ ವಿವೇಚಿಸಿದರು. 'ಕ್ರಾಂತಿಕಾರಿ ಯುದ್ಧ ಕಾರ್ಯಾಚರಣೆಯ ಕೈಪಿಡಿ' ಎಂಬ ತಮ್ಮ ಗ್ರಂಥದಲ್ಲಿ ಅವರು ಮೂರು ಅಂತರಸಂಬಂಧಿತ ಗುರಿಗಳ ಬಗೆಗೆ – ರಾಷ್ಟ್ರೀಯವಾದ, ಪಾನ್-ಆಫ್ರಿಕನ್‌ವಾದ ಹಾಗೂ ಸಮಾಜವಾದ, ಇವುಗಳ ಬಗೆಗೆ – ತೋರಿದರು. ಈ ಗುರಿಗಳಲ್ಲಿ ಯಾವುದೊಂದನ್ನೂ ಉಳಿದವುಗಳನ್ನು ಸಾಧಿಸದೆ ಸಂಪೂರ್ಣವಾಗಿ ಸಾಧಿಸುವುದು ಸಾಧ್ಯವಿಲ್ಲ.* ಎಂದು ಅವರು ಒತ್ತಿ ತಿಳಿಸಿದರು. ಇಲ್ಲಿ ಎನ್‌ಕ್ರೂಮರವರು ಒಂದೊಂದೂ ದೇಶದಲ್ಲಿ ಒಂದು ಮುಖ್ಯ ಗುರಿಯನ್ನು ಮುನ್ನೆಲೆಗೆ ತರುವಂಥ ರಾಷ್ಟ್ರೀಯ ವಿಶಿಷ್ಟ ಲಕ್ಷಣಗಳನ್ನು ಗಮನಕ್ಕೆ ತಂದುಕೊಳ್ಳುವ ಜಾಣ್ಮೆ ತೋರಲಿಲ್ಲ. ಅಲ್ಲದೆ ಅವರ ಇತಿಹಾಸ ಪ್ರಜ್ಞೆಯೂ ಅವರಿಗೆ ಕೈಕೊಟ್ಟಿತು. ಪರಸ್ಪರ ವಿರುದ್ಧವಾದ ಅಂಶಗಳನ್ನು – ರಾಷ್ಟ್ರೀಯತಾವಾದ ಹಾಗೂ ಸಮಾಜವಾದಗಳನ್ನು – ಅವರ ಚಿಂತನೆಯಲ್ಲಿ ಒಂದುಗೂಡಿಸಲಾಗಿದೆ. ಕ್ರಾಂತಿಕಾರಿ ಪ್ರಕ್ರಿಯೆಯು ವಿವಿಧ ಘಟ್ಟಗಳ ಮೂಲಕ ಸಾಗಿ ಹೋಗುತ್ತದೆ ಅನ್ನುವುದಕ್ಕೆ ಮನಸ್ಸೊಪ್ಪುವಂಥ ಸಾಕ್ಷ್ಯವೂ ಅವರ ಗ್ರಂಥದಲ್ಲಿಲ್ಲ.

'ಆಫ್ರಿಕದಲ್ಲಿ ವರ್ಗ ಹೋರಾಟ' ಎಂಬ ತಮ್ಮ ಕೊನೆಯ ಗ್ರಂಥದಲ್ಲಿ ಅವರು

* See Kwame Nkrumah, *Handbook of Revolutionary Warfare*,.... p. 21. – ಸಂ.

ಚಳವಳಿಯ ಗುರಿಗಳ ಕುರಿತ ತಮ್ಮ ನಿರೂಪಣೆಯನ್ನು ಸ್ವಲ್ಪ ಮಟ್ಟಿಗೆ ಬದಲಿಸಿದರು ಮತ್ತು ತರ್ಕಬದ್ಧ ವೈರುಧ್ಯಗಳನ್ನು ತೆಗೆದು ಹಾಕಿದರು. ಅದೇ ಹೊತ್ತಿನಲ್ಲಿ ಅವರು ಕ್ರಾಂತಿಕಾರಿ ವಿಚಾರವೇದಿಕೆಯೊಂದನ್ನು ರಚಿಸಲು ಹೊಸ ಹೆಜ್ಜೆ ಇಟ್ಟರು. ಅವರು "ರಾಷ್ಟ್ರೀಯತಾವಾದ" ಎಂಬುದರ ಸ್ಥಳದಲ್ಲಿ "ನೈಜ ರಾಷ್ಟ್ರೀಯ ಸ್ವಾತಂತ್ರ್ಯ ಸಾಧನೆ" ಎಂಬ ಮಾತುಗಳನ್ನು ಇರಿಸಿದರು. ಇದು ರಾಷ್ಟ್ರೀಯ ವಿಮೋಚನಾ ಚಳವಳಿಯ ಕುರಿತ ವರ್ಗ ಆಧಾರಿತ ಮನೋಧರ್ಮದ ದೃಷ್ಟಿಯಿಂದ ತುಂಬ ಸರಿಯಾದುದೇ ಆಗಿದ್ದಿತು. ನಿಜವಾದ ಸ್ವಾತಂತ್ರ್ಯವೂ ಪಾನ್-ಆಫ್ರಿಕನ್‌ವಾದವೂ ಸಮಾಜವಾದದ ಆಧಾರದ ಮೇಲಷ್ಟೆ ಸಾಧ್ಯ* ಎಂದವರು ಘೋಷಿಸಿದರು. ಇದೂ ಸ್ವಾಗತಾರ್ಹವೇ ಆಗಿದ್ದಿತು. ಆದರೆ ಎನ್‌ಕ್ರೂಮರವರ ಈ ವ್ಯಕ್ತಿನಿಷ್ಠ ಸಮಾಜವಾದಿ ವಿಚಾರಗಳ ಸ್ಪಷ್ಟವಾದ ಬೆಳವಣಿಗೆಯೇ ಅವರನ್ನು ಇಂದು ಆಫ್ರಿಕದಲ್ಲಿ ವಿಮೋಚನಾ ಚಳವಳಿಯ ತಕ್ಷಣದ ಕಾರ್ಯಭಾರವೆಂದರೆ ಸಮಾಜವಾದದ ಸ್ಥಾಪನೆ ಎಂದು ಘೋಷಿಸುವಂತೆ ಮಾಡಿದುದು.

ತದನಂತರ ಅವರು ತಮ್ಮ ಕಾರ್ಯವ್ಯೂಹದ ಸಂಪೂರ್ಣ ಪುನರ್‌ಪರಿಶೀಲನೆ ನಡೆಸಿದರು. ಮತ್ತೆ ಇದನ್ನು ವಾಸ್ತವಿಕತೆಯ ವೈಜ್ಞಾನಿಕ ವಿಶ್ಲೇಷಣೆಯ ಮೇಲೆ ಆಧರಿಸಿ ನಡೆಸಲಿಲ್ಲ, ಆದರೆ 'ಕ್ರಾಂತಿಕಾರಿ ಯುದ್ಧ ಕಾರ್ಯಾಚರಣೆಯ ಕೈಪಿಡಿ' ಗ್ರಂಥ ಒಳಗೊಂಡಿದ್ದ ತಾರ್ಕಿಕ ತಪ್ಪುಗಳನ್ನು ತೆಗೆದು ಹಾಕುವ ಮೂಲಕ ಮಾಡಲು ಯತ್ನಿಸಲಾಯಿತು. ಎನ್‌ಕ್ರೂಮರವರು ಆಫ್ರಿಕದ ವಿಮೋಚನಾ ಚಳವಳಿಯ ಮುಂದೆ ಸಮಾಜವಾದಿ ಕ್ರಾಂತಿಯ ಕಾರ್ಯವ್ಯೂಹವನ್ನು ಇರಿಸಿದರು. "ರೈತಾಪಿ ಜನರೂ ಶ್ರಮಜೀವಿ ವರ್ಗವೂ ಜೊತೆಗೂಡಿ ಕಾರ್ಯ ಜರುಗಿಸಿದರಷ್ಟೆ ಸಂಪೂರ್ಣ ಸಮಾಜವಾದದ ಸುಸಂಗತ ನೀತಿಗಳನ್ನು ಕಾರ್ಯಗತಗೊಳಿಸುವುದು ಸಾಧ್ಯ"** ಎಂದವರು ಘೋಷಿಸಿದರು. ಆದರೆ ಮೂಲತಃ ಸರಿಯಾದ ಈ ಘೋಷಣೆಯು ಸಾಮ್ರಾಜ್ಯವಾದ ವಿರೋಧಿ ಐಕ್ಯರಂಗ ನಿರ್ಮಿಸುವ ತಂತ್ರವನ್ನು ಬಿಟ್ಟುಕೊಡುವಂತೆ ಮಾಡಿತು. ಈ ಮುನ್ನ 'ಕ್ರಾಂತಿಕಾರಿ ಯುದ್ಧ ಕಾರ್ಯಾಚರಣೆಯ ಕೈಪಿಡಿ' ಗ್ರಂಥದಲ್ಲಿ ಅವರು ಅದಕ್ಕೆ ಬೆಂಬಲ ನೀಡಿದ್ದರೂ, ಈಗ ಅವರು ಇಡೀ ಆಫ್ರಿಕನ್ ಬೂರ್ಜ್ವಾಸಿಯನ್ನೇ ಪ್ರತಿಕ್ರಾಂತಿಕಾರಿ ಶಕ್ತಿ ಎಂದು ವರ್ಣಿಸಿದರು. ಆಫ್ರಿಕನ್ ಬೂರ್ಜ್ವಾಸಿಯು ಅಂತಿಮವಾಗಿ ಅಂತರರಾಷ್ಟ್ರೀಯ ಏಕಸ್ವಾಮ್ಯ ಬಂಡವಾಳದೊಂದಿಗೆ ಜೊತೆಗೂಡಿದ್ದಿತು ಎಂದು ತಿಳಿಸಿ ಅವರು ವಿಮೋಚನಾ ಚಳವಳಿಯ ಪ್ರಸಕ್ತ ಘಟ್ಟದಲ್ಲಿ ಅದರೊಂದಿ

*See Kwame Nkrumah, *Class Struggle in Africa*, p. 84. – ಸಂ.

**ಅದೇ ಗ್ರಂಥ, ಪು. 58. – ಸಂ.

ಗಷ್ಟೆ ಅಲ್ಲ ಪೆಟಿ ಬೂರ್ಷ್ವಾ ವೃಂದಗಳೊಂದಿಗೂ ಒಕ್ಕೂಟವನ್ನು ವಿರೋಧಿಸಿದರು.

ಹೀಗೆ 1967ರಲ್ಲಿ ಸಶಸ್ತ್ರ ಹೋರಾಟವನ್ನಷ್ಟೆ ವಿಮೋಚನಾ ಸಂಗ್ರಾಮದ ಏಕೈಕ ವಿಧಾನ ಎಂಬ ನಿರೂಪಣೆಯೊಂದಿಗೆ ಪ್ರಾರಂಭವಾದ ಅವರ ಎಡಪಂಥದ ರ್‍ಯಾಡಿಕಲಿಸಂ ಸ್ವಯಮೇಚ್ಛೆಯ ಕಾರ್ಯಕ್ರಮ ರೂಪುಗೊಳ್ಳುವುದರೊಂದಿಗೆ ಮುಕ್ತಾಯಗೊಂಡಿದ್ದಿತು.

1966ರನಂತರ ಎನ್‌ಕ್ರೂಮರವರ ಸೈದ್ಧಾಂತಿಕ ಬೆಳವಣಿಗೆಯಲ್ಲಿನ ಪ್ರಗಾಢ ಆಂತರಿಕ ವೈರುಧ್ಯವು ಸ್ವಯಂಸ್ಪಷ್ಟವಾಗಿದ್ದಿತು. ಒಂದು ಕಡೆ ಸುಧಾರಣಾವಾದದ ಬಗೆಗೆ ಮತ್ತು ರಾಷ್ಟ್ರೀಯ ಬಂಡವಾಳದ ಅಪುಂಭಾವಿ ನೀತಿಗಳ ಬಗೆಗೆ ಉದಾತ್ತ ಆಸವನೆ, ಸಮಾಜವಾದದಲ್ಲಿ ನಂಬಿಕೆ, ಮಾರ್ಕ್ಸ್‌ವಾದ-ಲೆನಿನ್‌ವಾದದ ಅನೇಕ ಸೈದ್ಧಾಂತಿಕ ಸೂತ್ರಗಳ ಸ್ವೀಕಾರ: ಇನ್ನೊಂದು ಕಡೆ, ಈ ಸೂತ್ರಗಳನ್ನು ವಾಸ್ತವಿಕತೆಯಲ್ಲಿ ಅನ್ವಯಿಸಲು ಅವರ ಅಸಾಮರ್ಥ್ಯ. ಈ ಅಸಾಮರ್ಥ್ಯವೇ ಅವರನ್ನು ಆಫ್ರಿಕ ಯೂರೋಪು ಏಷ್ಯ ಹಾಗೂ ಲ್ಯಾಟಿನ್ ಅಮೆರಿಕಗಳಲ್ಲಿ ಪ್ರಚಲಿತವಲ್ಲಿದ್ದ ಪೆಟಿ ಬೂರ್ಷ್ವಾ ರ್‍ಯಾಡಿಕಲಿಸಂನ ಅನೇಕ ಪ್ರವೃತ್ತಿಗಳೊಂದಿಗೆ ಮೂಲತಃ ತಾಳೆ ಬೀಳುತ್ತಿದ್ದಂಥ ಸೈದ್ಧಾಂತಿಕ-ರಾಜಕೀಯ ಅಭಿಪ್ರಾಯಗಳನ್ನು ಹೊಂದಿರುವತ್ತ ಕರೆದೊಯ್ದುದು. ಅವರ ಅಭಿಪ್ರಾಯಗಳು ಅಸ್ಥಿರವಾಗಿದ್ದುದೂ, ಅವರು ಆಗಾಗ್ಗೆ ಸುಧಾರಣಾವಾದಿ ಭ್ರಾಂತಿಗಳಿಂದ ತೀವ್ರ ರ್‍ಯಾಡಿಕಲಿಸಂನ ವಿಚಾರಗಳಿಗೆ ಪರಾತ್ತನೆ ಪರಿವರ್ತನೆಗೊಳ್ಳುತ್ತಿದ್ದುದೂ, ಅವರು ಆ ಪ್ರವೃತ್ತಿಗಳ ಬಗೆಗೆ ಒಲವು ಹೊಂದಿದ್ದರೆಂಬುದಕ್ಕೆ ಸಾಕ್ಷ್ಯ ನೀಡುತ್ತವೆ. ಅವರು ಸುಸಂಗತ ಸಮಾಜವಾದಿ ಎಂದು ಪರಿಗಣಿಸಿದ್ದ ಅವರ ವಿಚಾರವೇದಿಕೆಯಲ್ಲಿ ರಾಷ್ಟ್ರೀಯತಾವಾದಿ ಅಭಿಪ್ರಾಯಗಳೂ ಕಾಣಬರುತ್ತಿದ್ದವು.

ಆದರೆ ಈ ಲೋಪಗಳು ಅವರ ಬಾಳಿನ ಮುಖ್ಯ ಸಾಧನೆಯನ್ನು ಅಸ್ಪಷ್ಟಗೊಳಿಸಬಾರದು. ಪ್ರಗತಿಶೀಲ ಕ್ರಾಂತಿಕಾರಿ ರಾಷ್ಟ್ರೀಯವಾದಿಗೆ ಸಹಜವಾದ ಜಟಿಲ ಮಾರ್ಗ ಕ್ರಮಿಸಿದನಂತರ ಎನ್‌ಕ್ರೂಮರವರು ವೈಜ್ಞಾನಿಕ ಸಮಾಜವಾದವಷ್ಟೆ ಆಫ್ರಿಕದ ಜನತೆಗಳಿಗೆ ಸ್ವಾತಂತ್ರ್ಯ, ಸಮೃದ್ಧತೆ ಹಾಗೂ ಸಾಮಾಜಿಕ ನ್ಯಾಯವನ್ನು ಖಚಿತಪಡಿಸಿ ಕೊಡಬಲ್ಲುದು ಎಂಬ ತೀರ್ಮಾನಕ್ಕೆ ಬಂದರು. ಅವರು ಆಫ್ರಿಕದಲ್ಲಿ ಸಮಾಜವಾದಿ ವಿಚಾರಗಳನ್ನು ಹರಡುವುದರಲ್ಲಿ ಪ್ರಮುಖ ಪಾತ್ರ ನಿರ್ವಹಿಸಿದರು. ವೈಜ್ಞಾನಿಕ ಸಮಾಜವಾದದ ಸೂತ್ರಗಳಿಂದ ಮಾರ್ಗದರ್ಶಿತರಾಗಿರುವಂತೆಯೂ ದುಡಿಯುವ ಜನರ ಮುಂಚೂಣಿ ಪಾರ್ಟಿಯೊಂದನ್ನು ನಿರ್ಮಿಸಬೇಕೆಂದೂ ತಮ್ಮ ಜನರಿಗೆ ಮನವಿ ಮಾಡಿಕೊಂಡ, ಆ ಖಂಡದ ವಿಮೋಚನಾ ಚಳವಳಿಯ ಮೊದಲ ನಾಯಕರಲ್ಲೊಬ್ಬರಾಗಿದ್ದರು ಅವರು. ಸಮಾಜವಾದದ ಕುರಿತು ತಮ್ಮ ಸ್ವಂತ ತಿಳುವಳಿಕೆಯನ್ನು ಎನ್‌ಕ್ರೂಮ ಎಂದೂ ಬುದ್ಧಿ

ಪೂರ್ವಕವಾಗಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ವ್ಯಾಖ್ಯಾನಗಳಿಗೆ ಎದುರು ಎತ್ತಿ ನಿಲ್ಲಿಸಲಿಲ್ಲ. ಇದು ಅವರನ್ನು ಅವರ ಸಮಕಾಲೀನ ಎಡಪಂಥದ ರ್‍ಯಾಡಿಕಲಿಸಂನ ಮೆಚ್ಚಿನ ಪ್ರತಿಪಾದಕರಿಂದ ಪ್ರತ್ಯೇಕಿಸಿ ಇರಿಸುತ್ತದೆ. ಸಮಾಜವಾದವನ್ನೂ ಅದನ್ನು ಜಾರಿಗೆ ತರುವ ಮಾರ್ಗೋಪಾಯಗಳನ್ನೂ ಸರಿಯಾಗಿ ಅರ್ಥಮಾಡಿಕೊಳ್ಳದೆ ಇದ್ದರೂ ಅವರ ಅಭಿಪ್ರಾಯಗಳು ಆಫ್ರಿಕ ಖಂಡದಲ್ಲಿ ವಿಮೋಚನಾ ಚಳವಳಿಯ ವಿಚಾರಗಳ ಬೆಳವಣಿಗೆಯಲ್ಲಿ ಪ್ರಮುಖ ಮುನ್ನಡೆ ಸೂಚಿಸುತ್ತಿದ್ದವು.

ಎನ್‌ಕ್ರೂಮರವರು ಆಗಾಗ್ಗೆ ತಮ್ಮ ಅಭಿಪ್ರಾಯಗಳನ್ನು ಬದಲಿಸುತ್ತಿದ್ದರು, ತಮ್ಮ ಹಳೆಯ ತಪ್ಪುಗಳನ್ನು ತಿದ್ದಿಕೊಳ್ಳುತ್ತಿದ್ದರು. ತಮ್ಮ ಕೊನೆಯ ಸೈದ್ಧಾಂತಿಕ ಕೃತಿಗಳ ತಪ್ಪುಗಳನ್ನು ತಿದ್ದುವುದಕ್ಕೆ ಸಾವು ಅಡ್ಡ ಬಂದಿತು. ಅವುಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವುದು ಇಂದಿನ ಆಫ್ರಿಕದ ಕ್ರಾಂತಿಕಾರಿ ಚಳವಳಿಯ ಕಾರ್ಯಭಾರವಾಗಿದೆ. ಇಂದಿನ ಆಫ್ರಿಕನ್ ಕ್ರಾಂತಿಕಾರಿಗಳು ಸ್ವಲ್ಪ ಮಟ್ಟಿಗೆ ಅವರ ಉತ್ತರಾಧಿಕಾರಿಗಳೆಂದು ಪರಿಗಣಿಸಬಹುದಾಗಿರುವುದಕ್ಕೆ ಪ್ರಶಸ್ತಿ ಎನ್‌ಕ್ರೂಮರವರಿಗೇ ಸಲ್ಲಬೇಕು. ಈ ಕ್ರಾಂತಿಕಾರಿಗಳು ಎನ್‌ಕ್ರೂಮರವರ ಸೈದ್ಧಾಂತಿಕ ಹಾಗೂ ರಾಜಕೀಯ ಅನುಭವದ ಎಲ್ಲ ಅತ್ಯುತ್ತಮ ಲಕ್ಷಣಗಳನ್ನೂ ತಮ್ಮದನ್ನಾಗಿ ಮಾಡಿಕೊಂಡಿದ್ದಾರೆ, ವೈಜ್ಞಾನಿಕ ಸಮಾಜವಾದದ ವಿಚಾರಗಳನ್ನು ಪೆಟಿ ಬೂರ್ಷ್ವಾ ರ್‍ಯಾಡಿಕಲ್ಲರ ಸೋಗಿನ ಕ್ರಾಂತಿಕಾರಿ ವಿಚಾರಗಳೊಂದಿಗೆ ಗೊಂದಲಗೊಳಿಸದೆ ವೈಜ್ಞಾನಿಕ ಸಮಾಜವಾದಕ್ಕೆ ಸಮೀಪ ಸಾಗುವ ಪ್ರಕ್ರಿಯೆಯನ್ನು ಮುಂದುವರಿಸುತ್ತಿದ್ದಾರೆ.

ಓದುಗರಿಗೆ

ಈ ಕೃತಿಯ ಅನುವಾದ, ಮುದ್ರಣ ಹಾಗೂ ರಚನೆ ಕುರಿತು ನಿಮ್ಮ ಅಭಿಪ್ರಾಯ ಅಭಿಲಾಷೆಗಳನ್ನು ನಮಗೆ ಬರೆದು ತಿಳಿಸಿದಲ್ಲಿ ನಾವು ಉಪಕೃತರು.

ನಮ್ಮ ವಿಳಾಸ:
Progress Publishers,
17, Zubovsky Boulevard,
Moscow, USSR

ನಮ್ಮ ಪ್ರಕಟಣೆಗಳ ಅಧಿಕೃತ ಮಾರಾಟಗಾರರು:

ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್,
ಎಂಬೆಸ್ಸಿ ಸೆಂಟರ್, ಕ್ರೆಸೆಂಟ್ ರೋಡ್,
ಕುಮಾರ ಪಾರ್ಕ್ ಈಸ್ಟ್,
ಬೆಂಗಳೂರು – 560001

ಕೆಂಪೇಗೌಡ ಸರ್ಕಲ್,
ಬೆಂಗಳೂರು – 560009

ಕೆ.ಎಸ್.ಆರ್. ರೋಡ್,
ಮಂಗಳೂರು – 575001

ಪ್ರೆಸ್ಟೀಜ್ ಪಾರ್ಕಿಂಗ್ ಆರ್ಕೇಡ್,
ರಾಮಸ್ವಾಮಿ ಸರ್ಕಲ್,
ಮೈಸೂರು – 570024

ಇಷ್ಟರಲ್ಲಿಯೇ ಪ್ರಕಟವಾಗಲಿದೆ

ಬುಸೂಯೆವ್. ಬಂಡವಾಳವಾದ ಎಂದರೇನು?

ಈ ಜನಪ್ರಿಯ ಹೊತ್ತಿಗೆಯಲ್ಲಿ ಆಧುನಿಕ ಬಂಡವಾಳವಾದದ ಮೂಲಭೂತ ಸಮಸ್ಯೆಗಳ ಬಗೆಗೆ ತಿಳಿಸಲಾಗಿದೆ.

ಆರ್ಥಿಕ ಪ್ರಕಲ್ಪನೆಯಾಗಿ ಬಂಡವಾಳದ ಸಾರವೇನು? ಬಂಡವಾಳವಾದಿ ಶೋಷಣೆಯ ಪ್ರಧಾನ ರೂಪಗಳಾವುವು? ಬಂಡವಾಳವಾದಿ ಆಸ್ತಿಒಡೆತನ ಎಂದರೇನು? ಜಾಗತಿಕ ಬಂಡವಾಳವಾದಿ ಆರ್ಥಿಕತೆಯಲ್ಲಿ ಎಂತಹ ಮೂಲಭೂತ ಆರ್ಥಿಕ ಮತ್ತು ಸಾಮಾಜಿಕ ಪ್ರಕ್ರಿಯೆಗಳು ಜರುಗುತ್ತಿವೆ? ಬಂಡವಾಳವಾದದ ಸಾರ್ವತ್ರಿಕ ಮುಗ್ಗಟ್ಟು ಎಂದರೇನು ಮತ್ತು ಅದು ಹೇಗೆ ತೋರಿಸಿಕೊಳ್ಳುತ್ತದೆ? ಈ ಹಾಗೂ ಇತರ ಪ್ರಶ್ನೆಗಳಿಗೆ ಪುಸ್ತಕದಲ್ಲಿ ಓದುಗರಿಗೆ ಸರಳವಾಗಿ ಅರ್ಥಗ್ರಾಹ್ಯವಾದ ರೀತಿಯಲ್ಲಿ ಉತ್ತರಗಳನ್ನು ಒದಗಿಸಲಾಗಿದೆ.

ಶೀಘ್ರದಲ್ಲೇ ಹೊರಬರಲಿದೆ

ಅಲೆಕ್ಸೇಯೆವ್. ಮಾನವಕುಲದ ಉಗಮ

ಖ್ಯಾತ ಸೋವಿಯತ್ ವಿದ್ವಾಂಸ, ಅಕಾದೆಮಿಷಿಯನ್ ವಿ. ಅಲೆಕ್ಸೇಯೆವ್ ತಮ್ಮ ಈ ಪುಸ್ತಕದಲ್ಲಿ ಮಾನವಕುಲದ ಉಗಮದ ಅತ್ಯಂತ ಮುಖ್ಯ ನಿಯಮಗಳನ್ನು ವಿವರಿಸಿ ತಿಳಿಸಿದ್ದಾರೆ.

ಬಯೋಸ್ಫಿಯರ್ (ಜೀವಮಂಡಲ)ದ ಉಗಮ ಮತ್ತು ಬೆಳವಣಿಗೆ, ಭೂಮಿಯ ಮೇಲೆ ನಾಗರಿಕತೆಯ ಹುಟ್ಟು, ಹೋಮಿನೀಡ್ ಕುಟುಂಬದ ಉಗಮ ಮತ್ತು ಇತಿಹಾಸ, ಶ್ರಮ ಚಟುವಟಿಕೆಯ ಮೊದಲ ಹಂತಗಳು, ಭಾಷೆಯ ವಿಕಾಸ, ಆದಿ ಮಾನವರ ಮನೋಪ್ರವೃತ್ತಿ ಹಾಗೂ ಚಿಂತನೆ, ಸಾಮಾಜಿಕ ಸಂಬಂಧಗಳು ರೂಪುಗೊಂಡುದು – ಇವು ಈ ಪುಸ್ತಕದ ಮುಖ್ಯ ವಿಷಯಗಳು. ಮಾನವಕುಲದ ಇತಿಹಾಸದ ಮೊದಲ ಹಂತಗಳಲ್ಲಿ ಜೈವವೈಜ್ಞಾನಿಕ ಹಾಗೂ ಸಾಮಾಜಿಕ ದ್ವಂದ್ವಾತ್ಮಕತೆಯನ್ನು ವಿವರಿಸುವುದಕ್ಕೆ ಈ ಕೃತಿಯಲ್ಲಿ ಆದ್ಯ ಗಮನ ನೀಡಲಾಗಿದೆ.

Научно-популярная литература

Ульяновский Ростислав Александрович

БОРЦЫ ЗА НАЦИОНАЛЬНУЮ СВОБОДУ

язык каннада

издательство «Прогресс»

Навакарнатака Пабликейшенс Прайвет Лимитед г. Бангалор

Редактор русского текста *А. П. Кандалинцев*
Контрольный редактор *Т. С. Чугунова*
Художественный редактор *Г. Н. Губанов*
Технические редакторы *Т. И. Юрова, В. Ю. Никитина*

ИБ № 17516

Сдано в набор 11.04.89. Подписано в печать 02.03.90.
Формат 84×108 1/32. Бумага типографская № 1.
Гарнитура каннада. Печать высокая. Условн.печ.л. 12,6.
Усл.кр.-отт. 12,82. Уч.-изд.л. 14,21. Тираж 3065 экз.
Заказ № 1576. Цена 1 р. 10 к. Изд. № 46121.

Ордена Трудового Красного Знамени издательство «Прогресс»
Государственного комитета СССР по печати.
119847, ГСП, Москва, Г-21, Зубовский бульвар, 17

Ордена Трудового Красного Знамени
Московская типография № 7 «Искра революции»
В/О «Совэкспорткнига» Государственного комитета СССР по печати.
121019, Москва, пер. Аксакова, 13.

 

 

ISBN 5-01-001899-3